ರಜನಿ ಭಕ್ಷಿ

ಬಾಪು ಕುಟಿ

(ಗಾಂಧಿ ನಂತರದ ಗಾಂಧಿ ಚಿಂತನೆಗಳು)

ಅನುವಾದ: ಕೆ. ವೆಂಕಟರಾಜು



ಪ್ರಧಾನ ಸಂಪಾದಕರು: ಜಿ. ರಾಜಶೇಖರ

ಕರ್ನಾಟಕ ಸರ್ಕಾರದ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ೨೦೦೮

ಅನುವಾದ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ೨೦೦೮

ಮತ್ತು

ಸಿದ್ಧವನಹಳ್ಳಿ ಕೃಷ್ಣಶರ್ಮ ಪ್ರಶಸ್ತಿ ೨೦೦೮

ರಜನಿ ಭಕ್ಷಿ

ಹುಟ್ಟಿದ್ದು ೨-೧೦-೧೯೫೮. ದೆಹಲಿ, ಜಮೈಕಾ, ಅಮೆರಿಕ, ರಾಜಾಸ್ಥಾನಗಳಲ್ಲಿ ವಿದ್ಯಾಭ್ಯಾಸ. ತತ್ವಶಾಸ್ತ್ರದಲ್ಲಿ ಎಂ.ಎ ಪದವಿ. ಪತ್ರಿಕೋದ್ಯಮದಲ್ಲಿ ವಿಶೇಷ ಆಸಕ್ತಿ. ರಾಜಕೀಯ ಮತ್ತು ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದಂತೆ ಭಾರತದ ಬಹುತೇಕ ಇಂಗ್ಲಿಷ್ ಮತ್ತು ಹಿಂದಿ ಪತ್ರಿಕೆಗಳಿಗೆ ಲೇಖನಗಳನ್ನು ಬರೆದಿದ್ದಾರೆ. ಚರಕದ(ಅಭಿವೃದ್ಧಿಪರ ಸಂವಹನಗಳ ಜಾಲ)ಸಂಪಾದಕರಾಗಿಯೂ ಕೆಲಸ ಮಾಡಿದ್ದಾರೆ. 'LETS make it happen':Backgrounder on Alternative Economics(2003), 'Bapu Kuti': Journeys in Rediscovery of Gandhi(1998),'The Dispute Over Swami Vivekananda's Legacy': A Warning and an Opportunity (1994) ಮುಖ್ಯಪುಸ್ತಕಗಳು. ಅಭಿವೃದ್ಧಿಯ ಪರ್ಯಾಯ ಮಾದರಿಗಳು, ಮಕ್ಕಳ ಹಕ್ಕುಗಳು, ಕೋಮು ಸೌಹಾರ್ದ ಕುರಿತಂತೆ ಕೆಲಸ ಮಾಡುತ್ತಿರುವ ಸಂಘಟನೆಗಳಲ್ಲಿ, ಚಳುವಳಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಪ್ರಬಂಧ ಮಂಡಿಸಿದ್ದಾರೆ. ಸದ್ಯ ಮುಂಬೈನಲ್ಲಿ ವಾಸ.

'ಬಾಪು ಕುಟಿ' ಪ್ರಸ್ತುತ ಸಂದರ್ಭದಲ್ಲಿ ಬೇರೆ ಬೇರೆ ಚಳುವಳಿಗಳಲ್ಲಿ ನಿರತರಾದ ಗಾಂಧಿವಾದಿಗಳೆಂದು ಕರೆದುಕೊಳ್ಳದೆ ಅವರ ಕೆಲಸಗಳ ಮೂಲಕ ಗಾಂಧಿ ಚಿಂತನೆಗಳಿಗೆ ನೆಲೆಯಾದವರನ್ನು ಕುರಿತ ಕಥನ. ಇದು ಮರಾಠಿ ಭಾಷೆಗೂ ಅನುವಾದಗೊಂಡಿದೆ.

ಶತಮಾನ ಚಿಂತನೆ -೨

ಬಾಪು ಕುಟಿ

ಗಾಂಧಿ ನಂತರದ ಗಾಂಧಿ ಚಿಂತನೆಗಳು

ಮೂಲ: ರಜನಿ ಭಕ್ಷಿ

ಅನು: ಕೆ. ವೆಂಕಟರಾಜು

ಅಭಿನವ

೧೭/೧೮-೨, ಮೊದಲನೆಯ ಮುಖ್ಯರಸ್ತೆ,
ಮಾರೇನಹಳ್ಳಿ, ವಿಜಯನಗರ. ಬೆಂಗಳೂರು-೪೦

Bapu Kuti (Journeys in Rediscovery of Gandhi) by Rajni Bakshi, Translated into Kannada by K.Venkataraju. Published by **abhinava**, #17/18-2, Ist Main, Marenahalli, Vijayanagar, Bangalore - 560 040. India. Ph: 080-23505825

First Edition : 2006 Second Edition : 2008

Pages: 288 Price Rs : 150/-

ಶತಮಾನ ಚಿಂತನೆ ಮಾಲಿಕೆಯ ಸಂಪಾದಕರು : ಜಿ. ರಾಜಶೇಖರ

ಪ್ರಧಾನ ಸಂಪಾದಕ : ನ. ರವಿಕುಮಾರ

ಬೆಲೆ : ಒಂದು ನೂರಾ ಐವತ್ತು ರೂಪಾಯಿಗಳು

ಮೊದಲನೇ ಮುದ್ರಣ : ೨೦೦೬ ಎರಡನೇ ಮುದ್ರಣ : ೨೦೦೮

ಪ್ರಸಾರ: ಕೃಷ್ಣಾ ಚೆಂಗಡಿ
ಹೊದಿಕೆ ವಿನ್ಯಾಸ : ಬಿ. ದೇವರಾಜ್

ಮುದ್ರಣ: ಧರಣಿ ಪ್ರಿಂಟರ್ಸ್

೪೭೬, ೩ನೇ ಸಿ ಮುಖ್ಯರಸ್ತೆ, ೧ನೇ ಹಂತ, ಮಂಜುನಾಥನಗರ,

ಬೆಂಗಳೂರು – ೧೦. ದೂರವಾಣಿ : ೯೭೩೧೮೧೩೩೩೪

ಪ್ರೀತಿಯ ಮಡದಿ

ನಳಿನಿಗೆ

ಕೃತಜ್ಞತೆಯಿಂದ

– ಕೆ. ವೆಂಕಟರಾಜು

ಸ್ವಂತ ಹಾದಿಗಳನ್ನು ಕಂಡುಕೊಂಡವರ ಬಗ್ಗೆ

ಪ್ರತಿ ವರ್ಷ ಗಾಂಧೀಜಿಯವರ ಬಗ್ಗೆ, ಅವರ ತತ್ವ, ಸಿದ್ಧಾಂತ ಮತ್ತು ಅವರು ಸಾಗಿದ ಮಾರ್ಗ ಇತ್ಯಾದಿಗಳನ್ನು ಕುರಿತು ಹೊಸ ಪುಸ್ತಕಗಳು ಪ್ರಕಟವಾಗುತ್ತಿರುತ್ತವೆ. ಗಾಂಧಿ ಭಜನಾವಳಿಯಿಂದ ಹಿಡಿದು ಸಂಶೋಧನಾ ಪ್ರಬಂಧಗಳಂತಂಹ ಹೆಬ್ಬೊತ್ತಿಗೆಗಳವರೆವಿಗೆ ಈ ಸಾಹಿತ್ಯ ರಾಶಿಯ ವ್ಯಾಪ್ತಿ ಹರಡಿದೆ. ಪ್ರಾಯಶಃ ಬೇರೆ ಯಾರ ಬಗ್ಗೆಯೂ ಈ ಪ್ರಮಾಣದಲ್ಲಿ, ವೈವಿಧ್ಯತೆಯಲ್ಲಿ ಪ್ರಕಟಗೊಳ್ಳುತ್ತಿಲ್ಲ.(ಕ್ರಿಸ್ತನ ಕುರಿತು ಪುಸ್ತಕಗಳನ್ನು ಹೊರತು ಪಡಿಸಿದರೆ)

ಇಂತಹ ಅಗಾಧ ಸಾಹಿತ್ಯ ರಾಶಿಯಲ್ಲಿ ಕೆಲವೊಮ್ಮೆ ಬಹಳ ಮಹತ್ವದ ಕ್ರಿಯೆಗೆ ಪ್ರೇರೇಪಿಸುವ, ಮತ್ತೆ ಮತ್ತೆ ಓದಿಸಿಕೊಳ್ಳುವ ಕೃತಿಗಳು ಬೆಳಕು ಕಾಣುತ್ತವೆ. 'ಬಾಪು ಕುಟಿ' ಅಂತಹ ಅಪೂರ್ವವಾದ ಪುಸ್ತಕ. ಶ್ರೀಮತಿ ರಜನಿ ಭಕ್ಷಿ ಈ ಪುಸ್ತಕದ ಲೇಖಕಿ. ಈಕೆ ಪತ್ರಕರ್ತೆ. ದಿಲ್ಲಿ, ವಾಷಿಂಗ್‌ಟನ್, ಜೈಪುರ್ ಮುಂತಾದ ಕಡೆ ಅಧ್ಯಯನ ಮಾಡಿದವರು. ಇಂಗ್ಲಿಷ್ ಮತ್ತು ಹಿಂದಿಯ ಪತ್ರಿಕೆಗಳಲ್ಲಿ ವಿವಿಧ ವಿಷಯಗಳನ್ನು ಕುರಿತಂತೆ ಲೇಖನ ಕೃಷಿ ಮಾಡಿದವರು. ಅಭಿವೃದ್ಧಿಗೆ ಈಗಿರುವ ವ್ಯಾಖ್ಯೆಗೆ ಪರ್ಯಾಯವಾದ ಮಾದರಿಗಳನ್ನು ಹುಡುಕುವ ಹೊರಾಟ ಮತ್ತು ಚರ್ಚೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಹಲವಾರು ವರ್ಷಗಳ ಸಿದ್ಧತೆಯ ನಂತರ ೧೯೯೮ರಲ್ಲಿ ಈ ಕೃತಿಯನ್ನು ಹೊರತಂದರು. ಪತ್ರಕರ್ತೆಗೆ ಸಹಜವಾದ ರೀತಿಯಲ್ಲಿ ಅಪಾರವಾದ ಕ್ಷೇತ್ರಕಾರ್ಯವನ್ನು ಮಾಡಿ ಈ ಪುಸ್ತಕ ಬರೆದಿದ್ದಾರೆ ಎಂಬುದಕ್ಕೆ ಈ ಕೃತಿಯಲ್ಲಿನ ದಾಖಲೆಗಳೇ ಸಾಕ್ಷಿ.

'ಬಾಪು ಕುಟಿ', ಗಾಂಧೀಜಿಯನ್ನು ಕುರಿತು ಬರೆದ ಪುಸ್ತಕ ಅಲ್ಲ. ಅವರ ತತ್ವ, ಸಿದ್ಧಾಂತಗಳನ್ನು ಕುರಿತ ಪುಸ್ತಕವೂ ಅಲ್ಲ. ತಮ್ಮನ್ನು ತಾವು ಗಾಂಧಿವಾದಿಗಳೆಂದು ಕರೆದುಕೊಳ್ಳದೆ ಮುಕ್ತ ಮನಸ್ಸಿನಿಂದ ಅಭಿವೃದ್ಧಿಯ ಪರ್ಯಾಯ ಮಾದರಿಗಳನ್ನು ಹುಡುಕಲು ತೊಡಗಿದ ಹಲವಾರು ಮಂದಿಯ ಸೋಲು ಗೆಲವುಗಳನ್ನು, ವಿಷಾದ ವ್ಯಥೆಗಳನ್ನು ಹೇಳುವ ಕೃತಿ. ಬಾಬಾ ಆಮ್ಟೆ, ಮೇಧಾ ಪಾಟ್ಕರ್ ಗಾಂಧಿವಾದಿಗಳೆಂದೋ ಅಥವಾ ಗಾಂಧಿ ಮಾರ್ಗದಲ್ಲಿ ನಡೆಯುವವರು ಎಂದೋ ತಮ್ಮನ್ನು ಗುರುತಿಸಿಕೊಂಡವರು. ಆದರೆ ಈ ಪುಸ್ತಕದಲ್ಲಿ ಚಿತ್ರಿತವಾಗಿರುವ ಬಹುತೇಕ ಮಂದಿ ಗಾಂಧಿಯನ್ನು ಕಂಡವರಲ್ಲ.(ಬಾಬಾ ಆಮ್ಟೆಯವರನ್ನು ಹೊರತುಪಡಿಸಿ)ಅವರು ಕುರುಡು ಕುರುಡಾಗಿ ಗಾಂಧಿಯನ್ನು ಅನುಕಸರಿಸಲಿಕ್ಕೆ ಹೋದವರೂ

ಅಲ್ಲ. ಬಹುತೇಕ ಮಂದಿ ಗಾಂಧಿಯ ನಂತರದ ಪೀಳಿಗೆಯುವರು. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಅರ್ಥಮಾಡಿಕೊಂಡವರು. ಒಂಟಿಸಲಗದಂತೆ, ಎಲ್ಲರೂ ನಡೆಯುವ ಹಾದಿಯನ್ನು ಬಿಟ್ಟು ಸ್ವಂತ ಹಾದಿಯನ್ನು ನಿರ್ಮಿಸಿಕೊಂಡವರು. ಇಂತಹ ಪ್ರಯೋಗಗಳು ರಾಜಸ್ಥಾನದ ಜೈಪುರ್, ಬಾಗಲ್‌ಪುರ್, ಕಹೇಲ್‌ಗಾಂವ್, ಕಾಸರವಾಡ್, ವೆಂಕಟರಾಮಾಪುರಂ, ತಮಿಳುನಾಡಿನ ಗಾಂಧಿಗ್ರಾಮ್, ಅದಿಲಾಬಾದ್, ಮಹಾರಾಷ್ಟ್ರದ ಸೇವಾಗ್ರಾಮ್, ದೇವದೂಂಗ್ರಿ, ಉದಯ್‌ಪುರ್ ಮುಂತಾದ ಕಡೆ ನಡೆದಿದೆ. ಅವುಗಳ ಸೋಲು ಗೆಲವುಗಳೇ ಬೇರೆ ಬೇರೆಯಾದದ್ದು. ಅದರ ಒಳಸೆಲೆಯಲ್ಲಿ ನಿಂತಿರುವ ಮಾನವ ಕಾಳಜಿಯು ಮಾತ್ರ ಒಂದೇ. ಹಾಗೆ ನೋಡಿದರೆ ಇದು ಈಗಿರುವ ಅಭಿವೃದ್ಧಿಯ ಮಾದರಿಗಳನ್ನು ಪ್ರಶ್ನಿಸುತ್ತಾ ಹೊಸ ಮಾದರಿಗಳ ಪ್ರಯೋಗದಲ್ಲಿ ನಿರತರಾಗಿರುವವರ ಕಥನ. ಹೀಗಾಗಿ ಇಲ್ಲಿ ಕೇವಲ ಪ್ರತಿಭಟನೆ ಇಲ್ಲ. ಆದರೆ ಸೃಜನ ಶೀಲವಾಗಿ, ರಚನಾತ್ಮಕವಾಗಿ, ತೊಡಗಿಸಿಕೊಳ್ಳುವ ಮೂಲಕ ಮೌನವಾಗಿ, ಪರಿಣಾಮಕಾರಿಯಗಿ ವ್ಯವಸ್ಥೆಯನ್ನು ಪ್ರಶ್ನಿಸಿದ ಪ್ರಕರಣಗಳಿವೆ. ಹೀಗಾಗಿಯೇ ಈ ಕೃತಿಯನ್ನು ಒಮ್ಮೆ ಓದಿ ಬಿಟ್ಟುಬಿಡಲು ಮನಸ್ಸಾಗುವುದಿಲ್ಲ. ಈ ಕಥನಗಳು ನಮ್ಮನ್ನು ನಿದ್ದೆಯಿಂದ ಜಾಗೃತ ಕ್ರಿಯೆಗೆ ಪ್ರಚೋದಿಸುವಂಥವು.

ಇಲ್ಲಿಯ ಪ್ರಯೋಗಗಳು ಎಷ್ಟು ಪರಿಣಾಮಕಾರಿಯಾಗಿವೆ ಎಂದರೆ ರಾಜಸ್ಥಾನದ ದೇವದೂಂಗ್ರಿಯಲ್ಲಿ ಮತ್ತು ಉದಯಪುರಗಳಲ್ಲಿ ನಡೆದ ಹೊರಾಟದ ಫಲವಾಗಿ ಇಡೀ ದೇಶಕ್ಕೆ ಮಾಹಿತಿಯ ಹಕ್ಕು ದೊರೆಯಿತು. ಇದೇ ರೀತಿ ಮೇಧಾ ಪಾಟ್ಕರ್ ಅವರ ಹೊರಾಟ ಇನ್ನೂ ನಡೆಯುತ್ತಲೇ ಇದೆ. ಇದು ಬೃಹತ್ ಅಣೆಕಟ್ಟುಗಳು, ಅರಣ್ಯ ನಾಶದ ಅಗತ್ಯ ಇದೆಯೇ? ಎಂಬ ಪ್ರಶ್ನೆಯನ್ನು ಮತ್ತೆ ಮತ್ತೆ ಎತ್ತುತ್ತಲೇ ಹೊಗುತ್ತದೆ. ಈ ದೃಷ್ಟಿಯಿಂದ 'ಬಾಪು ಕುಟಿ' ಮಹತ್ವದ ಪುಸ್ತಕ.

ಗಾಂಧೀಜಿಯುವರ ಕುಟೀರ ಒಂದು ರೂಪಕದಂತೆ ಕೆಲಸ ಮಾಡುತ್ತದೆ. ಇಲ್ಲಿ ಚಿತ್ರಿತವಾಗಿರುವ ಕರುಣಾಕರನ್, ರವೀಂದ್ರ ಶರ್ಮ, ಸಿ.ವಿ.ಶೇಷಾದ್ರಿ, ಉಜರಮ್ಮ, ಶಂಭು, ವಿನೂ ಕಾಳೆ, ಜೆ.ಸಿ. ಕುಮಾರಪ್ಪ, ಬಾಬಾ ಆಮ್ಟೆ, ಮೇಧಾ ಪಾಟ್ಕರ್ ಇವರು ನಮ್ಮವರೇ ಆಗಿಬಿಡುತ್ತಾರೆ. ಅರುಣಾರಾಯ್, ನಿಖಿಲ್, ಶಂಕರ್‌ಸಿಂಗ್ ಇವರೆಲ್ಲರ ಪ್ರಯತ್ನಗಳನ್ನು ತಿಳಿದ ನಮ್ಮಲ್ಲಿ ಹೊಸ ಬೆಳಕು ತೀರ ಅಸ್ಪಷ್ಟವಾಗಿಯಾದರೂ ಕಾಣುತ್ತದೆ.

ಅಭಿನವದ ನ. ರವಿಕುಮಾರ್ ಈ ಪುಸ್ತಕವನ್ನು ಓದುವಂತೆ ಪ್ರೇರೇಪಿಸಿ ನಂತರ ಅನುವಾದಿಸಿಕೊಡಲು ಕೋರಿದರು. ಇದರಿಂದ 'ಅಭಿನವ' ಅಥವಾ ಕನ್ನಡಿಗರಿಗೆ ಲಾಭವಾಗುತ್ತದೆಯೇ ಇಲ್ಲವೋ ಗೊತ್ತಿಲ್ಲ. ಆದರೆ ವೈಯಕ್ತಿಕವಾಗಿ ನನಗಂತೂ ಹೆಚ್ಚಿನ ಲಾಭವಾಗಿದೆ. ಅಸ್ಪಷ್ಟವಾಗಿದ್ದ ನನ್ನ ನಂಬಿಕೆಗಳು ಗಟ್ಟಿಗೊಂಡಿವೆ.

ಇತ್ತೀಚಿನ ವರ್ಷಗಳಲ್ಲಿ ಈ ರೀತಿಯ ಚಿಂತನೆಗಳು ಕೆಲಸಗಳು ಅಲ್ಲಲ್ಲಿ ತೀರ ಅಲ್ಪ ಪ್ರಮಾಣದಲ್ಲಿಯಾದರೂ ಸಾಕಾರಗೊಂಡಿವೆ. ಕನ್ನಡದಲ್ಲಿ ಈ ರೀತಿಯ ಪ್ರಯತ್ನಗಳ ಕಥನವನ್ನು ಬರೆದರೆ ಪ್ರೊ. ಎಂಡಿ. ನಂಜುಂಡಸ್ವಾಮಿಯವರ ನೇತೃತ್ವದಲ್ಲಿ ನಡೆದ ರೈತ ಚಳುವಳಿ,

ಶ್ರೀ.ಕೆ.ವಿ.ಸುಬ್ಬಣ್ಣ, ಪ್ರಸನ್ನ, ಚೇರ್ಕಾಡಿ ರಾಮಚಂದ್ರರಾವ್, ಬೆಳಗೆರೆ ಕೃಷ್ಣಶಾಸ್ತ್ರಿ, ಜನಪದ ಸೇವಾ ಟ್ರಸ್ಟ್ ಮುಂತಾದ ಉದಾಹರಣೆಗಳು ಸಿಗುತ್ತವೆ. ಪ್ರಸನ್ನ ಆರಂಭಿಸಿದ 'ಚರಕ' ಅವರ ಮತ್ತು ಬೇರೆ ಯಾರ ಅವಲಂಬನವೂ ಇಲ್ಲದೇ ಸ್ವಾವಲಂಬಿಯಾಗಿ ನಿಂತಿರುವುದು ಸ್ಪಷ್ಟವಾಗಿದೆ. ಅಷ್ಟೇ ಅಲ್ಲ; ಈ ಹತ್ತು ವರ್ಷಗಳಲ್ಲಿ ವೈಯಕ್ತಿಕ ಮಟ್ಟದಲ್ಲಿ ಮತ್ತು ಸಂಘಟನೆಯ ಮಟ್ಟದಲ್ಲಿ ಅಲ್ಲಲ್ಲಿ ಈ ರೀತಿಯ ಕೆಲಸ ನಡೆಯುತ್ತಿದೆ. ಸುಸ್ಥಿರ ಅಭಿವೃದ್ಧಿ, ಪರ್ಯಾಯ ಚಿಂತನೆಗಳು ಅಲ್ಲಲ್ಲಿ ಪ್ರಕಟಗೊಳ್ಳುತ್ತಿವೆ. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಸಾವಯವ ಮತ್ತು ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿಯ ಬಗ್ಗೆ ಆಸಕ್ತಿ ಮೂಡುತ್ತಿದೆ. ಬೆಂಗಳೂರಿನ ಮಧ್ಯದಲ್ಲಿ ನಿಂತು ಇವುಗಳ ಕುರಿತು ಯೋಚಿಸಿದಾಗ ಇವೆಲ್ಲವೂ ಅರ್ಥಹೀನ ಎನಿಸಿಬಿಡಬಹುದು. ಅದನ್ನು ಹೊರತುಪಡಿಸಿ ಬೇರೆಡೆ ನಿಂತು ಯೋಚಿಸಿದಾಗ ಈ ದಿಕ್ಕಿನಲ್ಲಿ ಏನಾದರೂ ಮಾಡಬೇಕೆನ್ನಿಸುತ್ತದೆ; ಆ ಮಟ್ಟದ ಪ್ರೇರಣೆಯನ್ನು ಈ ಪುಸ್ತಕ ನೀಡುತ್ತದೆ.

ಅಭಿನವ ತನ್ನ ಶತಮಾನದ ಚಿಂತಕರ ಮಾಲೆಯಲ್ಲಿ ಗಾಂಧಿಯನ್ನು ಕುರಿತಂತೆ ಈ ಪುಸ್ತಕ ಪ್ರಕಟಿಸುತ್ತಿರುವುದು ತುಂಬಾ ಅರ್ಥಪೂರ್ಣವಾಗಿದೆ.

*

ಅನುವಾದದ ಕಲೆ ಅಥವಾ ತಾಂತ್ರಿಕತೆ ನನಗೆ ಅಭ್ಯಾಸವಾದದ್ದು ವಿಚಿತ್ರ ಸನ್ನಿವೇಶದಲ್ಲಿ. ಈಗ ಪ್ರಾಥಮಿಕ ಶಾಲೆ ಎಂದು ಕರೆಯುವ ಮಿಡಲ್‌ಸ್ಕೂಲ್‌ನಲ್ಲಿ ನಾನು ವ್ಯಾಸಂಗ ಮಾಡುತ್ತಿದ್ದ ಅವಧಿಯಲ್ಲಿ ಹಿಂದಿಯನ್ನು ಖಾಸಗಿಯಾಗಿ ಕಲಿಯುತ್ತಿದ್ದೆ. ಕೆಲವು ಸಮಯ ನನಗೆ ಹಿಂದಿ ಮನೆಪಾಠಮಾಡಿದ ಶ್ರೀಮತಿ ಟಿ.ಆರ್. ಆಂಡಾಳ್ ಅವರು ಪ್ರತಿ ದಿವಸ ನನ್ನಿಂದ ಹಿಂದಿಯ ಸಾಪ್ತಾಹಿಕಗಳಾದ 'ಧರ್ಮಯುಗ್', 'ಪರಾಗ್' ಪತ್ರಿಕೆಗಳಲ್ಲಿನ ಒಂದು ಪ್ಯಾರಾ ಅನುವಾದ ಮಾಡಿಸುತ್ತಿದ್ದರು. ಅವರು ಏಕೆ ಅನುವಾದ ಮಾಡಿಸುತ್ತಿದ್ದರು ಎಂಬುದು ಆಗ ನನಗೆ ಗೊತ್ತಾಗುತ್ತಿರಲಿಲ್ಲ. ಆದರೆ ಆ ತರಬೇತಿ ಮುಂದೆ ನನ್ನ ವೃತ್ತಿ ಮತ್ತು ಬರಹದ ಬದುಕಿನಲ್ಲಿ ತುಂಬಾ ಉಪಯೋಗಕ್ಕೆ ಬಂತು. ಈ ಅನುವಾದ ಪ್ರಕಟವಾಗುತ್ತಿರುವ ಸಂದರ್ಭದಲ್ಲಿ ಅವರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಅಭಿನವದ ಶ್ರೀಮತಿ ಪಿ. ಚಂದ್ರಿಕಾ ಮತ್ತು ನನ್ನ ಪತ್ನಿ ಶ್ರೀಮತಿ ನಳಿನಿ ಇವರ ನಿರಂತರ ಒತ್ತಡ, ಆಸಕ್ತಿ ಇಲ್ಲದಿದ್ದರೆ ಈ ಪುಸ್ತಕವನ್ನು ಅನುವಾದಿಸಲು ಸಾಧ್ಯವೇ ಆಗುತ್ತಿರಲಿಲ್ಲ. ಈ ಕಾರಣಕ್ಕಾಗಿ ಅವರಿಬ್ಬರಿಗೆ ನನ್ನ ಕೃತಜ್ಞತೆಗಳು.

ಹಿರಿಯರಾದ ಆರ್.ಎಂ. ಚಿಂತಾಮಣಿ, ಟಿ. ಸುಬ್ಬರಾಮಯ್ಯ, ಎರ್.ಎಸ್.ಪ್ರಕಾಶ್, ಅಭಿರುಚಿ ಚಂದ್ರು, ಎ.ಡಿ.ಸಿಲ್ವಾ, ಶ್ರೀನಿವಾಸ ರಂಗನ್, ಡಾ. ನಾಗಾರ್ಜುನ, ಎನ್. ಶಂಕರ್ ದಂಪತಿ, ನನ್ನ ಮಕ್ಕಳಾದ ಕು.ಚಿತ್ರಾ, ಚೀನಿ

ಹಾಗೂ

ಚಂದ್ರು, ಹಂಸ, ಅಜಿತ್, ವಿನಯ್ ಬಿ.ಎಸ್, ನಾಗೇಶು, ಆರೀಫ್, ಚೇತನ್ ಮುಂತಾದ ಶಾಂತಲಾ ಕಲಾವಿದರ ಬಳಗದ ಎಲ್ಲಾ ಗೆಳೆಯರು ಅನೇಕ ರೀತಿಯಲ್ಲಿ ಈ ಕೆಲಸದಲ್ಲಿ ನೆರವಾಗಿದ್ದಾರೆ ಮತ್ತು ಯಾವಾಗಲೂ ನೆರವಾಗುತ್ತಾರೆ. ಅವರೆಲ್ಲರನ್ನೂ ಈ ಸಂದರ್ಭದಲ್ಲಿ ನೆನೆಯುವುದು ನನ್ನ ಕರ್ತವ್ಯ.

ಪುಸ್ತಕದ ಪರಿಷ್ಕರಣೆ ಮತ್ತು ಕರಡು ತಿದ್ದಿದ ಕುಮಾರಿ ಭಾರತೀದೇವಿ ಮತ್ತು ಪೂರ್ಣಿಮಾ ಭಟ್ ಅವರಿಗೆ, ಈ ಕೆಲಸದಲ್ಲಿ ನೆರವಾದ ಶ್ರೀಮತಿ ಪುಷ್ಪಾ ಪಶುಪತಿ ಮತ್ತು ಕೃಷ್ಣಾ ಚೆಂಗಡಿ ಅವರಿಗೂ,

ಬೆನ್ನುಡಿ ಬರೆದ ನಾಡಿನ ಚಿಂತನಶೀಲ ವಿಮರ್ಶಕ ಜಿ. ರಾಜಶೇಖರ ಅವರಿಗೂ,

ಈ ಪುಸ್ತಕಕ್ಕೆ ಉತ್ತಮ ಹೊದಿಕೆಯ ವಿನ್ಯಾಸ ಮಾಡಿದ ಕಲಾವಿದ ಬಿ.ದೇವರಾಜ್ ಮತ್ತು ಸುಂದರವಾಗಿ ಮುದ್ರಿಸಿದ ಪ್ರಸಾದ್ ಪ್ರಿಂಟರ್ಸ್‌ನ ಹೂವಪ್ಪ ಅವರಿಗೆ, ಕೃತಜ್ಞತಾಪೂರ್ವಕ ವಂದನೆಗಳು

ಕೆ. ವೆಂಕಟರಾಜು
'ನೆಲೆ' ೩ನೆಯ ರಸ್ತೆ, ಭ್ರಮರಾಂಭ ಬಡಾವಣೆ.
ಚಾಮರಾಜನಗರ.

ನುಡಿವ ಬೆಡಗು

‘ಈ ಪುಸ್ತಕ ಹೊರತರುತ್ತಿರುವುದಕ್ಕಾಗಿ ಇಡೀ ಕನ್ನಡ ಜನತೆ ನಿನಗೆ ಕೃತಜ್ಞರಾಗಿರುತ್ತಾರೆ’ ಎಂಬರ್ಥದ ಮೆಸೇಜನ್ನು ಹಸ್ತಪ್ರತಿಯಲ್ಲಿಯೇ ಈ ಕೃತಿಯನ್ನು ಓದಿದ ಗೆಳತಿ ಕಳಿಸಿದ್ದಳು. ಅವಳಿಗೆ ನಾನು ಹೇಳಿದೆ: ‘ಕನ್ನಡಿಗರು ಕೃತಜ್ಞರಾಗಿರಬೇಕಾದುದು ನನಗಲ್ಲ; ಈ ಕೃತಿಯ ಕಡೆಗೆ ನಮ್ಮ ಗಮನ ಸೆಳೆದ ಕೆ. ಸತ್ಯನಾರಾಯಣ ಮತ್ತು ಎಚ್.ಎಸ್. ರಾಘವೇಂದ್ರರಾವ್ ಅವರಿಗೆ’ ಎಂದು.

ಹೌದು. ಬಾಪು ಕುಟಿ ಪುಸ್ತಕದ ಬಗೆಗೆ ಮೊದಲು ಪ್ರಸ್ತಾಪಿಸಿದವರು ಕಥೆಗಾರರೂ, ಕಾದಂಬರಿಕಾರರೂ ಆದ ಕೆ. ಸತ್ಯನಾರಾಯಣ. ಮುಂದೆ ರಾಘವೇಂದ್ರರಾವ್ ಅವರ ಬಳಿ ಈ ಬಗೆಗೆ ಪ್ರಸ್ತಾಪಿಸಿದಾಗ ‘ಕನ್ನಡಕ್ಕೆ ಬರಲೇಬೇಕಾದಂತಹ ಕೃತಿ ಇದು’ ಎಂದು ನಮ್ಮ ಆಸಕ್ತಿಯನ್ನು ಹೆಚ್ಚಿಸಿದರು. ಪುಸ್ತಕದ ಕನ್ನಡ ಅನುವಾದಕ್ಕಾಗಿ ಶ್ರಿಮತಿ ರಜನಿ ಭಕ್ಷಿಯವರ ವಿಳಾಸಕ್ಕಾಗಿ ಸಾಕಷ್ಟು ಪ್ರಯತ್ನ ಮಾಡಿದೆವು. ಕೊನೆಗೆ ಶ್ರೀಮತಿ ಶೋಭಾ ದಿವಾಣಜಿಯವರು (ಮುಂಬೈನ ಪ್ರಹ್ಲಾದ ದಿವಾಣಜಿಯವರ ಪತ್ನಿ)ವಿಳಾಸ ದೊರಕಿಸಿಕೊಟ್ಟರು. ನಂತರ ಮೂಲ ಪ್ರಕಾಶಕರು ಮತ್ತು ಲೇಖಕರ ಅನುಮತಿ ದೊರೆಯಿತು. ಗಾಂಧಿ ಚಿಂತನೆಗಳ ಪರಿಚಯವಷ್ಟೆ ಅಲ್ಲ; ಸಮಕಾಲೀನ ಭಾರತದ ಬೇರೆ ಬೇರೆ ಚಳುವಳಿಗಳ, ಸಂಘಟನೆಗಳ, ವ್ಯಕ್ತಿಗಳ ಪರಿಚಯವಿರುವವರು ಪುಸ್ತಕವನ್ನು ಅನುವಾದಿಸಿಸಬೇಕೆಂದು ನಿರ್ಧರಿಸಿ ಹಿರಿಯ ಗೆಳೆಯರಾದ ವೆಂಕಟರಾಜು ಅವರನ್ನು ಕೇಳಿಕೊಂಡೆವು. ಅವರು ಪ್ರೀತಿಯಿಂದ ಅನುವಾದಿಸಿಕೊಟ್ಟಿದ್ದಾರೆ, ಭಾರತಿ ದೇವಿ ಹಸ್ತಪ್ರತಿಯನ್ನು ಮುದ್ರಣಕ್ಕೆ ಅಣಿಮಾಡಿಕೊಟ್ಟಿದ್ದಾರೆ. ಪುಸ್ತಕ ಈಗ ನಿಮ್ಮ ಮುಂದಿದೆ.

*

ಗಾಂಧಿಯನ್ನು ಯಾವ ಯಾವ ಕಾರಣಕ್ಕೆ ಪ್ರಸ್ತಾಪಿಸಲಾಗುತ್ತಿದೆ ಎಂಬುದನ್ನು ಗಮನಿಸಿದರೆ ಆಶ್ಚರ್ಯವಾಗುತ್ತದೆ. ಆಧುನಿಕತೆ, ಸಂಪ್ರದಾಯ, ದೇಶಪ್ರೇಮ, ಶಿಕ್ಷಣ, ಆರೋಗ್ಯ, ಧರ್ಮ, ಸತ್ಯ, ಸತ್ಯಾಗ್ರಹ, ಸ್ವಾತಂತ್ರ್ಯ, ನ್ಯಾಯ, ಉಪವಾಸ, ಪ್ರತಿಭಟನೆ, ಸರಳತೆ, ಇಂದ್ರಿಯ ನಿಗ್ರಹ, ಸಸ್ಯಾಹಾರ, ಸೇವೆ, ಕೋಮು ಸೌಹಾರ್ದ, ಸಹಕಾರ, ಗುಡಿಕೈಗಾರಿಕೆ, ರಾಜಕೀಯ, ಪರಿಸರ, ಅಸ್ಪೃಶ್ಯತೆ ನಿವಾರಣೆ, ಮಹಿಳಾ ಸಬಲೀಕರಣ, ಮಾನವೀಯತೆ, ದೇವರು, ಕುಟುಂಬ

ಯೋಜನೆ, ಸೌಂದರ್ಯ, ಮಕ್ಕಳ ಪೋಷಣೆ, ನಂಬಿಕೆ, ಪ್ರಾಮಾಣಿಕತೆ, ಮನೆ ನಿರ್ಮಾಣ ಹೀಗೆ ನಮ್ಮ ಬದುಕಿನ ಎಲ್ಲ ವಿವರಗಳ ಕುರಿತು ಒಂದಿಲ್ಲೊಂದು ಕಾರಣಕ್ಕೆ ಗಾಂಧಿ ಪ್ರಸ್ತಾಪಗೊಳ್ಳುತ್ತಲೇ ಹೋಗುತ್ತಾರೆ.

ಆದರೆ ಗಾಂಧಿ ಹೀಗೆ ಪ್ರಸ್ತಾಪಿಸಲಷ್ಟೆ ಯೋಗ್ಯವಾದ ವ್ಯಕ್ತಿಯೆ? ಖಂಡಿತ ಅಲ್ಲ; ಅವರಂತೆ ಬದುಕಬಹುದು(ಕೆಲ ಮಟ್ಟಿಗಾದರೂ) ಎಂಬುದನ್ನು ಋಜುವಾತುಪಡಿಸಿದ ಅನೇಕ ಹಿರಿಯರು ನಮ್ಮೊಡನಿದ್ದಾರೆ. ಹೀಗಾಗಿ ಗಾಂಧಿಯವರ ಸಿದ್ಧಾಂತ, ತತ್ವ, ಚಿಂತನೆ ಎಂದರೆ ಅದು ಜೀವಂತ ಬದುಕಿನ ಪ್ರತೀಕ.

ಗಾಂಧಿಯನ್ನು ನಾವು ಅನುಸಂಧಾನ ಮಾಡಿಕೊಳ್ಳಬೇಕಾದ ಕ್ರಮದ ಕುರಿತು ಲಂಕೇಶ್ ಹೀಗೆ ಹೇಳುತ್ತಾರೆ: 'ಗಾಂಧೀಜಿ ಸರಳತೆ, ಸಮಾಜಸೇವೆ, ತ್ಯಾಗ ಈ ಬಗ್ಗೆಯೆಲ್ಲ ಹೇಳುತ್ತಿದ್ದುದು ನಿಜ; ಆದರೆ ಅವರು ಭ್ರಷ್ಟತೆ, ಸ್ವಜನಪಕ್ಷಪಾತ, ಹಿಂಸೆ ಮುಂತಾದ್ದರ ಬಗ್ಗೆಯೂ ಹೇಳುತ್ತಿದ್ದರು. ಮಹಾವ್ಯಾಮೋಹಿಯಾಗಿದ್ದ, ಜೀವನಪ್ರೇಮಿಯಾಗಿದ್ದ ಗಾಂಧಿ ಕಾನೂನು ಕಟ್ಟಳೆಗಳಿಂದ ಹೊರತಾದ ದಯೆ, ದಾಕ್ಷಿಣ್ಯ, ಲಜ್ಜೆ ಇವನ್ನು ಸಹಚರರಲ್ಲಿ ಬೆಳೆಸಲು ಪ್ರಯತ್ನಿಸುತ್ತಿದ್ದರು... ಗಾಂಧೀಜಿ ಮಹಾ ಆಧುನಿಕ ಮನುಷ್ಯ, ಸಹಜವಾದ ನವಮಾನವ ಎಂಬುದು ಅನೇಕರಿಗೆ ಗೊತ್ತಿಲ್ಲ. ಅಥವಾ ನಾವು ಗಾಂಧೀಜಿಯನ್ನು ನಮ್ಮಲ್ಲಿ ಬೆಳೆಸಿಕೊಳ್ಳಬೇಕಾದ್ದು ಹಾಗೆ....ಗಾಂಧಿ ಎಂಬುದು ಒಂದು ಸಿದ್ಧಾಂತ ಎಂದು (ಸಾಕಷ್ಟು ಜನ) ತಿಳಿದಿದ್ದಾರೆಯೋ ಹೊರತು ಗಾಂಧಿಯೆಂಬುದು ಜೀವಂತ ಸ್ಥಿತಿ, ಬೆಳೆಯಬೇಕಾದ, ಬದಲಾಗಬೇಕಾದ ಸ್ಥಿತಿ ಎಂಬುದು ಅವರಿಗೆ ಗೊತ್ತಿಲ್ಲ...'(ಲಂಕೇಶ್ ಪತ್ರಿಕೆ. ಫೆಬ್ರವರಿ ೧೪, ೧೯೯೬)ಹೀಗೆ ನಿರಂತರ ಬದಲಾಗುವ, ಬೆಳೆಯುವ ಗಾಂಧಿಯನ್ನು, ಅವರ ಚಿಂತನೆಗಳನ್ನು ಈ ಕೃತಿಯ ವ್ಯಕ್ತಿಗಳಲ್ಲಿ, ವಿವರಗಳಲ್ಲಿ ನಾವು ನೋಡಬಹುದು.

ಕಸ್ತೂರಿಬಾ ಅವರ ಆರೋಗ್ಯದ ಹಿನ್ನೆಲೆಯಲ್ಲಿ ಮೊಟ್ಟೆ ತಿನ್ನುವ ಕುರಿತಾಗಿ ಗಾಂಧಿಯವರ ಅನುಮತಿಯನ್ನು ಕೇಳಲಾಗುತ್ತದೆ. ಅದಕ್ಕೆ ಗಾಂಧಿ 'ನನಗೆ ಕಸ್ತೂರಿಬಾಯಿ ಮತ್ತು ಕೋಳಿಯ ಜೀವ ಎರಡೂ ಒಂದೇ' ಎಂದು ಖಡಾಖಂಡಿತವಾಗಿ ನಿರಾಕರಿಸುತ್ತಾರೆ. ಅದೇ ಗಾಂಧಿ ಪತ್ನಿಯ ಕೋರಿಕೆಯ ಮೇರೆಗೆ ದೇವಾಲಯ ಪ್ರವೇಶದ ಪ್ರತಿಜ್ಞೆಯನ್ನು ಮುರಿದ ಮಹಾದೇವ ದೇಸಾಯಿಯವರ ರಾಜೀನಾಮೆ ಪತ್ರವನ್ನು ಹರಿದು ಹಾಕಿ ತಮ್ಮ ಕಾರ್ಯದರ್ಶಿಯನ್ನಾಗಿ ಮತ್ತೆ ನಿಯಮಿಸಿಕೊಳ್ಳುತ್ತಾರೆ. ಹೀಗೆ ಗಾಂಧಿ ನಿಷ್ಠುರೂ, ಔದಾರ್ಯವಂತರೂ ಕೂಡ. ಗಾಂಧಿ ಸರ್ವೇ ಸಾಮಾನ್ಯ ಮನುಷ್ಯ, ಅವರಲ್ಲಿ ಕೂಡ ಎಲ್ಲ ಬಗೆಯ ಆಕಾಂಕ್ಷೆಗಳು, ಸಣ್ಣತನಗಳು ಇರಲು ಸಾಧ್ಯ ಎಂಬುದನ್ನು ಮರೆತು, ಅದನ್ನೆ ನಾವು ದೊಡ್ಡದು ಮಾಡುತ್ತಾ, ನಮ್ಮ ಬದುಕನ್ನು, ಅದರ ವೈವಿಧ್ಯತೆಯನ್ನು, ವೈರುಧ್ಯವನ್ನು ಒಪ್ಪಿಕೊಳ್ಳದೆ 'ಏಕನಿಷ್ಠ'ರಾಗಿಬಿಟ್ಟಿದ್ದೇವೆ. ಇದರಿಂದ ನಷ್ಟ ನಮಗೇ ಹೊರತು, ಗಾಂಧೀಜಿಗಲ್ಲ.

ಗಾಂಧೀಜಿಯವರ ಆಚಾರ ವಿಚಾರಗಳು ನಿತ್ಯನೂತನವಾಗಿವೆ ಎಂಬ ಮಾತುಗಳನ್ನು ಹೇಳುವ ಪಟ್ಟಾಭಿರಾಮ ಸೋಮಯಾಜಿಯವರು 'ನಮ್ಮನ್ನು ಒಳಗಡೆಯಿಂದ ಆಳುವ ನಮ್ಮದೇ

ಜೀವನದೃಷ್ಟಿ ಹಾಗೂ ಹೊರಗಡೆಯಿಂದ ನಮ್ಮನ್ನು ಆಳುವ ಸ್ವಯಂಚಾಲಿತ ವಿಚಾರಗಳ ಸಹಭಾಗಿತ್ವವನ್ನು ಕುರಿತು ಅತ್ಯಂತ ಮುಖ್ಯವಾದ ಮೂಲಭೂತವಾದ ಪ್ರಶ್ನೆಗಳನ್ನು ಕೇಳುವ ಕ್ರಾಂತಿಕಾರಕ ಧೈರ್ಯ ಗಾಂಧೀಜಿಯ ಆಚಾರ ವಿಚಾರದಲ್ಲಿದೆ. ವಿಚಾರಹೀನರಾಗಿ ಇಂಥಾ ದುಷ್ಟಕೂಟದಲ್ಲಿ ನಾವು ಹೊಂದಿರುವ ಪಾಲುದಾರಿಕೆಯನ್ನು ಎದುರಿಸುವುದೇ ಗಾಂಧೀಜಿಯ ಹೆಚ್ಚುಗಾರಿಕೆಯಾಗಿದೆ. ಸಾಮಾಜಿಕ ಜವಾಬ್ದಾರಿಯ ಕರ್ಮಯೋಗದಿಂದಲೂ ವೈಚಾರಿಕ ಎಚ್ಚರದ ಜ್ಞಾನಯೋಗದಿಂದಲೂ ಇಹದ ಬದುಕಿನಲ್ಲೇ ಆಧ್ಯಾತ್ಮಿಕ ಉನ್ನತಿಯನ್ನು ಕಾಣಬೇಕಾಗಿರುವ ಮನುಷ್ಯಜೀವಿಯ ಮೂಲಭೂತ ಅಗತ್ಯವನ್ನು ಇಪ್ಪತ್ತನೆಯ ಶತಮಾನದ ವಿಶಿಷ್ಟ ಪರಿಸ್ಥಿತಿಯಲ್ಲಿ ನಿರ್ವಹಿಸುವ ಕ್ರಮ ಹೇಗೆ ಎಂಬ ಅತ್ಯಂತ ತುರ್ತಿನ ಪ್ರಶ್ನೆಯನ್ನು ಗಾಂಧೀಜಿ ತಮ್ಮ ಬಗೆ ಬಗೆಯ ಆಚಾರ ವಿಚಾರಗಳ ಪ್ರಯೋಗದಲ್ಲಿ ಪ್ರತಿಪಾದಿಸಿದ್ದಾರೆ'. (ಉದಯವಾಣಿ ೧–೧೦–೧೯೯೫)ಎಂಬ ವಿಚಾರಗಳನ್ನು ಮಂಡಿಸುತ್ತಾರೆ.

ಈ ಕೃತಿಯಲ್ಲಿರುವ ಸಂಗತಿಗಳಂತೆ, ಸಂಘಟನೆಗಳಂತೆ, ಜೀವಿಗಳಂತೆ ಗಾಂಧಿ ಬೆಳೆಯುತ್ತಾ, ಬದುಕುತ್ತಾ ಹೋಗುತ್ತಾರೆ. ಅನಂತಮೂರ್ತಿಯವರು ಹೇಳುವಂತೆ ರಾಮನಂತಹವರು ಹುಟ್ಟುವ ಬಾಯಿಯಾಗುತ್ತಾರೆ.(ಅವರ ಮಾತು ಹೀಗಿದೆ: ಗಾಂಧಿ ಹುಟ್ಟಿದ್ದು ಅಯೋಧ್ಯೆಯಲ್ಲಲ್ಲ ಗಾಂಧೀಜಿಯ ಬಾಯಲ್ಲಿ)

*

ಶತಮಾನ ಚಿಂತನೆ ಮಾಲಿಕೆಯ ಮೊದಲ ಕೃತಿ ಕೆ. ಫಣಿರಾಜರ 'ಅಂಟೋನಿಯೊ ಗ್ರಾಮ್ಷಿ' ಸಾಹಿತ್ಯ ವಲಯದಲ್ಲಿ ಮೆಚ್ಚುಗೆ ಪಡೆದಿದೆ. ಮುಂದೆ ಈ ಮಾಲಿಕೆಯಲ್ಲಿ ಎಡ್ವರ್ಡ್ ಸೈದ್, ಫುಕೋ, ಜಾರ್ಜು ಲೂಯಿ ಬೋರ್ಹೆಸ್, ಮಂಡೇಲಾ, ಐವಾನ್ ಇಲಿಚ್, ರಸೆಲ್, ಸೂಕಿ, ಐನ್‌ಸ್ಟೈನ್, ಫ್ಯಾಸಿಸಂ ಮುಂತಾಗಿ ಪ್ರಕಟಗೊಳ್ಳುತ್ತವೆ.

ಈ ಕೃತಿಯನ್ನು ಪ್ರಕಟಿಸಲು ಅನುಮತಿ ನೀಡಿದ ಶ್ರೀಮತಿ ರಜನಿ ಭಕ್ಷಿ ಮತ್ತು ಪೆಂಗ್ವಿನ್ ಪ್ರಕಾಶನ ಸಂಸ್ಥೆಯವರಿಗೆ, ಶ್ರಿಮತಿ ಶೋಭಾ ಮತ್ತು ಪ್ರಹ್ಲಾದ ದಿವಾಣಜಿಯವರಿಗೆ, ಅನುವಾದಿಸಿದ ಕೆ. ವೆಂಕಟರಾಜು, ಕರಡು ತಿದ್ದಿದ ಭಾರತೀದೇವಿ, ಪೂರ್ಣಿಮಾ ಭಟ್, ಪುಷ್ಪಾ ಪಶುಪತಿಯವರಿಗೆ, ಬೆನ್ನುಡಿ ಬರೆದುಕೊಟ್ಟ ಜಿ. ರಾಜಶೇಖರ್ ಅವರಿಗೆ, ಎಂದಿನಂತೆ ನಮ್ಮ ಕೆಲಸಗಳನ್ನು ಬೆಂಬಲಿಸುತ್ತಿರುವ ಚಿ. ಶ್ರಿನಿವಾಸರಾಜು, ಯು. ಆರ್. ಅನಂತಮೂರ್ತಿ, ದೇವನೂರ ಮಹಾದೇವ, ಕೆ. ಫಣಿರಾಜ್, ಕೆ. ವಿ. ತಿರುಮಲೇಶ್, ಪ್ರಭುಶಂಕರ, ರವಿ ಬೆಳಗೆರೆ, ವಸಂತ ದಿವಾಣಜಿ, ಆನಂದ ಪಾಟೀಲ, ವಿಜಯಮ್ಮ, ಬಸವರಾಜ ಕಲ್ಗುಡಿ, ಜಿ.ಎನ್. ಮೋಹನ್, ಮಲ್ಲೇಪುರಂ ಜಿ. ವೆಂಕಟೇಶ್, ಸ. ಉಷಾ, ಸಿರಾಜ್ ಅಹಮದ್, ಶ್ರೀಧರ ಹೆಗಡೆ ಭದ್ರನ್, ಎಂ.ಕೆ.ನರಸಿಂಹಮೂರ್ತಿ, ಬಿ. ದೇವರಾಜ್, ಅಜಿತಾ ವೇಣುಕೃಷ್ಣ ಪ್ರಸಾದ್ ಮುಂತಾದ ಹಿರಿಯರು–ಗೆಳೆಯರಿಗೆ ಕೃತಜ್ಞತೆಗಳು.

ಅಭಿನವದ ಪರವಾಗಿ

ರವಿಕುಮಾರ

ಪರಿವಿಡಿ


ಬಾಪು ಕುಟೀರದಲ್ಲಿ ಅರುಣೋದಯ

ಬ್ರಾಹ್ಮೀ ಮುಹೂರ್ತದಲ್ಲಿನ ಪ್ರಾರ್ಥನೆಯ ಕೊನೆಯ ಧ್ವನಿ ತರಂಗಗಳು, ಬಾಪು ಕುಟೀರದ ಸುತ್ತಲಿನ ಕತ್ತಲಿನಲ್ಲಿ ನಿಧಾನವಾಗಿ ಕರಗುತ್ತವೆ. ಪ್ರಾರ್ಥನೆಗೆ ಕುಳಿತ ಮಂದಿ ತಮ್ಮ ತಮ್ಮ ಕೊಠಡಿಗಳಿಗೆ ಮರಳುವ ಪ್ರಕ್ರಿಯೆಯಲ್ಲಿ ಅವರು ಕುಳಿತ ಮಣ್ಣಿನ ನೆಲದಲ್ಲಿನ ಕಲ್ಲು, ಮಣ್ಣುಗಳ ಸಪ್ಪಳ ಕೇಳಿಸುತ್ತದೆ. ಎಲ್ಲೆಲ್ಲೂ ವ್ಯಾಪಿಸಿರುವ ಆಳವಾದ ನಿಶ್ಚಲತೆ ಉಳಿಯುತ್ತದೆ.

ಈ ಮೌನ ಬಾಪು ಕುಟೀರದಲ್ಲಿನ ಹೆಮ್ಮರಗಳಲ್ಲಿ ಅಡಗಿರುವ ಹಕ್ಕಿಗಳ ಕಲರವಕ್ಕೆ ಹಾದಿ ಮಾಡಿಕೊಡುತ್ತದೆ. ಇದರ ಹಿಂದೆಯೇ ಅಲ್ಲಿನ ಅಳಿಲುಗಳು ಮಹಾತ್ಮಾ ಗಾಂಧೀಜಿ ಮನೆಯ ಒಳಗೆ ಹೊರಗೆ ಓಡಾಡತೊಡಗುತ್ತವೆ. ಸೂರ್ಯ ನಿಧಾನವಾಗಿ ಮೇಲೇಳುತ್ತಾನೆ. ಆತ ನಿಚ್ಚಳವಾಗಿ ಬೆಳಗುವ ಮೊದಲು ತಣ್ಣನೆಯ ಕಿತ್ತಲೆಯ ಗೋಳದಂತೆ ಮರಗಳ ಹಿಂದೆ ಅಡಗಿ, ಮೃದುವಾದ ಬೆಳಕನ್ನು ನೆಲದ ಮೇಲೆಲ್ಲಾ ಚೆಲ್ಲುತ್ತಾನೆ. ಹೆಚ್ಚು ಕಡಿಮೆ ಇದೇ ಸಮಯಕ್ಕೆ ಹರಿಭಾವೂ ಕುಟೀರದ ಬಾಗಿಲು ತೆರೆದು ಅಂದು ಬರುವ ಸಂದರ್ಶಕರು, ಯಾತ್ರಿಗಳಿಗಾಗಿ ಕಸ ಗುಡಿಸಲು ತೊಡಗಿಕೊಳ್ಳುತ್ತಾನೆ.

ಬಾಪು ಕುಟೀರದಲ್ಲಿನ ಈ ಪರಿಚಿತ ಕ್ರಿಯೆಗಳು ನಮ್ಮಲ್ಲಿ ಅನಿರ್ವಚನೀಯವಾದ ಸಂತಸವನ್ನು ತುಂಬುತ್ತವೆ. ಬಾಪು ಕುಟಿರಕ್ಕೆ ಬರುವ, ಬಂದು ಈ ಮಣ್ಣಿನ ನೆಲದಲ್ಲಿ ಕೂರುವ ಅಥವಾ ಈ ಕುಟೀರದ ಸೂರನ್ನು ಎತ್ತಿಹಿಡಿದಿರುವ ಬೊಂಬಿಗೆ ಆನಿಸಿ ಕೂರುವ ಎಲ್ಲರನ್ನೂ ಈ ಮೌನ ಸ್ವಾಗತಿಸುತ್ತದೆ.

ಇಂತಹುದೇ, ಒಂದು ಬೆಳಗಿನ ಸಂದರ್ಭದಲ್ಲಿ ಇದರಲ್ಲಿನ ಎಲ್ಲ ಕತೆಗಳನ್ನು ಕೂಡಿಸಿ ಹೊರತರುವ ಆಲೋಚನೆ ಮೊಟ್ಟಮೊದಲಿಗೆ ಬಂತು.



ಈ ಭೂಪಟದಲ್ಲಿ ತೋರಿಸಿರುವ ಅಂತರರಾಷ್ಟ್ರೀಯ ಗಡಿ ಅಥೆಂಟಿಕ್ ಅಲ್ಲ ಅಂದಾಜಿನದು– ಪ್ರಕಾಶಕರು

ಬಾಪು ಕುಟಿಯ ಚೈತನ್ಯ

ಮಹಾತ್ಮ ಗಾಂಧಿ **ಬಾಪು ಕುಟಿ**ಯನ್ನು ಶಾಶ್ವತವಾಗಿ ಬಿಟ್ಟಮೇಲೆ, ಪ್ರತಿದಿನ ಬೆಳಗು ಮೈಪಡೆಯುತ್ತಿದ್ದಂತೆ ಹರಿಬಾಬು ಅಲ್ಲಿಗೆ ಬರುತ್ತಿದ್ದ. ಹುಲ್ಲಿನ ಪೊರಕೆಯನ್ನು ಹಿಡಿದು ಹರಿಬಾಬು ಕುಟಿಯ ಆವರಣವನ್ನು ಶ್ರದ್ಧೆಯಿಂದ ಗುಡಿಸುತ್ತಿದ್ದಂತೆ, ಸಿಹಿ ಮತ್ತು ಕಹಿ ನೆನಪುಗಳು ಅವನನ್ನು ಆವರಿಸುತ್ತಿದ್ದವು. ಕೆಲವೊಮ್ಮೆ ಅವನಿಗೆ ಬಾಪು ಮಹದೇವಭಾಯಿಯ ಭುಜದ ಮೇಲೆ ಕೈಯಿರಿಸಿಕೊಂಡು ಸುಳಿದಾಡುತ್ತಿರುವಂತೆ ಭಾಸವಾಗುತ್ತಿತ್ತು.

ಬಾಪುವನ್ನು ಭೇಟಿ ಮಾಡಲು ಬರುತ್ತಿದ್ದ ಪ್ರಮುಖ ವ್ಯಕ್ತಿಗಳಿಂದಾಗಿ ಕುಟಿ ಮತ್ತು ಅದರ ಆವರಣ ಸದಾ ಚಟುವಟಿಕೆಗಳಿಂದ ತುಂಬಿಕೊಂಡಿರುತ್ತಿದ್ದ ಕಾಲವೊಂದಿತ್ತು. ಆ ಸಂದರ್ಭದಲ್ಲಿ ಹರಿಗೆ ಇವೆಲ್ಲ ಅರ್ಥವಾಗುತ್ತಿರಲಿಲ್ಲ. ಆದರೆ ಅವನಿಗೆ ಹದಿನೈದು ವರ್ಷ ಆಗುತ್ತಿದ್ದಂತೆ, ಈ ಸಭೆಗಳು ಸ್ವರಾಜ್ಯಕ್ಕಾಗಿ ನಡೆಸುತ್ತಿರುವ ಹೋರಾಟವನ್ನು ಬೆಂಬಲಿಸುವಂತಹವು ಎಂದು ಅರ್ಥವಾಗತೊಡಗಿತು. ಪ್ರತಿನಿತ್ಯವೂ 'ವಾರ್ಧಾ' ನಿಲ್ದಾಣಕ್ಕೆ ಸೈಕಲ್‌ನಲ್ಲಿ ಹೋಗಿ ಬಾಪು ಬರೆದ ಪತ್ರಗಳನ್ನು ಕಳುಹಿಸುವುದು ಹರಿಬಾಬುನ ಕರ್ತವ್ಯವಾಗಿತ್ತು. ಪತ್ರದ ಕಟ್ಟುಗಳ ಗಾತ್ರ ಸದಾ ದೊಡ್ಡದೇ ಆಗಿರುತ್ತಿತ್ತು. ಬಾಪುಗೆ ಸ್ನಾನದ ನೀರನ್ನು ಸಿದ್ಧಪಡಿಸುವುದು ಕೂಡ ಹರಿಯ ಜವಾಬ್ದಾರಿ. ಇದು ಹೆಚ್ಚು ಬಿಸಿಯೂ, ತಣ್ಣಗೂ ಇರದೆ ಹದವಾಗಿರುವಂತೆ ನೋಡಿಕೊಳ್ಳಲು ಹರಿ ಉಷ್ಣಮಾಪಕ ಬಳಸುತ್ತಿದ್ದ.

೪೦ ವರ್ಷಗಳ ಬಳಿಕ, ಬಾಪು ಸ್ನಾನ ಮಾಡುತ್ತಿದ್ದ ಕಿರಿಯ ಆವರಣವನ್ನು ಸ್ವಚ್ಛವಾಗಿ ಗುಡಿಸುತ್ತಿದ್ದಂತೆ ಈ ನೆನಪುಗಳು ಹರಿಬಾಬುಗೆ ಮರುಕಳಿಸುತ್ತಿದ್ದವು. ಕೇವಲ ಕೆಲವೇ ಮಂದಿ ಈ ನೆನಪುಗಳನ್ನು ಆಸಕ್ತಿ ವಹಿಸಿ ಆಲಿಸುತ್ತಿದ್ದರು. ಹೀಗಾಗಿ ಅವನು ಮೌನವಾಗಿ ಅವನ ಕೆಲಸಗಳಲ್ಲಿ ನಿರತನಾಗಿರುತ್ತಿದ್ದ. ಬಹುತೇಕ ದಿನಗಳಲ್ಲಿ ಅವನು ತನ್ನ ರೂಢಿಯ ಕೆಲಸಗಳನ್ನು ಮುಗಿಸಿ, ಆಶ್ರಮದ ಬೇಲಿಯಾಚೆಗಿರುವ ಸೇವಾಗ್ರಾಮದ ತನ್ನ ಮನೆಯನ್ನು ಸೇರುತ್ತಿದ್ದ. ಆದರೆ ಕುಟಿಯನ್ನು ಬಹಳ ಕಾಲ ಈ ಏಕಾಂತ ಆವರಿಸಿಕೊಳ್ಳುತ್ತಿರಲಿಲ್ಲ. ಪ್ರವಾಸಿಗರು, ಯಾತ್ರಿಕರಿಂದ ಕುಟಿ ದಿನವಿಡೀ ತುಂಬಿ ತುಳುಕುತ್ತಿತ್ತು. ಕೆಲವರು ಚರಕ, ಗಾಂಧಿಯವರ ನಡಿಗೆ ಬೆತ್ತ–ಇವಿಷ್ಟನ್ನು ನೋಡಿ ಸರಿದುಬಿಟ್ಟರೆ, ಇನ್ನು ಕೆಲವರು ಗೌರವಭಾವದಿಂದ ಕುಟಿಯನ್ನು

ಪ್ರವೇಶಿಸಿ, ಕುಟಿಯ ಮೌನಕ್ಕೆ ಕಿವಿಯಾನಿಸಿ, ಏನನ್ನೋ ಕೇಳುತ್ತಿರುವವರಂತೆ ಕ್ಷಣಕಾಲ ಅಲ್ಲೇ ಕುಳಿತುಬಿಡುತ್ತಿದ್ದರು.

ಕಾಲ ಸರಿದಂತೆ, ಇಂತಹ ಕೇಳುಗರ ಸಂಖ್ಯೆ ಹೆಚ್ಚಾಗುತ್ತಿರುವುದನ್ನು ಹರಿ ಗಮನಿಸುತ್ತಿದ್ದಾನೆ. ಭಾರತದ ಮೂಲೆಮೂಲೆಗಳಿಂದಲೂ, ವಿದೇಶಗಳಿಂದಲೂ ಇಂತಹ ಜನ ಇಲ್ಲಿಗೆ ಬರುತ್ತಾರೆ. ಕುಟಿಯ ಸ್ವಚ್ಛಗಾಳಿ, ಬೆಳಕನ್ನು ಸವಿಯಲು ಕ್ಷಣಕಾಲ ನಿಲ್ಲುವವರು ಇವರು. ಬಾಪು ಕೆಲಸಕ್ಕಾಗಿ ಕುಳಿತುಕೊಳ್ಳುತ್ತಿದ್ದ ಜಾಗದ ಮಣ್ಣಿನಗೋಡೆಯ ಮೇಲಿದ್ದ 'ಓಂ' ಕಾರವನ್ನು ಇವರು ದಿಟ್ಟಿಸುತ್ತಾರೆ. ಹರಿ ಅಕ್ಕರೆಯಿಂದ ಸೇವೆಸಲ್ಲಿಸಿದ ಈ ಮನುಷ್ಯನಿಗೆ ಅನೇಕರು ಸಲ್ಲಿಸುತ್ತಿರುವ ಗೌರವ ಪ್ರಶ್ನಾತೀತವಾದುದೇನೂದಲ್ಲ.

ಅಕ್ಟೋಬರ್ ೧೮೬೯ರಲ್ಲಿ ಹುಟ್ಟಿದ ಎಂ. ಕೆ. ಗಾಂಧಿಯೆಂಬ ಈ ವ್ಯಕ್ತಿಯ ಬದುಕು ೩೦ ಜನವರಿ ೧೯೪೮ರಂದು ಹಂತಕನ ಗುಂಡಿಗೆ ಬಲಿಯಾಗಿ ಕೊನೆಕಂಡಿತು.

ಈ ಐತಿಹಾಸಿಕ ಗಾಂಧಿ ಎಲ್ಲ ನಶ್ವರ ವ್ಯಕ್ತಿಗಳಂತೆ ಮಿತಿಯುಳ್ಳವರು. ಈ ಶತಮಾನದ ಸಂಧ್ಯೆಯಲ್ಲಿ ಮತ್ತು ಹೊಸಶತಮಾನದ ಬೆಳಗಿನಲ್ಲಿ ಯಾರು ಬಾಪು ಕುಟಿಯತ್ತ ಧಾವಿಸುತ್ತಿದ್ದಾರೋ, ಅವರು 'ಯುಗಪ್ರವರ್ತಕ' ಗಾಂಧಿಯ ಮೇಲೆ ಭಯಮಿಶ್ರಿತ ಗೌರವ ಹೊಂದಿದವರು. ಕಾಲ ಮತ್ತು ದೇಶಗಳ ಬಂಧನದಿಂದ ಹೊರತಾದ ಈ ಗಾಂಧಿಯ ಸತ್ವ ಬಾಪು ಕುಟಿಯ ಚೈತನ್ಯ ಮತ್ತು ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿದೆ.

'ಯುಗ ಪ್ರವರ್ತಕ ಗಾಂಧಿ'–ಹೀಗೆಂದರೇನು?

ಇದಕ್ಕೆ ಕುಟಿಯ ಮೂಲಕ ನಾವು ಉತ್ತರವನ್ನು ಹುಡುಕೋಣ ಹಾಗೂ ಮುಂಬರುವ ಪೀಳಿಗೆಗೆ ಇದರ ಸಂದೇಶವೇನು ಎಂಬುದನ್ನು ನೋಡೋಣ. ಬಾಪು ಕುಟಿಯ ಚೈತನ್ಯದೊಂದಿಗೆ ಯಾತ್ರೆ ಹೊರಡುವ ಮೊದಲು ನಾವು ಕಾಲದೊಂದಿಗೆ ಒಂದೆ ಸರಿಯುತ್ತಾ ಮಣ್ಣು, ಬಿದಿರು ಮತ್ತು ಮರ ಜೊತೆಗೂಡಿದ ಬಗೆಯನ್ನು ನೋಡೋಣ.

ಮೀರಾಬೆನ್‌ರ ಶ್ರಮಗೌರವ

ಮ್ಯಾಡೆಲಿನ್ ಸ್ಲೇಡ್ ೧೮೯೨, ನವೆಂಬರ್‌ನ ಚಳಿಗಾಲದಲ್ಲಿ ಕುಲೀನ ಬ್ರಿಟಿಷ್ ಮನೆತನದಲ್ಲಿ ಜನಿಸಿದಳು. ಈಕೆ ಲೇಸ್, ನೆರಿಗೆಗಳ ಬೆಚ್ಚನೆಯ ಅಂಗಿಯೊಳಗೆ ಹುದುಗಿ, ಕಟ್ಟುನಿಟ್ಟಾದ ಪರಿಸರದಲ್ಲಿ ಯಾವುದೇ ಕೊರತೆಯಿಲ್ಲದ ಇತರ ಮಕ್ಕಳಂತೆ ಬೆಳೆದಳು. ಒಳ್ಳೆಯ ಜ್ಯೋತಿಷಿ ಇದ್ದಿದ್ದರೆ, ಈಕೆ ತನ್ನ ಯೌವನದ ಬಹುಭಾಗ 'ಮೀರಾಬೆನ್' ಎಂಬ ಹೆಸರಿನಿಂದಲೇ ಕರೆಯಲ್ಪಡುತ್ತಾಳೆ ಎಂದು ಹೇಳಿರುತ್ತಿದ್ದ. ತನ್ನ ಈ ಐಶ್ವರ್ಯ, ವೈಭವಗಳಿಂದಾಚೆಗೆ ಸಾಗಿ, ಅವಳು ಬದುಕುತ್ತಾಳೆ ಎಂಬುದು ಕಲ್ಪನೆಗೂ ನಿಲುಕುತ್ತಿರಲಿಲ್ಲ. ಮ್ಯಾಡಲಿನ್‌ಳ ಭವಿಷ್ಯ ಲಂಡನ್‌ನ ಹೈಕೋರ್ಟ್‌ನಲ್ಲಿ ಆಗತಾನೇ ವಕೀಲನಾಗಿದ್ದ ವ್ಯಕ್ತಿಯೊಬ್ಬನ ಜೊತೆ ಬೆಸೆದುಕೊಂಡಿದೆ ಎಂದು ಯಾರು ತಿಳಿದಿದ್ದರು?

೧೮೯೩ರಲ್ಲಿ ಎಂ. ಕೆ. ಗಾಂಧಿಯೆಂಬ ವ್ಯಕ್ತಿ ಮಹಾತ್ಮನಾಗುವ ಗೋಜಿಗೆ ಹೋಗದೆ ಮುಂಬೈನಿಂದ ದಕ್ಷಿಣ ಆಫ್ರಿಕಾಕ್ಕೆ ತನ್ನ ಅದೃಷ್ಟ ಪರೀಕ್ಷೆಗಾಗಿ ತೆರಳುತ್ತಿದ್ದರು. ಮ್ಯಾಡಲಿನ್ ಈ ವ್ಯಕ್ತಿಯೊಂದಿಗೆ ಸೇರಿ ಮುಂದೊಂದು ದಿನ ಚರಿತ್ರೆಯನ್ನೇ ನಿರ್ಮಿಸಲಿಕ್ಕಿದ್ದಳು. ಈತನ ಬದುಕು ಮತ್ತು ನಂಬಿಕೆಗಳು ಜೀವನಾಡಿಯಾಗಿರುತ್ತವೆ ಎಂದು ಅವಳ ಬಾಲ್ಯದಲ್ಲಿ ಯಾರಿಗೂ ತಿಳಿದಿರಲಿಲ್ಲ.

ಉನ್ನತ ಸತ್ಯಕ್ಕಾಗಿ ಹಂಬಲಿಸುವ ಚೇತನವಾಗಿ ಮ್ಯಾಡಲಿನ್ ಬೆಳೆಯುತೊಡಗಿದಳು. ಅಭಿವೃದ್ಧಿ ಹೊಂದುತ್ತಿರುವ ಯಾಂತ್ರಿಕ ಯುಗ ಕುರಿತು ಆಕೆಯಲ್ಲಿ ಮೂಲಭೂತ ಅಸಹನೆ ಇತ್ತು. ಲಂಡನ್‌ನ ರಸ್ತೆಗಳಲ್ಲಿ ಸಾಗುತ್ತಿದ್ದ ಕುದುರೆಗಾಡಿಗಳ ಜಾಗವನ್ನು, ಜೋರಾಗಿ ಶಬ್ದ ಮಾಡುವ ಅಪಾಯಕಾರಿ ಮೋಟಾರು ವಾಹನಗಳು ಆಕ್ರಮಿಸಿದ್ದನ್ನು ಹದಿಹರೆಯದ ಮ್ಯಾಡಲಿನ್ ಬೆಚ್ಚುತ್ತಲೇ ನೋಡಿದಳು. ನೀಳಕಾಯದ, ಗಾಂಭೀರ್ಯದ ಈ ಯುವತಿಗೆ ವಾಯು ಸೇನಾಧಿಕಾರಿಯ ಮಗಳಾಗಿ ಬದುಕುವ ಶ್ರೀಮಂತ ಬದುಕು ಆಕರ್ಷಕ ಎನಿಸಲಿಲ್ಲ. ಅವಳು ೧೯೧೧ರಲ್ಲಿ ತಂದೆ-ತಾಯಿಯೊಂದಿಗೆ ದೆಹಲಿ ದರ್ಬಾರ್‌ಗೆ ಭೇಟಿ ನೀಡಲು ಕಟುವಾಗಿ ನಿರಾಕರಿಸಿದಳು. ಅಜ್ಜನ ಹಳ್ಳಿಯ ತೋಟದ ಶಾಂತ ವಾತಾವರಣದಲ್ಲಿ ಇರುವುದೆಂದರೆ ಅವಳಿಗೆ ಎಲ್ಲಿಲ್ಲದ ಖುಷಿ.

ಹದಿಮೂರು ವರ್ಷ ವಯಸ್ಸಿನ ಮ್ಯಾಡಲಿನ್‌ಗೆ ಲುಡ್ವಿಗ್ ವಾನ್ ಬಿಥೋವನ್‌ನ ಸಂಗೀತವೆಂದರೆ ಎಲ್ಲಿಲ್ಲದ ಪ್ರೀತಿ. 'ಸಂಗೀತದ ಸಾಮಾನ್ಯ ಅನುಭವಕ್ಕೆ ಹೊರತಾಗಿ, ಸ್ವರಗಳ ಮೂಲಕ ಚೇತನ ಮಾತನಾಡುತ್ತಿದೆಯೇನೋ ಎಂಬ ಅನುಭವ ನನಗಾಯಿತು. ಹೌದು, ನಾನು ಆ ಚೇತನವನ್ನು ಕಂಡೆ'–ಹೀಗೆ ಆಕೆ ಬಿಥೋವನ್‌ನ ಜೀವನ, ಸಾಧನೆಗಳ ಬಗ್ಗೆ ಅಕ್ಕರೆಯಿಂದ ಬರೆದ ಫ್ರೆಂಚ್ ತತ್ವಜ್ಞಾನಿ, ಲೇಖಕ ರೋಮನ್ ರೋಲ್ಯಾಂಡರನ್ನು ಅರಸುತ್ತಾ ಸಾಗಿದಳು. ಆದರೆ, ಆಕೆ ರೋಮನ್ ರೋಲ್ಯಾಂಡ್‌ರನ್ನು ಭೇಟಿಯಾದಾಗ ಅವರು ಆಗತಾನೆ ಬರೆದು ಮುಗಿಸಿದ್ದ ಪುಸ್ತಕ 'ಮಹಾತ್ಮಗಾಂಧಿ' ಬಗೆಗೆ ಮಾತಾಡಲು ಕಾತರರಾಗಿದ್ದರು. ಮ್ಯಾಡಲಿನ್ ಆವರೆಗೆ ಆ ಹೆಸರನ್ನು ಕೇಳಿರಲಿಲ್ಲ. ಆದರೆ ರೋಮನ್ ರೋಲ್ಯಾಂಡ್ ಹೇಳಿದ್ದು ಆಕೆಯ ಮನಸೆಳೆಯಲು ಸಾಕಾಗಿತ್ತು.

ರೋಮನ್ ರೋಲ್ಯಾಂಡ್‌ನ ಈ ಪುಸ್ತಕ ಬಿಡುಗಡೆ ಆದ ತಕ್ಷಣವೇ ಅದನ್ನು ಕೊಂಡು, ಅದೇ ದಿನವೇ ಮ್ಯಾಡಲಿನ್ ಓದಿ ಮುಗಿಸಿದಳು. ಅವಳ ಬದುಕಿನ ದಿಸೆಯೇ ಬದಲಾಗಿ ಹೋಯಿತು. ಜೀವನದ ಅರ್ಥ ಮತ್ತು ಉದ್ದೇಶಗಳನ್ನು ಕಂಡುಕೊಳ್ಳುವ ಅವಳ ತಹತಹ ಕೊನೆಕಂಡಿತು. ಮುಂದೆ ತನ್ನ ಆತ್ಮಚರಿತ್ರೆ 'ದ ಸ್ಪಿರಿಟ್ಸ್ ಪಿಲಿಗ್ರಿಮೇಜ್'ನಲ್ಲಿ ತನ್ನ ಬದುಕಿನಲ್ಲಾದ ಮಹತ್ತರ ಸಂಭಾವಣೆಯ ಕುರಿತು ಆಕೆ ಹೀಗೆ ಬರೆಯುತ್ತಾಳೆ:

'ನಾನು ನಿಜವಾಗಿ ಯಾವುದಕ್ಕಾಗಿ ಹಪಹಪಿಸುತ್ತಿದ್ದೆನೆಂಬುದು ಆಗ ನನಗೆ ತಿಳಿಯಿತು. ನಿಷ್ಠುರ ಸತ್ಯ ಮತ್ತು ಅಹಿಂಸೆಯ ಮೂಲಕ ತುಳಿಯಲ್ಪಟ್ಟವರ ಏಳಿಗೆಗಾಗಿ ದುಡಿಯುತ್ತಿರುವ, ಭಾರತದ ಮೂಲಕ ಇಡೀ ಮಾನವ ಜನಾಂಗಕ್ಕೆ ಇದನ್ನು ಸಾರಿಹೇಳುತ್ತಿರುವ ಮಹಾತ್ಮ

ಗಾಂಧಿಯನ್ನು ನಾನು ಭೇಟಿ ಮಾಡುವುದಿತ್ತು. ತಪ್ಪು-ಒಪ್ಪುಗಳ ಕುರಿತು ಚಿಂತಿಸುವ ಗೋಜಿಗೆ ನಾನು ಹೋಗಲಿಲ್ಲ. ಆ 'ಕರೆ' ಅಚಲವಾಗಿತ್ತು ಎಂಬುದಷ್ಟೇ ನನಗೆ ಮುಖ್ಯವಾಗಿತ್ತು'.

ಬಳಿಕದ ಒಂದು ವರ್ಷ-ನೂಲುವುದನ್ನು ಕಲಿಯುವುದು, ನೆಲದಲ್ಲಿ ಮಲಗುವುದು ನಿಧಾನವಾಗಿ ಸಸ್ಯಾಹಾರಿಯಾಗುವುದು-ಹೀಗೆ ತೀವ್ರ ತರಬೇತಿಯಲ್ಲಿ ಕಳೆದಳು. ನಂತರ, ಅಹಮದಾಬಾದಿನ ಬಳಿಯ ಸಾಬರಮತಿ ಆಶ್ರಮದಲ್ಲಿ ನೆಲೆಸಿದ್ದ ಗಾಂಧಿಯವರ ಆಶ್ರಮದ ಸಮುದಾಯಕ್ಕೆ ಸೇರಿಕೊಳ್ಳಲು ಅನುಮತಿಯನ್ನು ಕೋರಿ ಪತ್ರವೊಂದನ್ನು ಬರೆದಳು. ಪ್ರತಿಯಾಗಿ, 'ಬನ್ನಿ' ಎಂಬ ಉತ್ತರ ಆಕೆಯನ್ನು ಸ್ವಾಗತಿಸಿತ್ತು.

ಹೀಗೆ ೧೯೨೫ರಲ್ಲಿ, ೩೩ ವರ್ಷದ ಯುವತಿ ಸ್ಲೇಡ್ ಭಾರತಕ್ಕೆ ಬಂದು ಗಾಂಧಿಯನ್ನು ಆಧ್ಯಾತ್ಮಿಕ ಗುರುವಾಗಿ ಸ್ವೀಕರಿಸಿದಳು. ಗಾಂಧಿ ಆಕೆಯನ್ನು 'ಮೀರಾಬೆನ್' ಎಂದು ಕರೆದರು. ಹಾಗೇ ಗಾಂಧಿಯ ಮೇಲಿನ ಈಕೆಯ ಭಕ್ತಿ ಮೀರಾಗೆ ಗಿರಿಧರ ಗೋಪಾಲನ ಮೇಲಿದ್ದ ಭಕ್ತಿಗಿಂತ ಕಡಿಮೆಯಾದುದಾಗಿರಲಿಲ್ಲ. ಗಾಂಧೀಜಿಯ ಜೀವನ ಚರಿತ್ರೆಯನ್ನು ಬರೆದ ಲೂಯಿ ಫಿಶರ್ ಉಲ್ಲೇಖಿಸುತ್ತಾರೆ: ಗಾಂಧಿಯೊಂದಿಗಿನ ಈಕೆಯ ಒಡನಾಟ ನಮ್ಮ ಸಂದರ್ಭದ ದಿವ್ಯಪ್ರೀತಿಗಳಲ್ಲಿ ಒಂದು. ಗಾಂಧಿ ಆಗಾಗ ಆಕೆಗೆ ಹೇಳುತ್ತಿದ್ದರು 'ಈ ದೇಹ ಅಂತ್ಯವಾದಾಗ ನಾನು ನೀನೂ ಬೇರಾಗುವುದಿಲ್ಲ, ಬದಲಾಗಿ ನಾನು ನಿನಗೆ ಇನ್ನೂ ಹತ್ತಿರವಾಗುತ್ತೇನೆ, ಈ ದೇಹವೇ ಒಂದು ತಡೆ'.

ಮೀರಾಬೆನ್ ಶ್ರೇಷ್ಠ ಸತ್ಯಾಗ್ರಹಿಯಾಗಿ ರೂಪುಗೊಳ್ಳಲು ತನ್ನ ಇಡೀ ಜೀವನವನ್ನೇ ಮುಡಿಪಾಗಿಟ್ಟಳು. ನಿರ್ಭಯತೆಯನ್ನು ಬೆಳೆಸಿಕೊಳ್ಳಲು ಕಟ್ಟುನಿಟ್ಟಾದ, ವೈಯುಕ್ತಿಕ ಶಿಸ್ತನ್ನು ಇದು ಬೇಡುತ್ತದೆ. ಭಾರತದ ಹಳ್ಳಿಗಳ ಅಭಿವೃದ್ಧಿಗಾಗಿ ಅಚಲ ಪರಿಶ್ರಮದಿಂದ ದುಡಿಯುವುದೂ ಇದರಲ್ಲಿ ಸೇರಿದೆ. ಆರು ವರ್ಷಗಳ ಬಳಿಕ ೧೯೩೧ರಲ್ಲಿ ಲಂಡನ್‌ನ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಗಾಂಧಿಯೊಡನೆ ತೆರಳಿದಾಗ ಮಿಸ್ ಸ್ಲೇಡ್‌ಳ ಹೋಲಿಕೆ ಮೀರಾಬೆನ್‌ರಲ್ಲಿ ಅತ್ಯಲ್ಪವಾಗಿತ್ತು. ಅನೇಕ ದಿನಪತ್ರಿಕೆಗಳಲ್ಲಿ, ಛಾಯಾಚಿತ್ರಗಳಲ್ಲಿ ಗಾಂಧಿಯೊಡನೆ ಕಾಣಿಸಿಕೊಂಡ ಮೀರಾಬೆನ್, ಶುಭ್ರ ಬಿಳಿಯ ಖಾದಿ ಧರಿಸಿದ್ದಳು. ಸರಳವಾದ ಉಣ್ಣೆಯ ಶಾಲನ್ನು ಹೊದ್ದಿದ್ದಳು.

ಆನಂದದ ಕೂಗು ಹಾಕುತ್ತಿರುವ ಲ್ಯಾಂಕ್‌ಶೈರ್‌ನ ಮಹಿಳಾ ಕಾರ್ಮಿಕರೊಂದಿಗೆ ಗಾಂಧಿಯ ಜೊತೆ ಸಂತೋಷದಿಂದ ನಿಂತಿರುವ ಮೀರಾಬೆನ್‌ರ ಭಾವಚಿತ್ರ ಇತಿಹಾಸದ ಪುಟಗಳಲ್ಲಿ ಸೇರಿಹೋಗಿದೆ. ಲ್ಯಾಂಕ್‌ಶೈರ್‌ನ ಕಾರ್ಮಿಕರು ನಿರುದ್ಯೋಗಿಗಳಾಗುವಂತಹ ಸ್ಥಿತಿ ಒದಗುವುದಾದರೂ, ಬ್ರಿಟಿಷರು ತಯಾರಿಸಿದ ವಸ್ತ್ರಗಳನ್ನು ಭಾರತೀಯರು ಏಕೆ ನಿರಾಕರಿಸಬೇಕು ಎಂಬುದನ್ನು ತಿಳಿಸಲು ಗಾಂಧೀಜಿ ಅಲ್ಲಿಗೆ ತೆರಳಿದ್ದರು. ಸ್ವದೇಶಿಯ ಮೂಲಕ ಸ್ವರಾಜ್ಯಕ್ಕಾಗಿ ಭಾರತೀಯರು ನಡೆಸುತ್ತಿರುವ ಹೋರಾಟ ಮನುಕುಲದ ಒಳಿತಿಗಾಗಿಯೇ ಎಂದು ಗಾಂಧೀಜಿ ಅಲ್ಲಿನ ಕಾರ್ಮಿಕರ ಮನ ಒಲಿಸಿದರು. ಇದು ಸಂಕುಚಿತ ರಾಷ್ಟ್ರೀಯ ಹಿತಾಸಕ್ತಿಯ ದ್ಯೋತಕವಲ್ಲ.

ಭಾರತಕ್ಕೆ ಮರಳಿದ ಮೀರಾಬೆನ್ ಶ್ರದ್ಧಾಪೂರ್ಣ ಗ್ರಾಮಸೇವಕಿಯಂತೆ ತನ್ನ ಕರ್ತವ್ಯಗಳಲ್ಲಿ ನಿರತರಾದರು. ಆ ಹೊತ್ತಿಗೆ ಸಾಬರಮತಿ ಆಶ್ರಮ ಗಾಂಧೀಜಿಯವರ ಕಾರ್ಯ ಚಟುವಟಿಕೆಗಳ ಕೇಂದ್ರಸ್ಥಳವಾಗಿ ಉಳಿದಿರಲಿಲ್ಲ. ೧೯೩೦ರಲ್ಲಿ ದಂಡಿ ಸತ್ಯಾಗ್ರಹಕ್ಕೆ ತೆರಳಿ, ಅಲ್ಲಿನ ಸಮುದ್ರ ಕಿನಾರೆಯಲ್ಲಿ ಒಂದು ಚಿಟಿಕೆ ಉಪ್ಪನ್ನು ಬ್ರಿಟಿಷ್ ಸಾಮ್ರಾಜ್ಯಕ್ಕೆ ಸವಾಲೆಸೆಯುವಂತೆ ಎತ್ತಿ ಹಿಡಿದ ಸಂದರ್ಭದಲ್ಲಿಯೇ ಸಾಬರ್‌ಮತಿಯ ಸಮುದಾಯ ಚದುರಿಹೋಗಿತ್ತು. 'ಬ್ರಿಟಿಷರ ಆಳ್ವಿಕೆಯಿಂದ ಪೂರ್ಣ ಬಿಡುಗಡೆ, ಪೂರ್ಣ ಸ್ವರಾಜ್ಯ ಸಿಗದ ಹೊರತು ಸಾಬರ್‌ಮತಿಗೆ ಮರಳುವುದಿಲ್ಲ' ಎಂದು ಗಾಂಧೀಜಿ ಪ್ರತಿಜ್ಞೆ ಮಾಡಿದ್ದರು. ಈಗ ಗಾಂಧೀಜಿ, ಮಧ್ಯ ಭಾರತದಲ್ಲೆಲ್ಲಾದರೂ ತಮ್ಮ ಕಾರ್ಯಸ್ಥಾನಕ್ಕಾಗಿ ಜಾಗ ಸಿಗಬಹುದೇ ಎಂದು ಅರಸುತ್ತಿದ್ದರು.

ಮಧ್ಯಭಾರತದ ಬಯಲುಪ್ರದೇಶದ ಹೃದಯ ಭಾಗದಲ್ಲಿರುವ ಸಣ್ಣ ಊರಾದ ವಾರ್ಧಾದಲ್ಲಿ ಈ ಅರಸುವಿಕೆ ಕೊನೆಗೊಂಡಿತು. ದಂಡಕಾರಣ್ಯದ ವಿರಳ ಅಂಚಿನಲ್ಲಿ ಈ ವಸತಿಪ್ರದೇಶ ತಲೆಯೆತ್ತಿತ್ತು. ಗಾಂಧೀಜಿಯ ಆಪ್ತ ಅನುಯಾಯಿ ಜಮ್ನಾಲಾಲ್ ಬಜಾಜ್ ಈ ಪ್ರದೇಶದಲ್ಲಿ ವಿಶಾಲ ಭೂಮಿಯನ್ನು ಹೊಂದಿದ್ದರು. ಹೀಗೆ ೧೯೩೩ರಲ್ಲಿ ವಾರ್ಧಾ ಗಾಂಧೀಜಿ ತಮ್ಮ ಬದುಕಿನ ಉಳಿದ ಭಾಗವನ್ನು ಕಳೆಯುವ ನೆಲೆಯಾಗಿ ರೂಪುಗೊಂಡಿತು. ಅಲ್ಲಿಯೇ ಗಾಂಧೀಜಿಯವರ ಸೋದರನ ಮಗ ಮಗನ್‌ಲಾಲ್ ಗ್ರಾಮೀಣ ಕೈಗಾರಿಕೆಗಳ ಸಂಶೋಧನಾ ಮತ್ತು ಕ್ರಿಯಾಕೇಂದ್ರವೊಂದನ್ನು ಸ್ಥಾಪಿಸಿದ್ದ. ಮಗನ್‌ಲಾಲ್‌ನ ಅಕಾಲ ಮರಣದ ಬಳಿಕ ಅದರ ಆಸುಪಾಸಿನ ಪ್ರದೇಶ 'ಮಗನ್‌ವಾಡಿ' ಎಂಬ ಹೆಸರನ್ನು ಪಡೆಯಿತು. ಈತ ಸ್ಥಾಪಿಸಿದ ಕೇಂದ್ರ ಈಗಲೂ 'ಮಗನ್ ಸಂಗ್ರಹಾಲಯ' ಎಂಬ ಹೆಸರಿನಿಂದ ಕರೆಯಲ್ಪಡುತ್ತಿದೆ.

ಗಾಂಧೀಜಿಯವರ ಸೂಚನೆಗಳಿಗನುಸಾರವಾಗಿ ಮೀರಾಬೆನ್ ಅಪ್ಪಟ ಗ್ರಾಮವೊಂದರಲ್ಲಿ ನೆಲೆಸುವ ಮತ್ತು ಕೆಲಸ ಮಾಡುವ ನಿರ್ಣಯಕ್ಕೆ ಬಂದರು. ವಾರ್ಧಾದ ಪಶ್ಚಿಮಕ್ಕೆ ೫ ಮೈಲಿ ದೂರದಲ್ಲಿರುವ ಸೇಗಾಂವ್ ಎಂಬಲ್ಲಿ ನೆಲೆಗೊಂಡರು. ಈ ಪ್ರದೇಶದ ಸನಿಹದಲ್ಲೇ ಬಜಾಜ್‌ರು ವಿಶಾಲವಾದ ಹಣ್ಣಿನ ತೋಟ ಹೊಂದಿದ್ದರು. ಆರಂಭದಲ್ಲಿ ಮೀರಾಬೆನ್ ಹುಲ್ಲಿನ ಸಣ್ಣ ಗುಡಿಸಲೊಂದರಲ್ಲಿ ನೆಲೆಸಿದ್ದರು. ಆದರೆ ೧೯೩೬ರಲ್ಲಿ ಗಾಂಧಿ ಸ್ವತಃ ಅಲ್ಲಿಯೇ ನೆಲೆಯೂರಲು ನಿರ್ಧರಿಸಿದಾಗ ಮೀರಾಬೆನ್ ಮತ್ತು ಇತರ ಕೆಲಸಗಾರರು ಜೊತೆ ಸೇರಿ ಬಜಾಜ್‌ರ ಒಂದು ಎಕರೆ ಜಾಗದಲ್ಲಿ ತಮ್ಮ ಅಚ್ಚುಮೆಚ್ಚಿನ 'ಬಾಪು' ಮತ್ತು 'ಬಾ'ಗೆ ಮನೆಯೊಂದನ್ನು ನಿರ್ಮಿಸುವ ಕಾರ್ಯದಲ್ಲಿ ತೊಡಗಿದರು. ಅವರು ಸ್ಥಳೀಯವಾಗಿ ದೊರೆಯುವ, ಪುನರ್ನವೀಕರಣಗೊಳ್ಳಬಲ್ಲ ಮರ, ಬಿದಿರು, ಮಣ್ಣು ಮುಂತಾದ ವಸ್ತುಗಳನ್ನೇ ಬಳಸಿ ಚೌಕಾಕಾರದ ಕೋಣೆಯೊಂದನ್ನು ನಿರ್ಮಿಸಿದರು. ನಮ್ಮ ಕಣ್ಣೆದುರಿಗೆ ಕಾಣುವ ಪರಿಸರದಿಂದಲೇ ಅಗತ್ಯವಸ್ತುಗಳನ್ನು ತಂದು ಬಳಸಿಕೊಳ್ಳುವ ಈ ಪ್ರಕ್ರಿಯೆ ನಿಜದ ಅರ್ಥದಲ್ಲಿ ಸ್ವದೇಶಿ. ಮನೆಯ ನಿರ್ಮಾಣದಲ್ಲಿ ಬಳಕೆಯಾಗುವ ಎಲ್ಲ ವಸ್ತುಗಳೂ ಸುತ್ತಲಿನ ಐದು ಮೈಲಿ ವ್ಯಾಪ್ತಿಯೊಳಗಣ ಪರಿಸರದಿಂದಲೇ ಪಡೆದವಾಗಿರಬೇಕು ಎಂಬುದರ ಬಗ್ಗೆ ಗಾಂಧೀಜಿ ಖಡಾಖಂಡಿತವಾಗಿದ್ದರು.

ಗಾಂಧೀಜಿಯವರು, ಬಾ ಮತ್ತು ಇತರ ಕೆಲವು ಸಹಕಾರ್ಯಕರ್ತರೊಂದಿಗೆ ಅಲ್ಲಿ ಶಾಂತಿಯುತವಾದ ಬದುಕು ನಡೆಸುವ ಕನಸು ಕಂಡಿದ್ದರು. ಆದರೆ ಸೇವಾಗ್ರಾಮವೆಂದು

ಪುನರ್ನಾಮಕರಣಗೊಂಡ ಸೇಗಾಂವ್ ಗಾಂಧೀಜಿಯವರ ಆಶ್ರಮವಾಗುವುದಕ್ಕೆ ಬದಲಾಗಿ ಗಿಜಿಗುಟ್ಟುವ ಜನಸಮುದಾಯದಿಂದ ತುಂಬಿಹೋಯಿತು. ಗಾಂಧೀಜಿ ಮೀರಾಬೆನ್‌ಗೆ ಬರೆಯುತ್ತಾ 'ಇದೇ ನನ್ನ ವಿಧಿಯಾಗಿರಬೇಕು....ನಾನು ನನ್ನ ಆಶ್ರಮವನ್ನು ನನ್ನೊಳಗೆ ಕಾಣಬೇಕು' ಎಂದು ಹೇಳುತ್ತಾರೆ.

ನಿಧಾನವಾಗಿ ದನದ ಕೊಟ್ಟಿಗೆಯೂ ಇದಕ್ಕೆ ಸೇರ್ಪಡೆಯಾಯಿತು. ಮೀರಾಬೆನ್ ತನಗಾಗಿ ಒಂದು ಸಣ್ಣ ನಿವಾಸವನ್ನು ವಿನ್ಯಾಸಗೊಳಿಸಿದರು. ಮುಖ್ಯ ಕೋಣೆ ಮತ್ತು ಮೀರಾಬೆನ್ ಸೇವಾಗ್ರಾಮದ ಜನರಿಗೆ ನೂಲುವುದನ್ನು ಹೇಳಿಕೊಡಲು ಬದಿಯಲ್ಲಿಯೇ ಮತ್ತೊಂದು ಕೋಣೆ–ಹೀಗೆ ಎರಡು ಕೋಣೆಗಳನ್ನು ನಿರ್ಮಿಸಲಾಯಿತು. ಈ ಕುಟಿ ನಿರ್ಮಾಣವಾದ ಕೆಲವೇ ಸಮಯದಲ್ಲಿ ಗಾಂಧಿ ಮಲೇರಿಯಾಕ್ಕೆ ತುತ್ತಾಗಿ ತೀರಾ ನಿಶ್ಯಕ್ತರಾದರು. ಗಾಂಧಿ ಮತ್ತು ಕಸ್ತೂರ್‌ಬಾ ವಾಸಿಸುತ್ತಿದ್ದ ಮನೆ ಸದಾ ಜನರಿಂದ ತುಂಬಿ ತುಳುಕುತ್ತಿದ್ದು, ಅಲ್ಲಿ ಗಾಂಧೀಜಿ ವಿಶ್ರಾಂತಿ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. 'ಗಾಂಧಿ ಮೀರಾಬೆನ್‌ರ ವಾಸ್ತವ್ಯಕ್ಕೆ ತೆರಳಲು ಸಾಧ್ಯವೇ?' ವೈದ್ಯರು ಪ್ರಶ್ನಿಸಿದರು. ಗಾಂಧೀಜಿ ಹಿಂತೆಗೆಯಲಿಲ್ಲ. ಹೀಗೆ ಗಾಂಧಿ ಮೀರಾಬೆನ್‌ರ ವಾಸ್ತವ್ಯದ ಬದಿಯ ಕೋಣೆಯಲ್ಲಿ ಬಂದು ನೆಲೆಸಿ, ಚೇತರಿಸಿಕೊಳ್ಳತೊಡಗಿದರು.

ಗಾಂಧಿ ಮರಳಿ ಪ್ರವಾಸಕ್ಕೆ ತೆರಳುತ್ತಿದ್ದಂತೆ, ಮೀರಾಬೆನ್ ಬಜಾಜ್‌ರ ಅನುಮತಿ ಕೋರಿ ಆ ಮನೆಯನ್ನು ವಿಸ್ತರಿಸುವ ಕೆಲಸಕ್ಕೆ ಕೈಹಾಕಿದರು. ಈ ಪುಟ್ಟ ಕುಟಿ ಬಾಪು ಮನೆಯಾಗಬೇಕೆಂಬುದು ಆಕೆಯ ಸಂಕಲ್ಪವಾಗಿತ್ತು. ಇದಕ್ಕೆ ಸ್ನಾನದ ಮನೆ ಮತ್ತು ವ್ಯಾಯಾಮದ ಕೊಠಡಿಯನ್ನು ಸೇರಿಸಲಾಯಿತು. ಎರಡೂ ಬದಿಗಳಲ್ಲಿ ಪುಟ್ಟ ಪುಟ್ಟ ಕೋಣೆಗಳನ್ನು ನಿರ್ಮಿಸಲಾಯಿತು. ಗಾಂಧೀಜಿಯ ಕನಸಿನ ಮನೆಯ ಮೂರ್ತರೂಪದಂತೆ, ಸರಳವಾಗಿ, ಸುಂದರವಾಗಿ, ಹೆಚ್ಚು ಅನುಕೂಲಕರವಾಗಿರುವಂತೆ ಮೀರಾಬೆನ್ ಮನೆಯನ್ನು ರೂಪಿಸಿದ್ದರು. ಒಬ್ಬ ಸಾಮಾನ್ಯ ರೈತನಿಗೂ ಸುಲಭವಾಗಿ ದೊರೆಯಬಹುದಾದ ಮತ್ತು ಅತ್ಯಲ್ಪ ಬೆಲೆಯ ಸಾಮಾಗ್ರಿಗಳನ್ನೇ ಇಲ್ಲಿ ಬಳಸಲಾಗಿತ್ತು.

ಪ್ರವಾಸದಿಂದ ಹಿಂತಿರುಗಿದ ಗಾಂಧೀಜಿ, ಮೀರಾಬೆನ್ ಮತ್ತು ಸಹ ಕೆಲಸಗಾರರು ಮನೆಯನ್ನು ವಿಸ್ತರಿಸಿದ್ದನ್ನು ಕಂಡು–ಅಷ್ಟೆಲ್ಲ ತೊಂದರೆ ತೆಗೆದುಕೊಂಡಿದ್ದಾಗಿ–ಮೆದುವಾಗಿ ಬೈದರು. ಆದಾಗ್ಯೂ ಸುಂದರ, ಅಚ್ಚುಕಟ್ಟಾದ ಪುಟ್ಟ ಮನೆ ಅವರ ಅವಶ್ಯಕತೆ ಮತ್ತು ತತ್ವಗಳಿಗೆ ಅನುಗುಣವಾಗಿದ್ದು, ಗಾಂಧೀಜಿಗೆ ಇಷ್ಟವಾಯಿತು. ಮೀರಾಬೆನ್‌ರ ಪ್ರೀತಿಯೊಡ-ಗೂಡಿದ ಕೆಲಸವನ್ನು ಗಾಂಧೀಜಿ ಅಷ್ಟೇ ಪ್ರೀತಿಯಿಂದ ಸ್ವೀಕರಿಸಿದರು. ಅನೇಕ ಅಂತರರಾಷ್ಟ್ರೀಯ ಪತ್ರಕರ್ತರಂತೆ ಮಣ್ಣಿನ ಕುಟಿಯನ್ನು ನೆಲೆಯಾಗಿಸಿಕೊಂಡು ವಿಶಿಷ್ಟ ಕ್ರಾಂತಿಯನ್ನು ಮಾಡಿದ ಸಂತ–ರಾಜಕಾರಣಿಯಾಗಿ ಗಾಂಧಿಯನ್ನು ವಿಖ್ಯಾತಿಗೊಳಿಸಿದ ಲೂಯಿ ಫಿಶರ್ ಗಾಂಧೀಜಿಯನ್ನು ಭೇಟಿ ಮಾಡಿದ್ದು ಇಲ್ಲಿಯೇ. ಮೇ ೧೯೪೨ರಲ್ಲಿ ಗಾಂಧಿಯೊಂದಿಗೆ ಸೇವಾಗ್ರಾಮದಲ್ಲಿ ಒಂದು ವಾರ ನೆಲೆಸಿದ ಬಳಿಕ ಫಿಶರ್ ಬರೆಯುತ್ತಾರೆ:

'ವಿದ್ಯುತ್, ರೇಡಿಯೋ, ಕೊಳಾಯಿ, ಫೋನ್ ಯಾವುದೂ ಇಲ್ಲದ ಭಾರತೀಯ

ಹಳ್ಳಿಯೊಂದರಲ್ಲಿರುವ ಸಣ್ಣಮಣ್ಣಿನ ಕುಟಿಯಲ್ಲಿ ಅರೆಬೆತ್ತಲೆ ಗಾಂಧಿ ಕುಳಿತಿದ್ದರು. ಇದು ಪೊಳ್ಳುತನವಾಗಲೀ ದಂತಕತೆಯಾಗಲೀ ಆಗಿರಲಿಲ್ಲ. ಎಲ್ಲ ರೀತಿಯಲ್ಲೂ ಈತ ಮಣ್ಣಿಗೆ ನಿಕಟವಾಗಿದ್ದರು. ಬದುಕು ಜೀವಂತಿಕೆಯ ವಿವರಗಳನ್ನು ಒಳಗೊಂಡಿದೆ ಎಂಬುದನ್ನು ಅರಿತಿದ್ದರು.'

ನಿಧಾನವಾಗಿ ಸೇವಾಗ್ರಮದ ವಾಸ್ತವ್ಯ ಜನಸಮೂಹದಿಂದ ತುಂಬಿ ತುಳುಕುವಂತಾಯಿತು. ಹಾಗೂ ಇದರೊಂದಿಗೆ ಇತರ ಕಟ್ಟಡಗಳೂ ಸೇರಿಕೊಂಡವು. ಗಾಂಧಿಯವರ ಕಿರಿಯ ಅನುಯಾಯಿ, ಅರ್ಥಶಾಸ್ತ್ರಜ್ಞ ಜೆ.ಸಿ. ಕುಮಾರಪ್ಪ ಇದನ್ನು ಹೀಗೆ ವಿವರಿಸುತ್ತಾರೆ 'ದೇಶ ಸೇವೆ ಮಾಡುವುದೇ ರಾಜಧಾನಿಯ ಪ್ರಮುಖ ಕೆಲಸ. ಈ ನಿಟ್ಟಿನಲ್ಲಿ ಗಾಂಧೀಜಿಯವರ ಈ ಕೇಂದ್ರ ದೇಶದ ಅಘೋಷಿತ ರಾಜಧಾನಿಯಾಗಿತ್ತು'.

ಜನವರಿ ೩೦, ೧೯೪೮ರ ಸಂಜೆ ನಾಥೂರಾಮ್ ಗೋಡ್ಸೆಯ ಗುಂಡು ಗಾಂಧಿಯೆಂಬ ಐತಿಹಾಸಿಕ ವ್ಯಕ್ತಿಯ ಇರವನ್ನು ಭೌತಿಕವಾಗಿ ಕೊನೆಗೊಳಿಸಿತು. ಅವರ ದೇಹದ ಬೂದಿಯನ್ನು ಭಾರತದೆಲ್ಲೆಡೆಯ ನದಿಗಳಲ್ಲಿ, ಕ್ಷೇತ್ರಗಳಲ್ಲಿ ಚೆಲ್ಲಲಾಯಿತು. ಆ ಕ್ಷಣದಲ್ಲೇ ಬಾಪು ಕುಟಿ ಕಾಲಚಕ್ರದಲ್ಲಿ ಸ್ಥಾಯಿಯಾಗಿಬಿಟ್ಟಿತು.

ಮೀರಾಬೆನ್ ನಿರ್ಮಿಸಿದ ಮನೆ ಯಾತ್ರಾಸ್ಥಳವಾಯಿತು. ೨೦ನೆಯ ಶತಮಾನದ ಸಂಧ್ಯೆಯಲ್ಲಿ ಈ ಕುಟಿಯ ಬಾಗಿಲು ಜಗತ್ತಿನ ಎಲ್ಲ ಮೂಲೆಗಳಿಂದ ವರ್ಷದ ಎಲ್ಲ ದಿನಗಳಲ್ಲಿ ಆಗಮಿಸುವ ಪ್ರತಿಯೊಬ್ಬರಿಗೂ ಬೆಳಗಿನಿಂದ ಸಂಜೆಯವರೆಗೆ ತೆರೆದೇ ಇರುತ್ತದೆ.

ಯುಗ ಪ್ರವರ್ತಕ ಗಾಂಧಿ

ದೇಹದ ಉಪಾದಿಯಿಂದ ಬಿಡುಗಡೆ ಹೊಂದಿದ ಯುಗಪ್ರವರ್ತಕ ಗಾಂಧೀಜಿಯ ಅಸ್ತಿತ್ವ–ಕಾಲ ಮತ್ತು ಅವಕಾಶಗಳ ಸೋಪಾನದಲ್ಲಿ ಚಾಚಿಕೊಂಡಿದೆ. ಈ 'ಇರವು' ಯಾವುದು?

ನವದೆಹಲಿಯ ಬಿರ್ಲಾ ಹೌಸಿನಲ್ಲಿ ಗುಂಡಿಗೆ ಬಲಿಯಾದ ಗಾಂಧಿ ತನ್ನ ಅನುಯಾಯಿಗಳಿಗೆ 'ಗಾಂಧೀವಾದ' ಎಂಬುದು ತಲೆಯೆತ್ತಬಾರದು ಎಂದು ಹೇಳಿದ್ದರು. ಯಾವುದೇ ವರ್ಗ ಹುಟ್ಟುಹಾಕುವುದು ಅವರಿಗೆ ಹಿಡಿಸದ ವಿಷಯವಾಗಿತ್ತು. 'ಯಾವುದೇ ತತ್ವ ಅಥವಾ ಸಿದ್ಧಾಂತಗಳನ್ನು ನಾನು ಹುಟ್ಟುಹಾಕಿದೆ ಎಂದು ನಾನು ಹೇಳಲಾರೆ. ಶಾಶ್ವತ ಸತ್ಯಗಳನ್ನು ನಮ್ಮ ದಿನನಿತ್ಯದ ಬದುಕು ಮತ್ತು ಸಮಸ್ಯೆಗಳಿಗೆ ನನ್ನದೇ ಆದ ರೀತಿಯಲ್ಲಿ ಅನ್ವಯಿಸಲು ಪ್ರಯತ್ನಿಸಿದೆ' ಎನ್ನುತ್ತಾರೆ ಗಾಂಧೀಜಿ.

ಐತಿಹಾಸಿಕ ಗಾಂಧಿ ಮಾನವ ಸಹಜ ದೌರ್ಬಲ್ಯಗಳೊಂದಿಗೇ ವಿಶೇಷ ಸಾಮರ್ಥ್ಯಗಳನ್ನು ಹೊಂದಿದ್ದ ಸಾಂತ ವ್ಯಕ್ತಿ. ಗಾಂಧೀಜಿ ತಂದೆಯಾಗಿ ಮತ್ತು ಗಂಡನಾಗಿ ವ್ಯವಹರಿಸಿದ ರೀತಿ ಟೀಕೆಗೆ ಗುರಿಯಾಗಿದೆ. ಬ್ರಿಟಿಷರೊಂದಿಗಿನ ಮಾತುಕತೆ ಅಥವಾ ಪಾಕಿಸ್ತಾನದ ಉದಯ ಸಂದರ್ಭಗಳಲ್ಲಿನ ಇವರ ರಾಜಕೀಯ ನಿಲುವುಗಳು ಪ್ರಶ್ನಿಸಿಸಲ್ಪಟ್ಟಿವೆ. ಈ ಗಾಂಧಿ ಕೇವಲ ಶೈಕ್ಷಣಿಕ ಮತ್ತು ಐತಿಹಾಸಿಕ ಆಸಕ್ತಿಯ ಕೇಂದ್ರ ಮಾತ್ರ.

ಮಾನವ ನಾಗರಿಕತೆಯಲ್ಲಿನ ವಿಕಾಸದ ದೊಡ್ಡ ನೆಗೆತಕ್ಕೆ ಕಾರಣವಾದ ಗಾಂಧೀಜಿಯವರ ಕನಸು ಮತ್ತು ತುಡಿತಗಳು ಬಾಪು ಕುಟಿಯ ಚೇತನವಾಗಿ ರಿಂಗಣಿಸುತ್ತವೆ. ಈ ಆಶಯ ಕೇವಲ ತನ್ನದು ಮಾತ್ರವಲ್ಲ ಎಂದು ತಿಳಿಸಲು ಗಾಂಧಿ ಶ್ರಮಿಸಿದ್ದರು.

ಸರ್ವರಿಗೂ ಸಮೃದ್ಧಿ ಮತ್ತು ನ್ಯಾಯ ದೊರೆಯುವ ಕಾಣ್ಕೆ ಹೊಂದಿದ ನಾಡನ್ನು ರಾಮರಾಜ್ಯ ಎಂದು ಕರೆಯಲಾಗುತ್ತಿತ್ತು. ವ್ಯಕ್ತಿಯ ಉನ್ನತಿಗೆ ಮತ್ತು ಎಲ್ಲರ ಅಭ್ಯುದಯಕ್ಕೆ ಸಮರ್ಪಕ ಜೀವನಾಂಶ ಒದಗಿಸುವಿಕೆಯೇ ಅತ್ಯಗತ್ಯವಾದ ಅಂಶ ಎಂದು ಗೌತಮ ಬುದ್ಧ ಪ್ರತಿಪಾದಿಸಿದ್ದ. ೧೯ನೆಯ ಶತಮಾನದಲ್ಲಿ ಅಮೆರಿಕನ್ ಕವಿ ಹೆನ್ರಿ ಡಿ ಥೋರೋ ಗುಲಾಮಿ ಪದ್ಧತಿಯನ್ನು ಉಳಿಸಿಕೊಂಡಿರುವ ಸ್ವತಂತ್ರ ಅಮೆರಿಕದ ಡಂಭಾಚಾರವನ್ನು ಪ್ರತಿಭಟಿಸಿ ಜೈಲಿಗೆ ತೆರಳಿದ್ದರು. ದೈಹಿಕ ಶ್ರಮದ ಗೌರವವನ್ನು ಎತ್ತಿ ಹಿಡಿದು ಸರಳ ಬದುಕನ್ನು ಪ್ರತಿಪಾದಿಸಿದ ಜಾನ್ ರಸ್ಕಿನ್,(ಬ್ರಿಟಿಷ್ ಪ್ರಬಂಧಕಾರ) ಮನುಷ್ಯನನ್ನು ದುರ್ಬಲಗೊಳಿಸುವ ಆಧುನಿಕ ಅರ್ಥವ್ಯವಸ್ಥೆಯ ಸಂಕೀರ್ಣತೆಗಳನ್ನು ಟೀಕಿಸಿದರು. ರಷ್ಯಾದಲ್ಲಿ ಕೌಂಟ್ ಲಿಯೋ ಟಾಲ್‌ಸ್ಟಾಯ್ ಶ್ರೀಮಂತ ಬದುಕಿನಿಂದ ದೂರವಿದ್ದು, ದೈಹಿಕ ಶ್ರಮ, ಕನಿಷ್ಠ ಅವಶ್ಯಕತೆ ಮತ್ತು ಅಹಿಂಸೆಗಳನ್ನು ಎತ್ತಿ ಹಿಡಿಯುವ ಬದುಕಿಗೆ ಆತುಕೊಂಡರು.

ಯುವಕ ಎಂ. ಕೆ. ಗಾಂಧಿ ಅರಳಿಕೊಳ್ಳುವಲ್ಲಿ ಇವೆಲ್ಲ ಪ್ರಬಲ ಸ್ಫೂರ್ತಿಗಳಾದವು. ಮೂಲತಃ ಗಾಂಧಿಯಲ್ಲಿದ್ದ ನ್ಯಾಯಯುತ ಸಮಾಜಕ್ಕಾಗಿ ತುಡಿಯುವ ಮನಸ್ಸಿಗೆ ಇವು ದಿಕ್ಕುದೆಸೆಗಳನ್ನು ನೀಡಿದವು. ಇವು ಆಧುನಿಕ ಕೈಗಾರಿಕಾ ನಾಗರಿಕತೆಯ ಲೋಪದೋಷಗಳು ಮತ್ತು ಅದರ ಮೂಲದಲ್ಲೇ ಹುದುಗಿದ ಹಿಂಸೆಯ ಕುರಿತು ಗಾಂಧಿ ಒಂದು ದೃಷ್ಟಿ ಹೊಂದಲು ಕಾರಣವಾದವು. ಹೀಗಾಗಿ ೧೮೯೦ರ ಪ್ಯಾರಿಸ್‌ನ ವಸ್ತುಪ್ರದರ್ಶನಕ್ಕೆ ಗಾಂಧಿ ಹೋದಾಗ ಅಲ್ಲಿ ಇಡಲಾದ ಮನ ಸೆಳೆಯುವ ವಸ್ತುಗಳಾಗಲೀ ಸಂಶೋಧನೆಗಳಾಗಲೀ ಅವರ ಗಮನ ಸೆಳೆಯಲಿಲ್ಲ. 'ಐಫೆಲ್ ಗೋಪುರ ಮಾನವನ ಅವಿವೇಕದ ಸ್ಮಾರಕ' ಎಂಬ ಲಿಯೋ ಟಾಲ್‌ಸ್ಟಾಯ್‌ನ ಮಾತು ಸಂಪೂರ್ಣ ನಿಜವೆಂದು ಅವರಿಗೆ ಕಂಡಿತು. ಈ ಗೋಪುರ ನಾವೆಲ್ಲರೂ ಆಡಂಬರದತ್ತ ಆಕರ್ಷಿತರಾಗುವ ಮಕ್ಕಳು ಎಂಬುದಕ್ಕೆ ಒಳ್ಳೆಯ ಉದಾಹರಣೆ ಎನಿಸಿತು.

ಗಾಂಧಿ ಇಂತಹ ಆಡಂಬರಕ್ಕೆ ಬೆನ್ನು ತಿರುಗಿಸಿ, ಪೂರ್ಣತೆಯ ಬದುಕಿನ ಹಾದಿಯ ಅನ್ವೇಷಣೆಗೆ ತೊಡಗಿದರು. ಮಾನವ ನಾಗರಿಕತೆಯ ವಿಕೃತಿಯನ್ನು ಗುಣಪಡಿಸುವ ಅನೇಕ ಮಾರ್ಗೋಪಾಯಗಳ ಕಡೆಗೆ ಇದು ಅವರನ್ನು ಕರೆತಂದಿತು. ಈ ವಿಭಿನ್ನ ಕಾಣ್ಕೆಗಳು ೧೯೦೮ರ ಹೊತ್ತಿಗಾಗಲೇ ಒಂದು ಆಕಾರ ಪಡೆಯತೊಡಗಿದವು. ಆಗ ಗಾಂಧೀಜಿಯವರಿಗೆ ೪೦ ವರ್ಷ ವಯಸ್ಸು.

ಆ ವರ್ಷ ಗಾಂಧಿ ಲಂಡನ್‌ನ ಪ್ರತಿಯೊಬ್ಬ ಭಾರತೀಯ ಕ್ರಾಂತಿಕಾರಿಯೊಂದಿಗೂ ಗಂಭೀರ ಸಂವಾದ ನಡೆಸುತ್ತಾ ಒಂದು ತಿಂಗಳು ಕಳೆದರು. ಅವರ ಧೈರ್ಯ ಗಾಂಧೀಜಿಯವರನ್ನು ಪ್ರಭಾವಿಸಿತು; ಆದರೆ ತತ್ವಗಳಲ್ಲ. ಭಾರತ ಚೇತರಿಸಿಕೊಳ್ಳಲು ಹಿಂಸೆ ಔಷಧಿಯಲ್ಲ, ಭಾರತೀಯ

ಸಂಸ್ಕೃತಿ ತನ್ನ ರಕ್ಷಣೆಗಾಗಿ ಭಿನ್ನವಾದ, ಶ್ರೇಷ್ಠವಾದ ಅಸ್ತ್ರವೊಂದನ್ನು ಬಯಸುತ್ತದೆ' ಎಂಬುದು ಅವರಿಗೆ ಖಚಿತವಾಗಿತ್ತು. ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ತೆರಳುತ್ತಿದ್ದಂತೆಯೇ ಈ ಸುದೀರ್ಘ ಯಾತ್ರೆಯ ದಿನಗಳನ್ನು ಈ ಉನ್ನತ ಅಸ್ತ್ರ ಹೇಗಿರಬೇಕು ಎಂಬ ಕುರಿತು ತನ್ನ ಚಿಂತನೆಗಳನ್ನು ಬರೆಯುತ್ತಾ ಕಳೆದರು. ಸವಾಲೊಡ್ಡಲು ಮತ್ತು ಪ್ರತಿ ಸವಾಲೊಡ್ಡಲು ಇವರು ಪ್ರಾಚೀನ ಸಂವಾದದ ಮಾದರಿಯನ್ನು ಬಳಸಿದರು.

ಇದರ ಫಲಶ್ರುತಿಯೇ 'ಹಿಂದ್ ಸ್ವರಾಜ್' ಎಂಬ ಸಣ್ಣ ಪುಸ್ತಿಕೆ. ಗಾಂಧಿಯ ಶಬ್ದಗಳಲ್ಲೇ ಹೇಳುವುದಾದರೆ 'ಈ ಪುಸ್ತಕ ಆಧುನಿಕ ನಾಗರಿಕತೆಯ ತೀವ್ರ ಹೀಗಳೆಯುವಿಕೆ'ಯಾಗಿದೆ. 'ಭಾರತ ಬ್ರಿಟಿಷರಿಂದ ದಬ್ಬಾಳಿಕೆಗೊಳಗಾಗಿಲ್ಲ, ಆಧುನಿಕ ನಾಗರಿಕತೆಯಿಂದ ದಬ್ಬಾಳಿಕೆಗೊಳಗಾಗಿದೆ' ಎಂದು ಗಾಂಧಿ ವಾದಿಸುತ್ತಾರೆ. ನಿಜವಾದ ನಾಗರಿಕತೆ ಮನುಷ್ಯ ಕರ್ತವ್ಯಾಭಿಮುಖನಾಗಿರಬೇಕೆಂಬುದನ್ನು ಸೂಚಿಸುತ್ತದೆ. ಕರ್ತವ್ಯ ನಿರ್ವಹಣೆ ಮತ್ತು ನೈತಿಕ ಪರಿಪಾಲನೆ ಪರಸ್ಪರ ಹೊಂದುವಂತಹವುಗಳು. ನೈತಿಕತೆಯ ಪರಿಪಾಲನೆ ಎಂದರೆ ನಮ್ಮ ಮನಸ್ಸು ಮತ್ತು ಆಸೆಗಳ ಮೇಲೆ ನಿಯಂತ್ರಣ ಹೊಂದುವುದೇ ಆಗಿದೆ. ಇದಕ್ಕೆ ಬದಲಾಗಿ ಆಧುನಿಕ ನಾಗರಿಕತೆ 'ಸಾಮರ್ಥ್ಯವೇ ಸರ್ವಸ್ವ' ಎಂಬ ತತ್ವದ ಮೇಲೆ ನಿಂತಿದೆ. ಹೀಗಾಗಿ ವಸಾಹತುಶಾಹಿ, ಅಮೆರಿಕದ ಅಪ್ಪೂ ಬುಡಕಟ್ಟು ಜನಾಂಗದವರ ನಿರ್ನಾಮ ನಡೆಯುತ್ತಿದೆ.

ಗಾಂಧಿ ಪ್ರತಿಗಾಮಿ ಎಂಬ ಟೀಕೆಗಳು ಬಂದವು. ಇದಕ್ಕೆ ಪ್ರತಿಯಾಗಿ ಗಾಂಧಿ ಯಾಂತ್ರಿಕತೆಯನ್ನು ಹೋಗಲಾಡಿಸುವ, ಮಾನವ ಕ್ರಿಯಾತ್ಮಕತೆಯನ್ನು ಹೆಚ್ಚಿಸುವ ಯಾವುದೇ ಪ್ರಯತ್ನಗಳ ಪರವಾಗಿದ್ದರು. ಯಂತ್ರಗಳು ವ್ಯಕ್ತಿಯ ವೈಯುಕ್ತಿಕತೆಯನ್ನು ಆಕ್ರಮಿಸಿದಾಗ, ವ್ಯಕ್ತಿಯ ಸ್ನಾಯುಗಳನ್ನು ದುರ್ಬಲಗೊಳಿಸಿದಾಗ ಸಮಸ್ಯೆ ಉದ್ಭವಿಸುತ್ತದ. ಗಾಂಧಿಯವರ ಪ್ರಕಾರ, ಮನುಷ್ಯನ ದೇಹದ ಹಾಗೆ ಯಂತ್ರವು ಕೂಡಾ ಆತ್ಮೋನ್ನತಿಗೆ ಮಾತ್ರ ಉಪಯುಕ್ತ. ಜೀವನಾವಶ್ಯಕ ವಸ್ತುಗಳ ಕೊರತೆ, ಪೋಷಕಾಂಶಗಳ ಕೊರತೆಗಿಂತ ಹೆಚ್ಚಾಗಿ ಈ ಬೆಳವಣಿಗೆಗೆ ಮಾರಕವಾಗುವ ಅಂಶಗಳು ಬೇರಿಲ್ಲ.

ಕಾರ್ಖಾನೆಗಳು ವ್ಯಕ್ತಿಯನ್ನು ಯಾಂತ್ರಿಕ ಕೆಲಸಗಳ ದಾಸರನ್ನಾಗಿ ಮಾಡುವ ಮತ್ತು ಮಿಲಿಯಗಟ್ಟಲೆ ಜನರಿಗೆ ಬದುಕಿನ ದಾರಿ ಮುಚ್ಚುವ ಉತ್ಪಾದನಾ ಕೇಂದ್ರಗಳು ಎಂದು ಆರ್ಥಿಕ ಸಂಸ್ಥೆಗಳಿಗೆ ಸವಾಲೊಡ್ಡಿದರು. ಇದೇ ರೀತಿಯ ಕಾಳಜಿಯನ್ನು ಇನ್ನೊಬ್ಬ ಸೃಜನಶೀಲ ದೈತ್ಯ ಚಾರ್ಲಿ ಚಾಪ್ಲಿನ್‌ನಲ್ಲೂ ಗುರುತಿಸಬಹುದು. ೧೯೩೧ರಲ್ಲಿ–ಲಂಡನ್‌ನಲ್ಲಿ–ಇವರಿಬ್ಬರೂ ಒಬ್ಬರನ್ನೊಬ್ಬರು ಪರಿಚಯಿಸಿಕೊಂಡದ್ದು. ಆ ಬಳಿಕ ಬಂದ ಚಾಪ್ಲಿನ್‌ನ 'ಮಾಡರ್ನ್ ಟೈಮ್ಸ್' ಚಿತ್ರ ಯಂತ್ರಗಳ ಮೇಲೆ ಅವಲಂಬಿತವಾದ ಸಮಾಜದ ಅಸಂಗತತೆ ಮತ್ತು ಘೋರತೆಯನ್ನು ತೆರೆದಿಡುತ್ತದೆ.

ಗಾಂಧಿಯವರ ಸಲಹೆಗಾರ ಗೋಪಾಲಕೃಷ್ಣ ಗೋಖಲೆ 'ಹಿಂದ್ ಸ್ವರಾಜ್'ನ್ನು 'ಸರಳೀಕೃತ ಮತ್ತು ಅವಸರದಿಂದ ತೆಗೆದುಕೊಂಡ ನಿರ್ಧಾರ' ಎಂದು ನಿರಾಕರಿಸಿದರು.

೧೯೧೫ರಲ್ಲಿ ಗಾಂಧೀಜಿ ಭಾರತದಲ್ಲಿಯೇ ನೆಲೆಸುವ ಉದ್ದೇಶದಿಂದ ಮರಳಿದಾಗ ಗೋಖಲೆ ವರ್ಷವಿಡೀ ಪ್ರವಾಸ ಮಾಡುತ್ತಾ, ಗಮನಿಸುತ್ತಾ, ಕಲಿಯುವಂತೆ ಆಗ್ರಹಿಸಿದರು. ಇದು ಹಿಂದ್ ಸ್ವರಾಜ್‌ನಲ್ಲಿ ವ್ಯಕ್ತವಾದ ಗಾಂಧಿಯವರ ದೃಷ್ಟಿಕೋನವನ್ನು ಬದಲಿಸುತ್ತದೆ ಎಂದವರು ಖಚಿತವಾಗಿ ನಂಬಿದ್ದರು. ಆದರೆ ಗಾಂಧಿಯವರ ಭಾರತ ಯಾತ್ರೆಯ ಅನುಭವ ಗೋಖಲೆಯವರ ನಂಬಿಕೆಗೆ ತದ್ವಿರುದ್ಧವಾಗಿತ್ತು.

ಆ ಸಮಯದಲ್ಲಿ ವಿವೇಕರಹಿತ ಕೈಗಾರಿಕೀಕರಣ ಮತ್ತು ವ್ಯಾಪಾರೀ ಸ್ಪರ್ಧೆಗಳು ಮೊದಲನೆಯ ಮಹಾಯುದ್ಧದ ಅಮಾನುಷ ಹಿಂಸೆಯಲ್ಲಿ ಕೊನೆಗೊಂಡಿದ್ದವು. ಬಳಿಕ ಎರಡನೆಯ ಮಹಾಯುದ್ಧ ಮತ್ತು ಹಿರೋಷಿಮ ನಾಗಸಾಕಿಗಳ ಪರಮಾಣು ದುರಂತ ಆಧುನಿಕ ಪಾಶ್ಚಿಮಾತ್ಯ ನಾಗರಿಕತೆಯ ಮೂಲಕ ಗಾಂಧಿಯವರ ಟೀಕೆಗೆ ಸಮರ್ಥನೆ ಒದಗಿಸಿದವು. ಹೀಗಾಗಿ, ಹಿಂದ್ ಸ್ವರಾಜ್ ನಿಜದರ್ಥದಲ್ಲಿ ವಿಶ್ವ ಸ್ವರಾಜ್. ಇದರ ಕಾಳಜಿ ಭಾರತಕ್ಕೆ ಸೀಮಿತವಾಗಿರದೇ ಇಡೀ ಮನುಕುಲವನ್ನು ಆವರಿಸುವಂಥದ್ದು.

೧೯೪೭ರಲ್ಲಿ ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ 'ಹಿಂದ್ ಸ್ವರಾಜ್' ಬರೆದ ೪೦ ವರ್ಷಗಳ ಬಳಿಕ ಗಾಂಧಿ ಜವಹರಲಾಲ್ ನೆಹರೂಗೆ ಬರೆಯುತ್ತಾರೆ:

'ಭಾರತ ಮತ್ತು ಭಾರತದ ಮೂಲಕ ಜಗತ್ತು ನಿಜವಾಗಿ ಸ್ವತಂತ್ರವಾಗಬೇಕಾದರೆ ನಾವು ಇನ್ನು ಮುಂದಾದರೂ ಗ್ರಾಮಗಳಲ್ಲಿ ವಾಸಮಾಡಬೇಕು ಎಂದು ನಾನು ನಂಬುತ್ತೇನೆ. ನಾವು ಗುಡಿಸಲುಗಳಲ್ಲಿ ವಾಸಿಸಬೇಕು, ಅರಮನೆಗಳಲ್ಲಲ್ಲ. ಹಲವು ಕೋಟಿಗಳಷ್ಟು ಜನರು ನಗರಗಳಲ್ಲಿ ಸಂತೋಷದಿಂದ ಮತ್ತು ಶಾಂತಿಯಿಂದ ನೆಲೆಸಲಾರರು'.

ಆನಂತರದ ಪೀಳಿಗೆ ಕುಟಿಯನ್ನು ಕಾಣುವ ಬಗೆ:

ಅದೃಷ್ಟದೊಂದಿಗೆ ಮುಖಾಮುಖಿಯಾದ ೧೯೪೭ರ ಮಧ್ಯರಾತ್ರಿಯ ಆ ಕ್ಷಣದ ೪೦ ವರ್ಷಗಳ ಬಳಿಕ, ೧೯೮೭ರಲ್ಲಿ ಭಾರತದ ಕೆಲವು ಪ್ರಸಿದ್ಧ ವಾಸ್ತುಶಿಲ್ಪಿಗಳು ಬಾಪು ಕುಟಿಯಲ್ಲಿ ನೆರೆದರು. ಆ ಮೂರು ಮಂದಿಯೂ ಬಾಪು ಕುಟಿಯನ್ನು ನೋಡುತ್ತಿರುವುದು ಅದೇ ಮೊದಲು. ಒಬ್ಬ ಅದನ್ನೇ ದಿಟ್ಟಿಸಿ ನೋಡುತ್ತ ತಾನು ನಿರ್ಮಿಸಿದ ಕಟ್ಟಡ ವಿನ್ಯಾಸದ ಲೋಪದೋಷಗಳ ಕುರಿತು ಲೆಕ್ಕ ಹಾಕುತ್ತಿದ್ದ. ಇನ್ನೊಬ್ಬ ಈ ಮಣ್ಣಿನ ಕುಟೀರ ರೂಪದಲ್ಲಿ ಪ್ರೀತಿಮೂರ್ತವಾಗಿರುವುದನ್ನು ಕಂಡು ಕವಿಯಾದ. ಪ್ರತಿಯೊಂದು ಸಣ್ಣ ಸಣ್ಣ ವಿವರಗಳಲ್ಲೂ ಕುಟಿಯ ಸೌಂದರ್ಯ ಮತ್ತು ಉಪಯುಕ್ತತೆ ಅವರಲ್ಲಿ ಗೌರವ ಭಾವವನ್ನು ಮೂಡಿಸಿತು.

ಈ ವಾಸ್ತು ಶಿಲ್ಪಿಗಳನ್ನು ಸೇವಾಗ್ರಾಮದ ಆಶ್ರಮಕ್ಕೆ ಆಹ್ವಾನಿಸಿದ ಯುವ ವಿಜ್ಞಾನಿಗಳ ಸಣ್ಣ ಗುಂಪಿನ ಮೇಲೂ ಕುಟಿ ಇದೇ ರೀತಿಯ ಪರಿಣಾಮವನ್ನು ಬೀರಿತ್ತು. ಕುಟಿ ಅವರ ಯೋಚನೆ ಮತ್ತು ತುಡಿತಗಳನ್ನು ಪೋಷಿಸುವ ಓಯಸಿಸ್‌ನಂತಿತ್ತು. 'ಯುವ ವಿಜ್ಞಾನಿಗಳ ಅಕಾಡೆಮಿ' ಎಂದು ಹೆಸರಿರುವ ಈ ತಂಡ ಸುಮಾರು ೧೦ ವರ್ಷಗಳ ಕಾಲ ಬಡ ಭಾರತೀಯನಿಗೂ ಕೈಗೆಟುಕಬಲ್ಲ ಶಕ್ತಿಶಾಲಿ ಮತ್ತು ಹಿತವಾದ ಮನೆಯ ಮಾದರಿಗಳ

ಉದಾಹರಣೆಗಳನ್ನರಸುತ್ತಾ ದೇಶದುದ್ದಕ್ಕೂ ಪುಡುಕಾಟ ನಡೆಸಿತ್ತು. ಈ ಹಾದಿಯಲ್ಲಿ ಅವರು ತಾವು ನೆಲದಲ್ಲಿ ಕಲಿತ ಪಾಠಗಳ ಮೂರ್ತರೂಪವಾದ ಬಾಪು ಕುಟಿಯನ್ನು ಕಂಡರು. ಖಾದಿ, ವಸ್ತ್ರ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಂಕೇತಿಸಿದರೆ; ಮಣ್ಣು, ಮನೆ ನಿರ್ಮಾಣದಲ್ಲಿ ಸ್ವಾವಲಂಬನೆಯನ್ನು ಸಂಕೇತಿಸುತ್ತದೆ ಎಂಬುದನ್ನು ಅವರು ಅರಿತರು.

ಅರ್ಧ ಶತಮಾನ ದಾಟಿ ಬಂದಿರುವ ಕುಟಿ, 'ಮಣ್ಣಿನ ಮನೆಗಳು ಕಚ್ಚಾ, ಕಡಿಮೆ ಬಾಳ್ವಿಕೆ ಉಳ್ಳವು' ಎಂಬ ಸಾಮಾನ್ಯ ನಂಬಿಕೆಯನ್ನು ತಳ್ಳಿಹಾಕುತ್ತವೆ. ಈ ಮನೆಗಳ ನಿರ್ಮಿತಿ ಕಾಲಕಾಲಕ್ಕೆ ಪುನರ್ನವೀಕರಣ ಸ್ಥಳೀಯವಾಗಿ ದೊರೆಯುವ ನಿಸರ್ಗಸ್ನೇಹಿ ವಸ್ತುಗಳಿಂದಲೇ ನಡೆಯುತ್ತದೆ. ಆಧುನಿಕ ಸಿಮೆಂಟ್ ಮನೆಗಳ ನಿರ್ವಹಣೆಗೆ ಬೇಕಾಗುವ ಹಣದ ಒಂದಂಶವಷ್ಟೇ ಇದಕ್ಕೆ ಸಾಕಾಗುತ್ತದೆ. ಕುಟಿ ಸಹಜವಾಗಿ ಸಿಮೆಂಟ್ ಮನೆಗಳಿಗಿಂತ ಬೇಸಿಗೆಯಲ್ಲಿ ತಂಪಾಗಿದ್ದು, ಚಳಿಗಾಲದಲ್ಲಿ ಬೆಚ್ಚಗಿರುತ್ತದೆ. ಹೀಗಾಗಿ ೧೯೮೭ರ ಆರಂಭದಲ್ಲಿ ತ್ರಿವೇಂಡ್ರಂನಲ್ಲಿ ನಡೆಯಲಿದ್ದ ಮಣ್ಣಿನ ರಚನೆಗಳ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಸ್ತುತಪಡಿಸುವ ಸಲುವಾಗಿ ತಾಂತ್ರಿಕ ಅಧ್ಯಯನ ಕೈಗೊಂಡ ಯುವವಿಜ್ಞಾನಿಗಳ ಅಕಾಡೆಮಿ, ಕುಟಿಯ ಎಲ್ಲ ವಿವರವನ್ನು ಆಸಕ್ತಿಯಿಂದ ಪರಿಶೀಲಿಸಿತು.

ಈ ಕುಟಿಯ ವಿವರಣಾತ್ಮಕ ವರದಿ 'ಮೃದ್ಗಂಧ' ಎಂಬ ಸಣ್ಣ ಪುಸ್ತಿಕೆಯ ರೂಪ ಪಡೆಯಿತು. ಬಾಪು ಕುಟಿಯೊಂದಿಗೆ ಕಳೆದ ಕ್ಷಣಗಳು ಅ[illegible]ೀಕ್ಷಿತ ಸಾಧ್ಯತೆಗಳ ಬಾಗಿಲನ್ನು ತೆರೆದವು. ಈ ಯುವ ವಿಜ್ಞಾನಿಗಳು ಇಡೀ ಜಗತ್ತಿನ ಚಿಂತನೆ[illegible]ಂದಿಗೆ ಮುಖಾಮುಖಿಯಾದರು.

ಸಾಂಪ್ರದಾಯಿಕ ಇತಿಹಾಸ ಗಾಂಧಿಗೆ ನ್ಯಾಯ [illegible]ಲ್ಲಿಸಿಲ್ಲ ಎಂಬುದನ್ನು ಅವರು ಕಂಡುಕೊಂಡರು. ಬಡತನದ ಜೀವನ ಆಯ್ದುಕೊಂಡದ್ದಕ್ಕಾಗಿ ಇದು ಅವರನ್ನು ಪ್ರಶಂಸಿಸಿದೆ. ಆದರೆ ಇದು ಗಾಂಧೀಜಿಯ ಹೋರಾಟದ ಮೂಲ ಸತ್ವವನ್ನು ಹೆಕ್ಕುವಲ್ಲಿ ಸೋತಿದೆ. ಗಾಂಧೀಜಿ ತನ್ನ ಜೀವನಶೈಲಿ ಕುರಿತು ತೆಗೆದುಕೊಂಡ ನಿರ್ಧಾರ, ಅವರ ಆಂತರಿಕ ಯಾತ್ರೆಯ ಮೂರ್ತರೂಪ. ಇದು ಇತರರನ್ನು ಸೆಳೆಯಲು ಇಟ್ಟ ಲೆಕ್ಕಾಚಾರದ ಹೆಜ್ಜೆಯಲ್ಲ. ಇವರು ಮಣ್ಣಿನ ಮನೆಯನ್ನು ಇಷ್ಟಪಟ್ಟದ್ದು ಬಡತನದ ಸಂಕೇತವಾಗಿ ಅಲ್ಲ. ಬದಲಾಗಿ ಅವರು ಅದನ್ನು 'ದೇಶಿ ಸೃಜನಶೀಲತೆ'ಗೆ ಸಂವಾದಿಯಾಗಿ ಕಾಣುತ್ತಾರೆ. ಕುಟಿಯ ಹಿತಕರ ವಾತಾವರಣ ಇದಕ್ಕೆ ಜೀವಂತ ಸಾಕ್ಷಿ.

ಈಗ ಕುಟಿ ಯುವ ವಿಜ್ಞಾನಿಗಳೊಡನೆ ಮಾತಿಗಿಳಿದಂತೆ ತೋರುತ್ತಿತ್ತು. ಇದು ಭಾರತದೆಲ್ಲೆಡೆ, ಹೂಮಾಲೆಗಳ ಮಧ್ಯೆ ಹೂತುಹೋದ ರಾಷ್ಟ್ರಪಿತನ ಸಂತವಾಣಿ ಅಲ್ಲ. ಇದು ತನ್ನ ಧೋರಣೆಯನ್ನು 'ಹಿಂದ್ ಸ್ವರಾಜ್'ನಲ್ಲಿ ವ್ಯಕ್ತಪಡಿಸಿದ ನಲವತ್ತರ ಹರೆಯದ ಗಾಂಧಿಯ ಉತ್ಸಾಹೀ ಚೇತನ.

೧೯೮೭ರ ಹೊತ್ತಿಗಾಗಲೇ ಗಾಂಧಿ ಎಚ್ಚರಿಸಿದ ಅನೇಕ ಅಂಶಗಳು ವಾಸ್ತವವಾಗಿ ಗೋಚರಿಸುತ್ತಿದ್ದವು. ಲಕ್ಷಾಂತರ ಭಾರತೀಯರು ಕೊಳಚೆ ನಗರಗಳಲ್ಲಿ, ಒತ್ತಡದ ಬದುಕಿನಲ್ಲಿ ಸಿಲುಕಿ ಹೋಗಿದ್ದರು. ಭಾರತದ ಅನೇಕ ಹಳ್ಳಿಗಳು ಕ್ರಿಯಾತ್ಮಕ ಸ್ವಾವಲಂಬನೆಯ ಹಾದಿಯಿಂದ

ಮತ್ತಷ್ಟು ಹಿಂದೆ ಸರಿದಿದ್ದವು. ಮಣ್ಣಿನ ಫಲವತ್ತತೆಯನ್ನು ನಾಶಮಾಡುವ, ಆಹಾರ ಸರಪಳಿಯನ್ನು ಕಲುಷಿತಗೊಳಿಸುವ ರಾಸಾಯನಿಕ ಗೊಬ್ಬರ, ಕೀಟನಾಶಕಗಳ ಮೇಲೆ ರೈತರು ಸಂಪೂರ್ಣ ಅವಲಂಬಿತರಾಗಿದ್ದರು. ೧೯೮೪ರ ಭೋಪಾಲ್ ಅನಿಲ ದುರಂತದಲ್ಲಿ ಸಾವಿರಾರು ಮಂದಿ ಸತ್ತಾಗ ನಮ್ಮ ನೀತಿ ನಿರೂಪಕರು ಅದನ್ನು 'ಪ್ರಗತಿಗೆ ತೆತ್ತ ಬೆಲೆ' ಎಂದು ಪರಿಗಣಿಸಿದರು.

ಗ್ರಾಮೀಣ ಸಿರಿವಂತರ ಉದಯ ಬಹುಸಂಖ್ಯಾತ ಜನರ ಬದುಕಲ್ಲಿ ಯಾವ ಬದಲಾವಣೆಯನ್ನು ತರಲಿಲ್ಲ. ಬದಲಿಗೆ, ನೈಸರ್ಗಿಕ ಸಂಪನ್ಮೂಲಗಳು ಕಡಿಮೆಯಾಗುತ್ತಿದ್ದಂತೆ, ಅನೇಕ ಹಳ್ಳಿಗಳಲ್ಲಿ ಕುಡಿಯುವ ನೀರಿಗೂ ತತ್ವಾರ ಉಂಟಾಯಿತು. ಇದು ಭೂಮಿಯನ್ನೇ ನಂಬಿ ಬದುಕುತ್ತಿದ್ದ ಜನರಲ್ಲಿ ಭೀತಿ ಹುಟ್ಟಿಸಿತು. ೧೯೫೦ರಲ್ಲಿ ಪ್ರತಿವ್ಯಕ್ತಿಗೆ ವರ್ಷಕ್ಕೆ ೨೫೦ ದಿನ ಕೆಲಸ ಸಿಗುತ್ತಿತ್ತಾದರೆ, ೧೯೮೦ರ ಹೊತ್ತಿಗೆ ಅದು ೧೬೦ ದಿನಗಳಿಗೆ ಇಳಿದಿತ್ತು. ಯುವ ವಿಜ್ಞಾನಿಗಳು ಪ್ರಯೋಗಾಲಯದ ದೈನಂದಿನ ಪ್ರಯೋಗಗಳಿಗೆ 'ಗುಡ್‌ಬೈ' ಹೇಳಿ, ಭಾರತವನ್ನು ಜಡತ್ವದಿಂದ ಹೊರತರುವ ಪರಿಹಾರಗಳ ಶೋಧದಲ್ಲಿ ತೊಡಗಿಕೊಂಡರು. ಈ ಯುವಕರೆಲ್ಲ ಸ್ವತಂತ್ರ ಭಾರತ ಎದುರಿಸುತ್ತಿರುವ ಅನೇಕ ಸಮಸ್ಯೆಗಳನ್ನು ಅನುಭವಿಸುತ್ತಿರುವ ಜನಸಮುದಾಯದ ಒಂದು ಭಾಗವಾಗಿದ್ದರು.

೧೯೮೦ರ ಹೊತ್ತಿಗಾಗಲೇ ಜನರ ಮೂಲಭೂತ ಅವಶ್ಯಕತೆಗಳಾದ ಆಹಾರ, ಬಟ್ಟೆ, ಸೂರು, ಆರೋಗ್ಯ ಮತ್ತು ಶಿಕ್ಷಣ ಒದಗಿಸುವಲ್ಲಿ ರಾಜಕೀಯ ಪಕ್ಷಗಳು ಮತ್ತು ರಾಷ್ಟ್ರೀಯ ಚುನಾವಣೆಗಳು ಸೋತಿವೆ ಎಂಬುದು ಖಾತ್ರಿಯಾಗಿ ಹೋಗಿತ್ತು. ನಕ್ಸಲೀಯರ ವರ್ಗಕ್ರಾಂತಿಯ ಕನಸು ಕೂಡ ಸೋತಿತ್ತು. ಸರ್ವೋದಯ ನಾಯಕ ಜಯಪ್ರಕಾಶ್ ನಾರಾಯಣ್ ಹುಟ್ಟುಹಾಕಿದ ವಿದ್ಯಾರ್ಥಿಗಳು ಮುನ್ನಡೆಸಿದ ಸಂಪೂರ್ಣಕ್ರಾಂತಿ ೭೦ರ ದಶಕದ ಮಧ್ಯಭಾಗದಲ್ಲಿ ನಿಧಾನವಾಗಿ ಬಲ ಕಳೆದುಕೊಂಡಿತ್ತು.

ಹೀಗಿರುವಾಗ, ನಾವು ಇಲ್ಲಿಂದ ಸಾಗಬೇಕಾದುದು ಎಲ್ಲಿಗೆ? ಈ ಪ್ರಶ್ನೆ ಆಧುನಿಕ ವಿಜ್ಞಾನದಲ್ಲಿ ತರಬೇತಿ ಪಡೆದು, ಸಮಾಜದ ಏಳಿಗೆಗೆ ಕನಸುವ ವಿಶಾಲ ಸಮೂಹದ ತುಡಿತಗಳಿಗೆ ಇಂಧನವಾಯಿತು. ಯುವ ವಿಜ್ಞಾನಿಗಳಲ್ಲೊಬ್ಬರಾದ ವಿನೂಕಾಳೆ, ಈ ಪ್ರಶ್ನೆಯ ಹಿಂದಿರುವ ನೋವನ್ನು ಮತ್ತು ದ್ವಂದ್ವವನ್ನು ಬೇರೆ ಬೇರೆ ನೀತಿ ನಿರೂಪಕರು ಮತ್ತು ಬಾಪು ಕುಟಿಯ ಚೇತನ–ಇವೆರಡರ ನಡುವಣ ಸಂವಾದ ರೂಪದಲ್ಲಿ ಕಾವ್ಯಾತ್ಮಕವಾಗಿ ಹಿಡಿದಿಟ್ಟಿದ್ದಾರೆ. ಈ ಪುಸ್ತಿಕೆಯ ಹೆಸರು 'ಕುಟಿ: ಕ್ರಾಂತಿ ಮತ್ತು ಬಳಿಕ' ಅಥವಾ 'ಕ್ರಾಂತಿಗಂಧ'. ಕುಟಿ ಪ್ರಶ್ನಿಸುತ್ತದೆ: 'ಕೈಗಾರಿಕೆ ಎಂದರೆ ದೊಡ್ಡ ಸಿಮೆಂಟ್ ಕಾರ್ಖಾನೆಯೇ ಏಕಾಗಬೇಕು? ಇದಕ್ಕಿರುವ ಮಹತ್ವವನ್ನು ಸಣ್ಣ ಸಣ್ಣ ತಯಾರಿಕಾ ಘಟಕ, ಕೈಮಗ್ಗ, ಸ್ಥಳೀಯ ತೈಲ ಘಟಕ ಅಥವಾ ಎತ್ತಿನ ಗಾಡಿ ನಿರ್ಮಾಣ ಘಟಕಕ್ಕೆ ಏಕೆ ನೀಡಲಾಗುತ್ತಿಲ್ಲ? ಏಕೆ ಬಿದಿರು–ಟನ್‌ಗೆ ೬೦ ಪೈಸೆಯಂತೆ ಪೇಪರ್ ಮಿಲ್‌ಗಳಿಗೂ, ೧.೫೦ ರೂಪಾಯಿಯಂತೆ ಕಲಾವಿದರಿಗೂ ದೊರೆಯುತ್ತದೆ? ಗಾಂಧೀಜಿಯವರ ವಿಶ್ವದೃಷ್ಟಿಯನ್ನು ವರ್ತಮಾನದ ಅಗತ್ಯಗಳೊಂದಿಗೆ ಬೆಸೆಯುವ ಮೂಲಕ ಇದಕ್ಕೆ ಉತ್ತರ ಪಡೆಯಬಹುದು. ಆದರೆ ಹೇಗೆ?

‘ಸೆಪಿಯ: ಒಂದು ಅಧ್ಯಯನ’ ಮತ್ತು ‘ಕುಟಿ: ಕ್ರಾಂತಿ ಮತ್ತು ಬಳಿಕ’ ಇವೆರಡೂ ಯುವ ವಿಜ್ಞಾನಿಗಳ ಅಕಾಡೆಮಿಯ ವಿಜ್ಞಾನಿಗಳ ಮನದಲ್ಲಿ ಕೊನೆಯತನಕ ಉಳಿದವು. ನಾನು ೧೯೮೭ರಲ್ಲಿ ಮೊದಲಬಾರಿಗೆ ಸೇವಾಗ್ರಾಮದಲ್ಲಿ ನೆಲೆಸಿದಾಗ ಈ ಸಮೂಹ ಚದುರುವುದರಲ್ಲಿತ್ತು. ಈ ವ್ಯಕ್ತಿಗಳ ದಾಹ ಇದೇ ರೀತಿ ಮುಂದುವರೆಯಿತು ಮತ್ತು ಇವರ ಯತ್ನಗಳು ವಿಶಾಲ ಸಮೂಹಕ್ಕೂ ಪಸರಿಸಿದವು.

ಈ ನಿಕಟ ಸಮೂಹದಲ್ಲಿರುವವರೆಲ್ಲರೂ ‘ಕುಟಿ: ಕ್ರಾಂತಿ ಮತ್ತು ಬಳಿಕ’ ದ ಲೇಖಕರಷ್ಟು ಬಾಪು ಕುಟಿಗೆ ಹತ್ತಿರವಾಗಿರಲಿಲ್ಲ. ಆದರೆ ವರ್ಷಗಳುರುಳಿದಂತೆ, ಸೇವಾಗ್ರಾಮಕ್ಕೆ ಅನೇಕ ಬಾರಿ ಭೇಟಿಯಿಂತ್ತಂತೆ, ಬಾಪು ಕುಟಿಯ ಚೇತನವೇ ಇವೆಲ್ಲದ್ದಕ್ಕೆ ‘ಸೂತ್ರಧಾರ’ ಎಂಬುದು ನನಗೆ ಅರಿವಾಯಿತು. ಇದು ಮೇಲುನೋಟಕ್ಕೆ ಪರಸ್ಪರ ಸಂಬಂಧಪಡದಂತೆ ಕಾಣುವ ವಿಭಿನ್ನ ಯತ್ನಗಳನ್ನು ಬೆಸೆಯುತ್ತದೆ.

ಸೇವಾಗ್ರಾಮ ಮತ್ತು ಭವಿಷ್ಯದೆಡೆಗೆ ಪಯಣ:

ನಾನು ಬಾಪು ಕುಟಿಯತ್ತ ಒಲವು ತೋರಲು ಕಾರಣರಾದವರು ಮೂಲಭೂತವಾಗಿ ಭಿನ್ನ ಮನೋಧರ್ಮದ ಇಬ್ಬರು ಲೇಖಕರು. ೮೦ರ ದಶಕದ ಆರಂಭದಲ್ಲಿ ಯಾವಾಗಲೋ ಒಮ್ಮೆ ಕ್ಲಾಡ್ ಅಲ್ವಾರಿಸ್ ಬಾಪು ಕುಟಿಯ ತಮ್ಮ ಭೇಟಿಯ ಬಗ್ಗೆ ದಿನಪತ್ರಿಕೆಯಲ್ಲಿ ಸಣ್ಣ ಲೇಖನವೊಂದನ್ನು ಬರೆದಿದ್ದರು. ಲೇಖನದಲ್ಲಿರುವ ಅಂಶಗಳ್ಯಾವುವೂ ನನಗೀಗ ನೆನಪಿಲ್ಲ. ಆದರೆ ಅದರಲ್ಲಿ ಚಿತ್ರಿತವಾದ ಆಶ್ರಮದ ಮತ್ತು ಬಾಪು ಕುಟಿಯ ವಿವರಗಳು ಹೇಗೋ ಅಲ್ಲಿಗೆ ಆದಷ್ಟು ಬೇಗ ಭೇಟಿ ನೀಡಬೇಕೆಂಬ ಭಾವನೆಯನ್ನು ನನ್ನಲ್ಲಿ ಮೂಡಿಸಿದವು. ಇನ್ನೊಬ್ಬರು ೧೯೫೦ರಲ್ಲಿ ‘ಮಹಾತ್ಮ ಗಾಂಧೀಜಿಯವರ ಜೀವನ’ ಎಂಬ ಪುಸ್ತಕವನ್ನು ಬರೆದ ಅಮೆರಿಕದ ಲೇಖಕ ಲೂಯಿ ಫಿಶರ್.

೧೯೮೪ರಲ್ಲಿ ಫಿಶರ್‌ನ ಪುಸ್ತಕ ನನ್ನ ಕೈ ಸೇರಿತು. ಮುಂಬೈ ‘ಟೆಲಿಗ್ರಾಫ್’ನ ವರದಿಗಾರಳಾಗಿದ್ದ ನಾನು ಕೆಲಸಕ್ಕೆ ರಾಜೀನಾಮೆ ನೀಡಿದ ಕೂಡಲೇ ಈ ಪುಸ್ತಕವನ್ನು ಓದಿದೆ. ಮಧ್ಯಪ್ರದೇಶದ ಹಳ್ಳಿಗಳಲ್ಲಿ ಸಮೂಹದೊಡನೆ ಸೇವೆಸಲ್ಲಿಸುವ ಆಶಯ ಹೊಂದಿ, ನಾನು ಕೆಲಸವನ್ನು ಬಿಟ್ಟು ಬಂದಿದ್ದೆ. ಫಿಶರ್‌ನ ಪುಸ್ತಕ ನನ್ನ ಮನದ ಗೊಂದಲಗಳ ಪೊರೆ ಸರಿಸಿತು. ಈ ಪುಸ್ತಕ ಲೇಖಕನ ಅಚ್ಚುಮೆಚ್ಚಿನ ಕ್ಷಣಗಳನ್ನು ಹಿಡಿದಿಟ್ಟಿತ್ತು. ಅದರಲ್ಲೂ ನನಗೆ ಇಷ್ಟವಾದದ್ದು ವಾರ್ಧಾದ ಬಳಿ ನೆಲೆಸಿರುವ ಆಶ್ರಮಕ್ಕೆ ಸಂಬಂಧಿಸಿದ ನೆನಪುಗಳು.

ಹೀಗೆ ವಿವರಣೆಗೆ ಸಿಲುಕದ ಸೆಳೆತ ನನ್ನನ್ನು ಅಕ್ಟೋಬರ್ ೧೯೮೬ರಲ್ಲಿ ಮೊದಲ ಬಾರಿಗೆ ಆಶ್ರಮಕ್ಕೆ ಎಳೆತಂದಿತು.

ಗೊಂದಲ ಮತ್ತು ದ್ವಂದ್ವಗಳಿಂದ ತೀವ್ರ ತೊಳಲಾಟಕ್ಕೊಳಗಾಗಿ ಬದುಕಿನ ಒಂದು ಹಂತದಲ್ಲಿ ಯಾವುದೇ ಸೂಕ್ಷ್ಮ ದನಿಗೆ ಕಿವಿಗೊಡುವುದು ಕಷ್ಟವಾಗುತ್ತದೆ. ಹೀಗಿದ್ದೂ, ಅಗಲೇ ಆಶ್ರಮದ ಪರಿಸರ ವಾಸ್ತವ್ಯದ ಸ್ಥಳವಾಗಿ ನನ್ನನ್ನು ತಟ್ಟಿತು. ಇದು ಕೇವಲ

ನೋಡುವುದಕ್ಕಿಂತ ಹೆಚ್ಚಾಗಿ, ಅಲ್ಲೇ ಇರಬೇಕೆಂದೆನಿಸಿರುವ ಭಾವ. ಆದ್ದರಿಂದ ಒಂದು ದಿನದ ಪ್ರವಾಸ, ಅಲ್ಲಿಗೆ ಭೇಟಿ ನೀಡದಿದ್ದರೆ ಆಗುವ ಲಾಭದಷ್ಟೇ ಉಪಯುಕ್ತ.

೧೯೮೭ರ ಮೊದಲ ಭಾಗದಲ್ಲಿ ಒಂದು ವಾರವನ್ನು ಅಲ್ಲಿ ಕಳೆಯಲು ನಾನು ಮರಳಿದೆ. ಬಳಿಕ ಮಗನವಾಡಿಯನ್ನು ಕಂಡೆ, ಅದರ ಐತಿಹಾಸಿಕ ಮಹತ್ವದ ಅರಿವಿಲ್ಲದಿದ್ದರೂ, ಅಲ್ಲಿ ಯುವ ವಿಜ್ಞಾನಿಗಳ ಅಕಾಡೆಮಿಯ ಅಂಗವಾದ ವಿಭಾ ಮತ್ತು ಆನಂದರನ್ನು ಭೇಟಿಯಾದೆ. ವಿಭಾ ಗ್ರಾಮೀಣ ವಿಜ್ಞಾನ ಕೇಂದ್ರದಲ್ಲಿ ಹಳ್ಳಿಯ ಮಹಿಳೆಯರ ಅವಶ್ಯಕತೆಗಳಿಗೆ ಹೊಂದುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವತ್ತ ವಿಶೇಷ ಆಸಕ್ತಿ ಹೊಂದಿ ಕೆಲಸ ಮಾಡುತ್ತಿದ್ದರು. ಭೋಪಾಲ್‌ನ ಯೂನಿಯನ್ ಕಾರ್ಬೈಡ್ ಸ್ಥಾವರದ ವಿಷಾನಿಲದ ಪರಿಣಾಮದಿಂದ ಆನಂದ ಚೇತರಿಸಿಕೊಳ್ಳುತ್ತಿದ್ದರು.

ಸೇವಾಗ್ರಾಮದೆಡೆಗಿನ ಸೆಳೆತವನ್ನು ವಿಭಾ ಮತ್ತು ಆನಂದ್ ನಾನು ನನಗೇ ಹೇಳಿಕೊಳ್ಳುವುದಕ್ಕಿಂತ ಹೆಚ್ಚಾಗಿ ಅರ್ಥಮಾಡಿಕೊಂಡಂತೆ ತೋರುತ್ತಿತ್ತು. ಪುಟ್ಟ ಚರಕ ಪಡೆದು ನೂಲಲು ಕಲಿಯುವ ನನ್ನ ಅಚ್ಚರಿ ಮತ್ತು ಸಂತೋಷಗಳನ್ನು ಅವರು ಹಂಚಿಕೊಂಡರೂ ಬಾಪು ಕುಟಿಯೊಂದಿಗಿನ ಅವರ ಶೋಧದ ಪಕ್ಷಿನೋಟವನ್ನು ನಾನು ಪಡೆದೆ.

ಸೇವಾಗ್ರಾಮ್‌ನಿಂದ ರೈಲಿನಲ್ಲಿ ಮುಂಬೈಗೆ ಮರಳುತ್ತಿದ್ದಂತೆ, ನಾನು ಮೊದಲಬಾರಿಗೆ 'ಹಿಂದ್ ಸ್ವರಾಜ್' ಓದಿದೆ. ಆ ಸಂದರ್ಭದಲ್ಲಿ ಅನೇಕರಂತೆ ಆ ಪುಸ್ತಿಕೆಯ ಹಿಂದಿರುವ ಮನೋಧರ್ಮದಿಂದ ನಾನು ಗೊಂದಲಕ್ಕೊಳಗಾದೆ. ಈ ತತ್ವಗಳ ಆಳಕ್ಕೆ ಮುಳುಗಲು ಸ್ವಲ್ಪ ಸಮಯ ಬೇಕಾಯಿತು. ನಂತರದ ವರ್ಷಗಳಲ್ಲಿ ಬೇರೆ ಬೇರೆ ರೀತಿಯ ಚಳುವಳಿಗಳ ಕುರಿತು ಬರೆಯುವಾಗ, ಅವುಗಳ ಬೇಡಿಕೆಗಳಲ್ಲಿನ ಅನೇಕ ಅಂಶಗಳನ್ನು 'ಹಿಂದ್ ಸ್ವರಾಜ್'ನಲ್ಲಿ ಈ ಮೊದಲೇ ಹೇಳಲಾಗಿದೆ ಎಂಬುದನ್ನು ನಾನು ಅರಿತುಕೊಂಡೆ. ಭಾರತದೆಲ್ಲೆಡೆ ಜನರು ತಮ್ಮ ನೈಸರ್ಗಿಕ ಸಂಪನ್ಮೂಲಗಳಾದ ನೀರು, ಕಾಡು, ಭೂಮಿಗಳ ಮೇಲೆ ಸಮುದಾಯದ ಹಕ್ಕುಸ್ಥಾಪನೆಗಾಗಿ ಹೋರಾಟ ನಡೆಸುತ್ತಿದ್ದರು. ಗ್ರಾಮೀಣ ಸಮುದಾಯಗಳನ್ನು ಕಡೆಗಣಿಸಿ ನಗರ ಕೇಂದ್ರಿತ ಕೈಗಾರಿಕೆಗಳ ಪರ ವಹಿಸುವ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ಕೇಂದ್ರೀಕೃತಗೊಳಿಸುವ ಅಭಿವೃದ್ಧಿ ಮಾದರಿಯ ವಿರುದ್ಧ ಈ ಎಲ್ಲ ಚಳುವಳಿಗಳು ನಡೆದವು.

೧೯೯೦ರ ಬೇಸಿಗೆಯಲ್ಲಿ ಇಂತಹ ಒಂದು ಪ್ರತಿಭಟನೆಯಲ್ಲಿ ನರ್ಮದಾ ದಡದುದ್ದಕ್ಕೂ ವಾಸಿಸುವ ನೂರಾರು ಆದಿವಾಸಿಗಳು ದೆಹಲಿಯಲ್ಲಿ ಪ್ರಧಾನ ಮಂತ್ರಿಯವರ ನಿವಾಸದ ಪಕ್ಕದಲ್ಲಿ ದೊಡ್ಡ ರಸ್ತೆಯುದ್ದಕ್ಕೂ ನೆರೆದರು. ಬಾಬಾ ಆಮ್ಟೆ ಮತ್ತು ಮೇಧಾಪಾಟ್ಕರ್ ನಾಯಕತ್ವದಲ್ಲಿ ಸಾಗುತ್ತಿರುವ 'ನರ್ಮದಾ ಬಚಾವೋ' ಆಂದೋಲನದ ಧರಣಿ ಇದು. ಇದು ಮಧ್ಯಮ ವರ್ಗದ ವೃತ್ತಿನಿರತ ಸಮೂಹದ ಸಕ್ರಿಯ ಬೆಂಬಲವನ್ನು ಪಡೆದಿತ್ತು. ಧರಣಿ ನಡೆಯುವ ಸ್ಥಳದಿಂದ ತುಸುವೇ ಅಂತರದಲ್ಲಿ ತೀಸ್ ಜನವರಿ ಮಾರ್ಗವಿತ್ತು. ಧರಣಿ ನಡೆಯುತ್ತಿರುವ ಸಂದರ್ಭದಲ್ಲಿ ಮಧ್ಯಪ್ರದೇಶದ ತೀವ್ರಗಾಮಿ ರಾಕೇಶ್ ದಿವಾನ್ ಮತ್ತು ನಾನು ಸಾರ್ವಜನಿಕ ದೂರವಾಣಿ ಕೇಂದ್ರವನ್ನರಸುತ್ತಾ ಸಾಗಿದೆವು. ಇದು ನಮ್ಮನ್ನು ೪೨ ವರ್ಷಗಳ ಹಿಂದೆ

ಗಾಂಧಿಯನ್ನು ಗುಂಡಿಟ್ಟು ಹತ್ಯೆಗೈಯ್ಯಲಾದ ಸ್ಥಳವಾದ ಬಿರ್ಲಾ ಭವನದ ಮೆಟ್ಟಿಲುಗಳಿಗೆ ತಂದೊಯ್ದಿತು.

ಇದ್ದಕ್ಕಿದ್ದಂತೆ ಎದುರು ಮೂಲೆಯಲ್ಲಿ ನಡೆಯುತ್ತಿದ್ದ ಧರಣಿ ಎಂದಿಗಿಂತ ಹೆಚ್ಚು ನನ್ನನ್ನು ತಟ್ಟಿದಂತೆ ತೋರಿತು. ಸ್ವಾತಂತ್ರ್ಯ ದೊರೆತ ನಾಲ್ಕು ದಶಕಗಳ ಬಳಿಕ ಗಾಂಧೀಜಿ ಯಾವುದನ್ನು ಕೋರಿದ್ದರೋ ಆ ಸ್ವರಾಜ್ಯಕ್ಕಾಗಿ ಪ್ರತಿಭಟನಾಕಾರರು ಹೋರಾಡುತ್ತಿದ್ದಾರೆ. ನಮ್ಮ ಮೇಲೆ ಪರಿಣಾಮ ಬೀರುವ ನೀತಿ ಮತ್ತು ಯೋಜನೆಗಳ ವಿಚಾರದಲ್ಲಿ ನಮ್ಮನ್ನೇಕೆ ತೊಡಗಿಸಿಕೊಂಡಿಲ್ಲ ಮತ್ತು ನಮ್ಮ ಸಲಹೆಯನ್ನು ಏಕೆ ಕೇಳಲಿಲ್ಲ–ಅವರು ಪ್ರಶ್ನಿಸಿದ್ದಾರೆ. ರಾಷ್ಟ್ರೀಯ ಹಿತಾಸಕ್ತಿಯಿಂದಾಗಿ ಕೈಗೆತ್ತಿಕೊಳ್ಳಲಾದ ನರ್ಮದಾಕ್ಕೆ ಅಡ್ಡವಾಗಿ ಕಟ್ಟಲಾಗುವ ಬೃಹತ್ ಅಣೆಕಟ್ಟಿನ ಯೋಜನೆಯಲ್ಲಿ ನಮ್ಮ ಅಭಿಪ್ರಾಯಕ್ಕೆ ಅವಕಾಶವೇಕಿಲ್ಲ?

ಇಂತಹ ಗುಂಪುಗಳಲ್ಲಿ ಗಾಂಧೀಜಿಯ ಪ್ರಸ್ತಾಪ ಒಮ್ಮೊಮ್ಮೆ ಮಾತ್ರ ಕಂಡುಬರುತ್ತದೆಂಬ ಅಂಶವನ್ನು ನಾನು ಗುರುತಿಸಿದೆ. 'ಇದು ಏಕೆ ಹೀಗೆ?' ಎಂದು ನಾನು ಅಚ್ಚರಿಯಿಂದ ಕೇಳಿದೆ: 'ಇಲ್ಲಿನ ಎಷ್ಟು ಮಂದಿ ತೀವ್ರಗಾಮಿಗಳು ಗಾಂಧಿಯ ದಾರಿ ತಮ್ಮದೆಂದು ಹೇಳಿಕೊಳ್ಳುತ್ತಾರೆಯೆ?', 'ಅಂತಹವರು ಬಹಳ ಕಡಿಮೆ' ರಾಕೇಶ್ ದಿವಾನ್ ಹೇಳಿದರು. 'ಯಾಕೆ?' ನಾನು ಮುಂದುವರೆಸಿದೆ. 'ಗಾಂಧಿಯ ಹಾದಿ ತನ್ನದೆಂದು ಹೇಳಿಕೊಳ್ಳಬೇಕಾದರೆ ನೀನು ನಿನ್ನನ್ನೇ ಶೋಧಿಸಿಕೊಳ್ಳಬೇಕಾಗುತ್ತದೆ. ವ್ಯಕ್ತಿ ಕಠಿಣ ಮಾನದಂಡದಿಂದ ತನ್ನನ್ನು ತಾನು ಅಳೆದುಕೊಳ್ಳಬೇಕಾಗುತ್ತದೆ. ಅನೇಕ ಜನರು ಇದನ್ನು ಪಾಲಿಸಲು ಇಷ್ಟಪಡುವುದಿಲ್ಲ!' ರಾಕೇಶ್ ದೀರ್ಘ ಉಸಿರುಬಿಟ್ಟರು.

ವರುಷಗಳು ಸರಿಯುತ್ತಿದ್ದಂತೆ, ತಮ್ಮ ಜೀವಿತಾವಧಿಯನ್ನು ಈ ಅಳತೆಗೋಲಿನಿಂದ ಅಳೆಯುತ್ತಾ ತಮ್ಮನ್ನು ತಾವು ಶೋಧಿಸಿಕೊಳ್ಳುತ್ತಾ ಕಳೆದ ಹಿರಿಯರೊಂದಿಗಿನ ಒಡನಾಟ ಈ ಚಿಂತನೆಯನ್ನು ದೃಢಗೊಳಿಸಿತು. 'ನಯೀ ತಾಲೀಮ್'ನ್ನು ಅನುಷ್ಠಾನಗೊಳಿಸಲು ತಮ್ಮ ವೃತ್ತಿ ಜೀವನವನ್ನು ಮೀಸಲಿಟ್ಟ ಉತ್ತಮ ಶಿಕ್ಷಕ ತರಬೇತುದಾರ ಜ್ಯೋತಿಭಾಯ್ ದೇಸಾಯಿ ಇದ್ದಾರೆ. ಇದೇ ಅರ್ಧಶತಮಾನದಲ್ಲಿ 'ನಯೀ ತಾಲೀಮ್' ಕಾಣ್ಕೆಗಿಂತ ಜಗತ್ತು ಮತ್ತೂ ದೂರ ಸಾಗಿದೆ. ಆದರೆ ಜ್ಯೋತಿಭಾಯ್ ಅವರ ಎಲ್ಲೆಡೆ ಪಸರಿಸುವ ಆನಂದ, ಆತಂಕರಹಿತ ಶಾಂತಸ್ಥಿತಿ. ಹೀಗೆ ಚಿಂತಿಸುವುದು ಮೂರ್ಖತನ ಎಂದೆನಿಸುವಂತೆ ಮಾಡುತ್ತವೆ.

'ಯಾಕೆ ಇಷ್ಟೊಂದು ಚಿಂತೆ ಮಾಡುತ್ತೀರಿ?' ಜ್ಯೋತಿಭಾಯ್ ಸದಾ ಮುಖದ ಮೇಲೆ ನಲಿದಾಡುವ ನಗೆಯೊಡನೆ ತಮ್ಮ ಯುವ ಗೆಳೆಯರನ್ನು ಪ್ರಶ್ನಿಸುತ್ತಾರೆ.'ಮಹಾಪ್ರವಾಹ ಕಡಿಮೆಯಾಗುತ್ತಿದೆ' ಖಡಾಖಂಡಿತವಾಗಿ ಜ್ಯೋತಿಭಾಯ್ ನುಡಿಯುತ್ತಾರೆ. ಕೆಲವರು ಮಾತ್ರ ಇದನ್ನು ಕಾಣಲು ಶಕ್ತರಾಗುತ್ತಾರೆ.

ನವೆಂಬರ್ ೧೯೯೨ರಲ್ಲಿ ಠಾಕೂರ್‌ದಾಸ್ ಬಂಗ್ ಕೂಡಾ ಇದೇ ದೃಷ್ಟಿ ಹೊಂದಿರುವುದನ್ನು ಗುರುತಿಸಿದೆ. ಸರ್ವೋದಯ ಚಳುವಳಿಯ ಈ ಧುರೀಣ 'ಜಮ್ನಾಲಾಲ್ ಬಜಾಜ್' ಪ್ರಶಸ್ತಿಯನ್ನು ಆಗಷ್ಟೇ ಪಡೆದಿದ್ದರು. ನಾನು 'ಇಲಸ್ಟ್ರೇಟೆಡ್ ವೀಕ್ಲಿ'ಗಾಗಿ ಅವರ

ಸಂದರ್ಶನ ನಡೆಸಲು ವಾರ್ಧಾದ ಗೌಪುರಿಯಲ್ಲಿರುವ ಅವರ ಮನೆಗೆ ತೆರಳಿದ್ದೆ. 'ಸಮಾಜದಲ್ಲಿ ನೆಲೆ ಕಳೆದುಕೊಳ್ಳುತ್ತಿರುವ ತತ್ವಗಳಿಗಾಗಿ ಬದುಕುತ್ತಿರುವ ಬಗ್ಗೆ ಏನೆನಿಸುತ್ತದೆ?' ಎಂಬ ಪ್ರಶ್ನೆಯೊಂದಿಗೆ ನಾನು ಸಂದರ್ಶನವನ್ನು ಆರಂಭಿಸಿದೆ. ಇದಕ್ಕೆ ಬದಲಾಗಿ 'ಗಾಂಧೀತತ್ವ'ಗಳೆಂದು ನಾವು ಯಾವುದನ್ನು ಕರೆಯುತ್ತೇವೋ ಅದು ಐವತ್ತು ವರ್ಷಗಳ ಹಿಂದೆ ಈಗಿರುವುದಕ್ಕಿಂತ ಹೆಚ್ಚು ಪರಿಧಿಗೆ ಸರಿದಿತ್ತು ಎಂದವರು ಬಲವಾಗಿ ಹೇಳಿದರು. ಜಾಗತಿಕ ಕೈಗಾರಿಕೀಕರಣ ಮತ್ತು ನೈಸರ್ಗಿಕ ಅಸಮತೋಲನ ಹೆಚ್ಚು ಹೆಚ್ಚು ಮಂದಿ ಈ ರೀತಿಯ ನಿರ್ಣಯಕ್ಕೆ ಬರುವಂತೆ ಮಾಡಿವೆ.

೧೯೯೨ರ ಆರಂಭದಲ್ಲಿ ವಿಶ್ವಸಂಸ್ಥೆ ರಯೋಡಿಜನೈರೋದಲ್ಲಿ ಆಯೋಜಿಸಿದ ಸಮ್ಮೇಲನ 'ಸಂತುಲಿತ ಅಭಿವೃದ್ಧಿ' ಎಂಬ ಪರಿಕಲ್ಪನೆಯನ್ನು ಅಧಿಕೃತವಾಗಿ ಘೋಷಿಸಿತು. ಜಗತ್ತಿನೆಲ್ಲೆಡೆಯ ವಿಭಿನ್ನ ಕ್ರಿಯಾಶೀಲರು ಆ ಬಳಿಕ ಎರಡು ದಶಕಗಳ ಕಾಲದಿಂದ ಇದಕ್ಕಾಗಿ ಶ್ರಮಿಸುತ್ತಿದ್ದಾರೆ. ಈಗಿರುವ 'ಪ್ರಗತಿ ಮತ್ತು ಅಭಿವೃದ್ಧಿ'ಯ ಪರಿಕಲ್ಪನೆಗಳು ಭೂಮಿಯ ಸಮತೋಲನಕ್ಕೆ ಕಾರಣವಾಗಲಾರವು ಎಂಬುದನ್ನು ಇವರ ಕೆಲಸಗಳು ಸಾಬೀತುಪಡಿಸಿವೆ.

ಪ್ರಗತಿಗಾಗಿ ಮನುಷ್ಯ ತೆತ್ತ ಬೆಲೆಯನ್ನು ಗುರುತಿಸುವಿಕೆ ನಿಧಾನವಾಗಿ ಅಂತರರಾಷ್ಟ್ರೀಯ ಮುಖ್ಯ ಪ್ರವಾಹದ ರೂಪು ಪಡೆಯುತ್ತಿದೆ. ೧೯೯೫ರ ಆಗಸ್ಟ್‌ನಲ್ಲಿ 'ಟೈಮ್' ಪತ್ರಿಕೆ '೨೦ನೆಯ ಶತಮಾನದ ಅಪ್ರಿಯ ಸಂಗತಿಗಳು' ಎಂಬ ಲೇಖನದಡಿಯಲ್ಲಿ ಈ ವಿಚಾರಗಳನ್ನು ಚರ್ಚಿಸಿದೆ. ಆಧುನಿಕ ಜೀವನಶೈಲಿ ಮಾನವನ ಮೂಲಭೂತ ಮಾನಸಿಕ ಅವಶ್ಯಕತೆಗಳಿಗೆ ಅನುಗುಣವಾಗಿಲ್ಲ ಎಂಬ ವಿಕಾಸವಾದೀ ಮನಃಶಾಸ್ತ್ರಜ್ಞರ ಅಭಿಪ್ರಾಯವನ್ನು ಪತ್ರಿಕೆ ತಿಳಿಸುತ್ತದೆ. ಕೆಲವು ಔದ್ಯಮಿಕ ದೇಶಗಳಲ್ಲಿ ಖಿನ್ನತೆಯ ಸಂಖ್ಯೆ ಪ್ರತೀ ಹತ್ತು ವರುಷಗಳಿಗೆ ದ್ವಿಗುಣಗೊಳ್ಳುತ್ತಿದೆ. ಲೇಖಕರು ಹಿಂಜರಿಯುತ್ತಲೇ ಸಲಹೆ ನೀಡುತ್ತಾರೆ 'ಹೆಚ್ಚು ಹೆಚ್ಚು ಉತ್ಪಾದನೆ ನಮ್ಮ ಆಳದ ಅವಶ್ಯಕತೆಗಳಿಗೆ ಉತ್ತರವಲ್ಲ'.

ಇಂತಹ ಅರಿವು ಇಂದು ಪಶ್ಚಿಮದ ಅನೇಕ ತಜ್ಞರನ್ನು, ವಿಜ್ಞಾನಿಗಳನ್ನು, ಕ್ರಿಯಾಶೀಲ ಸಂಘಟನೆಗಳನ್ನು ಆವರಿಸಿಕೊಳ್ಳುತ್ತಿದೆ. ಸಾನ್‌ಫ್ರಾನ್ಸಿಸ್ಕೊದ ಇಂತಹ ಒಂದು ಗುಂಪು 'ಅಭಿವೃದ್ಧಿಗೆ ಪುನರ್ವ್ಯಾಖ್ಯೆ' ನೀಡಲು ತೊಡಗಿದೆ. ಇದು ದೇಶದ ಸಾಮಾನ್ಯ ಉತ್ಪಾದನೆಯ ಜಾಗವನ್ನು ನೈಜ ಪ್ರಗತಿ ಸೂಚಕ ಆವರಿಸಿಕೊಳ್ಳಬೇಕೆಂಬ ಕೂಗು ಎಬ್ಬಿಸಿದೆ.

ತಾತ್ವಿಕ ಸಮರ ಅನೇಕ ಜನರಿಗೆ ತುಂಬಾ ದೂರದ್ದಾಗಿಯೂ, ಅಮೂರ್ತವಾಗಿಯೂ ಕಾಣಿಸುತ್ತದೆ. ಆದರೆ ಈ ಹೋರಾಟ ಅಸಂಖ್ಯ ಜನರ ಪ್ರತಿನಿತ್ಯದ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವ ಉದ್ದೇಶ ಹೊಂದಿದೆ. ರಾಜಸ್ಥಾನದ ದೇವದೂಂಗ್ರಿ, ಕಾಸರ್‌ವಾಡ್ ಅಥವಾ ಉತ್ತರ ಆಂಧ್ರದ ಅದಿಲಾಬಾದ್ ಈ ವಿಶಾಲ ಪರಿಧಿಯಲ್ಲಿನ ಸಣ್ಣ ಸಣ್ಣ ಬಿಂದುಗಳು . ಇಲ್ಲಿನ ಸನ್ನಿವೇಶಗಳೆಲ್ಲ ಈ ವಾಸ್ತವದ ಒಂದು ಭಾಗವನ್ನು ಎದುರಿಗಿಡುವ ಯತ್ನ.

ಬಾಪು ಕುಟಿ ಈ ಕತೆಗಳ ರೂಪಕಾತ್ಮಕವಾದ, ನೈಜ ಸೂತ್ರಧಾರ. ಯುಗಪ್ರವರ್ತಕ ಗಾಂಧೀಜಿಯ ಈ ಬಳುವಳಿ ಜಗತ್ತಿನೆಲ್ಲೆಡೆಯ ವಿಭಿನ್ನ ಸಸಿಗಳಿಗೆ ನೀರೆರೆಯುತ್ತಿದೆ. ಈ

ಎಲ್ಲ ಯತ್ನಗಳೂ ಗಾಂಧೀಜಿಯ ಹೆಸರನ್ನು ಮುಂಚಾಚುವುದಿಲ್ಲ. ಆದರೆ, ಇವು ಬಹುಶಃ ಬೇರೆಲ್ಲದಕ್ಕಿಂತ ಹೆಚ್ಚಾಗಿ ಅವರಿಗೆ ಸಲ್ಲಿಸುವ ಗೌರವ.

ಭಾರತದಲ್ಲಿ ಸೇವಾಗ್ರಾಮದ ಆಶ್ರಮ ಪರ್ಯಾಯ ಪ್ರಗತಿಗಾಗಿ ತುಡಿಯುತ್ತಿರುವವರ ಅನಧಿಕೃತ ಕೇಂದ್ರ. ಮಧ್ಯಭಾರತದಲ್ಲಿರುವ ಇದು ದೇಶದ ಬೇರೆ ಬೇರೆ ಭಾಗದಿಂದ ಬರುವ ಜನರಿಗೆ ಸಮದೂರದಲ್ಲಿದೆ. ವರುಷಗಳು ಸರಿಯುತ್ತಿದ್ದಂತೆ, ಆಶ್ರಮ ನೂರಾರು ಜನರ ಗುಂಪುಗಳಿಗೆ ವಾಸ್ತವ್ಯ, ಸೇವೆ ಕಲ್ಪಿಸುವ ಸೌಲಭ್ಯಗಳನ್ನು ವಿಸ್ತರಿಸಿಕೊಂಡಿದೆ.

ಬಾಪು ಕುಟಿಯಲ್ಲಿ ಸಭೆ ಸೇರುವ ಅನೇಕರು, ಗಾಂಧೀಜಿಯ ಅನುಯಾಯಿಗಳು ಸಾದಾ ಸಮವಸ್ತ್ರವಾದ ಖಾದಿ ಧರಿಸಿರುವುದಿಲ್ಲ. ಇನ್ನು ಅನೇಕರು ಕುಟಿಯನ್ನಾಗಲೀ, ಬಾಪುವನ್ನಾಗಲೀ ಅರಸುವವರಾಗಿರದೇ ಯಾವುದೋ ಶಿಬಿರಕ್ಕೋ, ಸಭೆಯಲ್ಲಿ ಭಾಗವಹಿಸಲೋ ಸೇವಾಗ್ರಾಮಕ್ಕೆ ಬಂದವರಾಗಿರುತ್ತಾರೆ. ಸೇವಾಗ್ರಾಮದ ಗ್ರಂಥಾಲಯದಲ್ಲಿ ಗಾಂಧಿ ಬರೆದಿರುವ ಅಥವಾ ಅವರ ಬಗ್ಗೆ ಬರೆಯಲಾಗಿರುವ ಪುಸ್ತಕಗಳ ಹಾಳೆಗಳನ್ನು ತಿರುವಿಹಾಕುತ್ತಾ ಕೆಲವರು ಗಾಂಧೀಜಿಯ ಆತ್ಮಕತೆಯನ್ನು ಕೈಗೆತ್ತಿಕೊಳ್ಳುತ್ತಾರೆ, ಪೂರ್ಣವಾಗೇನೂ ಓದುವುದಿಲ್ಲ. ಇನ್ನು ಕೆಲವರು ಗಾಂಧೀಜಿಯವರ 'ಹಿಂದ್ ಸ್ವರಾಜ್' ಅಥವಾ ಅವರ ಅನುಯಾಯಿ ಜೆ.ಸಿ. ಕುಮಾರಪ್ಪನವರು ಬರೆದ 'ಶಾಶ್ವತ ಅರ್ಥಶಾಸ್ತ್ರ'ವನ್ನಾಗಲೀ ಕೈಗೆತ್ತಿಕೊಳ್ಳುತ್ತಾರೆ. ಪುಸ್ತಕಗಳ ಹಾಳೆಗಳನ್ನು ತಿರುವಿಹಾಕುತ್ತಾ, ಬಾಪು ಕುಟಿಯ ವಿಭಿನ್ನ ಆಯಾಮಗಳ ಕುರಿತು ಚಿಂತಿಸುತ್ತಾ ತಮ್ಮನ್ನು ಗಾಂಧಿಯವರ ಪಥದ ಸಹಯಾತ್ರಿಕರು ಎಂಬುದಾಗಿ ಗುರುತಿಸಿಕೊಳ್ಳುತ್ತಾರೆ.

ಇವರಲ್ಲಿ ಅನೇಕರಿಗೆ ಬಾಪು ಕುಟಿಯ ಚೈತನ್ಯ ಸುಲಭವಾಗಿ ವಿವರಿಸಲು ಬರುವಂತಹುದಲ್ಲ. ಆದರೆ ಇದು ಅವರ ಹೋರಾಟದ ಕೇಂದ್ರದಲ್ಲಿ ಸೇರಿಹೋಗಿದೆ. ಕಾಲ ಮತ್ತು ಭೌಗೋಳಿಕ ಎಲ್ಲೆಗಳಿಂದ ಮುಕ್ತರಾದಾಗ ಮಾತ್ರ ಹತ್ತಿರದಿಂದ ಇದನ್ನು ಗಮನಿಸುವುದು ನಮಗೆ ಸಾಧ್ಯವಾಗುತ್ತದೆ. ಬಾಪು ಕುಟಿ ಚಕ್ರೀಯ ಚಲನೆಯ ಕಾಲದ ಕದವೆಂದು ಭಾವಿಸಿ, ಇದರೊಳಕ್ಕೆ ನಾವು ಹೆಜ್ಜೆಯಿರಿಸೋಣ.

ದೇವದೂಂಗ್ರಿ

ಹೆದ್ದಾರಿ ಬದಿಯ ಬದುಕು

ಅರಾವಳಿ ಪರ್ವತ ಶ್ರೇಣಿಯ ತುದಿಯ ಪುಟ್ಟ ಬೆಟ್ಟದಲ್ಲಿ ಕಲ್ಲು ಹಾಗೂ ಇಟ್ಟಿಗೆಯಿಂದ ಮಾಡಿದ ಚಿಕ್ಕ ಗುಡಿಯೊಂದಿದೆ. ಇಲ್ಲಿ ಗ್ರಾಮದೇವತೆ ನೆಲೆಸಿದ್ದಾಳೆ. ಈ ಗುಡಿಯ ಪಕ್ಕದಲ್ಲಿಯೇ ಬಹು ಪುರಾತನವೆನ್ನಿಸುವ ರಸ್ತೆ ಹಾದುಹೋಗಿದೆ.

ಈ ಗುಡಿ, ಸದಾ ವಾಹನ ಸಂಚಾರಗಳಿಂದ ಗಿಜಿಗುಡುವ ರಸ್ತೆಯ ಕಾವಲುಗಾರನೇನೋ ಎನ್ನುವಂತಿದೆ. ಬಹುಶಃ ಶ್ರೀಕೃಷ್ಣ ಈ ಹಾದಿಗುಂಟ ದ್ವಾರಕೆಯಿಂದ ಹಸ್ತಿನಾಪುರಕ್ಕೊ, ಕುರುಕ್ಷೇತ್ರಕ್ಕೊ ಆಗಾಗ ಪ್ರಯಾಣಿಸುತ್ತಿದ್ದನೇನೋ? ಅಥವಾ, ಸಮೀಪದ ಪಟ್ಟಣವನ್ನು 'ಭೀಮ್' ಎಂದು ಕರೆಯುವುದು ಕಾಕತಾಳೀಯವೋ? ಇಂಥ ಯಾವುದೇ ಕುತೂಹಲಗಳಿಗೆ ಸ್ಥಳೀಯರಿಂದ ಸಮಾಧಾನಕರ ಉತ್ತರ ದೊರೆಯುವುದು ಕಷ್ಟವೇ. ಆ ಹಳೆಯ ರಸ್ತೆ ಇಂದು ದೆಹಲಿ ಹಾಗೂ ವಾಣಿಜ್ಯ ಕೇಂದ್ರಗಳಾದ ಮುಂಬೈ ಮತ್ತು ಅಹಮದಾಬಾದ್ ನಡುವಣ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಯಾಗಿದೆ.

ಈ ಪುಟ್ಟ ಬೆಟ್ಟದ ತಪ್ಪಲಿನಲ್ಲಿ ದೇವ್‌ದೂಂಗರ್ ಎಂಬ ಚಿಕ್ಕ ಗುಡಿ ಇದೆ. ಈ ಗುಡಿಯ ಸನಿಹ ಇರುವ ಚಿಕ್ಕ ಗ್ರಾಮವೇ ದೇವದೂಂಗ್ರಿ. ಇದರ ಮೂಡಲ ತುದಿಯಲ್ಲಿ, ಬೆಟ್ಟದ ಇಳಿಜಾರಿನಿಂದ ತುಸು ಕೆಳಗೆ ಒಂದು ವಿಶಿಷ್ಟ ಕುಟುಂಬ ನೆಲೆಸಿದೆ. ಮಣ್ಣು ಹಾಗೂ ಕಲ್ಲುಗಳಿಂದ ನಿರ್ಮಿಸಿದ ಇವರ ಮನೆ ವಿಭಿನ್ನ ರೀತಿಯ ಅತಿಥಿಗಳನ್ನು ಕೈಬೀಸಿ ಕರೆಯುತ್ತದೆ. ರಾಜಧಾನಿಯಿಂದ ಆಗಮಿಸಿದ ಹಿರಿಯ ಅಧಿಕಾರಿಯೋ, ಮುಂಬೈನಿಂದ ಬಂದ ಪತ್ರಕರ್ತನೋ ಪಕ್ಕದ ಜಿಲ್ಲೆಯ ಸಣ್ಣ ರೈತನೋ, ನೆರೆಮನೆಯವನೋ ಈ ಮನೆಯ ಮಣ್ಣಿನ ನೆಲದ ಮೇಲೆ ಕುಳಿತು ಊಟ ಮಾಡುವುದನ್ನು ನಾವು ನೋಡಬಹುದು.

ಈ ಕುಟುಂಬದ ನೋವು ನಲಿವುಗಳನ್ನು ನಾನು ಅನೇಕ ವರ್ಷಗಳಿಂದ ನೋಡುತ್ತಾ ಬಂದಿದ್ದೇನೆ. ಗೃಹಕೃತ್ಯಗಳಾದ ಕಸಗುಡಿಸುವುದು, ಕುರಿಗಳಿಗೆ ಮೇವು ನೀಡುವುದು...ಹೀಗೆ ಎಲ್ಲವೂ ನನಗೆ ಕೆಲವೊಮ್ಮೆ ಬಾಪು ಕುಟಿಯನ್ನು ನೆನಪಿಸುತ್ತವೆ. ಈ ಸಾಮ್ಯವನ್ನು ಮಾತುಗಳಲ್ಲಿ ಹೇಳಲಾರೆ. ಬಾಪು ಕುಟಿ ಅಥವಾ ಗಾಂಧೀಜಿ ಜತೆಗಿನ ಯಾವುದೇ ಹೋಲಿಕೆ ನನ್ನ ಅತಿಥೇಯರಿಗೆ ಇರುಸುಮುರುಸಿನ ವಿಷಯವಾಗುತ್ತದೆ. ಸರಳವಾಗಿ ಬದುಕುವುದು ಹಾಗೂ ಕೆಲಸ ಮಾಡುವುದು ಅವರಿಗೆ ಸಹಜವಾದದ್ದು.

ದೇವದೂಂಗ್ರಿಯ ಹೊಸ ಕುಟುಂಬ:

ಮೋಟ್‌ಸಿಂಗ್‌ನ ಬಾವಿ ಇರುವ ಸ್ಥಳದಿಂದ ಕೆಲವೇ ಇಂಚುಗಳ ದೂರದಲ್ಲಿ ಕಪ್ಪು ಡಾಂಬರಿನ ರಾಷ್ಟ್ರೀಯ ಹೆದ್ದಾರಿ ಹಾದುಹೋಗಿದೆ. ವಯೋವೃದ್ಧ ಸಿಂಗ್, ಚಿಕ್ಕ ಜಾಗದಲ್ಲಿ ತರಕಾರಿ ಬೆಳೆದಿದ್ದಾನೆ. ಆ ತೋಟಕ್ಕೆ ತಾಸುಗಟ್ಟಲೆ ನೀರುಣಿಸುತ್ತಲೇ ಇರುತ್ತಾನೆ. ನಸುಕು ಹರಿಯುವುದಕ್ಕೆ ಮುನ್ನವೇ ಆತ ದೈನಂದಿನ ಕೆಲಸಕ್ಕೆ ಅಣಿಯಾಗುತ್ತಾನೆ. ಮೇಲಿಂದ ಮೇಲೆ ಬರುವ ಕೆಮ್ಮು ತಡೆಯಲು ಬೀಡಿ ಹೊತ್ತಿಸಿ ದಮ್ ಎಳೆಯುತ್ತಾನೆ. ಹೆದ್ದಾರಿಗುಂಟ ಸಾಗುವ ಬಸ್ ಹಾಗೂ ಟ್ರಕ್‌ಗಳ ಅಬ್ಬರ ಮುಂಜಾವಿನ ಮೌನವನ್ನು ಸೀಳುತ್ತವೆ.

ಈ ಹೆದ್ದಾರಿ ಆಧುನಿಕ ಕೈಗಾರಿಕಾ ನಗರಗಳನ್ನು ಬೆಸೆಯುವ ಕೊಂಡಿಯಾಗಿದೆ. ಇದರಿಂದ ಹೊರಗೆ ನಿಂತಿರುವ ಮೋಟ್‌ಸಿಂಗ್ ಹೊರಜಗತ್ತಿನ ಸೆಳೆತಕ್ಕೊಳಗಾಗಿಯೂ ಇಲ್ಲ; ಹೆದ್ದಾರಿಯ ಅಗೋಚರ ಬೇಲಿಗಳನ್ನು ಮುರಿಯುವ ಪ್ರಯತ್ನವನ್ನೂ ಮಾಡಿಲ್ಲ.

ಇತರರಂತೆ ಸಿಂಗ್ ಕೂಡ ಆ ಪ್ರಪಂಚಕ್ಕೆ ಕಾಲಿರಿಸಿದ್ದ. ಕೂಲಿ ಕೆಲಸ ಮಾಡುತ್ತ ತನ್ನ ಶ್ರಮ ಮಾರಿಕೊಂಡು ಕೊಳಕು ಮತ್ತು ಗಲೀಜುಗಳ ನಡುವೆ ಬದುಕಿದ್ದ. ತನ್ನ ಯೌವ್ವನದ ದಿನಗಳನ್ನು ಅಲ್ಲಿ ಕಳೆದು, ಬಳಿಕ ದೇವದೂಂಗ್ರಿಯ ಮಣ್ಣಿನ ಮನೆಗೆ ಮರಳಿದ್ದ.

ಬೆಳಗಿನ ಸಮಯವನ್ನೆಲ್ಲ ಮೋಟ್‌ಸಿಂಗ್ ತನ್ನ ತರಕಾರಿ ತೋಟದಲ್ಲಿಯೇ ಕಳೆಯುತ್ತಾನೆ. ಬೆಳೆದ ತರಕಾರಿಗಳನ್ನು ಸಮೀಪದ ಭೀಮ್ ನಗರದ ಪೇಟೆಯಲ್ಲಿ ಮಾರಿ ಜೀವನ ನಡೆಸುತ್ತಾನೆ.

ಹೆದ್ದಾರಿ ಜಂಕ್ಷನ್ 'ಚಾಲೀಸ್ ಮೀಲ್'ನ ಟೀ ಅಂಗಡಿಯ ಒರಟು ಬೆಂಚಿನ ಮೇಲೆ ಕುಳಿತು ಸಿಂಗ್, ತನ್ನ ಮಧ್ಯಾಹ್ನಗಳನ್ನು ಕಳೆಯುತ್ತಾನೆ. 'ಜೀವರ್ ಪಟ್ಟಣ ಇಲ್ಲಿಂದ ೪೦ಕಿ.ಮೀ' ಎನ್ನುವ ರಸ್ತೆ ಗುರುತು ಈ ಜಂಕ್ಷನ್‌ನಲ್ಲಿರುವುದರಿಂದಲೇ ಟೀ ಅಂಗಡಿಗೆ 'ಚಾಲೀಸ್ ಮೀಲ್' ಎಂಬ ಹೆಸರು ಬಂದಿದೆ. ಇದು ಮೋಟ್‌ಸಿಂಗ್‌ನ ಬಾವಿ ಇರುವ ಪ್ರದೇಶದಿಂದ ಕೇವಲ ಅರ್ಧ ಕಿ.ಮೀ ದೂರದಲ್ಲಿದೆ. ಆಸುಪಾಸಿನಲ್ಲಿ ನಡೆಯುವ ವಿದ್ಯಮಾನಗಳ ಬಗ್ಗೆ ಹರಟೆ ಹೊಡೆಯುವ ಅಡ್ಡೆ 'ಚಾಲೀಸ್ ಮೀಲ್'. ಮೋಟ್‌ಸಿಂಗ್‌ನ ಹಾಸ್ಯಪ್ರಜ್ಞೆಯಿಂದ ಆ ಹರಟೆ ಕಳೆಕಟ್ಟುತ್ತದೆ.

ತನ್ನ ೫೦ ವರ್ಷಗಳ ಅವಧಿಯಲ್ಲಿ ಮೋಟ್‌ಸಿಂಗ್ ಹಲವು ಭೀಕರ ಬರಗಾಲದ ವರ್ಷಗಳನ್ನು ಕಂಡಿದ್ದ. ಶತಶತಮಾನಗಳಿಂದಲೂ ಇಂಥ ಸುದೀರ್ಘ ಬರದ ವರ್ಷಗಳಲ್ಲಿ ಬದುಕುವ ಕಲೆ ಈತನ ಪೂರ್ವಿಕರಿಗೆ ಕರಗತವಾಗಿತ್ತು. ಪ್ರತಿ ನೂರು ವರ್ಷಗಳಲ್ಲಿ ಕೇವಲ ೨೦ ವರ್ಷ ಮಾತ್ರ ಉತ್ತಮ ಮಳೆಯಾಗಿ ಫಸಲು ಕೈಗೆ ಬರುತ್ತದೆ ಎಂಬ ಸತ್ಯವನ್ನು ಅಲ್ಲಿನ ಜನರು ಕಂಡುಕೊಂಡಿದ್ದರು. ಮೋಟ್‌ಸಿಂಗ್ ಈಗ ಬದುಕಿನ ಮುಸ್ಸಂಜೆಯಲ್ಲಿದ್ದಾನೆ. ಸತತ ಎಂಟು ವರ್ಷಗಳಿಂದ ಬರ ಎದುರಿಸಿದ್ದಾನೆ. ಮಳೆ ಇಲ್ಲದೆ ಜನ, ಜಾನುವಾರು ಕಂಗೆಟ್ಟಿವೆ. ನಿಜವಾಗಿಯೂ ರಟ್ಟೆಯಲ್ಲಿ ಕಸುವಿದ್ದ ಜನ ಗುಳೇ ಹೊರಟಿದ್ದಾರೆ. ಗುಡಿಸಲಲ್ಲಿ ಉಳಿದವರು ಗುಳೇ ಹೋದ ಜನ ಹಣ ಕಳಿಸುತ್ತಾರೆಂಬ ನಿರೀಕ್ಷೆಯಲ್ಲಿಯೇ ದಿನ ದೂಡುತ್ತಿದ್ದಾರೆ. ಹೆದ್ದಾರಿ

ನಿರ್ಮಿಸಿದ, ಕೆಲವೊಮ್ಮೆ ಇದರ ದುರಸ್ತಿ ಮಾಡಿದ ಸರ್ಕಾರ ತಮಗೆ ಏನಾದರೂ ಸಹಾಯ ಮಾಡಬಹುದೆಂಬ ದೂರದ ಆಸೆಯೂ ಅವರಲ್ಲಿದೆ. ಆದರೆ ಸರ್ಕಾರದ ಭರವಸೆಗಳೆಲ್ಲ ಬಿಸಿಲುಕುದುರೆಗಳಂತೆ. ಇಲ್ಲದ ಆಸೆ ಹುಟ್ಟಿಸಿ ಇದ್ದಕಿದ್ದಂತೆಯೇ ಅದೃಶ್ಯವಾಗಿಬಿಡುತ್ತವೆ.

ತನ್ನ ಮನೆಯಲ್ಲಿರುವ ಧಾನ್ಯದ ಮಡಿಕೆ ಬರಿದಾದಾಗ ತಾಯಿ ಆಹಾರವನ್ನರಸಲು ಹೊರಡುತ್ತಾಳೆ. ಹೊರಡುವ ಮುನ್ನ ಮನೆಯ ಮೇಲ್ಛಾವಣಿಗೆ ಒಂದು ಮಡಕೆಯನ್ನು ಕಟ್ಟುತ್ತಾಳೆ. 'ಈ ಮಡಕೆಯಲ್ಲಿ ಕಿಚಡಿ ಇದೆ. ನಾನು ವಾಪಸಾದ ಬಳಿಕ ಇದನ್ನು ನಿಮಗೆ ಬಡಿಸುವೆ' ಎಂದು ಮಕ್ಕಳಿಗೆ ಹೇಳಿ ಹೋಗುತ್ತಾಳೆ. ತಾಯಿಯ ದಾರಿ ಕಾಯುತ್ತಾ ಮಕ್ಕಳು ಉಸಿರು ಹಿಡಿದಿರುತ್ತವೆ. ಆದರೆ ಆಕೆ ಬರಿಗೈಲಿ ವಾಪಸಾಗುತ್ತಾಳೆ. ಮೇಲ್ಛಾವಣಿಗೆ ಕಟ್ಟಿರುವ ಮಡಿಕೆಯೂ ಖಾಲಿ ಎನ್ನುವುದನ್ನು ಅರಿತ ಮಕ್ಕಳು ಅಸುನೀಗುತ್ತವೆ–ಬಡತನದ ಭೀಕರತೆಯನ್ನು ವಿವರಿಸುವ ಜನಪದ ಕಥೆ ಇದು.

ಈ ಕಥೆಗಿಂತ ತನ್ನ ಬದುಕು ಭಿನ್ನವಾಗಿಲ್ಲ ಎಂದು ಮೋಟ್‌ಸಿಂಗ್‌ಗೆ ಅನ್ನಿಸುತ್ತಿತ್ತು. ಆದರೆ ಈತನ ಮನೆಯ ಮಡಿಕೆ ಎಂದೂ ಖಾಲಿಯಾಗಿರಲೂ ಇಲ್ಲ, ತುಂಬಿಯೂ ಇರಲಿಲ್ಲ. ಭೀಕರ ಬರಗಾಲದಲ್ಲಿ ಬ್ರಾಹ್ಮಣ, ಕುರಿ ಹಾಗೂ ಒಂಟೆಗಳು ಮಾತ್ರ ಬದುಕುಳಿಯಬಲ್ಲವು ಎಂದು ಹಿಂದಿನ ಕಾಲದಲ್ಲಿ ಹೇಳಲಾಗುತ್ತಿತ್ತು. ಆದರೆ ಈ ಮೂರು ಜೀವಿಗಳ ಸಾಲಿಗೆ ಸರ್ಕಾರ ಹಾಗೂ ಗ್ರಾಮಪಂಚಾಯ್ತಿ ಮುಖ್ಯಸ್ಥರೂ ಹೆಚ್ಚುವರಿಯಾಗಿ ಸೇರುತ್ತಾರೆಂಬ ಸತ್ಯ ಸಿಂಗ್‌ಗೆ ಅರಿವಾಗಿದೆ.

ವ್ಯಂಗ್ಯದ ನಗುವಿನೊಂದಿಗೆ ಸಿಂಗ್ ಇಂಥ ಕಥೆಗಳನ್ನು ಮೆಲುಕು ಹಾಕುತ್ತಾನೆ. ಸಿಂಗ್ ಆಗಾಗ ಕೆಮ್ಮುತ್ತಿರಬೇಕಾದರೆ ಆತನ ಸುಕ್ಕುಗಟ್ಟಿದ ಕಪ್ಪನೆಯ ಮುಖದಲ್ಲಿನ ಬೆಳ್ಳಗಿನ ಮೀಸೆ ಮಿಂಚುತ್ತಿದ್ದಂತೆ ಭಾಸವಾಗುತ್ತದೆ. ಕೆಮ್ಮು ಬಂದಾಗೆಲ್ಲ ಸಿಂಗ್ ಮತ್ತೊಂದು ಬೀಡಿಗಾಗಿ ಅಂಗಿ ಕಿಸೆ ತಡಕಾಡುತ್ತಾನೆ. ಕೆಮ್ಮು ತಡೆಯಲು ಬೀಡಿಯ ಹೊರತು ಅನ್ಯಮಾರ್ಗವಿಲ್ಲ ಎಂದು ಸಮರ್ಥಿಸಿಕೊಳ್ಳುತ್ತಾನೆ.

ಈ ಸುದೀರ್ಘ ಕ್ಷಾಮದ ಏಳನೆಯ ವರ್ಷದ ಒಂದು ದಿನ ಪಕ್ಕದ ಜೈತ್‌ಸಿಂಗ್‌ನ ಖಾಲಿ ಮನೆ ದುರಸ್ತಿ ಮಾಡಲು ಅಪರಿಚಿತರು ಬಂದದ್ದು ಮೋಟ್‌ಸಿಂಗ್ ಗಮನಕ್ಕೆ ಬಂತು. ಅವರಲ್ಲಿ ಇಬ್ಬರು ಗಂಡಸರು ಹಾಗೂ ಓರ್ವ ಹೆಣ್ಣುಮಗಳಿದ್ದಳು. ಕಲ್ಲು ಹಾಗೂ ಮಣ್ಣಿನಿಂದ ಕಟ್ಟಿದ, ಎರಡು ಕೊಠಡಿಗಳ ಜೈತ್‌ಸಿಂಗ್ ಮನೆ ಶಿಥಿಲಾವಸ್ಥೆ ತಲುಪಿತ್ತು. ಆದ ಕಾರಣ ಜೈತ್‌ಸಿಂಗ್ ತನ್ನ ಹೊಲದಲ್ಲಿಯೇ ಗುಡಿಸಲು ಕಟ್ಟಿಕೊಂಡು ವಾಸವಾಗಿದ್ದ. ಜೈತ್‌ಸಿಂಗ್‌ನ ಮನೆಗೆ ಆಗಮಿಸಿದ ಆಗಂತುಕರ ಬಗ್ಗೆ ಚಹಾ ಅಂಗಡಿಯಲ್ಲಿ ಗುಸುಗುಸು ಕೇಳಿಬರುತ್ತಿತ್ತು.

ಬಂದ ಆಗಂತುಕರಲ್ಲಿ ಓರ್ವನಾದ ಶಂಕರ್‌ಸಿಂಗ್, ಜೈತ್‌ಸಿಂಗ್ ಪತ್ನಿಯ ಸೋದರ ಸಂಬಂಧಿಯೆಂದೂ, ಮುಖ್ಯರಸ್ತೆಯಿಂದ ಪೂರ್ವಕ್ಕೆ ೨೫ ಕಿ.ಮೀ ದೂರದಲ್ಲಿನ ತನ್ನ ಸ್ವಗ್ರಾಮದಿಂದ ಈತ,ಇಲ್ಲಿಗೆ ಆಗಮಿಸಿದ್ದಾನೆಂದೂ ಗೊತ್ತಾಯಿತು. ಪಟ್ಟಣದವರಂತೆ ಶಂಕರ್ ಜೀನ್ಸ್ ಪ್ಯಾಂಟ್ ಹಾಗೂ ಶರ್ಟ್ ಧರಿಸಿದ್ದ. ಮೋಟ್‌ಸಿಂಗ್ ಮಗನೂ ಹೀಗೆ ಇದ್ದ.

ಬರೋಡಾದಲ್ಲಿ ಕೆಲಸ ಮಾಡುತ್ತಿದ್ದ ಆತ, ತನ್ನ ಬಹುಪಾಲು ಸಮಯವನ್ನು ಅಮಿತಾಬ್ ಬಚ್ಚನ್‌ನಂತೆ ಕಾಣಲು ಕೂದಲು ತಿದ್ದಿತೀಡುವುದರಲ್ಲಿಯೇ ಕಳೆಯುತ್ತಿದ್ದ.

ಇನ್ನು ಶಂಕರನೊಟ್ಟಿಗೆ ಬಂದ ಮತ್ತೊಬ್ಬ ಯುವಕ ಹಾಗೂ ಹೆಣ್ಣುಮಗಳನ್ನು ಗುರುತಿಸುವುದು ಕಷ್ಟವಾಗಿತ್ತು. ಯುವಕನ ಹೆಸರು ನಿಖಿಲ್; ಈತನೂ ಶಂಕರನಂತಯೇ ತೆಳ್ಳಗೆ, ಮಧ್ಯಮ ಎತ್ತರದವನಾಗಿದ್ದ. ಈತನ ಬಣ್ಣ ಹಾಗೂ ಆಕಾರದಿಂದ 'ಹೊರಗಿನವ' ಎಂದು ಸ್ಪಷ್ಟವಾಗಿ ಗೊತ್ತಾಗುತ್ತಿತ್ತು. ನಿಖಿಲ್ ದೆಹಲಿಯಿಂದ ಬಂದವನೆಂದು ಅವರು ಹೇಳಿದ್ದರು. ಆದರೆ ಈತನ ನಡೆ–ನುಡಿ ಶಹರದ ಗಣ್ಯವ್ಯಕ್ತಿಗಳಂತೆ ಇರಲಿಲ್ಲ.

ಈ ಗುಂಪಿನಲ್ಲಿ ಪುಟಿಯುವ ಚೈತನ್ಯದ, ಬಳುಕುವ ಬೆಹೆನ್‌ಜಿ ಮಾತ್ರ ಹೆಚ್ಚು ನಿಗೂಢವಾಗಿ ಕಾಣಿಸುತ್ತಿದ್ದಳು. ಸ್ಥಳೀಯರೊಂದಿಗೆ ಅವರದೇ ಭಾಷೆಯಲ್ಲಿ ಸುಲಭವಾಗಿ ಮಾತಾಡುತ್ತಿದ್ದ ಈಕೆಗೆ, ಅಲ್ಲಿನ ಜನರ ನಡಾವಳಿಕೆಗಳ ಪರಿಚಯವಿದ್ದಂತೆ ತೋರುತ್ತಿತ್ತು. ನೂಲಿನ ಸೀರೆ ಉಡುವ ಈಕೆಯನ್ನು ನೋಡಿದರೆ ಶಿಕ್ಷಕಿಯೋ ಅಥವಾ ವೈದ್ಯೆಯೋ ಎನ್ನಿಸುತ್ತಿತ್ತು. ಆದರೆ ಅವಳ ವ್ಯಕ್ತಿತ್ವ ಅಸಾಮಾನ್ಯವಾದ ಉದ್ದೇಶ ಹಾಗೂ ಆತ್ಮವಿಶ್ವಾಸವನ್ನು ಸಾರುತ್ತಿತ್ತು. ಒಂದಾನೊಂದು ಕಾಲದಲ್ಲಿ ಈಕೆ ಎಲ್ಲೋ ಜಿಲ್ಲಾಧಿಕಾರಿಯಾಗಿದ್ದಳೆಂದು ಟೀ ಅಂಗಡಿಯಲ್ಲಿ ಮಾತನಾಡಿಕೊಳ್ಳಲಾಗುತ್ತಿತ್ತು. ಆದರೆ ಇಂಥ ಗಾಳಿಸುದ್ದಿಗೆ ಯಾವ ಅರ್ಥವೂ ಇರಲಿಲ್ಲ. ಯಾಕೆಂದರೆ ಜಿಲ್ಲಾಧಿಕಾರಿಗಳಾದವರು ಎಂದೂ ಬಸ್‌ನಲ್ಲಿ ಪ್ರಯಾಣಿಸುವುದಿಲ್ಲ. ಇನ್ನು ಕಾಲ್ನಡಿಗೆಯಂತೂ ದೂರದ ಮಾತೇ ಸರಿ. ಅವರು ಪ್ರಯಾಣಿಸುವುದೇನಿದ್ದರೂ ಜೀಪಿನಲ್ಲಿಯೇ. ಕಲ್ಲು ಮತ್ತು ಮಣ್ಣಿನಿಂದ ಕಟ್ಟಿದ ಮನೆಗಳುಳ್ಳ ಈ ದೇಶದ ಸಾವಿರಾರು ಗ್ರಾಮಗಳಲ್ಲಿ ಒಂದಾದ ಇಲ್ಲಿಗೆ ಬಂದು ಆಕೆ ಏನು ಮಾಡಬಹುದೆಂಬುದೇ ಸ್ಥಳೀಯರ ಕುತೂಹಲಕ್ಕೆ ಕಾರಣವಾಗಿತ್ತು.

ಈ ಕುತೂಹಲ ಮತ್ತಷ್ಟು ಹೆಚ್ಚುವ ಮುನ್ನವೇ ಮೋಟ್‌ಸಿಂಗ್ ತನ್ನ ಮನೆಯ ಪಕ್ಕದ ಬಯಲಿನಿಂದ ನಿಧಾನಕ್ಕೆ ನಡೆದುಕೊಂಡು ಬಂದ. ಅಲ್ಲಿದ್ದ ಬೇವಿನ ಮರವನ್ನು ದಾಟಿಕೊಂಡು ಆ ಮೂವರು ಆಗಂತುಕರು ಜೈತ್‌ಸಿಂಗ್ ಮನೆಯಲ್ಲಿಯೇ ಮತ್ತೊಂದು ಕೋಣೆ ನಿರ್ಮಿಸುತ್ತಿದ್ದ ಸ್ಥಳಕ್ಕೆ ಬಂದ.

ಅಪರಿಚಿತರನ್ನು ನೋಡುವ ಕುತೂಹಲದಿಂದ ಆಗಲೇ ಅಲ್ಲಿ ಹಲವಾರು ಮಕ್ಕಳು ಸೇರಿದ್ದರು. ಈ ಚಿಕ್ಕ ಮಕ್ಕಳ ಗುಂಪಿನಿಂದ ತುಸು ದೂರದಲ್ಲಿ ನಿಂತಿದ್ದವನೇ ಹದಿವಯಸ್ಸಿನ ಹುಡುಗ ನಾರಾಯಣ. ಈತ ತನ್ನ ಚಿಕ್ಕಪ್ಪ ಮೋಟ್‌ಸಿಂಗ್‌ನನ್ನು ಅನುಸರಿಸಿ ಕಾಂಪೌಂಡ್ ಒಳಗೆ ಬಂದ. ಈಗಿರುವ ಮನೆಯ ಬಲ ಮೂಲೆಗಳಿಗೆ ಹೊಂದಿಕೊಂಡಂತೆಯೇ ಆಗಂತುಕರು ಮತ್ತೊಂದು ಕೊಠಡಿ ನಿರ್ಮಿಸುತ್ತಿದ್ದರು. ಇದು ಅಡುಗೆ ಕೋಣೆ ಎಂದು ಅವರು ಮೋಟ್ ಸಿಂಗ್‌ಗೆ ಹೇಳಿದರು. ಮನೆಯ ಉಳಿದ ಕೋಣೆಗಳಂತೆಯೇ ಈ ಕೋಣೆಯ ನಿರ್ಮಾಣಕ್ಕೂ ಪಕ್ಕದ ಗುಡ್ಡದ ಬುಡದಿಂದ ತಂದ ಕಲ್ಲುಗಳನ್ನು ಬಳಸಲಾಗಿತ್ತು. ಮರಳು ಹಾಗೂ ಮಣ್ಣು ಮಿಶ್ರಣದಿಂದ ಕಲ್ಲಿನ ಗೋಡೆ ಕಟ್ಟಲಾಗಿತ್ತು. ಮಣ್ಣಿನಿಂದ ಪ್ಲಾಸ್ಟರ್ ಮಾಡಿದ ಗೋಡೆಗೆ ಜೇಡಿಮಣ್ಣು, ಸಗಣಿ ಹಾಗೂ ಹೊಟ್ಟಿನ ಮಿಶ್ರಣ ಲೇಪಿಸಲಾಗಿತ್ತು.

ಗೋಡೆ ಕಟ್ಟುವ ಈ ವಿಧಾನ ಮೋಟ್‌ಸಿಂಗ್‌ಗೆ ಚೆನ್ನಾಗಿ ಗೊತ್ತು. ಮನೆಯ ಕಾಂಪೌಂಡ್‌ನ ಪೂರ್ವ ಭಾಗದ ಗೋಡೆಯ ಸರಹದ್ದಿನಲ್ಲಿ ಈ ಅಪರಿಚಿತರು ನೆಟ್ಟಬಿದಿರು ಸಸಿ ಹಾಗೂ ಗುಲ್‌ಮೊಹರ್ ಗಿಡ ಎದ್ದು ಕಾಣುತ್ತಿತ್ತು. ಹೀಗೆ ಆರಂಭಗೊಂಡ ಮೋಟ್‌ಸಿಂಗ್ ಹಾಗೂ ಈ ಅಪರಿಚಿತರ ನಡುವಿನ ಗೆಳೆತನ ಮೋಟ್‌ಸಿಂಗ್‌ನ ಕೊನೆಯ ದಿನಗಳ ತನಕವೂ ಮುಂದುವರೆದಿತ್ತು. ಅಲ್ಲದೆ ನಾರಾಯಣನ ಬದುಕನ್ನೂ ರೂಪಿಸಿತು. ಅಪರಿಚಿತರು ನೆಟ್ಟ ಬಿದಿರಿನ ಸಸಿ ಹಾಗೂ ಗುಲ್‌ಮೊಹರ್ ಗಿಡ, ಬೆಳೆದು ದೊಡ್ಡದಾಗಿ ತಂಗಾಳಿಗೆ ತೊನೆಯುವುದನ್ನು ನೋಡುವ ಅದೃಷ್ಟ ಮೋಟ್‌ಸಿಂಗ್‌ಗೆ ಇತ್ತು. ಅಲ್ಲಿಯವರೆಗೂ ಆತ ಬದುಕಿದ್ದ. ನೋಡನೋಡುತ್ತಿದ್ದಂತೆಯೇ ಗುಲ್‌ಮೊಹರ್ ಹೂ ಬಿಟ್ಟು ಕಂಗೊಳಿಸುತ್ತಾ ಈ ಮನೆಯನ್ನು ಗುರುತಿಸುವಂತಾಯಿತು. ದೇವದೂಂಗ್ರಿಯ ಈ ಮನೆಗೆ ಬರುತ್ತಿದ್ದವರಿಗೆ ಅದು ಸಹಾಯಕವೂ ಆಯಿತು.

ಅರುಣಾ: ಗ್ರಾಮೀಣ ಕಾಯಕರ್ತೆಯಾದ ಐಎಎಸ್ ಅಧಿಕಾರಿ

ಅದು ೧೯೬೯ನೆಯ ಇಸವಿ. ಅಂದಿನ ರಾಷ್ಟ್ರಪತಿ ವಿ.ವಿ.ಗಿರಿ ವೆಲ್ಲೂರಿಗೆ ಅಧಿಕೃತ ಭೇಟಿ ನೀಡಲಿದ್ದರು. ರಾಷ್ಟ್ರಪತಿಯವರು ತಮ್ಮ ಅಧಿಕೃತ ಕರ್ತವ್ಯ ನಿರ್ವಹಿಸುತ್ತಿರುವಾಗ ಅವರ ಶ್ರೀಮತಿ ವೆಲ್ಲೂರಿನಲ್ಲಿ ಸೀರೆ ಖರೀದಿಸಬೇಕೆಂದಿದ್ದರು. ಇವರಿಗೆ ಸಹಾಯ ಮಾಡುವ ಜವಾಬ್ದಾರಿಯನ್ನು ಅಲ್ಲಿದ್ದ ಅತ್ಯಂತ ಕಿರಿಯ ಹಾಗೂ ಏಕೈಕ ಮಹಿಳಾ ಐಎಎಸ್ ಅಧಿಕಾರಿ ಅರುಣಾ ರಾಯ್ ಅವರಿಗೆ ವಹಿಸಲಾಗಿತ್ತು. ರೇಷ್ಮೆ ಸೀರೆಯಲ್ಲಿ ಕಂಗೊಳಿಸುತ್ತಿದ್ದ ಶ್ರೀಮತಿ ಗಿರಿಯವರಿಗೆ ಪ್ರವಾಸದ ನಡುವೆ ಏನನ್ನಾದರೂ ಖರೀದಿಸುವ ಹವ್ಯಾಸವಿತ್ತು. ಸರಳ ನೂಲಿನ ಸೀರೆಯುಟ್ಟ ಅರುಣಾರನ್ನು ಅವರು ಆಶ್ಚರ್ಯಚಕಿತರಾಗಿ ನೋಡಿದರು. 'ನೀವು ಯಾಕೆ ಈ ರೀತಿ ಉಡುಪು ಧರಿಸಿದ್ದೀರಿ? ನೀವೇನು ಗಾಂಧೀವಾದಿಯೇ?' ಎಂದು ಮಾರ್ಮಿಕವಾಗಿ ಕೇಳಿದರು ಶ್ರೀಮತಿ ಗಿರಿ. ಯಾವುದೇ ಹಣೆಪಟ್ಟಿಕಟ್ಟಿಕೊಳ್ಳಲು ಬಯಸದ ಅರುಣಾ ನಸುನಕ್ಕು, 'ನನಗೆ ನೂಲಿನ ಸೀರೆ ಇಷ್ಟ' ಎಂದು ಉತ್ತರಿಸಿದರು.

ಈ ರೀತಿ ಹಣೆಪಟ್ಟಿಗಳು ಅರುಣಾರನ್ನು ಬೆನ್ನಟ್ಟಿಕೊಂಡೇ ಬಂದವು. ಆದರೆ ಐಎಎಸ್ ತರಬೇತಿ ಅವಧಿಯಲ್ಲಿ ಅರುಣಾಗೆ ಇವ್ಯಾವುದರ ಬಗ್ಗೆಯೂ ಅರಿವಿರಲಿಲ್ಲ. ಆದರೆ ಕ್ರಮೇಣ ಒಂದೊಂದೇ ಅರ್ಥವಾಗತೊಡಗಿದವು. ಮೊದಲು ಈಕೆಯನ್ನು 'ಬಂಡುಕೋರ ಐಎಎಸ್ ಆಫೀಸರ್' ಎಂದು ಕರೆಯಲಾಯಿತು. ಪರಂಗಿ ಸಂಸ್ಕೃತಿಯ ವಿರುದ್ಧ ಹೋರಾಟ ಮಾಡುತ್ತಾರೆಂಬ ಕಾರಣಕ್ಕೆ 'ಬಂಡಾಯಗಾರ್ತಿ' ಎಂಬ ಹಣೆಪಟ್ಟಿ ಅಂಟಿಸಲಾಯಿತು. ನಂತರ ಈಕೆ 'ಐಎಎಸ್ ಬಿಟ್ಟವಳು; ಸಾಮಾಜಿಕ ಕಾರ್ಯಕರ್ತೆ' ಎಂದು ಹೆಸರಿಸಲಾಯಿತು. ಕೆಲವು ಅಧಿಕಾರಿಗಳು ಅರುಣಾರನ್ನು ಮಾರ್ಕ್ಸ್‌ವಾದಿ ಎಂದರೆ, ಮಾರ್ಕ್ಸ್‌ವಾದಿಗಳು ಸುಧಾರಣಾವಾದಿ ಎನ್ನತೊಡಗಿದರು. ಅರುಣಾರ ಅಡ್ಡಹೆಸರು 'ರಾಯ್' ಎಂದು ಇದ್ದದ್ದರಿಂದಲೂ, ಆಕೆ ದೇವದೂಂಗ್ರಿ ಜನರ ಭೂ ಒಡೆತನದ ಹಕ್ಕು ಪ್ರತಿಪಾದಿಸಿದರು ಎಂಬ ಕಾರಣದಿಂದಕ್ಕೋ ಜಿಲ್ಲಾ ಪೊಲೀಸ್ ಅಧಿಕಾರಿಗಳು ಈಕೆಯನ್ನು 'ನಕ್ಸಲೈಟ್' ಎಂದು ಗುರುತಿಸಿದರು. ಹೀಗೆ

ಹಣೆಪಟ್ಟಿ ಬೆಳೆಯುತ್ತಲೇ ಹೋಯಿತು. ಈ ಯಾವ ಹಣೆಪಟ್ಟಿಗಳೂ ಅರುಣಾರ ಹುಡುಕಾಟದ ಸತ್ಯವನ್ನು ಲವಲೇಶದಷ್ಟೂ ತಿಳಿಯಗೊಡಲಿಲ್ಲ. ಈಕೆಯ ಹೊರರೂಪವನ್ನಾಧರಿಸಿ ಈ ಎಲ್ಲ ಹಣೆಪಟ್ಟಿಗಳು ಮೈದಾಳಿದ್ದವು. ತಮ್ಮ ೨೧ನೆಯ ವಯಸ್ಸಿನಲ್ಲಿ ಮೊದಲ ಬಾರಿ ಐಎಎಸ್ ಅಧಿಕಾರಿಯಾಗಿ ನೇಮಕೊಂಡಿದ್ದು ಹಾಗೂ ದೇವದೂಂಗ್ರಿಯ ಜೈತ್‌ಸಿಂಗ್‌ನ ಈ ಮನೆಗೆ ಆಗಮಿಸಿದ್ದು–ಈ ಎರಡು ಘಟ್ಟಗಳ ನಡುವೆ ಅರುಣಾ ಸುದೀರ್ಘ ೨೦ ವರ್ಷ ಕಳೆದಿದ್ದಾರೆ. ಐಎಎಸ್ ಸಾಮಾಜಿಕ ನ್ಯಾಯಕ್ಕಾಗಿ ಕೆಲಸ ಮಾಡಲು ಇರುವ ಏಕೈಕ ಮಾರ್ಗ ಎಂಬ ಭಾವನೆಯಿಂದ ಅರುಣಾ ಐಎಎಸ್ ಸೇರಿದ್ದರು. ಐಎಎಸ್ ದೇಶವನ್ನು ಸ್ವಾವಲಂಬನೆಯತ್ತ ಕೊಂಡೊಯ್ಯುವ ಶಕ್ತಿ ಎಂದು ೬೦ ದಶಕದ ಉತ್ತರಾರ್ಧದಲ್ಲಿ ಜನ ಭಾವಿಸಿದ್ದರು. ಐಎಎಸ್ ಪ್ರೊಬೆಷನರಿಯಾಗಿ ಜಿಲ್ಲೆಗೆ ಆಗಮಿಸಿದ ಕೆಲವೇ ವಾರಗಳಲ್ಲಿ ಇಂಥ ಆದರ್ಶಗಳೆಲ್ಲ ಕೇವಲ ಭ್ರಮೆ ಎಂಬುದು ಅರುಣಾಗೆ ಅರಿವಾಯಿತು. ಕೆಲವೊಂದು ಪಟ್ಟಭದ್ರ ಹಿತಾಸಕ್ತಿಗಳೊಂದಿಗೆ ಹೆಣಗಬೇಕಾದ ಸಂದರ್ಭದಲ್ಲೆಲ್ಲ ಈ ಹೊಸ ಅಧಿಕಾರಿಗೆ ಆತಂಕವಾಗುತ್ತಿತ್ತು. ಐಎಎಸ್ ಸೇವೆ ಎನ್ನುವುದು ಸಂವಿಧಾನವನ್ನು ಕರಾರುವಾಕ್ಕಾಗಿ ಅಥವಾ ನಿಜವಾದ ಅರ್ಥದಲ್ಲಿ ಅನುಷ್ಠಾನಗೊಳಿಸಲಿಕ್ಕಲ್ಲ; ಕೇವಲ ಅಧಿಕಾರ ಕೇಂದ್ರಗಳ ಸ್ವಹಿತಾಸಕ್ತಿ ಕಾಪಾಡಲು ನೆರವಾಗುವಂತಹುದು ಎಂಬ ಸತ್ಯ ಅರುಣಾಗೆ ಶೀಘ್ರದಲ್ಲಿಯೇ ತಿಳಿದುಹೋಯಿತು. ಸಾಕ್ಷರತೆ, ಆರೋಗ್ಯ ಹಾಗೂ ಕುಟುಂಬ ಕಲ್ಯಾಣದಂಥ ಕ್ಷೇತ್ರಗಳಲ್ಲಿ ಮಾಡುವ ಒಳ್ಳೆಯ ಕೆಲಸ ತಲತಲಾಂತರದಿಂದ ಬಂದ ಇಂಥ ದೋಷಗಳಿಗೆ ಪರಿಹಾರವಾಗಲಾರದು. ಅಧಿಕಾರದಲ್ಲಿ ಇದ್ದುಕೊಂಡೇ ಇಂಥ ವ್ಯವಸ್ಥೆಗೆ ಸವಾಲೆಸೆಯುವುದು ತನ್ನನ್ನು ತಾನು ತೊಂದರೆಗೀಡು ಮಾಡಿಕೊಂಡಂತೆ. ಅಲ್ಲದೇ ಅದು ಯಶಸ್ವಿಯಾಗುವ ಸಾಧ್ಯತೆಯೂ ಕಡಿಮೆ ಎಂಬ ಅಂಶ ಅರುಣಾಗೆ ಮನವರಿಕೆಯಾಯಿತು.

ಐಎಎಸ್ ಆದ ಏಳು ವರ್ಷಗಳ ಬಳಿಕ ಆಕೆ ಸೇವೆಗೆ ರಾಜಿನಾಮೆ ನೀಡಿದರು. ಇದು ಕೆಲಸಕ್ಕೆ ನೀಡಿದ ರಾಜಿನಾಮೆಗಿಂತ ಮಿಗಿಲಾಗಿ, ಅದು ಕೊಡುವ ಸುಖ ಸಂತೋಷಗಳಿಗೆ ನೀಡಿದ ತಿಲಾಂಜಲಿಯಾಗಿತ್ತು. ಮಧ್ಯಮ ವರ್ಗದ ಹಿಂಜರಿಕೆಗಳಿಗೆ ಹೇಳಿದ ವಿದಾಯವಾಗಿತ್ತು. ಸಾಮಾಜಿಕ ಸಂಘರ್ಷ ಹಾಗೂ ಸಾರ್ವಜನಿಕ ಟೀಕೆಗೆ ಗುರಿಯಾದೊಡನೆಯೇ ಹಿಂದಕ್ಕೆ ಸರಿಯುವ ಮಧ್ಯಮ ವರ್ಗದ ರೂಢಿಗತ ಮತ್ತು ವಿಚಿತ್ರ ವಿನಯವಂತಿಕೆಗೆ ಕೊನೆಯ ನಮಸ್ಕಾರವೂ ಆಗಿತ್ತು. ಅರುಣಾ ಸರ್ಕಾರಿ ಉದ್ಯೋಗಕ್ಕಿಂತ ಹೊರತಾದ ಬದುಕಿನ ಅನ್ವೇಷಣೆಗೆ ತೊಡಗಿದರು.

ಮುಂದಿನ ೧೦ ವರ್ಷಗಳಲ್ಲಿ ಅರುಣಾ, ಜೈಪುರ ಹಾಗೂ ಅಜ್ಮೀರ್ ನಡುವಿನ ಟಿಲೋನಿಯಾ ಗ್ರಾಮದಲ್ಲಿರುವ ಸಾಮಾಜಿಕ ಸೇವಾ ಸಂಶೋಧನಾ ಕೇಂದ್ರದ (ಎಸ್‌ಡಬ್ಲುಆರ್‌ಸಿ)ಅನಿವಾರ್ಯ ಭಾಗವಾಗಿ ಹೋದರು. ಸುತ್ತಲಿನ ಪ್ರದೇಶದಲ್ಲಿ 'ಸೆಂಟರ್' ಎಂದೇ ಗುರುತಿಸಲಾಗುವ ಈ ಸಂಸ್ಥೆಯನ್ನು ೧೯೭೨ರಲ್ಲಿ ಬಂಕರ್ ರಾಯ್ ಎನ್ನುವವರು ಸ್ಥಾಪಿಸಿದ್ದರು. ಆಗ ಸ್ವಯಂ ಸೇವಾ ಸಂಸ್ಥೆ (ನಾನ್ ಗವರ್ನಮೆಂಟ್ ಆರ್ಗನೈಸೇಷನ್) ಶಬ್ದ ಚಾಲ್ತಿಯಲ್ಲಿ ಇರಲಿಲ್ಲ. ದೆಹಲಿಯ ಇಂದ್ರಪ್ರಸ್ಥ ಕಾಲೇಜು ವಿದ್ಯಾರ್ಥಿನಿಯಾಗಿದ್ದ

ಸಂದರ್ಭದಲ್ಲಿ ಅರುಣಾ ಸೇಂಟ್ ಸ್ಟೀಫನ್ಸ್ ಕಾಲೇಜಿನಲ್ಲಿ ಓದುತ್ತಿದ್ದ ಬಂಕರ್‌ರನ್ನು ಭೇಟಿಯಾದರು. ೧೯೭೦ರಲ್ಲಿ ಐಎಎಸ್ ಸೇರಿದ ಸಮಯದಲ್ಲಿಯೇ ಅರುಣಾ ಬಂಕರ್‌ರನ್ನು ವಿವಾಹವಾದರು.

ಬಂಕರ್ ೮೦ರ ದಶಕದ ಮಧ್ಯಭಾಗದಲ್ಲಿ 'ಎನ್‌ಜಿಒ'ಕಾರ್ಯವೈಖರಿಯನ್ನು ತಿಳಿದುಕೊಂಡಿದ್ದು ಮಾತ್ರವಲ್ಲ; ಯೋಜನಾ ಆಯೋಗದ ಸಲಹೆಗಾರರೂ ಆಗಿದ್ದರು. ಈ ನಡುವೆ ಅರುಣಾ ತಮ್ಮ ಕೆಲವು ಉದ್ದೇಶಗಳನ್ನು ಕಂಡುಕೊಂಡಿದ್ದರು. ಶ್ರೇಣೀಕೃತ ವ್ಯವಸ್ಥೆಯ ಕೆಳಸ್ತರದ ಜನರನ್ನು ಕೇವಲ ಕಡತದೊಳಗಿನ ಅಂಕಿಅಂಶಗಳು ಎಂದು ಭಾವಿಸದೆ ಅವರೊಟ್ಟಿಗೆ ಕೆಲಸ ಮಾಡುವುದರಲ್ಲಿ ಯಶಸ್ವಿಯಾದರು. ಆ ಮೂಲಕ ಆಕೆಗೆ ಸಾಮಾಜಿಕ ಹಾಗೂ ಆರ್ಥಿಕ ವಾಸ್ತವಗಳನ್ನು ಅರಿಯಲು ಸಾಧ್ಯವಾಯಿತು.

ಎಸ್‌ಡಬ್ಲುಆರ್‌ಸಿ–ಟಿಲೋನಿಯಾದ ಬಹುತೇಕ ಜನರ ಜೀವನಮಟ್ಟವನ್ನು ಸುಧಾರಿಸಿತು. ಕೆಲವರಿಗೆ ಹೊಸ ಅವಕಾಶಗಳನ್ನು ತೆರೆಯಿತು. ಕೇವಲ ಹತ್ತು ವರ್ಷಗಳಲ್ಲಿ ಸಂಸ್ಥೆಯಲ್ಲಿ ಸ್ಥಳೀಯರೇ ಹೆಚ್ಚಾಗಿ ಸೇರಿಕೊಂಡರು. ಅವರಾರೂ ಪಟ್ಟಣದ ಮೇಲ್‌ಮಧ್ಯಮ ವರ್ಗದವ–ರಾಗಿರಲಿಲ್ಲ. ಆದರೂ ಈ ಸಂಸ್ಥೆ ಸರ್ಕಾರಿ ಯಂತ್ರಕ್ಕೆ ಸಮಾನಾಂತರವಾಗಿಯೇ ಕೆಲಸ ನಿರ್ವಹಿಸುತ್ತಿತ್ತು. ಕೆಲವೊಮ್ಮೆ ಆಡಳಿತಶಾಹಿಗೆ ನೆರವಾಗುತ್ತಿದ್ದರೆ, ಮತ್ತೆ ಕೆಲವೊಮ್ಮೆ ಸರ್ಕಾರಕ್ಕೇ ಸವಾಲು ಹಾಕುತ್ತಿತ್ತು. ಆದರೆ ಇದು ದೊಡ್ಡ ಪ್ರಮಾಣದಲ್ಲಿ ಜನರನ್ನು ಸಬಲರನ್ನಾಗಿಸಲು ವಿಫಲವಾಯಿತು. ಎಸ್‌ಡಬ್ಲುಆರ್‌ಸಿ ಕ್ಯಾಂಪಸ್‌ನಲ್ಲಿ ಎಷ್ಟೇ ಸರಳ ಜೀವನ ಪದ್ಧತಿ ಇದ್ದರೂ ಅದು ಒಂದು ರೀತಿಯ ಕೃತಕ ಹಾಗೂ ವಿಶೇಷಾಧಿಕಾರವುಳ್ಳ ಸಮುದಾಯ ಎನ್ನಿಸಿಬಿಡುತ್ತಿತ್ತು. ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು ದೇಶದೆಲ್ಲೆಡೆ ಇರುವ ಅಸಮಾನತೆ ಹಾಗೂ ಅನ್ಯಾಯಗಳನ್ನು ಬದಲಿಸಿಲ್ಲ ಎನ್ನುವುದು ಅರುಣಾಗೆ ಮನವರಿಕೆಯಾಯಿತು. ಗ್ರಾಮೀಣಾಭಿವೃದ್ಧಿಗೆ ಸ್ಥಳೀಯ ಮಟ್ಟದಲ್ಲಿ ಪರ್ಯಾಯಗಳನ್ನು ರೂಪಿಸುತ್ತಿರುವ ಸ್ವಯಂಸೇವಾ ಸಂಸ್ಥೆಗೆ ಖಂಡಿತವಾಗಿಯೂ ಹೋರಾಟಕ್ಕೆ ಜನರನ್ನು ಸಂಘಟಿಸುವುದು ಸಾಧ್ಯವಿಲ್ಲ ಎನ್ನುವುದೂ ಆಕೆಗೆ ಗೊತ್ತಿತ್ತು. ಇಲ್ಲಿ ಕೆಲಸ ಮಾಡುವ ಜನ ಕಲಿಯಬಹುದು; ಬೆಳೆಯಬಹುದು. ಆದರೆ ಹೋರಾಟದ ರಾಜಕಾರಣವನ್ನಾಗಲೀ, ಸುಸ್ಥಿರ ಪ್ರತಿಭಟನೆಯನ್ನಾಗಲೀ ಹುಟ್ಟುಹಾಕಲಾರರು. ಈ ನೆಲದ ವಾಸ್ತವ ರಾಜಕಾರಣವನ್ನು ಅರ್ಥಮಾಡಿಕೊಳ್ಳದ ಹಾಗೂ ಲೆಕ್ಕಕ್ಕೆ ತೆಗೆದುಕೊಳ್ಳದ ಕಾರಣ ಸುತ್ತಲಿನ ಎಲ್ಲ ಅಭಿವೃದ್ಧಿ ಕಾರ್ಯಕ್ರಮಗಳು ಸೋತಿವೆ. ಸಾಮಾಜಿಕ ಬದಲಾವಣೆಯ ಪ್ರಯತ್ನ ಜನರಿಂದಲೇ ಅಂತಃಸತ್ವ ಪಡೆಯಬೇಕೆನ್ನುವುದು ಅರಿವಾಗಿದ್ದೇ ತಡ ಗ್ರಾಮೀಣ ಸಮುದಾಯದೊಂದಿಗೆ ಬದುಕುತ್ತಲೇ ಅವರ ಉದ್ಧಾರಕ್ಕಾಗಿ ಕೆಲಸ ಮಾಡಬೇಕೆನ್ನುವ ಬಯಕೆ ಅರುಣಾರಲ್ಲಿ ಹುಟ್ಟಿತು. ೧೯೮೩ರಲ್ಲಿ ಎಸ್‌ಡಬ್ಲುಆರ್‌ಸಿಯಲ್ಲಿನ ಅಧಿಕೃತ ಉದ್ಯೋಗವನ್ನು ತೊರೆದ ಆಕೆ ಮುಂದಿನ ನಾಲ್ಕು ವರ್ಷಗಳ ಕಾಲ ತಮ್ಮ ಕನಸುಗಳನ್ನು ಸಾಕ್ಷಾತ್ಕರಿಸಿಕೊಳ್ಳುವ ಪ್ರಯತ್ನದಲ್ಲಿ ಕಳೆದರು.

ಶಂಕರ್: ಸುಪ್ತ ಪ್ರತಿಭೆಯ ಆತ್ಮಸಾಕ್ಷಾತ್ಕಾರ

ಮೋಟ್‌ಸಿಂಗ್‌ನಂತೆಯೇ ಶಂಕರ್‌ಸಿಂಗ್ ಕೂಡ ಈ ಡಾಂಬರು ರಸ್ತೆಯನ್ನು ಸವೆಸಿದವನೆ. ಇದೇ ಹೆದ್ದಾರಿಯಲ್ಲಿ ದೇವದೂಂಗ್ರಿಗಿಂತ ಮುಂದೆ ಸುಮಾರು ೨೫ ಕಿ.ಮೀ ದೂರದಲ್ಲಿರುವ ಲೋಟಿಯಾನಾ ಗ್ರಾಮದಲ್ಲಿ ಶಂಕರನ ತಾಯಿ,(ವಿಧವೆ) ಒಂದು ತುಂಡು ಭೂಮಿಯಲ್ಲಿ ಬೇಸಾಯ ಮಾಡುತ್ತಿದ್ದಳು. ಆಕೆ ತನ್ನ ಏಕೈಕ ಪುತ್ರ ಶಂಕರ್‌ಗೆ ೧೯೭೦ರಲ್ಲಿ ಮದುವೆ ಮಾಡಿದಳು. ಆಗ ಶಂಕರ್ ಇನ್ನೂ ಹದಿಹರೆಯದ ಹುಡುಗ. ಇದ್ದ ತುಂಡು ಭೂಮಿಯಲ್ಲಿ ತಾಯಿ–ಮಗನ ಹೊಟ್ಟೆಪಾಡು ನಡೆಯುವುದೇ ಕಷ್ಟಕರವಾದಾಗ ಶಂಕರ್ ತನ್ನ ಹೆಂಡತಿ ಆನ್ನಿ ಮತ್ತು ಮುಂದೆ ಹುಟ್ಟುವ ಮಕ್ಕಳನ್ನು ಆತ ಹೇಗೆ ತಾನೆ ಸಾಕಬಲ್ಲ? ಹಾಗಾಗಿ ಆತ ತನ್ನ ಹೆಂಡತಿಯನ್ನು ಆಕೆಯ ತವರಿನಲ್ಲಿಯೇ ಬಿಟ್ಟು, ದೂರದ ಅಹಮದಾಬಾದ್ ಹಾಗೂ ಬರೋಡಾ ಕಡೆ ಮುಖಮಾಡಿದ.

ಶಂಕರ್ ಅನಾಮಿಕನಾಗಿರಲು ವಿಧಿ ಬಿಡಲಿಲ್ಲ. ಬರೋಡಾ ಸ್ಟೇಷನ್‌ನಲ್ಲಿ ಬಿಸಿ ಪಕೋಡಾ ಮಾರುತ್ತಿದ್ದ ಆತನ ಗಾಡಿ ಬಹುಸಮಯದವರೆಗೆ ಆತನ್ನು ಮುನ್ನಡೆಸಲಿಲ್ಲ. ಟನ್‌ಗಟ್ಟಲೆ ಸೇವ್ ಕರಿಯುವ 'ನವ್‌ಕೀನ್' ಫ್ಯಾಕ್ಟರಿಯಲ್ಲಿಯೂ ಆತ ಬಹುದಿನಗಳ ತನಕ ಉಳಿಯಲಾಗಲಿಲ್ಲ.

ಮುಂದೆ ಎಲ್ಲಿಗೆ? ಎಂಬುದು ಶಂಕರ್‌ಗೂ ಸ್ಪಷ್ಟವಾಗಿ ತಿಳಿದಿರದಿದ್ದರೂ ಅಸಂಖ್ಯಾತ ಪ್ರಶ್ನೆಗಳು ಹಾಗೂ ಸಾಧ್ಯತೆಗಳು ಅವನನ್ನು ಕಾಡುತ್ತಿದ್ದವು. ಆಗಾಗ ಲೋಟಿಯಾನಾಗೆ ಹೋಗಿ ಬರುತ್ತಿದ್ದ ಶಂಕರ್, ಒಮ್ಮೆ ಅಜ್ಮೀರ್ ಅಂಚಿನಲ್ಲಿದ್ದ ಕೋಳಿ ಫಾರಂಗೆ ಸೇರಿಕೊಂಡ. ಕೋಳಿಗಳಿಗೆ ಆಹಾರ ಹಾಕುವುದು, ಅವುಗಳ ಗೂಡುಗಳನ್ನು ಸ್ವಚ್ಛಗೊಳಿಸುವುದು ಹಾಗೂ ಮಾಲೀಕನ ಕೆಲವು ಸಣ್ಣಪುಟ್ಟ ಕೆಲಸ ಮಾಡಿಕೊಡುವುದು ಬಿಟ್ಟರೆ ಶಂಕರ್‌ಗೆ ಸಾಕಷ್ಟು ಸಮಯ ಸಿಗುತ್ತಿತ್ತು. ಆ ಸಮಯದಲ್ಲಿ ಆತ ಅಂಚೆ ತೆರಪಿನ ಶಿಕ್ಷಣದ ಮೂಲಕ ಪದವಿ ಪಡೆದ. ಈ ಎಲ್ಲ ಹಂತದಲ್ಲಿಯೂ ಆತ ಪ್ರಪಂಚದ ಆಗುಹೋಗುಗಳನ್ನು ನೋಡುತ್ತಾ ಕಲಿಯುತ್ತಾ ತನ್ನದೇ ಆದ ತೀರ್ಮಾನಕ್ಕೆ ಬರುತ್ತಿದ್ದ. ಈ ಎಲ್ಲದರ ನಡುವೆ ಶಂಕರ್‌ನ ನಿಜವಾದ ಪ್ರತಿಭೆ ಹೊರಹೊಮ್ಮುವ ಅವಕಾಶವೇ ಇರಲಿಲ್ಲ. ವಿಧಿ ಅವನನ್ನು ಟಿಲೋನಿಯಾದ ಎಸ್‌ಡಬ್ಲುಆರ್‌ಸಿಗೆ ಕರೆತಂದಿತು. ಅಲ್ಲಿ ಸುತ್ತಲಿನ ಹಳ್ಳಿಗಳ ಯುವಕರನ್ನೊಳಗೊಂಡ ನಾಟಕ ತಂಡಕ್ಕೆ ಸೇರಿಕೊಂಡ. ಶಂಕರ್‌ಗೆ ತಾನು ಸರಿಯಾದ ಸ್ಥಳಕ್ಕೇ ಬಂದಂಥ ಅನುಭವವಾಯಿತು. ಎಲ್ಲರೊಂದಿಗೆ ಬೆರೆಯುವ ನಡವಳಿಕೆ, ಬುದ್ಧಿವಂತಿಕೆ, ವಾಸ್ತವವನ್ನು ತಮಾಷೆಯಾಗಿ ಗ್ರಹಿಸುವ ಇವನ ಗುಣ ಅಚ್ಚರಿ ಹುಟ್ಟಿಸುತ್ತಿತ್ತು. ಶೀಘ್ರದಲ್ಲಿಯೇ ಎಸ್‌ಡಬ್ಲುಆರ್‌ಸಿ ಸಂವಹನ ತಂಡದಲ್ಲಿ ತನ್ನನ್ನು ಗುರುತಿಸಿಕೊಂಡ. ಈ ತಂಡ ಹಾಡು, ಕುಣಿತ, ಎಲ್ಲರೂ ಬಳಸಲು ಸಾಧ್ಯವಿರುವ ಸರಳವಾದ ಗೊಂಬೆಯಾಟಗಳಲ್ಲದೆ ಹಲವು ಬಗೆಯ ಪ್ರದರ್ಶನಗಳ ಮೂಲಕ ಜನರಿಗೆ ಆರೋಗ್ಯ, ಶಿಕ್ಷಣ, ಪರಿಸರ ಮತ್ತು ರಾಜಕೀಯದ ತಿಳುವಳಿಕೆ ನೀಡುತ್ತಿತ್ತು. ನಗುತ್ತಿರುವಂತೆಯೇ ಜನರನ್ನು ಆಲೋಚನೆಗೆ ಹಚ್ಚುತ್ತಿತ್ತು. ಈ ತಂಡ ರಾಜಸ್ಥಾನದ ಗ್ರಾಮಗಳು, ದೆಹಲಿ ಹಾಗೂ

ಓಲ್ಸೇನ ಫೆಸ್ಟಿವಲ್ ಆಫ್ ಫೂಲ್ಸ್‌ನಲ್ಲಿ ಪ್ರದರ್ಶನ ನೀಡಿದ್ದಲ್ಲದೇ ಲಂಡನ್‌ಗೂ ಪಯಣಿಸಿತು. ಮದುವೆಯಾಗಿ ೧೧ ವರ್ಷಗಳ ನಂತರ ಶಂಕರ್ ಪತ್ನಿ ಆನ್ನಿ ಹಾಗೂ ಇಬ್ಬರು ಹೆಣ್ಣುಮಕ್ಕಳನ್ನು ತಾನಿದ್ದಲ್ಲಿಗೆ ಕರೆಸಿಕೊಂಡ. ಈ ಕುಟುಂಬ ಎಸ್‌ಡಬ್ಲುಆರ್‌ಸಿಗೆ ಬರುವ ವೇಳೆಗಾಗಲೇ ಕವ್ಮೋ ಹಾಗೂ ನೀಲುಗೆ ಒಬ್ಬ ತಮ್ಮನೂ ಬಂದ. ಈತನನ್ನು ವಿಕಾಸ್ ಎಂದು ಕರೆದರು.

ಸಮುದಾಯ ತಂಡದ ಕೆಲಸ ಉತ್ತಮವಾಗಿಯೇ ಇತ್ತು. ಆದರೆ ಅಷ್ಟೇ ಸಾಕಾಗುತ್ತಿರಲಿಲ್ಲ. ಇದು ಸಮಸ್ಯೆಗೆ ಪರಿಹಾರವನ್ನು ಸೂಚಿಸುತ್ತಿತ್ತೇ ಹೊರತೂ ಶಂಕರನಂಥ ಸಾವಿರಾರು ಯುವಕರ ಸಮಸ್ಯೆಯನ್ನು ಪರಿಹಾರಮಾಡುವಂತಿರಲಿಲ್ಲ. ಈ ಯುವಕರು ಕಪ್ಪು ಡಾಂಬರಿನ ರಸ್ತೆಯಲ್ಲಿ ಕೊನೆಕಾಣುವುದರ ಹೊರತು ಅನ್ಯ ಮಾರ್ಗವೇ ಇರಲಿಲ್ಲ. ಗ್ರಾಮದಲ್ಲಿ ಜೀವನೋಪಾಯಕ್ಕೆ ಕೆಲವೇ ಕೆಲವು ಹಾದಿಗಳಿದ್ದವು. ನಗರಪ್ರದೇಶಗಳಲ್ಲಿನ ಕೈಗಾರಿಕಾ ಕೇಂದ್ರಗಳಲ್ಲಿ ಕೂಲಿಯಾಳುಗಳಾಗಿ ಗುಲಾಮಗಿರಿಯ ಹಾಗೂ ಹೊಲಸು ಬದುಕು ಸವೆಸಬೇಕಾಗಿತ್ತು. 'ಸಮಸ್ಯೆಯ ಪರಿಹಾರಗಳಿಗೆ ಕೇವಲ ತೀವ್ರ ತುಡಿತ ಮಾತ್ರವೇ ಸಾಲದು' ಎಂಬುದು ಶಂಕರ್‌ಗೆ ತಿಳಿದಿತ್ತು. ಪ್ರಾಯಶಃ ಜನರೊಂದಿಗೆ ಬದುಕುತ್ತಾ ಕೆಲಸ ಮಾಡುವುದರಿಂದ ಬೇರೆ ದಾರಿಗಳು ತೆರೆದುಕೊಳ್ಳಬಹುದೇನೋ ಎಂದೂ ಅನ್ನಿಸುತ್ತಿತ್ತು. ಈ ಎಲ್ಲದರ ಜತೆಗೆ ಆನ್ನಿಗೆ ತನ್ನ ಸ್ವಂತದ್ದೆನಿಸುವ ಸಾಮಾಜಿಕ ಬದುಕಿಗೆ ಮರಳಬೇಕೆಂಬ ಹಂಬಲ.

ಅದು ಲೋಟಿಯಾನವೇ ಆಗಬೇಕೆಂದೇನೂ ಇಲ್ಲ. ಅಲ್ಲಿನ ನಾಟಕ ಮಂಡಳಿಯಲ್ಲಿ ಕೆಲಸ ಮಾಡುವುದು ಅಸಮಾಧಾನ ತರುತ್ತಿತ್ತು. ಎಲ್ಲಕ್ಕಿಂತಲೂ ಮಿಗಿಲಾಗಿ ಶಂಕರ್‌ಗೆ ನಟನೆ ಕುಲ ಕಸುಬು ಆಗಿರಲಿಲ್ಲ. ಆಗಿನ ಸಂದರ್ಭದಲ್ಲಿ ನಟನೆಯನ್ನು ಅದಕ್ಕೆಂದೇ ಗುರುತಿಸಿರುವ ಜಾತಿಯವರೇ ಮಾಡಬೇಕಿತ್ತು. ಬೇರೆ ಜಾತಿಯವರಿಗೆ ನಟನೆ ನಿಷಿದ್ಧ ಎಂದು ಶಂಕರ್‌ಗೆ ಹೇಳಲಾಗಿತ್ತು. ಇದಕ್ಕೆ ಶಂಕರ್ ತಾಯಿಯಿಂದಲೂ ಬಲವಾದ ವಿರೋಧ ಇತ್ತು. ಸಾವಿರಾರು ಯುವಕರಂತೆಯೇ ಶಂಕರ್‌ಗೂ ಜಾತಿ ಹಾಗೂ ಆಧುನಿಕತೆಯ ನಡುವಣ ದ್ವಂದ್ವ ಇತ್ತು. ಕುಶಲಕರ್ಮಿಗಳಾಗಿ ಕ್ರಿಯಾಶೀಲರಾಗಿ ಕೆಲಸ ಮಾಡುತ್ತ ತಮ್ಮ ಜೀವನೋಪಾಯ ಕಂಡುಕೊಂಡಿದ್ದ ಜನರು ಇಂದು ಯಾಂತ್ರೀಕೃತ ಉತ್ಪಾದನಾ ಚಕ್ರದ ಬಿಡಿಭಾಗಗಳಾಗಿದ್ದಾರೆ. ಹರಿಜನರು ಅಥವಾ ಪರಿಶಿಷ್ಟರು ಎಂದು ಕರೆಯಲಾಗುವ ಜನ ತಮ್ಮ ಕುಲ ಕಸುಬು ಮಾಡುತ್ತಿಲ್ಲ. ಅವರು ಮಲಹೊರುವ ಹಾಗೂ ಸತ್ತ ಜಾನುವಾರು ವಿಲೇವಾರಿಯಂತಹ ಕೆಲಸಗಳಿಗೆ ಸೀಮಿತವಾಗಿರದೆ ಪಟ್ಟಣಿಗರು ವಿಧಿಸುತ್ತಿದ್ದ ಷರತ್ತಿನ ಮೇಲೆ ಕೆಲಸ ಮಾಡುವ ಕೂಲಿಯಾಳುಗಳಾಗಿರುತ್ತಿದ್ದರು. ಅನೇಕ ವರ್ಷಗಳ ಕಾಲ ಗುಲಾಮಗಿರಿಯ ಬದುಕು ಸವೆಸಿದ ಬಳಿಕ ಶಂಕರ್‌ಗೆ ಜನಸಮುದಾಯಕ್ಕೆ ತನ್ನ ವಿಚಾರಗಳನ್ನು ತಿಳಿಯಪಡಿಸುವ ವಿಶೇಷ ಕೌಶಲ ಹಾಗೂ ಸಾಮರ್ಥ್ಯ ತನ್ನಲ್ಲಿದೆ ಎಂಬ ಅರಿವಾಯಿತು. ಓರ್ವ ನಟ ಹಾಗೂ ಸಾಧಕನಾಗಿ ಶಂಕರ್ ಇವುಗಳಿಗೆ ನಿಜವಾಗಿಯೂ ಬದ್ಧನಾಗಿದ್ದ. ಇದು ಸಮಾಜದ ಎಲ್ಲ ದಬ್ಬಾಳಿಕೆಯ ವಿರುದ್ಧದ ಹೋರಾಟವಾಗಿ ಮಾರ್ಪಟ್ಟಿತು.

ಲೋಟಿಯಾನಾದಲ್ಲಿ ನೆಲೆನಿಲ್ಲಲು ಸಾಧ್ಯವಿಲ್ಲ ಎನ್ನುವುದು ಶಂಕರ್‌ಗೆ ಸ್ಪಷ್ಟವಾಗಿತ್ತು. ಅಲ್ಲಿನ ಜಾತಿ, ಕುಲಗಳ ಸಂಘ ಮುಜುಗರ ಹುಟ್ಟಿಸುತ್ತಿತ್ತು. ಮುಂದೆ ತನ್ನ ತಾಯಿಯನ್ನು ಭೇಟಿ ಮಾಡಲು ಹೋದ ಸಂದರ್ಭದಲ್ಲಿ ಶಂಕರ್ ಚಿಕ್ಕಪ್ಪನ ಮಗಳ ಗಂಡ ಜೈತ್‌ಸಿಂಗ್‌ನನ್ನು ಭೇಟಿಯಾದ. ಪರಸ್ಪರ ಮಾತಿನ ನಡುವೆ ದೇವದೂಂಗ್ರಿಯ ಪುಟ್ಟ ಗುಡ್ಡದ ತಪ್ಪಲಿನಲ್ಲಿ ಇರುವ ಶಂಕರ್‌ನ ಖಾಲಿ ಮನೆಯ ಪ್ರಸ್ತಾಪ ಬಂತು. ಆ ಮನೆ ಶಂಕರ್‌ನನ್ನು ಕೈಬೀಸಿ ಕರೆಯಿತು.

ದೇವಿಲಾಲ್: ಬಡತನದ ಬವಣೆ

ಜೈತ್‌ಸಿಂಗ್‌ನ ಮನೆಯ ಪೂರ್ವದಲ್ಲಿ, ಜನವಸತಿಯಿಂದ ಅನತಿ ದೂರದಲ್ಲಿ ದೇವಿಲಾಲ್ ಮನೆ ಇದೆ. ಶತಶತಮಾನಗಳಿಂದಲೂ ಈತನ ಪೂರ್ವಿಕರಿಗೆ ಗ್ರಾಮದ ಹೊರವಲಯದ ಅಂಚಿನಲ್ಲಿ ವಾಸ ಮಾಡಲು ಅವಕಾಶ ನೀಡಲಾಗಿತ್ತು. ಅಲ್ಲದೇ ಈಗ ದೇವಿಲಾಲ್ ಶಾಲೆಗೆ ಹೋಗಬಹುದಿತ್ತು ಮಾತ್ರವಲ್ಲ; ಶಾಲೆಯಲ್ಲಿ ಮೋಟ್‌ಸಿಂಗ್‌ನ ಮಕ್ಕಳ ಜತೆ ಹಾಗೂ ಮೇಲ್ಜಾತಿಯ ಅವನ ಅಕ್ಕನ ಮಗ ನಾರಾಯಣನ ಜತೆ ಕುಳಿತುಕೊಳ್ಳಬಹುದಿತ್ತು. ಒಂದು ಕಾಲದಲ್ಲಿ ಈ ಭಾಗದ ರಾಜನಾಗಿದ್ದವನ ಮಕ್ಕಳ ಜತೆ ದೇವಿಯೇ ಆಗಲೀ, ಯಾರೇ ಆಗಲಿ ಕುಳಿತುಕೊಳ್ಳುತ್ತಿರಲಿಲ್ಲ. ಇದು ದೇವಿ ಪ್ರತಿಷ್ಠಿತರು ಕಲಿಯುತ್ತಿದ್ದ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕಲಿಯುತ್ತಿಲ್ಲ ಎನ್ನುವ ಈ ಕಾರಣಕ್ಕಲ್ಲ.

ಈ ಹಳ್ಳಿಯಲ್ಲಿ ಎರಡು ಹೊತ್ತಿನ ಊಟ ಮತ್ತು ಬದುಕಿನ ಇತರೆ ಅಗತ್ಯಗಳನ್ನು ಪೂರೈಸಿಕೊಳ್ಳುವುದು ಅವನ ಕನಸಾಗಿತ್ತು. ಜೈತ್‌ಸಿಂಗ್‌ನ ಮನೆಯಲ್ಲಿ ಹೊಸ ಚಟುವಟಿಕೆಗಳು ಗರಿಗೆದರಿದಾಗ, ದೇವಿಲಾಲ್ ಹೊಸಬರನ್ನು ಭೇಟಿಯಾಗಲು ಹಂಬಲಿಸಿದ. ಸಪೂರ ದೇಹದ, ಮೆಲುಮಾತಿನ ಈ ಯುವಕ ಶೀಘ್ರದಲ್ಲಿಯೇ ಸುತ್ತಮುತ್ತಲಿನವರನ್ನು ಪರಿಚಯಿಸಿಕೊಂಡ. ಮನೆ ಕೆಲಸದಲ್ಲಿ ಸಹಾಯ ಮಾಡುತ್ತಾ, ಹರಟೆ ಹೊಡೆಯುತ್ತಾ ಕಾಲಕಳೆಯುತ್ತಿದ್ದ. ಈತ ಹನ್ನೊಂದನೆಯ ತರಗತಿಯಲ್ಲಿ ಉತ್ತೀರ್ಣನಾಗಿರುವುದೂ ಅಲ್ಲದೇ, ಸರ್ಕಾರ ನೀಡುವ ಶಿಷ್ಯವೇತನಕ್ಕೂ ಅರ್ಹನಾಗಿದ್ದಾನೆ ಎನ್ನುವ ವಿಷಯ ಹೊಸಬರ ಅರಿವಿಗೆ ಬಂದು ಅಚ್ಚರಿ ಮೂಡಿಸಿತು. ಕೆಲವೇ ದಿನಗಳಲ್ಲಿ ದೇವಿಲಾಲ್ ಈ ಹೊಸಬರೊಡನೆ ಕೆಲವು ಪ್ರಶ್ನೆ ಹಾಗೂ ತನ್ನ ಕನಸನ್ನು ಹಂಚಿಕೊಂಡ. ಅವುಗಳನ್ನು ತನ್ನ ದಿನಚರಿಯಲ್ಲಿ ದಾಖಲಿಸುತ್ತಲೂ ಇದ್ದ:

'ಎಂಟು ವರ್ಷಗಳಿಂದಲೂ ನಾವು ಬರದ ಬೇಗುದಿಯಲ್ಲಿದ್ದೇವೆ. ನಮಗೆ ಸರಿಯಾದ ಆಹಾರ, ಬಟ್ಟೆ, ಮನೆ ಹಾಗೂ ಶಿಕ್ಷಣವಿಲ್ಲ. ಹಾಗಾಗಿ ಗಂಡಸರೆಲ್ಲ ಕೆಲಸ ಹುಡುಕಿಕೊಂಡು ಗುಜರಾತ್ ಹಾಗೂ ಮುಂಬೈಗೆ ಗುಳೆ ಹೋಗುತ್ತಾರೆ. ಆದರೆ ಅಲ್ಲಿ ಗುತ್ತಿಗೆದಾರರು ಹಾಗೂ ಬಂಡವಾಳಶಾಹಿಗಳ ಕಪಿಮುಷ್ಠಿಯಲ್ಲಿ ಸಿಲುಕಬೇಕಾಗುತ್ತದೆ. ಅಲ್ಲಿಯೂ ಕೂಡ ಅವರಿಗೆ ತಿನ್ನಲು ಸರಿಯಾದ ಆಹಾರ ಸಿಗುತ್ತಿಲ್ಲ, ತಲೆ ಮೇಲೆ ಸೂರು ಸಿಗುತ್ತಿಲ್ಲ. ಶೀಘ್ರದಲ್ಲಿಯೇ ಅನಾರೋಗ್ಯಕ್ಕೆ ತುತ್ತಾಗಿ ಕೆಲಸ ಮಾಡಲೂ ಸಾಧ್ಯವಾಗದಂಥ ಸ್ಥಿತಿ ನಿರ್ಮಾಣವಾಗುತ್ತದೆ. ಚಿಕಿತ್ಸೆಗೆ ಗುತ್ತಿಗೆದಾರ ಹಣ ನೀಡುವುದಿಲ್ಲ. ಕೆಲವು ವೇಳೆ ಇದೇ ರೀತಿಯ ಹಲವು ಕೆಲಸಗಾರರು

ಹಣ ಕೊಡಿಸಿ ಖಾಯಿಲೆ ಬಿದ್ದವರನ್ನು ಮನೆಗೆ ಕಳಿಸುತ್ತಾರೆ. ಇನ್ನು ಬಹುತೇಕ ಮಂದಿಗೆ ಸಾವೇ ಗತಿ. ಇಂಥ ಕೂಲಿಕಾರ ಹೆಂಡತಿ, ಮಕ್ಕಳನ್ನು ಸಾಕಲು ಇರುವ ಸ್ವಲ್ಪ ಭೂಮಿಯನ್ನು ಮಾರಬೇಕಾಗುತ್ತದೆ. ನಂತರದಲ್ಲಿ ಕೂಲಿಕಾರನ ಮಕ್ಕಳೂ ಸಹ ಇದೇ ವಿಷವರ್ತುಲಕ್ಕೆ ಸಿಕ್ಕಿಕೊಳ್ಳುತ್ತಾರೆ. ಗ್ರಾಮದ ಜನ ಉದ್ಯೋಗ ಅರಸಿ ಪಟ್ಟಣಕ್ಕೆ ಹೋಗದ ಹಾಗೆ ಸರ್ಕಾರ ಯಾಕೆ ಗ್ರಾಮಗಳಲ್ಲಿ ಅಭಿವೃದ್ಧಿ ಕೆಲಸ ಮಾಡಬಾರದು? ಇದು ಸಾಧ್ಯವಾದರೆ ನಮ್ಮಲ್ಲಿ ಬಹುತೇಕ ಮಂದಿ ಕ್ಷಯ, ಕಾಮಾಲೆ ಹಾಗೂ ಮಲೇರಿಯಾಗೆ ತುತ್ತಾಗಬೇಕಾಗುವುದಿಲ್ಲ. ದೇವಿಲಾಲ್ ತಂದೆ, ಅಷ್ಟೇ ಏಕೆ ಆತನ ತಾತ ಕೂಡ ಇಂಥ ಕರಾಳ ಬದುಕು ಕಂಡವರಾಗಿದ್ದರು. ಹಿಂದೆ ಪರಿಸ್ಥಿತಿ ಈ ರೀತಿ ಇರಲಿಲ್ಲ ಎಂದು ಹೇಳುವುದು ಕಷ್ಟ. ದೇವಿಲಾಲ್ ಹುಟ್ಟುವುದಕ್ಕೆ ಎಷ್ಟೋ ವರ್ಷಗಳ ಮೊದಲು ಈ ಸಾಂಪ್ರದಾಯಿಕ ಕಸುಬುಗಳೆಲ್ಲ ವಿನಾಶಗೊಂಡಿದ್ದವು. ಆಧುನಿಕ ಕೈಗಾರಿಕೆಗಳು ತಲೆ ಎತ್ತಿದ ಕಾರಣಗಳಿಂದ ನೇಕಾರರು, ಕಂಚುಕಾರರು, ಚರ್ಮಕಾರರೇ ಮೊದಲಾದ ಕುಶಲಕರ್ಮಿಗಳು ಸಂಪೂರ್ಣವಾಗಿ ಬದಿಗೆ ತಳ್ಳಲ್ಪಟ್ಟರು. ಆದರೆ ಅವರ ಕೌಶಲ ಸಂಪೂರ್ಣವಾಗಿ ಹೊರಟು ಹೋಗಿರಲಿಲ್ಲ. ಭಾರತದಾದ್ಯಂತ ಕಟ್ಟಡ ಕಾಮಗಾರಿಯಲ್ಲಿ ಕರಕುಶಲ ಕೆಲಸ ಮಾಡುವವರು ಮೂಲತಃ ರಾಜಸ್ಥಾನದವರು. ಮಹಾನಗರಗಳಿಗೆ ಬರುವ ಬಹುತೇಕ ಜನರಿಗೆ ಉತ್ತಮ ಕೂಲಿ ಸಿಗುತ್ತಿತ್ತು. ಹೀಗೆ ಕೂಲಿಗಳಾಗಿ ಬಂದ ಇವರು ಮಹಾನಗರಗಳ ಕೊಳಗೇರಿಗಳಲ್ಲಿ ಬದುಕು ಸಾಗಿಸಬೇಕಿತ್ತು. ಇದಕ್ಕೆ ಹೋಲಿಸಿದರೆ ದೇವಿಲಾಲ್ ಹೆಚ್ಚಿನ ಘನತೆಯಿಂದ ಬದುಕುತ್ತಿದ್ದ. ಆದರೆ ಹಸಿವಿನೊಂದಿಗಿನ ನಿರಂತರ ಹೋರಾಟಕ್ಕೆ ಕೊನೆಯೇ ಇರಲಿಲ್ಲ. ಮಹಾನಗರಗಳಲ್ಲಿ ಕೆಲಸ ಎರಡು ಹೊತ್ತಿನ ಅನ್ನವನ್ನೇನೋ ಕೊಡುತ್ತಿತ್ತು; ಆದರೆ ಬದುಕು ಮಾತ್ರ ಅಸಹನೀಯವಾಗಿರುತ್ತಿತ್ತು. ಸರಣಿ ಬರಗಾಲದ ಯಾತನೆಯನ್ನು ದೂರಮಾಡುವ ಉತ್ಪಾದನಾ ಕೆಲಸವೇ ಅಭಿವೃದ್ಧಿ ಎಂದು ದೇವಿಲಾಲ್ ಸರಳವಾಗಿ ಹೇಳುತ್ತಿದ್ದ. ಸರ್ಕಾರ ಕೇವಲ ಎರಡು ತಿಂಗಳು ಮಾತ್ರ ಬರ ಪರಿಹಾರ ಕಾಮಗಾರಿ ನಡೆಸಿ ಇನ್ನುಳಿದ ಹತ್ತು ತಿಂಗಳು ನಮ್ಮನ್ನು ಮರೆಯುವುದೇಕೆ?ಎಂದು ದೇವಿಲಾಲ್ ಮುಗ್ಧವಾಗಿ ಅರುಣಾ ಹಾಗೂ ಇತರರನ್ನು ಪ್ರಶ್ನಿಸುತ್ತಿದ್ದ.

ಅನೇಕ ಬಾರಿ ಇಂಥ ಚರ್ಚೆಗಳಲ್ಲಿ ನಾರಾಯಣನೂ ಪಾಲ್ಗೊಳ್ಳುತ್ತಿದ್ದ. ಬರ ಪರಿಹಾರ ಕಾಮಗಾರಿಯಲ್ಲಿ ಸರ್ಕಾರ ಹೀಗೆ ಜನರನ್ನು ಕಡೆಗಣಿಸದಿರುವಂತೆ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಎಲ್ಲರೂ ಸೇರಿ ಚರ್ಚಿಸುತ್ತಿದ್ದರು. ಹಾಗೆ ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತು ನಡೆಸುವ ಹುಟುಕಾಟ ಅರುಣಾ ಕಂಡ ಕನಸಿನ ಒಂದು ಮಹತ್ವದ ಭಾಗವಾಗಿತ್ತು. ಅಲ್ಲದೆ ಇದು ಆಕೆಯ ನಿರಂತರ ಅನ್ವೇಷಣೆಯ ಒಂದು ಭಾಗವೂ ಆಗಿತ್ತು. ಅರುಣಾ ಟಿಲೋನಿಯಾದಿಂದ ದೇವದೂಂಗ್ರಿಗೆ ಸ್ಥಳಾಂತರಗೊಂಡಾಗ ಬದುಕನ್ನು ಗ್ರಹಿಸುವ ರೀತಿಯಲ್ಲಿಯೂ ಬದಲಾವಣೆಯಾಗಿತ್ತು. ಐಎಎಸ್ ತ್ಯಜಿಸಿದ ಬಳಿಕ ಇಲ್ಲಿ ಅಭಿವೃದ್ಧಿಯನ್ನು ಹೇಗೆ ವ್ಯಾಖ್ಯಾನಿಸಲಾಗಿತ್ತೋ ಅದೇ ನಿಟ್ಟಿನಲ್ಲಿಯೇ ಕೆಲಸ ಮಾಡಬಹುದೆಂದು ಆಕೆ ಭಾವಿಸಿದ್ದರು. ಅಭಿವೃದ್ಧಿಯನ್ನು ವಿಭಿನ್ನ ದೃಷ್ಟಿಕೋನದಿಂದ ಹೇಗೆ ನೋಡಬೇಕೆಂಬುದರ ಬಗ್ಗೆ ಟಿಲೋನಿಯಾದಲ್ಲಿ ಆಕೆ ಕಲಿತ ಪಾಠ ದೇವದೂಂಗ್ರಿಯಲ್ಲಿ ಉಪಯೋಗಕ್ಕೆ ಬಂತು.

ಅರುಣಾ ಒಮ್ಮೆ ಹೀಗೆ ಬರೆದರು:

'ಸರ್ಕಾರ ಮತ್ತು ಟಿಲೋನಿಯಾ ಎರಡೂ ಕಡೆಯಲ್ಲೂ ನನ್ನ ಪಾತ್ರ ಆರಂಭದ್ದು ಎನ್ನುವುದನ್ನು ಕಂಡುಕೊಂಡೆ. ನಾನು ವೇಗವರ್ಧಕ, ಬದಲಾವಣೆಯ ಹರಿಕಾರಳು, ಬದಲಾವಣೆಗೆ ಮಧ್ಯಪ್ರವೇಶಿಸಿದವಳು, ಇನ್ನೊಂದು ರೀತಿಯಲ್ಲಿ ಹೇಳುವುದದರೆ ನಾನೇ ಓರ್ವ ನಾಯಕಿ ಎಂಬ ಗ್ರಹಿಕೆ ನನಗೆ ಬಂದುಬಿಟ್ಟಿದೆ. ಈ ಕ್ರಿಯಾ ಸರಣಿಗೆ ಅಂತಿಮವಾಗಿ ನಾನೇ ಜವಾಬ್ದಾರಳು ಎಂದೆನ್ನಿಸುತ್ತಿತ್ತು. ಇದು ಒಂದು ಸಿದ್ಧಾಂತವೇ ಆಗಿರಬಹುದು; ಅಥವಾ ಅನೇಕ ಸಿದ್ಧಾಂತಗಳ ಸಮುಚ್ಚವೇ ಆಗಿರಬಹುದು. ಜನರ ಮನಸ್ಸಿನಲ್ಲಿ ಸಿದ್ಧಾಂತಗಳು ಹಾಗೂ ಗ್ರಹಿಕೆಗಳು ಬೇರೆ ಬೇರೆ ಸ್ವರೂಪದಲ್ಲಿ ಇರುತ್ತವೆ ಎಂಬುದನ್ನು ಕ್ರಮೇಣ ಅರಿತುಕೊಳ್ಳತೊಡಗಿದೆ. ಈ ಗ್ರಹಿಕೆ ಮತ್ತು ಸಿದ್ಧಾಂತಗಳ ಅನುಷ್ಠಾನಕ್ಕೆ ಸೂಕ್ತ ಸಮಯ, ಅವಕಾಶ ಹಾಗೂ ಸ್ಥಳ ಮಾತ್ರವೇ ಬೇಕು. ಹಾಗಾಗಿ ಇಲ್ಲಿ ನನ್ನ ಪಾತ್ರ ತೀರಾ ಸೀಮಿತವಾದದ್ದು ಎಂಬ ಅರಿವು ಮೂಡಿತು'.

ನಾಯಕತ್ವ ಭಿನ್ನವಾಗಿರಬೇಕಾದರೆ ಜನರು ತಮ್ಮನ್ನು ತಾವು ನಿಭಾಯಿಸಲು ಸಮರ್ಥರಾಗುವಂತಹ ಸಂಘಟನೆಯನ್ನು ಕಟ್ಟಬೇಕು. ಸಂಘಟನೆಯ ನಾಯಕತ್ವವನ್ನು ಸ್ಥಳಿಯರೇ ವಹಿಸಿಕೊಳ್ಳಬೇಕು. ಹೋರಾಟದ ವಿಷಯಗಳು, ಅದರ ದಿಕ್ಕು ಹಾಗೂ ಆದ್ಯತೆಗಳನ್ನು ಅವರೇ ನಿರ್ಣಯಿಸಬೇಕು.

ಈ ರೀತಿಯ ಚಟುವಟಿಕೆಗಳಲ್ಲಿ ಅರುಣಾ ಪಾತ್ರವೇನು?

'ನಾನು ಈ ಪ್ರದೇಶಕ್ಕೆ ಪರಕೀಯಳು. ಸ್ಥಳೀಯರಷ್ಟು ಚೆನ್ನಾಗಿ ನಾನು, ಈ ಸ್ಥಳದ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಿಲ್ಲ. ಆದರೆ ಬೇರೆ ಬೇರೆ ವಿಶೇಷ ಅನುಭವಗಳ ಹಿನ್ನೆಲೆಯಲ್ಲಿ ಅಭಿವೃದ್ಧಿ ಪ್ರಕ್ರಿಯೆಗಳ ಬಗ್ಗೆ ನನ್ನದೇ ಆದ ವ್ಯಾಖ್ಯಾನ ಕೊಡಬಲ್ಲೆ. ಈಗಲೂ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಶಕ್ತಿಯುತವಾದ ಹಾಗೂ ಪ್ರಬಲವಾದ ವರ್ಗದಲ್ಲಿ ಹುಟ್ಟಿದವಳು. ಆ ವರ್ಗವನ್ನು ಅರಿತುಕೊಂಡಿರುವ ನಾನು ಸ್ಥಳೀಯ ಜನರಿಗೆ ಪ್ರಯೋಜನಕಾರಿಯಾಗಬಲ್ಲೆ'.

'ಸರಳ ಹಾಗೂ ಸನ್ಯಾಸಿ ತರಹದ ಬದುಕನ್ನು ರೂಢಿಸಿಕೊಂಡೆ. ಬಡವರ ಜತೆ ಕೆಲಸ ಮಾಡಬೇಕಾದರೆ ನಾವೂ ಕೂಡ ಅವರಲ್ಲಿ ಒಬ್ಬರಾಗಿ ಬದುಕುವುದನ್ನು ಕಲಿತುಕೊಳ್ಳಬೇಕು. ವಾಸ್ತವಿಕವಾಗಿ ಅವರ ಜೀವನ ಶೈಲಿಯನ್ನು ಅನುಸರಿಸುವುದು ಮುಖ್ಯ ಎಂದುಕೊಂಡೆ. ಸಹಬಾಳ್ವೆ ನಡೆಸಬೇಕು, ಬದುಕು ಮತ್ತು ಕೆಲಸ ನಿರಂತರ ಎಂದು ಭಾವಿಸುವುದು ಮುಖ್ಯ ಎನಿಸಿತು. ಈ ರೀತಿಯ ಜೀವನಕ್ರಮ ವಿಭಿನ್ನ ಬಗೆಯ ಸಂವಹನ ನಡೆಸಲು ಅನುಕೂಲವಾಗುತ್ತದೆ. ಅಲ್ಲದೆ ಜನರು 'ನಾವು ಸುಲಭವಾಗಿ ಅವರೊಂದಿಗೆ ಬೆರೆಯುತ್ತೇವೆ' ಎಂದುಕೊಳ್ಳುತ್ತಾರೆ. ನಾವು ಕೆಲಸ ಮಾಡುತ್ತಿರುವ ಪ್ರದೇಶದಲ್ಲಿನ ಜನರು ಹಾಗೂ ನಾವು ಪರಸ್ಪರ ಅವಲಂಬಿಗಳು ಎಂದು ಜನ ಭಾವಿಸಿದಾಗ ಮಾತ್ರ ಸಮಾನತೆಗೆ ಹೆಚ್ಚಿನ ಅರ್ಥ ಬರುತ್ತದೆ ಹಾಗೂ ಅದು ನಮ್ಮ ಸಂಬಂಧವನ್ನು ನಿರ್ಧರಿಸುತ್ತದೆ'.

ದೇವದೂಂಗ್ರಿಯಲ್ಲಿ ಕಳೆಯುವ ದಿನದಿಂದ ದಿನಕ್ಕೆ ಇಂಥ ಸಂಬಂಧಗಳ ಬೀಜ ಆಳವಾಗಿ ಬೇರೂರುತ್ತಿತ್ತು.

ಲಾಲ್‌ಸಿಂಗ್:

ಲಾಲ್‌ಸಿಂಗ್‌ನ ಉಪಸ್ಥಿತಿ ಸಾಮಾನ್ಯವಾಗಿ ಸ್ಫೂರ್ತಿದಾಯಕವಾಗಿರುತ್ತಿತ್ತು. ಆದರೆ ಠಾಕೂರ್ ಹರಿಸಿಂಗ್‌ನ ಗೂಂಡಾಗಳ ದ್ವೇಷಕ್ಕೆ ಗುರಿಯಾದಾಗ ಲಾಲ್‌ಸಿಂಗ್‌ನಂಥವರಿಗೂ ಆತಂಕವಾಗುತ್ತಿತ್ತು. ಲಾಲ್ ಈ ವರ್ತುಲದೊಳಗೆ ಪ್ರವೇಶಿಸಿದ್ದಾದರೂ ಹೇಗೆ? ದೇವದೂಂಗ್ರಿಯ ಗೆಳೆಯರು ಠಾಕೂರ್‌ನನ್ನು ಎದುರು ಹಾಕಿಕೊಂಡರೆ ತೊಂದರೆ ಎಂದು ಮೊದಲೇ ಎಚ್ಚರಿಸಿದ್ದರು. ಆದರೆ ಅನಿರೀಕ್ಷಿತವಾಗಿ ಈತನ ಮೇಲೆ ಹಲ್ಲೆ ನಡೆಯಿತು. ಠಾಕೂರ್‌ನ ಗೂಂಡಾಗಳು ಲಾಠಿ ಬೀಸುತ್ತಾ, ಕತ್ತಿ ಝಳಪಿಸುತ್ತಾ ಸೋಹನ್‌ಗರ್‌ಗೆ ನುಗ್ಗಿದರು. ಜನರನ್ನು ಹೆದರಿಸಲು ಇವಿಷ್ಟೇ ಸಾಕಾಗಿತ್ತು. ಸೋಹನ್‌ಗರ್‌ನಲ್ಲಿ ಮೂಡಿದ್ದ ಹೊಸ ಸಂಚಲನೆಗೆ ಲಾಲ್‌ಸಿಂಗ್ ಹಾಗೂ ಆತನ ಗೆಳೆಯ ಭನ್ವರ್ ಕಾರಣ ಎಂದು ತಿಳಿದು, ಗೂಂಡಾಗಳು ಇವರಿಬ್ಬರನ್ನು ಹುಡುಕಿಕೊಂಡು ಬಂದಿದ್ದರು. ಭನ್ವರ್ ಬೆನ್ನು ತಿರುಗಿಸಿ ಮನೆಗೆ ಪಲಾಯನ ಮಾಡದೇ ಇದ್ದದ್ದು ಇವರಲ್ಲಿ ಅಚ್ಚರಿ ಮೂಡಿಸಿತು. ಭನ್ವರ್ ಸೆಟೆದುನಿಂತು ಗೂಂಡಾಗಳೊಂದಿಗೆ ಜಗಳಕ್ಕೆ ಇಳಿದ. ಒಂದು ಕ್ಷಣ ಹರಿಸಿಂಗ್‌ನ ಕಡೆಯವರು ಭನ್ವರ್‌ನನ್ನು ದುರುಗುಟ್ಟಿ ನೋಡಿದರು. ತಮ್ಮ ಕತ್ತಿಯಿಂದ ಭನ್ವರ್ ತಲೆ ಕತ್ತರಿಸಬೇಕೆನ್ನುವಷ್ಟರಲ್ಲಿ ಒಂದು ದೊಡ್ಡ ದನಿ ಕೇಳಿಬಂತು. ಇಡೀ ಹಳ್ಳಿಗೆ ಹಳ್ಳಿಯೇ ಲಾಲ್‌ಸಿಂಗ್ ಮನೆಯತ್ತ ಧಾವಿಸಿಬಂತು. ಬಹುತೇಕ ಜನರು ಕೈಗೆಸಿಕ್ಕ ವಸ್ತುಗಳನ್ನು ಎತ್ತಿಕೊಂಡು ಒಳನುಗ್ಗಿದರು. ಹರಿಸಿಂಗ್‌ನ ಗೂಂಡಾಗಳು ಅಲ್ಲಿಂದ ಕಾಲ್ಕಿತ್ತರು. ಭೀಮ್‌ನಿಂದ ಹನ್ನೆರಡು ಕಿ.ಮೀ ದೂರದ ಸೋಹನ್‌ಗರ್ ಗ್ರಾಮದಲ್ಲಿ ಹಿಂದೆಂದೂ ಇಂಥ ಪರಿಸ್ಥಿತಿ ಉದ್ಭವಿಸಿರಲಿಲ್ಲ. ಗ್ರಾಮದ ಜನರಲ್ಲಿ ಕಾಣಿಸಿಕೊಂಡ ಹೊಸ ಚೈತನ್ಯ ಅಲ್ಲಿನ ಈ ಹಿಂದೆ ಇದ್ದ ಸ್ಥಿತಿಯನ್ನು ಬದಲಿಸಿತು. ಇದು ಕೇವಲ ಕ್ರಾಂತಿಯಾಗಿರಲಿಲ್ಲ. ಖಾಸಗಿ ಸ್ವತ್ತು ಎಂದು ಹೇಳಿಕೊಂಡು ಹರಿಸಿಂಗ್ ಕುಟುಂಬ ಅತಿಕ್ರಮಣಮಾಡಿಕೊಂಡಿದ್ದ ಗ್ರಾಮಸ್ಥರ ಜಮೀನನ್ನು ವಶಪಡಿಸಿಕೊಳ್ಳಲು ಈ ಜನ ನಿರ್ಧರಿಸಿದ್ದರು. ಒಂದಾನೊಂದು ಕಾಲದಲ್ಲಿ ಉದಯಪುರ ಮಹಾರಾಜ ಸ್ಥಳೀಯ ಠಾಕೂರ್ ಹಾಗೂ ಮಾಂಡಲೀಕರ ಮೂಲಕ ಈ ಪ್ರಾಂತ್ಯವನ್ನು ಆಳುತ್ತಿದ್ದ. ಈ ಭೂಪ್ರದೇಶದ ನಿಯಂತ್ರಣ ಕಷ್ಟವೆನಿಸಿತ್ತು. ಈ ಪ್ರಾಚೀನ ಹಾದಿಯಲ್ಲಿ ದಾರಿಹೋಕರನ್ನು ಲೂಟಿ ಮಾಡಲಾಗುತ್ತಿತ್ತು. ಸ್ವತಂತ್ರ ಭಾರತದಲ್ಲಿ ಉದಯಪುರ ಜಿಲ್ಲೆಯ ಉತ್ತರಭಾಗಕ್ಕೆ ಸೇರಿದ ಈ ಪ್ರದೇಶ ಬಳಿಕ ಹೊಸದಾಗಿ ರೂಪಿತವಾದ ರಾಜ್‌ಸಮಂದ್ ಜಿಲ್ಲೆಯ ಭಾಗವಾಯಿತು. ಹಿಂದೆ ಇಲ್ಲಿಯ ಸ್ಥಳೀಯ ದೊರೆಯಾಗಿದ್ದ ನಹರ್‌ಸಿಂಗ್‌ನ ದೊಡ್ಡದಾದ ಮನೆ ದೇವಗರ್‌ನ ಸಣ್ಣಕೊಳದ ಸಮೀಪ ಈಗಲೂ ಇದೆ. ಇದು ದೇವದೂಂಗ್ರಿಯಿಂದ ಸುಮಾರು ೨೫ ಕಿ.ಮೀ.ದೂರದಲ್ಲಿದೆ. ಆನಂತರ ಆತ ಅಜ್ಮೀರ್‌ನ ಪ್ರತಿಷ್ಠಿತ ಮೆಯೋ ಕಾಲೇಜಿನಲ್ಲಿ ಅಧ್ಯಾಪಕನಾಗಿ ಕಾರ್ಯನಿರ್ವಹಿಸುತ್ತಿದ್ದ. ಈತನ ತಮ್ಮ ವಿಶೇಷ ಆಸಕ್ತಿ ಇಲ್ಲದಿದ್ದರೂ ರಾಜಕೀಯದಲ್ಲಿದ್ದ. ೧೯೮೯ರಲ್ಲಿ ರಾಜನಿಗೆ ಹೆಮ್ಮೆ ತಂದ ವಿಷಯವೆಂದರೆ ಆತನ ಸಹೋದರಿಯ ಗಂಡ ವಿ.ಪಿ.ಸಿಂಗ್ ಈ ದೇಶದ ಪ್ರಧಾನಿಯಾದದ್ದು.

೧,೫೦೦ ಎಕರೆಗೂ ಹೆಚ್ಚು ಜಮೀನು ಹೊಂದಿದ್ದ ಹರಿಸಿಂಗ್ ಹಲವಾರು ಸಣ್ಣ ಸಣ್ಣ ಠಾಕೂರ್‌ಗಳಲ್ಲಿ ಒಬ್ಬನಾಗಿದ್ದು, ಈಗಲೂ ರಾಜಾಸಾಹೇಬರಿಗೆ ಗೌರವದಿಂದ ತಲೆಬಾಗುತ್ತಾನೆ. ಕಾನೂನು ಪ್ರಕಾರ ಹೆಚ್ಚಿನ ಜಮೀನು ಹರಿಸಿಂಗ್ ಕುಟುಂಬಕ್ಕೆ ಸೇರಿದ್ದಲ್ಲ. ಆತ ಗೂಂಡಾಗಿರಿ ಮಾಡಿ ಭೂಮಿ ಉಳಿಸಿಕೊಂಡಿದ್ದ. ಗ್ರಾಮಸ್ಥರು ಇದನ್ನು ಎಂದೂ ಸಹ ಪ್ರಶ್ನಿಸಿದವರಲ್ಲ. ಸೋಹನ್‌ಗರ್‌ನ ಬಹುತೇಕ ಮಂದಿಗೆ ಕೃಷಿ ಲಾಭದಾಯಕ ಕಸುಬಾಗಿರಲಿಲ್ಲ. ಕಾಲ ಕಳೆದಂತೆ ಈ ಕುಟುಂಬಗಳು ದೊಡ್ಡದಾದಾಗ ಜಮೀನು ಸಣ್ಣ ಸಣ್ಣದಾಗಿ ಪಾಲಾಗುತ್ತಾ ಬಂತು. ಕೆಲವೊಮ್ಮೆ ಇದು ಒಂದು ಎಕರೆಗೂ ಕಮ್ಮಿ ಇರುತ್ತಿತ್ತು. ಮಳೆಯನ್ನೇ ಆಶ್ರಯಿಸಿದ್ದ ಬೆಳೆ ಅಷ್ಟೇನು ಉತ್ತಮ ರೀತಿಯಲ್ಲಿ ದಕ್ಕುತ್ತಿರಲಿಲ್ಲ. ಆದಕಾರಣ ಲಾಲ್‌ಸಿಂಗ್ ತಾನು ಇನ್ನೂ ಇಪ್ಪತ್ತು ವರ್ಷದವನಾಗಿದ್ದಾಗ ಗ್ರಾಮದ ಇತರ ಜನರಂತೆಯೇ ಪಟ್ಟಣದ ಹಾದಿ ಹಿಡಿದ. ಉದಯಪುರದಲ್ಲಿ ಆತನಿಗೆ ಕಾನ್‌ಸ್ಟೇಬಲ್ ಕೆಲಸ ಸಿಕ್ಕಿತು. ನಿವೃತ್ತನಾಗುವ ತನಕವೂ ಆತ ಇದೇ ಕೆಲಸದಲ್ಲಿ ಮುಂದುವರೆಯಬಹುದಿತ್ತು. ಪೊಲೀಸ್ ಅಧಿಕಾರಿಗಳು ಕಾನ್‌ಸ್ಟೇಬಲ್‌ಗಳನ್ನು ಮನೆಗೆಲಸಕ್ಕೆ ಬಳಸಿಕೊಳ್ಳುತ್ತಿದ್ದುದನ್ನು ವಿರೋಧಿಸಿ ೭೦ರ ದಶಕದಲ್ಲಿ ಕೆಲ ಕಾಲ ಉಪವಾಸ ಸತ್ಯಾಗ್ರಹ ನಡೆಸಿದ್ದಕ್ಕಾಗಿ ಈತನನ್ನು ಕೆಲಸದಿಂದ ವಜಾ ಮಾಡಲಾಯಿತು. ಸೋಹನ್‌ಗರ್‌ಗೆ ಮರಳಿದ ಈತ, ಭೀಮ್‌ನಲ್ಲಿ ಹಾಲು ಮಾರಲು ಶುರುಮಾಡಿದ. ಜೊತೆಗೆ ಕೆಲವು ಕಡೆ ಕಟ್ಟಡ ಕಾಮಗಾರಿಗೂ ಸೇರಿಕೊಂಡ. ಹಾಗೆ ತನ್ನ ಜಮೀನಿನ ಬೇಸಾಯವನ್ನೂ ಮಾಡುತ್ತಿದ್ದ. ಹರಿಸಿಂಗ್‌ನ ನಿರಂಕುಶ ಧೋರಣೆ ತಪ್ಪು ಎನ್ನುವುದು ಲಾಲ್‌ಸಿಂಗ್ ಉದಯಪುರದಲ್ಲಿನ ಅನುಭವ ಮನವರಿಕೆ ಮಾಡಿಕೊಟ್ಟಿತ್ತು. ಸ್ಥಳೀಯ ಠಾಕೂರ್‌ರಂಥ ಸಣ್ಣಶಕ್ತಿಯನ್ನು ಎದುರಿಸುವುದಾದರೂ ಹೇಗೆ? ದೇವದೂಂಗ್ರಿಯಲ್ಲಿ ಹೊಸ ಕುಟುಂಬದ ಪರಿಚಯವಾದಾಗ ಈ ಪ್ರಶ್ನೆ ಜೀವ ಪಡೆದುಕೊಂಡಿತು. ಶಂಕರ್, ಅರುಣಾ ಹಾಗೂ ನಿಖಿಲ್ ಸೇರಿಕೊಂಡು ಜೈತ್‌ಸಿಂಗ್‌ನ ಹಳೆಯ ಮನೆ ದುರಸ್ತಿ ಮಾಡುತ್ತಿದ್ದ ವೇಳೆಯಲ್ಲಿ ಲಾಲ್‌ಸಿಂಗ್ ಅದೇ ದಾರಿ ಗುಂಟ ಸೋಹನ್‌ಗರ್‌ನಿಂದ ಭೀಮ್‌ಗೆ ಸೈಕಲ್‌ನಲ್ಲಿ ಹಾಲು ಮಾರಲು ಬರುತ್ತಿದ್ದ. ಒಂದು ದಿವಸ 'ಚಾಲೀಸ್ ಮೀಲ್'ನ ಹೆದ್ದಾರಿಯಲ್ಲಿ ಎಡಕ್ಕೆ ತಿರುಗಿ ತನ್ನ ಊರಿಗೆ ಹೋಗುವ ಬದಲು ಹೆದ್ದಾರಿಯಲ್ಲಿಯೇ ಇನ್ನೂ ಎರಡು ಫರ್ಲಾಂಗ್ ಸೈಕಲ್ ತುಳಿದು ದೇವದೂಂಗ್ರಿ ತಲುಪಿದ. ಹೊಸ ಕುಟುಂಬದ ಮನೆಯ ಮೇಲ್ಚಾವಣಿ ಹೊದಿಸಲು ನೆರವು ಬೇಕಾಗಿದೆ ಎನ್ನುವ ಮಾಹಿತಿ ಲಾಲ್‌ಸಿಂಗ್‌ಗೆ ಯಾರಿಂದಲೋ ಸಿಕ್ಕಿತ್ತು. ಹೀಗಾಗಿ ಈ ಮನೆಗೆ ನಿತ್ಯವೂ ಬರತೊಡಗಿದ.

ಈ ಭಾಗದಲ್ಲಿ ಮಹಾತ್ಮ ಗಾಂಧಿ ಮನೆಮಾತಾಗಿರಲಿಲ್ಲ. ಆದರೆ ಲಾಲ್‌ಸಿಂಗ್ ಮನೆಯಲ್ಲಿ ಗಾಂಧೀಜಿಗೆ ಒಂದು ವಿಶೇಷವಾದ ಸ್ಥಾನ ಇತ್ತು. ಈತನ ತಂದೆ–ತಾಯಿ, ಚಿಕ್ಕಪ್ಪ–ಚಿಕ್ಕಮ್ಮ ಎಲ್ಲರೂ ಒಂದು ಕಾಲದಲ್ಲಿ ಗಾಂಧಿ ಸಬರಮತಿ ಆಶ್ರಮದಲ್ಲಿದ್ದಾಗ ಅಲ್ಲಿಯ ಹಸುಗಳನ್ನು ಕಾಯುತ್ತಿದ್ದರು. ನಂತರ ಅವರೆಲ್ಲರೂ ತಮ್ಮ ಊರಿಗೆ ಮರಳಿಬಂದು ಮತ್ತೆ ಮೊದಲಿನಂತೆಯೇ ಬದುಕತೊಡಗಿದ್ದರು. ತಮ್ಮ ತಮ್ಮ ಗ್ರಾಮಗಳಿಗೆ ಮರಳಿದರೂ ಕೂಡ ಅವರಲ್ಲಿ ಗಾಂಧೀಜಿಯ ಪ್ರಭಾವ ಇತ್ತು. ಇದು ಮುಂದೆ ಲಾಲ್‌ಸಿಂಗ್‌ನಲ್ಲಿಯೂ ಮುಂದುವರೆಯಿತು.

ಲಾಲ್‌ಸಿಂಗ್ ಈ ಅಸಾಮಾನ್ಯ ಜನರ ಪ್ರಾಮಾಣಿಕತೆ ಹಾಗೂ ಒಳ್ಳೆಯತನಗಳನ್ನು ಒಪ್ಪಿಕೊಂಡ. ವ್ಯಕ್ತಿಯೋರ್ವ ಮಹಾನಗರದ ಕೊಂಪೆಯಲ್ಲಿ ನರಳುವುದಕ್ಕಿಂತ ಹಳ್ಳಿಯಲ್ಲಿಯೇ ಇರಲು ಹೆಚ್ಚು ಇಷ್ಟಪಡುತ್ತಾನೆಂಬುದು ಲಾಲ್‌ಸಿಂಗ್‌ಗೆ ಅರ್ಥವಾಯಿತು. ಆದರೆ ದೇವದೂಂಗ್ರಿಯಲ್ಲಿ ನೆಲೆಯೂರಿದ ಈ ವಿಶಿಷ್ಟ ಕುಟುಂಬದಿಂದ ಜನರು ನಿರೀಕ್ಷಿಸುತ್ತಿರುವಂತೆಯೇ ಗ್ರಾಮಕ್ಕೆ ಏನಾದರೂ ಉಪಯೋಗವಾಗುವುದಿದೆಯೇ? ಎನ್ನುವುದು ಆತನಿಗೆ ಖಾತ್ರಿಯಾಗಲಿಲ್ಲ. ಲಾಲ್‌ಸಿಂಗ್ ಜತೆ ಒಂದು ಸಂಜೆ ಶಂಕರ್ ಮತ್ತು ನಿಖಿಲ್ ಸೋಹನ್‌ಗರ್‌ಗೆ ಮರಳಿದರು. ಲಾಲ್‌ಸಿಂಗ್ ಮತ್ತು ಅವನ ಕುಟುಂಬದ ಸದಸ್ಯರ ಜತೆ ರಾತ್ರಿ ಬಹಳ ಹೊತ್ತಿನವರೆಗೂ ಇದ್ದರು. ಹಲವಾರು ಕಡೆ ಜನರು ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಲು ಬೇರೆ ಬೇರೆ ಸಂಘಟನೆ ಮಾಡಿಕೊಂಡಿರುವುದನ್ನು ಈ ಹೊರಗಿನವರು ತಿಳಿಸಿದರು. ಸೋಹನ್‌ಗರ್ ಜನರ ಈ ಕನಸು ಸಾಕಾರಗೊಳ್ಳುವುದು ಅಸಾಧ್ಯವೇನೋ ಎನ್ನಿಸಿತು. ತಮ್ಮ ಯೌವನವನ್ನು ಈ ಕಪ್ಪು ಡಾಂಬರಿನ ಹಾದಿಯಲ್ಲಿ ಸವೆಸದೆ ಹಳ್ಳಿಯಲ್ಲಿಯೇ ಜೀವನೋಪಾಯ ಮಾಡುವುದು ಎಂದಾದರೂ ಸಾಧ್ಯವೇ? ಮನೆಯಲ್ಲಿಯೇ ಉಳಿಯುವ ಮಹಿಳೆಯರು ಮತ್ತು ವಯಸ್ಸಾದರು ಸರ್ಕಾರದ ಬರಪರಿಹಾರ ಕಾಮಗಾರಿಯಲ್ಲಿ ಕಾನೂನಿನಂತೆ ನಿಗದಿಯಾದ ಕನಿಷ್ಠ ವೇತನ ಪಡೆಯಲು ಸಾಧ್ಯವೇ? ಸರ್ಕಾರ ಭಾರೀ ಪ್ರಮಾಣದಲ್ಲಿ ಹಣ ಖರ್ಚು ಮಾಡುತ್ತದೆ. ಆದರೆ ಫಲಾನುಭವಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಯೇ ಈ ಎಲ್ಲ ಯೋಜನೆಗಳು ನಿರ್ಧಾರವಾಗುತ್ತವೆ. ಸ್ಥಳೀಯ ಯೋಜನೆಗಳ ಬಗ್ಗೆ ಸರ್ಕಾರ ಆ ಭಾಗದ ಜನರ ಅಭಿಪ್ರಾಯ ಕೇಳುವುದಾದರೂ ಯಾವಾಗ? ಶಾಸಕರು, ಸಂಸದರು ತಮ್ಮ ಕ್ಷೇತ್ರದ ಜನರಿಗೆ ಏನನ್ನೂ ಮಾಡದಿದ್ದರೂ ಹಳ್ಳಿಯಲ್ಲಿ 'ಹಮಾರಾ ರಾಜ್' (ನಮ್ಮ ಆಡಳಿತ) ಸಾಧ್ಯವೇ? ಈ ಕಪ್ಪು ಡಾಂಬರಿನ ರಸ್ತೆಯಲ್ಲಿ ಅಸಹಾಯಕ ಮೂಕ ಪ್ರೇಕ್ಷಕರಂತೆ ನಿಲ್ಲುವುದಷ್ಟೇ ನಮ್ಮ ಹಣೆಬರಹವೇ?.... ಲಾಲ್‌ಸಿಂಗ್ ಮತ್ತು ಅವನಂತೆ ಯೋಚಿಸುವ ಹಲವರಿಗೆ ಇಂಥ ಪ್ರಶ್ನೆಗಳು ಕಾಡುತ್ತಿದ್ದವು.

ನಡುರಾತ್ರಿಯ ಚಳಿ ಈ ಚರ್ಚೆಗೆ ತಡೆಯೊಡ್ಡಿತು. ಶಂಕರ್ ಮತ್ತು ನಿಖಿಲ್, ಲಾಲ್‌ಸಿಂಗ್‌ನ ಮನೆಯಲ್ಲಿಯೇ ಉಳಿದರು. ಈ ಚರ್ಚೆಯಿಂದ ಅವರಲ್ಲಿ ಖುಷಿ ಮನೆಮಾಡಿತು. ಮಲಗಿದ ಅರೆಕ್ಷಣವೇ ಶಂಕರ್ ನಿದ್ದೆ ಹೋದ. ಈಚೀನವರೆಗೂ ನಿಖಿಲ್‌ನ ಮನೆಯಾಗಿದ್ದ ದೆಹಲಿಯ ಏರ್‌ಮಾರ್ಷಲ್ ಡೇ ಅವರ ಹೊಳೆಯುವ ಬಂಗಲೆಯ ಕೊಠಡಿಗೂ ಇಲ್ಲಿನ ಮಣ್ಣಿನ ನೆಲಕ್ಕೂ ಹೋಲಿಕೆ ಮಾಡದೇ ಇರಲು ಶಂಕರ್‌ಗೆ ಸಾಧ್ಯವೇ ಇರಲಿಲ್ಲ. ವಾಂಷಿಗ್ಟನ್ ಡಿಸಿ ಬಳಿಯ ಕಾಲೇಜೊಂದರಲ್ಲಿ ಒಮ್ಮೆ ನಿಖಿಲ್‌ಗೆ ಆತನ ಸಹಪಾಠಿಗಳು ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿನ ಬಡತನದ ಕುರಿತು ಮಾತನಾಡಬೇಕೆಂದು ಪಟ್ಟು ಹಿಡಿದರು. ದೊಡ್ಡ ಕ್ಯಾಂಟೀನ್‌ವೊಂದರಲ್ಲಿ ಮಧ್ಯಾಹ್ನ ಊಟದ ಬಳಿಕ ಈ ಚರ್ಚೆ ಆರಂಭವಾಯಿತು. ಉಪಯೋಗಿಸಿ ಎಸೆದ ತಟ್ಟೆ, ಲೋಟ ಮತ್ತು ಎಂಜಲು ಆಹಾರದಿಂದ ಅಲ್ಲಿನ ಕಸದ ಬುಟ್ಟಿ ತುಂಬಿತುಳುಕುತ್ತಿತ್ತು. ಉಪನ್ಯಾಸಕ್ಕೆಂದು ನಿಗದಿಯಾಗಿದ್ದ ಸಮಯದಲ್ಲಿ ನಿಖಿಲ್ ಇಂಥ ಒಂದು ಕಸದಬುಟ್ಟಿಯನ್ನು ತಲೆಕೆಳಗಾಗಿ ಹಿಡಿದ. ಇತರ ವಿದ್ಯಾರ್ಥಿಗಳು ಗಾಬರಿಯಿಂದ ಈತನನ್ನೇ

ನೋಡುತ್ತಿದ್ದರು. ನೆಲದಲ್ಲಿ ಚೆಲ್ಲಿದ್ದ ಅರ್ಧ ತಿಂದ ಎಂಜಲು ಆಹಾರದತ್ತ ಬೆರಳುಮಾಡಿ ತೋರಿಸಿ, 'ನೀವು ಈ ಸಮಸ್ಯೆ ಪರಿಹರಿಸಿಕೊಂಡರೆ ತೃತೀಯ ಜಗತ್ತಿನ ಬಡತನವನ್ನು ತೊಡೆದುಹಾಕಲು ಸಾಧ್ಯ' ಎಂದು ಹೇಳಿದ.

ನಿಖಿಲ್ ತಂದೆ ವಾಷಿಂಗ್ಟನ್ ಡಿಸಿಯಲ್ಲಿ ಭಾರತದ ರಾಯಭಾರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಅಲ್ಲಿಯ ಇತರ ಸಿಬ್ಬಂದಿಯ ಮಕ್ಕಳಂತೆಯೇ ನಿಖಿಲ್ ಮತ್ತು ಆತನ ಸಹೋದರರಿಗೆ ಅಮೆರಿಕದಲ್ಲಿ ಇರಲು ಇಷ್ಟವಿರಲಿಲ್ಲ. ನಿಖಿಲ್ ಅಲ್ಲಿನ ಜಾರ್ಜ್ ಮೇಸನ್ ವಿಶ್ವವಿದ್ಯಾಲಯದಲ್ಲಿ ಬಿ.ಎ.ಓದುತ್ತಿದ್ದ. ಕೊನೆಯ ಸೆಮಿಸ್ಟರ್ ಇನ್ನೇನು ಮುಗಿಯುವ ಹೊತ್ತಿನಲ್ಲಿ ಇದ್ದಕಿದ್ದಂತೆ ಕಾಲೇಜು ಬಿಟ್ಟ. ಅವನು ಹೋಗಬೇಕೆಂದು ಉದ್ದೇಶವಿಟ್ಟುಕೊಂಡಿದ್ದ ಸ್ಥಳದಲ್ಲಿ ಈ ಪದವಿಯಿಂದ ಯಾವುದೇ ಪ್ರಯೋಜನವಿರಲಿಲ್ಲ. ಭಾರತಕ್ಕೆ ಮರಳಿದ ಬಳಿಕ ನಿಖಿಲ್ ಒಂದು ವರ್ಷ ಬೇರೆ ಬೇರೆ ಸೈದ್ಧಾಂತಿಕ ಹಿನ್ನೆಲೆಯಿಟ್ಟುಕೊಂಡು ಕೆಲಸ ಮಾಡುತ್ತಿದ್ದ ಸಂಘಟನೆಗಳೊಂದಿಗೆ ಕಾಲ ಕಳೆಯುತ್ತಾ ದೇಶದ ಎಲ್ಲೆಡೆ ಸಂಚರಿಸಿದ. ಈ ಪ್ರಯಾಣಕ್ಕೆ ಯಾವುದೇ ಗೊತ್ತುಗುರಿ ಇರಲಿಲ್ಲ. ಆತ ಹಳ್ಳಿಯೊಂದರಲ್ಲಿ ಅದರಲ್ಲಿಯೂ ವಿಶೇಷವಾಗಿ ಹಚ್ಚಹಸಿರಿನಿಂದ ಕೂಡಿದ ಹಳ್ಳಿಯಲ್ಲಿ ಕೆಲಸ ಮಾಡಲು ಬಯಸಿದ್ದ. ಮುಂದೊಂದು ದಿನ ರಾಜಸ್ಥಾನದ ಈ ಭಾಗವನ್ನು ನೋಡುತ್ತೇನೆಂದು ನಿಖಿಲ್ ಕನಸು ಮನಸಿನಲ್ಲಿಯೂ ಯೋಚಿಸಿರಲಿಲ್ಲ. ಆದರೆ ಒಂದು ದಿನ ಲೈಲಾ ಕಬೀರ್ ಫರ್ನಾಂಡೀಸ್ ಟಿಲೋನಿಯಾದ ಎಸ್‌ಡಬ್ಲುಆರ್‌ಸಿಗೆ ಪ್ರವಾಸ ಕೈಗೊಳ್ಳಲು ನಿಖಿಲ್‌ಗೆ ಆಹ್ವಾನವಿತ್ತರು. ಯಾವುದೇ ನಿರೀಕ್ಷೆಯಿಲ್ಲದೆ ನಿಖಿಲ್ ಅವರೊಟ್ಟಿಗೆ ಪ್ರಯಾಣ ಬೆಳೆಸಿದ. ಟಿಲೋನಿಯಾದಲ್ಲಿ ನಿಖಿಲ್ ಅರುಣಾರನ್ನು ಭೇಟಿಯಾದ. ಆಕೆಯೊಡನೆ ಮಾತನಾಡಿದ ಮೇಲೆ ನಿಖಿಲ್‌ಗೆ ತನ್ನ ಹುಡುಕಾಟದ ಪ್ರತಿಧ್ವನಿ ಇಲ್ಲಿಯೇ ಇದೆ ಎನ್ನಿಸಿಬಿಟ್ಟಿತು. ನಂತರದಲ್ಲಿ ಶಂಕರನನ್ನು ಭೇಟಿಯಾದಾಗ ಈ ಭಾವನೆ ಮತ್ತಷ್ಟು ತೀವ್ರವಾಯಿತು.

ನಿಖಿಲ್‌ಗೆ ತಾನು ಈ ಹಿಂದೆ ಇದ್ದ ಯಾವುದೇ ದೊಡ್ಡ ಬಂಗಲೆಗಿಂತಲೂ ದೇವದೂಂಗ್ರಿಯೇ ಹೆಚ್ಚು ಆಪ್ಯಾಯಮಾನವೆನಿಸಿತು.

ಸೋಹನ್‌ಗರ್:ಬಂಡಾಯದ ಕಿಡಿ

ನೀಳಕಾಯದ ಇಂಗ್ಲಿಷ್ ಅಧ್ಯಾಪಕ ಮಿಶ್ರಾಜಿಗೆ ದೇವದೂಂಗ್ರಿಯ ಕುಟುಂಬದ ಜೀವನ ಯಾತ್ರೆಯ ಕಥೆ ಕೇಳಿ ಆಶ್ಚರ್ಯವಾಯಿತು. ಆತನಿಗೆ ಅಚ್ಚರಿ ಉಂಟಾಗಲು ಅನೇಕ ಕಾರಣಗಳಿದ್ದವು. ೧೯೮೮ರ ಒಂದು ಬೆಳಿಗ್ಗೆ ಸೋಹನ್‌ಗರ್‌ನಿಂದ ಆಚೆ ಒಂದು ಶಾಮಿಯಾನದ ಬುಡದಲ್ಲಿ ಜನ ಸೇರಿರುವುದನ್ನು ಅಚ್ಚರಿಯಿಂದ ನೋಡಿದರು. ಅದೊಂದು ಅನಿರೀಕ್ಷಿತ ಹಾಗೂ ಸ್ವಾಗತಾರ್ಹ ಬೆಳವಣಿಗೆಯಾಗಿತ್ತು. ಮಾರ್ಕ್ಸ್ ಮತ್ತು ಲೆನಿನ್ ಹೆಸರು ಒತ್ತಟ್ಟಿಗಿರಲಿ, ಕ್ರಾಂತಿ ಎಂಬ ಶಬ್ದವನ್ನೇ ಕೇಳಿರದ ಗ್ರಾಮಸ್ಥರು ಶಾಂತಿಯಿಂದ ಒಟ್ಟಾಗಿ ಹರಿಸಿಂಗ್‌ನಿಂದ ಭೂಮಿಯನ್ನು ಕಿತ್ತುಕೊಳ್ಳುತ್ತಾರೆ ಎಂದು ಯಾರೂ ಭಾವಿಸಿರಲಿಲ್ಲ. ಈ ನಗರದಲ್ಲಿ ಪ್ರೊ.ಮಿಶ್ರಾರ ಅಸಹನೀಯ ಒಂಟಿತನ ದೂರವಾದಂತೆ ಕಂಡುಬಂತು. ಹೊಟ್ಟೆಪಾಡಿಗಾಗಿ

ಆರ್.ಎನ್.ಮಿಶ್ರಾ ತಮ್ಮ ೨೦ನೆಯ ವಯಸ್ಸಿನಲ್ಲಿ ಬಿಹಾರದಿಂದ ಇಲ್ಲಿಗೆ ಬಂದಿದ್ದರು. ಅವರು ರಾಜಸ್ಥಾನದ ವಿವಿಧ ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಕಲಿಸುತ್ತಿದ್ದರು. ಭೀಮ್‌ನಲ್ಲಿ ಬಹಳ ವರ್ಷ ಇದ್ದ ಕಾರಣ ಅವರನ್ನು ಆಬಾಲವೃದ್ಧರಾದಿಯಾಗಿ ಗೌರವಯುತವಾಗಿ 'ಮಿಶ್ರಾಜಿ' ಎಂದೇ ಕರೆಯುತ್ತಿದ್ದರು. ಮಿಶ್ರಾಜಿ ಬಲಪಂಥೀಯ ಧೋರಣೆಗಳನ್ನು ಇಟ್ಟುಕೊಂಡಿದ್ದ ತಮ್ಮ ಸಹೋದ್ಯೋಗಿಗಳನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಆದರೂ ನಿರಂತರವಾಗಿ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಅವರೇ ಆಯ್ಕೆಯಾಗುತ್ತಿದ್ದರು. ಭೀಮ್ ಹಾಗೂ ಸುತ್ತಮುತ್ತಲ ಪರಿಸರದಲ್ಲಿ ಕ್ರಾಂತಿಯ ಕಲ್ಪನೆ ಮಸುಕಾಗಿದ್ದಾಗಲೂ ಮಿಶ್ರಾಜಿ ತಮ್ಮ ಕನಸನ್ನು ಕಾಪಿಟ್ಟುಕೊಂಡಿದ್ದರು. ಇದು ಹಲವರ ಬದುಕನ್ನು ಎದಲಾಯಿಸಲು ಕಾರಣವಾಯಿತು. ಮಿಶ್ರಾ ತಾವು ವರ್ಗವಾಗಿ ಹೋದ ಶಾಲೆಗಳಲ್ಲಿ ಕ್ರಾಂತಿಯ ಅಗತ್ಯದ ಕುರಿತು ಬೋಧಿಸಿದರು. ನಿರಂತರವಾಗಿ ವಿದ್ಯಾರ್ಥಿಗಳ ವಿಕಾಸಕ್ಕೆ ಅನುವಾದ ಮಿಶ್ರಾ, ಅಪ್ಪಟ ಸ್ಟಾಲಿನ್‌ವಾದಿಯಾಗಿದ್ದರು. ತಮ್ಮನ್ನು ಹೀಗೆಂದು ಕರೆದುಕೊಳ್ಳಲು ಅವರು ಎಂದೂ ನಾಚಿಕೆಪಟ್ಟುಕೊಳ್ಳಲಿಲ್ಲ. ಆದರೆ ಅವರು ಎಂದೂ ಸಹ ಯಾವ ಪಂಥಗಳ ವಿಚಾರಧಾರೆಯನ್ನೂ ವಿದ್ಯಾರ್ಥಿಗಳ ತಲೆಯಲ್ಲಿ ತುಂಬಲಿಲ್ಲ. 'ಬಾವಿಯೊಳಗಿನ ಕಪ್ಪೆಯಾಗದೇ ವಿಶಾಲದೃಷ್ಟಿಕೋನ ಬೆಳೆಸಿಕೊಳ್ಳಿ. ಅನ್ಯಾಯದ ವಿರುದ್ಧ ಹೋರಾಡಿ' ಎಂದು ಮಕ್ಕಳನ್ನು ಹುರಿದುಂಬಿಸುತ್ತಿದ್ದರು. ದೇವದೂಂಗ್ರಿಯಲ್ಲಿರುವ ಈ ಕುಟುಂಬದ ಜತೆ ಹಲವಾರು ತಿಂಗಳು ಒಡನಾಟ ಮಾಡಿಯೂ ಮಿಶ್ರಾಜಿಯವರ ಅಚ್ಚರಿ ಕಡಿಮೆಯಾಗಲಿಲ್ಲ. ಚಿರಪರಿಚಿತವಾಗಿರುವ ಯಾವುದೇ ಹಣೆಪಟ್ಟಿ ಈ ಕುಟುಂಬಕ್ಕೆ ಸರಿಹೊಂದುತ್ತಿರಲಿಲ್ಲ. ಅಲ್ಲದೆ ಇವರು ಯಾವುದೇ ರಾಜಕೀಯ ಪಕ್ಷಕ್ಕೂ ಸೇರಿದವ-ರಾಗಿರಲಿಲ್ಲ; ಸ್ಪಷ್ಟವಾಗಿ ಗುರುತಿಸಬಹುದಾದ ಯಾವುದೇ ಸಿದ್ಧಾಂತಕ್ಕೂ ಅಂಟಿಕೊಂಡಿರಲಿಲ್ಲ ಅಥವಾ ಸರ್ಕಾರೇತರ ಸಂಘ-ಸಂಸ್ಥೆಗಳಿಗೂ (ಎನ್‌ಜಿಒ) ಸೇರಿದವರಾಗಿರಲಿಲ್ಲ. ಇವರು ಅಕಾಡೆಮಿಕ್ ಅರ್ಥದಲ್ಲಿ ಸಂಶೋಧನೆ ಅಥವಾ ಅಧ್ಯಯನ ನಿರತರೂ ಆಗಿರಲಿಲ್ಲ. ಆದರೆ ಸರ್ಕಾರ ಹಮ್ಮಿಕೊಂಡಿರುವ ಬಡತನ ನಿರ್ಮೂಲನಾ ಕಾರ್ಯಕ್ರಮದಲ್ಲಿ ಜನರ ಸಹಭಾಗಿತ್ವ ಕುರಿತು ಅಧ್ಯಯನ ಕೈಗೊಳ್ಳಲು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಶಿಕ್ಷಣ ಇಲಾಖೆಯಿಂದ ೩೦ ಸಾವಿರ ರೂಪಾಯಿ ಧನಸಹಾಯ ಪಡೆದಿದ್ದರು. ಈ ಕುಟುಂಬದವರ ಸರಳ ಜೀವನ ಶೈಲಿ ಮಿಶ್ರಾಜಿಯವರ ಅಂತಃಕರಣ ಕದಡಿತು. ಶಂಕರ್, ಆನ್ಸಿ, ಅರುಣಾ ಹಾಗೂ ನಿಖಿಲ್ ಸರ್ಕಾರ ನೀಡಿರುವ ಧನಸಹಾಯದಿಂದ ಕನಿಷ್ಠ ಸಂಬಳ ಪಡೆಯುತ್ತಿದ್ದಾರೆಂಬ ವಿಷಯ ನಂತರದಲ್ಲಿ ಮಿಶ್ರಾಜಿಯವರ ಅರಿವಿಗೆ ಬಂತು. ೧೯೮೭ರಲ್ಲಿ ಅವರಲ್ಲಿ ಪ್ರತಿಯೊಬ್ಬರು ತಿಂಗಳಿಗೆ ರೂ ೪೨೦ಗಳನ್ನು ವೇತನವಾಗಿ ಪಡೆಯುತ್ತಿದ್ದರು. ಇಷ್ಟೆಲ್ಲ ಆತ್ಮೀಯ ಒಡನಾಟದ ನಡುವೆಯೂ ದೇವದೂಂಗ್ರಿಯಂಥ ಊರಿನಲ್ಲಿ ಏನನ್ನಾದರೂ ಆರಂಭಿಸುವ ಈ ಕುಟುಂಬದ ನಂಬುಗೆಯ ಬಗ್ಗೆಯೇ ಮಿಶ್ರಾಜಿಗೆ ಅನುಮಾನ ಕಾಡಲಾರಂಭಿಸಿತು. ಬದುಕಿನಲ್ಲಿ ರೂಢಿಸಿಕೊಂಡ ನೈತಿಕತೆಯನ್ನು ಸಿದ್ಧಾಂತವಾಗಿ ಪರಿವರ್ತಿಸಬಹುದೆಂಬ ಇವರ ನಂಬಿಕೆಯನ್ನು ಮಿಶ್ರಾಜಿ ಕೂಡ ಒಪ್ಪಿ ಕೊಂಡಿದ್ದರು. ನಿಜವಾಗಿಯೂ ಈ ಜನರ ವೈಯಕ್ತಿಕ ಹಾಗೂ ಸಾಮಾಜಿಕ ನೈತಿಕತೆಯಲ್ಲಿ ಯಾವ ಭಿನ್ನತೆಯೂ ಇರಲಿಲ್ಲ. ಆದರೆ ಕೇವಲ ಈ ನೈತಿಕ ಬಲದಿಂದ

ಮಾತ್ರವೇ ಒಂದು ಚಳುವಳಿಯನ್ನು ಕಟ್ಟಲು ಸಾಧ್ಯವೇ? ಶೋಷಣೆಯ ವಿರುದ್ಧ ಹೋರಾಡಲು ಜನರಿಗೆ ಇದು ಸೈದ್ಧಾಂತಿಕ ಚೌಕಟ್ಟು ನೀಡಬಲ್ಲುದೇ? ಮಿಶ್ರಾಜಿಯವರಿಗೆ ಈ ಪ್ರಶ್ನೆಗಳು ಅಷ್ಟಾಗಿ ಕಾಡಲಿಲ್ಲ. ಅವರು ಆಗತಾನೆ ರೂಪುಗೊಳ್ಳುತ್ತಿರುವ ಹೋರಾಟದಲ್ಲಿ ತಮ್ಮನ್ನು ಗುರುತಿಸಿಕೊಳ್ಳಲು ತೊಡಗಿದ್ದರು. ಯಾವುದೇ ತಾತ್ವಿಕ ಪ್ರಶ್ನೆಗಳಿಗಿಂತ ಹೆಚ್ಚಾಗಿ ತೆರೆದುಕೊಳ್ಳುತ್ತಿರುವ ಕ್ರಿಯೆ ಮಿಶ್ರಾಜಿಯವರನ್ನು ಹೆಚ್ಚು ಆಕರ್ಷಿಸಿತು. ಇಲ್ಲಿ 'ಶ್ರಮಿಕ್ ಮಹಿಳಾ ವಿಕಾಸ್ ಏವಂ ಅನುಸಂಧಾನ್', ಸೋಹನ್‌ಗರ್ ಇದರ ಉದ್ಘಾಟನಾ ಕಾರ್ಯಕ್ರಮಕ್ಕೆ ನೂರಾರು ಜನ ಸೇರಿದ್ದರು. ಠಾಕೂರ್ ಹರಿಸಿಂಗ್‌ನಿಂದ ವಶಪಡಿಸಿಕೊಂಡ ಭೂಮಿಯನ್ನು ಸಮುದಾಯದ ನಿಯಂತ್ರಣಕ್ಕೆ ಒಳಪಡಿಸುವುದು ಈ ಸಮಿತಿಯ ಜವಾಬ್ದಾರಿಯಾಗಿತ್ತು.

೭೦ರ ದಶಕದ ಉತ್ತರಾರ್ಧಕ್ಕಿಂತಲೂ ಹಿಂದೆ, ತುರ್ತು ಪರಿಸ್ಥಿತಿಯ ನಂತರದ ವರ್ಷಗಳಲ್ಲಿ ರಾಜಸ್ಥಾನದಲ್ಲಿ ಆಡಳಿತದಲ್ಲಿದ್ದ ಜನತಾ ಪಕ್ಷ ಸರ್ಕಾರ, ಗ್ರಾಮದೆಡೆಗೆ ಆಡಳಿತ (ಪ್ರಶಾಸನ್ ಗಾಂವ್ ಕಿ ಔರ್)ಎನ್ನುವ ಪರಿಕಲ್ಪನೆಯನ್ನು ಅನುಷ್ಠಾನಗೊಳಿಸಿತು: ಆ ಪ್ರಕಾರ ಪ್ರತಿ ಉಪವಿಭಾಗಾಧಿಕಾರಿಯೂ (ಎಸ್‌ಡಿಎಂ) ನಿಯಮಿತವಾಗಿ ಹಳ್ಳಿಗೆ ಭೇಟಿಕೊಡುತ್ತಾರೆ. ತಮ್ಮ ವ್ಯಾಪ್ತಿಯ ಗ್ರಾಮಗಳಲ್ಲಿ ಜನತಾ ನ್ಯಾಯಾಲಯ ನಡೆಸುತ್ತಾರೆ. ಇಲ್ಲಿ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಮುಂದಿಡಬಹುದು. ತಮ್ಮ ವ್ಯಾಪ್ತಿಯಲ್ಲಿ ಬರುವ ದೂರುಗಳಿಗೆ ಅವರು ಕ್ರಮ ಕೈಗೊಳ್ಳುತ್ತಾರೆ. ಕೆಲವೊಮ್ಮೆ ಸ್ಥಳದಲ್ಲಿಯೇ ನ್ಯಾಯದಾನ ವ್ಯವಸ್ಥೆಯಾಗುತ್ತದೆ.

೧೯೮೮ರ ಚಳಿಗಾಲದಲ್ಲಿ ಭೀಮ್‌ನ ಉಪವಿಭಾಗಾಧಿಕಾರಿ ತಾಲ್ ಪಂಚಾಯ್ತಿಯಲ್ಲಿ ಜನತಾ ನ್ಯಾಯಾಲಯ ನಡೆಸುವುದಾಗಿ ಪ್ರಕಟಣೆ ಹೊರಡಿಸಿದರು. ದೇವದೂಂಗ್ರಿಯಲ್ಲಿ ಹರಿಸಿಂಗ್ ನಿಯಂತ್ರಣದಿಂದ ಭೂಮಿಯನ್ನು ಮರಳಿಪಡೆಯಲು ಇದೊಂದು ಉತ್ತಮ ಅವಕಾಶ ಎಂದು ಲಾಲ್‌ಸಿಂಗ್ ಹಾಗೂ ಸ್ನೇಹಿತರು ಭಾವಿಸಿದರು. ಆದರೆ ಅವರಿಗೆ ಜಮೀನು ಸರ್ವೆ ನಂಬರ್(ಖಾಸ್ರಾ) ಇತ್ಯಾದಿ ದಾಖಲೆಗಳು ಬೇಕಾಗಿದ್ದವು. ಇವರ ಅದೃಷ್ಟಕ್ಕೆ ಪಟವಾರಿ, ಖಾತೆ ಪುಸ್ತಕಗಳನ್ನು ತೆಗೆದು ಸಂಬಂಧಿಸಿದ ಎಲ್ಲ ದಾಖಲೆ ಹಾಗೂ ಮಾಹಿತಿಗಳನ್ನು ಇವರಿಗೆ ತಲುಪಿಸಿದ. ಈಗ ಅವರ ಬಳಿ ಅಗತ್ಯ ದಾಖಲೆಗಳ ಜತೆಯಲ್ಲಿ ಆಡಳಿತಶಾಹಿ ಪ್ರಕ್ರಿಯೆ ಬಗ್ಗೆ ಅರುಣಾ ಹೊಂದಿದ್ದ ತಿಳುವಳಿಕೆಯೂ ಸಹಾಯಕ್ಕೆ ಬಂತು. ತಾಲ್‌ನಲ್ಲಿ ನಡೆದ ಜನತಾ ನ್ಯಾಯಾಲಯದ ಮುಂದೆ ಸೋಹನ್‌ಗರ್ ತಂಡ ಅರ್ಜಿ ಸಲ್ಲಿಸಿತು. ದಶಕಗಳಿಂದ ನಡೆದುಕೊಂಡು ಬಂದ ಯಥಾಸ್ಥಿತಿಯನ್ನು ಪ್ರಶ್ನಿಸಲು ಸಾಧ್ಯವೇ?

ಜಮೀನು ಹರಿಸಿಂಗ್‌ಗೆ ಸೇರಿದ್ದಲ್ಲ ಎಂದು ತೀರ್ಪು ನೀಡುವ ಮೂಲಕ ನ್ಯಾಯಾಧೀಶರು ಗ್ರಾಮಸ್ಥರನ್ನು ಆಶ್ಚರ್ಯಚಕಿತರನ್ನಾಗಿಸಿದರು. ಆದರೆ ಹೀಗೆಂದ ಮಾತ್ರಕ್ಕೆ ಭೂಮಿಯನ್ನು ಗ್ರಾಮಕ್ಕೆ ಅಥವಾ ಸಮುದಾಯಕ್ಕೆ ಬಿಟ್ಟುಕೊಡಲು ಸಾಧ್ಯವಿರಲಿಲ್ಲ. ಇದು ಖಾಜಿ ಅಥವಾ ಸರ್ಕಾರದ ಮೂಲಕ ಜನರಿಗೆ ಸೇರಬೇಕಾದದ್ದು. ಅಲ್ಲದೇ ಆ ವೇಳೆಗೆ ಸೋಹನ್‌ಗರ್ ಗ್ರಾಮ ಸಂಪೂರ್ಣ ಸಂಘಟಿತವಾಗಿರಲಿಲ್ಲ. ತೀರ್ಪಿನ ಪರಿಣಾಮ ಗ್ರಾಮದಲ್ಲಿ ವಿಘಟನೆ ಪ್ರಕ್ರಿಯೆ ಆರಂಭವಾಯಿತು. ಕೆಲವರಿಗೆ ಈ ತೀರ್ಪು ಸಂತಸ ತಂದಿತು. ಇನ್ನು ಕೆಲವರು ಈ

ವಿಷಯದಲ್ಲಿ ಹರಿಸಿಂಗ್ ಪರವಾಗಿದ್ದರು. ಮಹಿಳಾ ಸಮಿತಿ ರಚಿಸಿ ನೋಂದಣಿ ಮಾಡಿ ಅದಕ್ಕೆ ಭೂಮಿಯನ್ನು ವರ್ಗಾಯಿಸುವ ಮೂಲಕ ಹರಿಸಿಂಗ್ ಪರವಾಗಿದ್ದ ಜನರನ್ನು ಸಂತೈಸಲಾಯಿತು. ಈ ಹಂತದಲ್ಲಿ ಮಹಿಳಾ ಸಮಿತಿಯ ಸದಸ್ಯೆ ಭೂರಿಯ ಎಂಬಾಕೆಯ ನಾಯಕತ್ವ ಗುಣ ಎಲ್ಲರ ಗಮನ ಸೆಳೆಯಿತು.

ಭೂರಿಯಾಳ ಸುಕ್ಕುಗಟ್ಟಿದ ಮುಖ ಹಾಗೂ ಮೂಳೆಬಿಟ್ಟುಕೊಂಡ ಕೈ ಅವಳ ಆತ್ಮಬಲವನ್ನು ಕುಗ್ಗಿಸಲಿಲ್ಲ. ಮಗ ಲಾಲ್‌ಸಿಂಗ್‌ನಂತೆಯೇ ಪರಿವರ್ತನೆಯ ಹೋರಾಟಕ್ಕೆ ಶಕ್ತಿ ತುಂಬಿದಳು. ಭೂರಿಯಾಳ ಇರವಿಕೆ, ಹೋರಾಟ ಹಾಗೂ ಆಕೆಯ ಭಾಷೆ ಅಧಿಕಾರಸ್ಥ ಪ್ರಪಂಚಕ್ಕೆ ಅಪರಿಚಿತವಾಗಿದ್ದವು. ಅವಳ ಒಡನಾಟ ಸಾಧಿಸಲು ದೇವದೂಂಗ್ರಿ ಕುಟುಂಬವೂ ಕಷ್ಟಪಡಬೇಕಾಯಿತು. ಹೊಲ-ಗದ್ದೆ ಕೆಲಸ, ಮಕ್ಕಳ ಲಾಲನೆ-ಪಾಲನೆ, ಸಾಮಾಜಿಕ ಚಟುವಟಿಕೆಗಳು, ಅನ್ಯಾಯದ ವಿರುದ್ಧ ಹೋರಾಟ-ಇವೆಲ್ಲವೂ ಭೂರಿಯಾ ಬದುಕಿನ ನಿರಂತರ ಲಯಗಳಾಗಿದ್ದವು. ಭೂರಿಯಾ ತಾನು ಪಂಚಾಯ್ತಿ ಸದಸ್ಯಳಾಗಿ ಸಮಸ್ಯೆಗಳನ್ನು ನಿರ್ವಹಿಸುವುದು ಹಾಗೂ ಮೊಮ್ಮಕ್ಕಳನ್ನು ನಿಭಾಯಿಸುವುದನ್ನು ಏಕಕಾಲಕ್ಕೆ ಮಾಡಬಲ್ಲವಳಾಗಿದ್ದಳು. ಅರುಣಾ ಆಕೆಯನ್ನು ಪ್ರಶಂಸಿಸಿದರೆ ನಾಚಿಕೆಯಿಂದ ಮುಗುಳ್ನಗುತ್ತಿದ್ದಳು. ಅದನ್ನು ಅರುಣಾ ಹೀಗೆ ದಾಖಲಿಸಿದ್ದರು:

'ಆಕೆಯ ಉಚ್ಚಾರಣೆ ನಮ್ಮಂತಲ್ಲ.... ಕಾಲದ ಬಗ್ಗೆ ಆಕೆಗಿರುವ ಪರಿಕಲ್ಪನೆ ನಮಗಿಲ್ಲ. ಕಾಲ ಸರಳರೇಖಾತ್ಮಕವಾಗಿರುವುದರಿಂದ ಅದರೊಂದಿಗೆ ಹೆಜ್ಜೆ ಹಾಕಲು ನಾವು ಅವಸರಿಸುತ್ತೇವೆ, ಗೊಂದಲಕ್ಕೊಳಗಾಗುತ್ತೇವೆ. ಆದರೆ ಆಕೆಗೆ ಕಾಲ ಒಂದು ಚಕ್ರ. ಹಾಗಾಗಿ ಆಕೆ ಹುಟ್ಟು-ಸಾವು ಮಾತ್ರವಲ್ಲ, ದೈನಂದಿನ ಚಟುವಟಿಕೆಗಳನ್ನು, ಬದುಕಿನ ಕರಾಳಮುಖವನ್ನು ಆ ದೃಷ್ಟಿಯಿಂದಲೇ ನೋಡುತ್ತಾಳೆ.

ದೇವದೂಂಗ್ರಿ ಕುಟುಂಬದ ನೆರವಿನಿಂದ ಈ ಸಮಿತಿಗೆ ಬಂಜರು ಭೂಮಿ ಅಭಿವೃದ್ಧಿ ಮಂಡಳಿ (ಡಬ್ಲುಎಲ್‌ಡಿಬಿ)ಯಿಂದ ಅನುದಾನ ದೊರೆಯಿತು. ಈ ನೆರವಿನಿಂದ ಆ ಜಮೀನಿನ ಸುತ್ತಮುತ್ತ ಗೋಡೆ ಕಟ್ಟಲು ಹಾಗೂ ವಿವಿಧ ಜಾತಿಯ ೨೦,೦೦೦ ಸಸಿಗಳನ್ನು ನೆಡಲು ಸಾಧ್ಯವಾಯಿತು. ಸೋಹನ್‌ಗರ್ ನಾಗರಿಕರು ಕಲ್ಲಿನ ಕಟ್ಟೆ ನಿರ್ಮಿಸುವುದು, ಬಸಿ ಕಾಲುವೆ ತೋಡುವುದು, ಬದುಗಳನ್ನು ನಿರ್ಮಿಸುವುದೇ ಮೊದಲಾದ ನೀರು ಉಳಿಸುವ ಕೆಲಸವನ್ನು ಮಾಡಿದರು. ಕಾಡು ಬೆಳೆಯಲಿ ಎನ್ನುವ ಉದ್ದೇಶದಿಂದ ಆರಂಭದಲ್ಲಿ ದನಮೇಯಿಸುವುದು, ಉರುವಲಿಗೆ ಕಟ್ಟಿಗೆ ತರುವುದನ್ನು ನಿಷೇಧಿಸಲಾಯಿತು. ಆ ನಂತರದ ದಿನಗಳಲ್ಲಿ ಈ ಗೋಮಾಳವನ್ನು (ಬೀಡಾ) ಸಮುದಾಯಕ್ಕೆ ಬಿಟ್ಟುಕೊಡಲಾಯಿತು.

ಎರಡೇ ವರ್ಷಗಳಲ್ಲಿ ಬೀಡಾ ಹಸಿರಿನಿಂದ ನಳನಳಿಸತೊಡಗಿತು. ಈಗ ಇದು ಸೋಹನ್‌ಗರ್‌ನ ಮುಕ್ಕಾಲು ಭಾಗ ಜನಸಂಖ್ಯೆಗೆ ಉರುವಲು ಮತ್ತು ಮೇವನ್ನು ಪೂರೈಸುತ್ತಿದೆ. ಅನಂತರ ಉಳಿದ ಜಮೀನು ಅಂದರೆ ವರ್ಗೀಕರಿಸದ ಮತ್ತು ಸರ್ಕಾರದ್ದಲ್ಲದ ನೆಲವನ್ನು ಅರಣ್ಯ ಇಲಾಖೆ ವಶಪಡಿಸಿಕೊಂಡಿತು. ಅದು ಈಗ ಜಂಟಿ ಅರಣ್ಯ ಆಡಳಿತ ಯೋಜನೆಯ

ಭಾಗವಾಗಿದೆ. ಬೇರೆ ಭಾಗದ ಜನರಂತೆಯೇ ಸೋಹನ್‌ಗರ್ ಜನರೂ ಕೂಡ ತಮ್ಮನ್ನು ಕಿತ್ತು ತಿನ್ನುವ ಕ್ಷಾಮಗಳಿಗೆ ಗ್ರಾಮವನ್ನು ಸುತ್ತುವರೆದ ಕಾಡು ನಾಶವಾಗಿರುವುದೇ ಕಾರಣ ಎಂದು ನಂಬಿದ್ದರು. ಈ ಎಲ್ಲ ಕಾರಣಗಳಿಂದ ಗ್ರಾಮದ ಸೆರಗಿನಲ್ಲಿರುವ ಈ ನಿತ್ಯಹರಿದ್ವರ್ಣದ ಗೋಮಾಳಕ್ಕೆ ಮಹತ್ವ ಬಂತು.

ಈ ನಡುವೆ ದೇವದೂಂಗ್ರಿಯಲ್ಲಿ ಏಕಮೇವ ಗುಲ್‌ಮೊಹರ್ ಗಿಡ ಎತ್ತರವಾಗಿ ಬೆಳೆಯಿತು. ಪಕ್ಕದ ಬಿದಿರ ಮೆಳೆಯ ಜತೆ ಇದರ ರೆಂಬೆಗಳು ಗಾಳಿಗೆ ತೊನೆದಾಡುತ್ತಿದ್ದವು. ಸ್ನಾನ ಹಾಗೂ ಪಾತ್ರೆ ತೊಳೆದ ನೀರು ಕಲ್ಲುಗಳ ಸಂದಿಯಿಂದ ಈ ಗಿಡಗಳ ಬುಡಕ್ಕೆ ಹರಿದು ಬರುತ್ತಿತ್ತು. ಈ ವಿಶಿಷ್ಟ ಕುಟುಂಬ ವಾಸಿಸುತ್ತಿರುವ ಮನೆಯಲ್ಲಿ ಅವರವರ ಪಾತ್ರೆ, ಲೋಟಗಳನ್ನು ಅವರವರೇ ತೊಳೆಯುತ್ತಿದ್ದರು. ಜೊತೆಗೆ ಬರುವ ಅತಿಥಿಗಳೂ, ಅಷ್ಟೇ ಏಕೆ ಜಿಲ್ಲಾಧಿಕಾರಿ ಕೂಡ ಹೀಗೆಯೇ ಮಾಡಬೇಕಾಗಿತ್ತು. ಇದು ಇಲ್ಲಿಯ ಜನರಿಗೆ ಅಚ್ಚರಿಯ ಸುದ್ದಿಯಾಗಿತ್ತು. ಮೋಟ್‌ಸಿಂಗ್‌ನಂತವರಿಗೆ ಇದು ಸರಿಕಾಣುತ್ತಿರಲಿಲ್ಲ. ಆದರೆ ಸಮಯ ಕಳೆದಂತೆ ಚುನ್ನಿಬಾಯಿಯಂತಹವರ ಮನೆಗೆ ಹೋದರೂ ಇದೇ ರೂಢಿಯನ್ನು ಅನುಸರಿಸಬೇಕಾಗಿತ್ತು. ಶಂಕರ್ ಹಾಗೂ ನಿಖಿಲ್ ಇಂಥ ಪರಿಸರಕ್ಕೆ ಬೇಗ ಹೊಂದಿಕೊಂಡರು.

ಕನಿಷ್ಠ ಕೂಲಿಗಾಗಿ ಹೋರಾಟ:

ಚುನ್ನಿಬಾಯಿ ಎರಡು ವಾರಗಳಿಂದ ವಿಪರೀತ ಜ್ವರದಿಂದ ಬಳಲುತ್ತಿದ್ದಳು. ಮನೆಯ ಕತ್ತಲ ಕೋಣೆಯ ಚಿಂದಿ ಹಾಸಿಗೆಯಲ್ಲಿ ಮಲಗಿದ್ದ ಅವಳಿಗೆ, ಮಾತನಾಡಲೂ ತ್ರಾಣವಿರಲಿಲ್ಲ. ಚಿಕಿತ್ಸೆ ಪಡೆಯಲು ಸಮೀಪದ ಬ್ರಾರ್‌ನ 'ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋಗಲಿಲ್ಲವೇ?' ಎಂದು ಶಂಕರ್ ಕೇಳಿದ್ದಕ್ಕೆ: 'ಇಲ್ಲ' ಎಂದು ತಲೆ ಅಲ್ಲಾಡಿಸಿದಳು. ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋಗುವುದೆಂದರೆ ಅದು ಖರ್ಚಿನ ಬಾಬ್ತು. ವೈದ್ಯರು ಸರ್ಕಾರ ತಮಗೆ ನೀಡಿದ ಮನೆಯನ್ನು ಕ್ಲಿನಿಕ್ ಆಗಿ ಪರಿವರ್ತಿಸಿಕೊಂಡಿದ್ದರು. ಅಲ್ಲಿನ ವೈದ್ಯರು ಆಸ್ಪತ್ರೆಯಲ್ಲಿ ರೋಗಿಗಳನ್ನು ನೋಡುವುದಕ್ಕಿಂತ ಹೆಚ್ಚಾಗಿ ತಮ್ಮ ಮನೆಯಲ್ಲಿಯೇ ಆ ಕೆಲಸವನ್ನು ಮಾಡುತ್ತಿದ್ದರು. ಮನೆಗೆ ಹೋದವರು ತಪಾಸಣೆಗಾಗಿ ಹಣ ನೀಡಬೇಕಲ್ಲದೇ ಔಷಧಿಗಳಿಗಾಗಿ ಪ್ರತ್ಯೇಕ ಖರ್ಚೂ ಮಾಡಬೇಕಾಗುತ್ತಿತ್ತು.

ಚುನ್ನಿಬಾಯಿ ಹಾಗೂ ಆಕೆಯ ಪತಿ ಮೋಹನ್‌ಗೆ ತುಂಡು ಭೂಮಿ ಹೊರತುಪಡಿಸಿದರೆ ಮತ್ತೇನೂ ಇರಲಿಲ್ಲ. ಅದರಿಂದ ಬರುವ ಕಾಳು ಕಡಿ ೬ ತಿಂಗಳಿಗೂ ಸಾಕಾಗುತ್ತಿರಲಿಲ್ಲ. ಸರ್ಕಾರದ ಬರಪರಿಹಾರ ಕಾಮಗಾರಿಯಿಂದ ಬರುವ ಕೂಲಿಯನ್ನೇ ಅವರು ಅವಲಂಬಿಸಿದ್ದರು. ಅದು ಹೆಚ್ಚೇನೂ ಸಿಗುತ್ತಿರಲಿಲ್ಲ. ಮೋಹನ್ ಬಿಸಿರಕ್ತದ ತರುಣನಲ್ಲ. ಪೇಟೆಪಟ್ಟಣಗಳಿಗೆ ಹೋಗಿ ದುಡಿಯುವ ಶಕ್ತಿಯೂ ಆತನಿಗೆ ಇರಲಿಲ್ಲ. ನಗರಗಳಲ್ಲಿ ಕೆಲಸ ಮಾಡುತ್ತಿರುವ ಮೋಹನ್‌ನ ಮಕ್ಕಳು ಮನೆಗೆ ಹಣ ಕಳಿಸುತ್ತಾರೆಂಬ ಖಾತರಿಯೂ ಇರಲಿಲ್ಲ.

ಚುನ್ನಿಬಾಯಿಯ ಗ್ರಾಮವಾದ ತಲಾಯ್ ಸಮೀಪದ ವಿಶಾಲವಾದ ಬರಪೀಡಿತ ಭಾಗಕ್ಕೆ ದಾದಿರಪಟ್ ಎಂದು ಕರೆಯಲಾಗುತ್ತಿತ್ತು. ದಶಕಗಳಷ್ಟು ಹಿಂದೆ ಕ್ಷಾಮಪೀಡಿತ ಪ್ರದೇಶ ಎಂಬ ಪದಪುಂಜ ಸರ್ಕಾರದ ದಫ್ತರಶಾಹಿ ಆಡುನುಡಿಗೆ ಸೇರಿಹೋಯಿತು. ಬೇಸಿಗೆ ಸಮೀಪಿಸುತ್ತಿದ್ದಂತೆಯೇ ಈ ಭಾಗವನ್ನು ಕ್ಷಾಮಪೀಡಿತ ಪ್ರದೇಶವೆಂದು ಸರ್ಕಾರ ಘೋಷಿಸುತ್ತದೆಯೇ ಎಂದು ಜನ ಕಾಯುತ್ತಿದ್ದರು. ಬರಪರಿಹಾರ ಕಾಮಗಾರಿ ಎಂದಿನಿಂದ ಆರಂಭವಾಗುತ್ತದೆ ಎಂಬುದನ್ನು ಅವರು ತಿಳಿಯಲು ಮುಂದಾಗುತ್ತಿದ್ದರು.

ದಾದಿರಪಟ್‌ನ ಈ ಕಥೆ ೧೯೮೭ರ ಕೊನೆಯಲ್ಲಿಯೇ ಆರಂಭವಾಗುತ್ತದೆ. ಅನ್ನಿ ಮತ್ತು ಮಕ್ಕಳು ದೇವದೂಂಗ್ರಿಗೆ ಬಂದು ನೆಲೆಸಿದ್ದರು. ಆ ಸಮಯದಲ್ಲಿ ಚುನ್ನಿಬಾಯಿ, ಮೋಹನ್ ಮತ್ತು ಇತರರು ನೀರಾವರಿ ಇಲಾಖೆ ಕೈಗೊಂಡಿದ್ದ ಕಾಮಗಾರಿಗಾಗಿ ಮರಳು ತೋಡುತ್ತಿದ್ದರು. ಇಲ್ಲಿಯ ಮರಳನ್ನು ಸನಿಹದಲ್ಲಿದ್ದ ಕೆರೆಯ ಏರಿ ಕಟ್ಟಲು ಬಳಸಲಾಗುತ್ತಿತ್ತು. ಆ ಸಮಯದಲ್ಲಿ ಸರ್ಕಾರ ನಿಗದಿಪಡಿಸಿದ್ದ ಕನಿಷ್ಠ ದಿನಗೂಲಿ ಹನ್ನೊಂದು ರೂಪಾಯಿ. ಕೂಲಿಯಾಳುಗಳು ಗಂಡಸರಾಗಿದ್ದರೆ ೭ ಅಥವಾ ೮ ರೂಪಾಯಿ, ಹೆಣ್ಣಾಳಾಗಿದ್ದರೆ ೫ ರಿಂದ ೬ ರೂಪಾಯಿಗಳಿಗಿಂತ ಹೆಚ್ಚು ಕೊಡುತ್ತಿರಲಿಲ್ಲ.

ನಿಖಿಲ್, ಅರುಣಾ ಮತ್ತು ಶಂಕರ್‌ಗೆ ಈ ವಿಷಯ ಗೊತ್ತಾಯಿತು. ಈ ಬಗ್ಗೆ ತನಿಖೆಗೆ ಮುಂದಾದರು. ಮೊದಮೊದಲು ಈ ಸಮಸ್ಯೆಯ ಮೂಲ ಇರುವುದು ಅಳತೆಯಲ್ಲಿ ಎಂದು ತೋರುತ್ತಿತ್ತು. ಈ ವಿಷಯದಲ್ಲಿ ಕಿರಿಯ ಅಭಿಯಂತರರ ಮಾತೇ ಅಂತಿಮ. ಕೂಲಿಯಾಳುಗಳಿಗೆ ಇದರಲ್ಲಿ ಹೇಳುವುದೇನೂ ಇರಲಿಲ್ಲ. ಅವರ ಕೆಲಸದ ಆಧಾರದ ಮೇಲೆ ಕೂಲಿ ವಿತರಿಸುವುದಾದಲ್ಲಿ ಅವರು ೮ ಗಂಟೆಯ ಕಾಲ ಏಕಿರಬೇಕು? ಅದೇ ತಾನೆ ಕಾನೂನು ಪದವಿ ಪಡೆದು ಬಂದಿರುವ ನಿಖಿಲ್‌ಗೆ ಈ ವಿಚಾರ ಗೊತ್ತಿತ್ತು. ಈ ಬಗ್ಗೆ ನ್ಯಾಯಾಲಯದ ತೀರ್ಪುಗಳೂ ಇದ್ದವು. ಪೂರೈಸಿದ ಕೆಲಸ ಅಥವಾ ಸಮಯ ಇವುಗಳಲ್ಲಿ ಯಾವುದಾದರೂ ಒಂದನ್ನು ಪರಿಗಣಿಸಿ ಮಾತ್ರ ಕೂಲಿ ನಿರ್ಧರಿಸಬೇಕೇ ವಿನಾ ಎರಡನ್ನೂ ಗಣನೆಗೆ ತೆಗೆದುಕೊಳ್ಳಬಾರದು ಎಂಬುದು ಈ ತೀರ್ಪುಗಳ ಸಾರಾಂಶವಾಗಿತ್ತು.

ಕೂಡಲೇ ದೇವದೂಂಗ್ರಿಯ ತಂಡ ದಾದಿರಪಟ್‌ನ ಕಾಮಗಾರಿಯ ಪೂರ್ಣ ವಿವರಗಳನ್ನು ಕಲೆಹಾಕಿ ಚರ್ಚಿಸತೊಡಗಿತು. ಹಲವಾರು ಸಭೆ ನಡೆದ ಬಳಿಕ ಒಂದು ತೀರ್ಮಾನಕ್ಕೆ ಬರಲಾಯಿತು. ಹೊಸ ಕಾಮಗಾರಿ ಪ್ರಾರಂಭವಾದಾಗ ಎಲ್ಲ ೧೪೦ ಕೂಲಿಯಾಳುಗಳೂ ಭಾಗವಹಿಸುವುದು ಮತ್ತು ಕೆಲಸ ಪೂರ್ಣಗೊಳಿಸಿ ಪೂರ್ಣ ಕೂಲಿಯನ್ನು ಪಡೆಯುವುದು ಎಂದಾಯಿತು. ಕೂಲಿಯನ್ನು ಇಡೀ ತಂಡಕ್ಕೆ ನಿರ್ಧರಿಸುತ್ತಿರುವುದರಿಂದ ತಂಡಕ್ಕೆ ಹೊಸ ಸಂಘಟನಾ ಶಕ್ತಿಯನ್ನು ತುಂಬುವುದು ಇದರ ಉದ್ದೇಶವಾಗಿತ್ತು. ತಂಡ ಕೆಲಸ ಪೂರ್ಣಗೊಳಿಸಿದ್ದನ್ನು ಕಿರಿಯ ಎಂಜಿನಿಯರ್ ಒಪ್ಪಿಕೊಂಡ. ಆದರೂ ೧೧ ರೂಪಾಯಿ ಬದಲಿಗೆ ಕೇವಲ ೭ ರೂಪಾಯಿ ನೀಡಿದ.

ಕೂಲಿಕಾರರ ಈ ಸಮಸ್ಯೆಗೆ ಪರಿಹಾರವೇ ಇರಲಿಲ್ಲ. ಅಲ್ಲದೆ ಇದು ಅವರಿಗೆ ಅನಿವಾರ್ಯವೂ ಆಗಿತ್ತು. ಬರ ಪರಿಹಾರ ಕಾಮಗಾರಿಯಲ್ಲಿ ಎಂದೂ ಪೂರ್ಣ ಕೂಲಿ ನೀಡುತ್ತಿರಲಿಲ್ಲ. ಒಂದು ವೇಳೆ ಪೂರ್ಣಕೂಲಿಗೆ ಹಕ್ಕೊತ್ತಾಯ ಮಂಡಿಸಿ, ಈಗ ನೀಡುತ್ತಿರುವ ಕೂಲಿಯನ್ನು ನಿರಾಕರಿಸಿದರೆ? ದೇವದೂಂಗ್ರಿಯ ಸಂಘಟಕರು ಮುಂದಿಟ್ಟ ಈ ಸಲಹೆ ಚುನ್ನಿಬಾಯಿ ಮತ್ತು ಇತರರಿಗೆ ಹಿಡಿಸಿತು. ಹೀಗೆಯೇ ಮಾಡೋಣ ಎಂದು ಅವರೆಲ್ಲರೂ ನಿರ್ಧರಿಸಿದರು. ಆರಂಭದಲ್ಲಿ ಎಲ್ಲಾ ೧೪೦ ಕೆಲಸಗಾರರು ಕಿರಿಯ ಇಂಜಿನಿಯರ್ ನೀಡಿದ ಕೂಲಿ ನಿರಾಕರಿಸಲು ನಿರ್ಧರಿಸಿದರು. ಆದರೆ ಚುನ್ನಿಬಾಯಿ, ಭನ್ವರ್‌ಸಿಂಗ್ ಹಾಗೂ ಇನ್ನೊಬ್ಬ ಕೂಲಿಕಾರ ಮಾತ್ರ ಈ ನಿರ್ಧಾರಕ್ಕೆ ಕೊನೆಯವರೆಗೂ ಬದ್ಧರಾಗಿದ್ದರು. ಈ ಅಸಹಕಾರ ಚಳುವಳಿ ದಾದಿರಪಟ್‌ನ ಸುತ್ತಲಿನ ಹಲವಾರು ಗ್ರಾಮಸ್ಥರಿಗೆ ಅಚ್ಚರಿ ಹುಟ್ಟಿಸಿತು. ಕೆಲವೇ ಕೆಲವು ಕೂಲಿಯಾಳುಗಳು ಕೂಲಿ ತೆಗೆದುಕೊಳ್ಳದೇ ಹೋದಲ್ಲಿ ಸರ್ಕಾರ ಏಕೆ ತಲೆಕೆಡಿಸಿಕೊಳ್ಳಬೇಕು? ಆದರೂ ಕೂಡ ಈ ಅಸಹಕಾರದಿಂದ ಸ್ಥಳೀಯ ಅಧಿಕಾರಿಗಳು ಅಧೀರರಾದಂತೆ ಕಂಡುಬಂತು. ಈ ಬಂಡುಕೋರ ಕೂಲಿಕಾರರು ಭೀಮ್‌ನ ಉಪವಿಭಾಗೀಯ ಅಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸುತ್ತಿದ್ದರು. ಕನಿಷ್ಠ ಕೂಲಿಗಾಗಿ ನಡೆಯುತ್ತಿರುವ ಈ ಹೋರಾಟದ ಸುದ್ದಿಯನ್ನು ದಿನಪತ್ರಿಕೆಗಳು ನಿರಂತರವಾಗಿ ವರದಿ ಮಾಡಿದವು. ದೇವದೂಂಗ್ರಿಯ ಕುಟುಂಬ ಕೂಲಿಕಾರರ ಬೇಡಿಕೆ ಈಡೇರಿಸಬೇಕೆಂದು ಒತ್ತಾಯಿಸಿ ಉನ್ನತಾಧಿಕಾರಿಗಳ ಮನೆ ಎಡತಾಕಿತು.

ಈ ಬರ ಪರಿಹಾರ ಕಾಮಗಾರಿ, ಭಿಕ್ಷೆ ಅಥವಾ ಧರ್ಮ ಎಂದೇ ಅಧಿಕಾರಿಗಳು ಭಾವಿಸಿದ್ದರು. ಇಲ್ಲಿ ಕನಿಷ್ಠ ಕೂಲಿಯ ನಿಯಮವನ್ನು ಮುರಿಯಲಾಗುತ್ತಿದೆ ಎಂಬ ಅಂಶ ಸಂಘಟಕರ ಗಮನಕ್ಕೆ ಬಂತು. ಅತಿ ಕಡಿಮೆ ಕೂಲಿ ಕೊಡುವುದರಿಂದ ಹೆಚ್ಚು ಮಂದಿಗೆ ಸಂಪನ್ಮೂಲ ದೊರಕಿಸಿದಂತಾಗುತ್ತದೆ ಎಂದು ಅಧಿಕಾರಿಗಳು ಸಮರ್ಥಿಸಿಕೊಳ್ಳುತ್ತಿದ್ದರು. 'ನೀವು ನಮಗೆ ಬಿಟ್ಟಿ ಕೂಲಿ ಕೊಡುತ್ತಿಲ್ಲ' ಎಂದು ಚುನ್ನಿಬಾಯಿ ಮತ್ತು ಇತರರು ಅಧಿಕಾರಿಗಳಿಗೆ ತಿರುಗೇಟು ನೀಡಿದರು. ಇಂಥ ಸಮಯದಲ್ಲಿ ಕಾಮಗಾರಿಗೆ ಅಗ್ಗದಲ್ಲಿ ಸಿಗುವ ಕೂಲಿಕಾರರನ್ನು ಬಳಸಿಕೊಂಡು ಅಧಿಕಾರಿಗಳು ಲಾಭ ಪಡೆಯುತ್ತಿದ್ದರು.

ಆದರೆ ಕೂಲಿಕಾರರು ಕಾಮಗಾರಿಯನ್ನು ಈ ಹಿನ್ನೆಲೆಯಲ್ಲಿ ನೋಡುತ್ತಿರಲಿಲ್ಲ. ತಾನು ಮಾಡುವ ಕೆಲಸಕ್ಕೆ ನೆಲೆಯಿಲ್ಲ ಎಂದು ಕೆಲವೊಮ್ಮೆ ಕ್ರಾಂತಿಕಾರಿಯಂಥ ಚುನ್ನಿಬಾಯಿಗೂ ಅನ್ನಿಸುತ್ತಿತ್ತು. ಯಾರಾದರೂ ಕೂಲಿಕಾರರನ್ನು 'ನೀವೇನು ಮಾಡುತ್ತೀರಿ?' ಎಂದು ಕೇಳಿದರೆ ಅವರು 'ನಾನು ಮಣ್ಣನ್ನು ಅಗೆದು, ಎತ್ತಿ ಸುರಿಯುತ್ತೇನೆ' ಎಂದು ಮಾತ್ರ ಹೇಳಬಲ್ಲವರಾಗಿದ್ದರು. ದಾದಿರಪಟ್‌ನ ಹೋರಾಟ ಕೂಲಿಕಾರರು ತಮ್ಮ ಕೆಲಸದ ಬಗ್ಗೆ ಹೊಂದಿರುವ ಇಂಥ ಕಲ್ಪನೆಯನ್ನು ಬದಲಿಸತೊಡಗಿತು. ಇದು ಕೇವಲ ಹೆಚ್ಚುವರಿ ಕೆಲಸ ಅಥವಾ ಮೂರು ರೂಪಾಯಿಯ ಪ್ರಶ್ನೆಯಲ್ಲ; ಶ್ರಮದ ಬೆಲೆ ಎಂಬುದನ್ನು ಚುನ್ನಿಬಾಯಿ ಹಾಗೂ ಇತರರು ಅರಿತುಕೊಂಡರು. ಈ ದಿಸೆಯಲ್ಲಿ ಆಡಳಿತದ ಮೇಲೆ ಒತ್ತಡ ಹೇರಿ ತಮಗೆ ದೊರಕಬೇಕಾದ ನ್ಯಾಯಯುತ ಕೂಲಿಗಾಗಿ ಆಗ್ರಹಿಸತೊಡಗಿದರು.

ಒಂದು ವರ್ಷದವರೆಗೆ ಯಾವುದೇ ಬದಲಾವಣೆ ಆಗಲಿಲ್ಲ. ದಾದಿರಪಟ್‌ನ ಹೋರಾಟ ಉಪೇಕ್ಷೆಗೊಳಗಾಯಿತು. ಆದರೆ ೧೯೮೯ರ ಏಪ್ರಿಲ್‌ನಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್‌ರ ಜತೆಯಲ್ಲಿ ಬರಪರಿಹಾರ ಕಾಮಗಾರಿ ಆಯುಕ್ತರು ಆ ಪ್ರದೇಶಕ್ಕೆ ಭೇಟಿ ನೀಡುವಂತಾಯಿತು. ಕೂಲಿಕಾರರಿಗೆ ಆದ ಅನ್ಯಾಯವನ್ನು ಒಪ್ಪಿಕೊಂಡು ಎಲ್ಲರಿಗೂ ೧೧ ರೂಪಾಯಿ ಕನಿಷ್ಠ ಕೂಲಿ ಕೊಡುವಂತೆ ಆಯುಕ್ತರು ತಿಳಿಸಿದಾಗ ಕೂಲಿಕಾರರಿಗೇ ಸಂಭ್ರಮವೋ ಸಂಭ್ರಮ! ಇದು ನಿರಂತರ ಹೋರಾಟ ಹಾಗೂ ಅಚಲ ನಿರ್ಧಾರಕ್ಕೆ ದೊರೆತ ಜಯವಾಗಿತ್ತು.

ಆದರೆ ನೀರಾವರಿ ಇಲಾಖೆ ೯ ರೂಪಾಯಿಗಿಂತ ಒಂದು ಪೈಸೆ ಹೆಚ್ಚಿಗೆ ನೀಡುವುದಿಲ್ಲ ಎಂದಾಗ ಮತ್ತೆ ನಿರಾಸೆ ಕವಿಯಿತು. ಅದೇನೇ ಇರಲಿ, ಇತರ ಭಾಗದಲ್ಲಿ ಕನಿಷ್ಠ ಕೂಲಿಗಾಗಿ ಹೋರಾಟ ನಡೆಸಲು ದಾದಿರಪಟ್ ಪ್ರೇರಣೆಯಾಯಿತು. ಹೆಚ್ಚು ಹೆಚ್ಚು ಮಂದಿ ಈ ಹೋರಾಟದಲ್ಲಿ ತೊಡಗಿಕೊಂಡಂತೆ ಕನಿಷ್ಠ ಕೂಲಿ ಎನ್ನುವುದು ಆ ಭಾಗದಲ್ಲಿ ರಾಜಕೀಯ ವಿಷಯವಾಯಿತು. ಇದು ಕೇವಲ ಆರಂಭವಷ್ಟೇ ಆಗಿತ್ತು. ಅಂತಿಮವಾಗಿ ಚುನ್ನಿಬಾಯಿ ಹಾಗೂ ಭನ್ವರ್ ಮತ್ತಿತರರಿಗೆ ಅವರ ಕೆಲಸಕ್ಕೆ ತಕ್ಕ ಕೂಲಿ ನೀಡಬೇಕೆಂದು ಕಾರ್ಮಿಕ ನ್ಯಾಯಾಲಯ ಆದೇಶ ಹೊರಡಿಸಿತು. ಗುಲ್‌ಮೊಹರ್ ಬೆಳೆದ ಮನೆ ಎಲ್ಲರಿಗೂ ಚಿರಪರಿಚಿತವಾಯಿತು. ಈ ಮನೆಗೆ ಅನೇಕರು ಭೇಟಿ ನೀಡತೊಡಗಿದರು. ಘಟನಾವಳಿಗಳು ಅದೆಷ್ಟು ವೇಗವಾಗಿ ನಡೆಯುತ್ತಿದ್ದವೆಂದರೆ ಕುಟುಂಬ ಆ ವೇಗದೊಂದಿಗೆ ಸ್ಪಂದಿಸುವುದೇ ಕಷ್ಟಸಾಧ್ಯವಾಗತೊಡಗಿತು. ಇನ್ನು ೧ ಅಥವಾ ೨ ವರ್ಷಗಳಲ್ಲಿ ಇಲ್ಲಿನ ಜನರ ಬವಣೆ ಅಳಿಸುವ ಆತ್ಮವಿಶ್ವಾಸ ಆ ಕುಟುಂಬದಲ್ಲಿ ಮೂಡಿತು. ತಮ್ಮ ವಸತಿಯನ್ನು ಮನೆಯನ್ನಾಗಿ ಪರಿವರ್ತಿಸಲು ಇವರಿಗೆ ವರ್ಷವೇ ಹಿಡಿಯಿತು. ಆ ವರ್ಷ ಶಂಕರ್ ಮತ್ತು ಆನ್ನಿಯ ಹಿರಿಯ ಮಗಳು ಅಜ್ಮೀರ್ ಜಿಲ್ಲೆಯ ನವೋದಯ ಶಾಲಾ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣಳಾದಳು. ಕಿರಿಯ ಮಕ್ಕಳಾದ ನೀಲು ಮತ್ತು ವಿಕಾಸ್ ಸಮೀಪದ ಶಾಲೆಯೊಂದರಲ್ಲಿ ಪ್ರವೇಶ ಪಡೆದರು. ದೇವದೂಂಗ್ರಿಯಿಂದ ಬಸ್ ಹಿಡಿದು ಅವರು ಶಾಲೆಗೆ ಹೋಗಬೇಕಿತ್ತು. ಗೃಹಕೃತ್ಯಗಳಿಗೆ ಅಗತ್ಯವಾದ ಪರಿಕರಗಳನ್ನು ಹೊಂದಿಸುವ ಜವಾಬ್ದಾರಿ ಆನ್ನಿ ಮೇಲಿತ್ತು. ಹಾಗಾಗಿ ಈಕೆ ನೆರೆಯವರ ಕುತೂಹಲಕ್ಕೆ ಕಾರಣವಾದಳು. ಈಕೆ ಅಕ್ಕಪಕ್ಕದ ಮನೆಯ ಹೆಂಗಳೆಯರ ಆಪ್ತ ವಲಯಕ್ಕೆ ಸೇರಿಹೋದಳು. ಉಳಿದವರು ತಮಗೆ ವಹಿಸಿದ ಕೆಲಸವನ್ನು ನಿರ್ವಹಿಸುತ್ತಿದ್ದರು. ಸೋಹನ್‌ಗರ್ ಮತ್ತು ದಾದಿರಪಟ್‌ನ ಘಟನಾವಳಿಗಳು 'ವ್ಯವಸ್ಥೆಯ' ಎಲ್ಲ ಯೋಜನೆಗಳನ್ನೂ ತಲೆಕೆಳಗು ಮಾಡಿದವು. ಈ ಕುಟುಂಬದ ಗೆಳೆತನದಿಂದ ಹೊರಹೊಮ್ಮಿದ ಚೈತನ್ಯದ ಪ್ರವಾಹ ಶಕ್ತಿ ಹಾಗೂ ಅದರ ಸ್ವರೂಪವನ್ನು ಬದಲಾಯಿಸಿತು. ಜೈತ್‌ಸಿಂಗ್‌ನ ಈ ಖಾಲಿ ಕೋಣೆಗೆ ಬಂದ ಮೂರು ವರ್ಷಗಳಲ್ಲಿಯೇ ಈ ಚೈತನ್ಯ ಭೀಮ್‌ನ ಬದುಕನ್ನು ಅಲುಗಾಡಿಸಿತು.

ಮಜ್ದೂರ್-ಕಿಸಾನ್: ಮೂರ್ತವಾದ ಕನಸು

ಪಾಂಡವರ ಭೀಮನಂತೆ ಭೀಮ್ ತಾಲ್ಲೂಕು ಬೃಹತ್ತಾದುದೇನೂ ಅಲ್ಲ. ಈ ಪಟ್ಟಣದ ಜನಸಂಖ್ಯೆ ಕೇವಲ ೧೫ ಸಾವಿರ. ಇದು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೮ರಲ್ಲಿ ನೀರಿಗಾಗಿ ನಿಲ್ಲಿಸುವ ನಿಲ್ದಾಣ. ಆದರೆ ಸುತ್ತಲಿನ ಕೆಲವು ಗ್ರಾಮಗಳಿಗೆ ಇದು ಮಾರುಕಟ್ಟೆ ಕೇಂದ್ರ.

ಇದು ರಾಜಸಮಂದ್, ಪಾಲಿ, ಅಜ್ಮೇರ್ ಹಾಗೂ ಭಿಲ್ವಾರಾ ಜಿಲ್ಲೆಗಳು ಸಂಧಿಸುವ ಸ್ಥಳ. ಜೊತೆಗೆ ಉಪವಿಭಾಗೀಯ ಕೇಂದ್ರವಾಗಿದ್ದರಿಂದ ಇಲ್ಲಿಗೆ ಸಾಮಾನ್ಯವಾಗಿ ಸರ್ಕಾರಿ ಅಧಿಕಾರಿಗಳು ವರ್ಗಮಾಡಿಸಿಕೊಳ್ಳಲು ಇಷ್ಟಪಡುತ್ತಿರಲಿಲ್ಲ.

೧೯೯೦ರ ಮೇ ೧ರಂದು ಭೀಮ್‌ನ ನೀರಸ ಬದುಕು ಇದ್ದಕಿದ್ದಂತೆ ಕಂಪಿಸಿತು. ಸುಮಾರು ಒಂದು ಸಾವಿರಕ್ಕೂ ಹೆಚ್ಚು ಮಂದಿ ಎರಡು ಸಾಲುಗಳಲ್ಲಿ ಘೋಷಣೆಗಳನ್ನು ಕೂಗುತ್ತಾ ಭೀಮ್‌ನ ಬೀದಿಗಳಲ್ಲಿ ಸಂಚರಿಸಿದರು.

'ಮಜ್ದೂರ್ ಕಿಸಾನ್ ಸಂಘಟನೆ ಚಿರಾಯುವಾಗಲಿ', 'ಎಲ್ಲಿಯವರೆಗೆ ಹಸಿದವನು ಇರುವನೋ ಅಲ್ಲಿಯವರೆಗೆ ಹೋರಾಟದ ಬಿರುಗಾಳಿ ಇರುತ್ತದೆ', 'ಭ್ರಷ್ಟಾಚಾರಕ್ಕೆ ಧಿಕ್ಕಾರ', 'ನ್ಯಾಯ ಸಮಾನತೆಯ ಆಧಾರದಲ್ಲಿ ಕಟ್ಟಲಿದ್ದೇವೆ ಹೊಸ ಪ್ರಪಂಚ', 'ಈ ದೊಡ್ಡ ಮನೆಗಳು ಯಾರವು? ನಮ್ಮವು–ನಮ್ಮವು–'ಎಂಬ ಘೋಷಣೆಗಳು ಮಳಿಗೆ ಹಾಗೂ ಅಂಗಡಿ ಮಾಲೀಕರಲ್ಲಿ ಕಂಪನ ಹುಟ್ಟಿಸಿದವು. ದೇವದೂಂಗ್ರಿಯ ಸಂಘಟಕರಿಗೆ ನಕ್ಸಲೀಯ ಎಂಬ ಹಣೆಪಟ್ಟಿ ಅಂಟಿಕೊಂಡಿದ್ದು ಇದರಿಂದಾಗಿಯೇ ಎನ್ನಿಸುತ್ತದೆ.

ಸದಾ ಗಂಭೀರವಾಗಿರುವ ಲಾಲ್‌ಸಿಂಗ್ ನಿಧಾನವಾಗಿ ಮೆರವಣಿಗೆ ಜೊತೆಗೇ ಸಾಗುತ್ತಾ, ನಡು ನಡುವೆ ನಿಂತು ಮೆರವಣಿಗೆಯನ್ನು ಗಮನಿಸುತ್ತಾ ಹೆಜ್ಜೆ ಇಡುತ್ತಿದ್ದ. ಯಾವಾಗಲೂ ಯೋಚಿಸಿಯೇ ಪ್ರತಿಯೊಂದು ಹೆಜ್ಜೆ ಇಡುವ ಮಿಶ್ರಾಜಿಯವರ ಹೆಜ್ಜೆಯಲ್ಲಿ ಎಂದಿಗಿಂತ ಹೆಚ್ಚಿನ ಚುರುಕುತನವಿತ್ತು. ಭೀಮ್‌ನಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಈ ರೀತಿ ಇರುತ್ತದೆ ಎಂದು ಯಾರು ಅಂದುಕೊಂಡಿದ್ದರು? ಮೆರವಣಿಗೆಯ ಕೊನೆಯಲ್ಲಿ ಮಹಿಳೆಯರೊಡನೆ ಘೋಷಣೆ ಕೂಗುತ್ತಾ ಅರುಣಾ ಸಾಗುತ್ತಿದ್ದರು. ಶಂಕರ್ ಮೆರವಣಿಗೆಯ ಒಂದು ಕೊನೆಯಿಂದ ಇನ್ನೊಂದು ಕೊನೆಯವರೆಗೆ ಘೋಷಣೆಗಳಿಗೆ ಚಾಲನೆ ಕೊಡುತ್ತಾ ಸಾಗುತ್ತಿದ್ದ.

ಇದಕ್ಕೂ ಮುನ್ನ ಭೀಮ್‌ನ ಹೊರವಲಯದ ಬಯಲಿನಲ್ಲಿ ನೂರಾರು ಮಂದಿ ಸೇರಿ ಮಜ್ದೂರ್ ಕಿಸಾನ್ ಶಕ್ತಿ ಸಂಘಟನೆ(ಎಂಕೆಎಸ್‌ಎಸ್) ಸ್ಥಾಪಿಸಿದ್ದರು. ಕಪ್ಪು–ಕೆಂಪು ಬಣ್ಣಗಳಿಂದ ವಿನ್ಯಾಸಗೊಳಿಸಿದ ಎಂಕೆಎಸ್‌ಎಸ್‌ನ ಬಾವುಟಗಳು ಮೆರವಣಿಗೆಯುದ್ದಕ್ಕೂ ಹಾರಾಡುತ್ತಿದ್ದವು. ಮಹಿಳೆ ಮತ್ತು ಪುರುಷ ಇಬ್ಬರ ಮುಷ್ಠಿ ಎಂಕೆಎಸ್‌ಎಸ್ ಸಂಕೇತವಾಗಿತ್ತು.

ಇಷ್ಟು ಶಿಸ್ತುಬದ್ಧವಾದ ಸಂಘಟನೆ ಎಲ್ಲಿಂದ ಬಂತು? ಮೆರವಣಿಗೆ ನೋಡುತ್ತಿದ್ದ ಅನೇಕರಲ್ಲಿ ಅಚ್ಚರಿ ಮೂಡಿಸಿತು. ಈ ಮೆರವಣಿಗೆಗೆ ಕೆಲವು ವಾರ ಮುಂಚೆ ಒಂದು ಹಬ್ಬದ ದಿವಸ ಶಂಕರ್, ದೇವಿಲಾಲ್, ಲಾಲ್‌ಸಿಂಗ್, ನಿಖಿಲ್‌ರನ್ನು ಒಳಗೊಂಡ ೧೫ ಮಂದಿ ಬೀದಿ ನಾಟಕವನ್ನು ಸಿದ್ಧಪಡಿಸಿಕೊಂಡು ರಾಜಸಮಂದ್, ಅಜ್ಮೇರ್, ಭಿಲ್ವಾರ ಜಿಲ್ಲೆಯ ೨೭ ಹಳ್ಳಿಗಳಲ್ಲಿ ಅಭಿನಯಿಸಿದ್ದರು. ಭೂಮಿ ಮತ್ತು ಕನಿಷ್ಠ ಕೂಲಿಯ ಹೋರಾಟದ ವಿಷಯವನ್ನೊಳಗೊಂಡ ಸಣ್ಣ ನಾಟಕದಿಂದ ಸಂಘಟನೆಯ ಅಗತ್ಯವನ್ನು ಮನಗಂಡಿದ್ದರು. ತಮ್ಮ ಉದ್ದೇಶ ಮತ್ತು ಕ್ರಿಯೆಯಲ್ಲಿ ಒಂದಾದ ಜನ ಸರ್ಕಾರದ ಕಿವುಡಿಗೆ ಔಷಧ ನೀಡಲು

ಹವಣಿಸಿದ್ದರು. ಅವರು ಗ್ರಾಮ ಹೇಗೆ ಅಭಿವೃದ್ಧಿ ಹೊಂದಬಹುದು? ಎಂಬುದನ್ನು ಮನವರಿಕೆ ಮಾಡಿಕೊಟ್ಟರು. ಮೇ ೧ರ ಅಂತರರಾಷ್ಟ್ರೀಯ ಕಾರ್ಮಿಕರ ದಿನದಂದು ಜನ ಒಂದೆಡೆ ಸೇರುವುದಕ್ಕೆ ಬೀದಿನಾಟಕವೇ ಕಾರಣವಾಗಿತ್ತು.

'ನಾವೀಗ ಕೈಗೊಂಡಿರುವ ಕೆಲಸ ಒಬ್ಬರ ಕೆಲಸ ಅಲ್ಲ, ಅಥವಾ ಕೆಲವರ ಕೆಲಸ ಮಾತ್ರವಲ್ಲ; ಪ್ರಪಂಚದ ಜನರಿಗೆ ಸಂಬಂಧಿಸಿದ್ದು' ಎಂದು ಸಂಘಟನೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಧಪದಾ ಗ್ರಾಮದ ದೇವರಾಂ ತಿಳಿಸಿದ. 'ಈಗಿರುವ ಸಂಘಟನೆಗಳಾದ ಜಾತಿ ಸಂಘಟನೆ, ಗ್ರಾಮ ಪಂಚಾಯ್ತಿ, ರಾಜಕೀಯ ಪಕ್ಷಗಳು, ಧಾರ್ಮಿಕ ಸಂಘಟನೆಗಳು, ಸರ್ಕಾರಿ ಸಂಘಗಳು ನ್ಯಾಯಕ್ಕಾಗಿ ನಮ್ಮ ಪರವಿರಲು ವಿಫಲವಾಗಿವೆ. ಆದುದರಿಂದ ಈ ರೀತಿಯ ಸಂಘಟನೆಯೊಂದರ ಅಗತ್ಯವಿದೆ' ಎಂದು ಕೆಲವರು ಹೇಳಿದರು. 'ಹಳ್ಳಿಯ ಜನ ಏನೂ ಮಾಡಲು ಸಾಧ್ಯವಿಲ್ಲ' ಎಂಬ ಸಾಮಾನ್ಯವಾದ ಅಭಿಪ್ರಾಯವನ್ನು ಈ ಸಾವಿರ ಮಂದಿ ಸುಳ್ಳು ಮಾಡಿದರು.

ಲಾಲ್‌ಸಿಂಗ್‌ನ ಗುರು, ಹಿಂದೊಮ್ಮೆ ಹರಿಸಿಂಗ್‌ನನ್ನು ಏಕಾಂಗಿಯಾಗಿ ಎದುರಿಸಿದ್ದ ತೇಜ್‌ಸಿಂಗ್ ಕೋಲೂರಿಕೊಂಡು ಬಂದ. 'ನನಗೀಗ ನಡೆಯಲಾಗುತ್ತಿಲ್ಲ. ಆದರೂ ನಿಮ್ಮ ಹೋರಾಟದಲ್ಲಿ ನಾನಿದ್ದೇನೆ' ಎಂದು ತನ್ನ ಬೊಚ್ಚುಬಾಯಲ್ಲಿ ನಗುತ್ತಾ ಮುಂದುವರೆಸಿ: 'ಹೋರಾಡುವುದು ನಿಮಗೋಸ್ಕರ ಅಲ್ಲ; ನಿಮ್ಮ ನೆರೆಯವನಿಗಾಗಿ ಹೋರಾಡು. ನೆರೆಯವನು ಹಸಿದಿರುವಾಗ ನೆಮ್ಮದಿಯಾಗಿ ಮಲಗಿರುವವನು ಮನುಷ್ಯನೇ ಅಲ್ಲ' ಎಂದ.

ಪಾಲಿ ಜಿಲ್ಲೆಯ ಕಲಾಲಿಯಾ ಗ್ರಾಮದ ಸುರಿಂದರ್ ಹಳ್ಳಿಯಿಂದ ದಿಲ್ಲಿಯವರೆಗೂ ಹಬ್ಬಿರುವ ವಿಷಾಧ ಗಾಥೆಯನ್ನು ವಿವರಿಸಿದ. ಸುರಿಂದರ್ ಜವಾಜಾದ ಎಸ್‌ಡಬ್ಲುಆರ್‌ಸಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದ. 'ನಾವು ಈ ಪ್ರದೇಶದಿಂದ ಕದಲುವುದಿಲ್ಲ. ನಮಗೆ ಇಲ್ಲಿ ಕೆಲಸವಿದೆ. ಆದಕಾರಣ ಬಿಜೋಲಿಯಾದ ಗಣಿಗಳಲ್ಲಿ ಸಾಯುವತನಕ ದುಡಿಯಬೇಕಾದ ಪ್ರಮೇಯ ಇಲ್ಲ' ಎಂದು ಹೇಳುತ್ತಿದ್ದ. 'ದರೋಡೆಕೋರರು ಹಿಂದೆ ಅರಣ್ಯದಲ್ಲಿ ವಾಸಿಸುತ್ತಿದ್ದರು. ಆದರೆ ಈಗ ಬಂಗಲೆಗಳಲ್ಲಿ ವಾಸವಾಗಿದ್ದಾರೆ' ಎಂದು ಇನ್ನೊಬ್ಬ ಹೇಳುತ್ತಿದ್ದ. 'ಬ್ರಿಟಿಷರ ವಿರುದ್ಧ ಒಂದಾಗಿ ಹೋರಾಡಲು ಗಾಂಧೀಜಿ ನೀಡಿದ್ದ ಕರೆಯಿಂದ ಪ್ರಭಾವಿತನಾಗಿದ್ದೆ' ಎಂದು ಮತ್ತೊಬ್ಬ ಇತಿಹಾಸ ಮೆಲುಕುಹಾಕಿದ.

ಚುನ್ನಿಬಾಯಿ ವೇದಿಕೆ ಏರಿ ಮೈಕ್ ಮುಂದೆ ನಿಂತಳು. ಅದು ಆಕೆಯ ಜೀವಮಾನದ ಮೊದಲ ಸಾರ್ವಜನಿಕ ಭಾಷಣ. ಮೇಲುವಸ್ತ್ರ ಆಕೆಯ ನಡುವಿನ ತನಕ ಇಳಿಬಿದ್ದಿತ್ತು. ಮುಷ್ಟಿಕಟ್ಟಿದ ಕೈಯನ್ನು ಆತ್ಮವಿಶ್ವಾಸದಿಂದ ಮೇಲೆತ್ತಿದಳು.

ಯೋಧರ ಧೀರ ನಡಿಗೆ ಮತ್ತು ಅದಕ್ಕೆ ಹೊಂದುವಂತೆ ಮುಖದ ಮೇಲೆ ಆಳವಾದ ಗಾಯದ ಗುರುತಿದ್ದ ಚುನ್ನಿಸಿಂಗ್ ಅಲ್ಲಿದ್ದ. ಈ ರಸ್ತೆಯಿಂದ ಸುಮಾರು ೪೦ ಕಿ.ಮೀಟರ್ ದೂರದ ಜೀವರ್ ಗ್ರಾಮದ ಚುನ್ನಿಸಿಂಗ್ ಹುಡುಗನಾಗಿದ್ದಾಗ ರಸ್ತೆ ಬದಿಯ ಡಾಬಾದಲ್ಲಿ ಕೆಲಸ ಮಾಡುತ್ತಿದ್ದ. ಭಾರ ಎತ್ತುವಷ್ಟು ವಯಸ್ಸಾದಾಗ ರಾವುಟ್‌ಭಾಟಾದಲ್ಲಿ ರಸ್ತೆ ಕೆಲಸಕ್ಕೆ

ಸೇರಿಕೊಂಡು ದಿನಕ್ಕೆ ೨೫ ಪೈಸೆ ಕೂಲಿ ಪಡೆಯುತ್ತಿದ್ದ. ಈತನ ಮುಖದ ಮೇಲಿರುವ ಗಾಯ ರಸ್ತೆ ಕೆಲಸ ಮಾಡುತ್ತಿದ್ದಾಗ ಆದ ಹೊಡೆದಾಟದ ಫಲ.

ತನ್ನಲ್ಲಿರುವ ಧೈರ್ಯ ಹಾಗು ಏಕಾಏಕಿ ಹೊಡೆದಾಟಕ್ಕಿಳಿಯುವ ಗುಣಗಳಿಂದಾಗಿ ಚುನ್ನಿಸಿಂಗ್ ಗೂಂಡಾ ಆಗಿಬಿಡಬಹುದಿತ್ತು. ಆದರೆ ಆತ ಅಸಹಾಯಕರಿಗೆ ನೆರವಾಗುವ 'ರಾಬಿನ್‌ಹುಡ್' ಆದ. ಗುಜರಾತ್‌ನಲ್ಲಿದ್ದಾಗ ಆತ, ಬೀದಿಗೆ ಬಿದ್ದಿದ್ದ ಕೂಲಿಕಾರರಿಗೆ ನ್ಯಾಯಯುತವಾದದ್ದನ್ನು ಕೊಡುವಂತೆ ಕಾರ್ಖಾನೆ ಮಾಲೀಕರು ಮತ್ತು ವ್ಯವಸ್ಥಾಪಕರನ್ನು ಹೆದರಿಸಿದ್ದ. ದೇವದೂಂಗ್ರಿಯ ಈ ಕುಟುಂಬದ ಕಥೆ ನಿಧಾನವಾಗಿ ಪಲೋನಾ ಮೂಲಕ ಚುನ್ನಿಸಿಂಗ್‌ನನ್ನು ತಲುಪಿತು. ಆತ ದೇವದೂಂಗ್ರಿಯತ್ತ ಹೆಜ್ಜೆ ಹಾಕಿದ.

ಇದೇ ಚುನ್ನಿಸಿಂಗ್ ಈ ಸಂಘಟನೆಯ ಉದ್ಘಾಟನಾ ಸಮಾರಂಭದ ಕೊನೆಯಲ್ಲಿ ಮೆರವಣಿಗೆಗೆ ಜನರನ್ನು ಮಾನಸಿಕವಾಗಿ ಸಿದ್ಧಪಡಿಸುತ್ತಿದ್ದ. 'ಆಡಳಿತ ಜನರನ್ನು ತುಳಿಯುತ್ತದೆ. ನಾವೆಲ್ಲ ಸೇರಿ ಅದನ್ನು ಅದಲು ಬದಲು ಮಾಡೋಣ. ನಾವೀಗ ಭೀಮ್‌ಗೆ ಹೋಗಿ ನಮ್ಮೊಂದಿಗೆ ಇಲ್ಲದವರನ್ನು ನಮ್ಮೊಟ್ಟಿಗೆ ಬರುವಂತೆ ಕೋರೋಣ' ಎಂದು ಹೇಳಿದ.

ಆ ದಿನ ಹೊಸದಾಗಿ ಉದಿಸಿದ ಎಂಕೆಎಸ್‌ಎಸ್‌ನ ಸದಸ್ಯರು 'ನಾವು ಸರ್ಕಾರ ನಿಗದಿ-ಪಡಿಸಿರುವ ಕನಿಷ್ಠ ವೇತನದ ಪೂರ್ಣ ಮೊತ್ತಕ್ಕೆ ಸ್ವಲ್ಪವೂ ಕಡಿಮೆ ಇಲ್ಲದಂತೆ ಕೂಲಿ ಸ್ವೀಕರಿಸಲು ಹೋರಾಡುತ್ತೇವೆ' ಎಂದು ಔಪಚಾರಿಕವಾಗಿ ಪ್ರತಿಜ್ಞೆ ಸ್ವೀಕರಿಸಿದರು. ಆದರೆ ಸಂಘಟನೆಯ ಕಾಳಜಿ ಕೇವಲ ಕನಿಷ್ಠ ಕೂಲಿ ಪಡೆಯುವುದಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಭ್ರಷ್ಟಾಚಾರ ಹಾಗೂ ಶೋಷಣೆಯ ವಿರುದ್ಧ ಹೋರಾಡಲೂ ಸಂಘಟನೆ ತೀರ್ಮಾನಿಸಿತು. 'ಒಂದು ಗ್ರಾಮದ ಅಭಿವೃದ್ಧಿಯ ಪರಿಕಲ್ಪನೆಯನ್ನು ಆ ಗ್ರಾಮದ ಜನರೇ ಹೊಂದಿರಬೇಕು. ಸರ್ಕಾರ ಜನರಿಗೆ ಅವರ ಸ್ವಗ್ರಾಮದ ಸನಿಹವೇ ಕೆಲಸ ಕೊಡಬೇಕು' ಎಂಬುದು ಎಂಕೆಎಸ್‌ಎಸ್‌ನ ಹಕ್ಕೊತ್ತಾಯವಾಗಿತ್ತು. ಸರ್ಕಾರ ಜನರಿಗೆ ಆರೋಗ್ಯ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಬೇಕೆಂದೂ ಒತ್ತಾಯಿಸಲಾಯಿತು.

ಸಾರ್ವಜನಿಕ ಸಭೆಯಲ್ಲಿ ಈ ಎಲ್ಲ ಸಮಸ್ಯೆಗಳನ್ನು ಭೀಮ್ ನಗರದ ನಾಗರಿಕರ ಮುಂದಿಡಲಾಯಿತು. ಮಿಶ್ರಾಜಿ ಭಾಷಣ ಮಾಡಲು ಎದ್ದು ನಿಂತಾಗ ಅವರ ಸ್ನೇಹಿತರೆಲ್ಲರೂ ಅವರು ಕ್ರಾಂತಿಕಾರಿ ಕಮ್ಯೂನಿಸ್ಟ್ ಸಂದೇಶ ಸಾರುತ್ತಾರೆ ಎಂದೇ ಭಾವಿಸಿದ್ದರು. ಆದರೆ ಅಂದು ಮಿಶ್ರಾಜಿ ಒಳ್ಳೆಯವರನ್ನು ಭ್ರಷ್ಟರನ್ನಾಗಿ ಮಾಡುವ ವ್ಯವಸ್ಥೆ ವಿರುದ್ಧ ಸಾಮಾನ್ಯ ಜನರು ಮಾಡಬೇಕಾದ ಹೋರಾಟದ ಬಗ್ಗೆ ಸರಳವಾಗಿ ತಿಳಿಸಿದರು. ಎಂದಿನ ತಮ್ಮ ಆಕ್ರೋಶದ ಧ್ವನಿಯಲ್ಲಿ 'ನಮ್ಮ ಸುತ್ತಮುತ್ತಲಿನ ದೈನಂದಿನ ಭ್ರಷ್ಟತೆಯ ವಿರುದ್ಧ ಎಲ್ಲರೂ ಎದ್ದು ನಿಲ್ಲೋಣ' ಎಂದು ಗುಡುಗಿದರು.

'ನಾವು ಇಂತಹುದೊಂದು ಕೆಲಸ ಮಾಡಲು ಹಾತೊರೆಯುತ್ತಿದ್ದೆವು. ಆದರೆ ಅದೇ ಸಮಯಕ್ಕೆ ಹಿಂಜರಿಯುತ್ತಿದ್ದೆವು. ಕೆಲವರ ಸಲಹೆ ಮತ್ತು ಉತ್ತೇಜನದಿಂದ ಈ ಹೋರಾಟ ಪ್ರಾರಂಭಿಸಿದ್ದೇವೆ. ನಾವೆಲ್ಲರೂ ಬಡತನದಿಂದ ಹಿಂಸೆಗೊಳಗಾಗಿದ್ದೇವೆ. ಆದರೆ ಯಾರೊಬ್ಬರೂ

ಒಂಟಿ ಹೋರಾಟ ಮಾಡಲಾಗುವುದಿಲ್ಲ' ಎಂದು ಮೆದುಮಾತಿನ ಹಾಗೂ ಸಂಕೋಚ ಸ್ವಭಾವದ ಲಾಲ್‌ಸಿಂಗ್ ಹೇಳಿದ.

ಈ ಸಾರ್ವಜನಿಕ ಸಭೆ ಸಂಭ್ರಮದಲ್ಲಿಯೇ ಮುಗಿಯಿತು. ಚದುರುತ್ತಿರುವ ಗುಂಪಿನಲ್ಲಿ ಮೋಟ್‌ಸಿಂಗ್ ಇದ್ದ. ಆತ ಜನಸಾಗರದ ಅಂಚಿನಲ್ಲಿಯೇ ಎಲ್ಲ ಕಲಾಪವನ್ನೂ ಗಮನಿಸಿದ್ದ. ಆತ ಎಂದೂ ನಾಯಕತ್ವ ವಹಿಸಿಕೊಂಡವನಲ್ಲ. ಒಂದು ರೂಪಕದ ಮೂಲಕ ಈ ಸಂಘಟನೆಯ ಅಸ್ತಿತ್ವಕ್ಕೆ ಸಮರ್ಥನೆ ಒದಗಿಸಿದ್ದ. 'ಎಲ್ಲ ಪಕ್ಷಗಳು ಬೆಲ್ಲವನ್ನು ಸವರಿದ ಕಲ್ಲನ್ನು ನಮ್ಮತ್ತ ಎಸೆಯುತ್ತವೆ. ಅವರು ಈ ಕಲ್ಲನ್ನು ನಾವೆಲ್ಲ ಸಂತೋಷದಿಂದ ಚೀಪುತ್ತಿರಬೇಕೆಂದು ಬಯಸುತ್ತಾರೆ. ಎಲ್ಲಿಯವರೆಗೆ ನಾವು ಈ ಬೆಲ್ಲ ಸವರಿದ ಕಲ್ಲನ್ನು ಚೀಪುತ್ತಿರುತ್ತೇವೋ ಅಲ್ಲಿಯವರೆಗೆ ಏನೂ ಆಗದು. ನಾವು ಈ ಕಲ್ಲನ್ನು ಎಸೆದು ಜನರ ಪಕ್ಷವನ್ನು ಕಟ್ಟಬೇಕು' ಎಂದು ಹೇಳಿದ.

ಉಪವಾಸ ಮತ್ತು ಧರಣಿ

ನಾರಾಯಣ ಈ ಪರಿಕಲ್ಪನೆಯನ್ನು ಅರ್ಥಮಾಡಿಕೊಂಡಿದ್ದ. ಆದರೆ ಸಂಘಟನೆಯಂಥ ಚಟುವಟಿಕೆಗಳಿಂದ ದೂರ ಉಳಿಯಬೇಕೆನ್ನುವ ತನ್ನ ಚಿಕ್ಕಪ್ಪನ ನಿಲುವನ್ನು ವಿರೋಧಿಸಿದ್ದ. ತನ್ನ ಚಿರಪರಿಚಿತ ನೆರೆಯವರೊಂದಿಗೆ ಗುರುತಿಸಿಕೊಳ್ಳುವುದು ನಾರಾಯಣನಿಗೆ ಖುಷಿ ಕೊಡುತ್ತಿತ್ತು. ತನ್ನ ಗೆಳೆಯ ದೇವಿಲಾಲ್‌ನ ರೀತಿಯಲ್ಲಿ ತನ್ನದೇ ಕನಸುಗಳ ಸಾಕಾರವನ್ನು ಈ ಸಂಘಟನೆಯಲ್ಲಿ ಕಂಡುಕೊಂಡಿದ್ದ. ಹಾಗಾಗಿ ಗ್ರಾಮದ ಇತರರಂತೆ ಕೆಲಸವನ್ನರಸಿ ಪಟ್ಟಣಕ್ಕೆ (ಕಪ್ಪು ಡಾಂಬರಿನ ಹಾದಿಗುಂಟ) ಹೋಗಲಿಲ್ಲ. ನಿಖಿಲ್‌ನ ಮಾರ್ಗದರ್ಶನದಲ್ಲಿ ಓದು ಮುಗಿಸಿದ. ಆ ಬಳಿಕ ಸಂಘಟನೆಯಲ್ಲಿ ಹೆಚ್ಚಿನ ಸಮಯ ಕಳೆಯತೊಡಗಿದ.

ತಕ್ಷಣವೇ ದೇವಿಲಾಲ್ ಹಾಗೂ ನಾರಾಯಣ ಇಬ್ಬರೂ ಬೇರೆ ಬೇರೆ ಕೆಲಸ ಮಾಡ ತೊಡಗಿದರು. ಈ ಗೆಳೆತನ ತನ್ನ ತಂದೆಗೆ ಅಷ್ಟು ಇಷ್ಟವಿರಲಿಲ್ಲ ಎನ್ನುವುದು ನಾರಾಯಣನಿಗೆ ಗೊತ್ತಾಯಿತು. ಅವರಮಟ್ಟಿಗೆ ಹೇಳುವುದಾದರೆ ಸಂಘಟನೆಯ ಕೆಲಸಗಳೆಲ್ಲವೂ ಒಂದು ಮಿತಿಯಲ್ಲಿದ್ದರೆ ಚೆನ್ನ. ಆದರೆ ಇಡೀ ದಿನ ನಾರಾಯಣ ದೇವಿಲಾಲ್‌ನೊಟ್ಟಿಗೆ ಕಳೆಯುವುದು ಅವರಿಗೆ ಸರಿಬರುತ್ತಿರಲಿಲ್ಲ. ನಾರಾಯಣನ ತಂದೆ ರಾಮ್‌ಸಿಂಗ್‌ಗೆ ದೇವದೂಂಗ್ರಿಯಲ್ಲಿ ಅಧಿಕಾರ ಮತ್ತು ಪ್ರಭಾವ ಎರಡೂ ಇದ್ದವು. ತನ್ನ ಮಗ ಮೂಲಭೂತವಾದ ನಿಯಮವನ್ನೇ ಮುರಿಯುತ್ತಿರುವುದು ಅವರಿಗೆ ಸರಿ ಕಾಣುತ್ತಿರಲಿಲ್ಲ. ಕೆಲವೊಮ್ಮೆ ನಾರಾಯಣ ಬಲವಂತವಾಗಿ ತಂದೆಯ ಮಾತನ್ನು ಕೇಳಬೇಕಾಗುತ್ತಿತ್ತು. ಬದಲಾಗುತ್ತಿರುವ ಕಾಲದ ಬಗ್ಗೆ ನಾರಾಯಣ ತನ್ನ ತಂದೆಗೆ ವಿವರಿಸುತ್ತಿದ್ದ. ಅವನಿಗೆ ಯಾವುದು ಅಗತ್ಯ ಎಂದು ಕಂಡುಬಂತೋ ಅದನ್ನೇ ನಾರಾಯಣ ಮಾಡಿದ.

ತಹಶೀಲ್ದಾರರ ಕಚೇರಿಗೆ ನುಗ್ಗುವ ಭಯವಂತೂ ಇರಲಿಲ್ಲ. ಆದರೆ ಉಪ ವಿಭಾಗೀಯ ಅಧಿಕಾರಿಗಳು ಇದಕ್ಕೆ ಅವಕಾಶ ಕೊಡದಂತೆ ನೋಡಿಕೊಳ್ಳುತ್ತಿದ್ದರು. ರಾತ್ರಿ ವೇಳೆ ಕಚೇರಿಯ

ಬಂದೋಬಸ್ತಾದ ಕಬ್ಬಿಣದ ಗೇಟ್ ಮುಚ್ಚಿರುತ್ತಿತ್ತು. ನಿರುಪದ್ರವಿಗಳಂತೆ ಕಾಣುತ್ತಿದ್ದ ಪೋಲೀಸ್ ಪೇದೆಗಳಿಬ್ಬರನ್ನು (ಹೆಚ್ಚಿನ ಸಮಯ ಅವರು ಅಲ್ಲಿ ಇರುತ್ತಿರಲಿಲ್ಲವೆನ್ನುವುದು ಬೇರೆ ಮಾತು) ಎಂಕೆಎಸ್‌ಎಸ್ ಧರಣಿ ನಡೆಸುತ್ತಿದ್ದ ಸ್ಥಳದಲ್ಲಿ ಇಡೀ ರಾತ್ರಿ ಕಾವಲಿಗೆ ನಿಯೋಜಿಸಲಾಗಿತ್ತು. ರಾತ್ರಿ ಬಹುಸಮಯದವರೆಗೆ ಧರಣಿ ಟೆಂಟ್‌ನಲ್ಲಿ ಹಾಡು-ಗದ್ದಲ ನಡೆದೇ ಇರುತ್ತಿತ್ತು. ಆದರೆ ಇದು ರಾತ್ರಿಯೆಲ್ಲ ನಡೆಯುವ ಸಾಧಾರಣ ಭಜನಾ ಮಂದಿರ ಆಗಿರಲಿಲ್ಲ. ಬೃಹತ್ತಾದ ಮರದ ಬದಿ ಇದ್ದ ಈ ಟೆಂಟು ಐದು ದಿವಸದಿಂದಲೂ ಉಪವಾಸ ನಿರತ ೧೪ ಪುರುಷರು ಹಾಗೂ ಮೂವರು ಮಹಿಳೆಯರಿಗೆ ಆಶ್ರಯವಾಗಿತ್ತು. ಕಿರಿಯವನಾದ ದೇವಿಲಾಲ್‌ನಿಂದ ಹಿಡಿದು ಮುಖ ಸುಕ್ಕುಗಟ್ಟಿದ ಭೂರಿಯಾ ತನಕ ವಿವಿಧ ವಯೋಮಾನದ ಜನರು ಅಲ್ಲಿ ಸೇರಿದ್ದರು. ಉಪವಾಸ ನಿರತರೆಲ್ಲರೂ ಬರಪರಿಹಾರ ಕಾಮಗಾರಿಯಲ್ಲಿ ದುಡಿಯುವವರೇ ಆಗಿದ್ದರು. 'ಪೂರ್ಣ ಮೊತ್ತದ ಕನಿಷ್ಠ ಕೂಲಿ ಪಡೆಯುವವರೆಗೆ ಜಾಗ ಬಿಟ್ಟು ಕದಲುವುದಿಲ್ಲ, ಏನನ್ನೂ ತಿನ್ನುವುದಿಲ್ಲ' ಎಂದು ಅವರು ನಿರ್ಧರಿಸಿದ್ದರು.

ಬೆಳಗಿನ ವೇಳೆ ಸಾರ್ವಜನಿಕರ ಗಮನ ಸೆಳೆಯಲು ಭಾಷಣ ಹಾಗೂ ಕ್ರಾಂತಿಕಾರಿ ಹಾಡುಗಳ ಗಾಯನ ನಡೆಯುತ್ತಿದ್ದವು. ಸಾಮಾನ್ಯವಾಗಿ ಈವರೆಗೆ ಕಂಡರಿಯದ ಧರಣಿ ಇದಾಗಿತ್ತು. ಬೇರೆ ಧರಣಿಗಳಲ್ಲಿ ತೂಕಡಿಸುತ್ತಾ, ಕೆಲವೊಮ್ಮೆ ಬೇಸರ ಕಳೆಯಲು ಇಸ್ಪೀಟಾಡುತ್ತಾ ಕಾಲ ಕಳೆಯುವವರನ್ನು ಕಾಣಬಹುದಿತ್ತು. ಎಂಕೆಎಸ್‌ಎಸ್ ಸ್ವಯಂಸೇವಕರು ತಮ್ಮೆಲ್ಲರ ಪ್ರತಿಭೆಯಿಂದ ಇಡೀ ವಾತಾವರಣವನ್ನು ಚೈತನ್ಯಮಯವಾಗಿಟ್ಟಿದ್ದರು. ಈ ಪ್ರಕ್ರಿಯೆಯಲ್ಲಿ ಬಹಳ ಪರಿಣಾಮಕಾರಿಯಾದ, ಪ್ರಭಾವಶಾಲಿಯಾದ ಹಾಡು, ಕಥೆ, ನಾಟಕ ಹುಟ್ಟಿದವು.

ಎಂಕೆಎಸ್‌ಎಸ್ ಹೊರಡಿಸಿದ ಕರಪತ್ರದ ದಪ್ಪ ಅಕ್ಷರಗಳಲ್ಲಿ ಹೋರಾಟದ ಉದ್ದೇಶವನ್ನು ಹೇಳಲಾಗಿತ್ತು. ಅಗ್ಗದ ಕಾಗದದ ಮೇಲೆ ಅಚ್ಚಾದ ಈ ಕರಪತ್ರ, ಭೀಮ್ ನಗರದಲ್ಲೆಲ್ಲ ಹರಿದಾಡಿತು. ಬಹಳ ಚಿಕ್ಕ ಹಾಗೂ ಸ್ಫುಟವಾದ ಹೇಳಿಕೆಯಲ್ಲಿ ಕೂಲಿಕಾರರನ್ನು ಹೇಗೆ ಕಡಿಮೆ ಕೂಲಿ ಕೊಟ್ಟು ದುಡಿಸಿಕೊಳ್ಳಲಾಗುತ್ತಿದೆ ಎನ್ನುವುದನ್ನು ವಿವರಿಸಲಾಗಿತ್ತು. ಈ ಧರಣಿಯಲ್ಲಿ ಈ ಕೆಳಗಿನ ಮೂರು ಹಕ್ಕೊತ್ತಾಯಗಳನ್ನು ಮಂಡಿಸಲಾಗಿತ್ತು.

೧. ಪೂರ್ಣ ಪ್ರಮಾಣದಲ್ಲಿ ನ್ಯಾಯಯುತ ಕನಿಷ್ಠ ಕೂಲಿ

೨. ಸಮಯ ಅಥವಾ ಕೆಲಸ ಎರಡರಲ್ಲಿ ಒಂದನ್ನು ಪರಿಗಣಿಸಿ ಕೂಲಿ ವಿತರಣೆ

೩. ವೈಯಕ್ತಿಕ ಶ್ರಮದ ಆಧಾರದಲ್ಲಿ ಕೂಲಿ ಕೊಡಬೇಕೆ ವಿನಾ ಗುಂಪಿನ ಆಧಾರದಲ್ಲಿ ಅಲ್ಲ.

ದಿನದಿನವೂ ಶಂಕರ್ ಹೆಚ್ಚು ಉದ್ವೇಗಕ್ಕೊಳಗಾಗುತ್ತಿದ್ದ. ಉಪವಾಸ ನಿರತರಲ್ಲಿ ತಾನೂ ಒಬ್ಬನಾಗಬೇಕೆಂದು ಬಯಸಿದ. ಪರಿಕರ ಸರಬರಾಜು ಮಾಡುತ್ತಿರುವ ತನಗಿಂತಲೂ ನಿಖಿಲ್, ಭೂರಿಯಾ ಮತ್ತಿತರ ಉಪವಾಸ ನಿರತರು ಹೆಚ್ಚು ಶ್ರಮಪಡುತ್ತಿದ್ದಾರೆಂದು ಅವನಿಗೆ ಅನ್ನಿಸತೊಡಗಿತು. ದೇವದೂಂಗ್ರಿ ಕುಟುಂಬದ ಮಾಲೀಕ ಈ ಸಂಘಟನೆಯಲ್ಲಿ

ತೊಡಗಿಕೊಂಡಿರಲಿಲ್ಲ. ಆದರೆ ಈ ಜನ ಹಸಿವಿನಿಂದ ಒದ್ದಾಡುತ್ತಿರುವುದನ್ನು ಆತನಿಂದ ನೋಡಲಾಗುತ್ತಿರಲಿಲ್ಲ. ಮೂರನೆಯ ದಿವಸ ಧರಣಿ ಸ್ಥಳದಲ್ಲಿ ಇಡೀದಿನ ಆತ ಏನನ್ನೂ ತಿನ್ನದೇ ಕುಳಿತಿದ್ದ.

ಭೀಮ್‌ನ ನಾಗರಿಕರು ಈ ಘಟನಾವಳಿಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಉಪವಾಸ ನಿರತರು ಗುಟ್ಟಾಗಿ ಏನನ್ನಾದರೂ ತಿಂದಾರೆಂದು ಭಾವಿಸಿದ್ದರು.

ಈ ಹೋರಾಟ ಮತ್ತು ಅದರ ಹಿಂದಿನ ಉದ್ದೇಶದಿಂದ ಪ್ರಭಾವಿತರಾಗಿದ್ದಂತೆ ತೋರುತ್ತಿದ್ದ ಕೆಲವು ವೈದ್ಯರು ಸುಳ್ಳು ವರದಿ ನೀಡಲೂ ಸಿದ್ಧರಿದ್ದರು ಹಾಗೂ ಪ್ರತಿಭಟನಾಕಾರರಿಗೆ ಆಹಾರ ಸೇವಿಸುವಂತೆ ಒತ್ತಾಯಿಸಿದರು. ಆದರೆ ಉಪವಾಸ ನಿರತರ ನಿಷ್ಠೆ ಪ್ರಾಮಾಣಿಕವಾದದ್ದು ಎಂದು ಗೊತ್ತಾದಾಗ ನಗರದ ಜನತೆಯ ಮನಸ್ಸು ಕರಗಲಾರಂಭಿಸಿತು.

ದಿನ ಕಳೆದಂತೆ, ನಿಧಾನವಾಗಿ ಕಂಡೂಕಾಣದಂತೆ ಉಪವಾಸ ಸತ್ಯಾಗ್ರಹದಿಂದ ಭೀಮ್ ನಗರದ ನಾಗರಿಕರು ಮತ್ತು ಎಂಕೆಎಸ್‌ಎಸ್ ಸಂಘಟನೆಯ ನಡುವಿನ ಸಂಬಂಧ ಬದಲಾಗತೊಡಗಿತು. ಪ್ರತಿಭಟನಾಕಾರರ ಬದ್ಧತೆ ಸಾರ್ವಜನಿಕರಲ್ಲಿ ಅಪಾರ ಪರಿಣಾಮ ಬೀರಿತು. ಈ ಹಿಂದೆ ಮೇ ೧ರಂದು ನಡೆದ ಜಾಥಾ ಕೂಡ ಇಷ್ಟು ಪ್ರಭಾವ ಬೀರಿರಲಿಲ್ಲ. ಕಡಿಮೆ ಕೂಲಿಯಿಂದ ಕೂಲಿಕಾರರ ಕೊಳ್ಳುವ ಶಕ್ತಿಯೂ ಕುಂಠಿತವಾಗುತ್ತದೆ ಎಂಬ ವಾದವನ್ನು ಮಂಡಿಸುವ ಮೂಲಕ ಸಂಘಟನೆಯ ವ್ಯಾಪ್ತಿಯನ್ನು ಹೆಚ್ಚಿಸಲಾಯಿತು.

ಆರನೆಯ ದಿವಸ ಈ ಪುಟ್ಟ ಪಟ್ಟಣದ ಅಂಗಡಿ ಮಾಲೀಕರು ಮತ್ತು ವ್ಯಾಪಾರಿಗಳು ಮಜ್ದೂರ್ ಕಿಸಾನ್ ಶಕ್ತಿ ಸಂಘಟನೆ ನಡೆಸುತ್ತಿದ್ದ ಧರಣಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿದರು. ಮಾರನೆಯ ದಿನ ಬಂದ್ ಮಾಡುತ್ತೇವೆಂದು ಅವರು ಹುಟ್ಟಿಸಿದ ಭಯ ನಿರೀಕ್ಷಿತ ಪರಿಣಾಮ ಬೀರಿತು. ಪಟ್ಟಣದ ಉಪ ವಿಭಾಗಾಧಿಕಾರಿ ಪ್ರತಿಭಟನಾಕಾರರ ನಿಯೋಗದೊಂದಿಗೆ ಮಾತನಾಡಿದರು. ಎರಡು ದಿನಗಳೊಳಗೆ ಎಲ್ಲ ಕೂಲಿಕಾರರಿಗೂ ಪೂರ್ಣ ಮೊತ್ತದ ಕನಿಷ್ಠ ವೇತನ ಸಂದಾಯ ಮಾಡಲು ಒಪ್ಪಿದರು. ಅತ್ಯಂತ ಸಡಗರದಿಂದ ನಿರಶನ ಅಂತ್ಯಗೊಂಡಿತು. ಪ್ರತಿಭಟನಾಕಾರರಿಗಾಗಿ ಆತಂಕಗೊಂಡಿದ್ದ ಅವರ ಸ್ನೇಹಿತರು ಹಣ್ಣಿನ ರಸ ಕುಡಿಸಿದರು.

ಆದರೆ ಉಪವಿಭಾಗಾಧಿಕಾರಿ ನೀಡಿದ ಭರವಸೆ ಈಡೇರಲಿಲ್ಲ. ಇದರಿಂದ ಸಂಘಟನೆ ಬಹುಮುಖ್ಯವಾದ ಪಾಠ ಕಲಿಯಿತು. ಒಂದು ವರ್ಷದ ನಂತರ ೧೯೯೧ರ ಏಪ್ರಿಲ್‌ನಲ್ಲಿ ಉಪವಾಸ ಸತ್ಯಾಗ್ರಹದ ಅಸ್ತ್ರವನ್ನು ಮತ್ತೆ ಪ್ರಯೋಗಿಸಲಾಯಿತು. ಈ ಸಲ ಕೈಯಲ್ಲಿ ದುಡ್ಡು ಪಡೆಯದೇ ನಿರಶನ ಕೈಬಿಡಬಾರದೆಂಬ ಅಚಲ ನಿರ್ಧಾರ ಕೈಗೊಳ್ಳಲಾಯಿತು. ಇಂಥ ಸತ್ಯಾಗ್ರಹಗಳನ್ನು ನಿಭಾಯಿಸಲು ಆ ಹೊತ್ತಿಗಾಗಲೇ ಆಡಳಿತ ಯಂತ್ರ ತನ್ನನ್ನು ಸಜ್ಜುಗೊಳಿಸಿಕೊಂಡಿತ್ತು. ಐದನೆಯ ದಿನ ೫ ಮಂದಿ ಪ್ರತಿಭಟನಾಕಾರರನ್ನು ಎತ್ತೊಯ್ದು ಅವರಿಗೆ ಬಲವಂತವಾಗಿ ತಿನ್ನಿಸಲಾಯಿತು. ಆ ೫ ಮಂದಿಯ ಸ್ಥಾನದಲ್ಲಿ ಅರುಣಾ, ಮಮತಾ ಜೈಟ್ಲಿ ಹಾಗೂ ಜೈಪುರದಿಂದ ಬಂದ ಸಂಘಟನೆಯ ಕಾರ್ಯಕರ್ತರು ಉಪವಾಸ ಕುಳಿತರು.

ಇದಾದ ಎರಡು ದಿನಗಳ ನಂತರ ಈ ಸತ್ಯಾಗ್ರಹವನ್ನು ಧರಣಿಯನ್ನಾಗಿ ಪರಿವರ್ತಿಸಲಾಯಿತು. ಕೊನೆಗೂ ಪೂರ್ಣ ಕೂಲಿ ಪಡೆಯುವಲ್ಲಿ ಪ್ರತಿಭಟನಾಕಾರರು ಯಶಸ್ವಿಯಾದರು.

ಕ್ರಮೇಣ ಸಂಘಟನೆಯು ಉಪವಾಸ ಸತ್ಯಾಗ್ರಹವನ್ನು ಪ್ರತಿಭಟನೆಯ ಅಸ್ತ್ರವನ್ನಾಗಿ ಬಳಸುವುದನ್ನು ಕೈಬಿಡುತ್ತಾ ಬಂತು. 'ಇದು ತುರ್ತು ಒಪ್ಪಂದಕ್ಕೆ ನಮ್ಮನ್ನು ತಳ್ಳಿಬಿಡುತ್ತದೆ. ಬೇರೆ ಯಾವ ಶಾಂತಿಯುತ ಮಾರ್ಗವೂ ಇಲ್ಲ ಮತ್ತು ಆಡಳಿತ ಯಂತ್ರ ಯಾವುದಕ್ಕೂ ಸ್ಪಂದಿಸದ ಜಡಸ್ಥಿತಿಗೆ ಬಂದಿದೆ ಎಂದಾಗ ಮಾತ್ರ ಉಪವಾಸ ಸತ್ಯಾಗ್ರಹಕ್ಕೆ ಇಳಿಯಬಹುದು'. ಪ್ರತಿಭಟನಾಕಾರರಿಗೆ ನೈತಿಕ ಧೈರ್ಯಕ್ಕಾಗಿ ಹಾಗೂ ಆಡಳಿತ ಮತ್ತು ಸಾರ್ವಜನಿಕರ ಮೇಲೆ ಒತ್ತಡ ಹಾಕುವ ಸಂದರ್ಭದಲ್ಲಿ ಉಪವಾಸ ಸತ್ಯಾಗ್ರಹದ ಅಗತ್ಯ ಬೀಳುವುದೆಂಬ ಅಂಶವನ್ನು ಸಂಸ್ಥೆ ಮನಗಂಡಿತ್ತು.

೧೯೯೧ರಲ್ಲಿ ಭೀಮ್ ಸುತ್ತಮುತ್ತ ನಡೆಯುತ್ತಿರುವ ಘಟನೆಗಳ ವಿವರಗಳನ್ನು ಪತ್ರಕರ್ತೆ ಉಷಾ ರಾಯ್ ಪ್ರಕಟಿಸಿದಾಗ, ಕನಿಷ್ಠ ಕೂಲಿ ಪಡೆಯುವ ಈ ಹೋರಾಟಕ್ಕೆ ಹೆಚ್ಚಿನ ಶಕ್ತಿ ಬಂತು. ಇದು ಕೇಂದ್ರ ಗ್ರಾಮೀಣಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಎಸ್.ಆರ್. ಶಂಕರ್ ಅವರ ಗಮನ ಸೆಳೆಯಿತು. ಕನಿಷ್ಠ ಕೂಲಿ ಕೊಡದೇ ಇರುವ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸಲು ಒಂದು ತಂಡವನ್ನು ರಾಜಸ್ಥಾನಕ್ಕೆ ಕಳುಹಿಸಲಾಯಿತು. 'ದೇಶದ ಪ್ರಮುಖ ಉದ್ಯೋಗ ಭರವಸೆ ಯೋಜನೆಯಾದ ಜವಾಹರ್ ರೋಜ್ಗಾರ್ ಯೋಜನೆಯ ಮುಖ್ಯ ಷರತ್ತೇ ಕೂಲಿಕಾರಿಗೆ ಕನಿಷ್ಠ ವೇತನವನ್ನು ಕೊಡುವುದು' ಎಂದು ಶಂಕರ್ ತಿಳಿಸಿದರು. ಈ ವರದಿ ತಲುಪಿದ ನಂತರ ರಾಜಸ್ಥಾನ ಸರ್ಕಾರಕ್ಕೆ ಈ ಯೋಜನೆಯಲ್ಲಿ ನೀಡಬೇಕಾಗಿದ್ದ ಒಂದು ನೂರು ಕೋಟಿ ರೂಪಾಯಿ ಅನುದಾನವನ್ನು ತಡೆಹಿಡಿಯಲಾಯಿತು.

ಮಜ್ದೂರ್ ಕಿಸಾನ್ ಕಿರಾಣಿ ಅಂಗಡಿ: ಮಾರುಕಟ್ಟೆಗೊಂದು ಸವಾಲು

ಬೆಳಗಿನ ಎಳೆ ಬಿಸಿಲು ದೇವದೂಂಗ್ರಿಯ ಮನೆಯ ಮಾಡಿನ ಮೇಲೆ ಬಿದ್ದಾಗ ಅನ್ನಿ ತನ್ನ ಕೊಠಡಿಯಿಂದ 'ಕಾಲಿಯಾ' ಎಂಬ ಕುರಿಮರಿಯನ್ನು ಹೊರಕ್ಕೆ ತಂದು ಹಿತ್ತಲಿನ ಬೇವಿನಗಿಡಕ್ಕೆ ಕಟ್ಟಿದಳು. ಈ ಕೊಠಡಿ ಅವರ ಸ್ನಾನದ ಮನೆಯೂ ಆಗಿತ್ತು. ನಿಖಿಲ್ ಮಾಡಿನ ಮೇಲೆ ಕುಳಿತು ಟ್ರಾನ್ಸಿಸ್ಟರ್‌ನ್ನು ಕಿವಿಗೆ ಆನಿಸಿಕೊಂಡು ಬಿಬಿಸಿ ಸುದ್ದಿ ಕೇಳಲು ಪ್ರಯತ್ನಿಸುತ್ತಿದ್ದ. ಕುರಿಮರಿ ಒಣಹುಲ್ಲನ್ನು ತಿಂದು ಮುಗಿಸುತ್ತಿದ್ದಂತೆ ಬಿಬಿಸಿ ದೂರದ ಸೋವಿಯತ್ ರಷ್ಯಾದಲ್ಲಿ ಆಗುತ್ತಿದ್ದ ಅಭೂತಪೂರ್ವ ಬದಲಾವಣೆಯನ್ನು ಸ್ಫೋಟಗೊಳಿಸಿತ್ತು. ಈ ಗದ್ದಲದಲ್ಲಿ ಗೇಟು ಶಬ್ದ ಮಾಡಿದ್ದಾಗಲೀ, ನಾರಾಯಣ ಸದ್ದಿಲ್ಲದೇ ಒಳಗೆ ಬಂದು ಕುಳಿತದ್ದಾಗಲೀ ನಿಖಿಲ್ ಗಮನಕ್ಕೆ ಬರಲಿಲ್ಲ. ಯುಎಸ್‌ಎಸ್‌ಆರ್ ಛಿದ್ರಗೊಳ್ಳುತ್ತಿತ್ತು. ಇನ್ನು ಮುಂದೆ ಇದು ಸಮಾಜವಾದಿ ರಾಷ್ಟ್ರವಾಗಿ ಉಳಿಯಲಾರದು!

ಸುದ್ದಿ ಮುಗಿದ ಮೇಲೆ ನಿಖಿಲ್ ರೇಡಿಯೋ ಬಂದ್ ಮಾಡಿದ. ತಾನು ಕೇಳಿದ ಬೆಳಗಿನ ವಾರ್ತೆಯನ್ನು ಇತರರೊಂದಿಗೆ ಹಂಚಿಕೊಳ್ಳಲು ಹೊರಟ. ಅನ್ನಿ ಆಗ ತಾನೆ ಅಡುಗೆ ಕೋಣೆ

ಶುಚಿಗೊಳಿಸಿದ್ದಳು. ವಿಕಾಸ್ ಶಾಲೆಗೆ ಹೊರಡಲು ತಯಾರಿ ನಡೆಸಿದ್ದ. ಶಂಕರ್ ಬಾವಿಯಿಂದ ಕೊಡದಲ್ಲಿ ನೀರು ತರುತ್ತಿದ್ದ. ಈ ಸುದ್ದಿ ಅನಿರೀಕ್ಷಿತ ತಲ್ಲಣವನ್ನುಂಟುಮಾಡಿತಲ್ಲದೇ, ಎಲ್ಲರ ಗಮನ ಸೆಳೆಯಿತು.

'ಈ ಘಟನೆ ನಮ್ಮೆಲ್ಲರನ್ನೂ ಬದಲಿಸುತ್ತದೆ' ಎಂದು ನಿಖಿಲ್ ಹೇಳಿದ. 'ಹೇಗೆ?' ನಾರಾಯಣ ಪ್ರಶ್ನಿಸಿದ. 'ಇನ್ನು ಅಮೆರಿಕದ ಬಂಡವಾಳಶಾಹಿಗಳನ್ನು ಪ್ರಶ್ನಿಸುವವರೇ ಇರುವುದಿಲ್ಲ. ಇದೇ ಮಾರ್ಗದಲ್ಲಿ ಮನಮೋಹನ್‌ಸಿಂಗ್ ನಮ್ಮನ್ನು ಮುನ್ನಡೆಸುತ್ತಿರುವುದು....' ಎಂದು ನಿಖಿಲ್ ಹೇಳಿದ.

ಅದು ೧೯೯೨ನೆಯ ಇಸವಿ. ಎಂಕೆಎಸ್‌ಎಸ್ ಅಸ್ತಿತ್ವಕ್ಕೆ ಬಂದು ಕೇವಲ ಒಂದು ವರ್ಷವಾಗಿತ್ತು. ಸೋವಿಯತ್ ಯೂನಿಯನ್ ವಿಘಟನೆಯೊಂದಿಗೆ ಭಾರತ ಹಾಗೂ ಪ್ರಪಂಚದಾದ್ಯಂತ ಚರಿತ್ರೆ ದಾಪುಗಾಲು ಹಾಕಿದಂತಿತ್ತು. ಈ ಬದಲಾವಣೆಯು ಕಂಪನ ಭೀಮ್‌ನಲ್ಲಿ ಎಂಕೆಎಸ್‌ಎಸ್ ಸಂಘಟನೆಯ ವಿರೋಧಿಗಳಲ್ಲಿಯೂ ಕಾಣಿಸಿಕೊಂಡಿತು. 'ನಿಮ್ಮ ಕನಸು ಮುರಿದು ಬಿದ್ದಿದೆ. ಕಮ್ಯುನಿಸ್ಟರ ಕಾಲ ಮುಗಿಯಿತು' ಎಂದು ಗೇಲಿ ಕೇಳಿ ಬಂತು.

'ನಿಮ್ಮ ಪಕ್ಷದ ಚರಿತ್ರೆ ಮುಗಿದಂತೆಯೇ. ಮುಕ್ತ ಮಾರುಕಟ್ಟೆಗೆ ಜಯವಾಗಿದೆ' ಇತ್ಯಾದಿ ಮಾತುಗಳು ಅನೇಕರಿಂದ ಕೇಳಿಬರತೊಡಗಿದವು. ವಿರೋಧಿಗಳ ಈ ಟೀಕೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದಿದ್ದರೂ ಕೂಡ ನಿಜವಾದ ಸಮಸ್ಯೆ ಬೃಹದಾಕಾರವಾಗಿ ಮುಂದೆ ನಿಂತಿತ್ತು. ಆಗ ನೂತನವಾಗಿ ಅಸ್ತಿತ್ವಕ್ಕೆ ಬಂದಿದ್ದ ನರಸಿಂಹರಾವ್ ಸರ್ಕಾರ 'ಭಾರತ ಅರೆಬರೆ ಸಮಾಜವಾದಿ ರಾಷ್ಟ್ರ' ಎಂದು ಅರೆಮನಸ್ಸಿನಿಂದ ಹೇಳುವುದನ್ನು ನಿಲ್ಲಿಸತೊಡಗಿತು. ಖಾಸಗಿ ವಲಯಕ್ಕೆ ಪ್ರಾಶಸ್ತ್ಯ ಕೊಡುವ ಮತ್ತು ಲಾಭದ ಏಕಮಾತ್ರ ದೃಷ್ಟಿಯುಳ್ಳ ಹೊಸ ಆರ್ಥಿಕ ನೀತಿ ಜಾರಿಗೆ ಬಂತು. ಇದು ಭಾರತದ ಎಲ್ಲ ಆರ್ಥಿಕ ಸಮಸ್ಯೆಗಳಿಗೂ ಇರುವ ಏಕಮಾತ್ರ ಪರಿಹಾರ ಎಂಬಂತೆ ಬಿಂಬಿಸಲಾಯಿತು. ಇದರೊಂದಿಗೆ ಗ್ಯಾಟ್ ಒಪ್ಪಂದ ಬದುಕಿನ ಎಲ್ಲ ಕ್ಷೇತ್ರಗಳ ಮೇಲೆ ಪರಿಣಾಮ ಬೀರುವುದೆಂದು ಹೇಳಲಾಗುತ್ತಿತ್ತು. ಆದರೆ ಅದು ಹೇಗೆ ಎನ್ನುವುದನ್ನು ದೂರದ ಭೀಮ್ ಅಥವಾ ಸೋಹನ್‌ಗರ್‌ನಲ್ಲಿ ಕುಳಿತು ವಿವರಿಸುವುದಕ್ಕೆ ಸಾಧ್ಯವಿರಲಿಲ್ಲ.

ಆದರೂ ಕೆಲವು ಸಂಗತಿಗಳು ಸ್ಪಷ್ಟವಾಗಿದ್ದವು. ಭಾರತ ಸರ್ಕಾರ ಅಪಾರ ಪ್ರಮಾಣದಲ್ಲಿ ವಿದೇಶಿ ಸಾಲ ತೆಗೆದುಕೊಳ್ಳುತ್ತಿದೆ ಎನ್ನುವುದನ್ನು ತಿಳಿದಾಗ ಚುನ್ನಿಬಾಯಿ, 'ನಾನು ನನ್ನ ಒಡವೆಗಳನ್ನಾಗಲೀ ಅಥವಾ ಭೂಮಿಯನ್ನಾಗಲೀ ಒತ್ತೆಯಿಡುವುದು ಒಳ್ಳೆಯದಲ್ಲ. ಅದು ಪೂರ್ಣ ಗುಲಾಮಗಿರಿಗೆ ಎಡೆಮಾಡಿಕೊಡುತ್ತದೆ' ಎಂದು ನೀವು ಹೇಳಿದಿರಿ. ಅದು ಸರಿ, ಆದರೆ ಈ ಬುದ್ಧಿವಂತ ನಾಯಕರು ಈಗ ಮಾಡುತ್ತಿರುವುದಾದರೂ ಏನು? ಇದನ್ನೇ ತಾನೆ? ಇದಕ್ಕೆ ನೀನೇನು ಹೇಳಬಲ್ಲೆ?' ಎಂದು ಪ್ರಶ್ನಿಸಿದಳು.

ನಮ್ಮ ಆಡಳಿತಗಾರರ ಇಬ್ಬಗೆಯ ಧೋರಣೆ ಗೊತ್ತಿದ್ದರೆ ಚುನ್ನೀಬಾಯಿಗೆ ಇನ್ನೂ ಹೆಚ್ಚಿನ ಅಚ್ಚರಿಯಾಗುತ್ತಿತ್ತು. ಪಳೆಯ ಸಮಾಜವಾದಿ ಘೋಷಣೆಗಳನ್ನು ಕಿತ್ತೊಗೆದಿದ್ದರೂ

ಈ ಹೊಸ ಆರ್ಥಿಕ ನೀತಿಯಿಂದ ಎಲ್ಲ ಜನರಿಗೂ ಉಪಯೋಗವೇ ಆಗುತ್ತಿತ್ತು. ಸರ್ಕಾರದ ಘೋಷಿತ ಉದ್ದೇಶಗಳನ್ನು ಗಂಭೀರವಾಗಿ ಪರಿಗಣಿಸಿದರೆ ಅದು ಸ್ವತಃ ತನ್ನ ವಿರುದ್ಧವೇ ಬಂಡೇಳುತ್ತಿದೆ ಎಂದು ಅರುಣಾಗೆ ಅನ್ನಿಸುತ್ತಿತ್ತು. ಸರ್ಕಾರದ ಚಟುವಟಿಕೆ ಮತ್ತು ಅದರ ಪರಿಣಾಮ ಪೂರ್ಣವಾಗಿ ಸರ್ಕಾರದ ಹಿಂದಿನ ನೀತಿ ಮತ್ತು ಚಟುವಟಿಕೆಗಳಿಗೆ, ಆದರದೇ ಯೋಜನೆಗಳಿಗೆ ಪೂರ್ಣ ವಿರುದ್ಧವಾಗಿತ್ತು.

ಸಮಸ್ತ ಜನತೆಯ ಕಲ್ಯಾಣದ ಪರಿಕಲ್ಪನೆಗೆ ಸಂಘಟನಾ ಶಕ್ತಿ ಇದೆ ಎಂಬ ಸರಳ ನಂಬಿಕೆ ಸಂಘಟನೆಯೊಳಗೆ ನಡೆಯುತ್ತಿದ್ದ ಸಭೆಯಿಂದ ದೃಢವಾಗುತ್ತಿತ್ತು. ವರ್ತಮಾನವು ಪ್ರಭಾವಯುತ ಚಾರಿತ್ರಿಕ ಶಕ್ತಿಗಳಿಂದ ಸುತ್ತುವರೆದಿದ್ದರೂ ಸಾಮೂಹಿಕ ಕ್ಷೇಮದ ಪರಿಕಲ್ಪನೆ ಮೇಲುಗೈ ಸಾಧಿಸೀತು ಎಂದೂ ಅನ್ನಿಸುತ್ತಿತ್ತು. ನಾವೂ ಕೂಡಾ ಹೀಗಾಗಬೇಕೆಂದು ಬಯಸುತ್ತೇವೆ. ಆದರೆ ವಾಸ್ತವವೇ ಬೇರೆ!

ಸಂಘಟನೆಯ (ಎಂಕೆಎಸ್‌ಎಸ್) ಮೂರನೆಯ ವಾರ್ಷಿಕೋತ್ಸವ ಹೊಸ ಉತ್ಸಾಹವನ್ನು ಮೂಡಿಸಿತ್ತು. ನಾವು ಕೇವಲ ಜಾಥಾ ಹಾಗೂ ಭಾಷಣದಲ್ಲಿಯೇ ಕಾಲ ಕಳೆಯುವುದು ಬೇಡ ಎಂದು ಅನೇಕ ಕಾರ್ಯಕರ್ತರು ಸೂಚಿಸಿದರು. 'ನಾವು ಕೂಲಿಕಾರರ ಸಮ್ಮೇಳನ ಮಾಡೋಣ. ಸಂಭ್ರಮ, ಸಡಗರ ಬೆರೆತ ಸಮ್ಮೇಳನದಲ್ಲಿ ರಾಜಕೀಯವೂ ಇರಲಿ' ಎಂದು ಅಭಿಪ್ರಾಯಪಟ್ಟರು. ಈ ಮೇಳದಲ್ಲಿ ಜಿಲೇಬಿ, ಪಕೋಡ, ಕುಲ್ಫಿ ಮತ್ತಿತರ ಸಿಹಿ ತಿಸಿಸುಗಳು ಪೇಟೆಯಲ್ಲಿ ದೊರೆಯುವುದಕ್ಕಿಂತ ಉತ್ತಮಗುಣಟ್ಟದ್ದಾಗಿರಬೇಕು ಹಾಗೂ ಇವುಗಳನ್ನು ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಬೇಕು ಎಂದು ನಿರ್ಧರಿಸಲಾಯಿತು. ದೊಡ್ಡ ಪಟ್ಟಣಗಳಲ್ಲಿ ಸಗಟು ಬೆಲೆಗೆ ಸಿಗುವ ಬಟ್ಟೆಗಳನ್ನು ಅದೇ ಬೆಲೆಯಲ್ಲಿ ಮಾರುವ ಅಂಗಡಿ ತೆರೆಯೋಣ ಎಂದು ತೀರ್ಮಾನಿಸಿದರು. ಸಂಘಟನೆ ಲಾಭದ ಆಸೆ ಇಲ್ಲದೇ ಈ ಎಲ್ಲ ವಹಿವಾಟನ್ನು ನಡೆಸಲೆಂದು ಬಯಸಿದರು.

'ಈ ಅಂಗಡಿಗಳಲ್ಲಿ ಕಾರ್ಮಿಕರ ಹಕ್ಕುಗಳನ್ನು ಕುರಿತ ಮಾಹಿತಿ ಪುಸ್ತಕವೂ ಸಿಗುವಂತೆ ನೋಡಿಕೊಳ್ಳಬೇಕು. ಮೇಳದ ಅಂಗವಾಗಿ ಹಮ್ಮಿಕೊಳ್ಳುವ ಸಾರ್ವಜನಿಕ ಸಭೆ, ಆಯಾ ಭಾಗದ ಸಮಸ್ಯೆಗಳನ್ನು ಪರಿಹರಿಸಲು ಸಾರ್ವಜನಿಕರು ಸಲಹೆ ಸೂಚನೆ ನೀಡುವ ವೇದಿಕೆ ಆಗಬೇಕು' ಎಂದು ಅಭಿಪ್ರಾಯಕ್ಕೆ ಬರಲಾಯಿತು. ಸಭೆಯಲ್ಲಿ ಸಲಹೆ–ಸೂಚನೆಗಳ ಮಹಾಪೂರವೇ ಹರಿದುಬಂತು. ವ್ಯವಸ್ಥೆಯನ್ನು ಬದಲಾಯಿಸಬೇಕೆಂಬ ಸಂಕಲ್ಪ ಬಲವಾಗಿತ್ತು.

ಈ ಹಂತದಲ್ಲಿ ಇತರ ಸಂಘಟನೆಗಳ ಜತೆಗೂಡಿ ರಾಜಸ್ಥಾನದ ಉದ್ಯೋಗ ಭರವಸೆ ಕಾಯ್ದೆ ರಚನೆಗೆ ನೀಲ ನಕಾಶೆ ತಯಾರಿಸುವ ತುರ್ತು ಎಂಕೆಎಸ್‌ಎಸ್‌ಗೆ ಇತ್ತು. ಈ ಬಗ್ಗೆ ಕಾಳಜಿ ಹೊಂದಿರುವ ಅರ್ಥಶಾಸ್ತ್ರಜ್ಞರು, ವಿದ್ವಾಂಸರು ಮತ್ತು ವಕೀಲರನ್ನು ಕಲೆ ಹಾಕುವ ಕೆಲಸವನ್ನು ಕೈಗೊಂಡಿತು. ಇದರಲ್ಲಿ ಆಸಕ್ತಿಯುಳ್ಳ ಜನರೂ ಈ ರೀತಿಯ ಕಾಯ್ದೆಗೆ ಇದು ಸಕಾಲವಲ್ಲ ಎಂದು ಅಭಿಪ್ರಾಯಪಟ್ಟರು. ೧೯೯೨ರಲ್ಲಿ ಭೀಮ್‌ಗೆ ಭೇಟಿ ನೀಡಿದ ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಎಸ್.ಆರ್.ಶಂಕರನ್ ಕೂಡ ಇದೇ ಅನಿಸಿಕೆ ವ್ಯಕ್ತಪಡಿಸಿದ್ದರು.

ದೇಶದ ಅತಿ ದೊಡ್ಡ ಉದ್ಯೋಗ ಭರವಸೆ ಯೋಜನೆಯಾದ ಜವಾಹರ್ ರೋಜ್ಗಾರ್ ಯೋಜನೆ(ಜೆಆರ್‌ವೈ)ಯಡಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಕನಿಷ್ಠ ೧೦೦ ದಿವಸಗಳ ಉದ್ಯೋಗ ಪಡೆಯಬೇಕೆಂದಿದೆ. ವಿಪರ್ಯಾಸವೆಂದರೆ ಇಂಥ ಕುಟುಂಬಗಳು ಕೇವಲ ೬ ರಿಂದ ೧೫ ದಿನಗಳು ಮಾತ್ರ ಉದ್ಯೋಗ ಪಡೆಯುತ್ತವೆ. ಅಲ್ಲದೆ ಈ ಉದ್ಯೋಗ ಭರವಸೆ ಯೋಜನೆಯಲ್ಲಿ ಕನಿಷ್ಠ ಕೂಲಿ ಕಾಯ್ದೆ ಕೈಬಿಡುವಂತೆ ವಿಶ್ವಬ್ಯಾಂಕ್ ಭಾರತ ಸರ್ಕಾರದ ಮೇಲೆ ಒತ್ತಡ ಹೇರುತ್ತಿದೆ.

ಈ ಬಗೆಯ ನೀತಿಯನ್ನು ಪುನರ್‌ರೂಪಿಸುವ ಅಥವಾ ನಿಯಂತ್ರಿಸುವ ಶಕ್ತಿ ಎಂಕೆಎಸ್‌ಎಸ್‌ನ ವ್ಯಾಪ್ತಿಗೆ ಮೀರಿದ್ದಾದ್ದರಿಂದ ತನಗೆ ಸಂಬಂಧಿಸಿದ ಸಮಸ್ಯೆಗಳನ್ನು ಮಾತ್ರ ಪರಿಹರಿಸಲು ಅದು ನಿರ್ಧರಿಸಿತು. ಒಂದು ನ್ಯಾಯಬೆಲೆ ಅಂಗಡಿ ನಡೆಸಬಹುದು. ದೇವದೂಂಗ್ರಿಯಲ್ಲಿ ಒಂದು ಪಡಿತರ ವಿತರಣಾ ವ್ಯವಸ್ಥೆಯ ಜವಾಬ್ದಾರಿ ಹೊರಬಹುದು. ಕೆಲವರು ಸಿಮೆಂಟ್ ಹೆಂಚುಗಳನ್ನು, ಮತ್ತೆ ಕೆಲವರು ವಿದ್ಯಾರ್ಥಿಗಳಿಗೆ ನೋಟ್‌ಬುಕ್‌ಗಳನ್ನೂ ಮಾರಬಹುದು. ಅಲ್ಲದೇ ಕಾರ್ಮಿಕ ಸಹಕಾರ ಸಂಘವನ್ನು ಸ್ಥಾಪಿಸಿ ರಸ್ತೆ ಮತ್ತು ಕಟ್ಟಡ ಕಾಮಗಾರಿಗಳ ಗುತ್ತಿಗೆಗೆ ಪ್ರಯತ್ನಸಲೂಬಹುದು.

ಪ್ರಪಂಚದಲ್ಲಿ ಯಾವ ಯಂತ್ರವೂ ಈ ಹಳ್ಳಿಗರನ್ನು ಸರಿಗಟ್ಟಲಾರದು. ಕೆಲಸ ಮಾಡಲು ಬಯಸುವ ಅವರ ಕೈ, ಕಾಲುಗಳು ಮತ್ತು ಅವರುಗಳೇ ತಯಾರು ಮಾಡಿಕೊಳ್ಳಬಹುದಾದ ಸರಳವಾದ ಮರದ ಕೆಲವು ಸಲಕರಣೆಗಳನ್ನು ಹೊರತುಪಡಿಸಿ ಅವರಿಗೆ ಬೇರೆ ಯಾವುದೇ ಯಂತ್ರದ ಅಗತ್ಯವೂ ಇರುವುದಿಲ್ಲ–ಎನ್ನುವ ಗಾಂಧೀಜಿಯ ಮಾತುಗಳನ್ನು ನೆನಪಿಸಿಕೊಂಡರು. ಆದರೆ ೨೧ನೆಯ ಶತಮಾನದ ಹೊಸ್ತಿಲಲ್ಲಿ ಈ ಸತ್ಯ ಸಾಕಾರಗೊಳ್ಳುವುದು ಹೇಗೆ? ಅಧಿಕಾರದ ಕೇಂದ್ರದಲ್ಲಿ ಈ ಬಗ್ಗೆ ಆಸಕ್ತಿ, ಕಾಳಜಿ ಮತ್ತು ಪ್ರೀತಿಯುಳ್ಳವರನ್ನು ಅರಸಿ ಅರುಣಾ ಮತ್ತು ನಿಖಿಲ್ ದೆಹಲಿಯಲ್ಲಿ ಅಲೆದರು. ಅವರು ಹೀಗೆ ಭೇಟಿ ಮಾಡಿದ ಅನೇಕರಲ್ಲಿ ಎಲ್.ಸಿ.ಜೈನ್ ಒಬ್ಬರು. ಈ ದೇಶದ ಕೈಗಾರಿಕಾಭಿವೃದ್ಧಿ–ಕೈಗಾರಿಕೀಕರಣದ ಕಲ್ಪನೆಯನ್ನೇ ಕಡೆಗಣಿಸಿದೆ ಎಂದೂ, ಕುಶಲಕರ್ಮಿಗಳ ಕೆಲಸವನ್ನು ಕೈಗಾರಿಕಾ ಚಟುವಟಿಕೆ ಎಂದು ಪರಿಗಣಿಸಿಯೇ ಇಲ್ಲ ಎಂದು ಅವರು ಪ್ರತಿಕ್ರಿಯಿಸಿದರು.

ಈ ಅರಿವಿಗೆ ಕ್ರಿಯಾರೂಪ ನೀಡುವುದಾದರೂ ಹೇಗೆ? ಎಂಬ ಪ್ರಶ್ನೆ ಸಂಘಟನೆಯ ಸದಸ್ಯರನ್ನು ಕಾಡಲಾರಂಭಿಸಿತು. ಏಕಕಾಲದಲ್ಲಿ ಹೋರಾಟ ಹಾಗೂ ರಚನಾತ್ಮಕ ಕೆಲಸ ಕಷ್ಟಸಾಧ್ಯ ಎಂಬುದು ಅವರಿಗೆ ಚೆನ್ನಾಗಿ ತಿಳಿದಿತ್ತು. ಈಗ ಕ್ರಾಂತಿಗಾಗಿ ಹೋರಾಡಿ ನಂತರ ಸೂಕ್ತ ಪರಿಸರದಲ್ಲಿ ಬದಲಾವಣೆಯ ಪ್ರಕ್ರಿಯೆಗೆ ಚಾಲನೆ ಕೊಡುವುದು ಮೇಲು ಎನಿಸಿತು. ಆದರೆ ಅರುಣಾ, ನಿಖಿಲ್ ಮತ್ತು ಶಂಕರ್‌ಗೆ ಈ ಸಂದಿಗ್ಧದಲ್ಲಿಯೂ ಸ್ಪಷ್ಟವಾದ ಭರವಸೆ ಇತ್ತು. ಅನಂತರ ಅವರು ಹೀಗೆ ಬರೆದರು:

'... ಸ್ಥಳೀಯ ಅವಕಾಶಗಳಲ್ಲಿ ಹೊಸ ಸಿದ್ಧಾಂತ ಮರುಹುಟ್ಟು ಪಡೆಯಲು ಅಂತರರಾಷ್ಟ್ರೀಯ ಮಟ್ಟದ ಜಾಲ ತಂತಾನೆ ಅನುವು ಮಾಡಿಕೊಡುತ್ತದೆ. ಬೇರೆ ಬೇರೆ

ಶಕ್ತಿಗಳು ಜನರ ಮೆದುಳು ಖರೀದಿಸುತ್ತಿರುವ ಈ ಹೊತ್ತಿನಲ್ಲಿ ನಾವು ನಡೆಸುವ ಕ್ರಿಯೆ ಮಾತ್ರ ಆರ್ಥಿಕ ಶಕ್ತಿಗಿಂತ ಹೆಚ್ಚು ಗಟ್ಟಿಯಾಗಿ ಮಾತಾಡಬಲ್ಲುದು. ಬಹಳಷ್ಟು ಸಲ, ಈ ರೀತಿಯ ರಚನಾತ್ಮಕ ಕೆಲಸಗಳು ಅಧಿಕಾರದ ಮೌಲ್ಯಗಳನ್ನು ಪರಿಣಾಮಕಾರಿಯಾಗಿ ಪ್ರಶ್ನಿಸುತ್ತವೆ.

ಸಾಮೂಹಿಕ ಶಕ್ತಿ ಇದ್ದರಷ್ಟೇ ಸಾಲದು ಅದನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳಬೇಕು ಎಂಬುದನ್ನು ಅರಿಯಬೇಕು. ಈಗಿರುವ ಸ್ಥಿತಿ ಹಾಗೂ ಸಂಘಟಿತ ಸ್ಥಿತಿ ಎರಡಕ್ಕೂ ಹೊಂದಿಕೊಳ್ಳುವ ಕ್ರಿಯಾ ಮಾದರಿಗಳನ್ನು ನಾವು ರೂಪಿಸಬೇಕಾಗಿದೆ...

...ಒಂದು ಪ್ರತಿಭಟನೆ ಹಾಗೂ ಹಕ್ಕೊತ್ತಾಯ ಮಂಡಿಸುವ ಗುಂಪಾದ ಎಂಕೆಎಸ್‌ಎಸ್ ಸಂಘಟನೆ ಇನ್ನು ಮುಂದೆ ಎಲ್ಲಾ ಶಕ್ತಿಗಳೂ ಕೆಲಸ ಮಾಡುತ್ತಿರುವ, ಮುಕ್ತ ಮಾರುಕಟ್ಟೆಯಲ್ಲಿ ತಾನೂ ಒಂದು ವಿಭಿನ್ನವಾದ ಸಂಘಟಿತ ಆರ್ಥಿಕ ತತ್ವ ಪ್ರಣಾಳಿಯಾಗಿ ಪ್ರವೇಶಿಸಬೇಕು. ಎಂಕೆಎಸ್‌ಎಸ್ ಸೇವೆ ಅಥವಾ ತ್ಯಾಗಮಾಡಲು ಕಟಿಬದ್ಧವಾದ ಸಂಸ್ಥೆಯಲ್ಲ. ಆದರೆ ಕೆಲವು ವಲಯಗಳಲ್ಲಿ ಇದನ್ನು ಜನೋಪಕಾರಿ ಸಂಘಟನೆ ಎಂತಲೇ ಬಿಂಬಿಸಲಾಗಿದೆ. ಹಾಗಾಗಿ ಇಲ್ಲಿ ಮೂಲಭೂತ ಹಾಗೂ ದೀರ್ಘಕಾಲೀನ ಬದಲಾವಣೆ ಆಗದಂತೆ ತಡೆಹಿಡಿಯಲಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಇದು ಒಂದು ಪರ್ಯಾಯ ಮೌಲ್ಯವನ್ನು ಕಟ್ಟಿಕೊಟ್ಟಿದೆ. ಆ ಮೌಲ್ಯದ ತಳಹದಿಯ ಮೇಲೆ ಆರ್ಥಿಕ ಸಂಬಂಧವನ್ನು ನಿರ್ವಹಿಸುವುದು ಸವಾಲೇ ಸರಿ....'

ಸ್ವಹಿತಾಸಕ್ತಿಯನ್ನೇ ಮೂಲಭೂತ ಮೌಲ್ಯವಾಗಿ ಒಪ್ಪಿಕೊಂಡಿರುವ ಮಾರುಕಟ್ಟೆ ಶಕ್ತಿಗಳನ್ನು ಬದಲಾಯಿಸಲು ಎಂಕೆಎಸ್‌ಎಸ್‌ಗೆ ಅನ್ಯಮಾರ್ಗವೇ ಇರಲಿಲ್ಲ. ಆದರೆ ಇದನ್ನು ಪ್ರಶ್ನಿಸುವ ಮತ್ತು ನಿರಾಕರಿಸುವ ಹಲವಾರು ಹಾದಿಗಳಲ್ಲಿ ಕೆಲಸ ಮಾಡಬಹುದಿತ್ತು. ಇದು ಕೇವಲ ನಂಬಿಕೆಯ ಪ್ರಶ್ನೆಯಲ್ಲ. ಸಮುದಾಯ ಕ್ರಿಯೆಯ ಮೂಲಕ ಜನರ ಹಿತಾಸಕ್ತಿ ಕಾಯುವ ವಿಚಾರವೂ ಇಲ್ಲಿ ಸೇರಿದೆ. ಸ್ವಹಿತಾಸಕ್ತಿಗೂ ಸಮುದಾಯದ ಹಿತಾಸಕ್ತಿಗೂ ಸಂಬಂಧ ಕಲ್ಪಿಸುವುದು ಹೇಗೆ ಸಾಧ್ಯ?

ಅರುಣಾ ಎಸ್‌ಡಬ್ಲ್ಯುಆರ್‌ಸಿಯಲ್ಲಿ ಕರಕುಶಲ ವಸ್ತುಗಳ ಕೇಂದ್ರ ತೆರೆದು, ಚರ್ಮದ ಕೆಲಸಗಾರರೊಂದಿಗೆ ಕೆಲಸ ಮಾಡುತ್ತಿರುವಾಗಲೇ ಸಾಮುದಾಯಿಕ ಆರ್ಥಿಕ ಉದ್ಯಮ ನಿರ್ವಹಿಸುವ ಬಗ್ಗೆ ಅಧ್ಯಯನ ಆರಂಭಿಸಿದರು. ಅರುಣಾರ ಆಗಿನ ಅನುಭವ ಕೆಲವೊಂದು ಪ್ರಶ್ನೆಗಳನ್ನು ಕೇಳುವಂತೆ ಮಾಡಿತ್ತು.

ವೈಯಕ್ತಿಕ ಲಾಭ ಗಳಿಕೆಯ ಏಕೈಕ ಉದ್ದೇಶವಿರುವ ಬಂಡವಾಳಶಾಹಿ ಮಾರುಕಟ್ಟೆಗೆ ಎದುರಾಗಿ ಸಪಕಾರ ಸಂಘಗಳನ್ನು ಯಾಕೆ ಸ್ಥಾಪಿಸಬೇಕು? ಚರ್ಮದ ಕೆಲಸ ಮಾಡುವವರಿಗೆ ಸ್ವಲ್ಪ ಲಾಭ ಬರತೊಡಗಿದ ನಂತರ ಸಹಕಾರ ಸಂಘದ ಅಂತಃಶಕ್ತಿ ಒಡೆಯತೊಡಗಿತು... ಕುಶಲಕರ್ಮಿಗಳು ತಾವು ನಿರ್ಮಿಸಿದ ವಸ್ತುಗಳನ್ನು ಮಾರಾಟ ಮಾಡಲು ಹೊರಗಿನ ಮಾರುಕಟ್ಟೆ ಆಶ್ರಯಿಸಬೇಕಿತ್ತು. ಈ ಹೊರಗಿನ ಮಾರುಕಟ್ಟೆ ತಲಾ ಆದಾಯವನ್ನು ಹೆಚ್ಚಿಸುವ ಅದರದೇ ಆದ ನಿರ್ದಿಷ್ಟ ರೀತಿಯ ಮಾರಾಟ ಹಾಗೂ ಸಾಲದ ಸ್ವರೂಪ ಹೊಂದಿತ್ತು. ಇವೆಲ್ಲವುಗಳಿಗಿಂತ ಮಿಗಿಲಾಗಿ ಆದಾಯಗಳಿಸಿಕೊಡುವ ಇಂತಹ ಚಟುವಟಿಕೆಗಳ ಗುರಿ ವೈಯಕ್ತಿಕ ಲಾಭವೇ

ಆಗಿರುತ್ತಿತ್ತು. ಈ ವಸ್ತುಗಳ ತಯಾರಿಕೆಗೆ ನೀಡುವ ಪ್ರೋತ್ಸಾಹದಾಯಕ ನೆರವು ಹಾಗೂ ಮಾರಾಟದಿಂದ ಬರುವ ಲಾಭಗಳು ಕುಶಲಕರ್ಮಿಗಳನ್ನು ಸ್ಥಳೀಯ ರಾಜಕೀಯ ಬೆಳವಣಿಗೆಯಿಂದಲೂ ವಿಮುಖಗೊಳಿಸುತ್ತಿತ್ತು. ಹರ್ಮಾರದ ಚರ್ಮಕಾರರಿಗೇನೋ ಲಾಭವಾಯಿತು. ಆದರೆ ಅವರಲ್ಲಿದ್ದ ಸಾಮುದಾಯಿಕ ಕ್ರಿಯೆ ಮತ್ತು ಮನಃಸಾಕ್ಷಿ ಮತ್ತಷ್ಟು ಕುಸಿಯಿತು. ಅವರು ಈಗ ಸಾಮುದಾಯಿಕ ಚಟುವಟಿಕೆಗೆ 'ದಾನ' ಎಂದು ಒಂದಷ್ಟು ಹಣ ನೀಡಬಲ್ಲರೇ ವಿನಃ ತಮ್ಮ ಆರ್ಥಿಕ ದೃಢತೆಯನ್ನು ಗ್ರಾಮದ ಬದಲಾವಣೆಗೆ ಬಳಸಿಕೊಳ್ಳುವ ಬಗ್ಗೆ ಚಿಂತನೆ ನಡೆಸುತ್ತಿರಲಿಲ್ಲ. ಈ ಯೋಜನೆ ಅತೀ ಕಡಿಮೆ ಪ್ರಮಾಣದಲ್ಲಿ ಗ್ರಾಮೀಣ ನಿರುದ್ಯೋಗಿಗಳನ್ನು ಒಳಗೊಂಡಿತ್ತು. ಶ್ರೀಮಂತ ಹಾಗೂ ಬುದ್ಧಿಜೀವಿಗಳಿಗೆ ಈ ಯೋಜನೆ ತಲುಪುತ್ತಿದ್ದುದರಿಂದ ಭಾರೀ ಜನಪ್ರಿಯತೆ ಪಡೆಯಿತು. (ಉದ್ಯೋಗ ಮತ್ತು ಕೆಲಸವನ್ನು ಕೇವಲ ಕರಕುಶಲ ವಸ್ತುಗಳ ತಯಾರಿಕೆ ಹಾಗೂ ಮಾರಾಟಕ್ಕೆ ಇಳಿಸಬಾರದು)

ದೇವದೂಂಗ್ರಿಯಲ್ಲಿನ ಕೆಲಸ ಇವೆಲ್ಲವುಗಳಿಗಿಂತ ಭಿನ್ನವಾಗಿತ್ತು. ೧೯೯೨ರ ಸೆಪ್ಟೆಂಬರ್‌-ನಲ್ಲಿ ಚಪ್ಲಿ ಗ್ರಾಮದಲ್ಲಿ ತನ್ನ ಸಂಘಟನೆಯ ೩೦ ಸಕ್ರಿಯ ಕಾರ್ಯಕರ್ತರನ್ನು ಒಳಗೊಂಡಂತೆ ಎಂಕೆಎಸ್‌ಎಸ್ ಮೂರು ದಿನಗಳ ಕಮ್ಮಟವನ್ನು ಹಮ್ಮಿಕೊಂಡಿತ್ತು. ಮುಂದೆ ಏನು ಮಾಡಬೇಕು? ಎಂದು ಸಂಘಟನೆ ನಿರ್ಣಯಿಸಬೇಕಾಗಿತ್ತು. ಈವರೆಗೆ ಸಂಘಟನೆ ಸಾಮೂಹಿಕ ಪ್ರತಿಭಟನೆ ಮತ್ತು ಅಭಿವೃದ್ಧಿಗಾಗಿ ಆಡಳಿತದ ಮೇಲೆ ಒತ್ತಡ ತರುವ ಕೆಲಸವನ್ನಷ್ಟೇ ಮಾಡಿತ್ತು. ಈಗ ಇದು ಅಪಾರವಾದ ಸಮೂಹ ಶಕ್ತಿಯನ್ನು ಬಳಸಿ ಹೊರಗಿನ ಮಾರುಕಟ್ಟೆಯಲ್ಲಿ ಕನಿಷ್ಠ ಚೌಕಾಸಿ ಮಾಡಬಹುದೇ ಎಂಬ ಬಗ್ಗೆ ಎಲ್ಲರೂ ಯೋಚಿಸುತ್ತಿದ್ದರು.

ಕೆಲಸವೆಂದರೆ ಕೇವಲ ಅಲ್ಪಸ್ವಲ್ಪ ಹಣ ಗಳಿಸಲು ಮಾಡಬೇಕಾದ ಗುಲಾಮಗಿರಿ ಚಾಕರಿಯಲ್ಲ ಎನ್ನುವುದನ್ನು ಹಿಂದಿನ ಹೋರಾಟಗಳು ಮನವರಿಕೆ ಮಾಡಿಕೊಟ್ಟಿದ್ದವು. ಇದು ಮತ್ತೊಂದು ವಿಧದ ಜೀವನೋಪಾಯಕ್ಕೆ ನಡೆಸುವ ಹೋರಾಟದ ಭಾಗವಾಗಿತ್ತು. ೧೯೯೩ರ ವೇಳೆಗೆ ಅರುಣಾ, ನಿಖಿಲ್ ಮತ್ತು ಶಂಕರ್ ಬರೆದದ್ದು ಹೀಗೆ:

'ಈ ಹೋರಾಟ ಸ್ವಾಭಿಮಾನ ಹೆಚ್ಚಿಸುತ್ತದೆ ಮಾತ್ರವಲ್ಲ; ಪ್ರತಿಯೊಬ್ಬನೂ ತನ್ನಲ್ಲಿರುವ ಅತ್ಯಂತ ಶ್ರೇಷ್ಠವಾದುದನ್ನು ಅಭಿವ್ಯಕ್ತಿಸಲು ಅನುವಾಗುತ್ತದೆ. ಎಲ್ಲರ ಒಳಿತಿಗಾಗಿ ಒಬ್ಬೊಬ್ಬರೂ ತಮ್ಮ ಕೊಡುಗೆ ನೀಡುತ್ತಿದ್ದೇವೆಂಬ ಕಲ್ಪನೆಯು ಹೆಚ್ಚಿನ ಆತ್ಮವಿಶ್ವಾಸ ತಂದುಕೊಡುತ್ತದೆ. ಈ ಪರಿಕಲ್ಪನೆಗೆ ಕೆಲಸದ ಮೂಲಕ ಹೊಸ ಸಂಬಂಧವನ್ನು ಬೆಸೆಯಲು ಅನುವಾಗುವ ಶಕ್ತಿ ಇದೆ'.

'ಉದ್ಯಮದ ಉದ್ದೇಶ ವೈಯಕ್ತಿಕ ಲಾಭವಲ್ಲ' ಎಂಬ ಆಶಯವನ್ನು ಹೊತ್ತು ಹೊಸ ಸಾಹಸವನ್ನು ಹೇಗೆ ಆರಂಭಿಸುವುದು? ಎಂಬ ಪ್ರಶ್ನೆ ಸಹಜವಾಗಿಯೇ ಎದ್ದಿತು. ಅಲ್ಲದೇ ಈ ಪ್ರಕ್ರಿಯೆಯಲ್ಲಿ ಎಂಕೆಎಸ್‌ಎಸ್ ಪಟ್ಟಭದ್ರ ಹಿತಾಸಕ್ತಿಯಾಗದಂತೆ ನೋಡಿಕೊಳ್ಳಲಾಯಿತು. ಯೋಜನೆಯ ಫಲ ಎಲ್ಲರಿಗೂ ತಲುಪುವಂತಾಯಿತು. ಹೊಸ ನಿರ್ವಹಣಾ ತಂಡಗಳ ಪ್ರವೇಶಕ್ಕೆ ಯಾವುದೇ ನಿರ್ಬಂಧ ಇರಲಿಲ್ಲ.

ಸಂಘಟನೆಯ ನಿರ್ಣಯಗಳು:

ಮುಖ್ಯವಾಹಿನಿಯಲ್ಲಿಯೇ ಆರ್ಥಿಕ ಚಟುವಟಿಕೆ ಕೈಗೊಳ್ಳುವುದು.

ಅನುದಾನವಿಲ್ಲದೆ ಸಾಂಪ್ರದಾಯಿಕ ರೀತಿಯಲ್ಲಿ (ಅಗತ್ಯ ಬಿದ್ದರೆ ಸುಲಭ ಸಾಲದ ಮೂಲಕ) ಬಂಡವಾಳ ಸಂಗ್ರಹಿಸುವುದು.

ಈ ಉದ್ಯಮದಲ್ಲಿ ಯಾವುದೇ ರೀತಿಯ ಹಣ ದುರುಪಯೋಗವಾಗದಂತೆ ವಿವಿಧ ನಿಯಂತ್ರಣ ವಿಧಾನ ಕಂಡುಹಿಡಿಯುವುದು.

ಉದ್ಯಮ ಅನೇಕ ಕಾರ್ಮಿಕರನ್ನು ಒಳಗೊಳ್ಳಬೇಕು. ಪರಿಸರ ನಾಶಕ್ಕೆ ಕಾರಣವಾಗಬಾರದು. ಆ ಭಾಗದ ಬಡ ಜನರಿಗೆ ಲಾಭ ತರುವಂತಿರಬೇಕು. ಅದರ ಪರಿಕಲ್ಪನೆ ಮತ್ತು ನಿರ್ವಹಣೆ ಸಾಮುದಾಯಿಕ ಸ್ವರೂಪದ್ದಾಗಿರಬೇಕು.

ಎಂಕೆಎಸ್ಎಸ್ ಯಾವ ರೀತಿಯ ಉದ್ಯಮದಲ್ಲಿ ತೊಡಗಿಸಿಕೊಳ್ಳಬೇಕು ಎಂಬುದರ ಬಗ್ಗೆ ವಿವಿಧ ಸಲಹೆಗಳು ಬಂದವು. ನ್ಯಾಯಬೆಲೆ ಅಂಗಡಿ, ಸಿಮೆಂಟು, ಹೆಂಚಿನ ತಯಾರಿಕೆ ಮತ್ತು ಕಿರಾಣಿ ಅಂಗಡಿ ನಡೆಸಬೇಕೆಂಬ ಸಲಹೆಗಳು ಹರಿದು ಬಂದವು. ಇಲ್ಲಿ ಸಿಮೆಂಟು ಹಾಗೂ ಹೆಂಚುಗಳು ಯಾಕೆ? ಎಂಬ ಪ್ರಶ್ನೆ ಎದುರಾದವು. ಯಾವ ಖರ್ಚೂ ಇಲ್ಲದೇ ಮನೆಗಳ ನಿರ್ಮಾಣ ಮಾಡಿಬಿಡಬಹುದಾದ ಕಾಲ ಒಂದಿತ್ತು. ಗೋಡೆಗಾಗಿ ಅಗತ್ಯವಿರುವ ಕಲ್ಲು ಹಾಗೂ ಮಣ್ಣು ಸುಲಭವಾಗಿ ದೊರೆಯುತ್ತಿತ್ತು. ಸ್ಥಳೀಯ ಟ್ಯಾಂಕ್ ಬೆಡ್‌ನಿಂದ ಮಣ್ಣು ತರಿಸಿಕೊಳ್ಳಲಾಗುತ್ತಿತ್ತು. ಮಣ್ಣಿನಿಂದ ಹೆಂಚು ತಯಾರು ಮಾಡಲಾಗುತ್ತಿತ್ತು. ಆದರೆ ಉರುವಲು ಕಟ್ಟಿಗೆ ಸಮಸ್ಯೆಯಿಂದಾಗಿ ಹಿಂದಿನಂತೆ ಹೆಂಚು ತಯಾರಿಸಲಾಗುತ್ತಿರಲಿಲ್ಲ. ಈಗಲೂ ಸಹ ಗ್ರಾಮೀಣ ಜನ ಸಿಮೆಂಟು ಮತ್ತು ಕಾಂಕ್ರಿಟ್ ಬಳಸಿ ಪರಿಪೂರ್ಣ ಮನೆಗಳನ್ನು ಕಟ್ಟಿಕೊಳ್ಳಲು ಸಾಧ್ಯವಾಗುವುದಿಲ್ಲ. ಸಾವಿರಾರು ಹಳ್ಳಿಗಳಂತಯೇ ದೇವದೂಂಗ್ರಿಯಲ್ಲಿಯೂ ಸಹ ಮನೆ ನಿರ್ಮಾಣದ ಪ್ರಶ್ನೆ ಅರಿವಿಗೆ ಬಾರದ ರೀತಿಯಲ್ಲಿ ಸಮಸ್ಯೆಯ ರೂಪ ತಾಳಿತ್ತು. ಅಗ್ಗವಾಗಿ ಹಳ್ಳಿಯಲ್ಲಿಯೇ ಹೆಂಚುಗಳನ್ನು ತಯಾರಿಸಲು ಸಾಧ್ಯವಾದಲ್ಲಿ ಮನೆ ನಿರ್ಮಾಣದ ಬಹುಪಾಲು ಸಮಸ್ಯೆಯನ್ನು ಪರಿಹರಿಸಬಹುದಾಗಿತ್ತು.

ಸಾಮೂಹಿಕವಾಗಿ ಹೆಂಚು ತಯಾರಿಕಾ ಘಟಕ ನಿರ್ಮಾಣದ ಸಾಧಕ-ಬಾಧಕಗಳ ಬಗ್ಗೆ ತೀರ್ಮಾನಿಸುವ ಸಲುವಾಗಿ ಎಂಕೆಎಸ್ಎಸ್ ಒಂದು ಸಮಿತಿ ರಚಿಸಿತು. ಈ ಉದ್ಯಮಕ್ಕೆ ಸಂಘಟನೆ ಕೈಹಾಕಬೇಕಾದರೆ ಹೆಚ್ಚುವರಿಯಾಗಿ ೧.೨೦ ಲಕ್ಷ ರುಪಾಯಿ ಬಂಡವಾಳ ಬೇಕಾಗುತ್ತದೆ ಎಂದು ಅಂದಾಜಿಸಲಾಯಿತು. ಇದು ದೊಡ್ಡ ಮೊತ್ತವೇ ಸರಿ. ಈ ಹಣಕ್ಕಾಗಿ ಸ್ವಯಂಸೇವಾ ಸಂಸ್ಥೆಗಳಿಗೆ ದೇಣಿಗೆ ನೀಡುವ ಸಂಸ್ಥೆಗಳಿಗೆ ಮೊರೆ ಹೋಗುವ ಹಾಗಿಲ್ಲ. ಈ ರೀತಿಯ ಅಸಾಂಪ್ರದಾಯಿಕ ಸಾಹಸಗಳಿಗೆ ಬ್ಯಾಂಕುಗಳು ಸಾಲ ನೀಡುವುದಿಲ್ಲ. ಸಮುದಾಯದಿಂದಲೇ ಹಣ ಹರಿದು ಬರಬೇಕು. ಭೀಮ್ ಮತ್ತು ಸುತ್ತಲಿನ ಗ್ರಾಮದ ಜನರಿಂದ ಎರಡು ವರ್ಷಗಳ ಅವಧಿಗೆಂದು ಬಡ್ಡಿರಹಿತ ಸಾಲವಾಗಿ ಹಣ ಸಂಗ್ರಹಿಸಲಾಯಿತು.

ದೇಣಿಗೆದಾರರಲ್ಲಿ ೧೦ ರುಪಾಯಿ ಸಾಲ ನೀಡುವ ಸಾವಿರ ಮಂದಿ ಹಾಗೂ ೧೦೦ ರುಪಾಯಿ ಸಾಲ ನೀಡುವ ನೂರು ಮಂದಿ ಎಂದು ಎರಡು ರೀತಿಯ ವರ್ಗೀಕರಣ ಮಾಡಲಾಯಿತು.

ಸುಮಾರು ೮೦,೦೦೦ ಸ್ಥಳೀಯ ಗ್ರಾಮಗಳಿಂದ ಸುಮಾರು ೮೦,೦೦೦ ರುಪಾಯಿ ಹಣವನ್ನು ಸಂಗ್ರಹಿಸಲಾಯಿತು. ಜೈಪುರ, ದೆಹಲಿ ಹಾಗೂ ಮತ್ತಿತರ ಕಡೆಗಳಿಂದ ಉಳಿದ ಹಣ ಸಂಗ್ರಹವಾಯಿತು. ೧.೩೦ ಲಕ್ಷ ರುಪಾಯಿ ಬಂಡವಾಳ ಹಾಗೂ ಇಬ್ಬರು ಪೂರ್ಣಾವಧಿ ಕೆಲಸಗಾರರೊಂದಿಗೆ ೧೯೯೨ರ ನವೆಂಬರ್ ೧೬ರಂದು ಮಜ್ದೂರ್ ಕಿಸಾನ್ ಕಿರಾಣಿ ಅಂಗಡಿ ಆರಂಭವಾಯಿತು. ಕೆಲಸಗಾರರಿಬ್ಬರಿಗೂ ಈ ಕ್ಷೇತ್ರದಲ್ಲಿ ಎರಡು ವರ್ಷಗಳ ಅನುಭವ ಇತ್ತು. ಈ ಅಂಗಡಿ ಭೀಮ್ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಅಗ್ಗದ ಬೆಲೆಯಲ್ಲಿ ಉತ್ತಮ ಗುಣಮಟ್ಟದ ದಿನಸಿಗಳನ್ನು ಮಾರಾಟ ಮಾಡಿ ಶೇ೦.೪೫ ನಿವ್ವಳ ಲಾಭ ಗಳಿಸಿತು. ಮೊದಲ ವರ್ಷದಲ್ಲಿತಯೇ ೩೬ ಲಕ್ಷ ರುಪಾಯಿ ವಹಿವಾಟಾಯಿತು.

ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಧ್ವಂಸ: ಭೀಮ್‌ನಲ್ಲಿ ಸಮಸ್ಯೆ

ಲಾಠಿ ಹಿಡಿದ ಆ ಗುಂಪು ಮಜ್ದೂರ್ ಕಿಸಾನ್ ಕಿರಾಣಿ ಅಂಗಡಿಯತ್ತ ನುಗ್ಗಿತು. ಕೆಲವರು ಕೇಸರಿ ಧ್ವಜ ಹಿಡಿದು ಹಿಂದೂ ರಾಷ್ಟ್ರದ ಪರ ಘೋಷಣೆ ಕೂಗುತ್ತಿದ್ದರು. ಸಂಘಟನೆ ಹಾಗೂ ಅದರ ಸದಸ್ಯರು ಕಿರಾಣಿ ಅಂಗಡಿಯ ಯಶಸ್ಸಿನಿಂದ ಸಂಭ್ರಮದಲ್ಲಿರಬೇಕಾದರೆ ಬಾಬರಿ ಮಸೀದಿ ಧ್ವಂಸ ಪ್ರಕರಣ ಭಾರತೀಯ ಉಪಖಂಡದಲ್ಲಿ ತಲ್ಲಣ ಎಬ್ಬಿಸಿತ್ತು.

ರಾಮಜನ್ಮ ಭೂಮಿ ಬಿಡುಗಡೆಗಾಗಿ ಸಾವಿರಾರು ಕರಸೇವಕರು ಸೇರಿದ್ದಾರೆಂದು ಪತ್ರಿಕೆಗಳು ವರದಿ ಮಾಡುತ್ತಿದ್ದವು. ಇಂಥ ಯಾವುದೇ ಬದಲಾವಣೆಗೆ ತೆರೆದುಕೊಳ್ಳದೇ ತಟಸ್ಥವಾಗಿದ್ದ ಭೀಮ್‌ನಗರದಿಂದಲೂ ಕರಸೇವಕರು ಅಯೋಧ್ಯೆಗೆ ತೆರಳಿದರು. ಆದರೆ ಇಲ್ಲಿ ಬಹಳಷ್ಟು ಜನ ಈ ಪ್ರಕರಣಕ್ಕೆ ಹೆಚ್ಚಿನ ಗಮನ ಕೊಡಲಿಲ್ಲ. ೧೯೮೦ರಿಂದ ಅನೇಕ ಬಾರಿ ಭೀಮ್‌ನಂಥ ಪಟ್ಟಣಗಳಲ್ಲಿ ರಾಮಜನ್ಮಭೂಮಿ ಆಂದೋಲನದ ಅಲೆ ಏಳುತ್ತಲೇ ಇತ್ತು.

ಆದರೆ ೧೯೯೨ರ ಡಿಸೆಂಬರ್ ೬ರ ಮಧ್ಯಾಹ್ನ ಬಾಬರಿ ಮಸೀದಿ ಕಟ್ಟಡ ಉರುಳಿಸಲಾಗಿದೆ ಎಂಬ ಸುದ್ದಿ ಭೀಮ್ ನಗರದಲ್ಲಿ ಕಾಡ್ಗಿಚ್ಚಿನಂತೆ ಹಬ್ಬಿತು. ಕರಸೇವಕರು ಮತ್ತೊಮ್ಮೆ ಈ ಬಾಬರಿ ಮಸೀದಿಯ ಮೇಲೇರಿ ಹೋಗಿ ಒಂದಿಷ್ಟು ಕನ್ನ ಹಾಕಿರಬಹುದೆಂದು ಜನ ಭಾವಿಸಿದ್ದರು. ೧೯೯೦ಕ್ಕಿಂತ ಹಿಂದೆಯೂ ಈ ರೀತಿ ಆಗಿತ್ತು. ಆದರೆ ಬಾಬರಿ ಮಸೀದಿಯನ್ನು ಪೂರ್ತಿ ಕೆಡವಿ, ಅವಶೇಷಗಳೂ ಉಳಿಯದಂತೆ ಮಾಡಲಾಗಿದೆ ಎಂದು ಡಿಸೆಂಬರ್ ೭ರಂದು ರೇಡಿಯೋದಲ್ಲಿ ಸುದ್ದಿ ಬಿತ್ತರವಾಗಿದ್ದನ್ನು ಖಂಡಿತವಾಗಿಯೂ ಯಾರೂ ನಿರೀಕ್ಷಿಸಿರಲಿಲ್ಲ.

ಈ ಸುದ್ದಿ ದೇವದೂಂಗ್ರಿಯ ಕುಟುಂಬವನ್ನು ದಿಗ್ಭ್ರಮೆಗೊಳಿಸಿತು. ಹೀಗಾಗಿರಲಿಕ್ಕಿಲ್ಲ ಎನ್ನುವ ನಂಬಿಕೆ ಒಂದುಕಡೆಯಾದರೆ ಮತ್ತೊಂದೆಡೆ ತೀವ್ರ ದುಃಖ ಆವರಿಸಿತು. ಅಷ್ಟೇ ಅಲ್ಲ; ಇಡೀ ಮನೆಯಲ್ಲಿ ಸೂತಕದ ಛಾಯೆ ಕಾಣಿಸಿಕೊಂಡಿತು. ಆದರೆ ದುಃಖಿಸುತ್ತ ಕೂರಲು ಅದು ಕಾಲವಲ್ಲ. ಭೀಮ್‌ನಲ್ಲಿಯೂ ಗಲಾಟೆ ಶುರುವಾಗಬಹುದು. ಆದಕಾರಣ ಮಜ್ದೂರ್

ಕಿಸಾನ್ ಸಂಘದ ಕಿರಾಣಿ ಅಂಗಡಿಯ ಮುಂದೆ ಸಂಘಟನೆಯ ಸದಸ್ಯರನ್ನು ಇರಿಸಲು ನಿರ್ಧರಿಸಲಾಯಿತು. ಅಂದು ಸಂಜೆಯ ವೇಳೆಗಾಗಲೇ ಎಡಪಕ್ಷಗಳು, ಕಾರ್ಮಿಕ ಸಂಘಗಳು ಮಾರನೆಯ ದಿವಸ ಬಂದ್‌ಗೆ ಕರೆಕೊಟ್ಟವು. ಮೂರುವಾರದ ಹಿಂದಷ್ಟೇ ಆರಂಭವಾದ ಕಿರಾಣಿ ಅಂಗಡಿಗೆ ಡಿಸೆಂಬರ್ ೮ರಂದು ಮೊಟ್ಟಮೊದಲ ಬಾರಿ ಬಾಗಿಲು ಹಾಕಬೇಕಾಗಿ ಬಂತು. ಮಸೀದಿ ಧ್ವಂಸ ವಿರೋಧಿಸಿ ಕರೆಯಲಾಗಿದ್ದ ಬಂದ್‌ಗೆ ಈ ಅಂಗಡಿಯೊಂದೇ ಬೆಂಬಲ ನೀಡಿತ್ತು.

ಮಸೀದಿ ಧ್ವಂಸದ ಪರವಾಗಿದ್ದ ಇತರ ಅಂಗಡಿ ಮಾಲೀಕರು ಡಿಸೆಂಬರ್ ೯ರಂದು ಬಿಜೆಪಿ ಕರೆ ನೀಡಿದ್ದ ಬಂದ್ ಬೆಂಬಲಿಸಿದರು. ಬಹಳಷ್ಟು ವ್ಯಾಪಾರಿಗಳಿಂದ ಬಿಜೆಪಿಗೆ ತಕ್ಷಣದ ಬೆಂಬಲ ದೊರೆಯಿತು. ಮಜ್ದೂರ್ ಕಿಸಾನ್ ಕಿರಾಣಿ ಅಂಗಡಿ ಏನಾದರೂ ತೊಂದರೆ ನೀಡಬಹುದೆಂದು ಭಾವಿಸಿ ಪ್ರತಿಭಟನಾ ನಿರತ ವ್ಯಾಪಾರಿಗಳು ಆವೇಶದಿಂದ ಅಂಗಡಿಯತ್ತ ಧಾವಿಸಿ ಬಂದರು. ಇದರ ಅರಿವಿದ್ದ ಎಂಕೆಎಸ್‌ಎಸ್ ಸುಮಾರು ೨೦ ಸದಸ್ಯರು ಅದಾಗಲೇ ಅಲ್ಲಿ ಜಮಾಯಿಸಿದ್ದರು. ಪ್ರಾರ್ಥನಾ ಸ್ಥಳಗಳ ಮೇಲೆ ನಡೆದ ದಾಳಿಯನ್ನು ಖಂಡಿಸಲು ಕರೆನೀಡಲಾದ ಬಂದ್ ಪ್ರಯುಕ್ತ ಅಂಗಡಿ ಮುಚ್ಚಲಾಗಿದೆ ಎಂದು ಹಿಂದಿನ ದಿನ ತಗುಲಿಸಿದ್ದ ಬೋರ್ಡ್ ಹಾಗೆಯೇ ಇತ್ತು.

ವ್ಯಾಪಾರಿಗಳಾದ ನಾವು ಒಗ್ಗಟ್ಟಿನಿಂದ ಬಂದ್‌ಗೆ ಬೆಂಬಲ ನೀಡಬೇಕು. ದಯವಿಟ್ಟು ಅಂಗಡಿ ಬಾಗಿಲು ಮುಚ್ಚಿ ಎಂದು ವ್ಯಾಪಾರಿಗಳು ಸಂಘಟನೆಯ ಸದಸ್ಯರನ್ನು ಕೇಳಿಕೊಂಡರು. 'ನಾವು ನಿನ್ನೆಯೇ ಬಂದ್ ಮಾಡಿದ್ದೇವೆ' ಎಂದು ಅಂಗಡಿಯ ಕೆಲಸಗಾರರು ಹೇಳಿದರು. ಸುಮ್ಮನೆ ಜಗಳ ಕಾಯುವುದೇಕೆ ಎಂತಲೋ ಏನೋ ಬಿಜೆಪಿಯವರು ಅಲ್ಲಿಂದ ಕಾಲ್ಕಿತ್ತರು. ಅಂಗಡಿ ಎಂದಿನಂತೆ ತೆರೆದಿತ್ತು. ನಿಧಾನವಾಗಿ ಇತರ ಅಂಗಡಿಗಳು ತೆರೆಯತೊಡಗಿದವು.

ಮಧ್ಯಾಹ್ನದ ವೇಳೆಗೆ ಮಾರುಕಟ್ಟೆ ಹೆಚ್ಚುಕಡಿಮೆ ಎಂದಿನಂತೆ ವಹಿವಾಟು ನಡೆಸಿತು.

ಈ ಘಟನೆ ದೀರ್ಘಕಾಲೀನ ರಾಜಕೀಯ ಪರಿಣಾಮಕ್ಕೆ ಎಡೆ ಮಾಡಿಕೊಟ್ಟಿತು. ಅಲ್ಲದೆ ಎಂಕೆಎಸ್‌ಎಸ್ ಸಂಘಟನೆಯ ಶಕ್ತಿ ಏನೆಂಬುದನ್ನು ಇದು ತೋರಿಸಿತು. ಮಜ್ದೂರ್ ಕಿಸಾನ್ ಕಿರಾಣಿ ಅಂಗಡಿ ಭೀಮ್‌ನಲ್ಲಿ ನಿಜಕ್ಕೂ ಸಣ್ಣ ಬಿರುಗಾಳಿಯನ್ನು ಉಂಟು ಮಾಡಿತ್ತು. ಈ ಅಂಗಡಿಯ ಅಸ್ತಿತ್ವ ಅದೆಷ್ಟು ಪ್ರಬಲವಾಗಿತ್ತೆಂದರೆ ಮಾರುಕಟ್ಟೆಯಲ್ಲಿರುವ ಇತರ ಅಂಗಡಿಗಳನ್ನು ಚಿಂತೆಗೀಡು ಮಾಡಿತು. ಜೊತೆಗೆ ದಿನವಿಡೀ ಈ ಅಂಗಡಿಯಲ್ಲಿ ದೊರೆಯುವ ಪದಾರ್ಥಗಳ ಬೆಲೆ ಕಡಿಮೆ ಎಂದು ಧ್ವನಿವರ್ಧಕದಲ್ಲಿ ಘೋಷಿಸಲಾಗುತ್ತಿತ್ತು. ಇತರ ಅಂಗಡಿಯವರು ತಾವೂ ಮೈಕ್ ಮೂಲಕ ಕೂಗುತ್ತಾ ಈ ಅಂಗಡಿಗೆ ಸವಾಲು ಹಾಕಿದರು. ಆದರೆ ಎಂಕೆಎಸ್‌ಎಸ್‌ಗೆ ಇದರಿಂದ ಹೆಚ್ಚು ಲಾಭವಾಯಿತು.

ಮೂರು ತಿಂಗಳುಗಳಲ್ಲಿ ಪೇಟೆ ಧಾರಣೆ ಭೀಮ್‌ನಲ್ಲಿ ಶೇ.೧೧ರಷ್ಟು ಕಡಿಮೆಯಾಯಿತು. ಅಡುಗೆ ಎಣ್ಣೆಗೆ ೩ ರುಪಾಯಿ, ಬೆಲ್ಲಕ್ಕೆ ೫೦ ಪೈಸೆ, ಸಕ್ಕರೆ ಪ್ರತಿ ಕೆಜಿಗೆ ೭೫ ಪೈಸೆಯಷ್ಟು ಕಡಿಮೆಯಾಯಿತು. ಎಂಕೆಎಸ್‌ಎಸ್ ಕಾರ್ಯಕರ್ತರಿಗೆ ಇದರಿಂದ ಹೆಮ್ಮೆ ಎನಿಸಿತು. ಬಡವರಿಗೆ

ಅನುಕೂಲವಾಗುವಂತೆ ಮಾರುಕಟ್ಟೆಯನ್ನು ಬಳಸಿಕೊಳ್ಳಲು ಸಾಧ್ಯ ಎಂಬುದನ್ನು ಸಾಧಿಸಿ ತೋರಿಸಿದಂತಾಯಿತು. ಬಡವರೂ ಸಹ ಹಣವನ್ನು ಚೆನ್ನಾಗಿಯೇ ನಿರ್ವಹಿಸಬಲ್ಲರು ಮತ್ತು ವ್ಯಾಪಾರವನ್ನು ಮಾಡಬಲ್ಲರೆಂಬುದಕ್ಕೆ ಈ ಪ್ರಯೋಗ ಸಾಕ್ಷಿಯಾಯಿತು.

ಕಿಸಾನ್ ಕಿರಾಣಿ ಅಂಗಡಿಯ ಪ್ರಾಬಲ್ಯದಿಂದ ವಿಚಲಿತಗೊಂಡ ಭೀಮ್‌ನ ವ್ಯಾಪಾರಿ ಮಂಡಲವು ಈ ಕಿರಾಣಿ ಅಂಗಡಿಯನ್ನು ಬಹಿಷ್ಕರಿಸಲು ನಿರ್ಧರಿಸಿತು. ಸಂಘಟನೆಯ ಈ ಅಂಗಡಿಯ ಜತೆ ಸಗಟು ವ್ಯಾಪಾರ ಮಾಡುವವರಿಗೆ ೫೦೫೧ ರುಪಾಯಿ ದಂಡ ವಿಧಿಸಲಾಗುವುದೆಂದು ಘೋಷಿಸಿತು. ಆದರೆ ವಾಸ್ತವಾಗಿ ಬಹಿಷ್ಕಾರ ಜಾರಿಗೊಳಿಸುವುದು ಕಷ್ಟಸಾಧ್ಯವಾದ ಕೆಲಸವಾಗಿತ್ತು. ಆರು ತಿಂಗಳ ಬಳಿಕ ಎಂಕೆಎಸ್‌ಎಸ್ ಸುಮಾರು ೨೫ ಕಿ.ಮೀ ದೂರದ ಜವಾಜ ಹಾಗು ಬ್ರಾರ್‌ನಲ್ಲಿ ಮತ್ತೆರಡು ಅಂಗಡಿಗಳನ್ನು ತೆರೆಯಿತು.

'ತಮ್ಮ ಬೆಳೆಯನ್ನು ಕಡಿಮೆ ಬೆಲೆಗೆ ಮಾರಿ ದುಬಾರಿ ಬೆಲೆ ತೆತ್ತು ಅಗತ್ಯವಸ್ತುಗಳನ್ನು ಕೊಳ್ಳುವ ಸಣ್ಣ ಹಾಗೂ ಅತಿಸಣ್ಣ ರೈತರಿಗೆ ಈ ಅಂಗಡಿ ಹೊಸ ಹಾದಿ ತೆರೆದಿದೆ' ಎಂದು ೧೯೯೩ರಲ್ಲಿ ಭರತ್ ಡೋಂಗ್ರಾ ಎಂಬುವವರು ಈ ಅಂಗಡಿಗಳ ಸಾಹಸದ ಬಗ್ಗೆ ಇಕನಾಮಿಕ್ ಟೈಮ್ಸ್‌ನಲ್ಲಿ ಲೇಖನ ಬರೆದರು. ಸಂಘಟನೆಯ ಕಾರ್ಯಕರ್ತರಿಗೆ ಈ ಉದ್ಯಮದ ಮಿತಿಯ ಅರಿವು ಚೆನ್ನಾಗಿ ತಿಳಿದಿತ್ತು. ಅವರು ಡೋಂಗ್ರಾಗೆ ಹೀಗೆ ಹೇಳಿದರು:

'ದೊಡ್ಡ ಸಗಟು ವ್ಯಾಪಾರದಲ್ಲಿನ ದಲ್ಲಾಳಿಗಳ ಹಾವಳಿಯಿಂದ ಹೊರಬರುವ ದಾರಿಗಾಗಿ ನಾವು ಪ್ರಯತ್ನಿಸಿದ್ದೇವೆ. ಆದರೆ ನಾವೇ ಅದರಲ್ಲಿ ಸಿಲುಕಿಕೊಂಡಂತೆ ಆಗಿದೆ. ಆದರೂ ಕೂಡ ಈ ಅಂಗಡಿಯನ್ನು ಮುಂದುವರೆಸಿಕೊಂಡು ಹೋಗುವ ಛಲ ನಮ್ಮಲ್ಲಿದೆ. ಭೀಮ್‌ನಲ್ಲಿಯ ಚಿಕ್ಕ ಮಾರುಕಟ್ಟೆಗಿಂತ, ಸಗಟು ಮಾರುಕಟ್ಟೆ ಇನ್ನೂ ಜಟಿಲವಾದದ್ದು ಎಂಬ ಅನುಭವ ನಮಗಾಗಿದೆ. ಈ ಮಾರುಕಟ್ಟೆಯ ಕತ್ತನ್ನು ಹಿಡಿದಿರುವವರು ದಲ್ಲಾಳಿಗಳು ಎಂಬುದನ್ನು ಕಂಡಿದ್ದೇವೆ. ಆದರೆ ಮುಕ್ತ ಮಾರುಕಟ್ಟೆಯಲ್ಲಿನ ಈ ವೈರುಧ್ಯಗಳನ್ನು ಅನಾವರಣಗೊಳಿಸುವುದು ಬಹಳ ಪರಿಣಾಮಕಾರಿಯಾದದ್ದು ಎಂದು ನಮಗನಿಸಿದೆ'.

'ಇಂಥ ಒಂದು ದೊಡ್ಡ ಜವಾಬ್ದಾರಿಯನ್ನು ಹೊತ್ತು ಅದನ್ನು ಯಶಸ್ಸಿನತ್ತ ಕೊಂಡೊಯ್ದ ದೊಡ್ಡ ತೃಪ್ತಿ ನಮಗೆ ಇದೆ. ಕಿರಾಣಿ ಅಂಗಡಿಯನ್ನು ನಡೆಸುವಾಗ ನಮಗೆ ಪಣವಾಗಿದ್ದದ್ದು ಹಣ ಅಲ್ಲ; ಸಂಘಟನೆ, ಶ್ರಮಪಟ್ಟು ಗಳಿಸಿಕೊಂಡ ವಿಶ್ವಾಸಾರ್ಹತೆ. ಈವರೆಗೂ ಎಂಕೆಎಸ್‌ಎಸ್ ನೇರವಾಗಿ ಹಣದ ನಿರ್ವಹಣೆ ಮಾಡಿರಲಿಲ್ಲ. ಸಭೆಗೆ ಬರುವವರಿಗೆಲ್ಲ ಬಸ್ ಚಾರ್ಜನ್ನಾಗಲೀ, ಉಚಿತ ಊಟವನ್ನಾಗಲೀ ನೀಡಿರಲಿಲ್ಲ. ಸಂಘಟನೆ ಉದ್ದೇಶ ಪೂರ್ವಕವಾಗಿಯೇ ಯಾವುದೇ ಆಸ್ತಿ ಸಂಪಾದಿಸದೆ ಸದಸ್ಯರಂತೆಯೇ ಬಡತನದಲ್ಲಿಯೇ ಇರಲು ಬಯಸಿತು. ಈ ಸಂಘಟನೆಗೆ ಅದರದ್ದೇ ಆದ ವಾಹನವಾಗಲೀ, ಕಚೇರಿಯಾಗಲೀ ಇರಲಿಲ್ಲ. ಅಲ್ಲದೆ ಸಂಘಟನೆಗೆ ಯಾವುದೇ ರಾಜಕೀಯ ಆಕಾಂಕ್ಷೆ ಕೂಡ ಇರಲಿಲ್ಲ. ಅಂಗಡಿ ಕೆಲಸಗಾರರಿಗೆ ಮಾತ್ರ ಸಂಬಳ ಕೊಡಲಾಗುತ್ತಿತ್ತು. ಈ ಅಂಗಡಿಗಳನ್ನು ನಡೆಸುವಲ್ಲಿ ಅನೇಕ ಸವಾಲುಗಳಿದ್ದವು. ಕೆಲಸಗಾರರು ಅಪ್ರಾಮಾಣಿಕರಾಗಬಹುದಾದ ಭಯ ಇತ್ತು. ಆದರೆ ಅಂಗಡಿ ಚೆನ್ನಾಗಿಯೇ ನಡೆಯತೊಡಗಿತು. ಇದರಲ್ಲಿ ತೊಡಗಿಕೊಂಡ ಎಲ್ಲರೂ ಯಶಸ್ಸನ್ನು ಸಾಧಿಸಿದರು.

ಆರು ತಿಂಗಳ ನಂತರ ಮೇ ದಿನದ ರ್‍ಯಾಲಿ ಸೇರಿದ ಎಲ್ಲರ ಮುಂದೆ ಈ ಕಿರಾಣಿ ಅಂಗಡಿಗಳ ಬಗ್ಗೆ ಚುನ್ನಿಸಿಂಗ್ ವಿವರಿಸಲು ಯತ್ನಿಸಿದ. 'ಸ್ಥಳೀಯ ವ್ಯಾಪಾರಿಗಳು ಈ ಅಂಗಡಿ ತಮಗೆ ತೊಂದರೆಯಾಗುತ್ತದೆ ಎಂದು ಭಾವಿಸಬೇಕಿಲ್ಲ. ಸಣ್ಣ ವ್ಯಾಪಾರಿಗಳನ್ನು ಆಹುತಿ ತೆಗೆದುಕೊಳ್ಳುತ್ತಿರುವ ವ್ಯವಸ್ಥೆಯ ಬಲಿಪಶುಗಳು ನಾವು ಎಂದು ಅಂದುಕೊಳ್ಳಬೇಕಾಗಿಲ್ಲ. ದೊಡ್ಡ ಸೇಠ್‌ಗಳು ಮಾತ್ರ ಇಲ್ಲಿ ಬೆಳೆಯುತ್ತಾರೆ' ಎಂದು ಸಿಂಗ್ ಹೇಳಿದ.

ಕಾಯಿಲೆಯಿಂದ ಸೊರಗಿ ಅಸ್ಥಿಪಂಜರದಂತೆ ಕಾಣುತ್ತಿದ್ದ ಮೋಟ್‌ಸಿಂಗ್ ಈ ಎಲ್ಲ ವಿದ್ಯಮಾನಗಳನ್ನು ದೂರದಿಂದಲೇ ಗಮನಿಸುತ್ತಿದ್ದ. ಟಾಂಡೆಮ್‌ನಲ್ಲಿ ಮೆಹಸೂಸ್ ಬಾ ಜತೆ ಕೆಲಸ ಮಾಡುತ್ತಿದ್ದ ನಿಖಿಲ್ ಮತ್ತು ಶಂಕರ್‌ಗೆ ಮೋಟ್‌ಸಿಂಗ್‌ನನ್ನು ಬೀವರ್‌ನಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಹೋಗುವಂತೆ ಪುಸಲಾಯಿಸಲು ವಾರಗಳೇ ಹಿಡಿದವು. ದೇವದೂಂಗ್ರಿಯ ಬಹುತೇಕರು ಅನುಮಾನಿಸಿದಂತೆ ಮೋಟ್‌ಸಿಂಗ್‌ಗೆ ಕ್ಷಯರೋಗ ಇದೆ ಎಂದು ವೈದ್ಯರು ಖಚಿತಪಡಿಸಿದರು. ವರ್ಷಗಳು ಕಳೆದಂತೆ ಕೆಮ್ಮು ಹೆಚ್ಚಾಯಿತು ಹಾಗೂ ಆತನ ಇಡೀ ಶರೀರ ಕೇವಲ ಮೂಳೆಯ ಹಂದರಂತೆ ಕಾಣುತ್ತಿತ್ತು.

ಮೋಟ್‌ಸಿಂಗ್ ಯಾವತ್ತೂ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರಲಿಲ್ಲ. ಆದರೆ ದೇವದೂಂಗ್ರಿಯ ಈ ಕುಟುಂಬದ ಗೆಳೆಯನಾಗಿ ಹಾಗೂ ನೆರೆಮನೆಯವನಾಗಿ ಇವರ ದೈನಂದಿನ ಬದುಕಿನ ಭಾಗವಾಗಿದ್ದ. ತನ್ನ ಆಪ್ತೇಷ್ಟರು ಇಲ್ಲಿಗೆ ಬಂದಾಗ, ಆತ ನಸುಕಿನಲ್ಲಿಯೇ ಎದ್ದು ತನ್ನ ಜಮೀನಿಗೆ ಹೋಗಿ ಮೂಲಂಗಿಯನ್ನೋ, ಕಾಳುಗಳನ್ನೋ ತಂದುಕೊಡುತ್ತಿದ್ದ. ನಿಖಿಲ್ ಹಾಗೂ ಶಂಕರ್ ಮೋಟ್‌ಸಿಂಗ್‌ನನ್ನು ತಮ್ಮ ತಂದೆಯ ಸಮಾನ ಕಂಡು ಆತನ ಸೇವೆ ಮಾಡುತ್ತಿದ್ದರು. ವೈದ್ಯರಿಗೆ ಮೋಟ್‌ಸಿಂಗ್ ಆರೋಗ್ಯದ ಮೇಲೆ ಭರವಸೆ ಇರಲಿಲ್ಲ. ಆಸ್ಪತ್ರೆಯಲ್ಲಿ ಇರುವಷ್ಟು ದಿನ ವಿವಿಧ ರೀತಿಯ ಚಿಕಿತ್ಸೆ ನೀಡಿದರು. ತನ್ನ ಗುಡಿಸಲಿನಲ್ಲಿಯೇ ಕೊನೆಯುಸಿರೆಳೆಯಬೇಕೆನ್ನುವುದು ಸಿಂಗ್ ಹಂಬಲವಾಗಿತ್ತು. ಇದಕ್ಕೆ ಆತನ ಗೆಳೆಯರು ಆಕ್ಷೇಪಿಸಲಿಲ್ಲ. ಏನೇನೂ ಸೌಲಭ್ಯವಿರದ ಸರ್ಕಾರಿ ಆಸ್ಪತ್ರೆಗಿಂತ ಮನೆಯೇ ವಾಸಿ ಎನ್ನುವುದು ಅವರಿಗೂ ತಿಳಿದಿತ್ತು. ಕೆಲವು ತಿಂಗಳ ಬಳಿಕ ಮೋಟ್‌ಸಿಂಗ್ ತನ್ನ ಇಚ್ಛೆಯಂತೆ ಮನೆಯಲ್ಲಿಯೇ ಅಸುನೀಗಿದ.

ಇತ್ತೀಚಿನ ವರ್ಷಗಳಲ್ಲಿ ತಮ್ಮ ೪೦ ಮತ್ತು ೫೦ನೆಯ ವಯಸ್ಸಿಗೆ ಪಟ್ಟಣಗಳಿಂದ ಹಿಂದಿರುಗಿದ ಅನೇಕರು ಅಸುನೀಗಿದ್ದನ್ನು ದೇವದೂಂಗ್ರಿಯ ಈ ಕುಟುಂಬ ಗಮನಿಸಿತ್ತು. ಮೋಟ್‌ಸಿಂಗ್‌ನ ಅಕಾಲ ಮರಣ ಆ ಸಾವಿನ ನೋವನ್ನು ಸಮೀಪದಿಂದ ಅನುಭವಿಸುವಂತೆ ಮಾಡಿತ್ತು.

ಅರುಣಾ ತನ್ನೊಳಗಿದ್ದ ಬೇಗುದಿಯನ್ನು ಎಷ್ಟೇ ಹತ್ತಿಕ್ಕಲು ಪ್ರಯತ್ನಿಸಿದರೂ ಸಹ ಭುಗಿಲೆದ್ದ ಕ್ರೋಧ ಹಾಗೂ ದುಃಖದ ನಡುವಿನ ಸಮರದಲ್ಲಿ ಸೋತರು. ಆಕೆ ದೆಹಲಿಯಲ್ಲಿ ಮಾಧ್ಯಮದ ಗೆಳೆಯರನ್ನು ಭೇಟಿಯಾದಾಗ ಹಾಗೂ ಅಧಿಕಾರಿಗಳ ವರ್ತುಲದೊಳಗೆ ಇದ್ದಾಗ ಅನೇಕ ಮಂದಿ ಮಾನವ ಹಕ್ಕುಗಳ ಬಗ್ಗೆಯೇ ಚರ್ಚಿಸುತ್ತಿದ್ದರು.

ದೇಶಾದ್ಯಂತ ಮಿಲಿಯಗಟ್ಟಲೆ ಜನರಂತೆ ಮೋಟ್‌ಸಿಂಗ್ ಕೂಡ ಅಗೋಚರ ಬಲೆಯೊಳಗೆ ನುಸುಳಿ ನಿಧಾನವಾಗಿ ಸಾವಿಗೆ ಶರಣಾದ. ನಾರಾಯಣ್ ಹಾಗೂ ದೇವಿಲಾಲ್‌ಗೆ ಮೋಟ್‌ಸಿಂಗ್‌ನಂಥವರ ಸಾವು ಎಚ್ಚರಿಕೆ ನೀಡುತ್ತಿತ್ತು. ಸಾಮುದಾಯಿಕ ಮಾರ್ಗೋಪಾಯಗಳಿಂದ ಮಾತ್ರವೇ ಭವ್ಯ ಭವಿಷ್ಯ ರೂಪಿಸುವುದು ಸಾಧ್ಯ ಎಂಬುದು ಅವರಿಗೆ ಖಚಿತವಾಗಿತ್ತು. ಒಂದೆಡೆ ಎಂಕೆಎಸ್‌ಎಸ್‌ನ ಕಿರಾಣಿ ಅಂಗಡಿ ಮತ್ತು ಅದರ ಯಶಸ್ಸು ಹೆಚ್ಚಿನ ಉತ್ಸಾಹ ಮೂಡಿಸಿತ್ತು. ಅವರ ಕಲ್ಪನೆ ಮತ್ತು ಶಕ್ತಿಗಳು ಮೇರೆ ಅರಿಯದ ದಿಗಂತಗಳನ್ನು ಮುಟ್ಟಿದ್ದವು. ಅವರೊಂದಿಗೆ ಇನ್ನೂ ಹೆಚ್ಚು ಸಾಧಿಸಲು ಸಾಧ್ಯವಿದೆ ಎಂಬ ಭರವಸೆಯ ಬೆಳಕೂ ಮತ್ತೊಂದೆಡೆಯಿತ್ತು.

ಈ ಆತ್ಮವಿಶ್ವಾಸವನ್ನು ಭ್ರಷ್ಟತೆಯ ವಿರುದ್ಧ ಹೋರಾಡಲು ಏಕೆ ಬಳಸಬಾರದು? ಬಹಳಷ್ಟು ಜನರ ಆಶೆಯನ್ನು ಈ ಭ್ರಷ್ಟತೆ ಹೊಸಕಿ ಹಾಕಿತ್ತು. ಜವಾಹರ್ ರೋಜ್ಗಾರ್ ಯೋಜನೆಯೊಂದರಲ್ಲಿಯೇ ಪ್ರತಿಯೊಂದು ಗ್ರಾಮ ಪಂಚಾಯ್ತಿಯೂ ಲಕ್ಷಕ್ಕೂ ಹೆಚ್ಚಿನ ಅನುದಾನವನ್ನು ಕೇಂದ್ರ ಸರ್ಕಾರದಿಂದ ಪಡೆಯುತ್ತದೆ. ಈ ಪಂಚಾಯ್ತಿಯ ಎಲ್ಲ ಸದಸ್ಯರೂ ಈ ಹಣದ ಲೆಕ್ಕ ಕೊಡುವಂತೆ ಸ್ಥಳೀಯ ಅಧಿಕಾರಿಗಳನ್ನು ಏಕೆ ಬಲವಂತಪಡಿಸಬಾರದು? ಎಂಬ ಪ್ರಶ್ನೆಗಳು ಮೂಡಿದವು.

ಭ್ರಷ್ಟಾಚಾರಮುಕ್ತ ಸಮಾಜಕ್ಕಾಗಿ–ಸಾರ್ವಜನಿಕ ವಿಚಾರಣೆಗಳು....

ಎಂಕೆಎಸ್‌ಎಸ್‌ನ ನಾಟಕ ಮಂಡಳಿ ೧೯೯೪ರ ಚಳಿಗಾಲದಲ್ಲಿ ಪಾಲಿ ಜಿಲ್ಲೆಯ ಕೋಟ್ ಕಿರಾಣಾ ಗ್ರಾಮ ಪಂಚಾಯ್ತಿಗೆ ಸೇರಿದ ಗ್ರಾಮಗಳಲ್ಲಿ ತನ್ನ ನಾಟಕ ತಂಡದೊಂದಿಗೆ ಸಂಚಾರ ನಡೆಸಿತು. ಜನರಲ್ಲಿ ಸಾರ್ವಜನಿಕ ವಿಚಾರಣೆಯ ಬಗ್ಗೆ ಅರಿವು ಮೂಡಿಸುವುದು ಈ ರಂಗಸಂಚಾರದ ಉದ್ದೇಶವಾಗಿತ್ತು. ಈ ಪಂಚಾಯ್ತಿ ವ್ಯಾಪ್ತಿಯಲ್ಲಿ ಸಾರ್ವಜನಿಕ ಹಣ ದುರುಪಯೋಗದ ಜ್ವಲಂತ ನಿದರ್ಶನಗಳಿವೆ ಎಂಬುದು ಎಲ್ಲರಿಗೂ ತಿಳಿದಿತ್ತು. ಹಾಡು, ನೃತ್ಯ, ಸಣ್ಣಪುಟ್ಟ ನಾಟಕಗಳ ಮೂಲಕ ಪ್ರತಿ ಹಳ್ಳಿಯಲ್ಲಿಯೂ ಜನರನ್ನು ಒಗ್ಗೂಡಿಸಲಾಯಿತು. ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆಯಾದ ಹಣದ ದುರುಪಯೋಗದಿಂದ ಕೋಪಗೊಂಡ ಹಳ್ಳಿಗರ ಮನಸ್ಥಿತಿಯನ್ನು ಅರ್ಥಮಾಡಿಕೊಂಡು ಈ ಭ್ರಷ್ಟತೆಯನ್ನು ಹೋಗಲಾಡಿಸುವುದು ಹೇಗೆ ಎಂಬುದನ್ನು ಅದು ತಿಳಿಸಿಕೊಡುತ್ತಿತ್ತು.

ಎಲ್ಲಕ್ಕಿಂತ ಮೊದಲು 'ನಾವು ಏನೂ ಮಾಡಲಾಗದು' ಎನ್ನುವುದನ್ನು ಬಿಡಬೇಕು. ನಾವು ಸಾರ್ವಜನಿಕ ವೇದಿಕೆಯಲ್ಲಿ ವಿಚಾರಣೆ ನಡೆಸಬೇಕು. ಸ್ಥಳೀಯ ಕಾಮಗಾರಿಗಳ ಬಗ್ಗೆ ಲಭ್ಯ ಮಾಹಿತಿಗಳನ್ನು ಮಂಡಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಲೆಕ್ಕ ಕೊಡಲು ಅಧಿಕಾರಿಗಳನ್ನು ಒತ್ತಾಯಿಸಬೇಕು.

ನಿಗದಿತ ದಿನದಂದು ಕೋಟ್ ಕಿರಾಣಾದ ಶಾಲೆಯ ಆವರಣದಲ್ಲಿ ಹಾಕಿದ ಶಾಮಿಯಾನದಲ್ಲಿ ಎಲ್ಲರೂ ಸೇರಿದರು. ಈಚೆಗೆ ನಡೆದ ಕಾಮಗಾರಿಗಳಲ್ಲಿನ ಹಾಜರಾತಿ

ಪಟ್ಟಿ (ಮಸ್ಟರ್ ರೋಲ್) ಓದಲಾರಂಭಿಸಿದ್ದೇ ತಡ ಸಭೆಯಲ್ಲಿ ಗದ್ದಲ ಶುರುವಾಯಿತು. ಜನ ಧ್ವನಿವರ್ಧಕದ ಕಡೆ ನುಗ್ಗಿದರು. 'ಈ ಹಾಜರಾತಿಯ ದಾಖಲೆಯಲ್ಲಿ ನಮ್ಮ ಹೆಸರೂ ಇದೆ; ಆದರೆ ಒಂದೇ ಒಂದು ದಿನ ಉದ್ಯೋಗ ದೊರೆತಿಲ್ಲ' ಎಂದು ಜನ ಬೊಬ್ಬಿಟ್ಟರು. ದಾಖಲೆಯಲ್ಲಿ ನಮೂದಿಸಲಾಗಿರುವ ಕೆಲವು ವ್ಯಕ್ತಿಗಳು ಗತಿಸಿ ಎಷ್ಟೋ ವರ್ಷಗಳಾಗಿದ್ದವು. ಹಣ ನೀಡಿದ ಗ್ರಾಮಸೇವಕ, ಕೆಲಸ ಮುಗಿದಿದೆ ಎಂದು ಪ್ರಮಾಣ ಪತ್ರ ನೀಡಿದ ಕಿರಿಯ ಎಂಜಿನಿಯರ್ ಇಬ್ಬರನ್ನೂ ವಿಚಾರಣೆಗೊಳಪಡಿಸಬೇಕೆಂದು ಒಕ್ಕೊರಲಿನಿಂದ ಕೇಳಕೊಳ್ಳಲಾಯಿತು.

ಹಳ್ಳಿಯ ಗ್ರಾಮಾಧಿಕಾರಿಯ ಮನೆಗೆ (ಅದು ಪೂರ್ಣವಾಗಿರಲೇ ಇಲ್ಲ) ಸಂಬಂಧಿಸಿದ ಬಿಲ್ಲು ಮತ್ತು ರಸೀದಿಗಳ ಪ್ರಸ್ತಾಪ ಬಂದಾಗ ಇಡೀ ಸಭೆ ನಗೆಗಡಲಿನಲ್ಲಿ ತೇಲಿತು. ದಾಖಲೆಗಳ ಪ್ರಕಾರ ಮೇಲ್ಛಾವಣಿ ಸಾಮಗ್ರಿ ಹಾಗೂ ಕಿಟಕಿ ಬಾಗಿಲುಗಳಿಗೆ ಬಿಲ್ ಪಾವತಿಸಲಾಗಿತ್ತು. ಆದರೆ, ವಾಸ್ತವವವಾಗಿ ಮೇಲ್ಛಾವಣಿಯಾಗಲೀ, ಕಿಟಕಿ ಬಾಗಿಲುಗಳಾಗಲೀ ಇರಲೇ ಇಲ್ಲ. ಸಾರ್ವಜನಿಕರ ಆಕ್ರೋಶ ಭುಗಿಲೆದ್ದಿತು. ವಿಚಾರಣೆ ಮುಗಿದ ತಕ್ಷಣವೇ ಪ್ರೊಬೇಶನರಿ ಐ.ಎ.ಎಸ್ ಅಧಿಕಾರಿ–ಆತ ಬಿ.ಡಿ.ಒ ಕೆಲಸ ನೋಡಿಕೊಳ್ಳುತ್ತಿದ್ದ ಜೂನಿಯರ್ ಎಂಜಿನಿಯರ್ ಮತ್ತು ಗ್ರಾಮಸೇವಕನ ಮೇಲೆ ಪ್ರಥಮ ಮಾಹಿತಿ ವರದಿ ಸಲ್ಲಿಸಿದ. ಇದೇ ರೀತಿ ಸಾರ್ವಜನಿಕ ವಿಚಾರಣೆ ಭೀಮ್‌ನಲ್ಲಿ ನಡೆದಾಗ ಅಸ್ತಿತ್ವದಲ್ಲಿಯೇ ಇರದ ಬೋಗಸ್ ಕಂಪನಿ ಮೂವತ್ತಾರು ಲಕ್ಷ ರೂಪಾಯಿ ನುಂಗಿದೆ ಎಂಬ ವಿಷಯ ತಿಳಿದುಬಂತು. ಈ ಕಂಪನಿಯ ಮಾಲೀಕರು, ಆ ಬ್ಲಾಕ್‌ನ ಅಧಿಕಾರಿಗಳ ವಂಶಸ್ಥರು.

ಈ ರೀತಿಯ ಸಾರ್ವಜನಿಕ ವಿಚಾರಣೆಗಳನ್ನು ನಡೆಸುವುದರಲ್ಲಿ ರೇಣುಕಾ ಪಮೇಚಾ ಸಿದ್ಧಹಸ್ತರು. ಈಕೆ ೧೯೯೬ರ ಏಪ್ರಿಲ್ ೨೫ರಂದು, ಭಿಲ್ವಾರ ಜಿಲ್ಲೆಯ ತಾನಾ ಗ್ರಾಮದಲ್ಲಿ ನಡೆದ ಸಾರ್ವಜನಿಕ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಜಯಪುರದಲ್ಲಿ ಕಾಲೇಜು ಅಧ್ಯಾಪಕಿಯಾಗಿರುವ ಪಮೇಚಾ, ಕೌಟುಂಬಿಕ ಹೊಣೆಗಾರಿಕೆಯನ್ನೂ ಸಮರ್ಥವಾಗಿ ನಿಭಾಯಿಸಬಲ್ಲವರು. ಕಳೆದ ಇಪ್ಪತ್ತು ವರ್ಷಗಳಿಂದ ಮಹಿಳೆಯರ ಹಕ್ಕು ಮತ್ತು ನ್ಯಾಯಕ್ಕಾಗಿ ನಡೆಸಿದ ಹೋರಾಟಗಳಲ್ಲಿ ಈಕೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅಲ್ಲದೇ, ಸಾರ್ವಜನಿಕ ವಿಚಾರಣೆ ನಡೆಸಲು ಸಮರ್ಥ ವ್ಯಕ್ತಿ ಕೂಡಾ ಆಗಿದ್ದಾರೆ. ವಿಚಾರಣೆ ಸಂದರ್ಭದಲ್ಲಿ ಇವರ ನಿರ್ಧಾರ ಮತ್ತು ಕ್ರಮ ದೃಢವಾಗಿರುತ್ತಿತ್ತು. ಅಗತ್ಯ ಬಿದ್ದರೆ, ಜೋರು ದನಿಯಲ್ಲಿ ಮಾತನಾಡುತ್ತಿದ್ದರೂ ಅದು ಕಟುವಾಗೇನೂ ಇರುತ್ತಿರಲಿಲ್ಲ. 'ನಾವೆಲ್ಲ ಕೋಪಗೊಳ್ಳಲು ಕಾರಣಗಳು ಇವೆ' ಆಕೆ ಮೈಕಿನಲ್ಲಿ ಗಟ್ಟಿಯಾಗಿ ಹೇಳಿದರು. 'ಕೇವಲ ಗದ್ದಲ ಎಬ್ಬಿಸುವುದರಿಂದ, ಅರಚಾಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಬದಲಾಗಿ ಮತ್ತಷ್ಟು ಹದಗೆಟ್ಟೀತು. ನಾವು ಒಂದೊಂದಾಗಿಯೇ ವಿವರಗಳನ್ನು ಮಂಡಿಸೋಣ ಮತ್ತು ನಂತರದಲ್ಲಿ ಇದಕ್ಕೆ ಯಾವ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ನಿರ್ಧರಿಸೋಣ. ಈ ಸಾರ್ವಜನಿಕ ವಿಚಾರಣೆಗಳ ನಂತರ ತಕ್ಷಣವೇ ತಪ್ಪಿತಸ್ಥರಿಗೆ ಶಿಕ್ಷೆ ಜಾರಿಯಾಗುವುದಿಲ್ಲ' ಎಂಬ ಈಕೆಯ ಮಾತುಗಳಿಂದ ಅಲ್ಲಿದ್ದ ಬಿ.ಡಿ.ಒ ಮತ್ತು ಗ್ರಾಮಸೇವಕರ ಮುಖದಲ್ಲಿ ಕಾಣುತ್ತಿದ್ದ ಆತಂಕ ಕಡಿಮೆಯಾಯಿತು.

ಈ ವಿಚಾರಣಾ ಸಭೆಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳೂ ಹಾಜರಿರಬೇಕೆಂದು ಕಲೆಕ್ಟರ್ ಸ್ವಲ್ಪ ಮುತುವರ್ಜಿ ವಹಿಸಿ ಸೂಚಿಸಿದ್ದ. ಅಂತೆಯೇ ಇದೇ ಮೊದಲ ಬಾರಿ ಸಭೆಯಲ್ಲಿ ಸರ್ಕಾರಿ ಅಧಿಕಾರಿಗಳೂ ಹಾಜರಿದ್ದರು.

ಇಂಥದ್ದೇ ಕೆಲವು ಕಾರಣಗಳಿಂದ ತಾನಾದಲ್ಲಿ ನಡೆದ ಸಾರ್ವಜನಿಕ ವಿಚಾರಣಾ ಸಭೆ ವಿಶೇಷ ಉತ್ಸಾಹಕ್ಕೆ ಕಾರಣವಾಗಿತ್ತು. ಇದಕ್ಕೂ ಮೂರು ವಾರಗಳ ಹಿಂದೆ ರಾಜಸ್ತಾನದ ಆಗಿನ ಮುಖ್ಯಮಂತ್ರಿ ಭೈರೋನ್ ಸಿಂಗ್ ಶೇಖಾವತ್, 'ಸರ್ಕಾರಿ ಅಧಿಕಾರಿಗಳು ಸರ್ಕಾರದ ದಾಖಲೆಗಳ ನಕಲು ಪ್ರತಿಯನ್ನು ಜನರಿಗೆ ಕೊಡಬೇಕು' ಎಂದು ವಿಧಾನಸಭೆ ಅಧಿವೇಶನದಲ್ಲಿ ಹೇಳಿಕೆ ನೀಡಿದ್ದರು. ಬಿ.ಡಿ.ಒ ಮತ್ತು ಅವರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಈ ಸಾರ್ವಜನಿಕ ವಿಚಾರಣೆಗೆ ಹಾಜರಿರಲು ಇದೇ ಮುಖ್ಯ ಕಾರಣವಾಗಿತ್ತು. ಇವೆಲ್ಲಕ್ಕಿಂತಲೂ ಹೆಚ್ಚಾಗಿ ತಾನಾ ಗ್ರಾಮ ಪಂಚಾಯ್ತಿಯ ಅಧ್ಯಕ್ಷ ಎಂಕೆಎಸ್ಎಸ್‌ನ ಸಕ್ರಿಯ ಕಾರ್ಯಕರ್ತನಾಗಿದ್ದ. ಲಾಡು ಸಿಂಗ್ ಚುನಾವಣೆಯಲ್ಲಿ ಯಶಸ್ವಿಯಾಗಿ ಸ್ಪರ್ಧಿಸಿದ್ದ ಎಂಕೆಎಸ್ಎಸ್ ಸಂಘಟನೆಯ ಮೊದಲ ವ್ಯಕ್ತಿಯಾಗಿದ್ದ. ಐದನೆಯ ಸಾರ್ವಜನಿಕ ವಿಚಾರಣೆ ಈ ಕಾರ್ಯಕ್ರಮಗಳ ಪ್ರಬುದ್ಧತೆಗೆ ಹಿಡಿದ ಕನ್ನಡಿಯಾಗಿತ್ತು. ಬಹಳಮಟ್ಟಿಗೆ ಇದು ಎಂಕೆಎಸ್ಎಸ್‌ನ ಒಂದು ಪ್ರಯೋಗ ಮಾತ್ರವೇ ಆಗಿತ್ತು. ಅದರ ಮೂಲಭೂತ ಸಿದ್ಧಾಂತಗಳು ಸ್ಪಷ್ಟವಾಗಿದ್ದವು.

ಈ ಸಾರ್ವಜನಿಕ ವಿಚಾರಣೆಗಳಿಗೆ ಶಾಸನ ಬದ್ಧತೆ, ಪಾವಿತ್ರ್ಯ ಮತ್ತು ಶಕ್ತಿ ಜನರಿಂದ ದೊರೆಯುತ್ತದೆಯೇ ವಿನಃ ಯಾವುದೇ ನ್ಯಾಯಾಧೀಶ ಅಥವಾ ನ್ಯಾಯಮಂಡಳಿಗಳಿಂದ ಅಲ್ಲ. ಇದು ನ್ಯಾಯಾಲಯವೂ ಅಲ್ಲ, ಪ್ರತಿಭಟಿಸುವ ಗುಂಪೂ ಅಲ್ಲ. ಇಲ್ಲಿ ಸೇರುವ ಸಾರ್ವಜನಿಕರು ಎತ್ತುವ ಪ್ರಶ್ನೆಗಳನ್ನಷ್ಟೇ ಆದ್ಯತೆಯ ಮೇಲೆ ವಿಚಾರಣೆಗೊಳಪಡಿಸಲಾಗುತ್ತದೆ. ಈ ದೃಷ್ಟಿಯಿಂದ ನೋಡಿದರೆ, ಇಂತಹ ವಿಚಾರಣೆಗಳು ಯಶಸ್ವಿಯಾದವೆಂದೇ ಹೇಳಬೇಕು. ತಾನಾದಲ್ಲಿ ನಡೆದ ಸಾರ್ವಜನಿಕ ವಿಚಾರಣೆ ಈ ಪ್ರಕ್ರಿಯೆಯಲ್ಲಿ ಒಂದು ಹಂತ ತಲುಪಿತು. ವಿಚಾರಣೆಗಳು ಅಪಾರ ಪ್ರಚಾರ ಪಡೆದವು. ದೂರದ ಮುಂಬೈ, ದೆಹಲಿ, ಉದಯಪುರ ಮತ್ತು ಜಯಪುರಗಳಿಂದ ಈ ಕಾರ್ಯಕ್ರಮಕ್ಕಾಗಿಯೇ ಆಗಮಿಸಿದ ಪತ್ರಕರ್ತರಿಗೆ ಕೃತಜ್ಞತೆಗಳು ಸಲ್ಲುತ್ತವೆ. ಭೈರೋನ್ ಸಿಂಗ್ ಶೇಖಾವತ್‌ರ ಹೇಳಿಕೆಯ ನಡುವೆಯೂ ಎಲ್ಲ ಹಂತದ ಸ್ಥಳೀಯ ಮತ್ತು ಮೇಲಿನ ಅಧಿಕಾರಿಗಳು ದಾಖಲೆಗಳನ್ನು ಹೊರಗೆಡಹದೇ ಇರಲು ನಿರ್ಧರಿಸಿದರು. ಈ ಪಂಚಾಯ್ತಿ ಅಧ್ಯಕ್ಷನಾಗಿದ್ದ ಲಾಡು ಸಿಂಗ್‌ಗೆ ತನ್ನ ಪಂಚಾಯ್ತಿಯ ಒಳಗಿನ ಮಾಹಿತಿ ದೊರೆಯಲಿಲ್ಲ. ಈ ನಿಟ್ಟಿನಲ್ಲಿ ಸಹಕರಿಸುವಂತೆ ಒಂದು ವರ್ಷದ ನಂತರವೂ ರಾಜಸ್ತಾನ ಸರ್ಕಾರ ಸಂಬಂಧಪಟ್ಟವರಿಗೆ ಯಾವುದೇ ಆದೇಶ ಹೊರಡಿಸಲಿಲ್ಲ. ಇದು ಬೀವರ್‌ನಲ್ಲಿ ಧರಣಿ ಮತ್ತು ಇನ್ನಿತರ ಘಟನಾವಳಿಗಳಿಗೆ ಕಾರಣವಾಯಿತು.

ಬೀವರ್‌ನಲ್ಲಿ ಧರಣಿ–ಮಾಹಿತಿ ಹಕ್ಕಿಗಾಗಿ ಸಂಘರ್ಷ

ರಾಜಸ್ಥಾನದಿಂದ ಹೊರಗೆ ಇರುವ ಬೀವರ್ ಹೆಸರಾಂತ ಸ್ಥಳವೇನೂ ಅಲ್ಲ. ಆದರೆ ಸಾಮಾಜಿಕ ಹೋರಾಟಗಳಲ್ಲಿ ಇದು ಮಹತ್ವದ ಕೊಡುಗೆ ನೀಡಿದೆ. ಹುತಾತ್ಮ ಭಗತ್‌ಸಿಂಗ್

ಮತ್ತು ಚಂದ್ರಶೇಖರ ಆಜಾದ್‌ರಂತಹ ಸ್ವಾತಂತ್ರ್ಯ ವೀರರು ಬೀವರ್‌ನಲ್ಲಿ ಆಶ್ರಯ ಪಡೆದಿದ್ದರು ಎಂಬುದನ್ನು ಅಲ್ಲಿಯ ಜನ ಹೆಮ್ಮೆಯಿಂದ ಸ್ಮರಿಸಿಕೊಳ್ಳುತ್ತಾರೆ. ದೆಹಲಿ, ಅಹಮದಾಬಾದ್ ರೈಲ್ವೆ ಮಾರ್ಗದ ಸನಿಹದಲ್ಲಿಯೇ ಇರುವ ಈ ಕೈಗಾರಿಕಾ ನಗರ ಹಲವು ಕಮ್ಯುನಿಸ್ಟ್ ಬಣಗಳ ನೆಲೆಯೂ ಆಗಿದೆ. ೧೯೯೪ರಲ್ಲಿ ನೀರು ಸರಬರಾಜು ಒಂದು ವಾರಕಾಲ ವ್ಯತ್ಯಯಗೊಂಡಾಗ ಇಡೀ ನಗರದಲ್ಲಿ ಭಾರೀ ಪ್ರತಿಭಟನೆ ವ್ಯಕ್ತವಾಯಿತು. ಈ ನಗರದ ನಟ್ಟನಡುವಿನ ಚಾಂಗ್‌ಗೇಟ್‌ನಲ್ಲಿ ೧೯೯೬ರ ಏಪ್ರಿಲ್ ೬ರಂದು ಎಂ.ಕೆ.ಎಸ್.ಎಸ್ ಹಮ್ಮಿಕೊಂಡಿದ್ದ ಧರಣಿ ಅಲ್ಲಿಯ ನಾಗರಿಕರಿಗೆ ವಿಚಿತ್ರ ಎನಿಸಿರಬೇಕು. ಸುಮಾರು ೧೦೦ಕಿ.ಮೀ ದೂರದಿಂದ ಬಂದಿದ್ದ ಇನ್ನೂರರಿಂದ ಮುನ್ನೂರು ರೈತರ ಸಮಾವೇಶದಲ್ಲಿ ಹೇಳಿಕೊಳ್ಳುವಂತಹ ದೊಡ್ಡ ಪಕ್ಕೊತ್ತಾಯವೇನೂ ಇರಲಿಲ್ಲ. ಅಲ್ಲದೆ ಗುರುತಿಸಬಹುದಾದ ಹಿತಾಸಕ್ತಿಯೂ ಇರಲಿಲ್ಲ. ಅವರು ಆಹಾರ, ವಸತಿ, ಬಟ್ಟೆ, ಕೂಲಿ, ಉದ್ಯೋಗ–ಇವುಗಳ ಕುರಿತು ಯಾವ ಬೇಡಿಕೆಯನ್ನೂ ಮುಂದಿಟ್ಟಿರಲಿಲ್ಲ. ಪಂಚಾಯ್ತಿ ಮಟ್ಟದಲ್ಲಿ ನಡೆಯುವ ಎಲ್ಲ ಕಾಮಗಾರಿ ದಾಖಲೆಗಳ ನಕಲು ಪ್ರತಿಯನ್ನು ಸಾರ್ವಜನಿಕರು ಬೇಡಿದಲ್ಲಿ ಕೊಡಬೇಕು ಎಂಬುದಷ್ಟೇ ಅವರ ಬೇಡಿಕೆಯಾಗಿತ್ತು. ಇದಕ್ಕಾಗಿ ಅಹೋರಾತ್ರಿ ಚರ್ಚಿಸಿದರು, ಹಾಡಿದರು, ಕೂಗಿದರು.

ಚಿನ್ನ–ಬೆಳ್ಳಿ?
ನಮಗೆ ಬೇಡ!
ದೊಡ್ಡ ಬಂಗಲೆ
ಬೇಡ ಬೇಡ!
ಬಂಗಲೆಗೊಂದು ಮೋಟಾರು?
ಬೇಡ ಬೇಡ!
ಮೋಟಾರಿನಲ್ಲಿ ಒಂದು ನಾಯಿ?
ಬೇಡ ಬೇಡ!

ಕೊನೆಯಲ್ಲಿ ಸೂತ್ರಧಾರ ಕೇಳುತ್ತಾನೆ:

ಹಾಗಾದರೆ, ನಿಮಗೆ ಏನು ಬೇಕು?
ಪಂಚಾಯ್ತಿ ಕಾಮಗಾರಿಗಳ ದಾಖಲೆ
ಬಿಲ್ಲು ರಶೀದಿ
ಹಾಜರಾತಿ ಪಟ್ಟಿ ಪ್ರತಿ

ನಾಲ್ಕೈದು ದಿನಗಳ ಕಾಲ ಜನರು ನಿಂತು ವಿಚಾರಿಸತೊಡಗಿದರು. ಅವರಿಗೆ ಎಂಕೆಎಸ್‌ಎಸ್‌ನ ಬಗ್ಗೆ ಮಾಹಿತಿ ಬೇಕಿತ್ತು. ಕರಪತ್ರ ಪಡೆದರು. ಈ ಸಂಘಟನೆ ಏಕೆ ಕಾಮಗಾರಿ ದಾಖಲೆಯ ನಕಲು ಪ್ರತಿಗಾಗಿ ಒತ್ತಾಯಿಸುತ್ತಿದೆ? ಧರಣಿ ಕುಳಿತ ಎಲ್ಲ ಹೆಣ್ಣು-ಗಂಡುಗಳೂ

ಒಕ್ಕೊರಲಿನಿಂದ ಕೂಗುವ ಬೇಡಿಕೆಯ ಹಿಂದೆ ಇರುವ ಉದ್ದೇಶವೇನೆಂದು ಕೇಳಿದರು. ಈ ಬಗ್ಗೆ ಕಾರ್ಯಕರ್ತರು ವಿವರಿಸಿದರು.

'ತುಕ್ಕು ಹಿಡಿದಿರುವ ಸರ್ಕಾರಿ ಕಚೇರಿಗಳ ಆತ್ಮವನ್ನು ಜನರ ಬಳಿ ಕೊಂಡೊಯ್ಯಿರಿ ಎಂದಷ್ಟೇ ನೀವು ಕೇಳುತ್ತಿದ್ದೀರಿ. ಈ ಬೇಡಿಕೆಯನ್ನು ಯಾರೂ ತಳ್ಳಿ ಹಾಕಲಾರರು ಎಂಬುದೇ ಇಲ್ಲಿಯ ಸಮಸ್ಯೆ. ಇದೇ ವೇಳೆ ನಿಮ್ಮ ಬೇಡಿಕೆಯನ್ನು ಪುರಸ್ಕರಿಸಿ, ನೀವು ಕೇಳಿದ್ದನ್ನು ಕೊಡುವುದು ಮತ್ತು ಆತ್ಮಹತ್ಯೆ ಎರಡೂ ಒಂದೇ' ಧರಣಿ ಸ್ಥಳಕ್ಕೆ ನಿತ್ಯ ಬಂದು ಹೋಗುತ್ತಿದ್ದ ಬೀವರ್ ಪಟ್ಟಣದ ಓರ್ವ ವ್ಯಕ್ತಿ ವೇದಿಕೆಯೇರಿ ಈ ರೀತಿ ಹೇಳಿದ.

ಸೂರ್ಯೋದಯಕ್ಕೆ ಮುನ್ನ ಧರಣಿ ನಿರತರು ಇನ್ನೂ ಮಲಗಿರುವಾಗಲೇ ಒಬ್ಬ ವ್ಯಕ್ತಿ ಸದ್ದಿಲ್ಲದೇ ಬಂದು ಈ ಸ್ಥಳವನ್ನೆಲ್ಲ ಗುಡಿಸಿ ೫ ರುಪಾಯಿಗಳನ್ನು ಹುಂಡಿಯಲ್ಲಿ ಹಾಕಿ ಹೋಗುತ್ತಿದ್ದ. ಮೂರುಚಕ್ರದ ಸೈಕಲ್‌ನಲ್ಲಿ ಬಂದ ಮತ್ತೊಬ್ಬ ೧೦ ರುಪಾಯಿಗಳನ್ನು ಹುಂಡಿಯಲ್ಲಿ ಹಾಕಿ ಹೋಗಿದ್ದ.

ದೂರದ ಊರುಗಳಿಂದ ಗ್ರಾಮಸ್ಥರು ದವಸ-ಧಾನ್ಯಗಳನ್ನು ಸಂಗ್ರಹಿಸಿಕೊಂಡು ಬರುತ್ತಿದ್ದುದನ್ನು ಬೀವರ್‌ನ ಜನ ಗಮನಿಸಿದ್ದರು. ಬೀವರ್‌ನ ನಾಗರಿಕರು ಕೂಡ ಇಂಥ ಕೊಡುಗೆಗಳನ್ನು ನೀಡತೊಡಗಿದರು. ಕವಿಗಳು ಪದ್ಯ ಬರೆದು ಹಾಡಿದರು. ಬ್ಯಾಂಡ್ ವಾಲಾಗಳು ಬಂದು ಕಲಾ ಪ್ರದರ್ಶನ ಮಾಡಿದರು. ನಾಮಫಲಕ ಬರೆಯುವವರು ಉಚಿತವಾಗಿ ಬ್ಯಾನರ್ ಬರೆದು ಹೋದರು. ಒಟ್ಟಾರೆ ಧರಣಿ ಸಂದರ್ಭದಲ್ಲಿ ಸಣ್ಣ ಸಣ್ಣದೋಣಿಗಳ ಮೂಲಕ ಒಟ್ಟು ೪೬,೦೦೦ ರುಪಾಯಿ ನಗದು, ೨೦ ಕ್ವಿಂಟಾಲ್‌ನಷ್ಟು ಗೋಧಿ, ೬ ಕ್ವಿಂಟಾಲ್‌ನಷ್ಟು ತರಕಾರಿ ಹಾಗೂ ಸಾಕಷ್ಟು ಕಟ್ಟಿಗೆ ಸಂಗ್ರಹವಾಗಿತ್ತು. ಈ ಸಂಪನ್ಮೂಲಗಳನ್ನು ೬ ದಿನಗಳ ಪರ್ಯಂತ ಇದರಲ್ಲಿ ಭಾಗವಹಿಸುತ್ತಿದ್ದ ೨೦೦ ರಿಂದ ೩೦೦ ಮಂದಿಗೆ ಊಟ ತಯಾರಿಸಲು ಬಳಸಲಾಯಿತು.

ಏಪ್ರಿಲ್ ೧೪ರಂದು ಬಾಬಾ ಸಾಹೇಬ್ ಅಂಬೇಡ್ಕರ್ ಅನುಯಾಯಿಗಳು ಅವರ ಜನ್ಮದಿನ ಸಮಾರಂಭವನ್ನು ಎಂಕೆಎಸ್‌ಎಸ್ ಧರಣಿ ನಡೆಸುತ್ತಿದ್ದ ಸ್ಥಳ ಚಾಂಗ್‌ಗೇಟ್‌ನಲ್ಲಿಯೇ ನಡೆಸಲು ಅವರು ನಿಶ್ಚಯಿಸಿದ್ದರು. ಈ ಭಾಗದ ಉಪವಿಭಾಗೀಯ ಅಧಿಕಾರಿ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳುವಂತಿರಲಿಲ್ಲ. ಹಾಗಾಗಿ ಅರುಣಾ ಜತೆ ಆತ ವೇದಿಕೆಯನ್ನು ಹಂಚಿಕೊಳ್ಳಬೇಕಾಯಿತು. ಅರುಣಾ ಸಮಾರಂಭದಲ್ಲಿ ಸಂಘಟನೆಯ ಪರವಾಗಿ ಮಾತನಾಡಿದರು. ಇದಾದ ೧೫ ದಿನಗಳೊಳಗೆ ಕಾರ್ಮಿಕ ದಿನಾಚರಣೆ ಬಂತು. ಎಲ್ಲ ಕಾರ್ಮಿಕ ಸಂಘಟನೆಗಳೂ ಅಂದು ಅಭೂತಪೂರ್ವ ಜಾಥಾವನ್ನು ಇದೇ ಶಾಮಿಯಾನದಿಂದಲೇ ಆರಂಭಿಸಿದವು.

ಈ ಹೋರಾಟಕ್ಕೆ ಇಷ್ಟೊಂದು ಜನಪ್ರಿಯತೆ ಬರಲು ಕಾರಣಗಳು ಇಲ್ಲದಿಲ್ಲ. ಈ ಹೋರಾಟ ಸಮಾಜದ ಯಾವೊಂದು ಪಕ್ಷದ ಪರವಾಗಿಯೂ ಇರಲಿಲ್ಲ. ಎಲ್ಲರಿಗೂ ಅಗತ್ಯವಾದ ಹಕ್ಕೊತ್ತಾಯವನ್ನು ಅದು ಮಂಡಿಸಿತ್ತು. ಸರ್ಕಾರಿ ದಾಖಲೆಗಳ ನಕಲು ಪ್ರತಿ ನೀಡಬೇಕೆಂದು ಪಕ್ಕೊತ್ತಾಯದ ಜೊತೆಗೆ ಅದಕ್ಕೆ ಪೂರಕವಾಗಿ ವಿವರವಾದ ಹಕ್ಕೊತ್ತಾಯಗಳನ್ನು ಮಂಡಿಸಲಾಯಿತು.

* ಸರ್ಕಾರಿ ಕಾಮಗಾರಿಗಳ ಸಾಮಾಜಿಕ ಆಡಿಟ್ ಅಗತ್ಯವಿದೆ.

* ವಿವರವಾದ ಮತ್ತು ಕ್ರಮಬದ್ಧವಾದ ಲೆಕ್ಕ ದೊರೆಯಬೇಕು. ಈ ವಿಷಯಲ್ಲಿ ಹೆಚ್ಚಿನ ಎಚ್ಚರ ವಹಿಸಬೇಕು. ಕೇವಲ ಹಣಕಾಸಿನ ಆಡಿಟ್‌ಗಿಂತ ಹೆಚ್ಚು ಪರಿಣಾಮಕಾರಿಯಾಗುವಂತೆ ಸಾಮಾಜಿಕ ಆಡಿಟ್ ವಿಧಿ ವಿಧಾನ ರೂಪಿಸಬೇಕು.

* ಈ ಮಾಹಿತಿ ಮತ್ತು ಲೆಕ್ಕ ಒಪ್ಪಿಸುವುದು ಒಬ್ಬ ಅಧಿಕಾರಿ/ಸಿಬ್ಬಂದಿಯ ಕರ್ತವ್ಯವಾಗಬೇಕು.

* ಹಣದ ದುರುಪಯೋಗ ಸಾಬೀತಾದರೆ, ಅದನ್ನು ಸರಿಪಡಿಸಲು ಕ್ರಮ ಕೈಗೊಳ್ಳುವ ಅಧಿಕಾರವನ್ನು ಗ್ರಾಮಸಭೆಗೆ ನೀಡಬೇಕು.

* ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಈ ರೀತಿಯ (ಸಾಮಾಜಿಕ) ಆಡಿಟ್‌ಗೆ ದೊಡ್ಡ ವೇದಿಕೆಯ ಅಗತ್ಯವಿದೆ. ಇಲ್ಲಿ ಯಾವ ರೀತಿಯ ಅಭಿವೃದ್ಧಿ ಕಾರ್ಯಕ್ರಮ ರೂಪಿಸಬೇಕು ಎಂಬುದು ಚರ್ಚೆಯ ವಿಷಯವಾಗಬೇಕು.

ಮೇಲ್ನೋಟಕ್ಕೆ ಇವು ಸ್ಥಳೀಯವಾದ ತಕರಾರುಗಳು ಎಂದು ಕಾಣಬಹುದು. ಆದರೆ ಇವುಗಳ ತಾರ್ಕಿಕ ಅಂತ್ಯ ಇಡೀ ರಾಜಕೀಯ ಸ್ಥಿತಿಯನ್ನೇ ಅಲ್ಲಾಡಿಸಬಲ್ಲ ಶಕ್ತಿಯನ್ನು ಹೊಂದಿತ್ತು. ಈ ಧರಣಿ ಸ್ಥಳೀಯ ಸುದ್ದಿಯಾಗಿ ಉಳಿಯಲಿಲ್ಲ. ದೂರದರ್ಶನ ಮತ್ತು ರಾಷ್ಟ್ರಮಟ್ಟದ ಚಾನೆಲ್‌ಗಳು ಈ ಕುರಿತು ವರದಿ ಮಾಡಲು ತಂಡಗಳನ್ನು ಕಳುಹಿಸಿಕೊಟ್ಟವು. ಹಿರಿಯ ಪತ್ರಕರ್ತರು ಬಂದು ಈ ಪ್ರಯತ್ನವನ್ನು ಅಭಿನಂದಿಸಿದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೊದಲ ಬಾರಿಗೆ ರಾಜರುಗಳು ತಮ್ಮ ಸೇವಕರ ಬಳಿ ಲೆಕ್ಕ ಕೇಳುತ್ತಿದ್ದಾರೆ ಎಂದು ಹರ್ಷಿಸುತ್ತಾ 'ಜನಸತ್ತಾ' ದೈನಿಕದ ಆಗಿನ ಸಂಪಾದಕ ಪ್ರಭಾತ್ ಜೋಷಿ ಧರಣಿ ನಿರತ ರೈತರನ್ನು ಅಭಿನಂದಿಸಿದರು. ಮಾಹಿತಿ ಹಕ್ಕು ಕೇಳುತ್ತಿರುವ ಈ ಹೋರಾಟಗಾರರ ಧರಣಿಯನ್ನು 'ಮೇನ್ ಸ್ಟ್ರೀಮ್' ಪತ್ರಿಕೆಯ ನಿಖಿಲ್ ಚಕ್ರವರ್ತಿ 'ಅಂದು ಸ್ವಾತಂತ್ರ್ಯ ಚಳುವಳಿ ಸಂದರ್ಭದಲ್ಲಿ ಇಲ್ಲಿಂದ ಹೊತ್ತೊಯ್ದ ಪ್ರತಿಯೊಂದು ಪೈಸೆಗೂ ಲೆಕ್ಕ ಕೊಡಿ ಎಂದು ಬ್ರಿಟಿಷರನ್ನು ಕೇಳಿದ ಪ್ರಸಂಗಕ್ಕೆ ಹೋಲಿಸಿದರು.

ಶಕ್ತಿ ಮತ್ತು ಆತ್ಮವಿಶ್ವಾಸದ ಕಾರಣದಿಂದ ಈ ಚಳುವಳಿಯನ್ನು ತೀವ್ರಗೊಳಿಸಲು ಯತ್ನಿಸಿದ್ದಲ್ಲದೇ ಜಯಪುರದಲ್ಲಿಯೂ ಧರಣಿ ನಡೆಸಲು ನಿರ್ಧರಿಸಲಾಯಿತು. ಈಗ ಹಾಡು ಘೋಷಣೆಗಳು ಜಯಪುರದ ಸ್ಟ್ಯಾಚ್ಯೂ ಸರ್ಕಲ್‌ನ ಹುಲ್ಲು ಹಾಸಿನಗುಂಟ ಹಾದು ಸಮೀಪದ ಸಚಿವಾಲಯ ಕಟ್ಟಡವನ್ನು ತಲುಪಿದವು. ೧೦ ದಿವಸಗಳ ಬಳಿಕ ಮೇ ೧೫ರ ಸುಮಾರಿಗೆ ಸರ್ಕಾರ ಮಾಹಿತಿ ಹಕ್ಕು ನೀಡುವ ಬಗ್ಗೆ ಅಂದರೆ ದಾಖಲೆಗಳ ನಕಲು ಪ್ರತಿ ನೀಡುವ ಬಗ್ಗೆ ತಾತ್ವಿಕ ಒಪ್ಪಿಗೆ ನೀಡಿತು. ಇದರ ಕುರಿತು ಸವಿವರವಾದ ಚರ್ಚೆ ನಡೆಸಲು ಸಮಿತಿಯೊಂದನ್ನು ಸರ್ಕಾರ ನೇಮಿಸಿತು. ಆದರೆ ಸಮಿತಿಯ ವರದಿಯನ್ನೇ 'ರಹಸ್ಯ' ಎಂದು ಕರೆಯಲಾಯಿತು. ಇದು ಇನ್ನೊಂದು ಹೋರಾಟಕ್ಕೆ ನಾಂದಿಯಾಯಿತು.

ಅಂತಿಮವಾಗಿ ಎರಡು ವರ್ಷಗಳ ನಂತರ ೧೯೯೭ ಜುಲೈ ೧೫ರಂದು ಪಂಚಾಯ್ತಿ ಮಟ್ಟದ ದಾಖಲೆಗಳನ್ನು ಝೆರಾಕ್ಸ್ ಮೂಲಕ ಜನರಿಗೆ ಕೊಡಬಹುದು ಎನ್ನುವ ಸರ್ಕಾರಿ ಸೂಚನೆ ರಾಜಸ್ಥಾನ ಸರ್ಕಾರದಿಂದ ಹೊರಟಿತು. 'ಆದೇಶ ನಮ್ಮ ಕೈ ತಲುಪಿಲ್ಲ' ಎಂದು ಜಿಲ್ಲಾ ಮಟ್ಟದ ಅಧಿಕಾರಿಗಳು ಹೇಳುತ್ತಲೇ ಬಂದರು. ಎಂಕೆಎಸ್‌ಎಸ್ ಪುನಃ ೬ ತಿಂಗಳು ಕಾದು ನೋಡಿತು. ೧೯೮೮ರ ಜನವರಿಯಲ್ಲಿ ಸೂರಜ್‌ಪುರ ಮತ್ತು ಕುಕರ್‌ಖೇಡ್ ಎಂಬ ಎರಡು ಸ್ಥಳಗಳಲ್ಲಿ ಸಾರ್ವಜನಿಕ ಸಭೆಗಳನ್ನು ಹಮ್ಮಿಕೊಳ್ಳಲಾಯಿತು.

ಎಂಕೆಎಸ್‌ಎಸ್‌ನ ಗೆಲುವು ಸರ್ಕಾರಿ ದಾಖಲೆಗಳ ನಕಲು ಪ್ರತಿ ತೆಗೆದುಕೊಂಡು ಬಂದು ಸಾರ್ವಜನಿಕ ವಿಚಾರಣೆ ನಡೆಸಿದ್ದಷ್ಟೇ ಅಲ್ಲ, ಯಾವುದೇ ವಿರೋಧಗಳಿಲ್ಲದೇ ವಿಚಾರಣೆ ನಡೆಸಿದ ಪ್ರಕ್ರಿಯೆಯಲ್ಲಿ ಅಡಗಿತ್ತು. ಹಣ ದುರುಪಯೋಗದ ಅನೇಕ ಪ್ರಕರಣಗಳು ಹೊರಬಂದಾಗ ಅಧ್ಯಕ್ಷರನ್ನು ಕಾಡಿಸದೇ ಉತ್ತರಿಸುವಂತೆ ತಾಳ್ಮೆಯಿಂದ ಕೇಳಲಾಯಿತು. ಕುಕರ್‌ಖೇಡ್ ಗ್ರಾಮಪಂಚಾಯ್ತಿ ಅಧ್ಯಕ್ಷೆ ಬಸಂತಾದೇವಿ ಒಂದು ಲಕ್ಷ ರುಪಾಯಿ ಹಣ ದುರುಪಯೋಗವಾಗಿರುವುದನ್ನು ಒಪ್ಪಿಕೊಳ್ಳುವಂತೆ ಮಾಡಲಾಯಿತು. ಪಂಚಾಯತ್ ನಿಧಿಗೆ ತಾವು ಅದನ್ನು ಹಿಂದಿರುಗಿಸುವುದಾಗಿ ತಿಳಿಸಿದರು.

ಸಾರ್ವಜನಿಕ ವಿಚಾರಣೆಗಳ ಪ್ರಕ್ರಿಯೆಗಳು ಮುಂದುವರೆದಿದ್ದಾಗ ಭಾರತ ಎರಡು ವರ್ಷಗಳ ಅಂತರದಲ್ಲಿ ಎರಡನೆಯ ಮಧ್ಯಂತರ ಚುನಾವಣೆಗೆ ಸಜ್ಜುಗೊಳ್ಳುತ್ತಿತ್ತು. ಈ ಸಾರ್ವಜನಿಕ ವಿಚಾರಣೆಗಳನ್ನು ವರದಿ ಮಾಡಿದ ಪತ್ರಕರ್ತರು ಇದನ್ನು 'ತಳಮಟ್ಟದ ಪ್ರಜಾಪ್ರಭುತ್ವ' ಎಂದು ಕರೆದರು. ಆದರೆ ಇದು ನಿರೀಕ್ಷಿತ ಮಟ್ಟದಲ್ಲಿ ದೂರ-ದೂರದವರೆಗೂ ಹಬ್ಬಲಿಲ್ಲ ಎನ್ನುವುದು ಎಂಕೆಎಸ್‌ಎಸ್ ಸಕ್ರಿಯ ಕಾರ್ಯಕರ್ತರಿಗೆ ನೋವಿನ ಸಂಗತಿಯಾಗಿತ್ತು. ಬೇರೆ ಬೇರೆ ಗುಂಪುಗಳು ನಿರ್ದಿಷ್ಟ ವಿಷಯವನ್ನು ಮುಂದಿಟ್ಟುಕೊಂಡು ಇಂತಹುದೇ ಸಾರ್ವಜನಿಕ ವಿಚಾರಣೆಯನ್ನು ನಡೆಸಿದ್ದವು. ಅಧಿಕಾರಸ್ಥರನ್ನು ಲೆಕ್ಕ ಕೊಡಿ ಎಂದು ಕೇಳುವ ಮತ್ತು ಯಥಾಸ್ಥಿತಿಯನ್ನು ಪ್ರಶ್ನಿಸುವ ಒಂದು ಬೃಹತ್ ಆಂದೋಲನವಾಗಿ ಇದು ದೂರದ ಊರುಗಳಲ್ಲಿ ಹರಡುವುದು ಈಗಲೂ ಒಂದು ಕನಸೇ ಆಗಿದೆ.

ರಾಷ್ಟ್ರೀಯ ವೇದಿಕೆಯಲ್ಲಿ ಖ್ಯಾತಿ ಮತ್ತು ಸವಾಲು:

ಅರುಣಾ ಸುಸ್ತಾದವರಂತೆ ಕಂಡರು. ಆಕೆ ಮತ್ತು ನಿಖಿಲ್ ಇಬ್ಬರೂ ಮುಂಬೈನಲ್ಲಿ ರೈಲಿನ ಎರಡನೆಯ ದರ್ಜೆ ಬೋಗಿಯಿಂದ ಇಳಿದವರೇ ಹೊರ ಬಾಗಿಲೆಡೆ ಸಾಗುತ್ತಿರುವ ಜನ ಪ್ರವಾಹದಲ್ಲಿ ಒಂದಾದರು. ೧೯೯೭ರ ಸುಮಾರಿಗೆ ದೇವದೂಂಗ್ರಿಯ ಕುಟುಂಬದ ಬದುಕು ಗಮನಾರ್ಹ ಬದಲಾವಣೆ ಕಂಡಿತ್ತು.

ದೇವದೂಂಗ್ರಿ ಮತ್ತು ಸೋಹನ್‌ಗರ್‌ನ ನಿಧಾನಗತಿಯ ಬದುಕು ಈಗ ಕೇವಲ ನೆನಪಾಗಿತ್ತು. ೧೯೯೬ರಲ್ಲಿ ಬೀವರ್ ಮತ್ತು ಜಯಪುರದಲ್ಲಿ ನಡೆದ ಧರಣಿ ಸತ್ಯಾಗ್ರಹಗಳ ದೆಸೆಯಿಂದ ಎಂಕೆಎಸ್‌ಎಸ್‌ನ ಹೆಸರು ರಾಷ್ಟ್ರಮಟ್ಟದಲ್ಲಿ ಕೇಳಿಬಂತು. ಈ ಸಂದರ್ಭದಲ್ಲಿ

'ಮಾಹಿತಿ ಹಕ್ಕಿ'ಗಾಗಿ ರಾಷ್ಟ್ರಮಟ್ಟದಲ್ಲಿ ಕೂಗು ಕೇಳಿ ಬಂತು. ಈ ಕಾರಣಕ್ಕಾಗಿಯೇ ವರ್ಷದ ಬಹಳಷ್ಟು ಸಮಯ ನಿಖಿಲ್ ಮತ್ತು ಅರುಣಾ ಬೇರೆ ಬೇರೆ ರಾಜ್ಯಗಳಲ್ಲಿ ಸಂಚರಿಸಬೇಕಾಯಿತು. ಅಲ್ಲಿನ ಸ್ವಯಂಸೇವಾ ಸಂಸ್ಥೆಯ ಕಾರ್ಯಕರ್ತರು, ಪತ್ರಕರ್ತರು ಮತ್ತು ಸರ್ಕಾರಿ ನೀತಿಯಲ್ಲಿ ಪ್ರಧಾನ ಪಾತ್ರ ವಹಿಸಿರುವವರನ್ನು ಭೇಟಿ ಮಾಡಿದರು. ಅವರೊಡನೆ ಮಾಹಿತಿ ಹಕ್ಕಿನ ಬಗ್ಗೆ ತೀವ್ರವಾಗಿ ಚರ್ಚಿಸಿದರು.

ಅರುಣಾಗೆ ಎಂದೂ ಪ್ರಚಾರ ಹಾಗೂ ಖ್ಯಾತಿ ಇಷ್ಟವಿರಲಿಲ್ಲ. ಆದರೆ ಎಂಕೆಎಸ್‌ಎಸ್‌ನ ಚಳುವಳಿ ಇದನ್ನು ಅನಿವಾರ್ಯವಾಗಿಸಿತು. ತಾನು ಆ ರೀತಿ ಇಲ್ಲ ಎಂದು ಹೊರಪ್ರಪಂಚಕ್ಕೆ ಸಾರಿ ಸಾರಿ ಹೇಳಿದರೂ ಆಕೆ ಈ ಚಳುವಳಿಯ ನಾಯಕಿ ಎಂದು ಗುರುತಿಸಲಾಯಿತು. ಆಕೆಗೆ ಸಾರ್ವಜನಿಕ ಸನ್ಮಾನಗಳು, ಗೌರವಗಳು ಇಷ್ಟವಾಗುತ್ತಿರಲಿಲ್ಲ. ೧೯೯೬ರ ಕೊನೆಯ ವೇಳೆಗೆ ಸುಪ್ರೀಂಕೋರ್ಟ್ ನಿವೃತ್ತ ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಪಿ.ಎನ್. ಭಗವತಿಯವರ ನೇತೃತ್ವದ ಆಯ್ಕೆ ಸಮಿತಿಯಿಂದ ದೇವದೂಂಗ್ರಿ ಮನೆಗೆ ಒಂದು ಪತ್ರ ಬಂತು. ಅದರಲ್ಲಿ ಅರುಣಾ 'ದಿವಾಲಿಬೆನ್ ಮೆಹ್ತಾ' ಪ್ರಶಸ್ತಿಗೆ ಆಯ್ಕೆಯಾಗಿರುವುದಾಗಿ ತಿಳಿಸಲಾಗಿತ್ತು.

'ಈ ಪ್ರಶಸ್ತಿಯನ್ನು ಒಪ್ಪಿಕೊಳ್ಳಲು ನನ್ನಿಂದ ಸಾಧ್ಯವಿಲ್ಲ. ಇದನ್ನು ಸಂಘಟನೆಗೆ ಬೇಕಾದರೆ ಕೊಡಬಹುದು' ಎಂದು ಅರುಣಾ ಉತ್ತರಿಸಿದರು. ಈ ಪ್ರಶಸ್ತಿಯ ಪ್ರಾಯೋಜಕತ್ವ ವಹಿಸಿದ್ದ ವಜ್ರ ಮತ್ತು ಹರಳುಗಳ ಜವಾಹಿರಿ ವ್ಯಾಪಾರಿಗಳಿಗೆ ಅರುಣಾರ ಪ್ರತಿಕ್ರಿಯೆ ಅಚ್ಚರಿ ತಂದಿತು. ಕೊನೆಗೆ ಅವರು ಪ್ರಶಸ್ತಿಯನ್ನು ಸಂಘಟನೆಗೇ ನೀಡಲು ಒಪ್ಪಿದರು. ಅರುಣಾ ಮತ್ತು ಅವರ ಜತೆಗೆ ಒಬ್ಬರು ದೇವದೂಂಗ್ರಿಯಿಂದ ಮುಂಬೈಗೆ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಬರಲು ಅನುವು ಮಾಡಿಕೊಟ್ಟರು. ಅವರ ಈ ಸಲಹೆಯನ್ನು ಅರುಣಾ ನಿರಾಕರಿಸಿದರು. ಇಬ್ಬರು ವಿಮಾನದಲ್ಲಿ ಬರುವುದಕ್ಕಿಂತ ಸಂಘಟನೆಯ ೮ ಮಂದಿ ಇದೇ ಖರ್ಚಿನಲ್ಲಿ ರೈಲಿನಲ್ಲಿ ಮುಂಬೈಗೆ ಪ್ರಯಾಣ ಬೆಳೆಸಬಹುದೆಂದು ಅರುಣಾ ಹೇಳಿದರು.

ಗಗನಚುಂಬಿ ತಾಜ್ ಹೊಟೇಲ್‌ನ ಮೇಲಿನ ಉಪ್ಪರಿಗೆಯತ್ತ ಕಣ್ಣುಹಾಯಿಸಲು ಲಾಲ್‌ಸಿಂಗ್ ತನಗೆ ಎಷ್ಟು ಸಾಧ್ಯವೋ ಅಷ್ಟು ಮೇಲೆ ಕತ್ತೆತ್ತಿದ. ಅವನು ತನ್ನ ಜೀವಮಾನದಲ್ಲಿ ಕೇಳಿದ್ದು ಆಗ್ರಾದ ತಾಜ್‌ಮಹಲ್ ಮಾತ್ರ. ಈಗ ಮುಂಬೈನಲ್ಲಿ ಇದೇ ಹೆಸರಿನ ಹೊಟೇಲ್ ನೋಡುತ್ತಿರುವುದು ಆತನಿಗೆ ಅಚ್ಚರಿ ಉಂಟುಮಾಡಿತ್ತು. ಈ ಹೊಟೇಲ್‌ನ ಒಂದು ಕಿರುಕೋಣೆಯಲ್ಲಿ ಒಂದು ದಿನ ತಂಗಲು ೫ ಸಾವಿರ ರುಪಾಯಿ ಬಾಡಿಗೆ ಕೊಡಬೇಕೆ? ಲಾಲ್‌ಸಿಂಗ್ ತಣ್ಣಗೆ ಯೋಚಿಸುತ್ತಾ ನಿಂತಿದ್ದ. ಮುಂಬೈನ ಪತ್ರಕರ್ತರಿಗೆ ಎಂಕೆಎಸ್‌ಎಸ್ ಸಂಘಟನೆಯ ಕೆಲಸ ತಿಳಿಸುವುದು ಇವರಿಗೆ ಸಂತಸದ ವಿಷಯವಾಗಿತ್ತು.

ಅಂದು ಸಂಜೆ ಶಂಕರ್ ಸಂಘಟನೆಯ ಪರವಾಗಿ ದಕ್ಷಿಣ ಮುಂಬೈ ವೈ.ಬಿ. ಚವ್ಹಾಣ್ ಸಭಾ ಭವನದಲ್ಲಿ ಮಾಜಿ ರಾಷ್ಟ್ರಪತಿ ಆರ್.ವೆಂಕಟರಾಮನ್‌ರಿಂದ ಪ್ರಶಸ್ತಿ ಸ್ವೀಕರಿಸಿದ. ಲಾಲ್‌ಸಿಂಗ್‌ನನ್ನು ಅಚ್ಚರಿಗೊಳಿಸಿದ ಈ ಮುಂಬೈ ನಿಜಕ್ಕೂ ದೇವದೂಂಗ್ರಿ ಪ್ರಪಂಚದಿಂದ

ಎಷ್ಟು ದೂರವಿದೆ ಎಂದು ಶಂಕರ್ ತನ್ನ ಸಂಕ್ಷಿಪ್ತ ಭಾಷಣದಲ್ಲಿ ವಿವರಿಸಿದ. ನಿಜಕ್ಕೂ ಜನರಿಗೆ ಆಪ್ತ ಎನ್ನಿಸುವ ಸರ್ಕಾರ ಯಾಕೆ ಸಾಧ್ಯವಾಗುತ್ತಿಲ್ಲ? ಎಂದು ತನ್ನ ಭಾಷಣವನ್ನು ತೀರ ಚುಟುಕಾಗಿ ಮಂಡಿಸಿದ.

ಅರಳಿದ ಗುಲ್‌ಮೊಹರ್: ಸಾಧ್ಯತೆಗಳ ದಿಗಂತದ ವಿಸ್ತಾರ

ಕಾರು ಅಥವಾ ಬಸ್ಸಿನಲ್ಲಿ ಪ್ರಯಾಣಿಸುವಾಗ ಕೆಳಗೆ ನೋಡಿದರೆ ಉದ್ದಾನುದ್ದದ ಡಾಂಬರು ರಸ್ತೆಯ ಕೆಳಗೆ ಇರುವ ದೇವದೂಂಗ್ರಿ ಹತ್ತು ವರ್ಷಗಳ ಹಿಂದೆ ಹೇಗಿತ್ತೋ ಹಾಗೆಯೇ ಕಾಣುತ್ತದೆ. ಅತ್ತ ಇತ್ತ ಹಣಕಿ ನೋಡಿದರೆ ಅರಳಿದ ಗುಲ್‌ಮೊಹರ್ ಮತ್ತು ಬಿದಿರಮೆಳೆಯನ್ನು ಹಾದು ಬರುವ ತಂಗಾಳಿಯನ್ನು ಅನುಭವಿಸಬಹುದು.

ಆದರೆ ಮೋಟ್‌ಸಿಂಗ್ ಮತ್ತು ಆತನ ಅಬ್ಬರದ ಮಾತಿಲ್ಲದೇ ಅಲ್ಲಿಯ ಜನಕ್ಕೆ ಏನನ್ನೋ ಕಳೆದುಕೊಂಡಂತೆ ಅನ್ನಿಸುತ್ತಿತ್ತು. ಆತ ತನ್ನ ಬಾವಿಯ ಬಳಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ. ಹಳೆಯ ಬೇವಿನ ಮರದ ನೆರಳಿನಡಿಯಲ್ಲಿ ಇದ್ದ ಜೀವಂತಿಕೆ ಹೆಚ್ಚಿನವರಿಗೆ ತಿಳಿಯುತ್ತಿರಲಿಲ್ಲ. ಈ ಸಂಘಟನೆಯ ಕಚೇರಿ ಆ ಬೇವಿನ ಮರದ ನೆರಳಿನಲ್ಲಿ ಇತ್ತು. ಅದು ಆಗಾಗ್ಗೆ ಚಟುವಟಿಕೆಯಿಂದ ತುಂಬಿ ತುಳುಕುತ್ತಿತ್ತು.

ದೇವದೂಂಗ್ರಿಯ ಗುಲ್‌ಮೊಹರ್ ಮನೆಯಲ್ಲಿ ದೂರವಾಣಿ ಹೊಸದಾಗಿ ಸೇರ್ಪಡೆಯಾದ ಉಪಕರಣವಾಗಿತ್ತು. ಆದರೆ ವಿದ್ಯುತ್ ಸಂಪರ್ಕ ಇರಲಿಲ್ಲ. ಗೆಳೆಯರಿಬ್ಬರು ನೀಡಿದ ಸೌರಶಕ್ತಿಯ ದೀಪ ಸಂಜೆ ವೇಳೆ ಬೆಳಗುತ್ತಿತ್ತು. ಅದೊಂದು ಬಿಟ್ಟು ಅವರು ಇಲ್ಲಿಗೆ ಬಂದಾಗ ಪರಿಸರ ಹೇಗಿತ್ತೋ ಹಾಗೆಯೇ ಇತ್ತು. ಆದರೆ ಬದಲಾದವರು ಜನ ಮಾತ್ರ!

ಶಂಕರ್ ಮತ್ತು ಆನ್ನಿಯ ಮಕ್ಕಳಾದ ಕಮ್ಮೋ ಮತ್ತು ನೀಲು ಕಾಲೇಜಿನ ಅಂತಿಮ ವರ್ಷದಲ್ಲಿದ್ದರು. ಕೊನೆಯ ಮಗ ವಿಕಾಸ ಪ್ರೌಢಶಾಲೆಯ ಕೊನೆಯ ಹಂತದಲ್ಲಿದ್ದ. ಮಕ್ಕಳ ಮದುವೆ ಮಾಡಬೇಕು ಎಂಬ ಒತ್ತಡ ಆನ್ನಿಯ ಮೇಲೆ ಬಿದ್ದಾಗ ಆಕೆ ನಿಜಕ್ಕೂ ಗಾಬರಿಯಾದಳು. ಅವರ ಇಡೀ ವಂಶದಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವ ರೂಢಿಯೇ ಇರಲಿಲ್ಲ. ಹೆಚ್ಚು ಕಲಿತ ಹೆಣ್ಣುಮಕ್ಕಳಿಗೆ ಗಂಡು ಹುಡುಕುವುದು ಕಷ್ಟ ಎಂಬ ಭಾವನೆ ಇತ್ತು.

ಕೆಲಸ ಮನೆಯದೇ ಆಗಿರಲಿ, ಸಂಘಟನೆಯದೇ ಆಗಿರಲಿ ಶಂಕರನ ಉತ್ಸಾಹ ಎಂದೂ ಬತ್ತಲಿಲ್ಲ. ದೇವದೂಂಗ್ರಿ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಹತ್ತು ವರುಷಗಳಿಂದೀಚೆ ವಿಸ್ತರಿಸುತ್ತಿರುವ ಸಂಘಟನೆಯ ಚಟುವಟಿಕೆಗಳು ಆತನಿಗೆ ಚೈತನ್ಯ ತುಂಬುತ್ತಿತ್ತು.

ನಿಖಿಲ್ ಪೂರ್ಣಪ್ರಮಾಣದಲ್ಲಿ ಹಳ್ಳಿಯವನಂತೆಯೇ ಆಗಿಹೋದ. ತಾನು ಹುಟ್ಟಿದ ನಗರದ ಸಾಮಾಜಿಕ ವ್ಯವಸ್ಥೆಗೆ ಪರಕೀಯನಾಗಿಬಿಟ್ಟ. ತಮ್ಮ ದಿನನಿತ್ಯದ ಕೆಲಸಗಳನ್ನು ಎಲ್ಲರೂ ಹಂಚಿಕೊಳ್ಳುತ್ತಿದ್ದ ಕಾರಣ ಲಾಲ್‌ಸಿಂಗ್ ಮತ್ತು ನಾರಾಯಣ ನಿಖಿಲ್ ಜತೆ ಗುರುತಿಸಿಕೊಳ್ಳಲು ಸಾಧ್ಯವಾಯಿತು. ಸಂಘಟನೆಯ ಕೆಲಸದಲ್ಲಿ ನಾಟಕೀಯ ತಿರುವುಗಳು ಹೆಚ್ಚಿನ ಸಂತೋಷಕ್ಕೆ ಕಾರಣವಾಗುತ್ತಿದ್ದವೇ ಹೊರತೂ ಇವೇ ಗೆಳೆತನದ ಅಡಿಪಾಯವಾಗಿರಲಿಲ್ಲ.

ಕೆಲವು ವ್ಯಕ್ತಿಗಳು ಪೂರ್ಣ ಬದಲಾದರು. ದೇವಿಲಾಲ್ ತಾನು ಡಿಗ್ರಿ ಪಡೆದು ವಕೀಲನಾಗುತ್ತೇನೆಂದು ಹತ್ತು ವರ್ಷಗಳ ಹಿಂದೆ ಕನಸಿನಲ್ಲಿಯೂ ನೆನೆಸಿರಲಿಲ್ಲ! ನಾರಾಯಣನಿಗೆ ತಾನು ಗಂನೆಯ ತರಗತಿಯಲ್ಲಿ ಅನುತ್ತೀರ್ಣ ಎಂದು ಕರೆಸಿಕೊಳ್ಳುವುದು ಬೇಡವಾಗಿತ್ತು. ಎಸ್‌ಎಸ್‌ಎಲ್‌ಸಿ ಪಾಸಾಗುವುದರೊಂದಿಗೆ ಆತನಲ್ಲಿ ಆತ್ಮವಿಶ್ವಾಸ ತುಂಬಿತುಳುಕುತ್ತಿತ್ತು.

೧೯೯೬ರಲ್ಲಿ ಶಂಕರ್ ಜತೆ ನಾರಾಯಣ ಮುಂಬೈಗೆ ಭೇಟಿ ನೀಡಿದ. ಅಲ್ಲಿ ಮಹಾರಾಷ್ಟ್ರದ ಗ್ರಾಮೀಣ ಭಾಗದಲ್ಲಿ ತಮ್ಮನ್ನು ತೊಡಗಿಸಿಕೊಂಡ ಸಕ್ರಿಯ ಕಾರ್ಯಕರ್ತರ ಸಮಾವೇಶವಿತ್ತು. ಮುಂಬೈ ಸ್ಟಾಕ್ ಎಕ್ಸ್‌ಚೇಂಜ್, ರಿಸರ್ವ್‌ಬ್ಯಾಂಕ್ ಮುಂತಾದ ಕಡೆ ಕೆಲಸ ಮಾಡುವ ಬಗ್ಗೆ, ಹರ್ಷದ್ ಮೆಹ್ತಾನಂಥ ಕಿಡಿಗೇಡಿಗಳ ಬಗ್ಗೆ ನಾರಾಯಣ್ ತೀವ್ರ ಕುತೂಹಲ ತೋರಿಸಿದ. ತಾನು ಗುಲ್‌ಮೊಹರ್‌ನ ಮನೆಗೆ ತಗುಲಿಕೊಂಡಿದ್ದ ಸ್ಥಿತಿಗಿಂತ ಈಗ ನಾರಾಯಣ ಬಹುದೂರ ಸಾಗಿದ್ದ. ಶಂಕರ್ ಮತ್ತು ಲಾಲ್‌ಸಿಂಗ್‌ನಂತೆಯೇ ಆತನಿಗೂ ಮಹಾನಗರವನ್ನು ಬಿಟ್ಟು ತನ್ನ ಗ್ರಾಮಕ್ಕೆ ತೆರಳುವ ಬಯಕೆಯಾಗುತ್ತಿತ್ತು.

ನಾರಾಯಣ ಮತ್ತು ದೇವಿಲಾಲ್ ಒಟ್ಟಿಗೆ ಸಂತಸದಿಂದ ಕೆಲಸ ಮಾಡುತ್ತಿದ್ದರು. ಅವರು ಸಂಘಟನೆಯೊಳಗೂ ಬಹುಮುಖ್ಯವಾದ ಕೆಲಸದ ಹೊಣೆ ಹೊತ್ತುಕೊಂಡಿದ್ದರು. ಬೇರೆ ಬೇರೆ ಜಾತಿಯವರಾದ ಕಾರಣದಿಂದ ತಾವು ಗೆಳೆಯರಾಗುವುದಕ್ಕೆ ಒಪ್ಪದ ಕುಟುಂಬದವರ ನಿಲುವಿಗೆ ಅವರು ಸೊಪ್ಪುಹಾಕುತ್ತಿರಲಿಲ್ಲ. ಆದರೆ ದೇವದೂಂಗ್ರಿಯಂಥ ನೂರಾರು ಗ್ರಾಮಗಳಲ್ಲಿ ಇಂದಿಗೂ ಯುವಕರು ನಗರದ ಆಕರ್ಷಣೆಗೆ ಒಳಗಾಗುತ್ತಿದ್ದಾರಲ್ಲ ಎಂಬುದು ಅವರ ಆತ್ಮವಿಶ್ವಾಸವನ್ನು ಅಣಕಿಸುತ್ತಿತ್ತು. ದೇವದೂಂಗ್ರಿಯಂತಹ ಗ್ರಾಮೀಣ ಭಾಗದಲ್ಲಿ ಇನ್ನೂ ಹೆಚ್ಚಿನ ಕೆಲಸ ಆಗಬೇಕಿದೆ ಎಂಬ ತಿಳುವಳಿಕೆ ಅವರಿಗಿತ್ತು.

ಒಂದೊಂದೇ ಆಶಾಕಿರಣ ಆಗಾಗ್ಗೆ ಹೆಡೆಯೆತ್ತುವ ನಿರಾಶೆಯನ್ನು ಬೇಧಿಸುತ್ತಿತ್ತು. ಹಿಂದೆ 'ಅಸಾಧ್ಯ' ಎಂದುಕೊಂಡಿದ್ದ ಎಷ್ಟೋ ಸಂಗತಿಗಳು ಇಂದು ಸಾಧ್ಯವಾಗಿವೆ. ಸಾಧ್ಯತೆಗಳ ಗಡಿ ಎಂದೂ ಸೀಮಿತವಾದುದಲ್ಲ ಎನ್ನುವುದು ಅರಿವಾಯಿತು. ಈ ದಿಗಂತಗಳನ್ನು ವಿಸ್ತರಿಸಿಕೊಳ್ಳುತ್ತಲೇ ಹೋಗುವುದು ನಮ್ಮ ಗುರಿ ಮತ್ತು ವಾಸ್ತವದೊಡನೆ ಮುಖಾಮುಖಿಯಾಗುವಾಗಿನ ದಾರಿ ಅವರಿಗೆ ತಿಳಿಯಿತು. ಪಕ್ಕದ ಗುಡ್ಡ ಈ ಕಾಲಾತೀತ ಪಯಣಕ್ಕೆ ಸಾಕ್ಷಿಯಾಯಿತು.

*

.... ಮಧ್ಯಾಹ್ನದ ಬಿಸಿಲು ಹಿಂಬಾಗಿಲಿನಿಂದ ಬಾಪೂ ಕುಟಿಯನ್ನು ಪ್ರವೇಶಿಸುತ್ತದೆ. ಅರುಣಾ ಮತ್ತು ನಾನು ಮತ್ತೊಂದು ಬಾಗಿಲಿನಿಂದ ಈ ಕುಟಿ ಪ್ರವೇಶಿಸಿ ಸ್ವಲ್ಪ ಹೊತ್ತು ಹಾಗೆಯೇ ಇದ್ದು, ಸಭೆಯುತ್ತ ನಡೆದೆವು. ಹಲವಾರು ವರ್ಷಗಳಲ್ಲಿ ಗಾಂಧೀಜಿ ಬಗ್ಗೆ ಇರುವ ಭಿನ್ನಾಭಿಪ್ರಾಯವನ್ನು ಆಗಾಗ್ಗೆ ಅರುಣಾ ಹೇಳಿದ್ದರು. ಆದರೆ ಗಾಂಧೀಜಿ ಬದುಕಿನ ಸರಳತೆ ಅವರನ್ನು ತಟ್ಟಿತ್ತು. ಇದರ ಸೌಂದರ್ಯ ಮತ್ತು ಶಕ್ತಿಗಳು ಯಾವಾಗಲೂ ಆಕೆಗೆ ಉತ್ಸಾಹ ತುಂಬುತ್ತಿದ್ದವು.

ನಾವು ಆದರ ತುದಿಯಲ್ಲಿರುವ ಸೇವಾಗ್ರಾಮದ ದೊಡ್ಡ ಪಜಾರಕ್ಕೆ ಬಂದೆವು. ಈ ಜಾಗದಲ್ಲಿ ಗ್ರಾಮೀಣ ಭಾಗದಲ್ಲಿ ಕಾರ್ಯನಿರ್ವಹಿಸುವ ಕಾರ್ಯಕರ್ತರ ರಾಷ್ಟ್ರೀಯ ಸಮಾವೇಶ ಆರಂಭವಾಗುವುದಿತ್ತು. ರಾಜಕೀಯ ಪ್ರೇರಿತ ವಿವಿಧ ಬಗೆಯ ಸುಮಾರು ೩೦೦ ಕಾರ್ಯಕರ್ತರು, ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರು, ಸರ್ಕಾರೇತರ ಸಂಘ ಸಂಸ್ಥೆಗಳು ೧೯೯೫ರ ನವೆಂಬರ್‌ನಲ್ಲಿ ಜರುಗಿದ ಮಹತ್ವಾಕಾಂಕ್ಷೆಯ ಆಂದೋಲನ ಆರಂಭಿಸುವ ಸಲುವಾಗಿ ಇಲ್ಲಿ ಸೇರಿದ್ದರು.

ಎಲ್ಲರೂ ಸೇರಿ ಭಾರತದ ಗ್ರಾಮೀಣ ಭಾಗದ ಕಾರ್ಮಿಕ ಹಕ್ಕುಗಳಿಗಾಗಿ ಹೋರಾಡಲು ಆಶಿಸಿದ್ದರು. ಈ ಕೆಲಸ ಸುಲಭದ್ದೇನೂ ಅಲ್ಲ. ೯೦ರ ಆದಿ ಭಾಗದಲ್ಲಿ ಜಾಗತೀಕರಣ ಮತ್ತು ಉದಾರೀಕರಣ ನೀತಿಗಳು ಈ ಪ್ರಯತ್ನವನ್ನು ಕ್ಲಿಷ್ಟಗೊಳಿಸಿದ್ದವು. ದೂರದ ಮಾರುಕಟ್ಟೆಯ ಶಕ್ತಿಗಳು ಗ್ರಾಮೀಣ ಭಾಗದಲ್ಲಿ ನುಸುಳಿದರೆ ಜನರಿಗೆ ತಮ್ಮ ಸಹಜ ಸಂಪನ್ಮೂಲಗಳ ಮೇಲಿನ ನಿಯಂತ್ರಣ ತಪ್ಪುತ್ತದೆ. ಹೀಗಾಗಿ ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ಹೆಚ್ಚು ಅನಿವಾರ್ಯವಾಗುತ್ತದೆ. ಈ ಸಮಾವೇಶ ಭೂಹೀನರಿಗೆ ಭೂಮಿಯ ಹಕ್ಕನ್ನು ದೊರಕಿಸಿಕೊಡುವ ಮತ್ತು ಸಮುದಾಯದ ಒಡೆತನದಲ್ಲಿರುವಂತೆ ಸಮುದಾಯದ ಚೇತನವನ್ನು ನೋಡಿಕೊಳ್ಳುವ, ಖಾಸಗೀಕರಣಗೊಳಿಸುವ ಪ್ರಕ್ರಿಯೆಯನ್ನು ವಿರೋಧಿಸುವ ವೇದಿಕೆಯಾಯಿತು.

ಈ ಸಮಾವೇಶದ ಕಾರ್ಯಕರ್ತರ ಸಣ್ಣ ಗುಂಪೊಂದರಲ್ಲಿ ಅರುಣಾ ಕೆಲಸ ನಿರ್ವಹಿಸುತ್ತಿದ್ದರು. ಈ ಸಣ್ಣ ಗುಂಪು ಕಳೆದ ಒಂದೂವರೆ ವರ್ಷದಿಂದ ಈ ಆಂದೋಲನದಲ್ಲಿ ಮಂಡಿಸಬೇಕಾದ ಹಕ್ಕೊತ್ತಾಯ ಯಾವುದಿರಬೇಕೆಂಬ ಬಗ್ಗೆ ಕರಡನ್ನು ತಯಾರಿಸಿತ್ತು. 'ಮಜದೂರ್ ಕಿಸಾನ್ ಶಕ್ತಿ ಸಂಘಟನೆ'ಯಂತಹ ಗುಂಪುಗಳ ಅಗತ್ಯವನ್ನು ಅದು ಪ್ರತಿಧ್ವನಿಸುತ್ತಿತ್ತು. ಇದರಲ್ಲಿ ಕನಿಷ್ಠ ವೇತನದ ಕಾಯ್ದೆ ಜಾರಿ, ಮಾಹಿತಿ ಪಡೆಯುವ ಹಕ್ಕು, ಸ್ಥಳೀಯ ಸಂಪನ್ಮೂಲಗಳ ಮೇಲೆ ಸಮುದಾಯದ ಹಕ್ಕು, ಪರಿಣಾಮಕಾರಿ ಭೂಸುಧಾರಣೆಗಳು, ಗ್ರಾಮೀಣ ಭಾಗದಲ್ಲಿ ಶಿಕ್ಷಣ, ಆರೋಗ್ಯ ಮತ್ತು ವಸತಿಗಾಗಿ ಹಕ್ಕೊತ್ತಾಯ ಇತ್ತು.

ಈ ಹಕ್ಕೊತ್ತಾಯ, ಬೇಡಿಕೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವಾಗಲೂ ಇದು ಪರಿಣಾಮಕಾರಿಯೇ ಮತ್ತು ಸೂಕ್ತ ಕೆಲಸವೇ ಎಂಬ ಬಗ್ಗೆ ಅನೇಕ ಕಾರ್ಯಕರ್ತರು ಅನುಮಾನ ಹೊಂದಿದ್ದರು. ತಳ ಹಂತದಲ್ಲಿ ಸಮುದಾಯದ ಸಂಘಟನೆಯನ್ನು ಮಾಡದೇ ಇದ್ದಲ್ಲಿ ಈ ಹಕ್ಕೊತ್ತಾಯಗಳು ಕೇವಲ ಸಾಂಕೇತಿಕವಾಗಿಬಿಡುತ್ತವೆ. ತೀರಾ ಸ್ಥಳೀಯವೆನಿಸುವ ಸಣ್ಣ ಮಾರುಕಟ್ಟೆಯ ಮೇಲೆಯೂ ಹಿಡಿತ ಸಾಧಿಸಿಬಿಡುವ ದೂರದ ಆರ್ಥಿಕ ಶಕ್ತಿಗಳ ವಿರುದ್ಧ ಸವಾಲೆಸೆಯಲು ಆಗುವುದಿಲ್ಲ. ಹಾಗಾದರೆ ನಾವೇನು ಮಾಡಬೇಕು?

ಈ ಪ್ರಶ್ನೆಗಳಿಗೆ ನಿಖರವಾದ ಉತ್ತರವಿಲ್ಲ. ಆದರೆ ಉತ್ತರಗಳಿಗಾಗಿ ಸಂಘಟಿತ ಪ್ರಯತ್ನಗಳು ಇವೆ. ಆದುದರಿಂದಲೇ ಲಾಲ್‌ಸಿಂಗ್ ಇಂತಹ ಸಭೆಗಳಲ್ಲಿ ವಿಶ್ಲೇಷಣಾತ್ಮಕವಾದ ಮತ್ತು ಸೂಕ್ಷ್ಮವಾದ ಚರ್ಚೆಯನ್ನು ತಾಳ್ಮೆಯಿಂದ ಕೇಳಿಸಿಕೊಳ್ಳುತ್ತಾನೆ ಮತ್ತು ಸಣ್ಣ ಆಶಾವಾದದ ದನಿಯಾಗುತ್ತಾನೆ. ಸ್ಥಳೀಯವಾಗಿ ಯಶಸ್ವಿಯಾದ ಈ ಮಜದೂರ್ ಕಿಸಾನ್ ಕಿರಾಣಿ ಅಂಗಡಿ

ಬಹುಶಃ ಮುಂದೆ ದೊಡ್ಡ ಮಟ್ಟದಲ್ಲಿಯೂ ಯಶಸ್ವಿಯಾಗಬಹುದು. ಇದಕ್ಕೊಂದು ದಾರಿ ಕಂಡು ಹಿಡಿಯೋಣ ಎನ್ನುತ್ತಾ ಲಾಲ್‌ಸಿಂಗ್ ಕೇಳುತ್ತಾನೆ: 'ನನ್ನಂಥ ಕೃಷಿಕ ಮತ್ತು ಉತ್ಪಾದಕ ನನ್ನಂತೆಯೇ ಇರುವ ಗ್ರಾಹಕರೊಡನೆ ನೇರ ವ್ಯವಹರಿಸಿ ಹೇಗಾದರೂ ಮಾಡಿ ನಮ್ಮದೇ ಮಾರುಕಟ್ಟೆ ಸೃಷ್ಟಿಸಿಕೊಂಡು ದೊಡ್ಡ ವರ್ತಕರನ್ನು ದೂರ ಇಡಲು ಸಾಧ್ಯವೇ?'

◎

ಟಿ.ಕರುಣಾಕರನ್

ಚಿಂತೆಯ ತಾಣದಿಂದ ಆನಂದದ ಗೂಡಿನೆಡೆಗೆ

ಹಳೆಯ, ಹೊಸ ಸ್ನೇಹಿತರೆಲ್ಲರಿಗೂ ಬಾಪು ಕುಟಿ ಆಹ್ವಾನ ನೀಡಿತ್ತು. ಅರ್ಧ ಶತಮಾನದ ಹಿಂದೆ ಗಾಂಧಿ ಮತ್ತವರ ಸ್ನೇಹಿತರು ನೆಟ್ಟ ಮರದ ಸಮೃದ್ಧ ನೆರಳಡಿಯಲ್ಲಿ ಅವರು ಗುಂಪುಗುಂಪಾಗಿ ಕುಳಿತಿದ್ದರು. ಸೇವಾಗ್ರಾಮದ ಆಶ್ರಮದಲ್ಲಿ ಸಭೆ ನಡೆಯುತ್ತಿದ್ದಂತೆ, ವಿಭಿನ್ನ ರೀತಿಯ ಜನರು ಬಂದು ಸೇರುತ್ತಿದ್ದರು. ವಿಜ್ಞಾನಿಗಳು, ತತ್ವಜ್ಞಾನಿಗಳು ಮತ್ತು ಹಳೆಯ ಗಾಂಧಿ ಪ್ರೇಮಿಗಳೂ ಸೇರಿದಂತೆ ಅನೇಕ ದೇಶಗಳ ಜನರು ಇಲ್ಲಿ ಸೇರಿದ್ದರು. ಶಾಂತಿಗಾಗಿ ಶ್ರಮಿಸುವ ಕಾರ್ಯಕರ್ತರ ಗುಂಪೊಂದು ಇಟಲಿಯಿಂದ ಆಗಮಿಸಿತ್ತು. ಕೆಲವು ಖಾದಿಧಾರೀ ಯುವ ಅಮೆರಿಕನ್ನರನ್ನು ಈ ಅಂತರರಾಷ್ಟ್ರೀಯ ಸಮಾವೇಶದಲ್ಲಿ ಕಾಣಬಹುದಿತ್ತು. ಭಾರತದ ಕೆಲವು ವಿದ್ಯಾರ್ಥಿಗಳು, ಯುವ ಚಳುವಳಿಗಾರರೂ ಅಲ್ಲಿ ನೆರೆದಿದ್ದರು.

ಇವರ ಮಧ್ಯೆ ಕರುಣಾಕರನ್ ಚುರುಕಿನಿಂದ ಓಡಾಡುತ್ತಾ ಕಾರ್ಯನಿರತರಾಗಿದ್ದರು. ಕುಳ್ಳಗಿನ, ಸಣಕಲು ಶರೀರದ ಹಸನ್ಮುಖಿ ಕರುಣಾ ಜನವರಿ ೧೯೯೩ರ ಈ ಸಮಾವೇಶವನ್ನು ಸಂಘಟಿಸಲು ಹಲವು ತಿಂಗಳುಗಳ ಕಾಲ ಶ್ರಮವಹಿಸಿ ದುಡಿದಿದ್ದರು. 'ಸುಸ್ಥಿರ ಅಭಿವೃದ್ಧಿ' ಎಂಬ ಪದ ಫ್ಯಾಷನ್ ಆಗುವ ನಾಲ್ಕು ದಶಕಗಳ ಹಿಂದೆಯೇ 'ಶಾಶ್ವತ ಅರ್ಥಶಾಸ್ತ್ರ' ಪುಸ್ತಕವನ್ನು ಬರೆದ, ಗಾಂಧೀಜಿಯಿಂದ ಸ್ಫೂರ್ತಿ ಪಡೆದ ಅರ್ಥಶಾಸ್ತ್ರಜ್ಞ ಜೋಸೆಫ್ ಕಾರ್ನಿಲಿಯಸ್ ಕುಮಾರಪ್ಪನವರ ಸಂಸ್ಮರಣಾರ್ಥವಾಗಿ ಈ ಸಮಾವೇಶ ಆಯೋಜಿತವಾಗಿತ್ತು. ತಮ್ಮ ಗುರುಗಳ ನೆನಪಿನ ಮೂಲಕ ಸೇವೆ ಸಲ್ಲಿಸುವುದಕ್ಕಾಗಿ ಮತ್ತು ೨೧ನೆಯ ಶತಮಾನದಲ್ಲಿ ಶಾಶ್ವತ ಅರ್ಥಶಾಸ್ತ್ರ ಹೇಗೆ ವಾಸ್ತವವಾದೀತು ಎಂಬುದರ ಬಗ್ಗೆ ಅಲ್ಲಿ ಸೇರಿದ್ದ ಸಮಾನ ಮನಸ್ಕರೊಂದಿಗೆ ವಿಚಾರ ವಿನಿಮಯ ನಡೆಸುವುದಕ್ಕಾಗಿ ಹಲವರು ಅಲ್ಲಿ ಸೇರಿದ್ದರು.

ಎಲ್ಲವನ್ನೂ ಅಪ್ರಸ್ತುತಗೊಳಿಸಿ ಮುಂದೆ ಸಾಗುತ್ತಿರುವ ತಂತ್ರಜ್ಞಾನ ಮತ್ತು ನಿರುಪಯುಕ್ತ ಚರ್ಚೆಗಳಲ್ಲಿ ನಿರತವಾಗಿರುವ ಅರ್ಥಶಾಸ್ತ್ರ–ಇವುಗಳ ನಡುವೆ ಕರುಣಾ, 'ಶಾಶ್ವತ ಅರ್ಥಶಾಸ್ತ್ರ' ಪ್ರಸ್ತುತ ಮಾತ್ರವಲ್ಲ; ಅದು ಅವಶ್ಯ ಮತ್ತು ಅನಿವಾರ್ಯ ಎಂಬ ಆತ್ಮವಿಶ್ವಾಸ ಗಳಿಸಿದ್ದಾದರೂ ಹೇಗೆ? ಕರುಣಾ ಜಗತ್ತನ್ನು ವಿಭಿನ್ನವಾಗಿ ನೋಡುತ್ತಾರೆ. ನಾವು ಸಾಮಾನ್ಯವಾಗಿ ಜಗತ್ತಿನ

ದೇಶಗಳನ್ನು 'ಅಭಿವೃದ್ಧಿ ಹೊಂದಿದ ದೇಶಗಳು' ಮತ್ತು 'ಅಭಿವೃದ್ಧಿಶೀಲ ದೇಶಗಳು' ಎಂಬುದಾಗಿ ಕಂಡರೆ, ಅವರು 'ನಾಶಗೊಂಡ ದೇಶಗಳು' ಮತ್ತು 'ವಿನಾಶದತ್ತ ಧಾವಿಸುತ್ತಿರುವ ದೇಶಗಳು' ಎಂಬುದಾಗಿ ಕಾಣುತ್ತಾರೆ. ಈ ಓಟದಿಂದ ಭಾರತ ಹೇಗೆ ಹೊರಬರಬಹುದೆಂಬುದಕ್ಕೆ ಉತ್ತರವಾಗಿ ಕರುಣಾ ಬಳಿ ಒಂದು ಸಂಕೀರ್ಣ ಸೂತ್ರವಿದೆ.

ಈ ಸೂತ್ರ ಸರಕಾರ ನಡೆಸುವ ಅಭಿವೃದ್ಧಿ ಕಾರ್ಯಕ್ರಮಗಳನ್ನಾಗಲೀ ಅಥವಾ ವಾಲ್‌ಸ್ಟ್ರೀಟ್ ಮಾದರಿಯ ಮಾರುಕಟ್ಟೆಯನ್ನಾಗಲೀ ಅವಲಂಬಿಸಿಲ್ಲ. ಸಮಾಜದ ಅತ್ಯಂತ ತಳಮಟ್ಟದ ಮನುಷ್ಯನ ಸೃಜನಶೀಲ ಶಕ್ತಿಯನ್ನು ಬಳಸಿಕೊಳ್ಳುವ ಉದ್ಯಮಶೀಲತೆಯೇ ಇದಕ್ಕೆ ಉತ್ತರ ಎಂದು ಕರುಣಾ ನಂಬುತ್ತಾರೆ. ಕರುಣಾ ಅವರ ಕನಸಿನ ಸ್ವರೂಪವನ್ನು ಅವರು ಆರಂಭಿಸಿದ ಶಾಲೆಗಳ 'ಮಳಲ್ಯೆ ಪೂಂಗಾ' ಎಂಬ ಹೆಸರಿನಲ್ಲಿ ಕಾಣಬಹುದು. ತಮಿಳಿನಲ್ಲಿ ಮಳಲ್ಯೆ ಪೂಂಗಾ ಎಂದರೆ, ಆನಂದದ ತಾಣ, ಉಲ್ಲಾಸದ ನಗರ. ಅವಸರ ಮತ್ತು ಚಿಂತೆಗಳ ಆಗರವಾಗುತ್ತಿರುವ ನಮ್ಮ ದಿನನಿತ್ಯದ ಬದುಕಿಗಿಂತ ಇದು ಬೇರೆಯಾದದ್ದು.

ಕರುಣಾ ಅವರ ಈ ಉಲ್ಲಾಸದಾಯಕ ತಾಣದ ಪರಿಕಲ್ಪನೆಯ ಮೂಲವನ್ನು ನಾವು ಹುಡುಕಬೇಕಾದರೆ, ಕೊಂಚ ಕಾಲಚಕ್ರದಲ್ಲಿ ಹಿಂದೆ ಸರಿದು ತನ್ನ ಸೌಂದರ್ಯ ಮತ್ತು ಸರಳತೆಯಿಂದ ಬಾಪು ಕುಟಿ ಮತ್ತು ಕುಮಾರಪ್ಪನವರ ಮಣ್ಣಿನ ಮನೆಯಿಂದ ಅಷ್ಟೇನೂ ಭಿನ್ನವಲ್ಲದ ಹುಲ್ಲಿನ ಮಾಡಿನ ಮನೆಯತ್ತ ಪಯಣ ಬೆಳೆಸಬೇಕಾಗುತ್ತದೆ.

ಪೂವನ್ ಕುಡಿ

ಸ್ವತಂತ್ರ ಭಾರತಕ್ಕೂ ಕರುಣಾಕರನ್‌ಗೂ ಸರಿಸುಮಾರು ಒಂದೇ ವಯಸ್ಸು. ೧೯೪೬ರಲ್ಲಿ ಕ್ರಿಸ್ಮಸ್‌ನ ಮಾರನೆಯ ದಿನ ಕರುಣಾಕರನ್ ಜನಿಸಿದರು. ಅಂದರೆ, ಭಾರತ ಸ್ವತಂತ್ರವಾದ ಆ ನಿರ್ಣಾಯಕ ದಿನಕ್ಕೆ ಎಂಟು ತಿಂಗಳ ಹಿಂದೆ. ಕನ್ಯಾಕುಮಾರಿ ದೇವಿ ನೆಲೆಸಿರುವ ಭಾರತದ ದಕ್ಷಿಣದ ತುತ್ತತುದಿಯಿಂದ ೧೮ಕಿ.ಮೀ ದೂರದಲ್ಲಿರುವ ಪೂವನ್‌ಕುಡಿಯ ಒಬ್ಬ ಸಾಮಾನ್ಯ ರೈತನ ಮಗನಾಗಿ ಇವರು ಹುಟ್ಟಿದರು.

ಕುಟುಂಬದ ಹಿರಿಯರು ಕರುಣಾಗೆ ಶತಮಾನಗಳ ಹಿಂದೆ ಹೇಗೆ ಅವರ ಪೂರ್ವಿಕರು ತಿರುವಾಂಕೂರಿನ ರಾಜರ ವಿರುದ್ಧ ಒಳಸಂಚು ಹೂಡಿದ್ದರು ಎಂಬ ಕತೆಗಳನ್ನು ಹೇಳುತ್ತಿದ್ದರು. ಅಂದಿನಿಂದ ಅವರನ್ನು ಸಮಾಜದ ಕೆಳವರ್ಗಕ್ಕೆ ತಳ್ಳಲಾಗಿತ್ತು. ಮಹಿಳೆಯರು ಮತ್ತು ಪುರುಷರು ಸೊಂಟದ ಮೇಲೆ ಬಟ್ಟೆ ಧರಿಸುವುದನ್ನು ನಿಷೇಧಿಸಲಾಗಿತ್ತು ಹಾಗು ಅವರು ಮೇಲ್ವರ್ಗದವರ ಚಾಕರಿ ಮಾಡಬೇಕಾಗಿತ್ತು. ಕರುಣಾರ ತಂದೆ ತಿರುಮಾಲಯ ಪೆರುಮಾಳ್ ತಮ್ಮ ಕಿರು ಆದಾಯದೊಂದಿಗೆ, ತೆಂಗಿನಕಾಯಿಯನ್ನು ಸಂಗ್ರಹಿಸಿ, ಮಾರಿ, ಹಣ ಸಂಪಾದಿಸುತ್ತಿದ್ದರು. ಎಲ್ಲ ಸಾಮಾನ್ಯ ರೈತರಂತೇ ಕರುಣಾರ ತಂದೆ-ತಾಯಿ ಹುಲ್ಲು ಹೊದೆಸಿದ ಸೂರಿನ ಬಿದಿರು ಮತ್ತು ಮರಗಳಿಂದ ನಿರ್ಮಿಸಲಾದ ಪುಟ್ಟ ಮನೆಯಲ್ಲಿ ವಾಸಿಸುತ್ತಿದ್ದರು. ಅವರ ತಾಯಿ ಮುತ್ತುಲಕ್ಷ್ಮಿ ಚರಕದಿಂದ ಹತ್ತಿಯ ದಾರವನ್ನು ತೆಗೆಯುತ್ತಿದ್ದರು. ಖಾದಿ ಕೇಂದ್ರಕ್ಕೆ ಈ

ದಾರವನ್ನು ಒಯ್ದು ನೀಡುವುದು ಕರುಣಾರ ಜವಾಬ್ದಾರಿಯಾಗಿತ್ತು. ಅಲ್ಲಿ ಅದನ್ನು ಸೇರಿಸಿ, ಬಟ್ಟೆ ನೇಯಲಾಗುತ್ತಿತ್ತು.

೧೯೫೦ರ ದಶಕದ ವರ್ಷಗಳು ಆಶಾದಾಯಕವಾಗಿದ್ದು, ಕರುಣಾರಂತಹ ಪುಟ್ಟ ಹುಡುಗರು ಅವರ ಹಿರಿಯರಿಗಿಂತ ಭಿನ್ನವಾಗಿರುವಂತೆ ಮಾಡಿತು. ನಿಜ, ಇವರು ಪ್ರತಿದಿನ ದನಕರುಗಳನ್ನು ಮೇಯಿಸಲು ಹೋಗುತ್ತಿದ್ದರು. ಆದರೆ, ಈ ಪೀಳಿಗೆಯವರು ಶಾಲೆಗೆ ಕೂಡಾ ಹೋದರು. ಕೆಲವೊಮ್ಮೆ ಹುಡುಗರು ಕುರಿಗಳನ್ನು ಸಣ್ಣ ಕಣಿವೆಯೊಂದಕ್ಕೆ ಅಟ್ಟಿಕೊಂಡು ಹೋಗುತ್ತಿದ್ದರು. ಅಲ್ಲಿ ಅವು ಮೇಯುತ್ತಾ ದಾರಿತಪ್ಪಿ ಅಲೆಯುವ ಸಾಧ್ಯತೆ ಇರಲಿಲ್ಲ. ಹೀಗಾಗಿ ಇವರಿಗೆ ಆರಾಮಾಗಿ ಆಟವಾಡಲು ಸಾಧ್ಯವಾಗುತ್ತಿತ್ತು. ಅವರು ಮರದಿಂದ ಮರಕ್ಕೆ ನೆಗೆಯುತ್ತಿದ್ದರು. ಅತಿ ಎತ್ತರದ ಕೊಂಬೆಗೆ ಏರುವಲ್ಲಿ ಯಶಸ್ವಿಯಾದವನು ತರಗತಿಯಲ್ಲಿ ಕಲಿಸಿದ ಪಾಠದ ಮೇಲೆ ಪ್ರಶ್ನೆ ಕೇಳಬಹುದಾಗಿತ್ತು. ಕರುಣಾರ ಕಲಿಕೆ ಆರಂಭವಾದದ್ದು ಹೀಗೆ. ಅವರ ತಂದೆ ತಾಯಿಯರಿಗೆ, ಅವರ ಹಿರಿಯರ ಹಾಗೇ, ಓದಲು ಬರೆಯಲು ಬರುತ್ತಿರಲಿಲ್ಲ. ಹೀಗಾಗಿ ಕರುಣಾ ಕೇವಲ ಅಕ್ಷರಸ್ಥರಾಗುವುದಕ್ಕಿಂತ ಹೆಚ್ಚಾಗಿ, ಪ್ರತಿಭಾವಂತ ವಿದ್ಯಾರ್ಥಿಯಾಗಿ ಹೊಮ್ಮಿದಾಗ ಅವರ ಇಡಿ ವಂಶವೇ ಹೆಮ್ಮೆಪಟ್ಟಿತು. ಅವರ ಸಮುದಾಯದಲ್ಲಿ ಇಂಜಿನಿಯರಿಂಗ್ ಕಾಲೇಜು ಮೆಟ್ಟಿಲು ಹತ್ತಿದವರಲ್ಲಿ ಕರುಣಾ ಮೊದಲಿಗರು.

ಮದುರೈನ ಕಾಲೇಜು ದಿನಗಳು

ಕರುಣಾ ಮದುರೈನ ತ್ಯಾಗರಾಜ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಲಿಯುತ್ತಿದ್ದಂತೆ, ಸ್ವತಂತ್ರ ಭಾರತ ತನ್ನ ರಾಷ್ಟ್ರಪಿತನ ಜನ್ಮಶತಮಾನೋತ್ಸವವನ್ನು ಆಚರಿಸಲು ತಯಾರಿ ನಡೆಸುತ್ತಿತ್ತು. ಕರುಣಾರಿಗೆ ಮಹಾತ್ಮಾ ಗಾಂಧಿ ಹೊಸ ಹೆಸರಲ್ಲ. ತಮ್ಮ ಶಾಲಾದಿನಗಳುದ್ದಕ್ಕೂ ಕರುಣಾ ಬಹುಮಾನಗಳನ್ನು ಗೆಲ್ಲುತ್ತಲೇ ಬಂದಿದ್ದರು. ಈ ಬಹುಮಾನಗಳು ಸಾಮಾನ್ಯವಾಗಿ, ಆಚಾರ್ಯ ವಿನೋಭಾ ಭಾವೆ ಮತ್ತು ಗಾಂಧೀಜಿಯವರು ಸ್ವತಃ ಬರೆದ ಅಥವಾ ಅವರ ಕುರಿತಾದ ಪುಸ್ತಕಗಳೇ ಆಗಿರುತ್ತಿದ್ದವು. ಮಹಾನಗರದಲ್ಲಿದ್ದ ಕಾಲೇಜಿಗೆ ಬಂದ ಕರುಣಾ ತನ್ನ ಆರಂಭದ ಹಿಂಜರಿಕೆಗಳಿಂದ ದೂರವಾದ ಬಳಿಕ ಮಹಾತ್ಮಾ ಗಾಂಧಿ ಮತ್ತವರ ಚಿಂತನೆಗಳ ಕುರಿತು ವಿಮರ್ಶಾತ್ಮಕ ಸಂವಾದ ನಡೆಸುವ 'ಗಾಂಧಿ ಅಧ್ಯಯನ ಬಳಗ' ವನ್ನು ಸಂಘಟಿಸಿದರು.

ಈ ಹಾದಿಯಲ್ಲಿ ಅವರು ಕಾರ್ಲ್ ಮಾರ್ಕ್ಸ್‌ನನ್ನು ಕೂಡಾ ಓದಿದರು. ಆದರೆ, ಆತನ ಬರಹಗಳಿಂದ ಪ್ರಭಾವಿತರಾಗಲಿಲ್ಲ. ಕರುಣಾ ತಾವು ಸಹಜ ಸಮಾಜವಾದಿ ಎಂಬುದನ್ನು ಕಂಡುಕೊಂಡರು. ಗಾಂಧಿಯವರ 'ದರಿದ್ರ ನಾರಾಯಣ' ಎಂದರೆ, ತಳಮಟ್ಟದ ಜನರ ಕುರಿತ ಕಾಳಜಿಯೇ ೪೦ ಮಂದಿ ಯುವಕರನ್ನು ಒಂದೆಡೆ ಸೇರಿಸಿತ್ತು. 'ನಾವು ಗಾಂಧೀಜಿಯವರನ್ನು ವಿಮರ್ಶೆಯ ಕಟಕಟೆಯಲ್ಲಿ ನಿಲ್ಲಿಸುತ್ತಿದ್ದೆವು. ಹೀಗಿದ್ದರೂ ಅವರ ತತ್ವಗಳನ್ನು ಮೈಗೂಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೆವು' ಎಂದು ಕರುಣಾ ನೆನಪಿಸಿಕೊಳ್ಳುತ್ತಾರೆ.

ಗಾಂಧಿ ಜನ್ಮ ಶತಮಾನೋತ್ಸವ ಆಚರಣೆಯ ತಯಾರಿ ನಿಮಿತ್ತ ಜಯಪ್ರಕಾಶ ನಾರಾಯಣ ಮದುರೈನ ಗಾಂಧಿ ಮ್ಯೂಸಿಯಂನಲ್ಲಿ ನಡೆಯಲಿರುವ ಸಮಾಲೋಚನಾ ಸಭೆಗಾಗಿ ಆಗಮಿಸಿದ್ದರು. ಆ ಸಭೆಯ ಹಿರಿಯ ಭಾಷಣಕಾರರೆಲ್ಲರೂ ಪೇಲವವಾಗಿ ಮಹಾತ್ಮರ ಕುರಿತು ಪ್ರಶಂಸೆಯ ಮಾತುಗಳನ್ನು ಪೇರಿಸುತ್ತಿರುವಂತೆಯೇ ಕರುಣಾ ಮತ್ತು ಅವರ ಗಾಂಧಿ ಅಧ್ಯಯನ ಬಳಗದ ೪೦ ಮಂದಿ ಸದಸ್ಯರು ಸಭೆಗೆ ಕಾಲಿಟ್ಟರು.

ಕರುಣಾ ಈ ರಸಹೀನ ಮಾತುಗಳನ್ನು ಸಹಿಸಲಾರದಾದರು. ಅಸಹನೆಯಿಂದ ಕೂಗಿ ಹೇಳಿದರು 'ಗಾಂಧಿ ಜನ್ಮ ಶತಮಾನೋತ್ಸವವನ್ನು ಆಚರಿಸುವ ರೀತಿಯೇ ಇದು? ನಾವು ಈ ಸಂದರ್ಭದಲ್ಲಿ ಹಳ್ಳಿಗಳಲ್ಲಿ ರಚನಾತ್ಮಕ ಕೆಲಸಗಳನ್ನು ಹಮ್ಮಿಕೊಳ್ಳಬೇಕಾಗಿತ್ತು. ಗಾಂಧಿ ನಮ್ಮಿಂದ ಬಯಸಿದ್ದು ಅದನ್ನೇ'. ಆ ಬಳಿಕ ಕರುಣಾರನ್ನು ಸುತ್ತುವರಿದ ಗೆಳೆಯರು ತಮಗನಿಸಿದ್ದನ್ನು ನೇರವಾಗಿ ಹೇಳಿದ್ದಕ್ಕಾಗಿ ಅಭಿನಂದನೆ ಸಲ್ಲಿಸಿದರು. ಮಾರನೆಯ ದಿನ 'ನಾನು ನಮ್ಮ ಇಡೀ ಬಳಗವನ್ನು ಜೆ.ಪಿಯವರ ಬಳಿ ಕರೆದುಕೊಂಡು ಹೋದೆ. ಅಂತಹ ಹಿರಿಯ ವ್ಯಕ್ತಿಗಳನ್ನು ನಾನು ಗೌರವಿಸುತ್ತಿದ್ದೆ. ನಾವು ಮದುವೆಯಾಗುವ ಸಂದರ್ಭದಲ್ಲಿ ವರದಕ್ಷಿಣೆ ತೆಗೆದುಕೊಳ್ಳುವುದಿಲ್ಲ ಎಂಬ ಪ್ರತಿಜ್ಞೆ ಕೈಗೊಳ್ಳುವಂತೆ ಜೆ.ಪಿ ನಿರ್ದೇಶಿಸಿದರು'. ಎಂದು ಕರುಣಾ ನೆನಪಿಗೆ ಜಾರುತ್ತಾರೆ.

ಆ ಸಂದರ್ಭದಲ್ಲಿ ಕರುಣಾ ಹಿಂದಿ ಬಗ್ಗೆ ಕೂಡಾ ವಿಶೇಷ ಒಲವನ್ನು ಹೊಂದಿದ್ದರು. ತಮಿಳುನಾಡು ಸರ್ಕಾರ ಶಾಲೆಗಳಲ್ಲಿ ಹಿಂದಿ ಬೋಧಿಸುವುದನ್ನು ನಿಷೇಧಿಸಿದಾಗ್ಯೂ ಕರುಣಾ ಆ ಭಾಷೆಯನ್ನು ಕಲಿತು, ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ನಡೆಸುವ 'ರಾಷ್ಟ್ರ ಭಾಷಾ ಪರೀಕ್ಷೆ'ಯಲ್ಲಿ ಪ್ರಥಮ ಸ್ಥಾನ ಗಳಿಸಿದರು. ಇದೇ ಸಮಯದಲ್ಲಿ ಅವರು ದಕ್ಷಿಣದವರ ಮೇಲೆ ಉತ್ತರದವರು ಹಿಂದಿಯನ್ನು ಬಲಾತ್ಕಾರಪೂರ್ವಕವಾಗಿ ಹೇರುವುದನ್ನು ವಿರೋಧಿಸಿದರು. ಹೀಗಾಗಿ, ೧೯೬೧ ಜನವರಿ ೨೬ನ್ನು ಹಿಂದಿ ವಿರೋಧಿ ದಿನವನ್ನಾಗಿ ಆಚರಿಸಿದಾಗ ಕರುಣಾ ಕಪ್ಪು ವಸ್ತ್ರ ಧರಿಸಿ ಬೀದಿಗಿಳಿದು ಪ್ರತಿಭಟಿಸಿದರು. ಪರೀಕ್ಷೆಯಲ್ಲಿ ಪ್ರಥಮ ಸ್ಥಾನಗಳಿಸಿ ಬಹುಮಾನ ಪಡೆದ ವಿದ್ಯಾರ್ಥಿಯೇ ಹಿಂದಿ ವಿರೋಧಿ ಚಳುವಳಿಯಲ್ಲಿ ಪೊಲೀಸರಿಂದ ಗಾಯಗೊಂಡು ಆಸ್ಪತ್ರೆ ಸೇರಿದ ಮೊದಲ ವ್ಯಕ್ತಿಯಾದ!

ದೆಹಲಿಯ ಐ.ಐ.ಟಿಯಲ್ಲಿ

ಗಾಂಧಿ ವಿಚಾರಧಾರೆಯಲ್ಲಿ ಆಸಕ್ತಿ ಹೊಂದಿದ ತ್ಯಾಗರಾಜ ಕಾಲೇಜಿನ ಸ್ವಯಂ ಸ್ಫೂರ್ತ ಯುವಕರ ತಂಡ ಪದವಿಯ ಬಳಿಕ ಚದುರಿ ಹೋಯಿತು. ಆದರೆ ಕರುಣಾರ ಜೀವನದ ಹಾದಿ ಹೆಚ್ಚು ಕಡಿಮೆ ನಿಗದಿಯಾಗಿತ್ತು. ಈ ಸಮಯಕ್ಕಾಗಲೇ ಅವರು ಜಾತಿ, ಧರ್ಮಗಳನ್ನು ಮೀರಿದ ವಿಶ್ವ ಮಾನವತೆಯ ಕಾಣ್ಕೆಯನ್ನು ಕಟ್ಟಿಕೊಳ್ಳಲು ಆರಂಭಿಸಿದ್ದರು. ಸ್ವತಂತ್ರ ಭಾರತ ತನ್ನ ನಾಗರಿಕರ ಮೂಲಭೂತ ಅವಶ್ಯಕತೆಗಳಾದ ಆಹಾರ, ಬಟ್ಟೆ, ವಸತಿ ಕಲ್ಪಿಸುವುದರಲ್ಲಿ ಸೋತಿದೆ ಎಂಬುದು ಅವರನ್ನು ಬಲವಾಗಿ ಕಾಡುತ್ತಿತ್ತು. ಭಾರತೀಯರ ಮನಸ್ಸು ವಿಧಿವಾದ ಮತ್ತು ವರ್ಣಾಶ್ರಮ ಧರ್ಮದಲ್ಲಿ ಆಳವಾಗಿ ಬೇರೂರಿರುವುದೇ ಸಮತೆಯ ಸಮಾಜವನ್ನು

ಸಾಕಾರಗೊಳಿಸುವಲ್ಲಿ ಪ್ರಮುಖ ತೊಡಕು ಎಂದು ಕರುಣಾ ಚಿಂತಿಸಿದರು. ಯಾವುದೇ ಅರ್ಜಿಯ ಮೇಲೆ ಧರ್ಮ ಅಥವಾ ಜಾತಿಯ ಕುರಿತಾದ ಪ್ರಶ್ನೆಯನ್ನು ಕಂಡಾಗಲೆಲ್ಲ ಕರುಣಾಗೆ ಬೇಸರವಾಗುತ್ತಿತ್ತು. ಅವರು ಸದಾ ಅಂತಹ ಪ್ರಶ್ನೆಗಳಿಗೆ 'ಯಾವುದೂ ಅಲ್ಲ' ಎಂದು ಉತ್ತರಿಸುತ್ತಿದ್ದರು.

ಕರುಣಾ ಮದುರೈನ ಇಂಜಿನಿಯರಿಂಗ್ ಕಾಲೇಜಿಗೆ ಸೇರಿದ ಹೊಸತರಲ್ಲಿ ಯಾರೋ ಒಬ್ಬರು 'ನೀವು ಐ.ಐ.ಟಿಗೆ ಅರ್ಜಿ ಹಾಕಿದ್ದೀರಾ' ಎಂದು ಕೇಳಿದ್ದರು. ಐ.ಐ.ಟಿ ಎಂದರೇನೆಂಬುದೇ ಆಗ ಕರುಣಾಗೆ ತಿಳಿದಿರಲಿಲ್ಲ. ನಾಲ್ಕು ವರ್ಷಗಳ ಬಳಿಕ ಕರುಣಾ ಪ್ರತಿಷ್ಠಿತ ಐ.ಐ.ಟಿ ಬಗ್ಗೆ ತಿಳಿದಿದ್ದರು ಮತ್ತು ಅಲ್ಲಿ ಪ್ರವೇಶ ಪಡೆಯಲು ಸಿದ್ಧರಾಗಿದ್ದರು ಕೂಡಾ. ದೆಹಲಿ ಐ.ಐ.ಟಿಯಲ್ಲಿ ಎಂ.ಟೆಕ್‌ಗೆ ಪ್ರವೇಶ ಪಡೆದ ಕರುಣಾ ಮೊತ್ತಮೊದಲ ಬಾರಿಗೆ ಉತ್ತರ ಭಾರತಕ್ಕೆ ತೆರಳಿದರು.

ರಾಷ್ಟ್ರ ರಾಜಧಾನಿಯ ವಾತಾವರಣ ಕರುಣಾರಲ್ಲಿ ಪರಕೀಯತೆಯ ಭಾವವನ್ನು ಹುಟ್ಟಿಸಿತು. ಸಣ್ಣ ಪಟ್ಟಣದಿಂದ ಬಂದ ಕರುಣಾರನ್ನು ಉಳಿದ ಹುಡುಗರು ವಿಚಿತ್ರವಾಗಿ ನೋಡುತ್ತಿದ್ದರು, ಹಾಸ್ಯ ಮಾಡುತ್ತಿದ್ದರು. ಅಲ್ಲಿನ ಅನೇಕ ಜನರು ನಗರದ ಮಧ್ಯಮ ವರ್ಗದವರಾಗಿದ್ದು, ಅದೇ ಐ.ಐ.ಟಿಯಲ್ಲಿ ಬಿ.ಟೆಕ್ ಪದವಿ ಪಡೆದವರಾಗಿದ್ದರು. ಅಮೆರಿಕದ ಹಾದಿಯತ್ತ ಮುಖ ಮಾಡಿದ್ದ ಸಹ ವಿದ್ಯಾರ್ಥಿಗಳಿಗಿಂತ ಕರುಣಾರ ಉಡುಗೆತೊಡುಗೆ, ಮಾತು, ಚಿಂತನ ವಿಧಾನ ತೀರಾ ಭಿನ್ನವಾಗಿತ್ತು.

'ಬಹುತೇಕ ವಿದ್ಯಾರ್ಥಿಗಳು ಪರೀಕ್ಷೆಯ ದೃಷ್ಟಿಯಿಂದ ವಿಷಯವನ್ನು ಅಧ್ಯಯನ ಮಾಡುತ್ತಿದ್ದರೆ, ನಾನು ವಿಷಯವನ್ನು ಆಳವಾಗಿ, ವಿಸ್ತಾರವಾಗಿ ಚರ್ಚಿಸುವುದರಲ್ಲಿ ಆಸಕ್ತಿ ಹೊಂದಿದ್ದೆ. ಹಿರಿಯ ಪ್ರಾಧ್ಯಾಪಕರೊಂದಿಗೆ ವಿಷಯದ ತಾತ್ವಿಕ ಚರ್ಚೆಗಿಳಿದುಬಿಡುತ್ತಿದ್ದೆ. ಇದು ಬುದ್ಧಿವಂತರೆನಿಸಿಕೊಂಡ ವಿದ್ಯಾರ್ಥಿಗಳಲ್ಲಿ ಅಸೂಯೆಯನ್ನು ಹುಟ್ಟಿಸಿತು. ತಾವು ಅಲ್ಲಿ ಉಪನ್ಯಾಸಕರಾಗಬೇಕೆಂದುಕೊಂಡಿದ್ದ ವಿದ್ಯಾರ್ಥಿಗಳು ಹತಾಶೆಗೊಳಗಾದರು ಕೂಡಾ. ಕೊನೆಗೆ ಇಬ್ಬರು ದಢೂತಿ ವಿದ್ಯಾರ್ಥಿಗಳು ನನ್ನ ಪಕ್ಕ ಕುಳಿತುಕೊಳ್ಳುವಂತೆ ಮಾಡಿದರು. ನಾನು ಪ್ರಶ್ನೆ ಕೇಳಲು ಎದ್ದಾಗಲೆಲ್ಲ ಅವರು ನನ್ನನ್ನು ಹಿಡಿದು ಕೂರಿಸುತ್ತಿದ್ದರು'.

ಆದರೆ ಇವರ ದೃಢತೆ ಫಲ ನೀಡದೇ ಇರಲಿಲ್ಲ. ಮೂರು ತಿಂಗಳೊಳಗೆ ಪ್ರಸಿದ್ಧ ಪ್ರೊಫೆಸರ್ ಒಬ್ಬರ ನೇರ ಮಾರ್ಗದರ್ಶನ ಪಡೆಯುವ ಯೋಗ ಕರುಣಾರದಾಯಿತು. ಎಂ.ಟೆಕ್ ಮುಗಿಸುವ ಮೊದಲೇ ನೇರವಾಗಿ ಪಿ.ಎಚ್‌ಡಿಗೆ ಅವಕಾಶ ದೊರೆತಾಗ ಎಲ್ಲರೂ ಸುಮ್ಮನಾದರು.

ಕರುಣಾ ಸಿಸ್ಟಂ ಇಂಜಿನಿಯರಿಂಗ್, ಅದರಲ್ಲೂ ಮ್ಯಾಥಮೆಟಿಕ್ಸ್ ಸಿಸ್ಟಂ ಸಿದ್ಧಾಂತಕ್ಕೆ ವಿಶೇಷ ಒತ್ತು ನೀಡಿ, ಆ ವಿಷಯದಲ್ಲಿ ಡಾಕ್ಟರೇಟ್ ಪಡೆದರು. ಅವರ ಪಿ.ಎಚ್‌ಡಿ ಪ್ರಬಂಧದ ಪರೀಕ್ಷಕರಾಗಿ ಆಗಮಿಸಿದ ಲಾಸ್ ಏಂಜಲೀಸ್‌ನಲ್ಲಿರುವ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಸಿಸ್ಟಂ ಪರಿಣತರೊಬ್ಬರು ಈ ಅಧ್ಯಯನವನ್ನು ಕೇಂಬ್ರಿಡ್ಜ್ ಅಥವಾ ಮೆಸಾಚುಸೆಟ್ಸ್ ಇನ್‌ಸ್ಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಬಂಧಗಳಿಗೆ ಹೋಲಿಸಬಹುದು ಎಂದರು.

ಪಶ್ಚಿಮದ ಅನಂತ ಸಾಧ್ಯತೆಗಳು ಇವರನ್ನು ಕೈಬೀಸಿ ಕರೆದವು. ಕರುಣಾ ಗೊಂದಲದಲ್ಲಿ ಬಿದ್ದರು. ಹೊರದೇಶಕ್ಕೆ ಹೋಗಿ ಸೈದ್ಧಾಂತಿಕ ವಿಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡುವುದೋ ಅಥವಾ ಇಲ್ಲಿಯೇ ನೆಲೆಸುವುದೋ? ಅಮೆರಿಕಕ್ಕೆ ಹೋಗುವುದೇ ಆದಲ್ಲಿ ಅವರು ಕೃತಕ ಬುದ್ಧಿಮತ್ತೆಯ ಕ್ಷೇತ್ರದಲ್ಲಾಗಲೀ ಅಥವಾ ಉಪಗ್ರಹ ಉಡಾವಣೆಗೆ ಸಂಬಂಧಿಸಿದ ಸಿಸ್ಟಂ ಮಾಡೆಲಿಂಗ್ ಕ್ಷೇತ್ರದಲ್ಲಾಗಲಿ ಕೆಲಸ ಮಾಡಬಹುದಾಗಿತ್ತು.

ವಿದೇಶೀ ಪ್ರಯಾಣ ಕರುಣಾಗೆ ಅಷ್ಟೊಂದು ಆಕರ್ಷಕ ಎನಿಸಲಿಲ್ಲ. ಅವರು ಹೋಗಬೇಕೆಂದು ಬಯಸಿದ್ದ ಒಂದೇ ಒಂದು ಪ್ರದೇಶವೆಂದರೆ ಚೀನಾ. ಆದರೆ, ಅಲ್ಲಿಗೆ ಕಳುಹಿಸಲು ಯಾರೂ ಸಿದ್ಧರಿರಲಿಲ್ಲ. ಕರುಣಾರ ತಾಂತ್ರಿಕ ಪರಿಣತಿಯನ್ನು ಜಲಸಂಪನ್ಮೂಲಗಳ ವ್ಯವಸ್ಥಿತ ಬಳಕೆ, ಗ್ರಾಮೀಣ ಕೈಗಾರಿಕೀಕರಣದ ಸಂರಚನೆ, ಉದ್ಯೋಗವರ್ಧನೆ ಮೊದಲಾದ ಕ್ಷೇತ್ರಗಳಲ್ಲಿ ಬಳಸಿಕೊಳ್ಳಬಹುದಾಗಿತ್ತು. ಹೀಗಾಗಿ ಕರುಣಾ ಭಾರತದಲ್ಲಿಯೇ ನೆಲೆಸಲು ಮನಸ್ಸು ಮಾಡಿದರು. ಐ.ಐ.ಟಿಯಲ್ಲಿ ಇದ್ದರೂ ಕೂಡಾ ತಮ್ಮ ಕ್ರಿಯಾಶಕ್ತಿಯನ್ನು ಹಳ್ಳಿಗಳತ್ತ ಮತ್ತು ಅಲ್ಲಿನ ಲಕ್ಷಾಂತರ ಜನರತ್ತ ಹರಿಸಿದರು.

ಆದರೆ, ಅವಕಾಶಗಳು ಕರುಣಾರ ಬಾಗಿಲು ತಟ್ಟುವುದನ್ನು ಬಿಡಲೇ ಇಲ್ಲ. ವಿದೇಶಕ್ಕೆ ಹೋಗಿ ಗಣಿತದಲ್ಲಿ ಅಧ್ಯಯನ ನಡೆಸುವುದೆಂದರೆ ಹಾಸ್ಯಾಸ್ಪದ ವಿಷಯ ಎಂಬ ಕರುಣಾರ ಅನಿಸಿಕೆ ನಂತರದಲ್ಲಿ ಕೂಡಾ ಕೊಂಚವೂ ಬದಲಾಗಲಿಲ್ಲ. ಭಾರತ ಉಪಕರಣ ಕೇಂದ್ರಿತ ಕ್ಷೇತ್ರಗಳಲ್ಲಿ ಅಲ್ಲದೇ ಹೋದರೂ ಗಣಿತ ಕ್ಷೇತ್ರದಲ್ಲಿ ಬಲವಾಗಬೇಕು. ಎಂಬುದು ಅವರ ಚಿಂತನೆಯಾಗಿತ್ತು. ಆದಕಾರಣ ತನ್ನ ಪಿಎಚ್,ಡಿ. ಅಧ್ಯಯನ ಮುಗಿಸಿದ ನಂತರ ಮದುರೈ ವಿಶ್ವವಿದ್ಯಾಲಯದ ಗಣಿತ ವಿಭಾಗದಲ್ಲಿ ಸಂದರ್ಶಕ ಪ್ರಾಧ್ಯಪಕರಾಗಿ ಕಾರ್ಯ ನಿರ್ವಹಿಸಿದರು. ಬಳಿಕ, ೧೯೭೩ರಲ್ಲಿ ಮುಂಬೈನ ಟಾ ಟಾ ಇನಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್‌ನ ಗಣಿತ ವಿಭಾಗದಲ್ಲಿ 'ವಿಸಿಟಿಂಗ್ ಫೆಲೋ' ಆಗಿ ಕೂಡಾ ಕಾರ್ಯನಿರ್ವಹಿಸಿದರು.

ಗಣಿತದ ಸೂತ್ರ, ಸಮೀಕರಣಗಳ ನಡುವೆ ಇರುವಾಗಲೂ ಅವರ ಆಸಕ್ತಿಯ ಕೇಂದ್ರ ಗ್ರಾಮೀಣ ಅರ್ಥಶಾಸ್ತ್ರವೇ ಆಗಿತ್ತು. ನಗರೀಕರಣ ಮತ್ತು ನಗರ ಕೇಂದ್ರಿತ ರಾಜಕಾರಣ ಗ್ರಾಮೀಣ ಆರ್ಥಿಕತೆಯ ಹಿನ್ನಡೆಗೆ ಕಾರಣವಾಗಿದೆ ಎಂದು ನಂಬಿದ್ದ ಕರುಣಾ, ಇದಕ್ಕೆ ಮುಖಾಮುಖಿಯಾಗಿ, ಏನನ್ನಾದರೂ ಸಾಧಿಸುವ ಪ್ರಾಯೋಗಿಕ ಹಾದಿಯ ಅನ್ವೇಷಣೆಗೆ ತೊಡಗಿದರು. ಆದರೆ, ಅವರ ಸಾಧನೆಯೇನು? ವರ್ಷಗಳ ಬಳಿಕ, ೨೧ನೆಯ ಶತಮಾನದ ಹೊಸ್ತಿಲಲ್ಲಿ, ಅದನ್ನು ಸುಸ್ಥಿರತೆ, ನ್ಯಾಯ, ಪರಸ್ಪರರನ್ನು ಬೆಳೆಸುವ ಸಹಬಾಳ್ವೆ ಎಂದು ಮಾನವಿಕ ಪರಿಭಾಷೆಯಲ್ಲಿ ಹೇಳಬಲ್ಲವರಾಗಿದ್ದರು ಕರುಣಾ.

ಇದು ಸಾಧ್ಯವಾಗಬೇಕಾದರೆ, ಜನರು ಅಧಿಕಾರ ಕೇಂದ್ರದತ್ತ ಸಾಗುವಂತಾಗಬೇಕು, ಅದರ ದಯೆಯಲ್ಲಿ ಇರಬಾರದು. ಆದರೆ ಇದು ಸಾಧ್ಯವಾಗುವುದು ಹೇಗೆ? ಇದಕ್ಕೆ ಉತ್ತರ ಹುಡುಕುತ್ತಾ ಹೋದಂತೆ ಗಾಂಧಿಯವರ ಶಿಷ್ಯ ಕುಮಾರಪ್ಪನವರಲ್ಲಿ ನಿರಂತರ ಸ್ಫೂರ್ತಿಯ ಸೆಲೆಯನ್ನು ಕಂಡುಕೊಂಡರು. 'ನನ್ನ ಸರಳ, ಅಸ್ಪಷ್ಟ ಚಿಂತನೆಗಳು ಸದಾ ಕುಮಾರಪ್ಪನವರ

ಕಾವ್ಯಮಯವಾದ, ತಾತ್ವಿಕ ಚಿಂತನೆಗಳನ್ನು ಹೋಲುತ್ತಿದ್ದವು. ನಾನು ಅವರನ್ನು ಅಣ್ಣನೆಂದೇ ಭಾವಿಸಿರುವೆ. ಅವರ ಕನಸಿನ ಜಗತ್ತು ನನಸಾಗಬೇಕೆಂದು ನಾನು ಮನದುಂಬಿ ಹಾರೈಸುತ್ತೇನೆ.' ಅವರ ಗೌರವ, ಅಭಿಮಾನ ತನ್ನ ಚಿಂತನೆಗಳಿಗೆ ನೀರೆರೆದ ಗುರುವನ್ನು ಅಂಧ ಆರಾಧನೆ ಆಗದಂತೆ ಕರುಣಾ ಜಾಗರೂಕರಾಗಿದ್ದರು. ತಾನು 'ಜೆ.ಸಿ.ಕೆ'ಎಂದೇ ಕರೆಯುವ ಕುಮಾರಪ್ಪನವರನ್ನು ಕರುಣಾ ಹೀಗೆ ವಿವರಿಸುತ್ತಾರೆ: 'ಆದರ್ಶವಾದಿ, ಎಲ್ಲೂ ರಾಜಿಗೆ ಮನಮಾಡದವರು'. ಆದರೆ, ತನ್ನದು ಪಕ್ಕಾ ವಾಸ್ತವ ಚಿಂತನೆ ಎನ್ನುತ್ತಿದ್ದರು ಕರುಣಾ. ಜೆ.ಸಿ.ಕೆ ವಿಚಾರವಾದಿ ಆಸ್ತಿಕರಾಗಿದ್ದರೆ, ಕರುಣಾ ಅಪ್ಪಟ ನಾಸ್ತಿಕರಾಗಿದ್ದರು.

ಈ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಮೊದಲು ಕರುಣಾ ಸಮಗ್ರ ಕಲ್ಯಾಣದ ಕಾಣ್ಕೆ ಏಕೆ ಆಧುನಿಕ ಸಮಾಜದಲ್ಲಿ ಕಣ್ಮರೆಯಾಗಿದೆ ಎಂಬುದನ್ನು ಅರಿಯಲು ಪ್ರಯತ್ನಿಸಿದರು. ಈ ಅನ್ವೇಷಣೆಯಲ್ಲಿ 'ಪ್ರಮಾಣ ಅಥವಾ ಗಾತ್ರ ಆಧಾರಿತ ಅರ್ಥವ್ಯವಸ್ಥೆ'ಯೇ ಎಲ್ಲ ಅವ್ಯವಸ್ಥೆಗೆ ಕಾರಣ ಎಂಬ ತೀರ್ಮಾನಕ್ಕೆ ಬಂದರು.

ಗ್ರಾಹಕ ಉತ್ಪನ್ನಗಳ ಬೆಲೆಗೆ ಎರಡು ಮುಖಗಳಿವೆ. ಒಂದು, ಅದರ 'ಸ್ಥಿರ ಬೆಲೆ'. ಇದು ಅದರ ಉತ್ಪಾದನೆಗೆ ತಗಲುವ ವೆಚ್ಚವನ್ನು ಒಳಗೊಂಡಿರುತ್ತದೆ. ಎರಡನೆಯದು ಉತ್ಪಾದನೆಯ ಗಾತ್ರವನ್ನು ಅವಲಂಬಿಸಿರುವ 'ಅಸ್ಥಿರ ಬೆಲೆ'. ಪ್ರತಿ ಘಟಕದ ವೆಚ್ಚಕಡಿಮೆ ಮಾಡುವ ಹಾಗೂ ಅದರ ಗುಣಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ ಉತ್ಪಾದನೆಯ ಪ್ರಮಾಣವನ್ನು ಹೆಚ್ಚಿಸುವುದಕ್ಕೆ ಪ್ರಮಾಣ ಅಥವಾ ಗಾತ್ರ ಆಧಾರಿತ ಅರ್ಥ ವ್ಯವಸ್ಥೆ ಎಂದು ಹೆಸರು. ಯಂತ್ರಗಳ ಸಹಾಯದಿಂದ ಭಾರೀ ಗಾತ್ರದ ಉತ್ಪಾದನೆ ಮತ್ತು ಇದರಿಂದಾಗುವ ಮಾರುಕಟ್ಟೆಯ ಅವಶ್ಯಕತೆ ವಸಾಹತುಶಾಹಿ ಶಕ್ತಿಗಳಿಗೆ ಸರಿಹೊಂದುತ್ತದೆ. ಆದರೆ, ಭಾರತದಂತಹ ದೇಶಗಳಿಗೆ ಇದು ಸ್ವಲ್ಪವೂ ಸರಿಹೊಂದುವುದಿಲ್ಲ. ಈ ಭಾರೀ ಗಾತ್ರದ ಉತ್ಪಾದನೆ ಎಲ್ಲಿ ಕಚ್ಚಾ ಪದಾರ್ಥಗಳನ್ನು ಹೊರಗಡೆಯಿಂದ ತರಲಾಗುತ್ತದೋ ಮತ್ತು ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೆ ಹೊರದೇಶಗಳಿಗೆ ಸಾಗಿಸಲಾಗುತ್ತದೋ ಅಂತಹ ದೇಶಗಳಲ್ಲಿ ತಾರ್ಕಿಕವಾಗಿ ಸರಿಹೊಂದುತ್ತದೆ. ಅದೇ ಸಮಯದಲ್ಲಿ ಯಂತ್ರಗಳ ಸಹಾಯ ಕಾರ್ಮಿಕರ ಅಗತ್ಯವನ್ನು ಕಡಿಮೆ ಮಾಡುತ್ತದೆ. ಆದರೆ ನಮ್ಮ ದೇಶದಲ್ಲಿ ಭಾರೀ ಕೈಗಾರಿಕೆಗಳ ನಿರ್ಮಾಣಕ್ಕೆ ತೊಡಗಿದಲ್ಲಿ ಮೂಲಭೂತ ಪರಿಸರ ಸಂಬಂಧೀ ಮತ್ತು ಸಾಮಾಜಿಕ ಬೆಲೆ ತೆರಬೇಕಾಗುತ್ತದೆ.

ಈ ಗಾತ್ರ ಅಥವಾ ಪ್ರಮಾಣ ಆಧಾರಿತ ಅರ್ಥವ್ಯವಸ್ಥೆಗೆ ಸವಾಲೆಸೆಯಬಲ್ಲ ಪರ್ಯಾಯ ತಾತ್ವಿಕತೆ ಇದೆಯೇ ಎಂಬುದು, ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ.

ಈ ಪ್ರಶ್ನೆಗೆ ಇನ್ನೂ ಸಮರ್ಪಕವಾದ ಉತ್ತರ ಹುಡುಕುವ ಉದ್ದೇಶದಿಂದ ೧೯೮೨ರಲ್ಲಿ ಕರುಣಾ ಚೆನ್ನೈನ ಐ.ಐ.ಟಿಗೆ ಮರಳಿದರು. ಅಲ್ಲಿಯ ಉದ್ಯೋಗ ಸೃಷ್ಟಿಯ ಮೂಲಕ ಗ್ರಾಮೀಣ ಅಭಿವೃದ್ಧಿ ಸಾಧಿಸುವ ಉದ್ದೇಶ ಹೊಂದಿರುವ ಅಂತರ್ ಶಿಸ್ತೀಯ ಕೇಂದ್ರವಾದ ಗ್ರಾಮೀಣ ಅಭಿವೃದ್ಧಿ ವಿಭಾಗದಲ್ಲಿ ತೀವ್ರವಾಗಿ ಕರುಣಾ ತಮ್ಮನ್ನು ತೊಡಗಿಸಿಕೊಳ್ಳಬಹುದಾಗಿತ್ತು.

ಇದು ಅವರಿಗೆ ಬೇರೆ ಬೇರೆ ಅಧ್ಯಯನ ಶಿಸ್ತುಗಳಲ್ಲಿ ಕೆಲಸ ಮಾಡಲು ಅವಕಾಶ ಕಲ್ಪಿಸಿತು. ಹಲವು ವರ್ಷಗಳಲ್ಲಿ ಅವರು ಇಲೆಕ್ಟ್ರಿಕಲ್ ಇಂಜಿನಿಯರಿಂಗ್, ಗಣಿತ, ಕಂಟ್ರೋಲ್ ಇಂಜನಿಯರಿಂಗ್, ಮ್ಯಾನೇಜ್‌ಮೆಂಟ್ ಮತ್ತು ಜಲಸಂಪನ್ಮೂಲಗಳಿಗೆ ಸಂಬಂಧಿಸಿದ ಸಿವಿಲ್ ಇಂಜಿನಿಯರಿಂಗ್ ಮೊದಲಾದವುಗಳನ್ನು ಬೋಧಿಸಿದರು. ಈ ಎಲ್ಲ ವೈವಿಧ್ಯಮಯ ಅಧ್ಯಯನ ಶಿಸ್ತುಗಳಲ್ಲಿ ಕೆಲಸ ಮಾಡುವುದರ ಪ್ರಮುಖ ಉದ್ದೇಶ ಉದ್ಯೋಗ ಆಧಾರಿತ ಕೈಗಾರಿಕೆಯ ಪರಿಕಲ್ಪನೆಯನ್ನು ಅಭ್ಯಸಿಸುವುದೇ ಆಗಿತ್ತು. ಈ ಕೇಂದ್ರದಲ್ಲಿ, ಪ್ರಾದೇಶಿಕ ಅಭಿವೃದ್ಧಿ ಯೋಜನೆ, ಉದ್ಯೋಗ ಯೋಜನೆ, ಮಹಿಳಾ ಅಭಿವೃದ್ಧಿ, ಸಂಘಟನೆಗಳ ತರಬೇತಿ, ಕಡಿಮೆ ವೆಚ್ಚದ ಮನೆ ನಿರ್ಮಾಣ ಮತ್ತು ಉದ್ಯಮಶೀಲತಾ ಅಭಿವೃದ್ಧಿಯಂತಹ ಕ್ಷೇತ್ರದಲ್ಲಿ ಕರುಣಾ ಸ್ವತಃ ತರಬೇತಿ ಹೊಂದಿದರು.

ಈ ಕೇಂದ್ರದಲ್ಲಿ ಟಿ.ಕೆ(ಕರುಣಾರನ್ನು ಅವರ ಗೆಳೆಯರು ಮತ್ತು ವಿದ್ಯಾರ್ಥಿಗಳು ಹೀಗೇ ಕರೆಯುತ್ತಿದ್ದುದು) ಈ ತರಬೇತಿಗಳ ಫಲಸ್ವರೂಪವಾಗಿ, ತಮ್ಮ ಹೊಸ ರೀತಿಯ ಚಿಂತನೆಗಳಿಗೆ ಪ್ರಸಿದ್ಧರಾದರು. ಈ ಅಧ್ಯಯನ, ತರಬೇತಿ ಕೌಶಲಗಳೂ ಬಡತನದ ಸ್ವರೂಪ ಮತ್ತು ಅದಕ್ಕೆ ಪರಿಹಾರ ಕಂಡುಹಿಡಿಯುವಲ್ಲಿ ಸಹಾಯ ಮಾಡುತ್ತಿದ್ದುದನ್ನು ಕಂಡು, ಕರುಣಾ ಶಿಷ್ಯರ ಸಂಖ್ಯೆ ಹೆಚ್ಚಿತು. ಅವರ ಬಹಳಷ್ಟು ವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ಗ್ರಾಮಗಳಲ್ಲಿ ಬೇರೆ ಬೇರೆ ಯೋಜನೆಗಳಲ್ಲಿ ಕಾರ್ಯನಿರ್ವಹಿಸತೊಡಗಿದರು.

ನಿಧಾನವಾಗಿ, ಈ ಪ್ರಕ್ರಿಯೆಯಲ್ಲಿ ಕರುಣಾ 'ಗಾತ್ರ ಅಥವಾ ಪ್ರಮಾಣ ಆಧಾರಿತ ಅರ್ಥವ್ಯವಸ್ಥೆ'ಯ ಸಮಸ್ಯೆಗೆ ಉತ್ತರ ಕಂಡುಕೊಂಡರು. ಇದನ್ನು ಅವರು 'ಸಮುದಾಯ ಜಾಲ'(ನೆಟ್‌ವರ್ಕಿಂಗ್) ಎಂದು ಕರೆದರು. ಇದು ಗ್ರಾಮೀಣ ಕೈಗಾರಿಕಾ ಚಟುವಟಿಕೆಗಳು ಕೇಂದ್ರವಾಗುಳ್ಳ ಬಹುಮುಖಿ ಆಯಾಮವುಳ್ಳ ಪರಿಕಲ್ಪನೆಯಾಗಿದ್ದು, ಗ್ರಾಮಕೇಂದ್ರಿತ ಅರ್ಥವ್ಯವಸ್ಥೆಯನ್ನು ಪೋಷಿಸುತ್ತದೆ. ಇದು ಸುಸ್ಥಿರವಾಗಿದ್ದು, ಪರಿಸರ ಸ್ನೇಹಿಯಾಗಿದೆ. ಪ್ರಸ್ತುತ ಆಡಂಸ್ಮಿತ್ ಪರಿಭಾಷೆಯ ಮಾರುಕಟ್ಟೆ ಅರ್ಥವ್ಯವಸ್ಥೆಯಲ್ಲಿಯೂ ಇದು ಬದುಕಬಲ್ಲದು. ಏಕೆಂದರೆ, ಇಲ್ಲಿ ಉತ್ಪಾದನಾ ವೆಚ್ಚ ಅಗ್ಗವಾಗಿರುತ್ತದೆ. ಅಷ್ಟೇ ಅಲ್ಲ; ಇದು ಜಾಗತೀಕರಣಕ್ಕೂ ಪರಿಣಾಮಕಾರಿಯಾಗಿ ಸವಾಲೆಸೆಯಬಲ್ಲದು.

ಪ್ರಾಯೋಗಿಕವಾಗಿ ಸ್ವದೇಶಿ

ಕಟ್ಟಾ ಸ್ವದೇಶಿಯಾಗಿರುವುದು ಸಹಾ 'ಸಮುದಾಯ ಜಾಲ' ಪರಿಕಲ್ಪನೆಯನ್ನು ಇನ್ನೊಂದು ರೀತಿಯಲ್ಲಿ ಅರ್ಥೈಸುವುದಾಗಿರುತ್ತದೆ. ೨೧ನೆಯ ಶತಮಾನದಲ್ಲಿ ಸಂಪೂರ್ಣ ಸ್ವಾವಲಂಬಿ ಸಮಾಜಗಳಿರುವುದು ಸಾಧ್ಯವಿಲ್ಲ ಎಂಬುದನ್ನು ಗುರುತಿಸುವುದರ ಜತೆಗೆ ಗ್ರಾಮ ಸಮುದಾಯ ಗುಂಪುಗಳು ಪರಸ್ಪರ ಸಹಕಾರದಿಂದ ಸ್ವಾವಲಂಬಿಯಾಗುವಂತೆ ಮಾಡುವುದು ಇದರಲ್ಲಿ ಸೇರಿದೆ. ಈ ಗ್ರಾಮಸಮುದಾಯ ಜಾಲಗಳು ಜೀವನಾವಶ್ಯಕ ವಸ್ತುಗಳನ್ನು ಉತ್ಪಾದಿಸುವುದಲ್ಲದೇ ಇತರ ಸಮುದಾಯಜಾಲಗಳಿಗೂ ರಫ್ತು ಮಾಡಲು ಸಾಧ್ಯವಿದೆ.

ಜಿಲ್ಲಾ ಮಟ್ಟದಲ್ಲಿ ಕಾರ್ಯಸಾಧುವೆನಿಸುವ ಒಂದು ಸಮುದಾಯ ಜಾಲ ಮತ್ತು ಅದರ ಕೆಳಗಿನ ಹಂತಗಳಲ್ಲಿ ಉಪಸಮುದಾಯ ಜಾಲ ಸ್ಥಾಪಿಸಲು ಸಾಧ್ಯವಿದೆ.

'ನಾವು ಬಹುರಾಷ್ಟ್ರೀಯ ಕಂಪೆನಿಗಳು ಹಾಗೂ ಆದರ್ಶ ಗ್ರಾಮೀಣ ಕೈಗಾರಿಕೆಗಳ ನಡುವಣ ಸುವರ್ಣ ಮಧ್ಯಮ ದಾರಿಯನ್ನು ಆಯ್ದುಕೊಳ್ಳಬೇಕು' ಎಂದು ಕರುಣಾಕರನ್ ತಿಳಿಸುತ್ತಾರೆ. ಆಹಾರ, ಬಟ್ಟೆ, ವಸತಿಯಿಂದ ಹಿಡಿದು ಜೀವನಾವಶ್ಯಕವೆನಿಸುವ ಎಲ್ಲ ವಸ್ತುಗಳೂ ಹಳ್ಳಿಯಲ್ಲಿಯೇ ತಯಾರಾಗಬೇಕು. ಆದರೆ ಎಲ್ಲರಿಗೂ ಒಂದೇ ವಿಧದ ಪೇಜ್ ಮೇಕರ್ ತಂತ್ರಜ್ಞಾನ ಸರಿಹೊಂದುವುದಿಲ್ಲ. ಆದುದರಿಂದ ಅದನ್ನು ಸಿಟಿಗಳಲ್ಲಿ ಉತ್ಪಾದಿಸಬಹುದು. ಎಲ್ಲರಿಗೂ ಅವಶ್ಯಕ ಪದಾರ್ಥಗಳು ಆದಷ್ಟು ಸನಿಹದಲ್ಲಿಯೇ ತಯಾರಾಗಬೇಕು ಎಂಬುದೇ ಗಾಂಧೀಜಿಯವರ ಸ್ವದೇಶೀ ಪರಿಕಲ್ಪನೆಯಾಗಿತ್ತು. 'ಗಾಂಧೀಜಿಯವರು ತಮ್ಮ ಕಾಲದಲ್ಲಿ ಇಂತಹ ೨೪ ಪದಾರ್ಥಗಳನ್ನು ಗ್ರಾಮೀಣ ಕೈಗಾರಿಕೆಗಳಿಗಾಗಿ ಪಟ್ಟಿ ಮಾಡಿದ್ದರು. ಆದರೆ, ಅದು ಈಗ ಹಳೆಯದೂ ಅಪ್ರಸ್ತುತವೂ ಆಗಿದೆ. ಹೀಗಾಗಿ ನಾನು ಸಮಕಾಲೀನ ವಾಸ್ತವ ಮತ್ತು ಅಗತ್ಯಗಳ ಆಧಾರದ ಮೇಲೆ ಒಂದು ವ್ಯವ್ಯವಸ್ಥೆಯನ್ನು ರೂಪಿಸಿದ್ದೇನೆ'.

ಚೆನ್ನೈ ಐ.ಐ.ಟಿಯ ಟೆಕ್ನೋ ಎಕನಾಮಿಕ್ ಅಧಿಕಾರಿಯಾದ ಕರುಣಾ ಮತ್ತವರ ತಂಡ ಈ ರೀತಿಯ ೩೫೦ ಪದಾರ್ಥಗಳನ್ನು ಗುರುತಿಸಿತು. ಈ ಪದಾರ್ಥಗಳು ೨೪ ದೊಡ್ಡ ವಿಭಾಗಗಳಡಿಯಲ್ಲಿ ಬರುತ್ತವೆ. ಇವನ್ನು ಸುಲಭವಾಗಿ ಹಳ್ಳಿಗಳಲ್ಲಿ ತಯಾರಿಸಬಹುದಾಗಿದೆ. ಇವುಗಳಲ್ಲಿ ಬಹುಪಾಲು ವೈಯಕ್ತಿಕ ಬಳಕೆ ಅಥವಾ ಮನೆಬಳಕೆಯವು. ಉದಾಹರಣೆಗೆ, ಪಾತ್ರೆಗಳು, ಸೋಪು, ಕುಂಕುಮ, ಕಡ್ಡಿಪೊಟ್ಟಣ, ಬಟ್ಟೆ, ಬೂಟುಗಳು ಇತ್ಯಾದಿ. ತಂಡದ ಪ್ರಯತ್ನದಿಂದ ಈ ಪ್ರಯೋಗ ಆಂಶಿಕವಾಗಿ ಸಫಲವಾಯಿತು ಕೂಡಾ. ಈ ತಂಡವೇ ೧೯೮೪ರಲ್ಲಿ step-society for total employment planning-ಎಂಬ ಸ್ವಯಂ ಸೇವಾ ಸಂಸ್ಥೆಯಾಗಿ ನೋಂದಣಿಯಾಯಿತು. ಈ ಸಂಘವು ಬದ್ಧತೆಯುಳ್ಳ ಸುಶಿಕ್ಷಿತರನ್ನು ಮತ್ತು ಸಮಾಜಸೇವಕರನ್ನು ಒಂದೆಡೆ ಕಲೆಹಾಕಿತು. ಜೊತೆಗೆ ಆಲೋಚನೆ ಮತ್ತು ಅದಕ್ಕನುಗುಣವಾದ ಕ್ರಿಯೆಯನ್ನು ಪ್ರೋತ್ಸಾಹಿಸುವ ವೇದಿಕೆ ಒದಗಿಸುವ ಉದ್ದೇಶವನ್ನು ಈ ಸಂಸ್ಥೆ ಹೊಂದಿತ್ತು. ಐ.ಐ.ಟಿಯಂತಹ ಸಂಸ್ಥೆಗಳು ಗ್ರಾಮೀಣ ಅಭಿವೃದ್ಧಿ ಚಟುವಟಿಕೆಗಳಿಗೆ ಸೂಕ್ತವಾದುದಲ್ಲ ಎಂದು ಈ ಹಿಂದೆ ನಂಬಲಾಗಿತ್ತು. ಕರುಣಾ ಈ ಸಂಘಟನೆಯ ಮೊದಲ ಅಧ್ಯಕ್ಷರಾದರು. ಗ್ರಾಮೀಣ ಉದ್ಯೋಗಗಳಿಗಿಂತ ಗ್ರಾಮೀಣ ಚಟುವಟಿಕೆಗಳತ್ತ ಗಮನ ನೀಡಬೇಕಾಗಿದೆ ಎಂಬುದೇ ಈ ಎಲ್ಲ ಪ್ರಯತ್ನಗಳ ಹಿಂದಿನ ನಂಬಿಕೆಯಾಗಿತ್ತು.

ಇವೆಲ್ಲವೂ ಸರಿ, ಆದರೆ, ಈ ತಿಳುವಳಿಕೆ ಭೂರಹಿತ ಕೃಷಿ ಕಾರ್ಮಿಕರಿಗೆ ಹಾಗೂ ಸಣ್ಣ ರೈತರಿಗೆ ಹೇಗೆ ಸಹಕಾರಿಯಾದೀತು? ಪ್ರಸ್ತುತ ಉತ್ಪಾದನೆಯ ಅವಕಾಶ ದೊರೆಯುತ್ತಿರುವುದು ಭೂಮಾಲೀಕರಿಗೇ. ಭೂರಹಿತರು ಮತ್ತು ಬಡರೈತರಿಗೆ ಈ ಬಗ್ಗೆ ತಿಳುವಳಿಕೆ ಇರುವುದಿಲ್ಲ; ಭೂಮಾಲೀಕರೊಂದಿಗೆ ಸ್ಪರ್ಧಿಸಲು ತ್ರಾಣವೂ ಇರುವುದಿಲ್ಲ. ತಿಳುವಳಿಕೆ ಮತ್ತು ಶಕ್ತಿ ಇವೆರಡೂ ಕೆಲವರಲ್ಲಿಯೇ ಕೇಂದ್ರೀಕೃತವಾಗಿರುವ ಕಾರಣ ಇದರ

ಪರಿಣಾಮ ಅನಿವಾರ್ಯವಾಗಿ ಶೋಷಣೆಯಿಂದ ಕೂಡಿದ್ದು ದಮನಕಾರಿಯಾಗಿರುತ್ತದೆ. ಗ್ರಾಮ ಸಮುದಾಯುವನ್ನು ನಾವು, ಜನರು ತಳದಲ್ಲಿರುವ, ಕ್ಷೇತ್ರಾಭಿವೃದ್ಧಿ ಅಧಿಕಾರಿ ಮೇಲ್ಭಾಗದಲ್ಲಿರುವ ಪಿರಮಿಡ್ ಆಗಿ ಕಾಣುತ್ತೇವೆ ಎನ್ನುತ್ತಾರೆ ಕರುಣಾ. ಪ್ರಸ್ತುತ ಅಧಿಕಾರ ಮತ್ತು ಸಂಪತ್ತು ಮೇಲಿನಿಂದ ಕೆಳಕ್ಕೆ ಪ್ರವಹಿಸುತ್ತಿದೆ. ಯೋಜನೆಗಳ ಮಾಹಿತಿ ಮತ್ತು ಆರ್ಥಿಕ ಸಂಪನ್ಮೂಲ ಇವೆರಡೂ ಕ್ಷೇತ್ರಾಭಿವೃದ್ಧಿ ಅಧಿಕಾರಿ ಬಳಿಯೇ ಇದ್ದು, ಜನರು ಕೇವಲ ಆತನಿಂದ ಸ್ವೀಕರಿಸುವ ಸ್ಥಾನಕ್ಕಿಳಿದುಬಿಡುತ್ತಾರೆ. ಇದರ ಬದಲಾಗಿ, ನೈಸರ್ಗಿಕ ಸಂಪನ್ಮೂಲಗಳ ಮೇಲಿನ ನಿಯಂತ್ರಣ, ನಿರ್ಧಾರ ತೆಗೆದುಕೊಳ್ಳುವ ಹಕ್ಕು ಮತ್ತು ಹಣ ಸಮುದಾಯದ ಬಳಿ ಇರಬೇಕು ಎಂದು ಕರುಣಾ ಅಭಿಪ್ರಾಯಪಡುತ್ತಾರೆ. ಕ್ಷೇತ್ರಾಭಿವೃದ್ಧಿ ಅಧಿಕಾರಿ ಕೆಲವು ಮಾಹಿತಿಯನ್ನು ನೀಡುವ ಮತ್ತು ಸಂಯೋಜನೆಯ ಕೆಲಸಕ್ಕೆ ತನ್ನನ್ನು ಸೀಮಿತಗೊಳಿಸಿಕೊಳ್ಳಬೇಕು.

ಒಂದೊಮ್ಮೆ ಇದು ಸಾಧ್ಯವಾದರೆ, ಕರುಣಾ ಹೇಳುವಂತೆ, ಬದಲಾವಣೆಯ ಹಾದಿ ತೆರೆದುಕೊಳ್ಳುತ್ತದೆ ಮತ್ತು ಗ್ರಾಮೀಣ ತಂತ್ರಜ್ಞಾನ ಹಾಗೂ ಸಾಮಾಜಿಕ ಉದ್ಯಮಶೀಲತೆಯ ಹಾದಿ ಸುಗಮವಾಗುತ್ತದೆ. ಭೂರಹಿತ ಕೃಷಿ ಕಾರ್ಮಿಕರು ಮತ್ತು ಸೌಲಭ್ಯ ವಂಚಿತರಿಗೆ ಬಡತನ ನಿರ್ಮೂಲನಾ ಕಾರ್ಯಕ್ರಮದಡಿಯಲ್ಲಿ ಒಂದಷ್ಟು ದಕ್ಷಿಣೆಯನ್ನೋ ಭಿಕ್ಷೆಯನ್ನೋ ಕೊಡುವ ಬದಲಿಗೆ, ಗ್ರಾಮೀಣ ತಂತ್ರಜ್ಞಾನ ಕೇಂದ್ರಗಳು ಕೌಶಲ ಮತ್ತು ತಾಂತ್ರಿಕತೆಯನ್ನು ಕೊಡುತ್ತವೆ.

ಸಾಮಾಜಿಕ ಉದ್ಯಮಶೀಲತಾ ಕಾರ್ಯಕ್ರಮಗಳ ಮೂಲಕ ಗ್ರಾಮೀಣ ತಂತ್ರಜ್ಞಾನ ಕೇಂದ್ರಗಳು ಹೊಸ ಮಾದರಿಯ ಆರ್ಥಿಕತೆಯನ್ನು ಬೆಳೆಸುತ್ತವೆ. ಇದು ಹೇಗೆ ಎಂಬುದನ್ನು ಕರುಣಾ ಇಂಜಿನಿಯರ್‌ಗಳ ವಿವರವಾದ, ಸಂಕೀರ್ಣ ನಕಾಶೆಗಳಿಗೂ ಸವಾಲೆಸೆಯುವಂತೆ, ಚಿತ್ರ ಮತ್ತು ನಕಾಶೆಗಳ ಮೂಲಕ ಸಿದ್ಧಮಾಡಿ ತೋರಿಸಿದರು. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಗ್ರಾಮೀಣ ಭಾಗಕ್ಕೆ ತೆಗೆದುಕೊಂಡು ಹೋಗಬೇಕೆಂಬ ಭರಾಟೆಯಲ್ಲಿ ಅಪಕ್ವವಾದ ಚಿಂತನೆಗಳನ್ನು ನಾವು ನೇರವಾಗಿ ಹಳ್ಳಿಗಳಿಗೆ ಒಯ್ಯುತ್ತಿದ್ದೇವೆ. ಈಗ ಆಗಬೇಕಾಗಿರುವುದು 'ಗಮನ'ದ ವರ್ಗಾವಣೆ. ಒಬ್ಬ ತಂತ್ರಜ್ಞನ ಜವಾಬ್ದಾರಿ, ಜನರೊಂದಿಗೆ ಕೆಲಸ ಮಾಡುತ್ತಾ ಅಲ್ಲಿ ಉದಿಸುವ ಅನುಭವದತ್ತ ಗಮನವನ್ನು ಕೇಂದ್ರೀಕರಿಸುವುದೇ ಹೊರತು, ಸಿದ್ಧಚಿಂತನೆಗಳನ್ನು ಅದು ಇರುವಂತೆಯೇ ಹಳ್ಳಿಯಲ್ಲಿ ಅಳವಡಿಸಲು ಹೊರಡುವುದಲ್ಲ.

ಚೆನ್ನೈ ಐ.ಐ.ಟಿಯಲ್ಲಿ ಕೆಲಸ ಮಾಡುತ್ತಿದ್ದ ಅವಧಿಯಲ್ಲಿ ಕರುಣಾರ ಚಿಂತನೆಯ ಮೂಸೆಯಲ್ಲಿ ಮೂಡಿದ ಅನೇಕ ಗ್ರಾಮೀಣ ಯೋಜನೆಗಳಿಗೆ, ಈ ಸಿದ್ಧಾಂತಗಳು ಹಿನ್ನೆಲೆಯಾಗಿದ್ದವು. ಪೂರ್ಣ ಪ್ರಮಾಣದಲ್ಲಿ ಗ್ರಾಮೀಣ ಕೆಲಸಗಳಲ್ಲಿ ತೊಡಗಿಕೊಳ್ಳುವ ಅವಕಾಶ ದೊರೆತಾಗ ಕರುಣಾ ತಡಮಾಡಲಿಲ್ಲ. ಇದು ಅವರನ್ನು ದಿಂಡಿಗಲ್‌ನ ಗಾಂಧಿಗ್ರಾಮ ಗ್ರಾಮೀಣ ವಿಶ್ವವಿದ್ಯಾಲಯಕ್ಕೆ ಕೊಂಡೊಯ್ದಿತು. ಅಲ್ಲಿ ಅವರು ಗ್ರಾಮೀಣ ತಂತ್ರಜ್ಞಾನ ಕೇಂದ್ರವೊಂದನ್ನು ಸ್ಥಾಪಿಸಿದರು.

ವಾಲಯಪಟ್ಟಿ

ದಿಂಡಿಗಲ್ ದೇವಳಗಳ ನಗರವಾದ ಮದುರೈನಿಂದ ಉತ್ತರಕ್ಕೆ ೬೦ ಕಿ.ಮೀ ದೂರದಲ್ಲಿ ಕಲ್ಲುಬೆಟ್ಟದಿಂದ ಸುತ್ತುವರೆದಿರುವ ನಗರ. ಗಾಂಧಿ ಗ್ರಾಮ ಗ್ರಾಮೀಣ ವಿಶ್ವವಿದ್ಯಾಲಯ, ದಿಂಡಿಗಲ್–ಮದುರೈ ರಾಷ್ಟ್ರೀಯ ಹೆದ್ದಾರಿ ಬದಿಯ ವಿಶಾಲ ಪ್ರದೇಶದಲ್ಲಿ ನೆಲೆಗೊಂಡಿದೆ. ಹಗಲೂ ರಾತ್ರಿ, ಈ ಹೆದ್ದಾರಿಯಲ್ಲಿ ಬಸ್ಸುಗಳು ಹುಚ್ಚು ಹಿಡಿದಂತೆ ಸಂಚರಿಸುತ್ತಲೇ ಇರುತ್ತವೆ. ಅದೇ ರಸ್ತೆಯ ಬದಿಯಲ್ಲೇ ಕಲಾತ್ಮಕ ರೇಶ್ಮೆ ಸೀರೆ ಮತ್ತು ಹತ್ತಿಯ ಉಡುಪುಗಳಿಗೆ ಹೆಸರಾದ ಚಿನ್ನಾಲಪಟ್ಟಿ ಗ್ರಾಮ ಇದೆ. ವಿಶ್ವವಿದ್ಯಾಲಯದ ಆಚೆ, ಗುಡ್ಡದ ಬುಡದಲ್ಲಿ ಇರುವುದೇ ವಾಲಯಪಟ್ಟಿ ಗ್ರಾಮ.

ಕುರುಚಲು ಗಿಡಗಳು, ಪುಟ್ಟ ತೊರೆಗಳಿಂದ ಕೂಡಿದ ವಾಲಯಪಟ್ಟಿ ಗಾಂಧಿ ಗ್ರಾಮ ವಿಶ್ವವಿದ್ಯಾಲಯದಿಂದ ಎರಡು ಕಿ.ಮೀ ದೂರದಲ್ಲಿದೆ. ಗ್ರಾಮದ ಅಂಚಿನಲ್ಲಿ ಹಸಿರು ಪೈರು ಕಂಗೊಳಿಸುತ್ತದೆ. ಇದರ ನಡುವೆಯೇ ಹೊಳೆಯುವ ಕಪ್ಪು ಶಿಲೆಯಲ್ಲಿ ಕೆತ್ತಲಾದ ಚೌಕಾಕಾರದ ಒಂದು ಶಾಸನವಿದೆ. ಇದರಲ್ಲಿ ಅಪ್ರತಿಮ ಬಿಲ್ಗಾರನೂ, ಬೇಟೆಗಾರನೂ ಮತ್ತು ಶೈವ ಸಂತನೂ ಆದ ಕಣ್ಣಪ್ಪನ್ ನಾಯನಾರ್ ಕುರಿತ ವಿವರ ಇದೆ. ಹಲವಾರು ತಲೆಮಾರುಗಳ ಹಿಂದೆ, ಜನರು ಈಗಿರುವುದಕ್ಕಿಂತಲೂ ಸೂಕ್ಷ್ಮ ಮತ್ತು ಉನ್ನತ ಮಟ್ಟದ ಕೌಶಲ ಹೊಂದಿದ್ದಾಗಿ ಈ ಶಾಸನ ತಿಳಿಸುತ್ತದೆ. ಆ ಕಾಲದಲ್ಲಿ ನಿಸರ್ಗ ಎಷ್ಟು ಸಮೃದ್ಧವಾಗಿತ್ತು ಎಂಬುದನ್ನು ಇದು ವಿವರಿಸುತ್ತದೆ.

ಈಗ ವಾಲಯಪಟ್ಟಿಯ ನಿಸರ್ಗ ಚೇತರಿಸಿಕೊಳ್ಳಲು ಅಲ್ಲಿನ ಜನರ ಸಹಕಾರ ಬೇಕಾಗಿದೆ. ಈ ಗ್ರಾಮದಲ್ಲಿ ನೆಡಲಾದ ಸಣ್ಣ ಸಣ್ಣ ಗಿಡಗಳ ರಕ್ಷಣೆಗಾಗಿ ಅವುಗಳ ಸುತ್ತ ಮುಳ್ಳಿನ ಬೇಲಿಯನ್ನು ನೆಡಲಾಗಿದೆ. ಗ್ರಾಮೀಣ ತಂತ್ರಜ್ಞಾನ ಕೇಂದ್ರ ನಡೆಸುತ್ತಿರುವ world citizen schoolಗೆ ಅಲ್ಲಿನ ಮಕ್ಕಳು ಹೋಗುತ್ತಿದ್ದಾರೆ ಮಾತ್ರವಲ್ಲ; ಅವರು ತಮ್ಮ ಕುಟುಂಬಗಳ ಆಶಾಕಿರಣಗಳೂ ಆಗಿದ್ದಾರೆ. ಹಗಲಿನ ವೇಳೆ ಹಳ್ಳಿಯ ಒಂದು ಬದಿಯಿಂದ ಡಿಸ್ಕೋ ಸಂಗೀತ ಅಬ್ಬರಿಸುತ್ತಿರುತ್ತದೆ. ಕೆಲವು ಮನೆಗಳಲ್ಲಿ ರಿಪೇರಿ ನಡೆಯುತ್ತಿದೆ, ಇನ್ನು ಕೆಲವು ಹೊಸದಾಗಿ ನಿರ್ಮಾಣಗೊಳ್ಳುತ್ತಿವೆ. ವಾಲಯಪಟ್ಟಿ ಯಾವತ್ತೂ ಹೀಗೆ ಇರಲಿಲ್ಲ.

೧೯೯೮ರಲ್ಲಿ ಈ ಕ್ಯಾಂಪಸ್‌ಗೆ ಕರುಣಾ ಬಂದಾಗ, ವಾಲಯಪಟ್ಟಿ ಒಂದು ಕೊಳಕು ಮತ್ತು ಅಪಾಯಕಾರಿಯಾದ ಹಳ್ಳಿ– 'ಇದರ ಗೊಡವೆಗೆ ಬರಬೇಡಿ' ಎಂದು ತಿಳಿಸಲಾಗಿತ್ತು. ಕರುಣಾ ತಮ್ಮ ಪ್ರಯೋಗಗಳಿಗೆ ಇದನ್ನು ಕೇಂದ್ರವಾಗಿರಿಸಿಕೊಳ್ಳಲು ಈ ಮಾತು ಸಾಕಾಯಿತು. ಒಂದಾನೊಂದು ಕಾಲದಲ್ಲಿ ಗಾಂಧಿಗ್ರಾಮ ಗ್ರಾಮೀಣ ವಿಶ್ವವಿದ್ಯಾಲಯ, ಹಲವಾರು ಕಲ್ಯಾಣ ಯೋಜನೆಗಳ ಮೂಲಕ ಈ ಗ್ರಾಮವನ್ನು ಮೇಲೆತ್ತಲು ಹೋಗಿ ಕೊನೆಯಲ್ಲಿ ಕೈಬಿಟ್ಟಿತ್ತು. ಸ್ಥಳೀಯರಲ್ಲಿ ಸುಪ್ತವಾಗಿರುವ ಕ್ರಿಯಾಶೀಲತೆ ಮತ್ತು ಉದ್ಯಮಶೀಲತೆಗಳನ್ನು ಗುರುತಿಸಿ, ಅವರನ್ನು ಈ ಪ್ರಯತ್ನಗಳಲ್ಲಿ ತೊಡಗಿಸಿಕೊಳ್ಳದೇ ಇರುವುದೇ ಇದರ ವೈಫಲ್ಯಕ್ಕೆ ಕಾರಣ ಎಂದು ಕರುಣಾ ನಂಬಿದರು. ಇವುಗಳನ್ನು ಸಾಧಿಸಿಯೇ ತೀರಲು ಅವರು ವಾಲಯಪಟ್ಟಿಯತ್ತ ನಡೆದರು.

ಕರುಣಾಗೆ ಸಿಕ್ಕ ಎಚ್ಚರಿಕೆಗಳಲ್ಲಿ ಉತ್ಪ್ರೇಕ್ಷೆಯೇನೂ ಇರಲಿಲ್ಲ. ವಾಲಯಪಟ್ಟಿ ಸಹಿಸಲಸಾಧ್ಯವಾದ ಕೊಳಕು ಹಳ್ಳಿಯಾಗಿತ್ತು; ಅಲ್ಲಿನ ಜನರ ದೈನಂದಿನ ಜೀವನ ಜಗಳಗಳಲ್ಲಿ ಮುಳುಗಿಹೋಗಿತ್ತು. ಬಹುತೇಕ ನಿರುದ್ಯೋಗಿಗಳು ಸಮೀಪದ ಗುಡ್ಡದಿಂದ ಮರಕಡಿದು ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದರು. ಸಾರಾಯಿ ತಯಾರಿಕೆ ಮತ್ತು ಮಾರಾಟ ಇಲ್ಲಿನ ಜನರ ಪ್ರಮುಖ ಉದ್ಯೋಗವಾಗಿತ್ತು. ಇದರಿಂದ ಆಗಾಗ್ಗೆ ಜಗಳ, ಹೊಡೆದಾಟಗಳು ನಡೆದು ಪೊಲೀಸ್ ಠಾಣೆಯವರೆಗೂ ಹೋಗುತ್ತಿತ್ತು.

ಹೀಗಾಗಿ ಕರುಣಾರ ಸುಧಾರಣೆಯ ಉತ್ಸಾಹಕ್ಕೆ ಇಡೀ ಗ್ರಾಮವೇ ಒಂದು ಪರೀಕ್ಷಾ ಕಣವಾಯಿತು. ಅವರು ತಮಗೆ ನೀಡಿದ ಪ್ರಾಧ್ಯಾಪಕರ ವಸತಿಗೃಹವನ್ನು ಬಿಟ್ಟು ಹಳ್ಳಿಯಲ್ಲಿಯೇ ಬಂದು ನೆಲೆಸಿದರು. ವಾಲಯಪಟ್ಟಿಯಲ್ಲಿ ಅವರಿಗೆ ಆರಂಭದ ದಿನಗಳಲ್ಲಿ ಹತ್ತಿರವಾದರವರಲ್ಲಿ ಪಂಚವರ್ಣಂ ಒಬ್ಬಳು. ತನ್ನ ತಂದೆ ಕೈಬಿಟ್ಟ ನಂತರ ತಾಯಿ, ಆರು ಮಕ್ಕಳನ್ನು ಬೆಳೆಸಲು ನಡೆಸುತ್ತಿದ್ದ ಹೋರಾಟವನ್ನು ಆಕೆ ಕಣ್ಣಾರೆ ಕಂಡಿದ್ದಳು. ಈಗ ಪಂಚವರ್ಣಂ ಕೂಡಾ ಗಂಡನಿಂದ ಬೇರ್ಪಟ್ಟಿದ್ದಳು. ಕರುಣಾ ವಾಲಯಪಟ್ಟಿಯಲ್ಲಿ ಕಾಲಿಡುವ ಸಮಯದಲ್ಲಿ ಪಂಚವರ್ಣಂ ತನ್ನ ಜೀವನವನ್ನು ಸಾಗಿಸಲು ಮಾರ್ಗವೊಂದನ್ನು ಅರಸುತ್ತಿದ್ದಳು. ಮೊದಲಿಗೆ ತನ್ನ ಹೆಸರು ಬರೆಯುವುದನ್ನು ಕಲಿಯುವುದು ಮತ್ತು ಬಸ್ಸಿನ ಚಿಹ್ನೆಗಳನ್ನು ತಿಳಿಯುವುದು ಅಗತ್ಯ ಎಂದು ಅವಳಿಗೆ ಅನಿಸಿತು.

ಪಂಚವರ್ಣಂ ಒಬ್ಬಳೇ ಅಲ್ಲ, ಅವಳ ರೀತಿಯಲ್ಲೇ ಇನ್ನೂ ಅನೇಕ ಮಹಿಳೆಯರು ಓದು, ಬರೆಹ ಕಲಿಯಲು ಉತ್ಸುಕರಾಗಿದ್ದರು. ಆದ್ದರಿಂದ ಕರುಣಾ ೨೪ ಜನ ವಯಸ್ಕ ಮಹಿಳೆಯರನ್ನೊಳಗೊಂಡ ಒಂದು ಸಾಕ್ಷರತಾ ಕೇಂದ್ರವನ್ನು ಆರಂಭಿಸಿದರು. ಈ ಕೇಂದ್ರದ ಬಹುತೇಕ ವಿದ್ಯಾರ್ಥಿಗಳು ತಮ್ಮ ಮನೆಗಳಲ್ಲಿ ಹೆಚ್ಚಿನ ವಿರೋಧ ಎದುರಿಸಬೇಕಾಯಿತು. ಆದರೆ ಅವರ ನಿರ್ಧಾರ ಮತ್ತು ಉತ್ಸಾಹ ಸಾಂಕ್ರಾಮಿಕ ಗುಣವುಳ್ಳದ್ದಾಗಿ ಒಬ್ಬರಿಂದೊಬ್ಬರಿಗೆ ಹರಡಿತು.

ಎಲ್ಲರೂ ಅಸೂಯೆ ಪಡುವಂತೆ ಕರುಣಾರ ಸಾಕ್ಷರತಾ ಕೇಂದ್ರ ಬೆಳೆಯಿತು. ಆ ಗ್ರಾಮದ ಗಂಡಸರೂ 'ನಮ್ಮನ್ನು ಸೇರಿಸಿಕೊಳ್ಳಿ' ಎಂಬ ಬೇಡಿಕೆ ಸಲ್ಲಿಸಿದರು. ಶೀಘ್ರದಲ್ಲೇ world citizenship school ಮತ್ತು merriland night school ತಂತ್ರಜ್ಞಾನ ಕೇಂದ್ರದ ಸಿಬ್ಬಂದಿಯ ನೆರವಿನಿಂದ ಅಸ್ತಿತ್ವಕ್ಕೆ ಬಂದಿತು. ಈ ತೊಡಗಿಸಿಕೊಳ್ಳುವಿಕೆ ಹೆಚ್ಚಿದಂತೆ ಕೆಲವು ಅನಿರೀಕ್ಷಿತ ಬದಲಾವಣೆಗಳು ಉಂಟಾದವು.

ಆವರೆಗೂ ತಂಗದುರೈ, ಆ ಗ್ರಾಮದ ಮಹಾ ಕುಡುಕರಲ್ಲಿ ಒಬ್ಬನಾಗಿದ್ದ. ಮಾತ್ರವಲ್ಲ; ಆತ ಸಾರಾಯಿ ತಯಾರಕನೂ ಆಗಿದ್ದ. ಒಂದು ದಿನ ಆತ ಕರುಣಾ ನಡೆಸುತ್ತಿದ್ದ ಶಾಲೆಗೆ ನುಗ್ಗಿ, ಇತರೆ ಯುವಕರ ಜತೆ ಸೇರಲು ಬಯಸಿದ. ಆತ ಕುಡಿಯದೆ ತರಗತಿಗೆ ಬಂದು ಸಂವಾದಕ್ಕೆ ತೊಡಗಿಕೊಂಡಾಗಲೇ ಈ ದಢೂತಿ ತಂಗದುರೈಗೆ ನಾಜೂಕಾದ ನಗುವ ಕಣ್ಣುಗಳೂ ಮತ್ತು ಕುಳಿಗಳೂ ಇವೆ ಎಂಬುದು ಎಲ್ಲರಿಗೂ ತಿಳಿದದ್ದು! ತಂಗದುರೈ ೬ನೆಯ ತರಗತಿಯವರೆಗೆ

ಓದಿದ್ದ ಮಾತ್ರವಲ್ಲ, ಆವರೆಗೆ ೧೮ ಹಾಡುಗಳನ್ನೂ ಬರೆದಿದ್ದ. ಸಹಪಾಠಿಗಳ ಪ್ರಶಂಸೆ ಮತ್ತು ಈ ಪುನಶ್ಚೇತನಾ ತರಬೇತಿ ತಂಗದುರೈ ಬದುಕಿಗೆ ಹೊಸ ಆಯಾಮ ನೀಡಿತು.

ಈ ಆತ್ಮ ವಿಶ್ವಾಸದಿಂದ ತಂಗದುರೈ ಮತ್ತಿತರರು ಬೇರೆ ಕೆಲಸಗಳ ಅನ್ವೇಷಣೆಯಲ್ಲಿ ತೊಡಗಿದರು. ಇದು ಆರಂಭವಾದಾಗ ಸಾರಾಯಿ ಮಾರಾಟ ಕಡಿಮೆಯಾಗತೊಡಗಿತು; ತಾನಾಗಿ ಸಾರಾಯಿ ತಯಾರಿಕೆ ನಿಂತಿತು. ತನ್ನ ಹಾಡು ಮತ್ತು ಇತರೆ ಜಾನಪದ ಕಲಾ ಮಾಧ್ಯಮದ ಮೂಲಕ ತಂಗದುರೈ ಇಡೀ ಗ್ರಾಮಕ್ಕೆ ಮಾಹಿತಿ ತಲುಪಿಸುವ ಸಂವಹನಾಕಾರನಾದ. ಆವನು ಗಾರೆ ಕೆಲಸವನ್ನೂ ಕಲಿತ. ಅದಕ್ಕೆ ಬೇಕಾದ ತಾಂತ್ರಿಕ ಪರಿಣತಿಯನ್ನು ಆವನು ಗಾಂಧಿ ಗ್ರಾಮ ವಿಶ್ವವಿದ್ಯಾಲಯದ ತಂತ್ರಜ್ಞಾನ ಕೇಂದ್ರದಲ್ಲಿ ಪಡೆದ. ಇತರರು ಪೀಠೋಪಕರಣಗಳ ತಯಾರಿಕೆ ಮತ್ತು ಮಾರಾಟ ಮಾಡಬಲ್ಲ ಪದಾರ್ಥಗಳಾದ ಉಪ್ಪಿನಕಾಯಿ, ಟೂಟಿ ಫ್ರೂಟಿ ಇತ್ಯಾದಿ ಮಾಡುವುದನ್ನು ಕಲಿತರು. ಟೂಟಿ ಫ್ರೂಟಿಯನ್ನಂತೂ ಆ ಹಳ್ಳಿಯ ಸುತ್ತಲೂ ಸಮೃದ್ಧವಾಗಿ ಬೆಳೆಯುವ ಪರಂಗಿಹಣ್ಣಿನಿಂದ ತಯಾರಿಸಲಾಗುತ್ತಿತ್ತು. ಪರಂಗಿ ಹಣ್ಣುಗಳನ್ನು ಸಣ್ಣ ಸಣ್ಣ ಚೂರುಗಳನ್ನಾಗಿ ಕತ್ತರಿಸಿ, ಒಣಗಿಸಿ, ಸಿಹಿಗೊಳಿಸಿ, ಬಣ್ಣ ಹಾಕಿ ಟೂಟಿ ಫ್ರೂಟಿ ತಯಾರಿಸಲಾಗುತ್ತಿತ್ತು. ಅದನ್ನು ಅನಂತರ ಪಕ್ಕದ ದಿಂಡಿಗಲ್ಲಿನ ಬೇಕರಿಯುವರಿಗೆ ಮಾರಲಾಗುತ್ತಿತ್ತು.

ಇದನ್ನು ಸರ್ವೋ(ಸೊಸೈಟಲ್ ಆಕ್ಷನ್ ಫಾರ್ ರಿಕನ್ಸ್ಟ್ರಕ್ಷನ್ ವಿಜಿಲೆನ್ಸ್ ಆರ್ಗನೈಸೇಶನ್) ಎಂದು ಕರುಣಾ ಕರೆದರು. ಪ್ರಾರಂಭದಲ್ಲಿ ಈ ರೀತಿಯ ತರಬೇತಿ ಪಡೆಯಲು ಜನ ಹಿಂಜರಿದರು. ಆಮೇಲೆ ಅನೇಕ ಮಂದಿ ಸೇರಿಕೊಂಡರು. ಸ್ವಲ್ಪ ಸಮಯದಲ್ಲೇ ಸರ್ವೋ ಹಣ್ಣಿನ ಉತ್ಪಾದನೆಗಳು, ಸರ್ವೋ ತಿನಿಸು, ಸರ್ವೋ ಫೆರೋ ಸಿಮೆಂಟ್, ಸರ್ವೋ ತೆಂಗಿನ ನಾರಿನ ಉತ್ಪಾದನೆಗಳು ಮತ್ತು ಸರ್ವೋ ಬ್ಯಾಂಕ್ ಕೂಡಾ ಅಸ್ತಿತ್ವಕ್ಕೆ ಬಂತು. ಈ ಸರ್ವೋ ಬ್ಯಾಂಕ್ ಸಣ್ಣ ಸಣ್ಣ ಯೋಜನೆಗಳಿಗೆ ಗ್ರಾಮದ ಒಳಗೆ ಹಣ ಎತ್ತಲು ಸಹಾಯ ಮಾಡಿತು.

ಸರ್ವೋ ಚಟುವಟಿಕೆ, ಅನೇಕ ಉದ್ಯಮಗಳಿಗೆ ಇಂಬುಗೊಟ್ಟಿತು. ಕೆಲವು ಯುವಕರು ಕಬ್ಬಿಣದ ಪೀಠೋಪಕರಣ ತಯಾರಕರಾದರು. ಸುಮಾರು ಆರೇಳು ಮಂದಿ ತರುಣರು ಅಂಗಡಿಗಳನ್ನು, ರೆಸ್ಟೋರೆಂಟ್‌ಗಳನ್ನು ತೆರೆದರು. ಒಂದು ಕಾಲದಲ್ಲಿ ಹಾಲಿಗೆ ಬರ ಇದ್ದ ವಾಲಯಪಟ್ಟಿಯಲ್ಲಿ ಮಿನಿ ಶ್ವೇತ ಕ್ರಾಂತಿಯೇ ಆಯಿತು. ಮೂರೇ ವರ್ಷಗಳ ಒಳಗೆ ಈ ಹಳ್ಳಿಯವರೇ ಒಬ್ಬರು ಎಂಟು ಎಮ್ಮೆಗಳ ಡೈರಿ ಫಾರಂ ತೆರೆದರು. World citizenship schoolನ ವಿದ್ಯಾರ್ಥಿಗಳು ಹೆಚ್ಚು ಆತ್ಮವಿಶ್ವಾಸ ಗಳಿಸಿದರು. ಶಾಲೆಗೆ ತಮ್ಮ ಮಕ್ಕಳನ್ನು ಕಳುಹಿಸಲು ಹಿಂಜರಿಯುತ್ತಿದ್ದ ತಂದೆ ತಾಯಿಗಳಿಗೆ ಈಗ ಶಿಕ್ಷಣವೇ ಮೊದಲ ಆದ್ಯತೆಯಾಯಿತು.

ಗ್ರಾಮದ ಮುಖಂಡರಲ್ಲಿ ಒಬ್ಬನಾದ ವೀರಾಚಲಂ, ವಾಲಯಪಟ್ಟಿಯ ಸುತ್ತಲೂ ಮರಗಳು ಎದ್ದಿರುವುದೇ ಇಲ್ಲಿ ಆಗಿರುವ ಬದಲಾವಣೆಗೆ ಪ್ರಮುಖ ಸಾಕ್ಷಿ ಎನ್ನುತ್ತಾನೆ. ಈ ಹಿಂದೆ ಮರ ಕಡಿಯಲು ಎಲ್ಲ ಜನರೂ ಗುಡ್ಡಕ್ಕೆ ಹೋಗುತ್ತಿದ್ದರು. ಸರ್ವೋ ಉದ್ಯಮಗಳು

ಅಸ್ತಿತ್ವಕ್ಕೆ ಬಂದ ನಂತರ ಇವರ ಸಂಖ್ಯೆ ಶೇಕಡಾ ೪೦ಕ್ಕೆ ಇಳಿದಿದೆ. ದಿನಾ ತರಲಾಗುತ್ತಿದ್ದ ಕಟ್ಟಿಗೆ ಹೊರೆಗಳ ಸಂಖ್ಯೆ ೧೩೦ರಿಂದ ೧೫ಕ್ಕೆ ಇಳಿದಿದೆ. ಇದರ ಬದಲಾಗಿ, ಗ್ರಾಮದ ಜನರೇ ಸಾಮೂಹಿಕವಾಗಿ ಗುಡ್ಡದ ಸುತ್ತ ೧ ಲಕ್ಷ ಮರಗಳನ್ನು ನೆಟ್ಟಿದ್ದಾರೆ.

ಕರುಣಾರಮಟ್ಟಿಗೆ ವಾಲಯಪಟ್ಟಿಯ ಈ ಪ್ರಯತ್ನ ಯಶಸ್ವಿಯಾಗಿದೆ. ಈ ಅಭಿವೃದ್ಧಿ ಪ್ರಯತ್ನಗಳು ಸ್ಥಳೀಯ ಜನರಲ್ಲಿ ಸುಪ್ತವಾಗಿದ್ದ ಶಕ್ತಿಯನ್ನು ಬಡಿದೆಬ್ಬಿಸಿವೆ. ಹೊರಗಿನಿಂದ ಸಂಪನ್ಮೂಲವನ್ನು, ನೈಪುಣ್ಯವನ್ನು ತುರುಕುವುದಕ್ಕಿಂತ ಇದು ಸಂಪೂರ್ಣ ಭಿನ್ನ. ಅವ್ಯವಸ್ಥೆ ತಾಂಡವವಾಡುತ್ತಿದ್ದ ವಾಲಯಪಟ್ಟಿಯಲ್ಲಿಯೇ ಈ ಪ್ರಯತ್ನ ಇಷ್ಟೊಂದು ಯಶಸ್ವಿ ಎನಿಸಬೇಕಾದರೆ, ಉಳಿದೆಡೆ ಇದು ಇನ್ನೂ ಸುಲಭ ಎಂದು ಕರುಣಾ ವಾದಿಸುತ್ತಾರೆ.

ಸಾಮಾಜಿಕ ಉದ್ಯಮಶೀಲತೆ

ಇದನ್ನೇ ಕರುಣಾಕರನ್ 'ಸಾಮಾಜಿಕ ಉದ್ಯಮಶೀಲತೆ' ಎಂದು ಎದೆತಟ್ಟಿ ಹೇಳುತ್ತಾರೆ. ವಾಲಯಪಟ್ಟಿಯ ಪ್ರಯತ್ನಗಳು ಕೇವಲ ಸಣ್ಣ ಉದಾಹರಣೆ ಮಾತ್ರ. ಈ ಮಾದರಿಯ ಅರ್ಥಶಾಸ್ತ್ರ ಮಾತ್ರ ಎಲ್ಲರಿಗೂ ಉದ್ಯೋಗವನ್ನು ಖಾತ್ರಿಯಾಗಿ ನೀಡಬಲ್ಲದು. ಆದರೆ, ವರ್ತಮಾನದಲ್ಲಿರುವ ಆರ್ಥಿಕ ಸಿದ್ಧಾಂತ, ಇದನ್ನು ಮಾಡಲಾರದು. ೧೯೭೨ರಲ್ಲಿ ಭಾರತದ ಸಂಘಟಿತ ಕೈಗಾರಿಕಾ ಕ್ಷೇತ್ರ, ನಮ್ಮ ಒಟ್ಟು ಕಾರ್ಮಿಕ ಶಕ್ತಿಯಲ್ಲಿ ಕೇವಲ ಶೇಕಡಾ ೧೧ರಷ್ಟನ್ನು ಮಾತ್ರ ಬಳಸಿಕೊಂಡಿತ್ತು. ೧೯೯೬ರ ವೇಳೆಗೆ ಇದು ಶೇಕಡಾ ೭ಕ್ಕೆ ಇಳಿಯಿತು. ಒಟ್ಟು ಕಾರ್ಮಿಕ ಶಕ್ತಿಯ ಶೇಕಡಾ ೫೭ರಷ್ಟು ಮಂದಿ ಸ್ವ ಉದ್ಯೋಗಿಗಳಾಗಿದ್ದರು.

ಬೃಹತ್ ಆಧುನಿಕ ಕೈಗಾರಿಕೆಗಳ ಆಧಿಪತ್ಯ ಹೊಂದಿರುವ ಸರಕಾರಿ ಸ್ವಾಮ್ಯದ ಸಾರ್ವಜನಿಕ ಉದ್ದಿಮೆ ಮತ್ತು ಖಾಸಗಿ ಉದ್ಯಮಗಳ ಸಂಗಡ ಗ್ರಾಮೀಣ ಮಟ್ಟದಲ್ಲಿ ಸಣ್ಣ-ಸಣ್ಣ ಕಸುಬುದಾರರ ಮತ್ತು ತಯಾರಕರ ಜನತಾ ಉದ್ಯಮವನ್ನು ಕರುಣಾ ಅವರ ಸಾಮಾಜಿಕ ಉದ್ಯಮಶೀಲತಾ ಪರಿಕಲ್ಪನೆ ಗುರುತಿಸುತ್ತದೆ. ಈ ಮೂರು ಕ್ಷೇತ್ರಗಳೂ ಒಂದನ್ನೊಂದು ಅವಲಂಬಿಸಿವೆ. ಈಗ ವ್ಯಾಪಾರದ ಷರತ್ತುಗಳನ್ನು ನಿರ್ಧರಿಸುತ್ತಿರುವುದು ಖಾಸಗಿ ಉದ್ಯಮಗಳು. ಈ ಷರತ್ತುಗಳು ಗ್ರಾಮೀಣ ಭಾಗದ ಕೊನೆಯ ಮನುಷ್ಯನ ಉದ್ಯಮಶೀಲತಾ ಶಕ್ತಿಗೆ ವಿರುದ್ಧವಾದವು. ಇದನ್ನು ಬದಲಿಸುವುದು ಹೇಗೆ?

ವಾಲಯಪಟ್ಟಿಯ ಕೆಲಸ, ಈ ಸಮಸ್ಯೆಗೆ ಒಂದು ಉತ್ತರವಾಗಬಲ್ಲದು. ತಮ್ಮ ಪರಿಕಲ್ಪನೆಯನ್ನು ಒಂದು ಸಣ್ಣ ಉದಾಹರಣೆಯ ಮೂಲಕ ಕರುಣಾ 'Rural growth and network' ಪುಸ್ತಕದಲ್ಲಿ ಬರೆದಿದ್ದಾರೆ. 'ಬಡತನ ನಿರ್ಮೂಲನೆ ಜಟಿಲವಾದ ಮತ್ತು ಸಂಕೀರ್ಣವಾದ ಕೆಲಸವಾಗಿದೆ. ನಾನು ಕೇವಲ ಮೂಲಭೂತ ನಿಯಮವನ್ನು ಹೇಳಬಲ್ಲೆ. ಸಂಕೀರ್ಣ ಸಮಸ್ಯೆಯನ್ನು ಅದಕ್ಕೆ ಸರಿಹೊಂದುವ ಸಂಕೀರ್ಣ ಉಪಾಯದಿಂದಷ್ಟೇ ಎದುರಿಸಲು ಸಾಧ್ಯ' ಎಂದು ಕರುಣಾ ಹೇಳುತ್ತಾರೆ.

ಬಡತನ ರೇಖೆಗಿಂತ ಕೆಳಗಿರುವ ಗುಂಪುಗಳನ್ನು ಬೆಳೆಸಲು ಅಗತ್ಯವಿರುವ ವ್ಯವಸ್ಥೆಯು ನೀಲಿ ನಕಾಶೆಯೇ ಗ್ರಾಮೀಣ ಅಭಿವೃದ್ಧಿ ಜಾಲ.(Rural growth network) ಆರ್.ಜಿ.ಎನ್ ಸಧ್ಯದಲ್ಲಿ ಜಾರಿಯಲ್ಲಿರುವ IRDP ಕಾರ್ಯಕ್ರಮಗಳು ಕಾರ್ಯಸಾಧುವಲ್ಲ. ಇದಕ್ಕೆ ಕಾರಣವೂ ಇದೆ. ಈ ಯೋಜನೆಗಳ ಬಹುತೇಕ ಭಾವೀ ಫಲಾನುಭವಿಗಳಿಗೆ ಈ ತಯಾರಿಕೆ, ಮಾರುಕಟ್ಟೆ, ಕಚ್ಚಾವಸ್ತುಗಳ ದೊರೆಯುವಿಕೆ ಕುರಿತ ಜ್ಞಾನವಾಗಲೀ ಹಣಕಾಸು ಮೊದಲಾದವುಗಳನ್ನೊಳಗೊಂಡ ಉದ್ಯಮಶೀಲತೆಯಾಗಲೀ ಇರುವುದಿಲ್ಲ. ಅಸಮರ್ಪಕ ಸಂಪನ್ಮೂಲಗಳನ್ನು ಬಡತನ ರೇಖೆಗಿಂತ ಕೆಳಗಿರುವ, ಸಿದ್ಧತೆಯೇ ಇಲ್ಲದ ಜನರಿಗೆ ತಲುಪಿಸಿದರೆ ದೊಡ್ಡ ಪ್ರಮಾಣದ ಸೋಲಿನಲ್ಲಿಯೇ ಯೋಜನೆಗಳು ಅಂತ್ಯ ಕಾಣುತ್ತವೆ.

ಗ್ರಾಮೀಣ ಅಭಿವೃದ್ಧಿ ಜಾಲ, ಕಾರ್ಯ ಸಾಧುವಾದ ಹೊಸ ಸಮೀಕರಣದ ಹಾದಿಯನ್ನು ಸೃಷ್ಟಿಸುವಂತಹದ್ದಾಗಿದೆ. ಅಸಮಾನತೆ, ತಾರತಮ್ಯ ಮತ್ತು ದೊಡ್ಡ ಪ್ರಮಾಣದಲ್ಲಿ ನಿರುದ್ಯೋಗವನ್ನು ಸೃಷ್ಟಿಸಿರುವ ತಾಂತ್ರಿಕತೆಗೆ ಮುಖಾಮುಖಿಯಾಗಿ ಪರ್ಯಾಯ ತಾಂತ್ರಿಕತೆಯನ್ನು ರೂಪಿಸಬೇಕು ಎನ್ನುವ ಆಧಾರದ ಮೇಲೆ ಈ ಯೋಜನೆ ನಿಂತಿದೆ. ಇದಕ್ಕಾಗಿ ಜನರಿಗೆ ತರಬೇತಿ, ಸಾಮಾಜಿಕ ಸಿದ್ಧತೆ, ಈ ಪ್ರಕ್ರಿಯೆಯನ್ನು ಹಾಳುಗೆಡವಲು ನಿಂತಿರುವ ಶಕ್ತಿಗಳಿಂದ ರಕ್ಷಿಸಲು ಬೇಕಾಗಿರುವ ರಾಜಕೀಯ ಇಚ್ಛಾಶಕ್ತಿಯ ಅಗತ್ಯವಿದೆ.

ಶೋಷಣಾ ಶಕ್ತಿಗಳಿಂದ ರಕ್ಷಣೆ ಸಿಗುವಂತಹ ಗ್ರಾಮೀಣ ಆರ್ಥಿಕ ವ್ಯವಸ್ಥೆಯನ್ನು ಬೆಳೆಸುವುದು ಇದರ ಉದ್ದೇಶವಾಗಿದೆ. ತಮ್ಮನ್ನು ತಾವು ಸಂಘಟಿಸಿಕೊಳ್ಳಲು ಅಸಮರ್ಥರಾದವರು ಉದ್ಯೋಗ, ಆದಾಯ ಸೃಷ್ಟಿ ಮೊದಲಾದವಕ್ಕೆ ಸಂಬಂಧಿಸಿದಂತೆ ಸಂಘಟಿತರಾಗುವಂತೆ ಮಾಡುವಲ್ಲಿ ಆರ್.ಜಿ.ಎನ್ ಸಕ್ರಿಯ ಪಾತ್ರ ವಹಿಸುತ್ತದೆ. ಇದು ಸರ್ಕಾರಿ ಸಂಸ್ಥೆ, ಹಣಕಾಸಿನ ಸಂಸ್ಥೆಗಳು, ಉದ್ಯಮಶೀಲರು ಮತ್ತು ಸರ್ಕಾರೀ ಕಾರ್ಯಕ್ರಮಗಳ ಫಲಾನುಭವಿಗಳ ಸಂಗಮ ಸ್ಥಳವಾಗಿರುತ್ತದೆ. ಇದು ಕಾರ್ಯಶೀಲವಾಗಬೇಕಾದರೆ, ಮೂಲಭೂತವಾದ ಎಲ್ಲ ಅಗತ್ಯಗಳ ಒಡೆತನ ಮತ್ತು ನಿರ್ವಹಣೆಯ ಅಧಿಕಾರ ಜನರ ಬಳಿಯೇ ಇರಬೇಕು. ಹೆಚ್ಚುವರಿಯಾಗಿ ಉಳಿಯುವ ಸಂಪನ್ಮೂಲಗಳನ್ನು ಆರೋಗ್ಯ, ಶಿಕ್ಷಣ ಮತ್ತು ಇತರ ಅನುಕೂಲಗಳಿಗಾಗಿ ಮತ್ತೆ ಸಮುದಾಯದತ್ತ ಹರಿಸಬಹುದು.

ಕೆಳಗಿನ ಮೂರು ಹಂತಗಳ ವ್ಯವಸ್ಥೆ ಇವುಗಳನ್ನು ಗುರುತಿಸುತ್ತದೆ. ೧. ಗೃಹಮಟ್ಟದ ಚಟುವಟಿಕೆಗಳು, ೨. ಗ್ರಾಮ ಮಟ್ಟದ ಕಾರ್ಯನಿರ್ವಹಣಾ ಕೇಂದ್ರಗಳು, ೩. ಗ್ರಾಮೀಣ ಅಭಿವೃದ್ಧಿ ಕೇಂದ್ರಗಳು. ಈ ಮೂರು ಹಂತಗಳೂ ಒಟ್ಟಿಗೆ ಸೇರಿ ಗ್ರಾಮೀಣ ಮಟ್ಟದ ತಯಾರಕರಿಗೆ ಶಕ್ತಿಯನ್ನು ತುಂಬುತ್ತವೆ. ಶೋಷಕ ಮಧ್ಯವರ್ತಿಗಳು ಪದಾರ್ಥಗಳನ್ನು ಸಮರ್ಥವಾಗಿ, ಸಕಾಲದಲ್ಲಿ ಸರಬರಾಜು ಮಾಡದಿರುವ ಸ್ಥಿತಿಯನ್ನು ಇದು ತಪ್ಪಿಸುತ್ತದೆ. ಉದಾಹರಣೆಗೆ: ನೆಯ್ಗೆ ಕೆಲಸ ಹಲವಾರು ಅಂಶಗಳನ್ನು ಆಧರಿಸಿದೆ. ಮಗ್ಗ ಸ್ವಂತದ್ದಿರಬಹುದು, ಅದು ಮನೆಯಲ್ಲಿಯೇ ಇರಬಹುದು, ಆದರೆ, ನೂಲು ಸರಬರಾಜು ನಿಯಂತ್ರಣ ವ್ಯಾಪಾರಸ್ಥರ ಕೈಯಲ್ಲಿ ಇರುತ್ತದೆ. ಇದಕ್ಕೆ ಹೊಂದಿಕೊಂಡಂತೆ, ಬಣ್ಣ ಹಾಕುವಿಕೆ, ಬ್ಲೀಚ್ ಮಾಡುವಿಕೆ,

ಬಟ್ಟೆಯ ಮೇಲಣ ಮುದ್ರಣ, ಪಾಲಿಶ್ ಮಾಡುವುದು ಈ ಎಲ್ಲವೂ ಖಾಸಗಿ ಬಂಡವಾಳಶಾಹಿಗಳ ನಿಯಂತ್ರಣದಲ್ಲಿರುತ್ತವೆ. ಹಾಗಾಗಿ ನೆಯ್ಗೆ ಕೆಲಸದಲ್ಲಿ ತೊಡಗಿರುವವನು ತುಂಡು ಗುತ್ತಿಗೆಯ ಕೂಲಿಕಾರನಾಗುತ್ತಾನೆ. ಬಹಳಷ್ಟು ಕೈಗಾರಿಕೆಗಳು ಈ ಮಧ್ಯವರ್ತಿಗಳ ಹಾವಳಿಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗಿಲ್ಲ.

ಕರುಣಾಕರನ್ ಅವರ ಯೋಜನೆಯಂತೆ 'ಗ್ರಾಮೀಣ ಉದ್ಯಮ ಕೇಂದ್ರ' (Village Work Centre-VWC) ಸಾಮುದಾಯಿಕ ಒಡೆತನದ ಆಧಾರದ ಮೇಲೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಸೃಷ್ಟಿಸುತ್ತದೆ. ಮನೆಯಲ್ಲಿಯೇ ಮಗ್ಗ ಇಟ್ಟುಕೊಂಡು ನೇಕಾರಿಕೆ ಮಾಡುವವರ ನೆರವಿಗೆ ಬರುತ್ತದೆ. ಹೆಚ್ಚಿನ ಅನುಕೂಲಗಳನ್ನು ಆ ಪ್ರದೇಶದ ಎಲ್ಲರೂ ಗ್ರಾಮೀಣ ಅಭಿವೃದ್ಧಿ ಕೇಂದ್ರದಲ್ಲಿ (Rural Growth Centre-RGC) ಪಡೆಯಬಹುದು. ಇದು ಒಂದು ನಿರ್ದಿಷ್ಟ ಪ್ರದೇಶದ ಅಭಿವೃದ್ಧಿಗೆ ಶ್ರಮಿಸುತ್ತದೆ. ಬಟ್ಟೆಯ ಮೇಲೆ ಮುದ್ರಣ, ಮಾರುಕಟ್ಟೆಯಂತಹ ಅನಂತರದ ಹಂತದ ಕೆಲಸಗಳನ್ನು ನಿರ್ವಹಿಸುತ್ತದೆ. ಹೈನುಗಾರಿಕೆ ಉದ್ಯಮದ ಉದಾಹರಣೆ ನೀಡುವುದಾದರೆ–ಮನೆಯಲ್ಲಿ ಹಸು ಸಾಕಣಿಕೆ ನಡೆಯುತ್ತದೆ. ಹಾಲಿನ ಸಂಗ್ರಹ ಗ್ರಾಮೀಣ ಉದ್ಯಮ ಕೇಂದ್ರದಲ್ಲಿ ನಡೆಯುತ್ತದೆ. ಅದರ ಮುಂದಿನ ಹಂತಗಳಾದ ಹಾಲಿನ ಸಂಸ್ಕರಣೆ, ಶೀತಲೀಕರಣ, ಪ್ಯಾಕಿಂಗ್, ಮಾರುಕಟ್ಟೆ ವ್ಯವಸ್ಥೆ, ಪಶುಗಳ ಮೇವಿನ ಮಿಶ್ರಣ ಇತ್ಯಾದಿ ಕೆಲಸಗಳು ಗ್ರಾಮೀಣ ಅಭಿವೃದ್ಧಿ ಕೇಂದ್ರದಲ್ಲಿ ನಡೆಯುತ್ತವೆ.

ತಮಿಳುನಾಡಿನ ಒಂದು ಗ್ರಾಮದಲ್ಲಿ ಚರ್ಮೋದ್ಯಮದಲ್ಲಿ ಈ ಪ್ರಕ್ರಿಯೆ ನಡೆಸಲಾಗುತ್ತಿದೆ. ಚರ್ಮಕಾರರು ತಾವೇ ಚಪ್ಪಲಿ ತಯಾರಿಸಿ ಮಾರ ಹೊರಟರೆ, ಬೃಹತ್ ಶೂ ಉದ್ಯಮದವರೊಡನೆ ಸೆಣಸಲಾರರು. ಆದರೆ, ಆರು ಮಂದಿ ಚರ್ಮಕಾರರು ಒಟ್ಟಿಗೆ ಸೇರಿದಲ್ಲಿ ಅವರು ತಮ್ಮ ಉತ್ಪಾದನೆಯ ಮಾರಾಟವನ್ನು ಯಶಸ್ವಿಯಾಗಿ ನಿರ್ವಹಿಸಲು ಸಾಧ್ಯವಿದೆ. ಚರ್ಮವನ್ನು ಕತ್ತರಿಸುವ ಕೆಲಸ ಒಂದು ಕೇಂದ್ರದಲ್ಲಿ ನಡೆಯುತ್ತದೆ. ಚರ್ಮಕಾರರು ಈ ಚರ್ಮವನ್ನು ಪಡೆದು, ಪಾದರಕ್ಷೆಯನ್ನು ತಯಾರಿಸುತ್ತಾರೆ. ಇಡೀ ಉದ್ಯಮವನ್ನು ನಡೆಸುವಲ್ಲಿ ಅವರೇ ಪರಸ್ಪರ ನೆರವಿನೊಂದಿಗೆ ಭಾಗವಹಿಸುವುದರಿಂದ, ಕೇವಲ ಕೂಲಿಕಾರರಾಗಿ ಉಳಿಯುವುದಿಲ್ಲ. ಈಗ ಅವರು ಸ್ವಪರಿಪೂರ್ಣರೂ ಉದ್ಯಮಪತಿಗಳೂ ಆಗಿದ್ದಾರೆ.

ನಿಜವಾದ ಪಂಚಾಯತ್ ರಾಜ್ ವ್ಯವಸ್ಥೆ ಇದ್ದು, ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಪರಿಣಾಮಕಾರಿಯಾದ ವಿಕೇಂದ್ರೀಕರಣ ವ್ಯವಸ್ಥೆಯಿದ್ದು ಗ್ರಾಮೀಣ ಸಮುದಾಯಗಳಿಗೆ ಹೆಚ್ಚಿನ ಅಧಿಕಾರ ಇದ್ದಲ್ಲಿ ಮಾತ್ರ ಈ ವ್ಯವಸ್ಥೆ ಸಮರ್ಥವಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ.

ಗ್ರಾಮ ಸ್ವರಾಜ್ಯದ ಚೇತನ ನಿಜಕ್ಕೂ ಹೊರಹೊಮ್ಮಬೇಕಾದರೆ, ಅತ್ಯುನ್ನತ ಅಧಿಕಾರ ಕೇಂದ್ರಗಳಾದ ಸಂಸತ್ತು ಮತ್ತು ವಿಧಾನಸಭೆಗಳ ನಿಯಂತ್ರಣ ತಳಮಟ್ಟದ ಸಂಸ್ಥೆಗಳಲ್ಲಿ ಇರಬೇಕು. ಈಗಿರುವ ರಾಜ್ಯಸಭೆಯ ಬದಲಿಗೆ ಜಿಲ್ಲಾಮಟ್ಟದ ಪಂಚಾಯಿತಿ ಪ್ರತಿನಿಧಿಗಳನ್ನೊಳಗೊಂಡ ಪಂಚಾಯತಿ ಸಭಾ ಇರಬೇಕು. 'ತಳಮಟ್ಟದ ಜನರ ಬುದ್ಧಿಮತ್ತೆ ಈ ದೇಶಕ್ಕೆ ಮಾರ್ಗದರ್ಶಕವಾಗಲಿ. ಗ್ಯಾಟ್ ಮತ್ತು ಸಿಟಿಬಿಟಿ ಚರ್ಚೆಯಲ್ಲಿ ಪಂಚಾಯಿತಿ ಸಭೆ ಮಾರ್ಗದರ್ಶನ ನೀಡುವಂತೆ ಆಗಬೇಕು' ಎಂದು ಕರುಣಾ ಹೇಳುತ್ತಾರೆ.

ಸಾಮಾಜಿಕ ಮತ್ತು ಆರ್ಥಿಕ ಪುನರುಜ್ಜೀವನಕ್ಕಾಗಿ ಕರುಣಾರ ಪರಿಕಲ್ಪನೆಯ ತಿರುಳು ಇದು-

ಗಾತ್ರ ಅಥವಾ ಪ್ರಮಾಣ ಆಧಾರಿತ ಅರ್ಥವ್ಯವಸ್ಥೆಗೆ ಪರ್ಯಾಯವಾಗಿ ಗ್ರಾಮೀಣ ಅಭಿವೃದ್ಧಿ ನೆಟ್‌ವರ್ಕಿಂಗ್ ಮೂಲಕ ಒಂದು ಜಾಲ ಹೆಣೆಯುವುದು.

ಬಂಡವಾಳ ವ್ಯವಸ್ಥೆಯಲ್ಲಿ ಉದ್ಯಮತನಕ್ಕೆ ಪರ್ಯಾಯವಾಗಿ ಸಮಾಜೋ-ಉದ್ಯಮಶೀಲತೆ ಅಥವಾ ಸರ್ವೋದಯ ಇರಬೇಕು.

ನಗರ ಅಭಿವೃದ್ಧಿಗೆ ಪರ್ಯಾಯವಾಗಿ ಸಜೀವ ಸಮುದಾಯಗಳು ಮತ್ತು ತಾಲೂಕು ಮಟ್ಟದಲ್ಲಿ ಸ್ವ-ಪರಿಪೂರ್ಣತೆ ಮತ್ತು ಪರಿಸರಸ್ನೇಹಿ ಸುಸ್ಥಿರ ಗ್ರಾಮಗಳು.

ಕುರುಡು ಜಾಗತೀಕರಣಕ್ಕೆ ಪರ್ಯಾಯವಾಗಿ ಸಾರ್ವಕಾಲಿಕ ಅಥವಾ ವಿವೇಕಪೂರ್ಣ ಸ್ವದೇಶೀ ಕಲ್ಪನೆ.

ಅಸಮಾನತೆ ಸೃಷ್ಟಿಸುವ ಶಿಕ್ಷಣಕ್ಕೆ ಪರ್ಯಾಯವಾಗಿ ಸಾರ್ವಕಾಲಿಕ ವಿಶ್ವಪ್ರಜೆ ಕಲ್ಪನೆಯನ್ನು ಪೋಷಿಸುವ ಶಿಕ್ಷಣ

ಮಾರ್ದನಿ

ಕಾಲು ಶತಮಾನದ ಅವರ ಹೋರಾಟದ ಸಿಂಹಾವಲೋಕನ ಮಾಡುತ್ತಾ ಕರುಣಾ ಹೇಳುತ್ತಾರೆ: 'ಕಠಿಣ ಅಥವಾ ಶ್ರಮದಾಯಕ ಎನ್ನುವುದಕ್ಕಿಂತ ನನ್ನ ಕೆಲಸ ಪ್ರಾಮಾಣಿಕವಾಗಿದ್ದು, ಎಲ್ಲರ ಹಿತಬಯಸುವಂತಹುದಾಗಿತ್ತು'. ಅವರ ಪ್ರಯೋಗಗಳು ಸಣ್ಣ ಮಟ್ಟದವೂ, ಕೆಲವೊಮ್ಮೆ ಅಪರಿಪೂರ್ಣವೂ ಆಗಿರಬಹುದು. ಆದರೆ ಈ ಪರಿಕಲ್ಪನೆಗಳು ವಿಸ್ತೃತ ಪರಿಧಿಯಲ್ಲಿ ಪ್ರತಿಬಿಂಬಿತವಾಗಿವೆ ಎಂಬುದು ತೃಪ್ತಿ ತರುವ ಅಂಶ. ಕರುಣಾ ಗ್ರಾಮೀಣ ತಂತ್ರಜ್ಞಾನದಲ್ಲಿ ಬಿ.ಎಸ್.ಸಿ ಪದವಿಗಾಗಿ ಸಿದ್ಧಪಡಿಸಿದ ಪಠ್ಯ ಇಡಿ ದೇಶಕ್ಕೇ ಮಾದರಿ ಎಂದು ಯು.ಜಿ.ಸಿ ಘೋಷಿಸಿತು. ದಿಂಡಿಗಲ್ಲಿನ ಮಾರುಕಟ್ಟೆ ಸರ್ವೋ ಉತ್ಪಾದನೆಗಳನ್ನು ಕೊಳ್ಳುವ ಮೂಲಕ ಇಡಿ ಯೋಜನೆಯನ್ನು ಅಂಗೀಕರಿಸಿತು. ಕರುಣಾ ವಿನ್ಯಾಸಗೊಳಿಸಿದ ಅಲ್ಪವೆಚ್ಚದ ನಾಲ್ಕು ಮನೆ ವಿನ್ಯಾಸಗಳನ್ನು ಅನೇಕ ಕಡೆ ಬಳಸಿಕೊಳ್ಳಲಾಯಿತು. 'ನಾನು ಪಡೆಯಬೇಕಾದುದಕ್ಕಿಂತ ಹೆಚ್ಚಿನದನ್ನು ಪಡೆದಿದ್ದೇನೆ' ಎಂದು ಕರುಣಾ ಅಭಿಪ್ರಾಯಪಡುತ್ತಾರೆ.

ಕರುಣಾ ಐಐಟಿಯಲ್ಲಿ ಇದ್ದ ದಿನಗಳಲ್ಲಿ ಅವರ ಸಂಪರ್ಕಕ್ಕೆ ಬಂದ ವಿದ್ಯಾರ್ಥಿಗಳಲ್ಲಿ ಕೆಲವರು ತಮ್ಮ ಇಂಜಿನಿಯರಿಂಗ್ ವೃತ್ತಿಯನ್ನು ತೊರೆದು ಎಲ್ಲರಿಗೂ ಜೀವಿಸುವ ಅವಕಾಶ ಖಾತರಿಪಡಿಸುವ ಪರ್ಯಾಯ ನೆಲೆ ಶೋಧನೆಯಲ್ಲಿ ನಿರತವಾಗಿರುವ ಗುಂಪುಗಳ ಸದಸ್ಯರಾಗಿದ್ದಾರೆ. ಕರುಣಾರ ದೃಢತೆ ಇವರಿಗೆ ಸ್ಫೂರ್ತಿಯಾಗಿದೆ. ಇವುಗಳಲ್ಲಿ ಅತ್ಯಂತ ಪ್ರಮುಖ ವಿಷಯಗಳಿಗೂ ಹೊರಗಿನ ಒತ್ತಡವನ್ನು, ವೈಯಕ್ತಿಕ ಗೆಳೆತನವನ್ನು ಬಳಸದಿರುವುದೂ ಒಂದು.

'ಕೆಡುಕರನ್ನೂ ಬುದ್ಧಿವಂತರನ್ನೂ ತಮ್ಮ ಅಣ್ಣಂದಿರು ಎಂದು ಅಂಗೀಕರಿಸುವ ವಿಕಾಸವಾದಿಗಳು ತಾವು' ಎಂದು ಕರುಣಾ ತಮ್ಮನ್ನು ತಾವು ಬಣ್ಣಿಸಿಕೊಳ್ಳುತ್ತಾರೆ. '೧೯೪೦ರ ಗಾಂಧೀಜಿಯವರ 'ಗ್ರಾಮ ಪುನರ್‌ನಿರ್ಮಾಣ'ದ ಪರಿಕಲ್ಪನೆಗಳು ಇಂದಿಗೆ ಪೂರ್ಣವಾಗಿ ಸರಿಹೋಗದು. ನಾವು ಈಗಾಗಲೇ ಪರಿಸರಕ್ಕೆ ಮತ್ತು ಅರ್ಥವ್ಯವಸ್ಥೆಗೆ ಸರಿಪಡಿಸಲಾಗದಷ್ಟು ಹಾನಿ ಮಾಡಿರುವುದರಿಂದ ಹೀಗಾಗಿದೆ. ಇದಕ್ಕೆ ಪರಿಹಾರ, ಅದನ್ನು ಹಳ್ಳಿಗಳಲ್ಲಿ ಸಣ್ಣ ಪ್ರಮಾಣದಲ್ಲಿ ಪ್ರಯತ್ನಿಸುವುದು ಮತ್ತು ದೊಡ್ಡ ಪ್ರಮಾಣದಲ್ಲಿ ಇವುಗಳನ್ನು ಅಳವಡಿಸಿದರೆ ಹೇಗೆ ಎಂಬ ಚಿಂತನೆ ನಡೆಸುವುದು. ಇವಿಷ್ಟನ್ನೇ ಕಳೆದ ೧೮ ವರ್ಷಗಳಿಂದ ನಾನು ಮಾಡುತ್ತಿರುವುದು' ಎಂದು ಕರುಣಾ ಹೇಳುತ್ತಾರೆ. ಒಂದು ರೀತಿಯಲ್ಲಿ ಇದೊಂದು ಪರಿಕಲ್ಪನೆ ಅಥವಾ ಒಂದು ಸಂದೇಶದಿಂದ ಆಂದೋಲನದವರೆಗಿನ ಮಾರ್ಗ.

ತಂತ್ರಜ್ಞಾನ ಮತ್ತು ಅರ್ಥಶಾಸ್ತ್ರದ ವಿವರಗಳನ್ನೊಳಗೊಂಡ ಉತ್ತಮ ಯೋಜನೆಗಳನ್ನು ರೂಪಿಸುವ ಕರುಣಾರ ಸಾಮರ್ಥ್ಯದ ಬಗ್ಗೆ ಅವರ ವಿದ್ಯಾರ್ಥಿಗಳಲ್ಲಿ ಒಬ್ಬರಾದ ಶಂಭು ಪ್ರಸಾದ್ ಅಚ್ಚರಿ ವ್ಯಕ್ತಪಡಿಸುತ್ತಾರೆ. ಸೈದ್ಧಾಂತಿಕ ಹಾಗೂ ತಾತ್ವಿಕ ಪರಿಭಾಷೆಯನ್ನು ಹೆಚ್ಚು ಬಳಸದೇ ಇದ್ದಿದ್ದರೆ, ಇನ್ನೂ ಹೆಚ್ಚಿನ ಕೆಲಸ ಮಾಡಲು ಸಾಧ್ಯವಿತ್ತು. ಇವರದು ಅಪೂರ್ವ ಇಚ್ಛಾಶಕ್ತಿ. ಸಮುದಾಯವನ್ನು ಪೂರ್ಣವಾಗಿ ತೊಡಗಿಸಿಕೊಳ್ಳುವ ಪ್ರಯತ್ನವನ್ನು ಕರುಣಾ ಕೇರಳದಲ್ಲಿ ನಡೆಸಿದ್ದರೆ ಹೇಗಿರುತ್ತಿತ್ತು ಎಂಬುದನ್ನು ಕಲ್ಪಿಸಿಕೊಳ್ಳಿ. ಪ್ರಬಲ ರಾಜಕೀಯ ಇಚ್ಛಾಶಕ್ತಿ ಇರುವ ಕಡೆಗಳಲ್ಲಿ ಕರುಣಾ ಅವರ ಪರಿಕಲ್ಪನೆ ಹೆಚ್ಚು ಆಳ ಮತ್ತು ವಿಸ್ತಾರವನ್ನು ಪಡೆದುಕೊಳ್ಳಲು ಸಾಧ್ಯವಿದೆ.

ಪರಿಕಲ್ಪನೆ ಮತ್ತು ಅನುಷ್ಠಾನದ ನಡುವೆ ಭಾರೀ ಅಂತರ ಇದೆ ಎಂಬುದನ್ನು ಕರುಣಾ ಒಪ್ಪಿಕೊಳ್ಳುತ್ತಾರೆ. 'ಕೆಲವೊಮ್ಮೆ ನಾನೇ ಪೂರ್ಣಸಿದ್ಧತೆ ನಡೆಸಿಲ್ಲ ಎಂದೆನಿಸುತ್ತಿತ್ತು. ಕೆಲವೊಮ್ಮೆ ನಾನು ಕೆಲಸ ಮಾಡುತ್ತಿದ್ದ ಸಂಸ್ಥೆಯೇ ಯೋಜನೆಗಳ ಅನುಷ್ಠಾನಕ್ಕೆ ತೊಡಕಾಗುತ್ತಿತ್ತು. ನಾನು ಇನ್ನೂ ಹೆಚ್ಚಿನ ಧೈರ್ಯ ವಹಿಸಿದ್ದರೆ, ಕೆಲವು ಮಾದರಿಗಳು ತಾವಾಗಿಯೇ ಅರಳುತ್ತಿದ್ದವು. ದೂಷಿಸಬೇಕಾದುದು ನನ್ನನ್ನೇ' ಎಂದು ವಿನಯಪೂರ್ವಕವಾಗಿ ಹೇಳುತ್ತಾರೆ ಕರುಣಾ. ಅವರ ಸಾಂಪ್ರದಾಯಿಕ ದೃಷ್ಟಿಯಿಂದ ನೋಡಿದಾಗ ಕರುಣಾ ಆಗಲೀ ಅಥವಾ ಅವರ ಹಿರಿಯ ಸಹಪಯಣಿಗ ಸಿ.ವಿ.ಶೇಷಾದ್ರಿಯಾಗಲೀ ಹೆಚ್ಚಿನ ಯಶಸ್ಸು ಗಳಿಸಿದಂತೆ ಕಾಣುವುದಿಲ್ಲ. ಅವರ ಪ್ರಯತ್ನಗಳು ಅನುಷ್ಠಾನಗೊಳ್ಳಲು ಅಗತ್ಯವಿರುವ ಸಾಮಾನ್ಯ ಪರಿಸರದ ಕೊರತೆ ಇದಕ್ಕೆ ಭಾಗಶಃ ಕಾರಣವಾಗಿದೆ. ತೀವ್ರವಾದ ರಾಜಕೀಯ ಆಂದೋಲನ ಮಾತ್ರ ಈ ಪರಿಸರ ನಿರ್ಮಿಸಲು ಸಾಧ್ಯ.

ಮುಂದೇನು?

ಈ ಪ್ರಯತ್ನಗಳಲ್ಲಿದ್ದ ಮಿತಿಗಳು ಇನ್ನೂ ಸಮರ್ಥ ಮತ್ತು ಯಶಸ್ವಿ ಮಾದರಿಗಳನ್ನು ನೀಡಬೇಕೆಂಬ ಕರುಣಾರ ಉತ್ಸಾಹವನ್ನು ಬಲವಾಗಿ ತಟ್ಟಿತು. ಕಳೆದ ೫೦ ವರ್ಷಗಳಲ್ಲಿ ಭಾರತದ ಅನೇಕ ಕಡೆ ಈ ರೀತಿಯ ಸಣ್ಣ ಪ್ರಮಾಣದ ಕಲಸ ನಡೆದಿದೆ. ಆದರೆ, ಅವು ದೊಡ್ಡ ಪ್ರಮಾಣದಲ್ಲಿ ಅನುಷ್ಠಾನಗೊಂಡಿಲ್ಲ.

ಕುಶಲ ಕರ್ಮಿಗಳಿಗೆ ಹಾಗೂ ಗ್ರಾಮೀಣ ಬಡಜನತೆಗೆ ಗಾಂಧಿ ಗ್ರಾಮ್ ಟ್ರಸ್ಟ್ ಹಮ್ಮಿಕೊಂಡಿರುವ ಅನೇಕ ಯೋಜನೆಗಳೇ ಈ ಮಾತಿಗೆ ನಿದರ್ಶನವಾಗಿ ನಿಲ್ಲುತ್ತವೆ. ಆದರೆ, ಈ ಯೋಜನೆಗಳು ಹೆಚ್ಚಿನ ಬದಲಾವಣೆ ತರುವಷ್ಟು ಬೇರೆ ಬೇರೆ ಕಡೆಗಳಲ್ಲಿ ಹರಡಲಿಲ್ಲ. ೧೯೯೩ರಲ್ಲಿ ಗಾಂಧಿ ಗ್ರಾಮ ಗ್ರಾಮೀಣ ವಿಶ್ವವಿದ್ಯಾಲಯವೇ ಸಾವಯವ ಮತ್ತು ಗ್ರಾಮೀಣ ಕೃಷಿಗೆ ಸಂಬಂಧಿಸಿದ ಕೋರ್ಸನ್ನು ನಿಲ್ಲಿಸಿತು. ಏಕೆಂದರೆ, ಇದರ ಕಾರ್ಯಚಟುವಟಿಕೆಗಳನ್ನು ರೂಪಿಸುವುದು ವಿಶ್ವವಿದ್ಯಾಲಯ ಧನ ಸಹಾಯ ಆಯೋಗ. ಜತೆಗೆ, ಶಿಕ್ಷಕ ವರ್ಗದವರು ಗಾಂಧಿ ಪರಿಕಲ್ಪನೆಗೆ ಅಪರಿಚಿತರಾಗಿದ್ದು, ಸಾಂಪ್ರದಾಯಿಕ ಶಿಕ್ಷಣಕ್ರಮ, ಸಂಸ್ಥೆ, ವ್ಯವಸ್ಥೆಗಳಿಂದಲೇ ಬಂದವರಾಗಿದ್ದರು.

ಸಣ್ಣ ಪ್ರಮಾಣದಲ್ಲಿ ನಡೆದ ಈ ಪ್ರಯತ್ನಗಳು ಒಂದಲ್ಲ ಒಂದು ದಿನ ದೊಡ್ಡ ಪ್ರಯತ್ನಗಳಿಗೆ ಬುನಾದಿಯಾಗುತ್ತವೆ ಎಂಬ ಆಶಯ ಗಾಂಧಿ ಗ್ರಾಮದ ಟ್ರಸ್ಟಿ ವೆಂಕಟೇಶ್ವರನ್ ಪದ್ಮನಾಭನ್ ಅವರದು. ಅವರು ೬೦ರ ದಶಕದ ಮಧ್ಯ ಭಾಗದಲ್ಲಿ ಸಾಕಷ್ಟು ಕೆಲಸ ಮಾಡಿದರು. ಗಾಂಧಿ ಅನುಯಾಯಿಯೂ, ಜೆ.ಸಿ ಕುಮಾರಪ್ಪನವರ ಸಹೋದ್ಯೋಗಿಯೂ ಆಗಿದ್ದ ಪದ್ಮನಾಭನ್, ಈಗ ಬಂಡವಾಳಶಾಹಿ ಹಾಗೂ ಕಮ್ಯುನಿಸ್ಟ್ ಸಿದ್ಧಾಂತ ಎರಡೂ ವಿಫಲ ಎಂದೆನಿಸಿರುವುದರಿಂದ ಅಹಿಂಸಾತ್ಮಕ ಪರಿಕಲ್ಪನೆಗಳು ಮತ್ತು ಬೆಳವಣಿಗೆಗೆ ಹೆಚ್ಚಿನ ಅವಕಾಶವಿದೆ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಅವರ ಈ ನಂಬಿಕೆಯೇ ಅವರ ಪ್ರಯತ್ನಗಳಿಗೆ ಸ್ಫೂರ್ತಿ.

ಈ ಅವಕಾಶ (space) ಸಾಕಷ್ಟು ತುಂಬಿದೆ ಎಂದು ಹೇಳಲಾಗದು. ೧೯೯೩– ಜೆ.ಸಿ ಕುಮಾರಪ್ಪನವರ ಜನ್ಮ ಶತಾಬ್ದಿ ಸಂದರ್ಭದಲ್ಲಿ ಹೊಸ ಪ್ರಪಂಚಕ್ಕಾಗಿ ತಹತಹಿಸುವ ದೇಶವಿದೇಶಗಳ ಅನೇಕ ಜನರು ಸೇರಿದ್ದರು. ಆದರೆ, ಈ ಸಮಾವೇಶದಲ್ಲಿ ಈಗ ನಡೆಯುತ್ತಿರುವ ಕಾರ್ಯಕ್ರಮ ಆಧರಿಸಿ ಕಾರ್ಯಕರ್ತರೊಂದಿಗೆ ಸಂವಾದ ನಡೆಯಲೇ ಇಲ್ಲ. ಬಹಳಷ್ಟು ಜನ ಈ ಪರಿಕಲ್ಪನೆಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ಆದರೆ, ಇವರೆಲ್ಲರೂ ಒಂದು ನಿರ್ದಿಷ್ಟ ಗುರಿಯತ್ತ ಚಲಿಸುತ್ತಿರಲಿಲ್ಲ. ಹಾಗಾದರೆ, ಈ ಎಲ್ಲ ಬಯಕೆಗಳು ಕೇವಲ ಕನಸಾಗೇ ಉಳಿಯುವವೇ?

ಸಣ್ಣ ಪ್ರದೇಶದಲ್ಲಿ ಅತ್ಯಂತ ತೀವ್ರವಾಗಿ ಕೆಲಸ ಮಾಡುವಲ್ಲಿನ ಮಿತಿಗಳ ಕುರಿತು ಕರುಣಾಗೆ ಅರಿವಿದೆ. ಇದು ದಕ್ಷಿಣ ಆಫ್ರಿಕಾ ಮತ್ತು ಭಾರತದಲ್ಲಿ ಗಾಂಧಿ ನಡೆಸಿದ ಹೋರಾಟದಂತೆ ಅಲ್ಲ. ಜಾಗತಿಕ ಮಟ್ಟದಲ್ಲಿ ಸಮಸ್ಯೆಯನ್ನು ಅವಲೋಕಿಸಿದ ನಮಗೆಲ್ಲ ದಿಗ್ಭ್ರಮೆಯಾಯಿತು. ನಾವು ಹೊಸ ವ್ಯವಸ್ಥೆಯನ್ನು ವಿಶ್ವದ, ರಾಷ್ಟ್ರದ, ಪ್ರದೇಶದ ಪ್ರಣಾಳಿಕೆಯಾಗಿ ನೋಡಬೇಕು. ಶಾಶ್ವತ ಅರ್ಥವ್ಯವಸ್ಥೆಯನ್ನು ವೈಯಕ್ತಿಕ ಮಟ್ಟದಲ್ಲಿ ಅಳವಡಿಸಿಕೊಳ್ಳಬೇಕು. ಗಾಂಧಿವಾದಿಗಳು–ನಮ್ಮನ್ನು ಕಾಡುತ್ತಿರುವ ಕೆಲವು ವಾಸ್ತವ ಸಮಸ್ಯೆಗಳಿಗೆ ಮಾತ್ರ ಪ್ರತಿಕ್ರಯಿಸುತ್ತಿದ್ದಾರೆ. ಉದಾಹರಣೆಗೆ, ಉತ್ತರ–ದಕ್ಷಿಣ ಸಮೀಕರಣ, ಬಹುರಾಷ್ಟ್ರೀಯ ಕಂಪೆನಿಗಳ ಸಮಸ್ಯೆಗಳು ಇತ್ಯಾದಿ. ಬಹುಸಾಂಸ್ಕೃತಿಕ ಸಮುದಾಯಗಳ ನಡುವೆ ಸಂಪರ್ಕದ ಕೊಂಡಿಯನ್ನು ಬೆಸೆದು, ಎಲ್ಲರೂ ಶಾಂತಿಯುತ ಸಹಬಾಳ್ವೆಯನ್ನು ನಡೆಸಲು, ಸುಸ್ಥಿರ ಬೆಳವಣಿಗೆ ಸಾಧಿಸಲು ಒಂದು ಚೌಕಟ್ಟು ಇಲ್ಲವಾಗಿದೆ.

ಭೂಪಕ್ಕಿನಂತಹ ಮೂಲಭೂತ ಸಮಸ್ಯೆಗೆ ಮುಖಾಮುಖಿಯಾಗುವಲ್ಲಿ ನಾವು ಹಿಂಜರಿಯುತ್ತಿದ್ದೇವೆ. ನಮಗೆ ಆತ್ಮಸ್ಥೈರ್ಯ ಮತ್ತು ಆಶಾವಾದದ ಕೊರತೆ ಇದೆ. ಇದಕ್ಕೆ ಬಹುಮುಖ್ಯ ಕಾರಣ ನಾವು ಗಾಂಧಿ ಮಾದರಿಯನ್ನು ಕೈಬಿಟ್ಟದ್ದು ಹಾಗೂ ರಚನಾತ್ಮಕ ಕೆಲಸಗಳನ್ನು ಮಾಡುವ ಉದ್ದೇಶ ಹೊಂದಿದ ಕಾರ್ಯಕರ್ತರು ವಿದೇಶೀ ಅನುದಾನಕ್ಕೆ ಜೋತುಬಿದ್ದದ್ದು.

ಹಾಗಾದರೆ, ಸಂಪೂರ್ಣ ಬದಲಾವಣೆಯ ಕನಸು ನನಸಾಗುವುದು ಹೇಗೆ? ಹೊಸ ತಂತ್ರಜ್ಞಾನ ಮತ್ತು ಪಾರಿಸರಿಕ ಬುದ್ಧಿಮತ್ತೆಯ ಫಲಸ್ವರೂಪವಾದ ಪಾರಿಸರಿಕ ತಂತ್ರಜ್ಞಾನ ಯುಗ, (eco tech era) ಅಮೆರಿಕ ಅಥವಾ ಸ್ಕ್ಯಾಂಡಿನೇವಿಯನ್ ದೇಶಗಳಲ್ಲಿ ಬಲುಬೇಗನೆ ವಿಸ್ತರಿಸುತ್ತಿದೆ ಎಂದು ಕರುಣಾ ಒಂದು ಕಾಲದಲ್ಲಿ ನಂಬಿದ್ದರು. ಆದರೆ, ಆಳವಾಗಿ ಪರಿಶೀಲಿಸಿದಾಗ ಆದರ್ಶವೆನಿಸುವ ದೇಶಗಳಾದ ಸ್ವೀಡನ್ ಮತ್ತು ಡೆನ್ಮಾರ್ಕ್ ಹೈಟೆಕ್‌ನ ಒತ್ತಡದಲ್ಲಿವೆ ಎಂಬುದನ್ನು ಅವರು ಕಂಡುಕೊಂಡರು. ಕುಟುಂಬದ ಪರಿಕಲ್ಪನೆ ಕಳೆದು ಹೋಗಿ, ಸಮುದಾಯದ ವಿಘಟನೆ ನಡೆದಿರುವುದು ಭಾಗಶಃ ಇದಕ್ಕೆ ಕಾರಣ. ಅದಕ್ಕೇ ಅಭಿವೃದ್ಧಿ ಹೊಂದಿದ ರಾಷ್ಟ್ರಗಳನ್ನು ಕರುಣಾ 'ನಾಶಗೊಂಡ ದೇಶಗಳು' ಎಂದೂ ಅಭಿವೃದ್ಧಿಶೀಲ ರಾಷ್ಟ್ರಗಳನ್ನು 'ನಾಶಕ್ಕೆ ಹಾತೊರೆದು ಧಾವಿಸುತ್ತಿರುವ ರಾಷ್ಟ್ರಗಳು' ಎಂದು ಕರೆದದ್ದು.

೬೦ರ ದಶಕದ ಆರಂಭದಿಂದ ಅಮೆರಿಕದಲ್ಲಿ ತಲೆಯೆತ್ತುತ್ತಿರುವ ಪರ್ಯಾಯ ಜೀವನ ವಿಧಾನಗಳ ಬಗ್ಗೆ ಕರುಣಾ ಭರವಸೆ ತಾಳಿದ್ದರು. ಆದರೆ ಬೆಳೆಯುತ್ತಿರುವ ಪ್ರಪಂಚದ ಏಕಧ್ರುವೀಕರಣ, ಡಬ್ಲ್ಯು.ಟಿ.ಒ ನಂತಹ ಸಂಘಟನೆಗಳು ಹುಟ್ಟಿದ್ದು ಈ ದುರದೃಷ್ಟ ದೇಶದ ಲೋಲುಪ ಜೀವನಕ್ಕೆ ಮತ್ತಷ್ಟು ಆಯುರ್ದಾನ ಮಾಡಿತು. ಹಾಗಾಗಿ, ಅಮೆರಿಕ ಪ್ರಪಂಚದ ಹಿರಿಯಣ್ಣನ ಪಾತ್ರವನ್ನು ವಹಿಸುತ್ತಾ ತನ್ನನ್ನು ನಾಶಪಡಿಸಿಕೊಳ್ಳುತ್ತಾ ಅಂತಿಮವಾಗಿ, ಇತರರನ್ನು ನಾಶಪಡಿಸುತ್ತಿದೆ.

ಈ ನಿಟ್ಟಿನಲ್ಲಿ, ಕರುಣಾರಂತಹ ಆಂದೋಲನಕಾರರ ಪಾತ್ರವೇನು? ವಿಸ್ತಾರ ಪರಿಧಿಯಲ್ಲಿ ಇವು ಹೇಗೆ ಪರಿಣಾಮಕಾರಿಯಾಗುತ್ತವೆ? ಕರುಣಾ ಪ್ರಕಾರ ಈ ದೇಶದ ಚಳುವಳಿಕಾರರು ಅಥವಾ ಕಾರ್ಯಕರ್ತರು ಭಾರತ, ತನ್ನ ತಪ್ಪಿನಿಂದಲೇ ಪಾಠ ಕಲಿಯುವಂತೆ ಸಹಾಯ ಮಾಡಬೇಕು. ಮತ್ತು ಇದರ ಸಾಂಸ್ಕೃತಿಕ ಪರಂಪರೆಯಲ್ಲಿ ಮಿಳಿತವಾಗಿರುವ ಬುದ್ಧಿಮತ್ತೆ ವಿನಾಶಕಾರೀ ಪ್ರಯೋಗಗಳಿಗೆ ವಿದಾಯ ಹಾಡಬೇಕು. ಕರುಣಾರನ್ನು ಬದುಕಿನುದ್ದಕ್ಕೂ ಕಾಡಿದ ಪ್ರಶ್ನೆಗಳಿಗೆ ಸಮರ್ಪಕ ಪರಿಹಾರ ಹುಡುಕುವವರ, ತಳಮಟ್ಟದಲ್ಲಿ ಕೆಲಸ ಮಾಡುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಇದನ್ನು ಕಂಡಾಗ ಕರುಣಾಗೆ ಕುರುಡರು ಆನೆಯನ್ನು ವಿವರಿಸಿದ ಕತೆ ನೆನಪಾಗುತ್ತದೆ. ಪ್ರತಿಯೊಬ್ಬರೂ ಸತ್ಯವನ್ನು ಭಾಗಶಃ ಕಂಡಿದ್ದಾರೆ. ಅವುಗಳನ್ನು ಕ್ರೋಢೀಕರಿಸಿ ಸದಾ ದಿನದಿನದ ಅಸ್ತಿತ್ವಕ್ಕಾಗಿ ಹೋರಾಡಬೇಕಾದ ದರಿದ್ರ ನಾರಾಯಣರ ಬಿಡುಗಡೆಗಾಗಿ ರಾಜಕೀಯ ತಂತ್ರವನ್ನು ರೂಪಿಸಬೇಕಾಗಿದೆ.

'ನನ್ನ ಅನೇಕ ಗೆಳೆಯರು ಹೇಳುವಂತೆ, ಮುಂದಿನ ಹತ್ತು ವರ್ಷ ಮಹತ್ವದ ದಶಕವಾಗಲಿದೆ ಎನಿಸುತ್ತದೆ. ಭಾರತ ಮಾತ್ರವಲ್ಲ; ಇಡೀ ಪ್ರಪಂಚದ ಬದಲಾವಣೆಗಾಗಿ ತಹತಹಿಸುವ ಮನಸ್ಸುಗಳು ತಮ್ಮ ಪುಟ್ಟ ಅಹಂನ ಕವಚದಿಂದ ಈಚೆ ಬಂದು, ಪ್ರತೀ ಸಮಸ್ಯೆಯ ಹಲವು ಆಯಾಮಗಳ ಸಂಕೀರ್ಣತೆಯನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಪೂರಕವಾಗಬಹುದಾದ ಸಂಪನ್ಮೂಲ ಇರುವವರ ಜತೆ ಕೈಗೂಡಿಸಿ ಕೆಲಸ ಮಾಡಬೇಕು. ಇದರಿಂದ ಒಟ್ಟಾದ ಪರಿಣಾಮ ಉಂಟಾಗಿ, ಅದರಿಂದ ಹೊರಬರುವ ಶಕ್ತಿ ನಮ್ಮನ್ನು ಹೊಸ ಬೆಳಕಿನತ್ತ ಮುನ್ನಡೆಸುತ್ತದೆ' ಎನ್ನುತ್ತಾರೆ ಕರುಣಾ.

ಅಯೋಧ್ಯೆಯ ರಾಜಕುಮಾರ ಶ್ರೀರಾಮ ತನ್ನ ವನವಾಸದ ಆರಂಭದಲ್ಲಿ 'ಚಿತ್ರಕೂಟ'ದಲ್ಲಿ ಮನೆ ಮಾಡಿದ. ಇದು ಮಧ್ಯ ಪ್ರದೇಶದ ಪೂರ್ವಭಾಗದಲ್ಲಿ ಇದ್ದು, ಉತ್ತರ ಭಾರತದ ಪ್ರಮುಖ ತೀರ್ಥ ಕ್ಷೇತ್ರವಾಗಿದೆ.

೧೯೯೭ರಲ್ಲಿ ಕರುಣಾ ಚಿತ್ರಕೂಟದಲ್ಲಿರುವ ಮಹಾತ್ಮಾ ಗಾಂಧಿ ಗ್ರಾಮೀಣ ವಿಶ್ವವಿದ್ಯಾಲಯುದ ಕುಲಪತಿಯಾದರು. ಭಗ್ನಾವಶೇಷದ ತಳಹದಿಯ ಮೇಲೆ ಸಂಸ್ಥೆಯನ್ನು ಕಟ್ಟುವುದು ಭಯ ಹುಟ್ಟಿಸುವ ಸಂಗತಿಯಾಗಿತ್ತು. ಆದರೆ; ಕುಶಲ ಕರ್ಮಿಗಳ ಅನೇಕ ಗುಂಪುಗಳ ನಡುವೆಯೇ ಕೆಲಸ ಮಾಡುವುದು ಅವರಿಗೆ ರೋಮಾಂಚನ ಹುಟ್ಟಿಸಿತು. 'ಇಲ್ಲಿ ಮಿಲಿಯಾಂತರ ಜನರ ಗಮನ ಸೆಳೆಯುವ ಅವಕಾಶವಿದೆ. ಅವರು ಸಾಮಾಜಿಕ ಉದ್ಯಮಶೀಲತೆ ಕುರಿತು ತಿಳಿಸಬಹುದು. ಅವರ ತಲೆಯಲ್ಲಿನ ಯೋಚನಾ ಬೀಜ ಬೆಳೆಯುತ್ತಾ ಹೋದಂತೆ, ಯಾವ ಆಳ, ಅಗಲ ಪಡೆಯುವುದೋ ಯಾರಿಗೆ ಗೊತ್ತು?' ಕರುಣಾ ಅವರ ಅಭಿಪ್ರಾಯ ಇದು.

ಇವೆಲ್ಲಕ್ಕೂ ಮೊದಲು ಕರುಣಾ ಕುಲಪತಿಯ ಬಂಗಲೆ ಬಿಟ್ಟು, ಸಮೀಪದ ಹಳ್ಳಿಯಲ್ಲಿ ಮನೆ ಮಾಡಿದ್ದು, ಸರಿ ಎನಿಸದ ಸಹೋದ್ಯೋಗಿಗಳ ಭಿನ್ನಮತವನ್ನು ಅವರು ಎದುರಿಸಬೇಕಾಗಿದೆ.

ರವಿಂದ್ರ ಶರ್ಮ

ಒಂದು ನಿಶ್ಯಬ್ದ ಬೆಳಗು

ಒಂದು ಸುಂದರ ಮುಂಜಾವಿನಲ್ಲಿ ಮೂರು ಮಂದಿ ಧೋತಿ ಧಾರಿಗಳು ಬಾಪು ಕುಟಿಗೆ ಅಡಿಯಿಟ್ಟರು. ಆ ಮೂವರಲ್ಲಿ ಹಿರಿಯನ ಅಚ್ಚರಿಯಿಂದ ಸ್ತಂಭೀಭೂತನಾಗಿದ್ದ. ಆತ ಚಲನೆ ನಿಧಾನಗತಿಯದಾಗಿದ್ದು, ಅಪರಮಿತ ಸೌಂದರ್ಯವನ್ನು ಪೊರಸೂಸುತ್ತಿತ್ತು. ತನ್ನ ಹೆಗಲ ಮೇಲಿನ ಶಲ್ಯವನ್ನು ಸರಿಪಡಿಸಿಕೊಳ್ಳುತ್ತಾ ಪೀಠೋಪಕರಣಗಳು ತುಂಬಿರದ ಈ ಕುಟಿಯ ಉದ್ದಗಲಕ್ಕೂ ಓಡಾಡಿದ. ಇನ್ನೊಬ್ಬ ಸಣ್ಣ ಸಣ್ಣ ವಿವರಗಳಿಗೂ ವಿಸ್ಮಿತನಾಗುತ್ತಿದ್ದ. ಆತನ ಮುಖದಲ್ಲಿ ಹೊಳೆಯುತ್ತಿದ್ದ ನಗು, ಬದುಕಿನ ಬಗ್ಗೆ ಆತನ ಅದಮ್ಯ ಉತ್ಸಾಹವನ್ನು ಹೇಳುತ್ತಿತ್ತು. ಇನ್ನೊಬ್ಬ ಕಿರಿಯನ ಮುಖದಲ್ಲಿ ವಿಷಣ್ಣ ಭಾವವಿತ್ತು. ಹಳೆಯ ಬಿಳಿ ಬಟ್ಟೆಯಲ್ಲಿ ಕಟ್ಟಿದ ರುಮಾಲು ಮುದುರಿತ್ತು, ಮಾಸಿತ್ತು. ಈ ರುಮಾಲಿನೊಳಗಿಂದ ಚಾಚಿದ ಉದ್ದನೆಯ ಕೂದಲು ಕತ್ತಿನ ತನಕ ಜೋತಾಡುತ್ತಿತ್ತು.

'ಗುರೂಜಿ' ಎಂದೇ ಕರೆಯಲ್ಪಡುತ್ತಿದ್ದ ಆ ಹಿರಿಯ, ಪರ್ಣಕುಟಿಯನ್ನು ಆಮೂಲಾಗ್ರವಾಗಿ ವೀಕ್ಷಿಸಿ, ಪ್ರಶಂಸಾಪೂರ್ವಕವಾಗಿ ತಲೆ ಅಲ್ಲಾಡಿಸಿದ. ಆತನ ಊರಿನಿಂದ ಸೇವಾಗ್ರಾಮಕ್ಕೆ ಕೇವಲ ಅರ್ಧ ದಿನದ ಹಾದಿಯಾದರೂ ಮಹಾತ್ಮಾ ಗಾಂಧೀಜಿಯ ಬಗ್ಗೆ ಆತನಿಗೆ ಹೆಚ್ಚು ತಿಳಿದಿರಲಿಲ್ಲ. ಈ ಪ್ರಸಿದ್ಧ ಆಶ್ರಮಕ್ಕೆ ಬರಬೇಕೆಂದೂ ಅನಿಸಿರಲಿಲ್ಲ. ಆದರೆ, ಸಂಪೂರ್ಣ ಸ್ಥಳೀಯ ವಸ್ತುಗಳಿಂದಲೇ, ಅದರ ಸರಳತೆಯಿಂದಲೇ ಪೂರ್ಣವಾಗಿದ್ದ ಈ ಸರಳಾತಿ ಸರಳ ಮನೆ ಆತನ ಎದೆಯನ್ನು ಮೀಟಿತು. ಆತನ ಶಿಷ್ಯ ವರ್ಗ ಎಳೆದು ತಂದಿದ್ದ ಈ ಅಂತರರಾಷ್ಟ್ರೀಯ ಸಮಾವೇಶದ ಕಲಾಪಕ್ಕಿಂತ ಈ ಕುಟೀರ ಆಸಕ್ತಿಯನ್ನು ಕೆರಳಿಸಿತು.

ವಿಶ್ವಶಾಂತಿ ಸಮಾವೇಶ ಹಾಗೂ ಶಾಶ್ವತ ಅರ್ಥಶಾಸ್ತ್ರದ ಇಡಿಕಿರಿದ ಕಾರ್ಯಕ್ರಮದ ನಡುವೆ ರವೀಂದ್ರ ಶರ್ಮಾ ಎಂದು ಎಲ್ಲರಿಗೂ ಪರಿಚಿತರಾದ ಈ ಗುರೂಜಿಯನ್ನು ನಾನು ನಿಧಾನವಾಗಿ ಪರಿಚಯ ಮಾಡಿಕೊಂಡೆ. ಅವರ ಮಾತುಗಳಲ್ಲಿ ಮತ್ತೆ ಮತ್ತೆ ಕೇಳಿಬರುತ್ತಿದ್ದ 'ಕಲಾ ಆಶ್ರಮ' ಎಂಬ ಹೆಸರು ನನ್ನಲ್ಲಿ ಅಚ್ಚರಿ ಮೂಡಿಸಿತು. ಇವರ ಜೊತೆ ಇದ್ದ ಇಬ್ಬರು ಯುವಕರು ಚೆನ್ನೈ ಐಟಟಿಯನ್ನು ಬಿಟ್ಟು ಬಂದವರಾಗಿದ್ದರು. ರಹಸ್ಯ ಆಳವಾಗುತ್ತಾ ಹೋಯಿತು.

ಒಂದು ವರ್ಷದ ಅನಂತರ ೧೯೯೪ರಲ್ಲಿ ನಾನು ಆಶ್ರಮದ ಒಡನಾಡಿಗಳಲ್ಲಿ ಒಬ್ಬರಾದ ಉಜರಮ್ಮ ಜೊತೆಯಲ್ಲಿ ಕಲಾ ಆಶ್ರಮಕ್ಕೆ ಭೇಟಿ ನೀಡಿದೆ.

ಬುಡುಬುಡುಕೆ(ಬುಡುಬುಡುಕಾಲೋಡು)ಮತ್ತು ಕೋಲೆಬಸವ (ಗೊಸಾವೋಲು)

ತನ್ನ ಬಾಲ್ಯದಲ್ಲಿ ಬೆಳಗುಗಳನ್ನು ಸ್ವಾಗತಿಸುತ್ತಿದ್ದ ಆ ಹಾಡುಗಳನ್ನು ರವೀಂದ್ರ ಶರ್ಮಾ ನೆನಪಿಸಿಕೊಳ್ಳುತ್ತಾರೆ. ಅದೀಲಾಬಾದ್ ಆಗ ಸಣ್ಣ ಪಟ್ಟಣ. ಅಲ್ಲಿ ಬಹಳ ಕಡಿಮೆ ಜನವಸತಿ ಇತ್ತು. ಗದ್ದಲವೆಬ್ಬಿಸುವ ಆಧುನಿಕ ಸಲಕರಣೆಗಳು ಇರಲಿಲ್ಲ. ರಾತ್ರಿಗಳು ತೀರಾ ನಿಶ್ಶಬ್ದವಾಗಿರುತ್ತಿದ್ದವು. ಬಾಲಕ ರವೀಂದ್ರ ಕೆಲವು ರಾತ್ರಿಗಳಲ್ಲಿ ಎಚ್ಚರವಾಗಿ ಕಾಯುತ್ತಿದ್ದ. ಪ್ರಕೃತಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ ಕೈಯಿಂದ ನುಡಿಸುವ ಢಮರುವಿನ ನಾದ ದೂರದಲ್ಲಿ ಕ್ಷೀಣವಾಗಿ, ಲಯಬದ್ಧವಾಗಿ ಏಳುತ್ತಿತ್ತು.

ಬುಡುಬುಡುಕೆಯವರ ಢಮರುವಿನ ಶಬ್ದ ಸ್ಮಶಾನದಲ್ಲಿ ಎದ್ದದ್ದೇ ರಸ್ತೆಯ ಬದಿಯಲ್ಲಿ ಅಶ್ರಾವ್ಯವಾಗುತ್ತಿತ್ತು. ಅದು ದೆವ್ವ, ಭೂತಗಳನ್ನು ಓಡಿಸುತ್ತಾ ರಸ್ತೆಯ ಗುಂಟ ಅಲೆಯುತ್ತಿದೆ ಎಂದೆನಿಸುತ್ತಿತ್ತು. ಆಗ ಬೆಳಗಿನ ಜಾವ ಸುಮಾರು ೩ ಘಂಟೆ!

ಇದಾದ ಸ್ವಲ್ಪ ಹೊತ್ತಿನ ನಂತರ, ದಂಪತಿಗಳ ಒಂದು ತಂಡ ಕೋಲೆ ಬಸವ ಏಕತಾರಿ ನುಡಿಸಿಕೊಂಡು, ಭಜನೆ ಹಾಡಿಕೊಂಡು ಸಾಗುತ್ತಿತ್ತು. ಮೊದಲ ಕಿರಣಗಳು ಆಗಸದಲ್ಲಿ ಕಾಣುವ ಮೊದಲೇ ಹರಿದಾಸರುಗಳು ಬರುತ್ತಿದ್ದರು. ಕಾಲಿಗೆ ಗೆಜ್ಜೆ ಕಟ್ಟಿಕೊಂಡು, ನೃತ್ಯ ಮಾಡುತ್ತಾ ತಲೆಯ ಮೇಲಿನ ಮಣ್ಣಿನ ಮಡಿಕೆಯಿಂದ ನಾದ ಹೊರಡಿಸುತ್ತಾ ಭೈರವಿ ರಾಗವನ್ನು ಹಾಡುತ್ತಿದ್ದರು. ಈ ಹರಿದಾಸರೇ ಸುಪ್ರಭಾತ ಹಾಡುತ್ತಿದ್ದುದು. ಸೂರ್ಯನ ಪ್ರಖರ ಬಿಸಿಲು ಬಂದಾಗ ಒಂಟಿ, ಜೋಡಿ ಅಥವಾ ಮೂರು ಮಂದಿ ಜಂಗಮರು ಬಂದು ಶಿವನನ್ನು ಕುರಿತು ಹಾಡುತ್ತಿದ್ದರು. ಅವರು ಭಿಕ್ಷೆಯನ್ನೂ ಸಂಗ್ರಹಿಸುತ್ತಿದ್ದರು. ಮಧ್ಯಾಹ್ನ ಮುಗಿಯುವ ವೇಳೆಗೆ ಕಥಿ–ಪಾಲೋಡು ಬರುತ್ತಿತ್ತು. ಪ್ರಾಣಿಗಳು, ಅದರಲ್ಲೂ ವಿಶೇಷವಾಗಿ ಎತ್ತು ಅಥವಾ ಕರಡಿಯ ಸಂಗಡ ಜಾದೂಗಾರ ಬರುತ್ತಿದ್ದ. ಹೀಗೆ ದಿನವಿಡೀ ತರಹೇವಾರಿ ಜನ ಹಾಡುಗಾರರು, ನೀರು ಪತ್ತೆ ಹಚ್ಚುವ ಜನ, ರಸ್ತೆ ಹಕೀಮರು, ಸಂಚರಿಸುವ ವ್ಯಾಪಾರಿಗಳು ಮುಂತಾದವರು ಅದೀಲಾಬಾದನ್ನು ಅರ್ಥ, ಬಣ್ಣ ಮತ್ತು ಹಾಡಿನಿಂದ ತುಂಬಿಸುತ್ತಿದ್ದರು.

ಹಳ್ಳಿಯೊಂದರಲ್ಲಿ ಸುಮಾರು ೧೫ ದಿವಸಗಳ ಕಾಲ ನೆಲೆಸುವ ಬುಡುಬುಡುಕೆ ಮತ್ತು ಕೋಲೆಬಸವ ಇನ್ನೊಂದು ಪಟ್ಟಣಕ್ಕೆ ತಳಕೀಳುವ ಮುನ್ನ ಭಿಕ್ಷೆಗೆ ಬರುತ್ತಿದ್ದರು. ಈ ಜನರನ್ನು ಬೆಳಕಲ್ಲಿ ಕಾಣುವ ಆಸೆಯಿಂದ ರವೀಂದ್ರನಂತಹ ಮಕ್ಕಳು ಆ ಶಬ್ದಕ್ಕಾಗೇ ಕಿವಿಗೊಟ್ಟು, ಅದು ಕೇಳಿ ಬಂದರೆ ಸಾಕು, ಅದರ ಹಿಂದೆ ಓಡುತ್ತಿದ್ದರು. ಈ ಜನರನ್ನು ನೋಡುವ ಉತ್ಸುಕತೆ ಅವರಿಗೆ.

ರಾತ್ರಿ, ಆ ದಿವಸಕ್ಕೆ ತೆರೆ ಎಳೆದಾಗ ಅದೀಲಾಬಾದ್‌ನಲ್ಲಿ ತರುಣ ದಂಪತಿಗಳು ಸಂತಸ ಭರಿತ ಗುಂಪಿನಲ್ಲಿ ಕೋಲಾಟ ಮಾಡುತ್ತಾ ನೃತ್ಯ ಮಾಡುತ್ತಿದ್ದರು. ಉಳಿದಂತೆ, ಭಾಗವತ ಅಥವಾ ರಾಮಾಯಣ ಕತೆಗಳ ಸಾಭಿನಯ ಪ್ರದರ್ಶನವನ್ನು ಜನ ಮಂತ್ರಮುಗ್ಧರಾಗಿ ನೋಡುತ್ತಿದ್ದರು.

ಈ ಜನಪದ ಗಾಯಕರು, ಲಾವಣಿಕಾರರು ಹಲವಾರು ಶತಮಾನಗಳಿಂದ ಅದೀಲಾಬಾದಿನಂತೆ ಇತರ ಪೇಟೆ, ಗ್ರಾಮಗಳನ್ನು ಜೀವಂತವಾಗಿರಿಸಿದ್ದಾರೆ. ಒಂದು ನಿರ್ದಿಷ್ಟ ಬುಡುಬುಡಿಕೆಯ ಗುಂಪು ಅಥವಾ ಕೋಲೆಬಸವ ಬಂದುಹೋಗಿಬಿಡಬಹುದು. ಆದರೆ, ಅವರ ಮುಂಜಾನೆಯ ಸಂಗೀತದ ನಿರಂತರತೆಗೆ ಭಂಗ ಬರುತ್ತಿರಲಿಲ್ಲ. ಚಿಲಿಪಿಲಿಗುಟ್ಟುವ ಪಕ್ಕಿ, ಪಕ್ಷಿಗಳು, ಮರಗಳಿಂದ ಬೀಸುವ ಗಾಳಿಯಂತೆ ಇವು ನಿರಂತರವಾದವು. ಈ ಎಲ್ಲ ಗಾಯಕರು, ಲಾವಣಿಕಾರರು, ಬೇರೆ ಬೇರೆ ರೀತಿಯಲ್ಲಿ ದೈನಂದಿನ ಬದುಕನ್ನು ವಿಶ್ವದ ಅನಂತತೆಯೊಡನೆ ಬೆಸೆಯುತ್ತಿದ್ದರು. ರವೀಂದ್ರ ಇದನ್ನು ನೋಡನೋಡುತ್ತಿದ್ದಂತೆಯೇ ಕೋಲೆಬಸವ ಮತ್ತು ಅಂತಹ ಗುಂಪಿನ ಸಂಖ್ಯೆ ಈಚಿನ ದಿವಸಗಳಲ್ಲಿ ಕಡಿಮೆಯಾಗುತ್ತಿದೆ ಎಂಬ ಅಂಶ ಅಂಶ ಗಮನಕ್ಕೆ ಬಂತು.

ಆದರೆ ರವೀಂದ್ರ ತಮ್ಮ ವಯಸ್ಕ ಕಣ್ಣುಗಳಿಂದ ಸುತ್ತಲಿನ ಪ್ರಪಂಚವನ್ನು ಅರಿವಿಗೆ ತಂದುಕೊಳ್ಳುವ ವೇಳೆಗೆ ಅದೀಲಾಬಾದ್‌ನ ಮೌನ ಮುಂಬೆಳಗಿಗೆ ಎಚ್ಚರಗೊಂಡಿತ್ತು. ಕಾಲಪ್ರವಾಹದಲ್ಲಿ ಇದು ಅನಿವಾರ್ಯವಾಗಿರಬಹುದು ಎಂದೇ ಬಹುತೇಕ ಮಂದಿ ಭಾವಿಸಿದ್ದರು. ಆದರೆ ಈ ಮೌನ ರವೀಂದ್ರರಿಗೆ ಘಾಸಿಯುಂಟುಮಾಡಿತು. ಈ ಲಾವಣಿಕಾರರೊಂದಿಗೆ ಇಡೀ ಸಂಸ್ಕೃತಿ, ಒಂದು ಜೀವನ ವಿಧಾನ ಮಾಯವಾಗುತ್ತಿದೆ ಎಂಬುದನ್ನು ಅರಿತಿದ್ದರು. ಅದು ಒಂದು ಶೂನ್ಯವನ್ನು ಸೃಷ್ಟಿಸಿತು. ಒಂದು ನೆಲೆಗಷ್ಟೇ ಸೀಮಿತವಾದ ಆಕಾಶವಾಣಿ ಕಾಯಕ್ರಮಗಳು ಎಂದೂ ಈ ಹಾಡುಗಾರರ ಉಪಸ್ಥಿತಿಗೆ ಪರ್ಯಾಯವಾಗಲಾರದು. ಬದುಕು ಮತ್ತು ಕಲೆ, ಕಲೆ ಮತ್ತು ಸೌಂದರ್ಯ ಎರಡೂ ಬೇರೆ ಬೇರೆಯಾಗುತ್ತಿದೆ ಎಂದೆನಿಸುತ್ತಿತ್ತು.

ಒಂದಾನೊಂದು ಕಾಲದಲ್ಲಿ ಅದೀಲಾಬಾದ್

ಒಂದಾನೊಂದು ಕಾಲದಲ್ಲಿ ದಂಡಕಾರಣ್ಯದ ಕಾಡುಗಳು ಈಗ ಅದೀಲಾಬಾದ್‌ನ ರಸ್ತೆಗಳು, ಕಟ್ಟಡಗಳು ಇರುವ ಸ್ಥಳವನ್ನು ಆಕ್ರಮಿಸಿದ್ದವು. ಮಹಾಕಾವ್ಯ ರಾಮಾಯಣದ ಪ್ರಕಾರ ರಾಮ ಮತ್ತು ಲಕ್ಷ್ಮಣ ಮಧ್ಯಪ್ರದೇಶದ ಈ ಅರಣ್ಯದಲ್ಲಿಯೇ ಸೀತೆಯನ್ನು ಹುಡುಕಿಕೊಂಡು ಅಲೆದಾಡಿದ್ದು. ಈ ದಂತಕತೆಯನ್ನು ಪ್ರೀತಿಯಿಂದ ಹಾಗೂ ನಿಷ್ಠೆಯಿಂದ ಜೀವಂತವಾಗಿ ಇಡಲಾಗಿದೆ. ಈಗಲೂ ಅನೇಕ ಹಳ್ಳಿಗಳಲ್ಲಿ ಜನರು ರಾಮಾಯಣ ಮತ್ತು ಇತರ ಪುರಾಣ ಕತೆಗಳಿಂದ ಆಯ್ದ ಭಾಗವನ್ನು ಅಭಿನಯಿಸಿ ತೋರಿಸುತ್ತಾರೆ. ಇವು ಕಾಲನ ದವಡೆಗೆ ಸಿಕ್ಕು ನಾಶವಾದ ಕಟ್ಟಡಗಳ ಭಗ್ನಾವಶೇಷಗಳಿಗಿಂತ ಹೆಚ್ಚಿನದು. 'ಅದೀಲಾಬಾದ್'ಎಂದು ಕರೆಸಿಕೊಳ್ಳುವ ಈ ಜಾಗದ ಸಮೀಪದಲ್ಲಿ ಜೈನ ದೇವಾಲಯದ

ಭಗ್ನಾವಶೇಷಗಳ ಕುರುಹುಗಳು ಇವೆ. ಕಟ್ಟಡದ ಅಳಿದುಳಿದ ಭಾಗ ಮತ್ತು ಭಗ್ನಗೊಂಡ ಮೂರ್ತಿಗಳ ಬಗ್ಗೆ ಇಲ್ಲಿನ ಜನ ದಿವ್ಯ ನಿರ್ಲಕ್ಷ್ಯ ತಾಳಿದ್ದರು.

ಸುಮಾರು ೪೦೦ ವರ್ಷಗಳ ಹಿಂದೆ ಎರಡು ವೈಷ್ಣವ ಸಂಪ್ರದಾಯದ ಮಠಗಳು ಅಸ್ತಿತ್ವಕ್ಕೆ ಬಂದವು ಎಂಬುದು ಇಲ್ಲಿಯ ನಂಬಿಕೆ. ಸುಮಾರು ೧೫೦ ವರ್ಷಗಳ ಹಿಂದೆ ಈ ಮಠಗಳ ಗೋಡೆಯ ಸುತ್ತಮುತ್ತವೇ ಈಗಿನ 'ಅದೀಲಾಬಾದ್' ಪುಟ್ಟ ಪೇಟೆ ಅಸ್ತಿತ್ವಕ್ಕೆ ಬಂತು. ಇಪ್ಪತ್ತನೆಯ ಶತಮಾನದ ಆರಂಭದ ಹೊತ್ತಿಗೆ ಇದು ನೂರಾರು ಕೈಮಗ್ಗಗಳು ಕಾರ್ಯ ನಿರ್ವಹಿಸುತ್ತಿರುವ ಪುಟ್ಟ ನಗರವಾಗಿತ್ತು. ವೈವಿಧ್ಯಮಯವಾದ ಕುಶಲ ಕರ್ಮಿಗಳು ತಮ್ಮ-ತಮ್ಮ ಉತ್ಪಾದನೆಗಳಿಂದ ಇಲ್ಲಿನ ಆರ್ಥಿಕತೆಗೆ ನೆರವು ನೀಡುತ್ತಿದ್ದರು. ಆಗ ಈ ಭಾಗ ಹೈದರಾಬಾದ್ ನಿಜಾಮನ ಆಳ್ವಿಕೆಗೆ ಒಳಪಟ್ಟಿತ್ತು. ಬ್ರಿಟಿಷ್ ಪ್ರಭಾವ ಅಷ್ಟಿರಲಿಲ್ಲ. ಸುಮಾರು ೧೯೪೦ರ ವೇಳೆಗೆ ಆಧುನಿಕ ರಸ್ತೆ ಮತ್ತು ರೈಲ್ವೆ ಲೈನ್‌ಗಳನ್ನು ಈ ಪ್ರದೇಶಗಳಲ್ಲಿ ಹಾಕಲಾಯಿತು.

ರಸ್ತೆ ದೂರದೂರದ ವ್ಯಾಪಾರಿಗಳನ್ನು, ಉದ್ಯಮಿಗಳನ್ನು ಆಕರ್ಷಿಸಿತು. ಹೀಗಾಗಿ ಪಂಜಾಬಿನ ತರುಣ ಲಾಹೋರಿ ರಾಮಶರ್ಮ ತಮ್ಮ ಅದೃಷ್ಟ ಪರೀಕ್ಷಿಸಲು ಆದೀಲಾಬಾದ್‌ಗೆ ಬಂದರು. ಅವರು ಇಲ್ಲಿ ಹಣ ಸಂಪಾದಿಸಿಕೊಂಡು ಒಂದಲ್ಲ ಒಂದು ದಿವಸ ತಮ್ಮ ಹುಟ್ಟಿದ ಊರಿಗೆ ಮರಳಿಬಿಡಬೇಕೆಂಬ ಆಸೆ ಇಟ್ಟುಕೊಂಡಿದ್ದರು. ಆದರೆ ಚರಿತ್ರೆಯ ಲೆಕ್ಕಾಚಾರವೇ ಬೇರೆಯಾಗಿತ್ತು. ಈ ರೈಲ್ವೆ ಹಳಿ ಹಾಕುತ್ತಿದ್ದ ವೇಳೆಯಲ್ಲಿ ಲಾಹೋರಿ ಇಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಆ ಕಾಲಕ್ಕೆ ಬ್ರಿಟಿಷರು ಈ ದೇಶ ಬಿಟ್ಟು ಹೋಗುವ ತರಾತುರಿಯಲ್ಲಿದ್ದರು. ದೇಶ ಹೋಳಾಗುತ್ತಿತ್ತು. ಲಾಹೋರಿಯ ಸ್ವಂತ ಸ್ಥಳ ವಿದೇಶೀ ಆಡಳಿತಕ್ಕೆ ಒಳಪಟ್ಟಂತೆ ಆಯಿತು. ದೇಶ ವಿಭಜನೆ ಅಧಿಕೃತವಾಗಿ ಪಾಕಿಸ್ತಾನದ ಅಸ್ತಿತ್ವ ಪ್ರಕಟವಾಗುವ ಸ್ವಲ್ಪ ಮುಂಚೆಯೇ ಲಾಹೋರಿಯವರ ಇಡೀ ಕುಟುಂಬ ತೀರಾ ಅಗತ್ಯದ ಜೀವನಾವಶ್ಯಕ ವಸ್ತುಗಳನ್ನು ಕೈಲಿ ಹಿಡಿದು ನೆಲೆ ನಿಲ್ಲಲು ಆದೀಲಾಬಾದ್‌ಗೆ ಬಂತು.

ಇದು ನಡೆದು ಅರ್ಧ ಶತಮಾನ ಕಳೆದರೂ ವಯಸ್ಸಾಗಿರುವ ಲಾಹೋರಿ ಮತ್ತು ಅವರ ತಮ್ಮ ಈಗಲೂ ಆ ಕತೆಗಳನ್ನು ಹೇಳಿಕೊಂಡು ತಮ್ಮ ಮನಸ್ಸನ್ನು ಹಗುರ ಮಾಡಿಕೊಳ್ಳುತ್ತಾರೆ. ಆದರೆ ಓಡಿ ಬರದೇ ಅಲ್ಲಿಯೇ ಕಾದು ನೋಡೋಣ ಎಂದು ಉಳಿದ ಕುಟುಂಬಗಳು ಅತ್ಯಂತ ಕ್ರೂರವಾದ ಮತೀಯ ದೊಂಬಿಗಳಿಗೆ ಸಿಕ್ಕವು. ಅವರದೇ ನಿರ್ದಿಷ್ಟವಾದ ಮಾತಿನ ಸೊಗಡು, ಉಡುಪು ಉಳಿಸಿಕೊಂಡ ಶರ್ಮಾ ತಮ್ಮ ಅಪಮಾನ ಬದಿಗಿರಿಸಿ ಬದುಕು ಸಾಗಿಸುತ್ತಾ ಬಂದವರು. ಈ ಕೂಡು ಕುಟುಂಬವಲ್ಲಿ ೧೯೫೨ರಲ್ಲಿ ಹುಟ್ಟಿದ ಮಗುವಿಗೆ ಅವರು ರವೀಂದ್ರ ಎಂದು ಹೆಸರಿಟ್ಟರು.

ಮಗು ರವೀಂದ್ರ ಐದು ವರ್ಷಕ್ಕೂ ಸಣ್ಣವನಿರುವಾಗಲೇ ಆತನಿಗೆ ಪ್ರತಿಮಾ ಸೃಷ್ಟಿ ಮತ್ತು ಬಣ್ಣಗಳೊಡನೆ ಆಟವಾಡುವುದರಲ್ಲಿ ತೀವ್ರ ಆಸಕ್ತಿ ಇತ್ತು. ಪುಟ್ಟ ರವೀಂದ್ರ ಕೆಳಜಾತಿಗೆ ಸೇರಿದ ನಕಾಶಿ ಕಲಾವಿದರ ಮನೆಯಲ್ಲಿ ಗಂಟೆಗಟ್ಟಲೆ ಕುಳಿತು ಮರದ ವಿಗ್ರಹ ಕೆತ್ತುವುದನ್ನು,

ಅದಕ್ಕೆ ಬಣ್ಣ ಬಳಿಯುವುದನ್ನು ನೋಡುತ್ತಾ ಇರುತ್ತಿದ್ದ. ಅಲ್ಲಿಂದ ಮನೆಗೆ ವಾಪಾಸು ಬಂದಾಗ ರವೀಂದ್ರನ ಅಜ್ಜಿ , ಅವನ ಮೇಲೆ ಒಂದು ಬಕೆಟ್ ತಣ್ಣೀರು ಸುರಿದು ಶುದ್ಧಿಗೊಳಿಸಿ ಮನೆಯ ಒಳಗೆ ಸೇರಿಸುತ್ತಿದ್ದಳು.

ಈಗ ಅದೀಲಾಬಾದ್ ಜಿಲ್ಲಾ ಕೇಂದ್ರವಾಗಿದ್ದರೂ ಆಗ ಅಲ್ಲಿ ಹೆಚ್ಚು ಗದ್ದಲಗಳಿರಲಿಲ್ಲ. ಅದೊಂದು ಪುಟ್ಟ ಪೇಟೆಯಾಗಿತ್ತು ಅಷ್ಟೆ. ಸ್ಥಳೀಯವಾಗಿದ್ದ ನಾರಾಯಣ ಸ್ವಾಮಿ ಹಾಗೂ ಗೋಪಾಲಕೃಷ್ಣ ಮಠಗಳು ಹಬ್ಬ-ಹರಿದಿನ ಜಾತ್ರೆ ಇತ್ಯಾದಿಗಳಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದವು. ಈ ಮಠದ ಮಹಂತರು ವರ್ಷದಲ್ಲಿ ಐದೋ ಆರೋ ದಿವಸ ಮಠದ ಹೊರಗೆ ಕಾಣಿಸಿಕೊಂಡು ಆದೀಲಾಬಾದ್ ಮತ್ತು ಸುತ್ತಲಿನ ಗ್ರಾಮಗಳ ಭಿಕ್ಷೆಗೆ ಹೊರಡುತ್ತಿದ್ದರು.

ಈ ಸಂದರ್ಭದಲ್ಲಿ ಅನೇಕ ವಿಶೇಷ ಕಾರ್ಯಕ್ರಮಗಳು ನಡೆಯುತ್ತಿದ್ದವು. ಅವು ಮಕ್ಕಳಿಗೆ ಖುಷಿ ಕೊಡುತ್ತಿತ್ತು. ಆದರೆ ಪುಟ್ಟ ರವೀಂದ್ರನಿಗೆ, ಮಹಂತರಿಗೆ ಗೌರವ ಸೂಚಿಸುವ ಸಲುವಾಗಿ ಮಾಡಿದ ವಿಧವಿಧವಾದ ಅಲಂಕಾರಗಳು, ತೋರಣಗಳು ಇತ್ಯಾದಿ ಅರ್ಥಪೂರ್ಣವಾಗಿ ಕಾಣುತ್ತಿತ್ತು. ಆತ ಮಹಂತರ ತೋರಣದ ಕೆಳಗೆ ಸಾಗುತ್ತಿರುವ ಈ ಸಾಂಪ್ರದಾಯಿಕ ಮೆರವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ. ಗೃಹಸ್ಥರು ಮಹಂತರನ್ನು ತಮ್ಮ ಮನೆಗೆ ಬರಮಾಡಿಕೊಂಡು ಪಾದ ತೊಳೆದು ಆತನ ಜೋಳಿಗೆಗೆ ಧಾನ್ಯ ಹಾಕುತ್ತಿದ್ದರು. ಈ ಭಿಕ್ಷೆಯ ಸಂಗಡ ಆ ಕುಟುಂಬ ವರ್ಷಪೂರ್ತಿ ಮಠಕ್ಕೆ ಇಂತಿಷ್ಟು ಧಾನ್ಯ ನೀಡುತ್ತದೆ ಎಂಬ ಭರವಸೆಯನ್ನು ನೀಡಬೇಕಿತ್ತು.

ದಸರೆಯ ಸಮಯುದಲ್ಲಿ ಗೋಪಾಲಕೃಷ್ಣ ಮಠದ ಮಹಂತರು ಪಲ್ಲಕ್ಕಿಯ ಮೇಲೆ ಕುಳಿತು ಮೆರವಣಿಗೆ ನಡೆಸುತ್ತಿದ್ದರು. ಊರ ಹೊರಗಿನ ಬನ್ನಿ ವೃಕ್ಷದತ್ತ ಸಾಗುವ ಈ ಮೆರವಣಿಗೆಯಲ್ಲಿ ಊರಿಗೆ ಊರೇ ಭಾಗವಹಿಸಿ ಈ ಮರವನ್ನು ಪೂಜಿಸುತ್ತಿತ್ತು. ಆ ಮರದ ಪತ್ರೆ ಕಿತ್ತು ಇಟ್ಟುಕೊಳ್ಳುತ್ತಿದ್ದರು. ಮೆರವಣಿಗೆ ಮರಳಿ ಮಠಕ್ಕೆ ವಾಪಸಾಗುತ್ತಿತ್ತು. ಈ ಬನ್ನಿ ಪತ್ರೆಗಳು ಬೆಳ್ಳಿ ನಾಣ್ಯವನ್ನು ಸಂಕೇತಿಸುತ್ತಿದ್ದು, ಅವುಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಿದ್ದರು. ದಸರೆಯ ಸಂಜೆ ಜನರು ಅಕ್ಕಪಕ್ಕದ ಮನೆಗಳಿಗೆ ಹೋಗಿ, ಹಿರಿಯರನ್ನು ಭೇಟಿ ಮಾಡಿ, ಆಶೀರ್ವಾದ ಪಡೆಯುತ್ತಿದ್ದರು. ಹಲವಾರು ದಶಕಗಳು ಕಳೆದರೂ ಈ ಎಲ್ಲ ದೃಶ್ಯಾವಳಿಗಳು ರವೀಂದ್ರರ ಮನಸ್ಸಿನಲ್ಲಿ ಅಚ್ಚೊತ್ತಿದಂತಿವೆ. ಆಕರ್ಷಕ ಬಣ್ಣದ ಮತ್ತು ವಿವಿಧ ಆಕೃತಿಗಳಲ್ಲಿ ಕಟ್ಟಿದ ರುಮಾಲುಗಳ ಮೂಲಕ ರವೀಂದ್ರ ತಮ್ಮ ಬಾಲ್ಯದ ನೆನಪುಗಳನ್ನು ಹಸಿರಾಗಿಟ್ಟುಕೊಂಡಿದ್ದಾರೆ.

ರವೀಂದ್ರ ತಮಗೆ ಎಂಟು ವರ್ಷದವಿದ್ದಾಗಲೇ ಲಾಠೀ ವರಸೆ ಕಲಿಸುವ ಮೇಷ್ಟ್ರನ್ನು ಪತ್ತೆಮಾಡಿಕೊಂಡರು. ನಂತರ ಸುಮಾರು ೧೨ನೆಯ ವಯಸ್ಸಿನ ಹೊತ್ತಿಗೆ ಅದರಲ್ಲಿ ನಿಷ್ಣಾತರಾದರು. ಬಹಳ ಬೇಗನೆ ಎಲ್ಲರೂ ಗುರುತಿಸುವ ವ್ಯಕ್ತಿಯಾದರು ರವೀಂದ್ರ. ಆಗ ದೊರೆತ ಗುರೂಜಿ ಎಂಬ ಅಡ್ಡ ಹೆಸರು ಕೊನೆಯವರೆಗೂ ಉಳಿಯಿತು. ಅವರು ೧೬ರ

ಹರೆಯಕ್ಕೆ ಬಂದಾಗ ಸ್ವಂತ ಗರಡಿಯನ್ನು ನಡೆಸುತ್ತಿದ್ದರು. ತಮಗೆ–ಮುಖ ನೋಡಿ, ಜನರ ಭವಿಷ್ಯ ಹೇಳುವ ಕಲೆ ಇದೆ ಎಂಬುದನ್ನು ಪತ್ತೆಮಾಡಿಕೊಂಡರು. ಇದರಿಂದಾಗಿ ಜನರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಯಂತ್ರ, ಮಂತ್ರಗಳನ್ನು ಬೇಡತೊಡಗಿದರು. ಆ ಸಮಯದಲ್ಲಿ ಇತರ ಕಡೆಗಳಂತೆ ಪುಟ್ಟ ಪೇಟೆಯಂತೆ, ಅದೀಲಾಬಾದ್‌ನ ಆರ್ಥಿಕ ವ್ಯವಸ್ಥೆ ಕೂಡಾ ಆದರ ಸ್ಥಳೀಯ ಸಂಪನ್ಮೂಲಗಳ ಜತೆಗೆ ಬೆಳೆಯುತ್ತಿತ್ತು. ಭೂಮಿ ಇದ್ದವರು ಧಾನ್ಯಗಳನ್ನು ಬೆಳೆಯುತ್ತಿದ್ದರು. ಅದರ ಜತೆ ಸ್ವಲ್ಪ ಹತ್ತಿಯನ್ನೂ ಬೆಳೆಯುತ್ತಿದ್ದರು. ತಮಗೆ ಅಗತ್ಯವಿರುವ ಟೀ, ಬೆಲ್ಲ, ಉಪ್ಪು ಇಂತಹ ಪದಾರ್ಥಗಳಿಗಾಗಿ ಮಾತ್ರ ಮಾರುಕಟ್ಟೆಯನ್ನು ಆಶ್ರಯಿಸುತ್ತಿದ್ದರು. ರವೀಂದ್ರ ಬೆಳೆದಂತೆ ಅದೀಲಾಬಾದ್ ಸಮಾಜ ಮತ್ತು ಆದರ ಆರ್ಥಿಕ ವ್ಯವಸ್ಥೆ ಬೇಗನೆ ಬದಲಾಗುತ್ತಾ ಹೋಯಿತು.

ಹಳೆಯ ಕೈಗಾರಿಕೆಗಳು ಮತ್ತು ವ್ಯಾಪಾರ ಸಾಯುತ್ತಾ ಬಂತು. ಸ್ಥಳೀಯ ಕುಶಲ ಕರ್ಮಿಗಳ ಉತ್ಪಾದನೆಗಳ ಬದಲಿಗೆ ಆಧುನಿಕ ಮಾರುಕಟ್ಟೆಯಲ್ಲಿ ಬೃಹತ್ ಪ್ರಮಾಣದಲ್ಲಿ ತಯಾರಾದ ವಸ್ತುಗಳು ಬಂದವು. ಈ ನಿರ್ಣಾಯಕವೆನಿಸುವ ಬದಲಾವಣೆಗಳು ಜನರ ಬದುಕನ್ನೂ ಪ್ರಭಾವಿಸಿತು. ಅವರಿಗೆ ಮಠ, ಬುಡುಬುಡಿಕೆಯವರು ಅಥವಾ ಯಾವುದೇ ಇತರ ಸಾಂಸ್ಕೃತಿಕ ವಿಷಯದೊಂದಿಗೆ ಪಾರಂಪರಿಕ ನಂಟು ಇರಲಿಲ್ಲ. ಅವಕಾಶ ಮತ್ತು ಹಣದ ನಡುವೆ ಹೊಸ ಹೊಸ ಸಮೀಕರಣಗಳು ಆಕಾರ ತಳೆಯುತ್ತಿದ್ದವು. ಇವೆಲ್ಲದರ ಪರಿಣಾಮವೋ ಎಂಬಂತೆ ೬೦ರ ದಶಕದ ಉತ್ತರಾರ್ಧದಲ್ಲಿ 'ದಸರಾ ಉತ್ಸವ'ದ ನೇತೃತ್ವ ಮಹಂತರ ಕೈತಪ್ಪಿ ಜಿಲ್ಲಾಕಾರಿಗಳ ಮುಂದಾಳುತನದಲ್ಲಿ ನಡೆಯಿತು.

ಈ ಬದಲಾವಣೆಗಳು ರವೀಂದ್ರರನ್ನು ಅಪ್ರತಿಭರನ್ನಾಗಿಸಿತು. ಇದು ಏಕೆ ಹೀಗೆ? ಎಂದು ಖಚಿತವಾಗಿ ಹೇಳಲು ಸಾಧ್ಯವಿರಲಿಲ್ಲ. ತಮ್ಮ ಸುತ್ತಲಿನ ಬದುಕನ್ನು ಅನ್ವೇಷಿಸುವತ್ತ ಆತ ಗಮನವನ್ನು ಕೇಂದ್ರೀಕರಿಸಿದ್ದರು. ರವೀಂದ್ರ, ಮನೆಯ ಎಲ್ಲರೂ ಧರಿಸುತ್ತಿದ್ದ ಪಾಶ್ಚಾತ್ಯ ಉಡುಗೆಗಳಾದ ಪ್ಯಾಂಟ್ ಶರ್ಟ್ ಧರಿಸುವುದನ್ನು ಬಿಟ್ಟರು. ತಾನು ಹತ್ತಿಯಿಂದ ತಯಾರಾದ ಧೋತ್ರ ಮತ್ತು ಜುಬ್ಬಾ ಧರಿಸಿ, ಹಣೆಯ ಮೇಲೆ ಬೊಟ್ಟು ಇಟ್ಟುಕೊಳ್ಳಲು ಪ್ರಾರಂಭಿಸಿದರು.

ಶಾಲೆಯ ಸಮಯ ಹೊರತುಪಡಿಸಿ ಉಳಿದ ಸಮಯದಲ್ಲಿ ಅದೀಲಾಬಾದ್ ಮತ್ತು ಸುತ್ತಲಿನ ಗ್ರಾಮಗಳಲ್ಲಿ ಅಲೆಯಲು ಪ್ರಾರಂಭಿಸಿದರು. ಈ ಅಲೆದಾಟದಲ್ಲಿ ಕುಶಲ ಕರ್ಮಿಗಳು, ಶಿಲ್ಪಿಗಳು ಚಿತ್ರಕಾರರು ಮೊದಲಾದ ಕಲಾವಿದರಿಗಾಗಿ ಹುಡುಕಾಟ ನಡೆಸುತ್ತಿದ್ದರು. ತಮ್ಮ ಅತ್ಯಂತ ಆಪ್ತ ಗೆಳೆಯ ನಿಶಿಕಾಂತನ ಜೊತೆ ಭಗ್ನಗೊಂಡಿರುವ ಜಿನಾಲಯದ ಸೌಂದರ್ಯ ಮತ್ತು ನಿಗೂಢತೆ ಕುರಿತ ಚರ್ಚೆಯಲ್ಲಿ ಬಹು ಸಮಯ ಕಳೆಯುತ್ತಿದ್ದರು. (ಆ ಸಮಯದಲ್ಲಿ ಭಗ್ನ ಜಿನಾಲಯಗಳಲ್ಲಿ ಮೂರ್ತಿಗಳು, ಕಲ್ಲಿನ ಅವಶೇಷಗಳು ಕಾಣಸಿಗುತ್ತಿದ್ದವು. ಅದೀಲಾಬಾದ್ ವ್ಯಾಪಾರ ವಹಿವಾಟಿನಲ್ಲಿ ಮುಂದುವರೆದಂತೆಲ್ಲ ಸುಮಾರು ಸಾವಿರಾರು ವರ್ಷಗಳಿಂದ ಅಲುಗಿಸದೇ ಬಿಟ್ಟಿದ್ದ ಜಿನಾಲಯದ ಭಗ್ನಾವಶೇಷಗಳನ್ನು ದೋಚಲಾಯಿತು.

ಈ ಪ್ರದೇಶದ ಸುತ್ತ ಇತ್ತು ಎಂದು ಹೇಳಲಾಗುವ ೧೧೮ ದೇವಾಲಯಗಳ ಅನ್ವೇಷಣೆಗೆಂದು ರವೀಂದ್ರ ಮತ್ತು ನಿಶಿಕಾಂತ್ ಎತ್ತಿನ ಬಂಡಿಯೊಂದನ್ನು ಹುಡುಕಿ ಯಾತ್ರೆ ಕೈಗೊಳ್ಳುತ್ತಿದ್ದರು. ವರ್ಷಗಟ್ಟಲೆ ಶ್ರಮವಹಿಸಿ ಸುಮಾರು ೬೦ ದೇವಾಲಯಗಳನ್ನು ಗುರುತಿಸಿದರು. ಈ ಅಲೆದಾಟದ ದಿನಗಳು ಅದ್ಭುತ ಸಂತಸ ತಂದುಕೊಟ್ಟವು ಎಂದು ರವೀಂದ್ರ ಈಗ ನೆನಪಿಸಿಕೊಳ್ಳುತ್ತಾರೆ. ಆ ದಿನಗಳಲ್ಲಿ ಹಳ್ಳಿಗರೇ ಇವರಿಗೆ ಊಟ, ಆಶ್ರಯ ಕೊಡುತ್ತಿದ್ದರು, ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು. ಅವರ ಬಂಡಿಯ ಎತ್ತುಗಳಿಗೆ ಮೇವನ್ನೂ ಒದಗಿಸುತ್ತಿದ್ದರು. ಅದರಿಂದ ಇವರಿಗಾಗುವಷ್ಟೇ ಆನಂದ ಇವರ ಆತಿಥೇಯರಿಗೂ ಆಗುತ್ತಿತ್ತು. ಹಳ್ಳಿಯಿಂದ ಹಳ್ಳಿಗೆ ನಡೆದ ಈ ಪಯಣದಲ್ಲಿ 'ಅತಿಥಿ ದೇವೋಭವ' ಎಂಬ ಜೀವಂತ ಸಂಸ್ಕೃತಿಯ ಪರಿಚಯವಾಯಿತು.

ಈ ಅಲೆದಾಟಗಳಲ್ಲಿ ಇವರು ಕೆಲವು ಮೂಲಭೂತ ನಿಯಮಗಳನ್ನು ಮಾಡಿಕೊಂಡಿದ್ದರು. ರವೀಂದ್ರ ಮತ್ತು ನಿಶಿಕಾಂತ್ ಒಮ್ಮೆ ಪಯಣಿಸಿದ ಹಾದಿಯಲ್ಲಿ ಎಂದೂ ಹಿಂದಿರುಗಿ ಬರುತ್ತಿರಲಿಲ್ಲ. ಒಂದು ಹೊಸ ಪರಿಚಯ ಅಥವಾ ಗೆಳೆತನ ಆದ ಹೊರತು ಹಳ್ಳಿಯಲ್ಲಿ ಊಟ ಮಾಡುತ್ತಿರಲಿಲ್ಲ. ರವೀಂದ್ರ ತನ್ನ ಹದಿವಯಸ್ಸನ್ನೂ ಮೀರಿ ದೃಢಕಾಯರಾದ ಬಳಿಕವೂ ಅವರ ಈ ಅಭ್ಯಾಸ ಮುಂದುವರೆದೇ ಇತ್ತು.

ರವೀಂದ್ರ, ನಡು ಎತ್ತರದ ಅಗಲವಾದ ಭುಜ ಮತ್ತು ಉದ್ದನೆಯ ಮೀಸೆಯುಳ್ಳ ವ್ಯಕ್ತಿಯಾಗಿ ಮಾರ್ಪಾಡಾದರು. ಹಣೆಯ ಮೇಲೆ ಅಚ್ಚ ಕೆಂಪಿನ ತಿಲಕ ಇಟ್ಟುಕೊಂಡಿರುತ್ತಿದ್ದರು ಮತ್ತು ಕೈಯಲ್ಲಿ ಯಾವಾಗಲೂ ಕೇಸರಿ ಚೀಲವನ್ನು ಹಿಡಿದಿರುತ್ತಿದ್ದರು. ದೊಡ್ಡ ಮೀಸೆ, ನೇತಾಡುವ ಕೇಸರಿ ಬಣ್ಣದ ಜೋಳಿಗೆ–ಈತ ತಾಂತ್ರಿಕನಿರಬಹುದೇ ಎಂಬ ಸಂದೇಹವನ್ನು ಹುಟ್ಟಿಸುತ್ತಿತ್ತು. ತಾಂತ್ರಿಕರು ಬಳಸುವ ಪರಿಕರಗಳು ಅದರಲ್ಲಿವೆಯೇನೋ ಎನ್ನಿಸುವಂತಿತ್ತು. ರವೀಂದ್ರ ಜನರ ಬಳಿ ಹಳೆಯ ದೇವಾಲಯಗಳ ಬಗ್ಗೆ ಕೇಳಿದಾಗ–ಇವು ಯಾವುವೂ ನೆರವಿಗೆ ಬರುತ್ತಿರಲಿಲ್ಲ. ಈತ ವಿಗ್ರಹ ಚೋರನೋ, ವಿಗ್ರಹಗಳಿಗೆ ಇರುವ ಚಿನ್ನದ ಆಭರಣಗಳನ್ನು ಕಳವು ಮಾಡಲು ಬಂದವನೋ ಇರಬೇಕು ಎನಿಸುತ್ತಿತ್ತು. ಕೆಲವು ವೇಳೆ ಅಪರಿಚಿತರನ್ನು ಸಂಭಾಳಿಸಲು ಸ್ವಲ್ಪ ಸಮಯ ತಗಲುತ್ತಿತ್ತು. ಈತನ ಪರಿಚಯ ಆಗುತ್ತಿದ್ದಂತೆ ಅವನ ಚೀಲದಲ್ಲಿ ಇದ್ದ ಟಾರ್ಚ್, ಹಲ್ಲುಜ್ಜುವ ಪುಡಿ, ಒಂದು ಲೋಟಾ, ಕೆಲವು ಕಾಗದದ ಹಾಳೆಗಳು ಜನರಿಗೆ ನಿರಾಶೆಯನ್ನು ಉಂಟುಮಾಡುತ್ತಿದ್ದುವು.

೬೦ರ ದಶಕದ ಮಧ್ಯಭಾಗದಲ್ಲಿ ಕೆಲವು ಹಳೆಯ ಸಂಪ್ರದಾಯಗಳು ಇನ್ನೂ ಜೀವಂತವಿದ್ದುವು. ಯಾರಾದರೂ ಪ್ರಯಾಣಿಕರು ಹಳ್ಳಿಗೆ ಬಂದರೆ ಹಳ್ಳಿಯ ಛತ್ರದಲ್ಲಿ (ಚಬೂತ್ರಾ)ಉಳಿಯುತ್ತಿದ್ದರು. ಕೊತ್ವಾಲ ಬಂದು ಅಪರಿಚಿತರನ್ನು ಸ್ವಾಗತಿಸಿ ಆತ ಯಾವ ಜಾತಿಗೆ ಸೇರಿದವನು ಎಂದು ಕೇಳಿ, ಆನಂತರ ಆ ಹಳ್ಳಿಯಲ್ಲಿನ ಅದೇ ಜಾತಿಯ ಕುಲಬಾಂಧವರಿಗೆ ಪರಿಚಯಿಸುತ್ತಿದ್ದ. ಅತಿಥಿ ಆ ಊರಿನಲ್ಲಿ ಇರುವಷ್ಟು ದಿವಸ ಒಬ್ಬೊಬ್ಬರ ಮನೆಯಲ್ಲಿ ಇರುತ್ತಿದ್ದ.

ದೇವಪುರ ಎಂಬ ಹಳ್ಳಿಯಲ್ಲಿ ಎಲ್ಲರೂ ಭಿಕ್ಷೆಯಿಂದಲೇ ಜೀವಿಸುತ್ತಿದ್ದರು. ಅವರು ಹಳ್ಳಿಯಿಂದ ಹಳ್ಳಿಗೆ ಅಲೆಯುತ್ತಾ, ಜನರಿಗೆ ಕತೆಗಳನ್ನು ಕೇಳಿಸುತ್ತಾ, ಅವರು ನೀಡಿದ ಪಣದಲ್ಲಿ ಜೀವನ ಯಾಪನೆ ಮಾಡುತ್ತಿದ್ದರು. ಪ್ರತಿ ಕುಟುಂಬಕ್ಕೂ ಅದರದೇ ಆದ ಒಂದು ಎಲ್ಲೆ ಇತ್ತು. ಯಾರೂ ಸೀಮಾರೇಖೆಯನ್ನು ಅತಿಕ್ರಮಿಸಿ ಹೋಗುತ್ತಿರಲಿಲ್ಲ. ಈ ಕತೆಗಾರರ ಬಹುಮುಖಿ ಕೌಶಲ ಹಲವಾರು ಶತಮಾನಗಳಿಂದ ಬೆಳೆಸಿಕೊಂಡು ಬಂದುದಾಗಿತ್ತು. ಅಲ್ಲಿ ಗಿಳಿಗಳನ್ನು ಬಳಸಿಕೊಂಡು ಗಿಣಿ ಶಾಸ್ತ್ರದವರು ಭವಿಷ್ಯ ಹೇಳುತ್ತಿದ್ದರು. ಈ ಅಲೆಮಾರಿ ಭವಿಷ್ಯ ಹೇಳುವವರು ತಾವು ಮಹಾಭಾರತದ ಶಕುನಿಯ ವಂಶಸ್ಥರೆಂದೂ, ಶಕುನ ಹೇಳುವ ಕಲೆ ಅಂದಿನಿಂದಲೂ ಬಂದಿದೆ ಎಂದೂ ಹೇಳುತ್ತಿದ್ದರು.

ಈ ಕತೆ ಹೇಳುವವರು, ಉತ್ತಮ ನಟರು, ನೃತ್ಯಗಾರರು ಮತ್ತು ಕೆಲವೊಮ್ಮೆ ವಾದ್ಯ ನುಡಿಸುವ ವಾದ್ಯಗಾರರೂ ಆಗಿರಬೇಕು ಎಂಬುದನ್ನು ಗಮನಿಸಿದ್ದರು. ಅವರಿಗೆ ಎಲ್ಲ ಕೌಶಲಗಳೂ ಸಿದ್ಧಿಸಿದ್ದವು. ಆ ಮೂಲಕ ಅವರು ಸ್ಥಳೀಯ ಪ್ರಾಚೀನ ವೀರರ, ನಾಯಕರ, ಪುರಾಣಗಳ ಕತೆಯನ್ನು ಹಳ್ಳಿಹಳ್ಳಿಗೂ ತಲುಪಿಸುತ್ತಿದ್ದರು. ರಾತ್ರಿಯ ವೇಳೆ ಈ ಕತೆ ಆರಂಭವಾಗಿ, ನಸುಕಿನವರೆಗೂ ಮುಂದುವರೆಯುತ್ತಿತ್ತು. ಸಾಹಸ, ಶಾಶ್ವತ ಸತ್ಯಗಳಿಗಾಗಿ ಹೋರಾಡಿದವರ ಕತೆಯನ್ನು ಸಾಭಿನಯವಾಗಿ ಮಂಡಿಸಲಾಗುತ್ತಿತ್ತು. ಪೂರ್ವಕಾಲದಲ್ಲಿ ಅವರವರ ಸಮುದಾಯದ ಪ್ರೋತ್ಸಾಹ ಖಾತರಿ ಇದ್ದಾಗ ಈ ಭಿಕ್ಷಾ ವೃತ್ತಿಯ ಕತೆಗಾರರು ಇನ್ನೂ ಹೆಚ್ಚಿನ ಪಕ್ಕವಾದ್ಯ, ವೇಷಭೂಷಣ, ರಂಗಪರಿಕರಗಳೊಂದಿಗೆ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದರು.

ರವೀಂದ್ರ ಇವುಗಳನ್ನು ಹೆಚ್ಚು ಹೆಚ್ಚು ಗಮನಿಸುತ್ತಾ ಹೋದಂತೆ, ಅಳಿಯುತ್ತಿರುವ ಈ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಜಾಗೃತಗೊಳಿಸಲು ಹೆಚ್ಚು ಶ್ರಮ ವಿನಿಯೋಗಿಸಿದರು. ತಾನು ಭೇಟಿ ಮಾಡಿದ ಜನ, ಕಂಡ ಸಾಮಾಜಿಕ ಸಂಪ್ರದಾಯಗಳು, ಕಲಾಪ್ರಕಾರಗಳ ಬಗ್ಗೆ ವಿವರವಾದ ಟಿಪ್ಪಣಿಯನ್ನೂ ಬರೆದಿಟ್ಟುಕೊಳ್ಳುತ್ತಿದ್ದರು. ಕೋಲಾಟದಂತಹ ನೃತ್ಯ ಪ್ರಕಾರ ನಡೆಯುತ್ತಿರುವಾಗ ತಾವೇ ಸೇರಿಕೊಳ್ಳುತ್ತಿದ್ದರು. ಅವರ ಗೆಳೆಯರಲ್ಲಿ ಒಬ್ಬನಾದ ಕೃಷ್ಣೋ ಪಂತುಲುಗೆ ವಿಶಿಷ್ಟ ಶೈಲಿಯ ೩೨ ಕೋಲಾಟದ ಪದಗಳು ಕಂಠಸ್ಥವಾಗಿದ್ದವು.

ಅದೀಲಾಬಾದ್‌ನಲ್ಲಿ ತೀರಾ ವೃದ್ಧನಾದ ಯಲ್ಲಪ್ಪ, ರವೀಂದ್ರರ ಸಲಹೆಗಾರರಾದರು. ಅವರ ಇರುವಿಕೆಯೇ ರವೀಂದ್ರರ ಸಂತಸಕ್ಕೆ ಕಾರಣವಾಗಿತ್ತು. ಈ ವಯೋವೃದ್ಧ ಕಲಾವಿದ ಬಣ್ಣ ಮತ್ತು ವರ್ಣಚಿತ್ರಗಳ, ಮಾಂತ್ರಿಕತೆಯನ್ನು ಹೇಳಿಕೊಟ್ಟರು. ಆತನ ಸುತ್ತ ಒಂದು ಅನೌಪಚಾರಿಕ ಶಾಲೆ ಆರಂಭವಾಯಿತು. ರವೀಂದ್ರರು ಅವರ ಪ್ರಮುಖ ಶಿಷ್ಯರಾದರು. ಸಾಮಾನ್ಯವಾಗಿ ಇವರು ಭೇಟಿಯಾಗುತ್ತಿದ್ದುದು ಮಠದಲ್ಲಿ. ಮಠ ಈ ಕಲಾವಿದರ ಅಡ್ಡೆಯಾಯಿತು.

೨೦ನೆಯ ಶತಮಾನದ ಕೊನೆಯ ವೇಳೆಗೆ ಸಿನೆಮಾ, ಟೆಲಿವಿಷನ್‌ಗಳು ಪ್ರೇಕ್ಷಕರನ್ನು ತಮ್ಮತ್ತ ಆಕರ್ಷಿಸಿದವು. ಹೆಚ್ಚು ಹೆಚ್ಚು ಮಂದಿ ಇವುಗಳ ಮೂಕ ಪ್ರೇಕ್ಷಕರಾದರು! ಅದರಲ್ಲಿ ಯಾರೂ ಸಕ್ರಿಯವಾಗಿ ಭಾಗಿಯಾಗುವಂತೆ ಇರಲಿಲ್ಲ. ದೈನಂದಿನ ಬದುಕು ಯಾಂತ್ರಿಕವೂ

ಸ್ವಕೇಂದ್ರಿತವೂ ಆಯಿತು. 'ಭಿಕ್ಷೆ'ಯ ಪರಿಕಲ್ಪನೆ ಅರ್ಥ ಕಳೆದುಕೊಂಡಿತು. ಆದ್ದರಿಂದ ಕತೆಗಳನ್ನು ಹೇಳುತ್ತಿದ್ದ ಈ ಕಲಾವಿದರು ಭಿಕ್ಷುಕರಂತೆಯೇ ಪರಿಗಣಿತರಾದರು. ಇವರನ್ನು ಪ್ರೋತ್ಸಾಹಿಸುವ ಜನ ಇಲ್ಲವಾದರು. ಪೂರ್ಣ ಐದು ಸಂಜೆಗಳಲ್ಲಿ ಕತೆ ಕೇಳುವ ತಾಳ್ಮೆ, ಆಸಕ್ತಿ ಇರುವ ಜನರಂತೂ ಇಲವೇ ಇಲ್ಲದಂತದವು.

ಕಾಲದ ಈ ಗತಿ ಕಲೆಯ ಪರವಾಗಿ ಇಲ್ಲ ಎಂಬುದನ್ನು ರವೀಂದ್ರ ಗಮನಿಸಿದರು. ಈ ಕಲಾವಿದರು ಕಾಲದೊಂದಿಗೆ ಸೃಜನಶೀಲವಾಗಿ ಮುಖಾಮುಖಿಯಾಗುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂಬುದು ರವೀಂದ್ರರಿಗೆ ದುಃಖದ ಸಂಗತಿಯಾಗಿತ್ತು. ಇದರ ಬದಲಿಗೆ ಒತ್ತಡ ಮತ್ತು ಗೊಂದಲ ಇವರಲ್ಲಿಯೂ ದುರಾಸೆ ಹುಟ್ಟಿಸಿತು. ಈ ಕಥಾ ಕಾರ್ಯಕ್ರಮ ನಡೆಸಿಕೊಡಬೇಕಾದರೆ ಇಂಥಿಂಥ ವಸ್ತುವಗಳನ್ನೆ ಕೊಡಬೇಕು ಎಂದು ಕೇಳಲು ಆರಂಭಿಸಿದರು. ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ ನಡೆಸುವ ಕುಲದೇವತಾ ಪೂಜೆ ದುಬಾರಿಯಾಯಿತು. ಸೀತಾ ಕಲ್ಯಾಣ ಪ್ರಸಂಗ ಆಡಬೇಕಾದರೆ, ಹಳ್ಳಿಗಳಲ್ಲಿ ವರದಕ್ಷಿಣೆ ಕೊಡಬೇಕಾದ ಕಾಲ ಬಂತು.

ಹಿಂದಿನ ಕಾಲದಲ್ಲಾದರೆ, ಯಾವ ಕತೆ ಹೇಳಬೇಕು, ಇಡೀ ಕಾರ್ಯಕ್ರಮಕ್ಕೆ ಎಷ್ಟು ಖರ್ಚು ಬೀಳಬಹುದು ಇತ್ಯಾದಿಗಳನ್ನು ಗ್ರಾಮಮುಖಂಡರೊಡನೆ ಚರ್ಚಿಸುತ್ತಿದ್ದರು. ಯಾರಿಗೂ ಈಗ ಆ ಜವಾಬ್ದಾರಿ ಇಲ್ಲ. ಪ್ರತಿಯೊಬ್ಬರೂ ಮುಖಂಡರೇ. ಅಲ್ಲದೇ ಜನರು ತಮ್ಮ ತಮ್ಮ ಕುಟುಂಬಕ್ಕಾಗೇ ಹೆಚ್ಚು ಹಣ ಖರ್ಚು ಮಾಡುತ್ತಿದ್ದಾರೆ. ಗ್ರಾಮದ ಒಟ್ಟು ಕೆಲಸಕ್ಕೆ ಅತಿ ಕಡಿಮೆ ಹಣವನ್ನು ಮೀಸಲಿರಿಸಲಾಗುತ್ತಿದೆ.

ಈ ಬೆಳವಣಿಗೆಗಳು ಸ್ಥಳೀಯ ಕುಶಲಕರ್ಮಿಗಳಿಗೂ ಕಲಾವಿದರಿಗೂ ತೊಂದರೆಯನ್ನು ಉಂಟುಮಾಡಿದವು. ಸ್ಥಳೀಯ ಕೈಗಾರಿಕೆಗಳು, ಕಲಾವಿದರ ನಡುವೆ ಮತ್ತು ಕಲಾವಿದ ಹಾಗೂ ಸಮಾಜದ ಮಧ್ಯೆ ಪರಸ್ಪರಾವಲಂಬನೆಯನ್ನು ಸೂಕ್ಷ್ಮವಾಗಿ ನೆಯ್ದಿತ್ತು. ಈ ಕಲಾವಿದರ ಯೋಗಕ್ಷೇಮದ ಖಾತರಿಗೋಸ್ಕರ ಸಾಮಾಜಿಕ ಸಂಪ್ರದಾಯಗಳು ಹಬ್ಬ ಹರಿದಿನಗಳನ್ನು ರೂಪಿಸಲಾಗಿತ್ತು. ಇದಕ್ಕೆ ನಿದರ್ಶನಗಳನ್ನು ಕೊಡಬಹುದಾದರೆ–ಅದೀಲಾಬಾದ್‌ನಲ್ಲಿ ದೀಪಾವಳಿಗೆ ಕೆಲವು ವಾರ ಮುಂಚೆ ಒಂದು ಹಬ್ಬವನ್ನು ಆಚರಿಸಲಾಗುತ್ತಿತ್ತು. ಆ ಹಬ್ಬದಲ್ಲಿ ಜನರು ಗುಂಪುಗೂಡಿ, ನೃತ್ಯ ಮಾಡುತ್ತಾ ರಸ್ತೆಗಳನ್ನು ಹಾಯುತ್ತಿದ್ದರು. ಇವರು ಹಾದುಹೋಗುವಾಗ ಮನೆಗಳ ಮೇಲೆ ಕಲ್ಲು ಒಗೆಯುತ್ತಿದ್ದರು. ಇದರಿಂದಾಗಿ ಪ್ರತಿ ಮನೆಯಲ್ಲಿ ಕನಿಷ್ಠ ಹತ್ತರಿಂದ ಹದಿನೈದು ಹೆಂಚು ಒಡೆದುಹೋಗುತ್ತಿತ್ತು. ದೀಪಾವಳಿಗೆ ಮುನ್ನ ಹಳ್ಳಿಗಳಲ್ಲಿ ತಮ್ಮ ಮನೆಗಳಿಗೆ ಸುಣ್ಣ ಬಣ್ಣ ಮಾಡಿಸುತ್ತಿದ್ದರು. ಆ ಸಮಯದಲ್ಲಿ ಒಡೆದ ಹೆಂಚುಗಳ ಜಾಗಕ್ಕೆ ಬೇರೆ ಹೆಂಚು ಹೊದಿಸಬೇಕಾಗುತ್ತಿತ್ತು. ಅನಿವಾರ್ಯವಾಗಿ ಸ್ಥಳೀಯ ಕುಂಬಾರರಿಂದಲೇ ಹೆಂಚನ್ನು ಖರೀದಿಸುತ್ತಿದ್ದರು. ಇದರಿಂದ ಹಬ್ಬದ ಸಂದರ್ಭದಲ್ಲಿ ಮನೆ ತೊಳೆದು ಸುಣ್ಣಬಣ್ಣ ಮಾಡಿಸಲು ಒಂದು ನೆಪ ಸಿಕ್ಕುತ್ತಿದ್ದುದೂ ಅಲ್ಲದೇ, ಕುಂಬಾರರಿಗೆ ವ್ಯಾಪಾರವೂ ಆಗುತ್ತಿತ್ತು.

ಈ ರೀತಿ ಪ್ರತಿ ಹಬ್ಬವೂ ಕುಶಲ ಕರ್ಮಿಗಳಿಗೆ ವ್ಯಾಪಾರ ತಂದುಕೊಡುತ್ತಿತ್ತು. ಕುಂಬಾರರ, ಅಗಸರ, ನಾಪಿತರ ಹೆಂಡತಿಯರನ್ನು ಹಳ್ಳಿಯಲ್ಲಿ ಹೊಸ ಕೆಲಸ ಆರಂಭಿಸುವಾಗ

ಆಹ್ವಾನಿಸಲಾಗುತ್ತಿತ್ತು. ಅವರ ಹಾಜರಿ ಶುಭಸೂಚಕ ಎಂದು ಭಾವಿಸಲಾಗುತ್ತಿತ್ತು. ಈ ಕಲಾವಿದರ ಕುಟುಂಬಗಳಿಗೆ ಘನತೆಯನ್ನೂ ಇದು ಒದಗಿಸುತ್ತಿತ್ತು. ಈ ಸಂದರ್ಭದಲ್ಲಿ 'ಹಣ'ದ ಬದಲಿಗೆ ಧಾನ್ಯ, ಬಟ್ಟೆ ಇತ್ಯಾದಿ ವಸ್ತುಗಳು ವಿನಿಮಯದ ಮಾಧ್ಯಮಗಳಾಗಿರುತ್ತಿದ್ದವು. ರೈತ ಮತ್ತು ಗ್ರಾಮೀಣ ಕುಶಲಕರ್ಮಿಗಳ ನಡುವೆ ಈ ರೀತಿಯ ಪರಸ್ಪರಾವಲಂಬನೆಯನ್ನು ಸೃಷ್ಟಿಸಲಾಗಿತ್ತು.

ಕಲಾವಿದರಿಗೆ ತಲೆಮಾರುಗಳಿಂದ ಹರಿದು ಬಂದ ಈ ಕೌಶಲ, ಹೆಚ್ಚು ಕಡಿಮೆ ಸಾವಿರ ವರ್ಷಗಳಷ್ಟು ಪ್ರಾಚೀನ ಎಂದೆನಿಸಿಕೊಳ್ಳುವ ಅವರ ವಂಶಾವಳಿ ಈಗ ನಿಧಾನವಾಗಿ ಸಾಮೂಹಿಕ ಸಾವಿನತ್ತ ಸಾಗುತ್ತಿದೆ ಎಂಬುದು ರವೀಂದ್ರರ ಗಮನಕ್ಕೆ ಬಂತು. ದೈನಂದಿನ ಬದುಕಿಗೆ ಶ್ರೀಮಂತಿಕೆ ಕೊಡುವ ಈ ಕಲಾ ಪ್ರಕಾರಗಳು, ಕಲಾ ಚಟುವಟಿಕೆಗಳು ಬಹಳ ಪ್ರಭಾವಶಾಲಿಯಾದ ಕಾಲನ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿದ್ದವು. ನಮ್ಮ ಬದುಕಿಗೆ ತೀರಾ ಅಗತ್ಯವಾದ ಬೆಳಕು ಮತ್ತು ಬಣ್ಣಗಳು ಒಂದರ ಬಳಿಕ ಒಂದು ಆರುತ್ತಿವೆ ಎಂಬ ಅನುಭವ ರವೀಂದ್ರರಿಗಾಯಿತು. ಕತ್ತಲ ಬರುವಿಕೆ ಇವರನ್ನು ಭಯಭೀತಗೊಳಿಸಿತು. ಇದರಿಂದ ಸರ್ವವ್ಯಾಪಿಯಾದ ತಳಮಳ ಮತ್ತು ಹೃದಯವೇದನೆ ಉಂಟಾಯಿತು.

ಮಾಯವಾಗುತ್ತಿರುವ ಈ ಕ್ರಿಯೆಗೆ ಕಾರಣ, ಹೊರಗಿನಿಂದ ಅದೀಲಾಬಾದ್‌ನತ್ತ ನುಗ್ಗುತ್ತಿರುವ ಪ್ರಭಾವೀ ಶಕ್ತಿ ಎಂದು ರವೀಂದ್ರರಿಗೆ ಮನವರಿಕೆಯಾಯಿತು. ಆ ಶಕ್ತಿಗೆ ಎಲ್ಲೆಗಳಿಲ್ಲ. ಇದು ದೂರದಿಂದ ಬಂದು ಅಪ್ಪಳಿಸುತ್ತಿರುವ ಚಂಡಮಾರುತ. ತನ್ನ ಹಾದಿಯಲ್ಲಿ ಬಂದುದೆಲ್ಲವನ್ನೂ ಉರುಳಿಸುತ್ತಿದೆ. ಕೆಲವರು ಇದನ್ನು 'ಆಧುನಿಕತೆ' ಎಂದು ಕರೆದಿದ್ದಾರೆ. ನಾವು ಮುನ್ನುಗ್ಗಬೇಕು, ಮುಂಚೂಣಿಯಲ್ಲಿಯೇ ಇರಬೇಕು ಎಂಬ ಸ್ಪರ್ಧೆಯಲ್ಲಿ ಉಳಿದೆಲ್ಲ ಬದುಕಿನ ಹಾದಿಗಳೂ ಮೂಲೆಗುಂಪಾಗಿವೆ. ಆದರೆ ಮುಂದೇನು? ಎಂಬ ಪ್ರಶ್ನೆ ರವೀಂದ್ರರಲ್ಲಿ ಮೂಡಿತು. ಅವರನ್ನು ಒಂಟಿತನ ಕಾಡತೊಡಗಿತು.

ರವೀಂದ್ರರಂತಹ ಕನಸುಗಾರರಿಗೂ ಇವುಗಳ ದಾರಿ ಬದಲಿಸುತ್ತೇನೆ ಅಥವಾ ಇದರ ವೇಗವನ್ನು ತಗ್ಗಿಸುತ್ತೇನೆ ಎಂಬ ಭ್ರಮೆಗಳೇನೂ ಇರಲಿಲ್ಲ. ಕಾಲನೊಂದಿಗೆ ಹೋರಾಡಬಲ್ಲವರು ಯಾರು? ಒಂದು ಪ್ರಶ್ನೆ ಮಾತ್ರ ಅವರನ್ನು ಕಾಡತೊಡಗಿತು. ಬದಲಾವಣೆಯ ಜೊತೆ ಬದುಕುವುದು ಹೇಗೆ? ತಾನು ಏನು ಮಾಡಬೇಕು? ಇತರರು ಆ ಕ್ಷಣಕ್ಕೆ ಏನು ನೀಡುತ್ತಾರೋ ಅದರಲ್ಲಿಯೇ ಜೀವನ ನಿರ್ವಹಿಸಿ, ನಿಜವಾದ 'ಭಿಕ್ಷು'ವಿನಂತೆ ರವೀಂದ್ರ ಅದೀಲಾಬಾದ್‌ನ ಸುತ್ತಲಿನ ಗ್ರಾಮಗಳಲ್ಲಿ ಸಂಚರಿಸುತ್ತಾ ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಿದ್ದರು. ಕೆಲವೊಮ್ಮೆ ಬಡವನಾದ ಕುಶಲಕರ್ಮಿ ನೀಡಿದ್ದನ್ನೇ ತಿಂದು ಬದುಕಬೇಕಿತ್ತು. ಕುಂಬಾರರು, ಅಕ್ಕಸಾಲಿಗರು, ತಬಲಾವಾದಕರು, ನೇಕಾರರು ಮತ್ತು ಶಿಲ್ಪಿಗಳೊಡನೆಯೇ ಜೀವಿಸಿದರು. ರಾತ್ರಿಯಾಯಿತೆಂದರೆ, ಯಾರಾದರೂ ಈ ರೀತಿಯ ಕಸುಬುದಾರರನ್ನು ತಮ್ಮ ಗುಡಿಸಲಿಗೆ ಕರೆದೊಯ್ಯುತ್ತಿದ್ದರು. ಒಮ್ಮೊಮ್ಮೆ ರಾತ್ರಿಗಳಲ್ಲಿ ಹಳ್ಳಿಯ ನಟ್ಟನಡುವಿನ ಮರದ ಕೆಳಗೆ ಮುದುರಿ ಮಲಗುತ್ತಿದ್ದರು.

ಕನಸಿಗೆ ಮೂರ್ತರೂಪ

ಒಮ್ಮೆ ಚಳಿಗಾಲದಲ್ಲಿ ಹಿತ್ತಾಳೆ, ತಾಮ್ರದ ಕೆಲಸ ಮಾಡುವ ಕಸುಬುದಾರನ ಮನೆಯಲ್ಲಿ ರವೀಂದ್ರ ರಾತ್ರಿಯನ್ನು ಕಳೆದರು. ರಾತ್ರಿ ಹೆಚ್ಚುತ್ತಿದ್ದಂತೆ ಚಳಿಯೂ ಹೆಚ್ಚಿತು. ಈ ಕಸುಬುದಾರನ ಬಳಿ ಅತಿಥಿಗೆ ಹೊದೆಯಲು ನೀಡುವುದಕ್ಕೆ ಏನೂ ಇರಲಿಲ್ಲ. ಆ ಮನೆಯಲ್ಲಿ ಇದ್ದ ಒಂದೇ ಒಂದು ಚಿಂದಿಯಾದ ಕಂಬಳಿಯನ್ನು ಖಾಯಿಲೆಯಿಂದ ನರಳುತ್ತಿದ್ದ ಆತನ ಹೆಂಡತಿಗೆ ಹೊದಿಸಲಾಗಿತ್ತು. ಕುಶಲ ಕೆಲಸಗಾರ, ಅಲ್ಲೇ ಸಮೀಪ ಬೆಂಕಿ ಒಟ್ಟಿ, ಅದು ಉರಿಯುತ್ತಿರಲು ತಾನು ಎಚ್ಚರದಿಂದ ಇದ್ದು ಅದರ ಪಕ್ಕದಲ್ಲಿಯೇ ಬೆಚ್ಚಗೆ ಮಲಗುವಂತೆ ರವೀಂದ್ರರನ್ನು ಕರೆದ. ಆ ಬೆಂಕಿಯ ಬೆಳಕಲ್ಲಿ ಮಲಗಿದಂತೆಯೇ ಎಚ್ಚರದ ಸ್ಥಿತಿಯಲ್ಲಿ ರವೀಂದ್ರ ಒಂದು ಪ್ರತಿಜ್ಞೆ ಮಾಡಿದರು. ಈ ಕುಶಲ ಕರ್ಮಿಗಳಿಗೆ ಸಹಾಯ ಮಾಡಲು ತನ್ನ ಮುಂದಿನ ಇಪ್ಪತ್ತು ವರ್ಷಗಳನ್ನು ಮೀಸಲಾಗಿಡುತ್ತೇನೆ ಎಂಬುದು ಆ ನಿರ್ಧಾರ! ಕಾಲ ಪ್ರವಾಹವನ್ನು ನಿಲ್ಲಿಸುವುದು ಅಸಾಧ್ಯದ ಮಾತು. 'ಈ ಕಲಾವಿದರಿಗೊಂದು ಆಶ್ರಯಧಾಮವಾಗಬಲ್ಲ ನೆಲೆಯನ್ನು ನಿರ್ಮಿಸುತ್ತೇನೆ. ಅದು ಅವರಿಗೆ ಕೆಲಸ ಮಾಡಲು ಜಾಗವನ್ನು, ಮನಸ್ಸಿಗೆ ಸಮಾಧಾನವನ್ನು ಕೊಡುತ್ತದೆ. ಇದು ಕಲಾ ಆಶ್ರಮವಾಗಿರುತ್ತದೆ' ಎಂದು ರವೀಂದ್ರ ಸಂಕಲ್ಪ ಮಾಡಿದರು.

ತನ್ನ ಅಲೆಮಾರಿ ಬದುಕಿನ ಪ್ರಾರಂಭದ ದಿವಸಗಳಲ್ಲಿ ಈ ನೆನಪುಗಳನ್ನು, ಅಳಿಯುತ್ತಿರುವ ಅಭ್ಯಾಸಗಳನ್ನು, ಈ ಕಸುಬುಗಳನ್ನು ಉಳಿಸುವ ಅಗತ್ಯವಿದೆ ಎಂಬುದನ್ನು ಅವರು ಮನಗಂಡಿದ್ದರು. ಆದುದರಿಂದಲೇ ಎಲ್ಲದರ ಬಗ್ಗೆ ರವೀಂದ್ರ ಟಿಪ್ಪಣಿ ಮಾಡಿಕೊಂಡಿದ್ದರು. ಉದಾಹರಣೆಗೆ, ಒಂದೊಂದು ಪ್ರದೇಶದಲ್ಲೂ ಆಟಿಕೆಗಳನ್ನು ಹೇಗೆ ಮಾಡುತ್ತಾರೆ ಮತ್ತು ಮಕ್ಕಳು ಯಾವ ಆಟಗಳನ್ನು ಆಡುತ್ತಾರೆ ಇತ್ಯಾದಿ. ಬೇರೆ ಬೇರೆ ಸಮುದಾಯಗಳಲ್ಲಿ, ಜಾತಿಗಳಲ್ಲಿ ಸೃಷ್ಟಿಗೆ ಸಂಬಂಧಿಸಿದ ಕತೆಗಳು ವಿಶೇಷವಾಗಿ ಅವರನ್ನು ಆಕರ್ಷಿಸಿದ್ದವು. ಈ ಕಲಾ ಆಶ್ರಮ ಏನು ಮಾಡಲಾಗದಿದ್ದರೂ ಮುಳುಗುತ್ತಿರುವ ಸಂಸ್ಕೃತಿಯಲ್ಲಿ ಅಳಿದುಳಿದ ಕೆಲವನ್ನಾದರೂ ರಕ್ಷಿಸುತ್ತದೆ ಎಂದು ರವೀಂದ್ರ ಚಿಂತಿಸಿದರು.

ಎಲ್ಲ ದಾಖಲೆಗಳೂ ಬಿಡಿ-ಬಿಡಿ ಕಾಗದದಲ್ಲಿ ಇದ್ದವು. ಅವುಗಳನ್ನೆಲ್ಲ ಜೋಡಿಸಿ ತನ್ನ ಮನೆಯ ಕಪಾಟಿನಲ್ಲಿ ಇರಿಸಿದ್ದರು. ಯಾರಿಗೂ ಮನೆಯಲ್ಲಿ ರವೀಂದ್ರ ಬರೆಯುತ್ತಿರುವ ವಿಚಾರಗಳ ಮಹತ್ವ ತಿಳಿದಿರಲಿಲ್ಲ. ಆದ್ದರಿಂದ ರವೀಂದ್ರ ಮನೆ ಬಿಟ್ಟು ಹೈದರಾಬಾದಿನಲ್ಲಿ ಇದ್ದಾಗ ಕಾಗದವನ್ನು ಮನೆಯವರು ಪೊಟ್ಟಣಗಳನ್ನು ಕಟ್ಟುವುದು, ಮಲವಿಸರ್ಜನೆ ಮಾಡಿದ ಮಕ್ಕಳನ್ನು ಸ್ವಚ್ಛಗೊಳಿಸುವುದೇ ಮೊದಲಾದ ಕೆಲಸಗಳಿಗೆ ಬಳಸಿದರು. ರವೀಂದ್ರ, ಇದನ್ನು ಗಮನಿಸುವ ವೇಳೆಗಾಗಲೇ ಅವರು ದಾಖಲಿಸಿದ ಆ ಕಲಾ ಪ್ರಕಾರಗಳಂತೆ ದಾಖಲೆಗಳೂ ಮಾಯವಾದವು.

೧೯೭೦ರ ಹೊತ್ತಿಗೆ ರವೀಂದ್ರ ೧೧ನೆಯ ತರಗತಿಯಲ್ಲಿ ಉತ್ತೀರ್ಣರಾಗಿ ಮನೆಯವರನ್ನು ಹಗುರಾಗಿಸಿದ್ದರು. ಇದರಿಂದಾಗಿ ಅವರು 'ಹೈಸ್ಕೂಲ್ ಗ್ರಾಜುಯೇಟ್' ಆದಂತಾಯಿತು. ಹೇಗೆ ಉತ್ತೀರ್ಣರಾದರೆಂಬುದು ಅವರಿಗೇ ಒಂದು ಅಚ್ಚರಿಯಾಗಿತ್ತು. ಪರಂಗಿ ಭಾಷೆ ಇಂಗ್ಲಿಷ್

ಮತ್ತು ಗಣಿತದ ಬಗ್ಗೆ ಅವರಿಗಿದ್ದ ರೋಷ, ಆ ಕ್ಷಣದಮಟ್ಟಿಗೆ ಕಡಿಮೆಯಾಗಿತ್ತು. ಈ ವೇಳೆಗಾಗಲೇ ಜಾದೂ, ಮಂತ್ರ, ತಂತ್ರ, ಕಣಿ ಹೇಳುವುದು ಮುಂತಾಗಿ ಎಲ್ಲದರ ಆಚೆ ಬಂದಿದ್ದರು. ನಿಧಾನವಾಗಿ ಈ ಮಂತ್ರ ತಂತ್ರದ ಆಯಾಮ ಅವರ ಬದುಕಿನಿಂದಲೇ ಕಣ್ಮರೆಯಾದವು. ರವೀಂದ್ರರಿಗೆ ಈಗ ಆಧುನಿಕ ವಿದ್ಯಾಭ್ಯಾಸ ಬೇಕೆನಿಸಿತು. ಹೈದರಾಬಾದಿನಲ್ಲಿ ಲಲಿತಕಲೆ ಮತ್ತು ವಾಸ್ತುಶಿಲ್ಪ ತರಬೇತಿ ಶಾಲೆಗೆ ಸೇರಿದರು. ಅಲ್ಲಿ ವಿಶಿಷ್ಟವಾದ ಕಲಾಶೈಲಿಯ ಅನ್ವೇಷಣೆ ಎಂತು ಎಂಬುದು ಅವರನ್ನು ಕಾಡತೊಡಗಿತು. ಅವರು ನೆಮ್ಮದಿ ಕಳೆದುಕೊಂಡವರಾಗಿ ಹೈದರಾಬಾದಿನ ಬೀದಿಬೀದಿಗಳಲ್ಲಿ ಅಲೆದರು.

ನವ್ಯ ಕಲೆಯನ್ನೇ ಏಕೆ ಅನುಕರಿಸಬೇಕು? ನಮ್ಮ ಪರಂಪರೆಯ ಚೌಕಟ್ಟಿನಲ್ಲಿಯೇ ಕೆಲಸ ಮಾಡಿ ಹೊಸತನ್ನೇಕೆ ಸಾಧಿಸಬಾರದು? ಈ ನಡುವೆ ಅವರು ಭಾವ ಪಯಣದಲ್ಲಿಯೂ ಭಾಗಿಯಾದರು. ಅದು ಅವರ ಹಿಡಿತದಲ್ಲಾಗಲೀ ನಿಯಂತ್ರಣದಲ್ಲಾಗಲೀ ಇರಲಿಲ್ಲ. ಒಡನೆಯೇ ತೀವ್ರವಾದ ಕಳವಳಕ್ಕೀಡಾದರು. ಇದರ ಹಿಂದೆ ಭಾವನಾತ್ಮಕ, ಕಲಾತ್ಮಕ ಕಾರಣಗಳು ಇದ್ದವು. ಹೈದರಾಬಾದಿಗೆ ಬಂದಾಗ ದೃಢಕಾಯರಾಗಿದ್ದ ೭೦ಕೆ.ಜಿ ತೂಗುತ್ತಿದ್ದ ಅವರು, ಒಂದೇ ವರ್ಷದೊಳಗೆ ಇಳಿದುಹೋದರು.

ಈ ಎಲ್ಲ ದುಃಖಾತಿರೇಕಗಳ ನಡುವೆ ಅವರ ೨೦ ವರ್ಷಗಳ ಶಪಥ ಅಚಲವಾಗಿತ್ತು. ಅದೀಲಾಬಾದ್‌ಗೆ ಮರಳಿದ ತಕ್ಷಣವೇ ಕಲಾ ಆಶ್ರಮಕ್ಕೆ ಸೂಕ್ತ ಜಾಗವನ್ನು ಅನ್ವೇಷಿಸತೊಡಗಿದರು. ಈ ಕೆಲಸಕ್ಕೆ ಬದ್ಧರಾದ ಗೆಳೆಯರ ಗುಂಪು, ಮಠದ ಸ್ವಾಮೀಜಿ ಮತ್ತು ಮಹಂತರ ನಡುವೆ ಒಳ್ಳೆಯ ಸಂಬಂಧವಿದ್ದ ಕಾರಣ ಜಾಗಕ್ಕಾಗಿ ಸ್ವಾಮೀಜಿಯವರನ್ನು ಸಂಪರ್ಕಿಸಿದರು. ಉರ್ದು ಶಾಲೆಗೆಂದು ನೀಡಿದ್ದ ಜಾಗವನ್ನು ಬೇಕಿದ್ದರೆ ಬಳಸಿಕೊಳ್ಳಬಹುದು ಎಂದು ಮಠದ ವ್ಯವಸ್ಥಾಪಕರು ತಿಳಿಸಿದರು. ಉರ್ದುಶಾಲೆ, ಬೇರೆಡೆಯಲ್ಲಿ ನಡೆಸಲು ಸಾಧ್ಯವಿದ್ದುದರಿಂದ ಈ ಕಟ್ಟಡ ಕಲಾ ಆಶ್ರಮಕ್ಕೆ ದೊರೆಯಿತು.

ರವೀಂದ್ರರ ಮನೆಯಿದ್ದ ರಸ್ತೆಯ ಆಚೆ ಬದಿಗೆ ಎತ್ತರದ ಮೇಲ್ಛಾವಣಿ ಇದ್ದ ಕಟ್ಟಡವಿತ್ತು. ಹಿಂದೆ ಅಲ್ಲಿ ಜಿನ್ನಿಂಗ್ ಫ್ಯಾಕ್ಟರಿ ನಡೆಯುತ್ತಿತ್ತು. ಈ ಸ್ಥಳ ಕಲಾ ಆಶ್ರಮಕ್ಕೆ ಸೂಕ್ತವಾಗಿತ್ತು. ಅದನ್ನು ಪಡೆಯಲು ಹೆಚ್ಚಿನ ಶ್ರಮವೇನೂ ಬೇಕಾಗಲಿಲ್ಲ. ಈ ಕಟ್ಟಡದ ಮಾಲೀಕ ಸುಲಭವಾಗಿ ಅದನ್ನು ಬಾಡಿಗೆಗೆ ನೀಡಲು ಒಪ್ಪಿಕೊಂಡ. ೧೯೭೯ರಲ್ಲಿ ಹಿರಿಯರು ಮತ್ತು ಗೆಳೆಯರ ಅನೌಪಚಾರಿಕ ಗುಂಪು ಇಲ್ಲಿ ಕಲಾ ಆಶ್ರಮವನ್ನು ಸ್ಥಾಪಿಸಿತು. ಇವರು ರವೀಂದ್ರರ ಆದರ್ಶವನ್ನು ಒಪ್ಪಿಕೊಂಡಿದ್ದರು.

ಕಲಾ ಆಶ್ರಮದ ಸ್ಥಾಪನೆ ಹಲವರ ಕನಸಾಗಿತ್ತು. ಈ ಸಂಸ್ಥೆಯನ್ನು ಹೇಗೆ ನಡೆಸಬೇಕೆಂಬ ಬಗ್ಗೆ ಅವರದೇ ಆದ ಖಚಿತ ನಿಲುವುಗಳಿದ್ದವು. ಇದನ್ನು ಗೆಳೆಯರ ಒಕ್ಕೂಟ ರಚಿಸಿ ನಡೆಸಿಕೊಂಡು ಹೋಗಲು ಅಡ್ಡಿ ಇರಲಿಲ್ಲ. ಆದರೆ, ಇದು ಕಾರ್ಯಸಾಧುವಲ್ಲ ಎಂದು ರವೀಂದ್ರರಿಗೆ ಅನಿಸುತ್ತಿತ್ತು. ಗುರು-ಶಿಷ್ಯ ಸಂಬಂಧದಲ್ಲಿ ಒಬ್ಬರ ಮಾತು ಒಬ್ಬರು ಕೇಳುವ, ಪರಿಪಾಲಿಸುವ ಅವಕಾಶವಿದ್ದು ಉತ್ತಮ ಮಾರ್ಗದರ್ಶನ ದೊರೆಯುತ್ತದೆ. ಇವರಿಗೆ

ಸ್ಥಳೀಯವಾಗಿ ಆಗಲೀ, ಸರ್ಕಾರದ ಮೂಲಕವಾಗಿ ಆಗಲೀ ಹಣ ಪಡೆಯುವುದು ಇಷ್ಟವಿರಲಿಲ್ಲ. ಸಾಧ್ಯವಾದಷ್ಟೂ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳಿಂದ ದೂರ ಇರಲು ಬಯಸಿದರು. ಆಶ್ರಮದ ಸ್ಥಾಪನೆಗೆ ಕಾರಣರಾದ ಗೆಳೆಯರು ತಮ್ಮ ಗಳಿಕೆಯ ಶೇ. ಒಂದರಷ್ಟು ಹಣವನ್ನು ಅದರ ಖರ್ಚಿಗಾಗಿ ನೀಡಲು ಸಿದ್ಧರಿದ್ದರು. ಅದು ಹೆಚ್ಚೇನೂ ಆಗುತ್ತಿರಲಿಲ್ಲ.

ಈ ಸಣ್ಣ ಗುಂಪಿನಿಂದ ಆಚೆಯೂ ಅದೀಲಾಬಾದ್‌ನಲ್ಲಿ ಆಶ್ರಮಕ್ಕೆ ಹಣ ನೀಡುವ ಮನಸ್ಸುಳ್ಳ ಅನೇಕ ಜನರಿದ್ದರು. ಆದರೆ, ರವೀಂದ್ರರು ಕೊಡಬಲ್ಲವರು ಮತ್ತು ಕೊಡಲು ಬಂದ ಎಲ್ಲರಿಂದಲೂ ಹಣ ಪಡೆಯಲು ಸಿದ್ಧರಿರಲಿಲ್ಲ. ದಾನ ಅಥವಾ ಉಪಕಾರ ಮಾಡುತ್ತಿದ್ದೇನೆಂಬ ಭಾವನೆಯಿಂದ ಕೊಟ್ಟ ಅಥವಾ ಏನಾದರೂ ಉಪಾಯ ಮಾಡಿ ಎತ್ತಿದ ಹಣ ಅವರಿಗೆ ಸಮ್ಮತವಾಗುತ್ತಿರಲಿಲ್ಲ. ನಿಜಕ್ಕೂ ಈ ಕೆಲಸದ ಕುರಿತು ವಿಶ್ವಾಸ, ಬದ್ಧತೆ ಇರುವ ಜನರಿಂದ ಮಾತ್ರ ಹಣ ತೆಗೆದುಕೊಳ್ಳಲು ನಿರ್ಧರಿಸಿದರು. ಈ ರೀತಿ ಜನರಿಂದ ಎಷ್ಟು ಸಂಗ್ರಹಿಸಬಹುದು ಎನ್ನುವ ಆಧಾರದ ಮೇಲೆ ಕಲಾ ಆಶ್ರಮದ ವಿಸ್ತಾರ ಮತ್ತು ವ್ಯಾಪ್ತಿ ನಿರ್ಧರಿತವಾಗುತ್ತಿತ್ತು.

೧೯೮೨ರಲ್ಲಿ ರವೀಂದ್ರರನ್ನು ಹೊರ ಪ್ರಪಂಚ ಕರೆಯಿತು. ಲೋಹದಲ್ಲಿ ಎರಕ ಹೊಯ್ಯುವುದರ ಕುರಿತ ಅಧ್ಯಯನಕ್ಕಾಗಿ ಬರೋಡಾದ ಎಂ.ಎಸ್ ವಿಶ್ವವಿದ್ಯಾಲಯಕ್ಕೆ ಅವರು ಹೋದರು. ಕಲಾ ಆಶ್ರಮದ ಜವಾಬ್ದಾರಿ ಯಲ್ಲಪ್ಪ ತಾತಾ ಹಾಗೂ ನಿಶಿಕಾಂತ್‌ರ ಹೆಗಲ ಮೇಲೆ ಬಿತ್ತು.

ಎಂ.ಎಸ್.ವಿಶ್ವವಿದ್ಯಾಲಯದಲ್ಲಿ ರವೀಂದ್ರ ಒಬ್ಬರನ್ನು ಹೊರತುಪಡಿಸಿ ಉಳಿದವರು ಪಟ್ಟಣ ಪ್ರದೇಶದವರು. ಬೇರೆ ವಿದ್ಯಾರ್ಥಿಗಳ್ಯಾರೂ ಪಂಚೆ, ಶರ್ಟು ತೊಡುತ್ತಿರಲಿಲ್ಲ ಮತ್ತು ಶುದ್ಧ ಹಿಂದಿಯನ್ನು ನಿಖರವಾದ ಶೈಲಿಯಲ್ಲಿ ಮಾತಾಡುತ್ತಲೂ ಇರಲಿಲ್ಲ. ರವೀಂದ್ರರ ಉಡುಪು, ಅವರ ಮಾತುಕತೆಗಳಲ್ಲಿ ಇಣುಕು ಹಾಕುತ್ತಿದ್ದ ವೇದ ಪುರಾಣಗಳ ಪ್ರಭಾವ ಮೊದಲಾದವುಗಳಿಂದ ಇವರು ಆರ್.ಎಸ್.ಎಸ್ ಇರಬಹುದೇ ಎಂದು ಗೆಳೆಯರು ಅನುಮಾನಿಸಿದರು. ಕಾಸ್ಮೊಪೊಲಿಟನ್ ವಾತಾವರಣ ಇದ್ದ ಈ ಕಲಾಶಾಲೆಯಲ್ಲಿ ಇವರು ಆರ್.ಎಸ್.ಎಸ್ ಅಲ್ಲದೇ ಹೋದರೂ ಸಂಸ್ಕೃತಿ ಕುರಿತು ಹೆಚ್ಚು ಆಸ್ಥೆ ಹೊಂದಿದವರು ಅಂತಲಾದರೂ ಅನಿಸುತ್ತಿತ್ತು. ಹೀಗಾಗಿ ರವೀಂದ್ರರಿಗೆ ಗೆಳೆಯರೇ ಇರಲಿಲ್ಲ.

ಇಲ್ಲಿನ ಒಂಟಿತನದಲ್ಲಿ ಹೈದರಾಬಾದಿನಲ್ಲಿ ಕಾಡಿದ್ದ ಸಂಗತಿಗಳು ಪೂರ್ಣ ಪ್ರಮಾಣದಲ್ಲಿ ಕಾಣಿಸಿಕೊಳ್ಳತೊಡಗಿದವು.

'ಬರೋಡಾಗೆ ಹೋದ ಒಂದು ವರ್ಷ ನನ್ನಿಂದ ಏನೂ ಕೆಲಸ ಮಾಡಲಾಗಲಿಲ್ಲ. ಅದೀಲಾಬಾದ್‌ಗೆ ವಾಪಾಸು ಹೋಗಿಬಿಡಬೇಕು ಅನಿಸುತ್ತಿತ್ತು. **ನೀನು ಎಂದಾದರೂ ಏನನ್ನಾದರೂ ಮಾಡಿದ್ದೀಯಾ?** ಎಂಬ ಗೆಳೆಯನೊಬ್ಬನ ಚುಚ್ಚು ಮಾತು ಅಲ್ಲಿಯೇ ಉಳಿಯುವಂತೆ ಮತ್ತು ಕೆಲಸ ಮಾಡುವಂತೆ ಮಾಡಿತು. ನಾನು ಒಂದು ಆಲದ ಮರದತ್ತಲೇ ನೋಡುತ್ತಾ ಬಹಳಷ್ಟು ಸಮಯ ಕಳೆದುಬಿಡುತ್ತಿದ್ದೆ. ಅದರ ಎಲೆಗಳು ಬದಲಾಗುವುದನ್ನು

ಗಮನಿಸುತ್ತಿದ್ದೆ. ಏಕೆ ಈ ರೀತಿ ನಮ್ಮನ್ನು ನಾವು ನವೀಕರಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ ಎಂದು ಆಶ್ಚರ್ಯವಾಗುತ್ತಿತ್ತು. ನನ್ನ ಹಳೆಯ ಕಲ್ಪನೆಗಳನ್ನು ಬಿಟ್ಟುಕೊಟ್ಟು ನನ್ನ ಅನುಭವಕ್ಕೆ ಅಭಿವ್ಯಕ್ತಿ ಮತ್ತು ಆಕಾರ ಕೊಡಲು ನಿರ್ಧರಿಸಿದೆ'.

'....ಒಂದು ದಿವಸ ನಾನು ವಿಶ್ರಾಂತಿ ಪಡೆಯುತ್ತಿದ್ದಾಗ ಇದ್ದಕ್ಕಿದ್ದಂತೆ ಏನೋ ಹೊಳೆಯಿತು. ಆಗ ಬೆಳಗಿನ ಜಾವ ೪ ಘಂಟೆ. ನಾನು ಎದ್ದು ಶಾಲೆಯ ಕಡೆಗೆ ಹೋದೆ. ಅಲ್ಲಿ ವಿವಿಧ ಆಕೃತಿಗಳನ್ನು ಮಾಡಿದೆ. ಇವು ಅನೇಕರ ಹೊಗಳಿಕೆಗೂ ಪಾತ್ರವಾದವು. ಕೆಲವರು ಅವುಗಳನ್ನು ಖರೀದಿಸಿದರು. ಇದು ನನ್ನನ್ನು ಪ್ರೋತ್ಸಾಹಿಸಿತು. ಅಂದಿನಿಂದ ನಾನು ನಿಜಕ್ಕೂ ಕೆಲಸ ಮಾಡಲು ಆರಂಭಿಸಿದ್ದೆ. ನನ್ನ ಬಾಲ್ಯಕ್ಕೆ ಜಿಗಿದೆ. ಆಗಾಗ ಕೇಳುತ್ತಿದ್ದ ಪ್ರಶ್ನೆಯನ್ನು ಮತ್ತೆ ಕೇಳಿಕೊಂಡೆ. 'ನಾವು ಸೃಷ್ಟಿಸಬಲ್ಲೆವೇನು?' ನಾನು ನಾಲ್ಕು ವರ್ಷದವನಾಗಿದ್ದಾಗ ಕೇಳುತ್ತಿದ್ದ ಪ್ರಶ್ನೆ ಇದು. ಜೇಡಿ ಮಣ್ಣು, ಬಣ್ಣದ ದಾರ ಮತ್ತು ಲೋಹದ ಚೂರುಗಳಿಂದ ನಿರ್ಮಿಸುತ್ತಿದ್ದ ಪದಾರ್ಥಗಳ ನೆನಪು ಬಂದಿತು. ಇವು ನಿಜಕ್ಕೂ 'ನನ್ನವು'. ನನ್ನ ಅಪ್ಪಟ ಮೂಲ ಸೃಷ್ಟಿ ಎನಿಸಿತು. ಉಳಿದವು ನಾನು ಅಲ್ಲಿ ಇಲ್ಲಿ ನೋಡಿದ್ದು, ಕಲಿತಿದ್ದು. ನಾನು ಮೂಲದ ಆಧಾರದ ಮೇಲೆ ವರ್ತಮಾನದಲ್ಲಿ ಕೃತಿ ರಚಿಸಿದ್ದೆ....'

ರವೀಂದ್ರರಿಗೆ ಬೇರೆ ಕಲಾವಿದರ ರಚನೆಯಲ್ಲಿಯೂ ಈಗ ಆಸಕ್ತಿ ಬಂತು. ಎಂ.ಎಸ್. ವಿಶ್ವವಿದ್ಯಾಲಯದಲ್ಲಿ ಕಲಿಸುತ್ತಿದ್ದ ನಜರೀನ್ ಮೊಹಮ್ಮದಿ ಎಂಬ ಕಲಾವಿದೆ ಬಗ್ಗೆ ಇವರಿಗೆ ವಿಶೇಷ ಅಭಿಮಾನವಿತ್ತು. 'ಆಕೆಗೆ ನನ್ನ ಕೆಲಸ ಕಂಡರೆ ಇಷ್ಟವಿತ್ತು. ನನ್ನ ಕೆಲಸ ನೋಡುವುದನ್ನು ಮುಂದೂಡುತ್ತಾ ಬಂದಿದ್ದರು. ಕೊನೆಗೊಂದು ದಿವಸ ಆಕೆ ಬಂದಾಗ ಅದರತ್ತ ಪೂರ್ಣ ಗಮನ ನೀಡಿದರು. ಕಲಾಕೃತಿಯನ್ನು ಹೇಗೆ ನೋಡಬೇಕು ಎಂಬುದನ್ನು ಆಕೆ ಕಲಿಸಿದರು'. ಎನ್ನುತ್ತಾರೆ ರವೀಂದ್ರ. ಈ ಬೆಂಬಲ ಮತ್ತು ಸಮ್ಮತಿ ರವೀಂದ್ರರ ಕಲಾಕೃತಿ ನಿರ್ಮಾಣಕ್ಕೆ ಮತ್ತು ಉತ್ಸಾಹಕ್ಕೆ ಹೆಚ್ಚಿನ ಶಕ್ತಿಯನ್ನು ನೀಡಿತು. 'ಕಲೆ ಎಂದರೇನು?' ಎಂಬ ಪ್ರಶ್ನೆಗೆ ಈ ಸಂಪರ್ಕ, ವಾಗ್ವಾದಗಳು ಪ್ರೌಢತೆಯನ್ನು, ಶ್ರೀಮಂತಿಕೆಯನ್ನು ತಂದುಕೊಟ್ಟವು. ನಂತರ ಅವರು ಅದೀಲಾಬಾದ್‌ಗೆ ಮರಳಲು ಬಯಸಿದರು.

ಕಲಾಧಾಮವಾಗಿ ಕಲಾ ಆಶ್ರಮ

ಅದೀಲಾಬಾದ್‌ಗೆ ವಾಪಾಸು ಬಂದ ಮೇಲೆ ಕಲಾ ಆಶ್ರಮದ ೨೦ ವರ್ಷದ ಬೃಹತ್ ಯೋಜನೆಗಾಗಿ ರವೀಂದ್ರ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡರು.

ತಾನು ಎಲ್ಲಿರಬೇಕೋ ಆ ಜಾಗಕ್ಕೆ ಗುರೂಜಿ ವಾಪಾಸು ಬಂದರು. ಅವರ ಶಕ್ತಿ ಈ ಅವಧಿಯಲ್ಲಿ ಹದಗೊಂಡಿತ್ತು. ಶರ್ಮಾರ ಜಂಟಿ ಕುಟುಂಬ ತನ್ನ ತೆಕ್ಕೆಗೆ ಇವರನ್ನು ಬರಮಾಡಿಕೊಂಡು ಮದುವೆ ಮಾಡಲು ಪ್ರಯತ್ನ ನಡೆಸಿತು. ವಧು ಪಂಜಾಬಿ ಮೂಲದವಳಾಗಿದ್ದು ಗುಜರಾತಿನಲ್ಲಿ ನೆಲೆಗೊಂಡವಳಾಗಿದ್ದಳು. ಕಲಾ ಆಶ್ರಮವಾಸಿಗಳೆಲ್ಲರಿಗೆ ಈಕೆ ಅತ್ತಿಗೆಯೆನಿಸಿ ಎಲ್ಲರೊಡನೆ ಒಂದಾದಳು.

ದೈನಂದಿನ ಬದುಕಿಗೆ ದಿವ್ಯ ಸೌಂದರ್ಯ ತರುವತ್ತ ಉತ್ಸುಕರಾಗಿರುವವರ ಮತ್ತು ಅವರ ಒಡನಾಟ ಬಯಸುವವರ ಸುತ್ತ ರವೀಂದ್ರರ ಬದುಕು ಗಿರಕಿಹೊಡೆಯುತ್ತಿತ್ತು. ಸೌಂದರ್ಯ ಪ್ರಜ್ಞೆ ಅಥವಾ ಸೌಂದರ್ಯಾನುಭೂತಿ ಬದುಕಿನಲ್ಲಿ ಅಂತರ್ಗತವಾಗಿರುವ ಭಾಗವೇ ಹೊರತು ಪ್ರತ್ಯೇಕವಾದುದಲ್ಲ ಎಂಬ ಅಂಶವನ್ನು ರವೀಂದ್ರ ತಮ್ಮ ಹಳ್ಳಿಗಳಲ್ಲಿನ ಪಯಣದ ಅವಧಿಯಲ್ಲಿ ಕಂಡುಕೊಂಡಿದ್ದರು. ತಮ್ಮ ಸುತ್ತಲಿನ ಯುವಕರಿಗೆ ಯಾಂತ್ರಿಕ ಆಚರಣೆಗಳನ್ನು ಮಾಡುವುದಕ್ಕಿಂತ ಅದು ಸಂಕೇತಿಸುವ ಅರ್ಥ ಮತ್ತು ಅದರ ಅನುಭವವನ್ನು ಹೊಂದಲು ರವೀಂದ್ರ ನೆರವಾಗುತ್ತಿದ್ದುದರಿಂದ ಯುವಕರು ಸದಾ ಅವರನ್ನು ಮುತ್ತಿರುತ್ತಿದ್ದರು.

ಶಿವಲಿಂಗವನ್ನು ಅಲಂಕರಿಸುವ ವಿಧಾನ ನಮಗೆ ಪ್ರಾರ್ಥಿಸಲು ಅನುವು ಮಾಡಿಕೊಡುವ ವಾತಾವರಣವನ್ನು ಸೃಷ್ಟಿಸುತ್ತದೆ. ನಮ್ಮನ್ನು ಅದಕ್ಕೆ ಅಣಿಗೊಳಿಸುತ್ತದೆ. ಈ ಪ್ರಕ್ರಿಯೆಯಲ್ಲಿ ದೊರೆಯುವ ಅನುಭವವೇ ಅದರ ಗುರಿಯೂ ಆಗಿರಬಹುದು. ನಮ್ಮಲ್ಲಿ ಒಂಬತ್ತು ಬಗೆಯ ಭಕ್ತಿ ಇದೆ. ಮೂರ್ತಿಯನ್ನು ಪೂಜಿಸಲೇಬೇಕು ಎಂದು ಎಲ್ಲಿದೆ?

ವರುಷಗಳು ಕಳೆದಂತೆ, ಕಲಾ ಆಶ್ರಮವು ಸ್ಥಳೀಯ ಕಲಾಸಾಮಗ್ರಿಗಳನ್ನು ಸಂಗ್ರಹಿಸಿತು. ರೇಷ್ಮೆ ಬಟ್ಟೆಯ ಮೇಲೆ ಜರಿ ಕಸೂತಿ ಮಾಡಿದ ಬಟ್ಟೆಗಳು, ಮರದ ದೇವ ದೇವತೆಗಳ ಮೂರ್ತಿಗಳು, ಗೊಂಡರು ವಿಶೇಷ ಸಂದರ್ಭದಲ್ಲಿ ಧರಿಸುತ್ತಿದ್ದ ರುಮಾಲುಗಳು, ಬೆಳ್ಳಿ ಮತ್ತು ಹಿತ್ತಾಳೆಯಿಂದ ಎರಕ ಹೊಯ್ದ ಆಭರಣಗಳು, ಮನೆಬಳಕೆಯ ಸಾಮಗ್ರಿಗಳು, ಸ್ಥಳೀಯ ಆಯುಧಗಳು, ಸಲಕರಣೆಗಳು ಮತ್ತು ಸಂಗೀತವಾದ್ಯಗಳೇ ಮುಂತಾದ ಹಲವಾರು ವಸ್ತುಗಳು ಈ ಸಂಗ್ರಹದಲ್ಲಿ ಇದ್ದವು. ಅವೆಲ್ಲ ಸಾಂಪ್ರದಾಯಿಕ ವಿಧಾನದಲ್ಲಿ ತಯಾರಾದ ಪದಾರ್ಥಗಳಾಗಿದ್ದವು.

ಹೀಗಾಗಿ ಈ ಕಲಾ ಆಶ್ರಮ ಕಸುಬುದಾರರು ಮತ್ತು ಸಾಂಪ್ರದಾಯಿಕ ಸಮುದಾಯಗಳ ಕಲಾವಿದರನ್ನು ಆಕರ್ಷಿಸುವ ಚುಂಬಕ ಶಕ್ತಿ ಇದ್ದಂತಿತ್ತು. ಈ ಸಂಗ್ರಹದಲ್ಲಿನ ಅನೇಕ ಸಾಮಗ್ರಿಗಳು ಸಮಾಜದಲ್ಲಿ ಲಭ್ಯವಿಲ್ಲದ ಕಾರಣ ವಿಶೇಷ ಸಂದರ್ಭದಲ್ಲಿ ಜನರು ಇವುಗಳನ್ನು ಪಡೆಯಲು ಬರುತ್ತಿದ್ದುದೂ ಉಂಟು. ಇನ್ನು ಕೆಲವು ಮಂದಿ ಆ ವಸ್ತುಗಳ ಪ್ರತಿಕೃತಿ ತಯಾರಿಸಲೂ ಬರುತ್ತಿದ್ದರು. ಹೀಗಾಗಿ ಎಲ್ಲ ರೀತಿಯಿಂದ ಕಲಾ ಆಶ್ರಮ ಸಮುದಾಯದ ಇತಿಹಾಸ ಸಂಗ್ರಹಾಲಯದಂತಾಯಿತು. ನಕಾಶಿ ಕಲಾವಿದರು, ಸಾಂಪ್ರದಾಯಿಕವಾದ ಕತೆ ಹೇಳುವ ಕಲಾವಿದರು ಮುಂತಾದವರ ಕಥಾ ಸರಣಿ ಚಿತ್ರಗಳ ರಿಪೇರಿ, ಅಗತ್ಯ ಬಿದ್ದರೆ ಹೊಸ ಚಿತ್ರಪಟ ಬರೆಸುವುದು ಮುಂತಾದ ಕೆಲಸಗಳೂ ನಡೆದವು. ಕೆಲವು ಕಸುಬುದಾರರು, ಕಲಾವಿದರು ಉಳಿದ ಕಲಾವಿದರ ಜತೆಗೂಡಿ ಇರಲು, ಅಥವಾ ಗುರೂಜಿಯವರ ಜತೆ ಯಾವುದೋ ನಿರ್ದಿಷ್ಟ ಕೆಲಸಕ್ಕಾಗಿ ಬರುತ್ತಿದ್ದರು.

ಈ ಕಲಾ ಆಶ್ರಮಕ್ಕೆ ಮಕ್ಕಳೂ ಬರುತ್ತಿದ್ದರು. ಅವರು ಸೃಜನಶೀಲ ಶಕ್ತಿಗಳನ್ನು ಅನ್ವೇಷಿಸುತ್ತಾ ಪ್ರಯೋಗಗಳನ್ನು ನಡೆಸುತ್ತಿದ್ದರು.

ಇಲ್ಲಿ ಕಡ್ಡಾಯವೆಂಬುದು ಏನೂ ಇರಲಿಲ್ಲ. ಅವರಿಗೆ ಬೇಕೆನಿಸಿದರೆ ಈ ಸಾಂಪ್ರದಾಯಿಕ ಕಲಾ ಪ್ರಕಾರ ಮತ್ತು ವಿಧಾನವನ್ನು ಕಲಿಯಬಹುದು. ಯಾವುದೇ ಆದೇಶ, ಸೂಚನೆ ಇಲ್ಲದೇ ತಮ್ಮ ಕಲ್ಪನೆಗೆ ಬಂದಂತೆ ಕೆಲಸ ಮಾಡಲು ಅವಕಾಶವಿತ್ತು. ಮಕ್ಕಳೂ ತಮಗನಿಸಿದ್ದನ್ನು ಮಾಡಲು ಅವಕಾಶವಿತ್ತು. 'ಯಾವುದೇ ಮಿತಿ ಅಥವಾ ಹೊರ ಪ್ರಭಾವವಿಲ್ಲದೆ ಕೆಲಸ ಮಾಡುವ ವಾತಾವರಣ ಕಲ್ಪಿಸುವುದಷ್ಟೇ ನಾವು ಮಾಡಬಹುದಾದ ಕೆಲಸವಾಗಿದೆ. ಹೊರಗಿನ ಶಿಕ್ಷಣವನ್ನು ಅವರು ಅನಂತರ ಪಡೆಯುತ್ತಾರೆ. ಸ್ವಂತಿಕೆ ಮಕ್ಕಳಿಗೆ ಕಲಿಸುವ ಮೊದಲ ಪಾಠ'.

ಪೈಂಟಿಂಗ್ ಅಥವಾ ಚಿತ್ರಕಲೆ ಎಂದರೇನು? ಕೆಲವು ರೇಖೆಗಳಿಂದ ಅವಕಾಶವನ್ನು ವಿಭಾಗಿಸುವುದು. ಹೀಗೆ ಅದಕ್ಕೆ ನಿಯಮಗಳನ್ನು ಹೇಳುತ್ತಾ ಹೋದಲ್ಲಿ ಅದೊಂದು ಸೃಜನಶೀಲ ಚಿತ್ರಕಲೆ ಎನಿಸುವುದಿಲ್ಲ. ಕೇವಲ ಪ್ರತಿಕೃತಿ ಆದೀತು ಅಷ್ಟೆ!

ಕಾಲ ಸರಿದಂತೆ, ೨೦ವರ್ಷಗಳ ಆ ನಿರ್ಧಾರ ಕಲಾ ಆಶ್ರಮದಲ್ಲಿ ಬೇರೆ ಬೇರೆ ರೀತಿಯಲ್ಲಿ ಮೈದಾಳಿತು. ಇದು ರವೀಂದ್ರರ ಬದುಕಿನ ಚಿತ್ರ ಕೂಡಾ.

ಕೋಲಂ ಗುಡ್ಡಗಾಡು ಮಕ್ಕಳಿಗಾಗಿ ಇರುವ ವಿಶೇಷ ಶಾಲೆಯಲ್ಲಿ ರವೀಂದ್ರ ಕಲಾ ಶಿಕ್ಷಕರಾಗಿದ್ದರು. ಇದು ಸರ್ಕಾರದೊಡನೆ ಸಹಯೋಗದ ಮೊದಲ ಹಂತವಾಗಿತ್ತು. ಬರೋಡಾದಲ್ಲಿ ಅಧ್ಯಯನ ಮುಗಿಸಿ ಬಂದ ನಂತರ ಅದೀಲಾಬಾದ್‌ನ ಜಿಲ್ಲಾ ಕಲೆಕ್ಟರ್ ಈ ಜವಾಬ್ದಾರಿ ಹೊರುವಂತೆ ರವೀಂದ್ರರನ್ನು ವಿನಂತಿಸಿಕೊಂಡರು. ಗುರೂಜಿ ಸರ್ಕಾರಿ ಕೆಲಸ ಸೇರಲು ಒಪ್ಪಲಿಲ್ಲ. ಆದರೆ, ಮಕ್ಕಳಿಗೆ ಕಲಿಸುವುದೆಂದರೆ ಅವರಿಗೆ ಇಷ್ಟ. ಆದುದರಿಂದ ಅವರು ಸಂಬಳದ ನೌಕರನಾಗಲು ಒಪ್ಪಲಿಲ್ಲ. ೬೦೦ರೂಪಾಯಿ ಗೌರವ ಧನದ ಮೇಲೆ ಕೆಲಸ ಮಾಡಲು ಒಪ್ಪಿದರು.

ಈ ನಡುವೆ ಆಧುನಿಕತೆ ಅದೀಲಾಬಾದನ್ನು ಅಪ್ಪಳಿಸಿತು. ತಾನು ಪ್ರತಿಕ್ರಿಯಿಸದೇ ತನ್ನ ಪಾಡಿಗೆ ಕೆಲಸ ನಡೆಸಲು ಬಯಸಿದರೂ ಗಣೇಶೋತ್ಸವದ ಸಮಯದಲ್ಲಿ ಗಣೇಶನ ಹೆಸರಲ್ಲಿ ಜೇಡಿಮಣ್ಣಿನ ವಿಕೃತಿಗಳು ಬಂದು ಬೀಳುತ್ತಿದ್ದವು. ಆದುದರಿಂದ ಸಾಂಪ್ರದಾಯಿಕವಾದ ವಿವಿಧ ಭಾವಭಂಗಿಗಳ ೧೧ಬಗೆಯ ಮೂರ್ತಿಗಳನ್ನು ರವಿಂದ್ರ ರಚಿಸಿದರು. ಒಂದು ವಸ್ತುಪ್ರದರ್ಶನ ಏರ್ಪಡಿಸಿ, ಈ ಮೂರ್ತಿಗಳನ್ನು ಪ್ರದರ್ಶಿಸಿ ಪ್ರತಿ ಮೂರ್ತಿಯ ಸಾಂಕೇತಿಕ ಅರ್ಥವನ್ನು ವಿವರಿಸುವ ಶ್ರಮವನ್ನು ಅವರು ತೆಗೆದುಕೊಂಡರು. ಸಾಂಪ್ರದಾಯಿಕ ಸೌಂದರ್ಯ ಮೀಮಾಂಸೆ ಮತ್ತು ಈ ಸಾಂಕೇತಿಕತೆ ನಮ್ಮ ಜಂಜಡದ ಬದುಕನ್ನು ಹೇಗೆ ಶ್ರೀಮಂತಗೊಳಿಸಬಹುದು ಎಂಬುದನ್ನು ಕಲಿಸುವ ಬಗೆ ಅದಾಗಿತ್ತು.

೧೯೮೦ರ ದಶಕದ ಕೊನೆಯ ವೇಳೆಗೆ ರವೀಂದ್ರ, ಗಣೇಶ ಮೂರ್ತಿ ಮಾಡುವ ಅಭ್ಯಾಸವನ್ನು ಬಿಟ್ಟುಕೊಟ್ಟರು. ಕೆಲವರು ದೇವರ ಮೂರ್ತಿಗಳ ಸುತ್ತ ರಾಜಕೀಯ ಹೆಣೆಯುವುದರಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದರು. 'ಹಿಂದುತ್ವ' ಅವರ ಘೋಷಣೆಯಾಗಿತ್ತು ಮತ್ತು ಗುರೂಜಿ ಸಹಜವಾಗಿಯೇ ಈ ಪರಿಕಲ್ಪನೆಗೆ ಬೆಂಬಲ ನೀಡುತ್ತಾರೆಂದು ಅವರಿಗೆ ಅನ್ನಿಸಿತ್ತು.

'ಅಂತಹ ಒಂದು ಸಭೆಗೆ ಯಾರನ್ನೂ ಟೀಕಿಸಬಾರದು ಎಂಬ ಷರತ್ತಿನ ಮೇಲೆ ನನ್ನನ್ನು ಕರೆದಿದ್ದರು. ಅಲ್ಲಿ **ಹಿಂದೂ ಯಾರು?** ಎಂಬ ಪ್ರಶ್ನೆಯೊಂದಿಗೆ ನಾನು ಮಾತಿಗೆ ತೊಡಗಿದೆ. ಒಂದು ರೀತಿಯ ದಿಗ್ಭ್ರಾಂತ ಮೌನ ಆವರಿಸಿತ್ತು. **ಇಲ್ಲಿರುವ ಹಿಂದುಗಳೆಲ್ಲ ಎದ್ದು ನಿಲ್ಲಿ** ನಾನು ಪುನಃ ಹೇಳಿದೆ.

ಈ ಪ್ರಶ್ನೆಗಳಿಂದ ಸಭೆ ಗೊಂದಲಕ್ಕೆ ಸಿಲುಕಿ ಇರುಸುಮುರಿಸಿಗೆ ಒಳಗಾದಂತೆ ಕಂಡುಬಂತು. ದೇವರ ಮೂರ್ತಿ ಅನೇಕ ಸಂಕೇತಗಳ ಮೂಲಕ ವಿವಿಧ ಆಶಯಗಳನ್ನು ಅಭಿವ್ಯಕ್ತಿಸುತ್ತದೆ. ಹೀಗಾಗಿ ಢಮರುಗ, ತ್ರಿಶೂಲಗಳನ್ನು ಎರಡೂ ಕೈಯಲ್ಲಿ ಹಿಡಿದು ಹಾವು ಸುತ್ತಿಕೊಂಡಿರುವ ಗಂಡು ಆಕೃತಿಯನ್ನು ಶಿವ ಎಂದು ಸುಲಭವಾಗಿ ಗುರುತಿಸಬಹುದು. ಇದೇ ರೀತಿ ಚಕ್ರವನ್ನು ಕೈಯಲ್ಲಿ ಹಿಡಿದಿರುವ ಗಂಡು ಆಕೃತಿ ವಿಷ್ಣು ಎನಿಸಿಕೊಳ್ಳುತ್ತದೆ.

'ನೀವು ಹಿಂದೂ ಎಂದುಕೊಳ್ಳಲು ನಿಮ್ಮ ಹೊರರೂಪದಲ್ಲಿ ಏನಿದೆ?' ರವೀಂದ್ರ ಸಭಿಕರನ್ನು ಉದ್ದೇಶಿಸಿ ಈ ಪ್ರಶ್ನೆಯನ್ನು ಕೇಳಿದರು. ಅವರಲ್ಲಿ ಬಹುತೇಕ ಮಂದಿ, ಆಧುನಿಕ ಪ್ಯಾಂಟು, ಶರ್ಟ್ ಧರಿಸಿದ್ದವರು. 'ನಿಮಗೆ ನಿಮ್ಮದೇ ಆದ ವಿಶೇಷ ಗುಣ ಅಥವಾ ಚಹರೆ ಇದ್ದರೆ ನೀವು ಯಾರು ಎಂದು ಅರಚಿ ಹೇಳಬೇಕಾದ ಪ್ರಮೇಯ ಬರುವುದಿಲ್ಲ. ತಮ್ಮ ಅಸ್ತಿತ್ವವನ್ನು ಪ್ರತಿಷ್ಠಾಪಿಸಿಕೊಳ್ಳಲು ಯಾರೂ ಕೂಗಿ ಹೇಳಿಕೊಳ್ಳಬೇಕಾಗಿ ಬರುವುದಿಲ್ಲ. ತಮ್ಮ ಸಂಸ್ಕೃತಿಯಿಂದಲೇ ಪ್ರತ್ಯೇಕ ಹೊಂದಿ, ಅದಕ್ಕೆ ಅಪರಿಚಿತರಾದವರಿಗೆ, ಅವರ ಪೂರ್ವ ಪರಂಪರೆ ತಿಳಿದಿಲ್ಲದವರಿಗೆ ತಾನು ಹಿಂದೂ ಎಂದು ಕರೆದುಕೊಳ್ಳಲು ಅರಚಬೇಕಾಗುತ್ತದೆ. ಗದ್ದಲ ಎಬ್ಬಿಸಬೇಕಾಗುತ್ತದೆ'.

ಇದೇ ರೀತಿ ರವೀಂದ್ರ ಇತರೆ ಸಿದ್ಧಾಂತಗಳ ಬಗ್ಗೆಯೂ ಕಿಡಿಕಾರಿದ್ದರು. ೧೯೯೦ರಲ್ಲಿ ಒಬ್ಬ ಗುಡ್ಡಗಾಡು ನಾಯಕನ ಬದುಕಿನ ಬಗ್ಗೆ ನಿರ್ಮಿಸುತ್ತಿರುವ ತೆಲುಗು ಚಿತ್ರ, 'ಕೊಮರಂ ಭೀಮು'ಗೆ ಕಲಾ ನಿರ್ದೇಶಕರಾಗಿ ಕಾರ್ಯನಿರ್ವಹಿಸಲು ಗೆಳೆಯರು ಹೈದರಾಬಾದಿಗೆ ಆಹ್ವಾನಿಸಿದರು. ಈ ಚಿತ್ರ ತಂಡದ ಬಹುತೇಕ ಗೆಳೆಯರು ಮಾರ್ಕ್ಸಿಸ್ಟರಾಗಿದ್ದರು. ಅವರು ರವೀಂದ್ರರ ಪ್ರಾಚೀನ ಎನಿಸುವ ಪುರಾಣ ಪ್ರೀತಿಯನ್ನು ಒಪ್ಪುತ್ತಿರಲಿಲ್ಲ. ಚಿತ್ರದ ಸೆಟ್‌ನಲ್ಲಿಯೇ ಅನಿವಾರ್ಯವಾಗಿ ಬಿಸಿಬಿಸಿ ಚರ್ಚೆಗಳು ಆಗುತ್ತಿದ್ದವು. 'ನಾವು ಕೊಳದ ಬಳಿ ಚಿತ್ರೀಕರಣ ನಡೆಸುತ್ತಿದ್ದೆವು. ನಾವೆಲ್ಲ ಕೊಳದಲ್ಲಿ ಸ್ನಾನ ಮಾಡುವಾಗ ನಾನು ಇವರುಗಳನ್ನು ರೇಗಿಸಲೆಂದೇ ನೀರಿನಲ್ಲಿ ಮುಳುಗುಹಾಕುವಾಗ ಜೈ ಮನುಸ್ಮೃತಿ ಎಂದು ಹೇಳುತ್ತಿದ್ದೆ'. ರವೀಂದ್ರ ಇದನ್ನು ನೆನಪಿಸಿಕೊಳ್ಳುವಾಗ ಅವರ ಕಣ್ಣುಗಳು ಕುಚೋದ್ಯದಿಂದ ಹೊಳೆಯುತ್ತವೆ.

ಆದರೂ ಇದರಲ್ಲಿ ಯಾವ ತಮಾಷೆಯೂ ಇರಲಿಲ್ಲ. ರವೀಂದ್ರ, ಜಾತಿ ಪದ್ಧತಿ ಅತ್ಯಂತ ಕೆಡುಕಾದುದು ಎಂಬ ಆಧುನಿಕ ಅಭಿಪ್ರಾಯಕ್ಕೆ ಪೂರ್ಣ ವಿರೋಧಿಯಾಗಿದ್ದರು. ಇದು ನಿಜಕ್ಕೂ ಭಯಂಕರ ಶೋಷಣೆ ಮತ್ತು ದಬ್ಬಾಳಿಕೆಗೆ ಕಾರಣವೇ ಆಗಿದ್ದಲ್ಲಿ ಜನ ಇದನ್ನು ಎಂದೂ ಒಪ್ಪಿಕೊಳ್ಳುತ್ತಿರಲಿಲ್ಲ. ಇಂತಹ ಸ್ಥಿತಿಯನ್ನು ಸೃಷ್ಟಿಸಿದವನನ್ನು ಕೊಲ್ಲುತ್ತಿದ್ದರು ಎಂದು ಬಹಳ ಗಂಭೀರವಾಗಿಯೇ ವಾದಿಸುತ್ತಿದ್ದರು. ಈ ಜಾತಿ ಪದ್ಧತಿಗೆ ಬೌದ್ಧ ಧರ್ಮ ಭಯಂಕರ

ಸವಾಲೆಸೆಯಿತಲ್ಲವೇ? ಭಾರತದಿಂದ ಅದು ಹೊರಹೋಗಲು ಅದೇ ಕಾರಣವಲ್ಲವೇ? ಬೌದ್ಧ ಧರ್ಮ ಸತ್ತಿತು ಅಥವಾ ಹೊರಗೆ ಹೋಯಿತು ಎಂಬುದು ಸರಿಯಾದುದೇನಲ್ಲ. ನಮ್ಮವರು ಪರಂಗಿಯುವರ ಭಾಷೆಯಲ್ಲಿಯೇ, ಅವರ ರೀತಿಯಲ್ಲಿಯೇ ನಮ್ಮ ಹಳೆಯ ಪದ್ಧತಿಗಳನ್ನು ಹಳಿಯುವುದು ನಿಜಕ್ಕೂ ಸಿಟ್ಟು ತರಿಸುವ ಸಂಗತಿ. ಸಮಸ್ಯೆಗಳು ಇರುವುದು ನಿಜವಾದರೂ ಅದಕ್ಕಾಗಿ ಇಡೀ ಪದ್ಧತಿಯನ್ನು ಹಳಿಯುವುದು ಏಕೆ? ಜಾತಿ ಪದ್ಧತಿ ತನ್ನಷ್ಟಕ್ಕೇ ತಾನು ಕೆಟ್ಟದ್ದಲ್ಲ. ಅದು ಸಮಾಜದಲ್ಲಿ ಬಹುಮುಖತೆ, ವೈವಿಧ್ಯಕ್ಕೆ ಕಾರಣವಾಗಿದೆ.

ಆಂಧ್ರ ಪ್ರದೇಶದಲ್ಲಿ ನಕ್ಸಲೀಯ ಚಳುವಳಿಗಳ ನಡುವೆಯೇ ಇವರ ಕಾರ್ಯಕ್ಷೇತ್ರ ಇದ್ದಿತಾದರೂ ಅವರು ಸಮಕಾಲೀನ ಹೋರಾಟಗಳಿಂದ ದೂರವೇ ಉಳಿದಿದ್ದರು. 'ಹೇಗೋ ಏನೋ ಗೊತ್ತಿಲ್ಲ. ನನ್ನ ಗಮನ ಈ ಆಂದೋಲನಗಳತ್ತ ಹೋಗಲೇ ಇಲ್ಲ. ನಮ್ಮ ತಂದೆಗೆ ಸ್ಥಳೀಯ ರಾಜಕಾರಣದ ಸಂಪರ್ಕವಿದೆ. ಇವುಗಳನ್ನು ಕುರಿತು ಅವರು ಹೇಳಬಲ್ಲರು'.

ರವೀಂದ್ರರ ಕಣ್ಣಿನಿಂದ ಈ ವಿಶ್ವವನ್ನು ನೋಡುವುದಾದರೆ, ಕತ್ತಲೆ-ಬೆಳಕಿನ ಈ ಸಂಕೀರ್ಣ ಆಟದಲ್ಲಿ ನಕ್ಸಲೀಯತೆ ಎನ್ನುವುದು ಒಂದು ಸಣ್ಣ ಕಪ್ಪುಚುಕ್ಕೆ ಮಾತ್ರ! 'ಇಲ್ಲಿ ಅನ್ಯಾಯ ಮತ್ತು ದಬ್ಬಾಳಿಕೆಯನ್ನು ಶಾಶ್ವತ ಸಿದ್ಧಾಂತದ ಹಿನ್ನೆಲೆಯಲ್ಲಿ ಅರ್ಥೈಸಲಾಗುತ್ತದೆ'.

ಕಲಾ ಆಶ್ರಮದ ಧೂಳು ಹಿಡಿದ ಒಂದು ಮೂಲೆಯಲ್ಲಿ ಲೋಹದ ಚಾಮುಂಡಿಯ ಮೂರ್ತಿ ಒಂದಿದೆ. ಮನುಷ್ಯನ ತಲೆಬುರುಡೆಗಳ ಹಾರವನ್ನು ಧರಿಸಿರುವ ಹಾಗೂ ತನ್ನ ಪದತಲದಲ್ಲಿ ಯುದ್ಧೋನ್ಮಾದದಿಂದ ಮುನುಷ್ಯನ ಹೆಣವನ್ನು ತುಳಿದಿರುವ, ಉದರದಲ್ಲಿ ಹರಿದಾಡುವ ಚೇಳುಗಳಿರುವ ಆ ಮೂರ್ತಿಯನ್ನು ರವೀಂದ್ರ ಲೋಹದಲ್ಲಿ ಪರಿಣಾಮಕಾರಿಯಾಗಿ ಸೆರೆಹಿಡಿದಿದ್ದರು. ಚಾಮುಂಡಿಯ ಭಯಂಕರ ರೋಷ ಹಾಗೂ ನೋಡುಗರ ಮೇಲೆ ಅಪಾರ ಪ್ರಭಾವವನ್ನು ಉಂಟುಮಾಡುವ ರೌದ್ರತೆ ಎಂಥವರನ್ನೂ ಅಲ್ಲಾಡಿಸಿಬಿಡುತ್ತದೆ. ರವೀಂದ್ರರ ದೃಷ್ಟಿಯಲ್ಲಿ ಚಾಮುಂಡಿ ದುರ್ಬಲರ, ತುಳಿತಕ್ಕೆ ಒಳಗಾದವರ ಮನದಾಳದ ಸಿಟ್ಟು ಮತ್ತು ಶಕ್ತಿಯನ್ನು ಸಂಕೇತಿಸುತ್ತದೆ. ಹಸಿವು ಇಂತಹ ಸಿಟ್ಟನ್ನು ಹುಟ್ಟುಹಾಕಬಲ್ಲದು. ಅದು ಬಹು ಶಕ್ತಿಶಾಲಿ ಅಸುರನನ್ನೂ ಕೊಲ್ಲಬಲ್ಲದು.

ಜಾತಿ ಪದ್ಧತಿ, ಲಿಂಗಾಧಾರಿತ ಸಂಬಂಧಗಳ ತಾರ್ಕಿಕತೆಯನ್ನು ಅವರು ಬೆಂಬಲಿಸುತ್ತಿದ್ದರೂ ಕಟ್ಟಾ ಸಂಪ್ರದಾಯವಾದಿಯಾಗಿರಲಿಲ್ಲ. ಸಾಮಾಜಿಕ ವ್ಯವಸ್ಥೆಯ ಅಂಚಿನಲ್ಲಿ ಇರುವವರ ಜತೆಗೆ ಗೆಳೆತನ ಮಾಡಲು ಹಿಂಜರಿಯುತ್ತಿರಲಿಲ್ಲ. ಅದೀಲಾಬಾದ್‌ನಲ್ಲಿ ಇವರ ಹತ್ತಿರದ ಗೆಳೆಯರು ಧರಮ್ ಚಂದ್ ಮತ್ತು ಬೇಲಾ ಜೈನ್. ಇವರು ಕಟ್ಟುಕಟ್ಟಳೆಗಳಿಗೆ ವಿರುದ್ಧವಾಗಿ ಪ್ರೀತಿಯ ತೆಕ್ಕೆಗೆ ಬಿದ್ದಿದ್ದರು. ಧರಮ್ ಬಹಳ ಮಡಿವಂತಿಕೆಯ ಮಾರವಾಡಿ ಕುಟುಂಬದಿಂದ ಬಂದವನು. ಆತ ಕ್ರಿಶ್ಚಿಯನ್ ಮಹಿಳೆಯನ್ನು ಮದುವೆಯಾಗಲು ಬಯಸಿದಾಗ ಈ ಸಮುದಾಯ ಬೆಚ್ಚಿಬಿದ್ದಿತ್ತು. ಅದೀಲಾಬಾದ್‌ನ ಮಧ್ಯಮವರ್ಗ, ಇದಕ್ಕೆ ಸಮ್ಮತಿಸಲು ವರ್ಷಗಳನ್ನೇ ತೆಗೆದುಕೊಂಡಿತು. ಬಹುಶಃ ಧರಮ್ ಚಂದ್ ಡಾಕ್ಟರ್ ಆಗಿದ್ದ ಕಾರಣ, ಅವರ ಸುತ್ತ ಇದ್ದ ಪ್ರಭಾವಳಿ ಈ ಸಮುದಾಯ ಸಮ್ಮತಿಸಲು ಕಾರಣವಾಗಿರಬಹುದು.

ಅವರ ಅತ್ಯಂತ ನೋವಿನ ಒಂಟಿ ದಿನಗಳಲ್ಲಿ ಅವರೊಡನೆ ಇದ್ದ ಕೆಲವೇ ಕೆಲವು ಆಪ್ತರಲ್ಲಿ ರವೀಂದ್ರ ಕೂಡಾ ಒಬ್ಬರಾಗಿದ್ದರು. ಅಷ್ಟೇ ಅಲ್ಲ, ಈತ ಆ ಕುಟುಂಬದ ಒಬ್ಬ ಸದಸ್ಯನೇ ಆಗಿಹೋದರು.

ಧರಮ್‌ಚಂದ್ ಮತ್ತು ಬೇಲಾರಂತಹ ಗೆಳೆಯರೂ ಅದೀಲಾಬಾದ್‌ನ ಮಧ್ಯಮವರ್ಗ, ರವೀಂದ್ರರ ಆಲೋಚನೆಗಳನ್ನು ಬೆಂಬಲಿಸುವಂತೆ ಮಾಡಲು ಸಾಧ್ಯವಾಗಲೇ ಇಲ್ಲ. ರವೀಂದ್ರರನ್ನು ಈ ಮಧ್ಯಮ ವರ್ಗ ಗಂಭೀರವಾಗಿ ಪರಿಗಣಿಸಲೇ ಇಲ್ಲ. ಅವರ ಕಲಾ ಆಶ್ರಮದ ಪರಿಚಯ ರಾಷ್ಟ್ರೀಯ ದೂರದರ್ಶನದಲ್ಲಿ ಬಿತ್ತರಗೊಂಡಾಗ ಸನ್ನಿವೇಶ ತಾತ್ಕಾಲಿಕವಾಗಿ ಸ್ವಲ್ಪ ಬದಲಾಯಿತು.

'ನಿನ್ನ ಮತ, ಸಿದ್ಧಾಂತಗಳನ್ನು ಬದಿಗಿಡು ಎಂದು ಹೇಳುವವರನ್ನು ನಾನು ಪ್ರೀತಿಸುತ್ತೇನೆ. ಎಲ್ಲ ರೀತಿಯ ತಾತ್ವಿಕತೆಗಳಿಗೂ ಇಲ್ಲಿ ಜಾಗ ಇದೆ. ಗಾಂಧಿವಾದಿಗಳಿರಬಹುದು, ಮಾರ್ಕ್ಸಿಸ್ಟ್, ಲೆನಿನಿಸ್ಟ್ ಆಗಿರಬಹುದು, ಯಾರೇ ಇರಬಹುದು. ಪ್ರತಿಯೊಬ್ಬರೂ ಅವರವರ ದೃಷ್ಟಿಕೋನದಿಂದ ನೋಡುತ್ತಾರೆ. ಅವರೆಲ್ಲರೂ ಅವರವರ ನಿಲುವಿನಲ್ಲಿ ದೊಡ್ಡವರೇ. ಆದರೆ, ನಾವು ನಮ್ಮ ದಾರಿಯನ್ನು ಹುಡುಕಿಕೊಳ್ಳಬೇಕು. **ನಿನ್ನೊಳಗೆ ನೀನು ನೋಡಿಕೋ. ನಿನ್ನ ದಾರಿ ಹುಡುಕಿಕೋ** ಎಂದಷ್ಟೇ ನಾನು ಹೇಳುವುದು'.

ಹೊಸ ಗೆಳೆಯರ ಆಗಮನ

ದಸರೆಯ ದಿವಸ ಆಜಾನುಬಾಹುವಾದ ನಗೆಮೊಗದ ಒಬ್ಬ ತರುಣ ಕಲಾ ಆಶ್ರಮವನ್ನು ಪ್ರವೇಶಿಸಿದ. ಚೆನ್ನೈ ಐಐಟಿಯ ಪದವೀಧರ ಮತ್ತು ಈಗ ಕಲ್ಕತ್ತೆಯ ಐಐಎಮ್‌ನ ವಿದ್ಯಾರ್ಥಿಯಾದ ಪಿ.ಬಿ.ಶ್ರೀನಿವಾಸ್, ಅದೀಲಾಬಾದಿನ ಸರ್ಕ್ಯೂಟ್ ಹೌಸಿನಲ್ಲಿದ್ದ. ಕಲಾ ಆಶ್ರಮದಮಟ್ಟಿಗೆ ಅದು ವರ್ಷದ ಅತ್ಯಂತ ಚಟುವಟಿಕೆಯ ದಿನ. ವಿಜಯ ದಶಮಿ ಆಚರಣೆಗೆ ಬಹಳ ತಯಾರಿ ನಡೆದಿತ್ತು. ಈ ಪರಿಯ ಚಟುವಟಿಕೆಗಳಿಗೆ ಮಾರುಹೋಗಿದ್ದ ಪಿ.ಬಿ.ಶ್ರೀನಿವಾಸ್ ಆಶ್ರಮಕ್ಕೆ ಪ್ರವೇಶಿಸಿ, ಗುರೂಜಿಯೊಂದಿಗೆ ಮಾತನಾಡಲು ಬಯಸಿದ.

ಈ ತರುಣನ ಸಂಪರ್ಕ ಮತ್ತು ಆತನ ಮಾತುಗಳು ರವೀಂದ್ರರ ಮೇಲೆ ಅಷ್ಟೇನೂ ಪ್ರಭಾವವನ್ನುಂಟುಮಾಡಲಿಲ್ಲ. ಕಪಾರ್ಟ್‌ನ ಫೆಲೋಷಿಪ್ ಹಣದಿಂದ ಆತ ಆಂಧ್ರದ ಅನೇಕ ಭಾಗಗಳನ್ನು ಸುತ್ತುತ್ತಿದ್ದಾನೆಂದು ತಿಳಿದುಬಂದಿತು. ವೃತ್ತಿಪರ ತರುಣರಿಗೆ ಹಳ್ಳಿಗಳಲ್ಲಿ ಸಮಯ ಕಳೆಯಲು ಮತ್ತು ಈ ಸಮಸ್ಯೆಗಳ ನೇರ ಅನುಭವ ಪಡೆಯಲು, ಅರ್ಥ ಮಾಡಿಕೊಳ್ಳಲು ಈ ಫೆಲೋಷಿಪ್‌ಗಳು ಸಹಾಯ ಮಾಡುತ್ತವೆ. ಹೀಗೆ, ಶ್ರೀನಿವಾಸ್ ಡಿಆರ್‌ಡಿಎ (ಡಿಸ್ಟ್ರಿಕ್ಟ್ ರೂರಲ್ ಡೆವಲಪ್‌ಮೆಂಟ್ ಏಜನ್ಸಿ) ಸಂಪರ್ಕಕ್ಕೆ ಬಂದು, ಬಿದಿರಿನ ಕರಕುಶಲ ಕೈಗಾರಿಕೆಯೊಂದಿಗೆ ಕೆಲಸ ಮಾಡುವ ಯೋಜನೆ ಹಾಕಿದ್ದ. ಈತನನ್ನು ತರಬೇತಿಗೊಳಿಸಿದ ವ್ಯವಸ್ಥೆಯಿಂದ ಹೊರಬಂದು ಹೊಸ ದಾರಿ ಕಂಡುಕೊಳ್ಳಲು ಈ ಫೆಲೋಷಿಪ್ ಒಂದು ಹಾದಿ ಎಂದು ಈತನೊಡನೆ ಮಾತಾಡಿದ ಬಳಿಕ ರವೀಂದ್ರರಿಗೆ ಗೊತ್ತಾಯಿತು.

ಪಿ.ಬಿ.ಶ್ರೀನಿವಾಸ್‌ಗೆ ಬಿ.ಟೆಕ್ ಮುಗಿಸುವ ವೇಳೆಗಾಗಲೇ ತಾನು ಕಲಿತ ವಿಜ್ಞಾನ, ಈ ದೇಶವನ್ನು ನಾಶಪಡಿಸದೇ ಬಿಡದು ಎಂಬುದು ಮನದಟ್ಟಾಗಿ ಹೋಯಿತು. ಗ್ರಾಮೀಣ ಕಸುಬುದಾರರು ಮತ್ತು ರೈತರು ನಮ್ಮ ಆರ್ಥಿಕ ವ್ಯವಸ್ಥೆಯ ಅಡಿಪಾಯವಾಗುವವರೆಗೆ ಭಾರತದಲ್ಲಿ ಬಡತನ ಹೆಚ್ಚುತ್ತಲೇ ಹೋಗುತ್ತದೆ ಎಂಬುದು ಆತನಿಗೆ ಸ್ಪಷ್ಟವಾಯಿತು. ಇದರ ಜತೆಗೆ ಜನ ತಮ್ಮ ಸಂಸ್ಕೃತಿಯ ಸ್ಪರ್ಶವನ್ನು ಕಳೆದುಕೊಂಡರೆ ಅವರ ತಳಮಳ, ಆತಂಕ ಮತ್ತು ಏಕಾಕಿತನ ಹೆಚ್ಚೀತು ಎಂದೂ ಅವನಿಗೆ ಅನಿಸಿತು. ಕಲ್ಕತ್ತೆಯಲ್ಲಿ ಎಂ.ಬಿ.ಎ ಕಲಿಯುತ್ತಿರುವಾಗಲೂ ಈ ಸಮಸ್ಯೆಗಳು ಈತನನ್ನು ಬಾಧಿಸುತ್ತಿದ್ದವು. ಈ ತಳಮಳವೇ ಅವನನ್ನು ೧೯೮೫ ಸೆಪ್ಟೆಂಬರ್‌ನಲ್ಲಿ ಹರಸಂದ್ ಜಾಥಾದಲ್ಲಿ ಭಾಗವಹಿಸುವಂತೆ ಮಾಡಿದ್ದು. ಇಲ್ಲಿ ಸಾವಿರಾರು ಗುಂಪುಗಳು, ವ್ಯಕ್ತಿಗಳು ಭಾರತದ ಎಲ್ಲ ಕಡೆಗಳಿಂದ ಬಂದು ಈ ವಿನಾಶಕ್ಕೆ ಕಾರಣವಾದ ಅಭಿವೃದ್ಧಿ ಕಾರ್ಯಕ್ರಮದ ವಿರುದ್ಧ ಪ್ರತಿಭಟಿಸಿದ್ದರು.

ಅಕಸ್ಮಾತ್ತಾಗಿ ಅಲ್ಲಿ ವಿನೂ ಕಾಳೆಯ ಪರಿಚಯ ಆಗಿತ್ತು. ಆತ ನಾಗಪುರದ ಬಿದಿರು ಚಳುವಳಿಕಾರನಾಗಿದ್ದ. ಈ ಪರಿಚಯ, ಶ್ರೀನಿವಾಸ ತನ್ನೊಳಗೇ ಶೋಧ ನಡೆಸಲು ಕಾರಣವಾಯಿತು. ಇದು ಆತನನ್ನು ಕಪಾರ್ಟ್ ಶಿಷ್ಯವೇತನ ಪಡೆಯುವಂತೆ ಪ್ರೇರೇಪಿಸಿತು. ಅಂತಿಮವಾಗಿ ಈಗ ಅದೀಲಾಬಾದ್‌ಗೆ ಬರುವಂತಾಯಿತು. ಶ್ರೀನಿವಾಸನಿಗೆ ತನ್ನ ಭವಿಷ್ಯದ ಬಗ್ಗೆ ತಿಳಿದಿರಲಿಲ್ಲ. ತನಗೇ ಪರಕೀಯವಾಗಿರುವ ತನ್ನ ಸಮಾಜವನ್ನು ಅರಿಯಬೇಕು ಎನ್ನುವ ತೀವ್ರ ತಳಮಳ ಇದ್ದಿತು. ಗುರೂಜಿ ಮತ್ತು ಕಲಾ ಆಶ್ರಮ ಈ ಅನ್ವೇಷಣೆ ನಡೆಸಲು ಸೂಕ್ತ ಜಾಗ ಹಾಗೂ ಭವಿಷ್ಯದ ಹಲವಾರು ದಾರಿಗಳಿಗೆ ಇದು ದಿಕ್ಸೂಚಿ ಎನಿಸಿತು. ಶ್ರೀನಿವಾಸನ ಮೂಲಕ ವಿನೂ ಕಾಳೆ ಮತ್ತು ನಂತರ ದಸ್ತಕರ್ ಆಂಧ್ರ ಸಂಘಟನೆಯ ಉಜರಮ್ಮ ಕಲಾ ಆಶ್ರಮ ಪ್ರವೇಶಿಸಿದರು. ಇದರ ಹಿಂದೆಯೇ ಐಐಟಿಯಲ್ಲಿ ಶ್ರೀನಿವಾಸನ ಸಹಪಾಠಿಯಾಗಿದ್ದ ರಾಮಕೃಷ್ಣ ಕೂಡಾ ಬಂದರು. ಈ ತರುಣರು ಆಶ್ರಮದ ದೈನಂದಿನ ಕೆಲಸಗಳಲ್ಲಿ ನಿರತರಾದರು.

ಅದೀಲಾಬಾದ್‌ಗೆ ಬರುವ ವೇಳೆಗಾಗಲೇ ಶ್ರೀನಿವಾಸ್‌ಗೆ ಗಾಂಧಿ ಮತ್ತು ಜೆ.ಸಿ.ಕುಮಾರಪ್ಪನವರ ಹೆಸರು ತಿಳಿದಿತ್ತು. ಈ ಕಲಾ ಆಶ್ರಮ ಗಾಂಧಿ, ಕುಮಾರಪ್ಪನವರ ಹಾದಿಯ ಜೀವಂತ ನಿದರ್ಶನವಾಗಿ ಕಂಡಿತು. ಗಾಂಧಿಯ ಬಗ್ಗೆ ಹೆಚ್ಚು ಅರಿಯದ ಕುಮಾರಪ್ಪನವರ ಹೆಸರೂ ಕೇಳಿರದ ರವೀಂದ್ರ ಅದೇ ಹಾದಿಯಲ್ಲಿ ಮುನ್ನಡೆದಿದ್ದರು.

ಕಾರ್ಖಾನೆ, ಕಾರ್ಯಾಗಾರಗಳ ಪರಿಕಲ್ಪನೆ ಭಾರತಕ್ಕೆ ಪರಕೀಯವಾದುದು ಎಂಬುದು ರವೀಂದ್ರರಿಗೆ ಕುಶಲ ಕರ್ಮಿಗಳ ಒಡನಾಟದಿಂದ ಅರಿವಾಗಿತ್ತು. ಸ್ವದೇಶಿ ಕೈಗಾರಿಕೆಗಳು ಈ ಅಲೆಮಾರಿ ಕುಶಲ ಕರ್ಮಿಗಳ ಮೇಲೆಯೇ ಅವಲಂಬಿತವಾಗಿದ್ದವು. ಈ ಕುಶಲ ಕರ್ಮಿಗಳು ತೀರಾ ಸರಳವಾದ ಆದರೆ ತುಂಬಾ ದಕ್ಷವಾದ ಮತ್ತು ಎಲ್ಲಿಗಾದರೂ ಒಯ್ಯಬಹುದಾದ ಉಪಕರಣಗಳನ್ನು ಬಳಸಿ ಕೆಲಸ ಮಾಡುತ್ತಿದ್ದರು. ಇವುಗಳಿಂದಲೇ ಅವರು ವೈವಿಧ್ಯಮಯವಾದ ವಸ್ತುಗಳನ್ನು ಸೃಷ್ಟಿಸುತ್ತಿದ್ದರು. ಅವು ಮರದ ಹಡಗುಗಳಾಗಿರಬಹುದು, ಕಲ್ಲಿನ ದೇವಸ್ಥಾನ ಆಗಿರಬಹುದು ಅಥವಾ ಮನೆಬಳಕೆಯ ಸಾಮಗ್ರಿಯಾಗಿರಬಹುದು. ಈ ಕುಶಲ ಕರ್ಮಿಗಳು

ಸ್ಥಳೀಯ ಸಂಪನ್ಮೂಲಗಳನ್ನು ಕಲಾತ್ಮಕವಾಗಿ ಮತ್ತು ಅರ್ಥಪೂರ್ಣವಾಗಿ ಬಳಸಿ ಅದರ ಪೂರ್ಣ ಉಪಯೋಗ ಪಡೆಯುತ್ತಿದ್ದರು. ಈ ಸ್ವಪರಿಪೂರ್ಣತೆ ಪರಿಸರ ಸ್ನೇಹಿ ಮಾತ್ರವಲ್ಲ; ಅತ್ಯುನ್ನತ ಮಟ್ಟದ ಸಂಸ್ಕಾರವನ್ನು ಮತ್ತು ಕೌಶಲವನ್ನು ಜನರಲ್ಲಿ ಬೆಳೆಸುವಂತಹುದು.

ಈ ರೀತಿಯ ಉತ್ಪಾದನಾ ವ್ಯವಸ್ಥೆಯಿಂದ ದೂರದ ಊರುಗಳಿಗೆ ಸಾಗಿಸಲು ಹಣ ವೆಚ್ಚವಾಗುತ್ತಿರಲಿಲ್ಲ. ಕೆಲವೇ ಕೆಲವು ಶ್ರೀಮಂತ ಕಾರ್ಖಾನೆ ಮಾಲೀಕರಲ್ಲಿ ಸಂಪತ್ತು ಕೇಂದ್ರೀಕೃತವೂ ಆಗುತ್ತಿರಲಿಲ್ಲ. ಸಹಜವಾಗಿಯೇ ಸಂಪತ್ತು, ಸಂಪನ್ಮೂಲ ಹಂಚಿ ಹೋಗುತ್ತಿತ್ತು.

ಶ್ರೀನಿವಾಸ್ ಮತ್ತು ರಾಮಕೃಷ್ಣರಿಗೆ ರವೀಂದ್ರರ ದೃಷ್ಟಿಕೋನದ ಪರಿಚಯ ಆಗುತ್ತಿದ್ದಂತೆ, ಇತರ ಸಹಪ್ರಯಾಣಿಕರ ಪರಿಚಯವೂ ಆಗುವುದು ಒಳಿತು ಎನಿಸಿತು. ಆದುದರಿಂದ ಈ ಗೆಳೆಯರ ಒತ್ತಾಯದ ಮೇರೆಗೆ ಮೊತ್ತ ಮೊದಲ ಬಾರಿಗೆ ೧೯೯೨ರ ಜನವರಿಯಲ್ಲಿ ರವೀಂದ್ರ ಸೇವಾ ಗ್ರಾಮದ ಆಶ್ರಮಕ್ಕೆ ಭೇಟಿ ನೀಡಿದರು. ಆವರೆಗೂ ವಾರ್ಧಾದಿಂದ ಐದು ಗಂಟೆಗಳ ಪ್ರಯಾಣಮಾಡಿ, ಇಲ್ಲಿಗೆ ಭೇಟಿ ನೀಡಬೇಕೆಂದು ರವೀಂದ್ರರಿಗೆ ಅನಿಸಿರಲೇ ಇಲ್ಲ. ಗಾಂಧೀಜಿಯವರ ಅರ್ಥಶಾಸ್ತ್ರದ ಸಿದ್ಧಾಂತಗಳಿಗೆ ರೂಪ ಕೊಟ್ಟ, ಶಾಶ್ವತ ಅರ್ಥಶಾಸ್ತ್ರದ ಸಿದ್ಧಾಂತಕಾರ, ಗಾಂಧಿ ಶಿಷ್ಯ ಜೆ.ಸಿ.ಕುಮಾರಪ್ಪನವರ ಜನ್ಮ ಶತಾಬ್ದಿಯ ಈ ಅಂತರರಾಷ್ಟ್ರೀಯ ಸಮಾವೇಶದಲ್ಲಿ ಪಾಲ್ಗೊಳ್ಳಲು ರವೀಂದ್ರ ಇಲ್ಲಿಗೆ ಬಂದಿದ್ದರು.

ಈ ಸಮಾವೇಶದ ಕಲಾಪದ ಬಗ್ಗೆ ರವೀಂದ್ರರಿಗೆ ವಿಶೇಷ ಆಕರ್ಷಣೆಯೇನೂ ಇರಲಿಲ್ಲ. ಆದರೆ, ಗಾಂಧೀಜಿಯವರ ಮಣ್ಣು, ಮರ, ಬಿದಿರಿನ ಈ ಕುಟೀರ ಅವರನ್ನು ಸಂತೋಷಗೊಳಿಸಿತು. ಬಾಪು ಕುಟಿಯ ಜತೆ ತಕ್ಷಣವೇ ತಮ್ಮನ್ನು ಗುರುತಿಸಿಕೊಳ್ಳುವಂತೆ ಮಾಡಿತು.

ಸಿಮೆಂಟ್ ಬಳಸಿ ನಿರ್ಮಿಸಿದ ಆಧುನಿಕ ಮನೆಗಳು ಒಂದು ಸರಪಳಿ ಕ್ರಿಯೆಯನ್ನು ಪ್ರೇರೇಪಿಸಿ, ಹೆಚ್ಚು ಹೆಚ್ಚು ಭೌತಿಕ ಪದಾರ್ಥಗಳ ಸಂಗ್ರಹಣೆಗೆ ದಾರಿಮಾಡಿಕೊಡುತ್ತವೆ. ಈ ಭೌತಿಕ ವಸ್ತುಗಳನ್ನೇ ಕೂಡಿ ಹಾಕಲು ಹೆಚ್ಚು ಹೆಚ್ಚು ಹಣ ಗಳಿಸಲು ತೊಡಗುತ್ತಾನೆ ಮನುಷ್ಯ. ಈತನ ಬದುಕಿಗೆ ಆಧ್ಯಾತ್ಮದ ಆಯಾಮವೇ ಇಲ್ಲದೇ ನಿಸರ್ಗದೊಂದಿಗಿನ ಎಲ್ಲ ಸಂಬಂಧವೂ ಕಳಚಿ ಹೋಗುತ್ತದೆ. ಮನೆಯ ನಿರ್ಮಿತಿಯಿಂದ ಹಿಡಿದು, ನಾವು ಧರಿಸಿರುವ ಉಡುಪಿನವರೆಗೆ ಸಾಮಾಜಿಕ ಕ್ಷೇಮ ಎಂಬ ಪರಿಕಲ್ಪನೆಯಿಂದ ತೀರಾ ಈಚೆಗೆ ನಾವು ಸಾಗಿ ಬಂದಿರುತ್ತೇವೆ. ಈ ವ್ಯಕ್ತಿವಾದ ಪರಿಕಲ್ಪನೆ ಇದೀಗ ಹಳ್ಳಿಯನ್ನೂ ಪ್ರವೇಶಿಸಿದೆ.

ಸ್ವಯಂ ಪ್ರೇರಣೆ ಮತ್ತು ಸರಳತೆಯೇ ಶ್ರೀಮಂತ ಬದುಕಿನ ದ್ಯೋತಕ ಎಂಬುದು ರವೀಂದ್ರರಿಗೆ ಮನವರಿಕೆಯಾಗಿತ್ತು. ಇದು ನಮ್ಮಲ್ಲಿ ಎಷ್ಟು ಸಂಪನ್ಮೂಲವಿದೆ ಎಂಬುದನ್ನು ಅವಲಂಬಿಸಿಲ್ಲ. ಆದರೆ ಈ ಸಂಪನ್ಮೂಲದ ಬಹು ಆಯಾಮವುಳ್ಳ ಮತ್ತು ವೈವಿಧ್ಯಮಯ ಬಳಕೆ ಇಲ್ಲಿ ಮುಖ್ಯವಾಗುತ್ತದೆ. ಉದಾಹರಣೆಗೆ, ಒಂದೇ ಕೊಠಡಿ ಬೆಳಗ್ಗೆ ಕಚೇರಿ ಆಗುತ್ತದೆ,

ಮಧ್ಯಾಹ್ನ ಊಟದ ಮನೆಯಾಗುತ್ತದೆ, ಸಂಜೆ ಹರಟೆ ಚಾವಡಿ ಆಗುತ್ತದೆ, ರಾತ್ರಿ ಇದೇ ಮಲಗುವ ಮನೆಯೂ ಆಗುತ್ತದೆ. ಈ ರೂಮಿನಲ್ಲಿ ಪೀಠೋಪಕರಣಗಳ ಬದಲಾವಣೆ, ಅದರ ಗುಣ ವಿಶೇಷ ಮತ್ತು ಭಾವ ವಿಶೇಷವನ್ನು ಬದಲಾಯಿಸುತ್ತದೆ. ಆದರೆ, ಇದರ ಬದಲಾಗಿ ಇಂದಿನ ವ್ಯವಸ್ಥೆಯಲ್ಲಿ ಒಂದು ಕೊಠಡಿಗೆ ಅದರದೇ ಆದ ಗುಣ ವಿಶೇಷಗಳನ್ನು ಆರೋಪಿಸುವುದಕ್ಕೆ ಟನ್‌ಗಟ್ಟಲೆ ಸಿಮೆಂಟ್ ಮತ್ತು ಕಬ್ಬಿಣವನ್ನು ಬಳಸಲಾಗುತ್ತದೆ.

ಬಹಳಷ್ಟು ಜನರ ಮನಸ್ಸಿನಲ್ಲಿರುವುದಕ್ಕೆ ರವೀಂದ್ರ ಮಾತು ಕೊಡುತ್ತಿದ್ದರು. ಗುರೂಜಿಯವರೊಡನೆ ನಡೆಸುತ್ತಿದ್ದ ಸಂವಾದಗಳಿಂದಾಗಿ ವಿನೂ ಕಾಳೆ ಮತ್ತು ಉಜರಮ್ಮನಂತಹವರಿಗೆ ತಮ್ಮ ವಿಚಾರಗಳು ಇನ್ನಷ್ಟು ಸ್ಪಷ್ಟವಾದವು. ರವೀಂದ್ರ ಹೇಳುತ್ತಿದ್ದ ೧೯೬೦ರಲ್ಲಿ ಇದ್ದ ಹಳ್ಳಿಯ ಬದುಕಿನ ವಿವರಗಳು, ಸಾಂಪ್ರದಾಯಿಕ ಕೈಗಾರಿಕೆಗಳು ಬಹುತೇಕ ಜನಕ್ಕೆ ಆಧಾರವಾಗಿದ್ದವು ಎಂಬ ಇವರ ನಂಬಿಕೆಗೆ ಹೆಚ್ಚಿನ ಪುಷ್ಟಿಯನ್ನು ಕೊಡುತ್ತಿದ್ದವು. ಈ ಅಮಾನವೀಯ ದಾರಿದ್ರ್ಯ ಆಧುನಿಕ ಬೃಹತ್ ಉತ್ಪಾದಕ ಕೈಗಾರಿಕೆಗಳ ಫಲ. ಶ್ರೀನಿವಾಸ್ ಮತ್ತು ರಾಮಕೃಷ್ಣರಂತಹ ತರುಣ ಚೇತನಗಳಿಗೆ ರವೀಂದ್ರರ ಈ ಕೆಲಸ ಸ್ಫೂರ್ತಿದಾಯಕವಾಗಿತ್ತು.

ಶ್ರೀನಿವಾಸ್ ಮತ್ತು ರಾಮಕೃಷ್ಣ ಈ ಕಲಾ ಆಶ್ರಮಕ್ಕೆ ಕಾಲಿಡುವ ಸ್ವಲ್ಪ ಮುಂಚೆ, ಅದೀಲಾಬಾದ್‌ನ ಐಟಿಡಿಎ ಪ್ರಾಜೆಕ್ಟ್ ನಿಯೋಜನಾ ಅಧಿಕಾರಿ ಚಿನ್ನವೀರ ಭದ್ರು ಅವರ ಗೆಳೆತನ ಸಂಪಾದಿಸಿದರು. ಆತ ಉತ್ಸಾಹಿ ತರುಣ, ದಕ್ಷ ಅಧಿಕಾರಿ. ರವೀಂದ್ರರು ಕಲಿಸುತ್ತಿದ್ದ ಶಾಲೆ, ಐಟಿಡಿಎ ಯೋಜನೆಗೆ ಒಳಪಟ್ಟಿತ್ತು. ಚಿನ್ನವೀರ ಭದ್ರು ಅಧಿಕಾರ ವಹಿಸಿಕೊಂಡ ತಕ್ಷಣವೇ ಇಡೀ ವ್ಯವಸ್ಥೆಯನ್ನು ಅಲುಗಾಡಿಸಿ, ಐಟಿಡಿಎ ಶಾಲೆಗಳಲ್ಲಿ ಹೆಚ್ಚಿನ ಗುಣಮಟ್ಟವನ್ನು, ದಕ್ಷತೆಯನ್ನು ತಂದರು.

ಗಾಂಧಿಯವರನ್ನು ತೀವ್ರವಾಗಿ ಟೀಕಿಸುತ್ತಿದ್ದ ವಾತಾವರಣದಲ್ಲಿ ಚಿನ್ನವೀರ ಭದ್ರು ಬೆಳೆದವರು. ಅವರೂ ಇವರೊಂದಿಗೆ ದನಿ ಸೇರಿಸಿದ್ದರು. ಆದರೆ, ಅವರ ಶಾಲೆಯ ಪ್ರಾಂಶುಪಾಲರಾಗಿದ್ದವರು ಪಕ್ಕಾ ಗಾಂಧಿವಾದಿ. ಇವರ ಪ್ರಭಾವದಲ್ಲಿ ಚಿನ್ನವೀರು ಚಿಂತನೆ ನಡೆಸಿದರು. ತೆಲುಗು ಭಾಷೆಯಲ್ಲಿ ಗಾಂಧಿ ಆತ್ಮ ಚರಿತ್ರೆ ಓದಿಕೊಂಡರು. ಗಾಂಧಿ ಎತ್ತಿದ ಅಸಂಖ್ಯ ಪ್ರಶ್ನೆಗಳು ಮತ್ತು ಪರಿಕಲ್ಪನೆಗಳು ಇವರ ಮನಸ್ಸಿನಲ್ಲಿ ಗೂಡುಕಟ್ಟಿಕೊಂಡವು.

ಆತ ಎರಡನೆಯ ಉನ್ನತ ದರ್ಜೆಯ ಅಧಿಕಾರಿಯಾದಾಗ ಗಾಂಧಿಯಿಂದ ಕಲಿತ ಕೆಲವು ಮೌಲ್ಯಗಳನ್ನು, ಪರಿಕಲ್ಪನೆಗಳನ್ನು ಪ್ರಯೋಗಿಸಲು ನಿಶ್ಚಯಿಸಿದರು. ತಾವು ಕೆಲಸ ಮಾಡುತ್ತಿದ್ದ ಪ್ರದೇಶವೊಂದರಲ್ಲಿ ಆದಿವಾಸಿಗಳ ದಾರಿದ್ರ್ಯ ನಿವಾರಣೆಗೆ ಚರಕ ಬಳಸುವ ಸಾಧ್ಯತೆಯನ್ನು ಪರಿಶೀಲಿಸಿದರು. ಈ ಎಲ್ಲ ಹಂತದಲ್ಲಿ ಎದುರಿಸಲಸಾಧ್ಯವಾದ ತೊಂದರೆಗಳು ಇದಿರಾದವು. ಆದರೆ, ಖಾದಿಯ ಬಗ್ಗೆ ಗಾಂಧೀಜಿಗಿದ್ದ ಪರಿಕಲ್ಪನೆಯನ್ನು ಈತ ಆಳವಾಗಿ ಅಭ್ಯಸಿಸಿದ್ದರು.

ಹೀಗೆ ರವೀಂದ್ರ ಮತ್ತು ಚಿನ್ನರ ಭೇಟಿ ಎರಡು ಉಜ್ವಲ ಚೇತನಗಳ ಸಮಾಗಮವಾಗಿತ್ತು. ತಕ್ಷಣವೇ ಐಟಿಡಿಎ ಯೋಜನೆಯಡಿಯಲ್ಲಿ ನಡೆಯುತ್ತಿದ್ದ ಶಾಲೆಗಳಲ್ಲಿ ಚರಕಾವನ್ನು ಚಿನ್ನ ಅವರ ಜತೆಗೆ ರಾಮಕೃಷ್ಣ ಮತ್ತು ಶ್ರೀನಿವಾಸ್ ಪರಿಚಯಿಸಿದರು. ಆ ಮಕ್ಕಳು ಬೇಗನೆ ನೂಲುವುದನ್ನು ಕಲಿತರು ಮಾತ್ರವಲ್ಲ; ಸಂತಸದಿಂದ ಈ ಕೆಲಸದಲ್ಲಿ ಪಾಲ್ಗೊಳ್ಳುತ್ತಿದ್ದರು. ಪ್ರತಿ ವಿದ್ಯಾರ್ಥಿಗೆ ಪ್ರತಿದಿನ ಒಂದು ಕಿಲೋ ಹತ್ತಿಯನ್ನು ನೂಲು ತೆಗೆಯಲು ನೀಡಲಾಗುತ್ತಿತ್ತು. ತೆಗೆದ ನೂಲಿನ ಅರ್ಧಭಾಗದಲ್ಲಿ ಆ ವಿದ್ಯಾರ್ಥಿಗೆ ಎರಡು ಹೊದಿಕೆ ನೆಯ್ದು ಕೊಡಲಾಗುತ್ತಿತ್ತು. ಉಳಿದ ಅರ್ಧ, ನೇಕಾರನ ಕೂಲಿಗಾಗಿ ಮುರಿದುಕೊಳ್ಳಲಾಗುತ್ತಿತ್ತು.

ಎರಡು ತಿಂಗಳಲ್ಲಿ ೨೫ ಶಾಲೆಗಳ ಸುಮಾರು ನೂರು ವಿದ್ಯಾರ್ಥಿಗಳು ಈ ಪ್ರಯೋಗದಲ್ಲಿ ಪಾಲ್ಗೊಂಡರು. ಆದರೆ ಚಿನ್ನರಿಗೆ ವರ್ಗವಾಯಿತು. ಆಡಳಿತಶಾಹಿಯ ಅಡೆತಡೆಗಳಿಂದ ಈ ಪ್ರಯೋಗ ಕುಸಿಯಿತು. ಇದಾದ ಸ್ವಲ್ಪ ಸಮಯದಲ್ಲಿಯೇ ಶ್ರೀನಿವಾಸ್ ಕರಾವಳಿ ಆಂಧ್ರದಲ್ಲಿರುವ ತನ್ನೂರಿಗೆ ವ್ಯಾಪಾರ ವಹಿವಾಟು ನಡೆಸಲು ಹೊರಟರು. ರಾಮಕೃಷ್ಣ ಚೆನ್ನೈಗೆ ಮರಳಿ, ಕೈಮಗ್ಗದ ಕ್ಷೇತ್ರದಲ್ಲಿ ಹತ್ತಿ ನೂಲುವಿಕೆಯ ಸಮಸ್ಯೆಯ ಬಗ್ಗೆ ಅಧ್ಯಯನ ಆರಂಭಿಸಿದರು.

ಪಟ್ಟಣಗಳಿಂದ ಯುವಜನರು ಪ್ರವಾಹದ ರೀತಿಯಲ್ಲಿ ರವೀಂದ್ರರ ಬಳಿ ಬರುತ್ತಲೇ ಇದ್ದರು. ಕೆಲವರು ರವೀಂದ್ರರ ಆಕರ್ಷಣೆಗೆ ಒಳಗಾಗಿದ್ದರು. ಕೆಲವರು ಅವರ ದರ್ಶನ ವೈಶಾಲ್ಯಕ್ಕೆ ಚಕಿತರಾಗಿದ್ದರು. ಇಂತಹವರಲ್ಲಿ ಪರ್ವೇಜ್ ದಾವರ್ ಕೂಡಾ ಒಬ್ಬ. ಈತ ಐಐಎಂ ಪದವೀಧರ. ಭಾರತೀಯ ಕೈಗಾರಿಕೆಗಳ ಒಕ್ಕೂಟ ಕೊಡಮಾಡಿದ ಹಣದಿಂದ ಕೈಗೊಂಡ ಯೋಜನೆಯ ದೆಸೆಯಿಂದ ಆತ ಅದೀಲಾಬಾದ್‌ಗೆ ಬಂದಿದ್ದ. ಈ ಸರ್ಕಾರಿ ಯೋಜನೆಗಳಲ್ಲಿ ತೊಡಗಿಕೊಳ್ಳುವುದು ಒಂದು ದೊಡ್ಡ ಹೊರೆ ಎಂದು ಆತನಿಗೆ ಅನ್ನಿಸಿತು. ಆದರೆ, ಆತ ಹೆಚ್ಚು ಹೆಚ್ಚು ತೊಡಗಿಸಿಕೊಳ್ಳಬೇಕಾಗಿ ಬಂತು. ೧೯೯೫ರಲ್ಲಿ ಐಟಿಡಿಎ ಆದಿವಾಸಿ ಮಕ್ಕಳಿಗೆ ವಿಶೇಷವಾದ ಕಲಾಶಾಲೆ ಆರಂಭಿಸಿತು. ಇದರ ಪ್ರಾಂಶುಪಾಲರಾಗಿ ರವೀಂದ್ರ ಕಾರ್ಯ ನಿರ್ವಹಿಸಲೇಬೇಕಾಯಿತು. ಸ್ಥಳೀಯ ಕಲಾ ಸಾಮಗ್ರಿಗಳ ಸಂಗ್ರಹಾಲಯ ಮತ್ತು ತರಬೇತಿ ಕೇಂದ್ರಕ್ಕಾಗಿ ರವೀಂದ್ರ ಸರ್ಕಾರೀ ಹಣಕಾಸು ನೆರವು ಪಡೆದರು.

ನನಸಾಗದ ಬಯಕೆಗಳ ಬಲೆಯಲ್ಲಿ

೧೯೯೫ರ ಚಳಿಗಾಲದ ಒಂದು ಚೇತೋಹಾರಿ ದಿನ. ರವೀಂದ್ರ ಗಿರಿಜನ ಕಲಾ ಆಶ್ರಮದ ಉದ್ಘಾಟನೆಗಾಗಿ ಎಲ್ಲ ಏರ್ಪಾಡು ಮಾಡುತ್ತಿದ್ದರು. ಚಿಕ್ಕ ವಯಸ್ಸಿನಿಂದಲೂ ಕಲಾ ಆಶ್ರಮದ ಪರಿಸರದಲ್ಲೇ ಬೆಳೆದ ಲಂಬಾಣಿ ಗುಡ್ಡಗಾಡು ಜನಾಂಗದ ಯುವಕ ರವೀಂದ್ರರಿಗೆ ಸಹಾಯಕನಾಗಿದ್ದ. ಈಗ ಇವನು ಆದಿವಾಸಿ ಮಕ್ಕಳಿಗೆ ಖಾಸಗಿ ಶಾಲೆ ನಡೆಸುತ್ತಾನೆ.

ಇತರ ಮಾಮೂಲಿ ಚಿತ್ರ, ಶಿಲ್ಪಗಳಿಗಿಂತ ಭಿನ್ನವಾದ ರೀತಿಯ ಕಲಾಕೃತಿಗಳ ಪ್ರದರ್ಶನ ಅಲ್ಲಿ ಏರ್ಪಾಡಾಗಿತ್ತು. ಇವೆಲ್ಲವೂ ಅಮೂರ್ತ ಶೈಲಿಯವಾಗಿದ್ದು, ಡಾಲಿ ಅಥವಾ ಪಿಕಾಸೋನ

ಕೃತಿಗಳಿಂದ ಸ್ಫೂರ್ತವಾದಂತೆ ಅನಿಸುತ್ತಿತ್ತು. ಈ ಕೃತಿಗಳಲ್ಲಿ ನಿಮ್ಮ ಕೈಚಳಕ ಏನಾದರೂ ಇದೆಯೇ ಎಂದು ಕೇಳಿದರೆ: 'ನಾನಿದನ್ನು ಮುಟ್ಟಿ ನೋಡಿಯೂ ಇಲ್ಲ, ಎಲ್ಲ ಅವರೇ ನಿರ್ಮಿಸಿದ್ದು' ಎಂದು ರವೀಂದ್ರ ದೃಢವಾಗಿ ಉತ್ತರಿಸಿದರು. ಇದು ಮಕ್ಕಳ ಕಲೆ ಎಂಬುದಷ್ಟೇ ಅವರ ಸಂತಸಕ್ಕೆ ಕಾರಣವಾಗಿತ್ತು. ಕೆಲವು ಕೃತಿಗಳು ಶ್ರೇಷ್ಠತೆಯ ಮೊಳಕೆಗಳಾಗಿವೆ ಎಂಬ ಹೊರಗಿನವರ ನುಡಿಗಳು ಅವರ ಮೇಲೆ ಅಷ್ಟೇನೂ ಪ್ರಭಾವ ಬೀರಲಿಲ್ಲ.

ಆದರೂ ಈ ಯಶಸ್ಸು ಅವರಿಗೆ ಅಂಟಿಕೊಂಡ ವಿಷಣ್ಣತೆಯನ್ನು ಹೊಡೆದೋಡಿಸಲು ಶಕ್ಯವಾಗಲಿಲ್ಲ. ಸ್ಥಳೀಯ ಸಂಪನ್ಮೂಲಗಳನ್ನೇ ಅವಲಂಬಿಸಬೇಕು ಎಂಬ ತನ್ನ ಹಿಂದಿನ ಸಿದ್ಧಾಂತದತ್ತ ದೃಷ್ಟಿ ಹಾಯಿಸಿದರು. ಸರ್ಕಾರದೊಡನೆ ಕಲಾ ಆಶ್ರಮವೂ ತೊಡಗಿಕೊಂಡಿರುವ ಬಗೆಯನ್ನು ಗಮನಿಸಿದಾಗ ಅವರಿಗೆ ಸೋತಂತೆ ಅನಿಸಿತು. ಸರ್ಕಾರದ ಹಿಡಿತ ಹೆಚ್ಚುತ್ತಿರುವುದು ಇದರ ಮುಂದುವರಿಕೆಯಾಗಿ ಕಂಡಿತು. ಇದು ಸಾಂಸ್ಕೃತಿಕ ಸಮಷ್ಟಿ ಪ್ರಜ್ಞೆಯನ್ನು ನಾಶಮಾಡುತ್ತಿತ್ತು. ಇದಿಲ್ಲದೇ ಕಲಾ ಆಶ್ರಮದಂತಹ ಸಂಸ್ಥೆಗಳು ರವೀಂದ್ರ ಗೌರವಿಸುವ ಕಲೆ ಮತ್ತು ಕಸುಬುಗಳನ್ನು ಉಳಿಸಲು ಸಾಧ್ಯವಿಲ್ಲ. ಆತ ವಸ್ತುಸಂಗ್ರಹಾಲಯದ ಕ್ಯುರೇಟರ್ ಆಗಿರುವಷ್ಟರಮಟ್ಟಿಗೆ ರಾಜಿ ಮಾಡಿಕೊಂಡರು.

ಕಲಾ ಆಶ್ರಮ ಒಂದು ಸಶಕ್ತ ಉದಾಹರಣೆಯಾಗಲು ಸೋತಿದೆಯೇನೋ ಎಂದು ಕೆಲವೊಮ್ಮೆ ಅನಿಸುತ್ತಿತ್ತು. ಸರ್ಕಾರಿ ಅನುದಾನದಿಂದ ಕಲಾ ಕೇಂದ್ರ ಮತ್ತು ವಸ್ತು ಸಂಗ್ರಹಾಲಯವನ್ನು ರವೀಂದ್ರ ಸೌಂದರ್ಯದ ಪ್ರತೀಕವೆಂಬಂತೆ, ಅಲ್ಪ ವೆಚ್ಚದಲ್ಲಿ ವಿನ್ಯಾಸಗೊಳಿಸಿದರು. ವಾರ್ಧಾದ centre of science for villagesಗೆ ನಾಡಹೆಂಚಿನ ರೀತಿಯ ಮೇಲ್ಛಾವಣಿಯನ್ನು ಬಳಸಿದರು.

ಈ ಕೆಲಸ ಮುಗಿಸಿದ ತರುಣದಲ್ಲಿಯೇ ಕುಂಬಾರರಿಗೆ ತಮ್ಮ ಮನೆ ಕಟ್ಟಿಕೊಳ್ಳಲು ಸರ್ಕಾರದಿಂದ ಸಣ್ಣ ಮಟ್ಟದ ಅನುದಾನ ಲಭ್ಯವಾಯಿತು. ತಮ್ಮ ಮನೆಗಳನ್ನು ತಾವು ತಯಾರಿಸಿದ ಹೆಂಚುಗಳಲ್ಲಿಯೇ ನಿರ್ಮಿಸಿಕೊಳ್ಳಲು ಈ ಅನುದಾನ ಸಾಕಾಗುತ್ತಿತ್ತು. ಆದರೆ, ಇಡೀ ಸಮುದಾಯ ಆರ್.ಸಿ.ಸಿ ಮೇಲ್ಛಾವಣಿ ಹಾಕಿಕೊಂಡು, ಹೆಚ್ಚಿನ ಸಾಲ ಮಾಡಿಕೊಳ್ಳಲು ತನ್ನನ್ನು ಸಿದ್ಧಗೊಳಿಸಿಕೊಂಡಿತ್ತು. ಈ ನಿರ್ಧಾರ ರವೀಂದ್ರರಿಗೆ ಆಶ್ಚರ್ಯ, ಆದಕ್ಕಿಂತ ಹೆಚ್ಚಾಗಿ ಆಘಾತವನ್ನುಂಟುಮಾಡಿತು. ಕಲಾ ಆಶ್ರಮದ ರೀತಿಯ ಮೇಲ್ಛಾವಣಿ, ನಿರ್ಮಾಣದ ದೃಷ್ಟಿಯಿಂದ ಸುಲಭ ಮತ್ತು ಅನುಕೂಲಕರ ಎಂದು ಈ ಕುಂಬಾರರಿಗೆ ಏಕೆ ಅನ್ನಿಸಲಿಲ್ಲ?

ಜೇಡಿ ಮಣ್ಣಿನ ಈ ಹೆಂಚುಗಳನ್ನು ದೌರ್ಬಲ್ಯ ಮತ್ತು ಬಡತನದೊಂದಿಗೆ ಸಮೀಕರಿಸಲಾಗುತ್ತದೆ. ಆರ್.ಸಿ.ಸಿ ಮೇಲ್ಛಾವಣಿಯೇ ಪಕ್ಕಾ ಎನಿಸಿಕೊಳ್ಳುತ್ತದೆ. ಸಾಮಾಜಿಕ ನಿಚ್ಚಣಿಕೆಯಲ್ಲಿ ಇದು ಎತ್ತರದ ಮೆಟ್ಟಿಲು. ಕಲಾ ಆಶ್ರಮದಂತಹ, ಸ್ಥಳೀಯ ವಸ್ತುಗಳನ್ನೇ ಬಳಸಿ ನಿರ್ಮಿಸಲಾಗುವ ಮನೆಗಳು ಕಲಾಕೃತಿಗಳಂತೇ ಭಾಸವಾಗುತ್ತವೆ. ಬಹುಶಃ ಜಿಲ್ಲಾಧಿಕಾರಿಯೋ ಅಥವಾ ಡಾ.ಜೈನ್‌ರಂತಹವರೋ ಅಂತಹ ಮನೆಗಳಲ್ಲಿ ವಾಸ ಮಾಡುವವರೆಗೆ ಯಾರೂ ಇದಕ್ಕೆ ತೊಡಗುವುದಿಲ್ಲ.

ಈ ನಡುವೆ ರವೀಂದ್ರ, ಕನಸುಗಳನ್ನು, ಯೋಜನೆಗಳನ್ನು ನೇಯುತೊಡಗಿದರು. ಲೋಹದಲ್ಲಿ ಎರಕ ಹೊಯ್ಯುವ ಕೆಲಸ ಸಾಕಷ್ಟಿತ್ತು. ಅಂತ್ಯ ಸಂಸ್ಕಾರಗಳ ವಿಧಿವಿಧಾನಗಳ ಅಧ್ಯಯನ ಬಹುದಿನಗಳಿಂದ ಯೋಜಿಸಿರುವ ಇನ್ನೊಂದು ಕೆಲಸವಾಗಿತ್ತು. ಶವವನ್ನು ಸುಡಲು ಸಿದ್ಧಪಡಿಸುವ ವಿಧಾನ ರವೀಂದ್ರರ ಗಮನ ಸೆಳೆದಿತ್ತು. ಮೂರ್ತಿ, ಗ್ರಾಮ ದೇವತೆಗಳ ಶಿಲ್ಪಗಳೂ ಅಧ್ಯಯನಕ್ಕಾಗಿ ಅವರನ್ನು ಸೆಳೆಯುತ್ತಿದ್ದವು. ಇಂತಹ ಆಸಕ್ತಿಗಳು ಇಡೀ ಬದುಕನ್ನೇ ಅದಕ್ಕಾಗಿ ಬೇಡುತ್ತವೆ.

ಆದರೂ ರವೀಂದ್ರರಿಗೆ ನೆಮ್ಮದಿ ಇಲ್ಲವಾಗಿದೆ. ತಮ್ಮ ೨೦ವರ್ಷಗಳ ಪ್ರತಿಜ್ಞೆಯ ಅವಧಿಯ ಅಂಚಿನಲ್ಲಿ ಕಲಾ ಆಶ್ರಮ ಸಾಲದು ಎನಿಸುತ್ತಿದೆ. ಭಿಕ್ಷಾ ವೃತ್ತಿಯ ಎಲ್ಲ ಕಲಾವಿದರನ್ನು ಸೇರಿಸುವ ವೇಗವರ್ಧಕವಾಗಿ ಕಲಾ ಆಶ್ರಮ ಕೆಲಸ ಮಾಡಬೇಕು ಎನಿಸುತ್ತದೆ. ಅವರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿ, ತಮ್ಮ ಸಮುದಾಯಕ್ಕೆ ವಿಶೇಷ ಸ್ಥಾನ ಕಲ್ಪಿಸಬೇಕು. ಕಲಾವಿದರಿಗೆ ನೆರವು ಕೊಡುವ ಮೂಲಕ ಇದು ಸಾಧ್ಯವೇ ವಿನಾ ಅವರ ಮುಖಂಡನಾಗುವ ಮೂಲಕ ಅಲ್ಲ ಎಂಬುದು ರವೀಂದ್ರರಿಗೆ ಖಚಿತವಾಗಿದೆ.

ಈ ಭಾವನೆಗಳು ವಿನೂ ಕಾಳೆಯಂತಹ ಗೆಳೆಯರಲ್ಲೂ ಪ್ರತಿಧ್ವನಿಸಿದೆ. ಆದುದರಿಂದ ಅವರು ೧೯೯೭ರಲ್ಲಿ ಸ್ವನಿರ್ಮಿತ ಬಂಧೀಖಾನೆಯಿಂದ ಹೊರಬಂದು, ಅಖಿಲ ಭಾರತ ಕುಶಲ ಕರ್ಮಿಗಳ ಸಮಾವೇಶ, 'ಮಂಥನ್'ಗೆ ಹಾಜರಾದರು. 'ಕುಶಲ ಕರ್ಮಿಗಳ ಪಂಚಾಯತ್' ನಿರ್ಮಿಸುವುದರ ಪೂರ್ವಭಾವಿಯಾಗಿ, ಈ ಮಂಥನ್ ಆಯೋಜಿತವಾಗಿತ್ತು. ಇದು ವಿನೂ, ರವೀಂದ್ರ, ಉಜರಮ್ಮ ಮತ್ತು ಇತರ ಅನೇಕ ಗೆಳೆಯರ ಬಹುದಿನದ ಬಯಕೆಯಾಗಿತ್ತು. ಈ ಸಮಾವೇಶದ ಮೂಲಕ ಕಲಾವಿದರಿಗೆ ಬೆಂಬಲ ನೀಡುವುದು ಅವರ ಉದ್ದೇಶವಾಗಿತ್ತು. ಕಲಾವಿದರಿಗೆ ತಮ್ಮ ಆಶೋತ್ತರಗಳನ್ನು ಈಡೇರಿಸಿಕೊಳ್ಳಲು ಈ ಪಂಚಾಯತ್ ವೇದಿಕೆಯಾಗಬೇಕು ಎಂದು ಅವರು ಬಯಸಿದ್ದರು.

೨೦ ರಾಜ್ಯಗಳಲ್ಲಿನ ೨೫೦ಕ್ಕೂ ಹೆಚ್ಚು ಮಂದಿ ಕುಶಲಕರ್ಮಿಗಳು ಇದರಲ್ಲಿ ಭಾಗವಹಿಸಿದ್ದರು. ಇವರಲ್ಲಿ, ಕೇರಳದ ಹಡಗು ನಿರ್ಮಾಣಕಾರರಿದ್ದರು, ಕಬ್ಬಿಣ ಕಾಯಿಸಿ, ವಿವಿಧ ವಿನ್ಯಾಸ ಮಾಡುವ ಜಾರ್ಖಂಡಿನ ಕಸುಬುದಾರರಿದ್ದರು. ಮಣಿಪುರ, ಅಸ್ಸಾಂ, ಗುಜರಾತ್ ಹೀಗೆ ಅನೇಕ ಕಡೆಯಿಂದ ಕಲಾವಿದರು, ಕುಶಲ ಕರ್ಮಿಗಳು ಬಂದಿದ್ದರು. ಈ ಕಲಾವಿದರು ತಮ್ಮ ಕೌಶಲ ಕುರಿತಂತೆ ಹೆಚ್ಚು ಆತ್ಮವಿಶ್ವಾಸವುಳ್ಳವರೂ ಮತ್ತು ೨೧ನೆಯ ಶತಮಾನದ ಸಂದರ್ಭದಲ್ಲಿ ತಮ್ಮನ್ನು ಗುರುತಿಸಿಕೊಳ್ಳುವ ಛಾತಿಯುಳ್ಳವರೂ ಆಗಿದ್ದರು. ಈ ಕಲಾವಿದರಿಗೆ ಬೆಂಬಲ ನೀಡಲು ಯೋಜನಾ ಆಯೋಗದ ಉಪಾಧ್ಯಕ್ಷ ಮಧು ದಂಡವತೆ, ಖಾದಿ ಮತ್ತು ಗ್ರಾಮೋದ್ಯೋಗ ಕಮಿಷನ್‌ನ ಅಧ್ಯಕ್ಷ ಸುರೇಂದ್ರ ಮೋಹನ್ ಮತ್ತು ಇತರ ಅನೇಕ ತಜ್ಞರು ಇದ್ದರು.

ಈ ರೀತಿಯ ಪ್ರಯತ್ನಗಳಲ್ಲಿ ಭಾಗವಹಿಸುತ್ತಿರುವಂತೆಯೇ ಇವುಗಳ ಮಿತಿಗಳೂ ರವೀಂದ್ರರಿಗೆ ತಿಳಿದಿವೆ. ಅವರ ವ್ಯಕ್ತಿತ್ವದ ಒಂದು ಭಾಗ ಈಗಲೂ ಬಹಳ ಶಕ್ತಿಶಾಲಿ ಕಾಲನೊಂದಿಗಿನ ಹೋರಾಟದಲ್ಲಿಯೇ ಸಿಲುಕಿದೆ. ಕಾಲ ಪ್ರವಾಹವನ್ನು ತಡೆಯುವ ಒಂದು ಆಳದ ತುಡಿತವೂ ಇದೆ. ಬಹುಶಃ ಈ ಕಾರಣದಿಂದಲೇ ಆತ ಕೆಲವೊಮ್ಮೆ ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದರು. ಇದು ಎರಡು ನಾಗರಿಕತೆಗಳ ನಡುವಣ ಸಂಕ್ರಮಣದ ಕಾಲ. ಹಳತು ಎಂಬುದು ಸತ್ತಿದೆ. ಅದರ ಜಾಗದಲ್ಲಿ ಹೊಸತು ಬಂದಿಲ್ಲ. ಈ ಹಂತದಲ್ಲಿ ಹಳೆಯದರ ಸೌಂದರ್ಯ ದೃಷ್ಟಿಯನ್ನು ಕಾಪಾಡಿಕೊಂಡರೆ, ಹೊಸದನ್ನು ಕಟ್ಟಲು ಸಾಧ್ಯವಾಗಬಹುದು.

ಹೀಗಾಗಿ ರವೀಂದ್ರ, ಈ ಸಂಕ್ರಮಣ ಕಾಲದಲ್ಲಿ ತಮ್ಮ ನೆಲೆಯನ್ನು ಕಂಡುಕೊಂಡಿದ್ದಾರೆ. ಅವರು ಬುಡುಬುಡಿಕೆ ಅಥವಾ ಕೋಲೆಬಸವದಂಥ ಗುಂಪನ್ನು ಪುನಃ ಎದುರು ತರಲು ಕಾಲಚಕ್ರವನ್ನು ಹಿಂದಕ್ಕೆ ತಿರುಗಿಸುತ್ತಿಲ್ಲ. ಅವು ಕಾಲ ಪ್ರವಾಹದಲ್ಲಿ ಹಿಂದಿರುಗಿ ಬರಲಾರದಷ್ಟು ದೂರ ಹೊರಟು ಹೋಗಿವೆ. ಇವುಗಳ ಗೈರುಹಾಜರಿಯ ಮೌನವನ್ನು, ಟೇಪ್ ಮಾಡಿಕೊಂಡೋ, ಉಪಗ್ರಹದ ಮೂಲಕ ಪ್ರಸಾರ ಮಾಡಿ, ಟಿ.ವಿ ಪರದೆಯ ಮೇಲೆ ನೋಡಿಯೇ ಮರೆಯಬಹುದಾದರೂ ಅದು ಅವುಗಳ ನೈಜತೆಗೆ ಪರ್ಯಾಯವಾಗಲಾರದು. 'ಹೊಸ ಸೃಜಶೀಲ ಶಕ್ತಿಗಳು ಹೊರಹೊಮ್ಮಲಿವೆ, ಕತ್ತಲು ಬೆಳಕುಗಳ ಈ ನಿರಂತರ ಆಟ, ಪ್ರತಿ ಹಳ್ಳಿ, ಪ್ರತಿ ಪಟ್ಟಣದಲ್ಲಿ ಹೊಸ ಅಭಿವ್ಯಕ್ತಿಯನ್ನು ಪಡೆಯಲಿವೆ' ಎಂಬ ತಮ್ಮ ನಂಬಿಕೆಯ ಆಧಾರದ ಮೇಲೆ ರವೀಂದ್ರ, ಜೀವಿಸುತ್ತಿದ್ದಾರೆ. ಅವರ ಬದುಕಿಗಿಂತ ನಂಬಿಕೆ ದೊಡ್ಡದಾದರೆ.... ಈ ಮೌನದ ಬೆಳಗು ಹೊಸ ನಾದದಿಂದ ತುಂಬಿಕೊಳ್ಳಬಹುದು.

'ನಮ್ಮಲ್ಲಿ ಸಾಕಷ್ಟು ಮಂದಿ, ನಾಗರಿಕತೆಯ ಪ್ರಯಾಣದಲ್ಲಿ ನಮ್ಮ ನಮ್ಮ ಪಾತ್ರ ಅರಿತುಕೊಂಡಲ್ಲಿ ಇದು ಸಾಧ್ಯವಾದೀತು. ಆ ಜವಾಬ್ದಾರಿಯನ್ನು ಒಪ್ಪಿಕೊಳ್ಳುತ್ತಾ ನಾವೀಗ ಈ ಹಾದಿಯಲ್ಲಿ ತೊಡಗಬಹುದು' ಎಂದು ರವೀಂದ್ರ ಸಲಹೆ ನೀಡುತ್ತಾರೆ. ಮಾಮೂಲಿನಂತೆ, ಒಂದು ಕತೆಯ ಮೂಲಕ ಇದನ್ನು ವಿವರಿಸುತ್ತಾರೆ,

ಒಮ್ಮೆ ತನ್ನ ಕಾಲುಗಳಲ್ಲಿ ಹಾವನ್ನು ಹಿಡಿದುಕೊಂಡು ಒಂದು ಹದ್ದು ಹಾರಾಡುತ್ತಿತ್ತು. ಈ ಹದ್ದಿನ ಪಂಜಾದಲ್ಲಿ ಸಾವು-ಬದುಕಿನ ನಡುವೆ ಹೆಣಗುತ್ತಿದ್ದ ಹಾವು ವಿಷವನ್ನು ಕಕ್ಕಿತು. ಈ ವಿಷ ಗೋವಳಿಗನ ತಲೆಯ ಮೇಲಿದ್ದ ಹಾಲಿನ ಮಡಕೆಗೆ ಬಿದ್ದಿತು. ಆಕೆ ಅದನ್ನು ಗ್ರಾಮದ ಮುಖಂಡನಿಗೆ ನೀಡಿದಳು. ಆತನ ಪತ್ನಿ ಈ ಹಾಲು ಬಳಸಿಕೊಂಡು, ಸ್ವಾದಿಷ್ಟವಾದ ಕೀರು ತಯಾರಿಸಿದಳು. ಈ ಕೀರನ್ನು ಗ್ರಾಮದ ಮುಖಂಡರಿಗೂ, ಬಹಳಷ್ಟು ಮಂದಿ ಅತಿಥಿಗಳಿಗೂ ಉಣಬಡಿಸಿದಳು. ಅವರೆಲ್ಲರೂ ಸತ್ತರು. ಅವರನ್ನು ಹೊತ್ತೊಯ್ಯಲು ಬಂದ ಯಮದೂತ, ಪೇಚಿಗೆ ಸಿಕ್ಕಿದ. ಈ ಸಾವುಗಳ ಜವಾಬ್ದಾರಿಯನ್ನು ಯಾರ ತಲೆಗೆ ಕಟ್ಟಬೇಕು? ತನ್ನ ಯಜಮಾನ, ಸಾವಿನ ದೇವತೆಯಾಗಿರುವ ಯಮರಾಜನ ಬಳಿ ಹೋದ. ಯಾರ ಲೆಕ್ಕಕ್ಕೆ

ಈ ಸಾವುಗಳನ್ನು ಜಮಾ ಮಾಡೋಣ? ಎಂದು ಕೇಳಿದ. ಪದ್ದು, ಹಾವು, ಗೋವಳಿಗ, ಅವನ ಹೆಂಡತಿ, ಗ್ರಾಮದ ಮುಖಂಡ, ಆತನ ಪತ್ನಿ ಅಥವಾ ಇಡೀ ಹಳ್ಳಿಯ ಮಂದಿ...ಇವರಲ್ಲಿ ಯಾರು ಹೊಣೆಗಾರರು? ಆ ಸಾವಿಗೆ ಎಲ್ಲರೂ ಜವಾಬ್ದಾರರು ಎಂಬುದು ಯಮರಾಜನ ತೀರ್ಪಾಗಿತ್ತು.

ಇಂದು ಕುಶಲಕರ್ಮಿಗಳು ಮತ್ತು ಕಲಾಕಾರರು ಸಾಯುತ್ತಿದ್ದಾರೆ. ಈ ಸಾವಿಗೆ ಕಾರಣ ಯಾರು? ನಾವು? ನೀವು? ಆರ್ಥಿಕ ವ್ಯವಸ್ಥೆ? ಇಂದಿನ ಮೌಲ್ಯಗಳು? ಅಥವಾ ಈ ಎಲ್ಲವೂ? ಇದರ ಬಗ್ಗೆ ಯೋಚಿಸಿ ಹೇಳಿ. ನನಗೆ ಉತ್ತರ ಬೇಕಾಗಿದೆ.

ಕಹೇಲ್‌ಗಾಂವ್

ಗಂಗೆಯ ಮುಕ್ತಿಗೆ ಭಗೀರಥ ಪ್ರಯತ್ನ...!

ಭಾಗಲ್ಪುರದ ರೈಲ್ವೆ ನಿಲ್ದಾಣ ಪ್ರಯಾಣಿಕರಿಂದ ತುಂಬಿ ತುಳುಕುತ್ತಿತ್ತು. ಪ್ಲಾಟ್‌ಫಾರ್ಮ್‌ನಲ್ಲಿ ಕುಳಿತವರು ಮತ್ತು ಅಲ್ಲಲ್ಲಿಯೇ ಮಲಗಿದ್ದವರನ್ನು ದಾಟಿಕೊಂಡು ಟಿಕೆಟ್ ಚೆಕ್ಕಿಂಗ್ ಆಫೀಸ್‌ಗೆ ಹೋದೆ. ಪಟ್ನಾಗೆ ಹೋಗುವ ಯಾವುದೇ ರೈಲಿನಲ್ಲಿ ಸೀಟು ಕಾದಿರಿಸುವ ಮುನ್ನ ವಿನಂತಿ ಮಾಡಿಕೊಳ್ಳುವುದು ಅರ್ಥವಿಲ್ಲದ್ದು ಎಂದು ಅವರು ತಿಳಿಸಿದರು. ಈ ಗದ್ದಲದಲ್ಲಿ ನಾನು ರೈಲು ಹತ್ತಲು ಸಾಧ್ಯವಿಲ್ಲ ಎನ್ನುವುದರಲ್ಲಿ ಯಾವುದೇ ಅನುಮಾನವಿರಲಿಲ್ಲ. ಹಿಂದೆಂದೂ ನಡೆಯದ ಅಶ್ವಮೇಧ ಯಾಗ ಮಾರನೆಯ ದಿವಸ ಪಟ್ನಾದಲ್ಲಿ ನಡೆಯುವುದಿತ್ತು. ಈ ಕಾರಣಕ್ಕಾಗಿ ಬೇರೆ ಬೇರೆ ಕಡೆಗಳಿಂದ ಸಾವಿರಾರು ಜನ ರಾಜಧಾನಿಗೆ ಬರುತ್ತಿದ್ದರು.

ಒಂದು ಗಂಟೆಯ ನಂತರ ಸ್ನೇಹಿತರಿಬ್ಬರು ನನ್ನನ್ನು ಈ ಗುಂಪಿನ ನಡುವಿನಿಂದ ರೈಲಿಗೆ ನೂಕಿದರು. ರೈಲು ಡಬ್ಬಿ ಅದರ ಸಾಮರ್ಥ್ಯಕ್ಕಿಂತ ದುಪ್ಪಟ್ಟು ಜನರಿಂದ ತುಂಬಿಹೋಗಿತ್ತು. ರೈಲು ಚಲಿಸತೊಡಗಿದಾಗ ಭಾಗಲ್ಪುರದಲ್ಲಿ ಹತ್ತಿದ ಜನ ಅಲ್ಲಲ್ಲಿಯೇ ಕುಳಿತರು. ರೈಲು ಇನ್ನು ಒಂದೆರಡು ಸ್ಟೇಷನ್ ಮುಂದೆ ದಾಟಿದಾಗ ಅದು ಯಾವ ಪ್ರಮಾಣದಲ್ಲಿ ಭರ್ತಿಯಾಯಿತೆಂದರೆ ಎಲ್ಲರೂ ನಿಂತೇ ಪಯಣಿಸಬೇಕಾಯಿತು. ಇಲ್ಲಿ ಕೆಲವರಾದರೂ ಉಸಿರುಕಟ್ಟಿ ಸತ್ತಾರು ಎನಿಸಿತು. ನನ್ನ ಪಕ್ಕದ ಕೆಳಬರ್ತ್‌ನಲ್ಲಿ ಮಲಗಿದ್ದ ಮುದುಕಿ ಯಾವುದೇ ಕ್ಷಣದಲ್ಲಿ ಸಾಯಬಹುದು ಎಂಬ ಅನುಮಾನ ಬಂತು.

ಜನ ಯಾಕೆ ಹೀಗೆ ಕಷ್ಟಪಡುತ್ತಾರೆ? ಪಟ್ನಾ ಅಶ್ವಮೇಧ ಯಾಗಕ್ಕೆ ಹೋಗುವುದು ಅಷ್ಟೊಂದು ಮುಖ್ಯವೇ? ಬೇರೆ ಪ್ರಯಾಣಿಕರಿಗೂ ನನ್ನ ಬಗ್ಗೆ ಹೀಗೆ ಅನ್ನಿಸುತ್ತಿರಬಹುದೆ? ಮುಂಬೈನ ಈ ಹೆಣ್ಣು ಒಂಟಿಯಾಗಿ ಈ ಪರಿಸ್ಥಿತಿಯಲ್ಲಿ ಬಿಹಾರಕ್ಕೆ ಪ್ರಯಾಣಿಸುತ್ತಿದ್ದಾಳಲ್ಲ ಎನ್ನಿಸುತ್ತಿರಬಹುದೆ?

ನಾನು ಕಹೇಲ್‌ಗಾಂವ್‌ನಲ್ಲಿ ಗಂಗಾ ಮುಕ್ತಿ ಚಳುವಳಿಯ ವಾರ್ಷಿಕ ಸಮಾರಂಭದಲ್ಲಿ ಭಾಗವಹಿಸಿ ಮರಳುತ್ತಿದ್ದೆ. ಲಕ್ಷಾಂತರ ಮಂದಿಯನ್ನು ಅಶ್ವಮೇಧದತ್ತ ಸೆಳೆಯುವ ಶಕ್ತಿಯ,

ಮಿತವ ಸಣ್ಣ ಪಾಲನ್ನು ಈ ಆಂದೋಲನ ಬಳಸಿಕೊಳ್ಳಲಾಗಲಿಲ್ಲವಲ್ಲ ಎಂಬುದು ಆಶ್ಚರ್ಯದ ಸಂಗತಿಯಾಗಿತ್ತು.

ಗಂಗೆಯ ತೆಕ್ಕೆಯಲ್ಲಿ

ಗಂಗಾನದಿ ಬಿಹಾರದ ಪ್ರಸ್ಥಭೂಮಿಯಲ್ಲಿ ಹಾದುಹೋಗುವಾಗ 'ಕಹೇಲ್‌ಗಾಂವ್' ಗ್ರಾಮದ ಬಳಿ ಎರಡು ಗುಡ್ಡಗಳನ್ನು ಎದುರುಗೊಳ್ಳುತ್ತದೆ. ಈ ಭಾಗದಲ್ಲಿ ನದಿ ಈ ಎರಡು ದ್ವಾರಪಾಲಕರನ್ನು ಪ್ರೀತಿಯಿಂದ ಸವರಿದಂತೆ ಮಾಡಿ ಸಾಗರದತ್ತ ಪೂರ್ವಾಭಿಮುಖವಾಗಿ ಚಲಿಸುತ್ತದೆ. ಇಲ್ಲಿಯ ಮೀನುಗಾರರು ಎರಡು ಗುಡ್ಡಗಳಲ್ಲಿ ಒಂದು ಗುಡ್ಡಕ್ಕೆ ಗಿರಿಜನ ಬಿಲ್ಲುಗಾರ ಪುರಾಣಪುರುಷ ಏಕಲವ್ಯನ ಹೆಸರಿಟ್ಟಿದ್ದಾರೆ. ಪ್ರತಿ ವರ್ಷ ಏಪ್ರಿಲ್ ೨೨ರಂದು ಬೆಳಗ್ಗೆ ಕಾಗ್ಜಿ–ಟೋಲಾ ಬಳಿ ಈ ಎಲ್ಲ ಮೀನುಗಾರರೂ ಸೇರುತ್ತಾರೆ. ಎರಡೂ ಬೆಟ್ಟಗಳ ಸುತ್ತ ಅತ್ಯಂತ ಗೌರವ, ಭಕ್ತಿಗಳಿಂದ ಪ್ರದಕ್ಷಿಣೆಯ ರೀತಿಯಲ್ಲಿ ದೋಣಿಯನ್ನು ನಡೆಸಿಕೊಂಡು ಹೋಗುತ್ತಾರೆ. ೧೯೮೩ರಿಂದೀಚೆಗೆ ಗಂಗಾ ಮುಕ್ತಿ ಚಳುವಳಿಯ ವಾರ್ಷಿಕೋತ್ಸವವನ್ನು ಈ ರೀತಿ ದೋಣಿ ಜಾಥಾದ ಮೂಲಕ ಆಚರಿಸಲಾಗುತ್ತದೆ.

ಕೆಲವು ವೇಳೆ ಗಾಳಿ ಜೋರಾಗಿ ಬೀಸುವಾಗ ಎಲ್ಲ ದೋಣಿಗಳನ್ನೂ ಒಂದಕ್ಕೊಂದು ಕಟ್ಟಿ ಒಂದೇ ಸಾಲಿನಲ್ಲಿ ಹೋಗುವಂತೆ ಮಾಡಲಾಗುತ್ತದೆ. ಈ ಸಣ್ಣ ದೋಣಿಗಳಲ್ಲಿ ಕುಳಿತು ಸಾಗುವ ಹೆಣ್ಣು–ಗಂಡುಗಳು ಹಾಡತೊಡಗುತ್ತಾರೆ. ಆ ಹಾಡು ಮಧುರ ತರಂಗಗಳನ್ನು ಎಬ್ಬಿಸುತ್ತಾ ಹರಿಯುವ ಗಂಗೆಯಲ್ಲಿ ಲೀನವಾದಂತೆ ಭಾಸವಾಗುತ್ತದೆ.

ಸೂರ್ಯಾಸ್ತವಾದ ನಂತರ ಹೊಂಬಣ್ಣದ ಕಾಗದ ದೋಣಿಯನ್ನು ಹಿಡಿದು ಕೆಲವು ಹೆಂಗಸರು ದಡದ ಬಳಿ ಸೇರುತ್ತಾರೆ. ಪ್ರತಿ ದೋಣಿಯಲ್ಲಿಯೂ ಒಂದು ಹಣತೆ ಅಥವಾ ದೀಪ ಬೆಳಗಿಸಿ ಇಡುತ್ತಾರೆ. ಅದನ್ನು ಭಕ್ತಿಪೂರ್ವಕವಾಗಿ ನದಿಯಲ್ಲಿ ತೇಲಿ ಬಿಡುತ್ತಾರೆ. ನಕ್ಷತ್ರದಂತೆ ಹೊಳೆಯುವ ಈ ದೀಪಗಳು ನಯನ ಮನೋಹರವಾಗಿರುತ್ತವೆ.

ಭಾರತ ಉಪಖಂಡದ–ಉತ್ತರದ ಸಮತಟ್ಟಾದ ನೆಲದಲ್ಲಿ ಹರಿಯುವ ಗಂಗಾ ನದಿಯನ್ನು ತಲೆಮಾರುಗಳಿಂದ ಇದೇ ರೀತಿ ದೀಪ, ಹೂವುಗಳಿಂದ ಪೂಜಿಸಿಕೊಂಡು ಬರಲಾಗಿದೆ. ತಾಯಿಯಂತೆ ಉದಾರಿಯಾಗಿರುವ, ಎಲ್ಲರ ಯೋಗಕ್ಷೇಮ ನೋಡಿಕೊಳ್ಳುವ ಗಂಗೆ ಲಕ್ಷಾಂತರ ಜನರ ಪಾಪವನ್ನು ಜೀರ್ಣಿಸಿಕೊಳ್ಳುತ್ತಾಳೆ.

ಆದರೆ ೨೦ನೆಯ ಶತಮಾನದ ಕೊನೆಯ ವೇಳೆಗೆ ಗಂಗೆಯ ಮಕ್ಕಳಾದ ಕಾಗ್ಜಿ–ಟೋಲಾದ ಈ ಬೆಸ್ತರು ಕಹೇಲ್‌ಗಾಂವ್‌ನಲ್ಲಿ ಗಂಗಾಮುಕ್ತಿ ಚಳುವಳಿಗಾಗಿ ಕೆಲಸ ಮಾಡಬೇಕಾಗಿ ಬಂತು. ಇದು ಇಲ್ಲಿಯ ಜನರ ಮತ್ತು ನದಿ–ಈ ಎರಡರ ಬಿಡುಗಡೆಗೂ ನಡೆಸಿದ ಹೋರಾಟವಾಗಿತ್ತು. ಸುಮಾರು ೫ ಸಾವಿರ ವರ್ಷಗಳಿಂದ ಕೋಟ್ಯಂತರ ಜನ ತಮ್ಮ ಪಾಪ ತೊಳೆದುಕೊಳ್ಳಲು, ಪುನರ್ಜನ್ಮದಿಂದ ಮುಕ್ತಿ ಹೊಂದಲು ಇಲ್ಲಿ ಸ್ನಾನ ಮಾಡಿದ್ದಾರೆ. ಅಂದರೆ ಗಂಗೆಯ ಮುಕ್ತಿಗೆ ಹೋರಾಡಬೇಕಾದ ಅಗತ್ಯವಾದರೂ ಏನಿದೆ?

ಕಹೇಲ್‌ಗಾಂವ್ ಭಾಗಲ್ಪುರದಿಂದ ಸುಮಾರು ೨೦ ಕಿಲೋಮೀಟರ್ ದೂರದಲ್ಲಿದೆ. ಎಲ್ಲಿಯೋ ಪತ್ತಿರದಲ್ಲಿ ಕಡಿದಾದ ಬೆಟ್ಟವೊಂದು ಈ ಸಮತಟ್ಟಾದ ಬಯಲಿಗೆ ತಗುಲಿಕೊಂಡಿದೆ. ಶತಶತಮಾನಗಳಿಂದ ಇದನ್ನು ಮಂದ್ರಾಚಲ ಎಂದು ಕರೆಯಲಾಗುತ್ತಿದೆ. ಇದೇ ಬೆಟ್ಟವನ್ನು ಮಂತು ಮಾಡಿಕೊಂಡು ಸುರರು–ಅಸುರರು ಅಮೃತಕ್ಕಾಗಿ ಸಮುದ್ರ ಮಥನ ಮಾಡಿದರು ಎಂದು ಹೇಳಲಾಗುತ್ತದೆ. ಈ ಬೆಟ್ಟ ಬಹು ಹಿಂದೆ ಮಾರುಕಟ್ಟೆ ಸ್ಥಳವಾಗಿದ್ದಿರಲು ಸಾಕು. ಅಲ್ಲಿಯೇ ಆರ್ಯರು ಮತ್ತು ಆರ್ಯೇತರರ ಮಧ್ಯೆ ಪರಸ್ಪರ ಸಂಘರ್ಷ ನಡೆದಿದ್ದು, ನಂತರ ಇಬ್ಬರೂ ಒಂದಾಗಿದ್ದರೆಂದು ಇತಿಹಾಸಕಾರರು ಹೇಳುತ್ತಾರೆ.

ಪುರಾಣಕಾಲದಲ್ಲಿ ಈ ಪ್ರದೇಶವನ್ನು ಅಂಗದೇಶ ಎಂದು ಕರೆಯಲಾಗುತ್ತಿತ್ತು. ಈ ರಾಜ್ಯವನ್ನೇ ದುರ್ಯೋಧನ ತನ್ನ ಗೆಳೆಯ ಕರ್ಣನಿಗೆ ನೀಡಿ ಪಟ್ಟಾಭಿಷೇಕ ಮಾಡಿದ್ದ. ಗೌತಮ ಬುದ್ಧನ ಕಾಲದಲ್ಲಿ ಈ ಪ್ರದೇಶವನ್ನು ಚಂಪಾ ಎಂದು ಕರೆಯಲಾಗುತ್ತಿತ್ತು. ಬಹಳ ಪ್ರಸಿದ್ಧವಾದ ಬೌದ್ಧರ ಕಾಲದ ವಿಕ್ರಮಶಿಲಾ ವಿಶ್ವವಿದ್ಯಾಲಯ ಭಾಗಲ್ಪುರದ ಕೆಳಗೆ ಇದೆ. ಇಲ್ಲಿನ ಜನ ಉತ್ತಮ ನಾವಿಕರೂ ಆಗಿದ್ದು, ಜಾವಾ ಮತ್ತು ಸುಮಾತ್ರ ದ್ವೀಪಗಳವರೆಗೂ ಪ್ರಯಾಣ ಮಾಡಿದ್ದಿರಬೇಕೆಂದು ತಿಳಿದು ಬರುತ್ತದೆ. ಆಗಲೂ ಗಂಗಾನದಿ ಈ ಭಾಗದಲ್ಲಿ ಸಾಕಷ್ಟು ವಿಸ್ತಾರವಾಗಿಯೇ ಪ್ರವಹಿಸಿ ಭಾಗಲ್ಪುರವನ್ನು ಒಂದು ದೊಡ್ಡ ಬಂದರನ್ನಾಗಿಯೂ, ವ್ಯಾಪಾರ ಸ್ಥಳವನ್ನಾಗಿಯೂ ಮಾಡಿತ್ತು ಎನಿಸುತ್ತದೆ. ಇಲ್ಲಿಯ ಜನರ ದಟ್ಟ ದಾರಿದ್ರ್ಯ ಬದುಕು ಬಹುಶಃ ಮೊಗಲರ ಕಾಲದಿಂದಲೂ ಇತ್ತೇನೋ ಎನಿಸುತ್ತದೆ. ಆಗ ಜಲ್‌ಕರ್ ಜಮೀನ್ದಾರಿ ಪದ್ಧತಿ ಜಾರಿಯಲ್ಲಿತ್ತು. ಈ ಪದ್ಧತಿಯ ಪ್ರಕಾರ ಒಬ್ಬೊಬ್ಬ ಶ್ರೀಮಂತ ಜಮೀನ್ದಾರರು ಈ ನದಿಯ ನಿರ್ದಿಷ್ಟ ಭಾಗಗಳ ಮೇಲೆ ಒಡೆತನ ಹೊಂದಿರುತ್ತಿದ್ದರು. ಮೀನುಗಾರರಿಂದ ಸುಂಕ ವಸೂಲಿ ಮಾಡಲು ಇವರು ಬಾಧ್ಯಸ್ಥರೂ ಆಗಿರುತ್ತಿದ್ದರು. ೧೯೩೦ರ ವೇಳೆಗೆ ಬ್ರಿಟಿಷರು ಔಪಚಾರಿಕವಾಗಿ, ವಿಧಿವತ್ತಾಗಿ ತಮ್ಮ ಅಧಿಕಾರವನ್ನು ಸ್ಥಾಪಿಸಿದರು. ಇಲ್ಲಿನ ಸಂತಾಲ ಗಿರಿಜನರು ಈ ಹೊಸ 'ರಾಜ'ರ ವಿರುದ್ಧ ಬಂಡೆದ್ದಿದ್ದೂ ಉಂಟು. ಈ ಬಂಡಾಯದ ನಾಯಕ ತಿಲಕಾ ಮಾಂಝಿಯನ್ನು ಬ್ರಿಟಿಷರು ಗಲ್ಲಿಗೇರಿಸಿದ್ದರು. ಈತನ ಪ್ರತಿಮೆಯನ್ನು ಭಾಗಲ್ಪುರದಲ್ಲಿ ಪ್ರತಿಷ್ಠಾಪಿಸಲಾಗಿದೆ ಮತ್ತು ಅಲ್ಲಿಯ ವಿಶ್ವವಿದ್ಯಾಲಯಕ್ಕೆ ಈತನ ಹೆಸರನ್ನೇ ಇಡಲಾಗಿದೆ.

೨೦ನೆಯ ಶತಮಾನದ ಆರಂಭದಲ್ಲಿ ಈ ಭಾಗಲ್ಪುರ ಐದು ಸಂಸ್ಕೃತಿಗಳ ಸಂಗಮ ಸ್ಥಳವಾಗಿತ್ತು. ಮಿಥಿಲಾ, ಬಾಂಗ್ಲಾ, ಇಸ್ಲಾಮಿಕ್, ಆದಿವಾಸಿ ಮತ್ತು ಮಾರವಾಡಿ–ಇವೇ ಆ ಐದು ಸಂಸ್ಕೃತಿಗಳು. ಆಗ ಇದು ಬಹಳ ಮುಖ್ಯವಾದ ಸಾಂಸ್ಕೃತಿಕ, ಬೌದ್ಧಿಕ ಮತ್ತು ವಾಣಿಜ್ಯ ಕೇಂದ್ರವಾಗಿತ್ತು. ಈಗಲೂ ಉಳಿದಿರುವ ರೇಷ್ಮೆ ನೇಕಾರರ ಗೃಹ ಕೈಗಾರಿಕೆ ಆಗ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಭಾಗಲ್ಪುರದ ಕಿರಿದಾದ ಓಣಿಯ ಇಕ್ಕೆಲಗಳಲ್ಲಿಯೂ ಕಾಣಬರುವ ಮುರುಕು ಮನೆಗಳ ವೈವಿಧ್ಯಮಯವಾದ ವಾಸ್ತುವಿನ್ಯಾಸ ಅಳಿದುಳಿದ ಸಾಂಸ್ಕೃತಿಕ ವೈಭವದ ಕುರುಹುಗಳಾಗಿವೆ.

ಈಚಿನ ದಿವಸಗಳಲ್ಲಿ ಭಾಗಲ್ಪುರ ಅತ್ಯಂತ ಕ್ರೂರ ದೌರ್ಜನ್ಯಕ್ಕೆ ಮತ್ತೊಂದು ಹೆಸರಾಗಿದೆ.

೧೯೮೧ರಲ್ಲಿ ಪೊಲೀಸರು ಭಾಗಲ್ಪುರದ ವಿಚಾರಣಾಧೀನ ಕೈದಿಗಳು ಮತ್ತು ಆರೋಪಿಗಳ ಕಣ್ಣುಗಳಿಗೆ ಆಸಿಡ್ ಹಾಕಿದ್ದಾರೆ ಎಂದು ಪತ್ರಿಕೆಗಳು ವರದಿ ಮಾಡಿದವು. ಹಲವಾರು ವರ್ಷಗಳಿಂದ ಇದು ರೂಢಿಯಲ್ಲಿದೆ. ಭಾಗಲ್ಪುರ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಇದರ ಬಗ್ಗೆ ಅರಿವು ಇತ್ತು. ಬಹು ಆವೃತ್ತಿ ಹೊಂದಿರುವ ಆಂಗ್ಲ ದೈನಿಕ 'ಇಂಡಿಯನ್ ಎಕ್ಸ್‌ಪ್ರೆಸ್' ಇದರ ಬಗ್ಗೆ ತನಿಖಾ ವರದಿಯನ್ನು ಪ್ರಕಟಿಸಿ ಇದನ್ನೊಂದು ರಾಷ್ಟ್ರೀಯ ಹಗರಣ ಮಾಡಿತು. ಪೊಲೀಸರು ಕಾನೂನಿನ ಹೆಸರಿನಲ್ಲಿ ಎಸಗಿದ ದೌರ್ಜನ್ಯಕ್ಕೆ ಭಾಗಲ್ಪುರದ ಬಹುತೇಕ ನಾಗರಿಕರ ಸಮ್ಮತಿ ಇತ್ತು ಎಂಬ ಅಂಶ ಮತ್ತಷ್ಟು ಭೀತಿ ಹೆಚ್ಚಲು ಕಾರಣವಾಯಿತು. ಬಿಹಾರ ಒಂದು ಕಗ್ಗತ್ತಲ ನಾಡು ಎಂಬ ಅಂಶಕ್ಕೆ ಈಗ ಹೊಸ ಪುರಾವೆ ಸಿಕ್ಕಂತೆ ಆಯಿತು.

ಆದರೆ ವಾಸ್ತವದಲ್ಲಿ ಈ ರೀತಿಯ ಕಲ್ಪನೆ ಪೂರ್ಣವಾಗಿ ಸತ್ಯವಾದುದಾಗಿರಲಿಲ್ಲ. ಗಂಗಾಮುಕ್ತಿ ಆಂದೋಲನ ಅಥವಾ ಚಳುವಳಿ ವಿವರ ವಾಸ್ತವತೆಯ ಇನ್ನೂ ಅನೇಕ ಆಯಾಮಗಳನ್ನು ಬಿಚ್ಚಿಡುತ್ತದೆ. ಹಳೆಯ ಭಾಗಲ್ಪುರದ ಸೂಜಾಗಂಜ್ ಪ್ರದೇಶದ ಕಿರಿದಾದ ಓಣಿಯಲ್ಲಿರುವ ಬಂಗಲೆಯ ಒಂದು ಮೂಲೆಯ ಕೋಣೆಯಲ್ಲಿ ಈ ಚಳುವಳಿಯ ಕಥಾನಕದ ಕೆಲವು ಎಳೆಗಳನ್ನು ಕಾಣಬಹುದು. ಈ ಸಣ್ಣ ಕೋಣೆಯೇ ಆಂಗ್‌ಪ್ರೆಸ್ ಕಚೇರಿ. ಇದರ ಗೋಡೆಯ ಮೇಲೆ ನಗುತ್ತಿರುವ ಗಾಂಧೀಜಿ ಫೋಟೋ ನೇತುಹಾಕಲಾಗಿದೆ. ಇದರ ಕೆಳಗೆ ಎತ್ತರದ ಮತ್ತು ಮುಖದಲ್ಲಿ ಸೌಮ್ಯ ಸ್ವಭಾವ ಹೊರಸೂಸುವ ವ್ಯಕ್ತಿಯೊಬ್ಬರು ಕುಳಿತಿದ್ದಾರೆ. ರಾಮ್‌ಶರಣ್ ಗಂಗಾ ಮುಕ್ತಿ ಆಂದೋಲನದ ಬಹು ಮುಖ್ಯ ವ್ಯಕ್ತಿ.

ಚಳುವಳಿಯ ಹುಟ್ಟು:

ಶತ ಶತಮಾನಗಳಿಂದ ಕಹೇಲ್‌ಗಾಂವ್‌ನ ಬೆಸ್ತರು ಮಧ್ಯರಾತ್ರಿಯೇ ಎದ್ದು ಸೂರ್ಯನ ಮೊದಲ ಕಿರಣ ದಿಗಂತದಲ್ಲಿ ಮೂಡುವ ಎಷ್ಟೋ ಗಂಟೆಗಳ ಮೊದಲು ತಮ್ಮ ಸಣ್ಣ ಮರದ ದೋಣಿಯನ್ನು ನಡೆಸಿಕೊಂಡು ಮೀನು ಹಿಡಿಯಲು ಹೊರಡುತ್ತಾರೆ.

ನೀರಿನಲ್ಲಿ ಮೀನಿನ ಪ್ರಮಾಣ ದಿನೇ ದಿನೇ ಕಡಿಮೆಯಾಗುತ್ತಿದ್ದುದರಿಂದ ಕಳೆದ ಎರಡು ದಶಕಗಳಿಂದ ಮೀನು ಹಿಡಿದು ಜೀವನ ಸಾಗಿಸುವುದು ದುಸ್ತರವೆನ್ನಿಸಿತ್ತು. ಹೀಗಾಗಿ ಪಟ್ಟಣದ ಫುಟ್‌ಪಾತ್‌ಗಳಲ್ಲಿ, ಕೊಳಗೇರಿಗಳಲ್ಲಿ ಕಾಲಯಾಪನೆ ಮಾಡುತ್ತಿರುವ ಅಸಂಖ್ಯ ವ್ಯಕ್ತಿಗಳ ಜೊತೆಗೆ ಇಲ್ಲಿಯವರೂ ಸೇರಿದ್ದರು. ಇವರಲ್ಲಿ ಅನೇಕರು ಮನೆ ಕಟ್ಟುವ ಸ್ಥಳದಲ್ಲಿ ಕಲ್ಲು ಕುಟಿಕರಾಗಿಯೋ, ಇಟ್ಟಿಗೆ ಹೊರುವ ಬಿಡಿ ಕೂಲಿಗಳಾಗಿಯೋ ಜೀವನ ಸಾಗಿಸುತ್ತಿದ್ದರು.

ಶ್ರೀರಾಮನ ವನವಾಸದ ಸಂದರ್ಭದಲ್ಲಿ ಗಂಗಾನದಿಯನ್ನು ದಾಟಿಸಿದ ಮಲಹನ ವಂಶಸ್ಥರು ತಾವು ಎಂದು ಇಲ್ಲಿಯ ಮೀನುಗಾರರು ಹೆಮ್ಮೆಪಟ್ಟುಕೊಳ್ಳುತ್ತಾರೆ. ಈ ಜನ ಪುರಾಣಕಾಲದ ಅಂಬಿಗನನ್ನು ಶತ ಶತಮಾನಗಳಿಂದಲೂ ಶ್ರದ್ಧಾ–ಭಕ್ತಿಗಳಿಂದ ನೆನೆಯುತ್ತಾರೆ. ಆದರೆ ಆತನ ವಶಂಸ್ಥರು ಎಂದು ತಮ್ಮನ್ನು ತಾವು ಕರೆದುಕೊಳ್ಳುವ ಈ ಜನಾಂಗದ ಜನ ತಾವು ಶಾಪಗ್ರಸ್ತರು, ಬುದ್ಧಿಹೀನರು ಹಾಗೂ ಪರಿಸ್ಥಿತಿಗೆ ಬಲಿಯಾದವರೆಂದು ಭಾವಿಸುತ್ತಾರೆ.

೮೦ ಕಿಲೋಮೀಟರ್ ಉದ್ದದ ಗಂಗಾನದಿಯ ಈ ಪ್ರದೇಶದಲ್ಲಿ ಜಲ್‌ಕರ್ ಜಮೀನ್ದಾರಿ ಪದ್ಧತಿಯೂ ವಿಶಿಷ್ಟವಾದುದಾಗಿತ್ತು. ಇಲ್ಲಿ ಈ ಶ್ರೀಮಂತ ಜಮೀನ್ದಾರರು ಒಂದು ದೋಣಿಗೆ ವರ್ಷಕ್ಕೆ ಸರಾಸರಿ ೫ ಸಾವಿರ ರುಪಾಯಿ ಸುಂಕ ವಿಧಿಸುತ್ತಿದ್ದರು. ಇಲ್ಲಿ ಸುಮಾರು ೫೦೦೦ ದೋಣಿಗಳು ಇದ್ದು, ಒಟ್ಟು ವಾರ್ಷಿಕ ವರಮಾನ ಸುಮಾರು ೨.೫ ಕೋಟಿ ರುಪಾಯಿ ಆಗುತ್ತದೆ. ಈ ವ್ಯವಸ್ಥೆ ಜಮೀನ್ದಾರರ ಬಾಡಿಗೆ ಗೂಂಡಾಗಳು ಇದ್ದ ಕಚೇರಿಯಿಂದ ನಡೆಯುತ್ತಿತ್ತು. ೧೯೮೦ರ ವೇಳೆಗೆ ಕೇವಲ ಈ ಜಮೀನ್ದಾರರು ಮಾತ್ರ ಮೀನುಗಾರರಿಗೆ ಸಮಸ್ಯೆಯಾಗಿ ಉಳಿದಿರಲಿಲ್ಲ. ಒಂದು ಕಾಲದಲ್ಲಿ ಸಮೃದ್ಧವಾದ ಮತ್ತು ನಿಜವಾಗಿಯೂ ಉತ್ತರ ಭಾರತದ ನಾಗರಿಕತೆಯ ತೊಟ್ಟಿಲಾದ ಗಂಗೆ ಈಗ ತೆರೆದ ಚರಂಡಿಯಾಗಿತ್ತು. ಗಂಗೋತ್ರಿಯಿಂದ ಬಂಗಾಳಕೊಲ್ಲಿಯವರೆಗಿನ ೨೯೬೦ ಕಿ.ಮೀ ದೂರದ ಹಾದಿಯುದ್ದಕ್ಕೂ ಎಲ್ಲ ರೀತಿಯ ಕೊಳಕನ್ನು, ಕಾರ್ಖಾನೆಗಳ ಮಲಿನ ನೀರನ್ನು ಯಾವ ರೀತಿಯ ಸಂಸ್ಕರಣೆಗೊಳಪಡಿಸದೆಯೇ ನದಿಗೆ ಬಿಡುತ್ತಿದ್ದುದರಿಂದ ನದಿ ನಿಧಾನವಾಗಿ ಸಾಯುತ್ತಿರುವುದೇ ಮೀನುಗಳ ಸಂಖ್ಯೆ ಕಡಿಮೆಯಾಗಲು ಕಾರಣವಾಗಿತ್ತು. ಈ ದುರಂತ ಮೀನುಗಾರರ ಕೈಮೀರಿದ್ದಾಗಿತ್ತು.

ಜಮೀನ್ದಾರರ ದೌರ್ಜನ್ಯದ ವಿರುದ್ಧ ಹೋರಾಟ ಪೆಚ್ಚು ಕಾರ್ಯಸಾಧುವಾಗಿತ್ತು. ದೌರ್ಜನ್ಯ ಎಸಗುವ ಜಮೀನ್ದಾರರಿಗೆ ಸವಾಲೆಸೆಯುವ ಗುಪ್ತ ಬಯಕೆಗಿಂತ ಅವರಲ್ಲಿ ಅಸಹಾಯಕತೆಯೇ ತೀರಾ ಹೆಚ್ಚಿತ್ತು. ಹಳೆಯ ಯಾವುದೋ ಶಾಪದ ಪರಿಣಾಮವಾಗಿ ಬಡತನ, ಸಾಮಾಜಿಕ ತುಳಿತ ಇವೆಲ್ಲ ಇದೆ ಎಂದೇ ಬೆಸ್ತರು ನಂಬಿದ್ದರು. ಹೀಗಿರುವಾಗ ಅವರು ತಮ್ಮ ಹಾಗೂ ಗಂಗೆಯ ಮುಕ್ತಿ ಬಗ್ಗೆ ಕನಸು ಕಟ್ಟಬಲ್ಲರೇ....?

೭೦ರ ಮಧ್ಯಾವಧಿಯಲ್ಲಿ ನಡೆದ ಬಿಹಾರದ ನವನಿರ್ಮಾಣ ಚಳುವಳಿಯಲ್ಲಿ ಗಂಗಾಮುಕ್ತಿ ಚಳುವಳಿಯ ಮೂಲವಿದೆ. ೧೯೭೪ರಲ್ಲಿ ಹಿರಿಯ ಸರ್ವೋದಯ ನಾಯಕ ಜಯಪ್ರಕಾಶ್ ನಾರಾಯಣ್ ಭ್ರಷ್ಟಾಚಾರದ ವಿರುದ್ಧ ಹಾಗೂ ಸಾಮಾಜಿಕ ಮತ್ತು ರಾಜಕೀಯ ಪುನರುಜ್ಜೀವನಕ್ಕೋಸುಗ ಸಮಗ್ರ ಆಂದೋಲನವೊಂದನ್ನು ಸಂಘಟಿಸಿದರು. ಇದನ್ನು ಅವರು 'ಸಂಪೂರ್ಣ ಕ್ರಾಂತಿ' ಎಂದು ಕರೆದರು. ಈ ಆದರ್ಶವಾದದ ಶಕ್ತಿ ಭಾಗಲ್ಪುರದವರೆಗೂ ಹರಿಯಿತು. ಅದರ ಶಿಖರದಲ್ಲಿ ನೂರಾರು ಮಂದಿ ತರುಣ-ತರುಣಿಯರಿದ್ದರು. ಅವರಲ್ಲಿ ಒಬ್ಬ ಭಾಗಲ್ಪುರದ ಸೂಜಾಗಂಜ್‌ನ ಗಿರಿಧಾರ ಶಾ ಓಣಿಯವನಾಗಿದ್ದ.

ಸ್ವಾತಂತ್ರ್ಯ ಬಂದ ಮೊದಲು ಶ್ರೀಮಂತ ಜಮೀನ್ದಾರಿ ಕುಟುಂಬದಲ್ಲಿ ರಾಮ್‌ಶರಣ್ ಹುಟ್ಟಿದ. ಈ ಕುಟುಂಬದ ಹವೇಲಿಯಲ್ಲಿ ಬಹಳ ವಿಸ್ತಾರವಾದ ಹಜಾರಗಳೂ ಮತ್ತು ಅದರೊಳಗೆ ಸ್ವಂತ ದೇವಸ್ಥಾನವೂ ಇತ್ತು. ಮನೆಯೊಳಗಿನ ಮಹಿಳೆಯರು ಹೊರ ಕೊಠಡಿಯಲ್ಲಿ ಕಾಣಿಸುತ್ತಿರಲಿಲ್ಲ. ರಾಮ್‌ಶರಣ್ ಯೌವನಕ್ಕೆ ಕಾಲಿರಿಸಿದ. ತನ್ನ ಸುತ್ತಲಿನ ಪ್ರಪಂಚದ ಬಗ್ಗೆ ತೀವ್ರ ಆಸಕ್ತಿ ತಳೆದ.

೧೯೭೨ರಲ್ಲಿ ಆತ ಎಂ.ಎ ಮುಗಿಸಿ ಕಾಲೇಜಿನಿಂದ ಹೊರ ಬಂದಾಗ ಜಯಪ್ರಕಾಶ್ ನಾರಾಯಣ್ ನೇತೃತ್ವದ ಚಳುವಳಿಗೆ ಕಸುವು ಬಂದಿತ್ತು. ಮನೆಯಲ್ಲಿ ವಿರೋಧವಿದ್ದರೂ ರಾಮ್‌ಶರಣ್ ಚಳುವಳಿಗೆ ಧುಮುಕಿದರು. ೧೯೭೫ರ ಜನವರಿಯಲ್ಲಿ ಜೆ.ಪಿ. ಛಾತ್ರ ಯುವ ಸಂಘರ್ಷವಾಹಿನಿಯನ್ನು ಹುಟ್ಟು ಹಾಕಿದಾಗ ರಾಮ್‌ಶರಣ್ ಅದರ ಸಕ್ರಿಯ ಕಾರ್ಯಕರ್ತರಾದರು. ಈ ಛಾತ್ರ ಯುವ ಸಂಘರ್ಷವಾಹಿನಿ ಯುವಶಕ್ತಿಯಾಗಿದ್ದು ಅತ್ಯಂತ ತುಳಿತಕ್ಕೊಳಗಾದ ಮನುಷ್ಯನ ಕಾಳಜಿಗಳಿಗೆ ಶಾಂತಿಯುತ ಮಾರ್ಗದಿಂದ ಹೋರಾಡುತ್ತಿತ್ತು. ೩೦ ವರ್ಷದೊಳಗಿನವರು ಈ ಸಂಘಕ್ಕೆ ಸೇರಬಹುದಿತ್ತು. ಈ ವಾಹಿನಿಯ ಕಾರ್ಯಕರ್ತರು ಚುನಾವಣೆಗೆ ಸ್ಪರ್ಧಿಸುವಂತಿರಲಿಲ್ಲ.

ಜೆ.ಪಿ.ಚಳುವಳಿ ಯಥಾಸ್ಥಿತಿವಾದಕ್ಕೆ ಸವಾಲೆಸೆಯಿತು. ಪ್ರಧಾನಿ ಇಂದಿರಾಗಾಂಧಿಯವರು ತುರ್ತು ಪರಿಸ್ಥಿತಿ ಹೇರಿ, ಪ್ರಜಾಸತ್ತಾತ್ಮಕ ಹಕ್ಕುಗಳನ್ನು ತಾತ್ಕಾಲಿಕವಾಗಿಯಾದರೂ ಅಮಾನತಿನಲ್ಲಿಡುವಷ್ಟರಮಟ್ಟಿಗೆ ಈ ಚಳುವಳಿ ಪ್ರಭಾವ ಬೀರಿತ್ತು. ಸಾವಿರಾರು ಮಂದಿ ರಾಜಕೀಯ ನಾಯಕರು ಮತ್ತು ಕಾರ್ಯಕರ್ತರು ದಸ್ತಗಿರಿಯಾದರು. ರಾಮ್‌ಶರಣ್ ಸೆರೆಮನೆಗೇನೂ ಹೋಗಲಿಲ್ಲ. ಆದರೆ ವಾಹಿನಿಯ ತಳಮಟ್ಟದ ಚಟುವಟಿಕೆಯಯಲ್ಲಿ ತೊಡಗಿಕೊಂಡರು. ತುರ್ತು ಪರಿಸ್ಥಿತಿಯನ್ನು ತೆಗೆದ ನಂತರ ೧೯೭೭ರಲ್ಲಿ ಗಾಂಧಿ ಪ್ರತಿಷ್ಠಾನದ ಭಾಗಲ್ಪುರ ಘಟಕ ನಡೆಸುತ್ತಿದ್ದ ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ ತೊಡಗಿಕೊಂಡರು. ಈ ಕಾರ್ಯಕ್ರಮದಲ್ಲಿ ಕಾಗ್ಜಿ–ಟೋಲಾದ ಮೀನುಗಾರರೂ ಇದ್ದರು. ಇವರುಗಳು ರಾಮ್‌ಶರಣ್‌ರಂಥ ಗೆಳೆಯರಿಗೆ, ಜಲ್‌ಕರ್ ಜಮೀನ್ದಾರರ ಕಿರುಕುಳದ ಬಗ್ಗೆ ವಿವರಿಸುತ್ತಿದ್ದರು. ಜಮೀನ್ದಾರರ ಗೂಂಡಾಗಳು ವ್ಯಕ್ತಿಯ ಮೇಲೆ ತೀವ್ರ ಹಲ್ಲೆ ನಡೆಸಿ ಆತನನ್ನು ನೀರಿಗೆ ದಬ್ಬಿ ಅರ್ಧ ಮುಳುಗುವಂತೆ ಮಾಡುತ್ತಿದ್ದರು. ನೀರಿನಲ್ಲಿಯೇ ತೀವ್ರ ರಕ್ತಸ್ರಾವವಾಗಿ ವ್ಯಕ್ತಿ ಸಾಯಲಿ ಎಂಬ ಉದ್ದೇಶದಿಂದ ಹೀಗೆ ಮಾಡುತ್ತಿದ್ದರು. ಈ ಮೀನುಗಾರರು ಮತ್ತು ಭೂರಹಿತ ಕೃಷಿ ಕಾರ್ಮಿಕರು ಹಲವಾರು ವರ್ಷಗಳಿಂದ ಈ ಕ್ರೌರ್ಯದ ನಡುವೆಯೇ ಬದುಕಿದ್ದರು. ಈ ಕಾರಣದಿಂದಲೇ ವಿಚಾರಣಾಧೀನ ಕೈದಿಗಳ ಕಣ್ಣಿಗೆ ಆಸಿಡ್ ಎರಚಿದ್ದನ್ನು ಅನೇಕರು ಬೆಂಬಲಿಸಿದ್ದರು. ನ್ಯಾಯಾಲಯಗಳಿಂದ ನ್ಯಾಯ ಸಿಗುವ ಬಗ್ಗೆ ಅವರಲ್ಲಿ ನಂಬಿಕೆ ಉಳಿದಿರಲಿಲ್ಲ. ಮೀನುಗಾರರನ್ನು ಸುಲಿಯುತ್ತಿದ್ದ ಮಾಫಿಯಾ ಜೊತೆಗೆ ಈ ಅಪರಾಧಿಗಳು ಸಂಬಂಧ ಹೊಂದಿದ್ದರು.

ಭಾಗಲ್ಪುರದ ಪ್ರಕರಣ ರಾಷ್ಟ್ರೀಯ ದಿನಪತ್ರಿಕೆಗಳಲ್ಲಿ ಸುದ್ದಿಯಾಗುವವರೆಗೆ ವಾಹಿನಿಯ ನಾಯಕತ್ವದಲ್ಲಿ 'ಬೋಧಗಯಾದಲ್ಲಿ ನಡೆದ ಭೂ ಹೋರಾಟ' ಬಿಹಾರದ ಹೊರಗೆ ಬಹುಜನಕ್ಕೆ ಗೊತ್ತಾಗಲಿಲ್ಲ.

೨,೫೦೦ ವರ್ಷಗಳ ಹಿಂದೆ ಗೌತಮಬುದ್ಧ ತೊರೆಯ ಪಕ್ಕದ ಬೋಧಿವೃಕ್ಷದ ಕೆಳಗೆ ಜ್ಞಾನೋದಯ ಹೊಂದಿದ. ಅಂದಿನಿಂದ ಈ ಸ್ಥಳವನ್ನು ಬೋಧಗಯಾ ಎಂದು ಕರೆಯಲಾಗುತ್ತಿದೆ. ಈಗ ಅದು ವಾಹನಗಳಿಂದ ಗಿಜಿಗುಡುವ ಕೊಳಕು ಪಟ್ಟಣವಾಗಿದೆ.

೧೬ನೆಯ ಶತಮಾನದಿಂದ ಗಯಾದಲ್ಲಿ ೯೫೭೭ ಎಕರೆಯಷ್ಟು ಭೂಮಿ ಹಿಂದೂ ಮಠದ ನಿಯಂತ್ರಣದಲ್ಲಿ ಇತ್ತು. ಇಲ್ಲಿಯ ಭೂರಹಿತ ಕೃಷಿಕಾರ್ಮಿಕರು ಈ ಮಠದ ಭೂಮಿಯಲ್ಲಿ ಕೂಲಿಕಾರರಾಗಿ ದುಡಿಯುತ್ತಿದ್ದರು. ೧೯೭೭ರ ಜನವರಿಯಿಂದ ವಾಹಿನಿಯ ಕಾರ್ಯಕರ್ತರು ಬೋಧಗಯಾದ ಈ ಭೂರಹಿತ ಕೃಷಿ ಕಾರ್ಮಿಕರೊಂದಿಗೆ ಬದುಕತೊಡಗಿದರು. ಅವರ ಜೊತೆಯಲ್ಲಿ ಅವರಂತೆ ಇರುತ್ತಾ, ಅವರು ಸೇವಿಸುವ ಆಹಾರವನ್ನೇ ಸೇವಿಸುತ್ತಿದ್ದರು. ಇದು ಮಠದ ವಿರುದ್ಧ ತೀವ್ರ ಪ್ರತಿಭಟನೆಗೆ ಹಾದಿ ಮಾಡಿಕೊಟ್ಟಿತು. ೧೯೮೧ರಲ್ಲಿ ಈ ಹೋರಾಟದ ದೆಸೆಯಿಂದ ಮಠದ ಹಿಡಿತದಲ್ಲಿದ್ದ ಭೂಮಿ ಉಳುವವರಿಗೇ ಸಿಕ್ಕಿತು.

ಆ ಕಾಲದಲ್ಲಿ ಬಿಹಾರದಾದ್ಯಂತ ಬಹಳ ಮಹತ್ವಾಕಾಂಕ್ಷಿಯಾದ ಹೋರಾಟಗಳು ನಡೆದವು. ಬಹುತೇಕ ಹೋರಾಟಗಳು ನಕ್ಸಲೀಯ ನಾಯಕತ್ವದಲ್ಲಿ ಅಥವಾ ತಾತ್ವಿಕವಾಗಿ ಅವರ ಪ್ರಭಾವದಿಂದ ರೂಪುಗೊಂಡಿದ್ದವು. ಬಿಹಾರದಲ್ಲಿನ ಜಮೀನ್ದಾರರು ಭೂ ಹೋರಾಟಗಳನ್ನು ದಮನ ಮಾಡಲು ಅವರದೇ ಆದ ಖಾಸಗಿ 'ಸೈನ್ಯ' ಹೊಂದಿದ್ದರು. ಈ ವಾಹಿನಿಯ ಕಾರ್ಯಕರ್ತರು ತಮ್ಮ ಹೋರಾಟದಲ್ಲಿ ಶಸ್ತ್ರ ಬಳಸದ ಕಾರಣ ಅದಕ್ಕೆ ಪ್ರತಿಯಾಗಿ ಇವರು ಸೈನ್ಯ ಬಳಸಬೇಕಾಗಿ ಬರಲಿಲ್ಲ ಎಂಬುದು ವಾಹಿನಿಯ ಕಾರ್ಯಕರ್ತರಿಗೆ ಹೆಮ್ಮೆಯ ವಿಷಯವಾಗಿತ್ತು. ಈ ಚಳುವಳಿಯ ಮೂಲಕ ಅನಿಲ್ ಪ್ರಕಾಶ್ ಎಂಬುವವರು ನೇತಾರನಾಗಿ ಹೊರಹೊಮ್ಮಿದರು.

ಅನಿಲ್ ಪ್ರಕಾಶ್ ಮುಜಾಫರ್‌ಪುರದ ಮಧ್ಯಮವರ್ಗದ ಕುಟುಂಬದಿಂದ ಬಂದವರು. ಅವರು ಕಾಲೇಜಿನಲ್ಲಿ ಓದುತ್ತಿದ್ದಾಗ ಎರಡು ರೀತಿಯ ಘೋಷಣೆಗಳು ಕೇಳಿ ಬರುತ್ತಿದ್ದವು. ಒಂದು ರೀತಿಯ ಘೋಷಣೆ ನಕ್ಸಲೀಯರಲ್ಲಿ ಜನಪ್ರಿಯವಾಗಿತ್ತು. 'ರಕ್ತ....ರಕ್ತ.... ಶ್ರೀಮಂತರ ರಕ್ತ! ಒಂದು ಕಿಡಿ ಇಡೀ ಕಾಡನ್ನೇ ಸುಟ್ಟೀತು!' ಇನ್ನೊಂದು ಬಗೆಯ ಘೋಷಣೆ ಜೆ.ಪಿ. ಅವರಿಂದ ಬಂದದ್ದು: 'ಅನ್ಯಾಯ ಎಸಗಬೇಡ; ಅನ್ಯಾಯ ತಾಳಿಕೊಳ್ಳಬೇಡ!'

ಅನಿಲ್ ಭೌತಶಾಸ್ತ್ರ ವಿಷಯ ತೆಗೆದುಕೊಂಡು ಪದವಿ ಶಿಕ್ಷಣಕ್ಕಾಗಿ ಅಧ್ಯಯನ ಮಾಡುತ್ತಿದ್ದಾಗ ಕಾರ್ಲ್‌ಮಾರ್ಕ್ಸ್‌ನನ್ನು ಓದಿಕೊಂಡಿದ್ದರು. ಆದರೆ ಆಗ ಅವರು ಜೆ.ಪಿ. ಚಳುವಳಿಯತ್ತ ಆಕರ್ಷಿತರಾಗಿದ್ದರು. ವಿದ್ಯಾರ್ಥಿ ಚಳುವಳಿಯ ಪೂರ್ಣಾವಧಿಯ ಕಾರ್ಯಕರ್ತರಾದರು. ಇದರಿಂದ ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಆರೂವರೆ ತಿಂಗಳು ಸೆರೆವಾಸ ಅನುಭವಿಸಬೇಕಾಗಿ ಬಂತು. ಅಲ್ಲಿ ಗಾಂಧೀಜಿಯ ಆತ್ಮಕಥೆಯನ್ನು ಅಧ್ಯಯನ ಮಾಡಿದರು. ತನ್ನೊಳಗೆ ಒಳ್ಳೆಯತನವನ್ನು ಅನ್ವೇಷಿಸುವ ಮತ್ತು ಆ ಶಕ್ತಿಯ ಆಧಾರದಲ್ಲಿಯೇ ಕ್ರಿಯಾಶೀಲವಾಗುವುದರ ಮಹತ್ವದ ಬಗ್ಗೆ ಆಲೋಚಿಸಲು ಆರಂಭಿಸಿದರು. ಈ ಸಾಮಾಜಿಕ ವ್ಯವಸ್ಥೆಯನ್ನು ಹೇಗೆ ಬದಲಿಸಬೇಕು ಎಂಬುದರ ಬಗ್ಗೆ ಗಾಂಧೀಜಿಯಲ್ಲಿ ಉತ್ತರವಿರಲಿಲ್ಲ. ಆದರೆ ಅನಿಲ್ ಸಂಪೂರ್ಣ ಕ್ರಾಂತಿಗಾಗಿ ಏನನ್ನಾದರೂ ಮಾಡಲು ಚಡಪಡಿಸುತ್ತಿದ್ದರು. ಇದಕ್ಕೆ ವಾಹಿನಿಯ ಕ್ರಿಯೆಯಲ್ಲಿ ಉತ್ತರವಿತ್ತು. ಆದುದರಿಂದ ಅನಿಲ್ ಬೋಧಗಯಾದ ಭೂ ರಹಿತ ಕೂಲಿಕಾರರ ಸಂಘರ್ಷದಲ್ಲಿ ಧುಮುಕಿದರು.

ಯಾವುದೇ ಹೋರಾಟ ಯಶಸ್ವಿಯಾಗಲು ಅಹಿಂಸಾ ಮಾರ್ಗ ಬಹಳ ಅಗತ್ಯವಾದುದು ಎಂದು ಬೋಧಗಯಾದ ಹೋರಾಟದಿಂದ ತಿಳಿದು ಬಂತು. ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಗುಂಪುಗಳು ಯಶಸ್ವಿಯಾಗುವ ಸಂಭವವಿಲ್ಲ. ಏಕೆಂದರೆ ಶ್ರೀಮಂತ ಜಮೀನ್ದಾರರು ಮತ್ತಷ್ಟು ಬಲಶಾಲಿಗಳಾಗುವರು. ಆದರೆ ಇವರು ಹಿಂಸೆಯ ಆಯುಧದಿಂದ ಜಮೀನ್ದಾರರ ಆಯುಧ ಕೆಳಗುರುಳುವಂತೆ ಮಾಡಿದರು. ಎಂ.ಎಲ್.ಗುಂಪುಗಳು 'ಸೇನೆ'ಯನ್ನು ಸೃಷ್ಟಿಸಿದವು. ಇಲ್ಲಿಯೂ ಬೋಧಗಯಾದ ಮಹಂತ ಕಿಸಾನ್ ಸುರಕ್ಷಾ ಸಮಿತಿ ರಚಿಸಲು ಪ್ರಯತ್ನಿಸಿದ. ಆದರೆ ಅದು ಫಲಿಸಲಿಲ್ಲ. ನಾವು ಅಹಿಂಸೆಯನ್ನು ಪುಸ್ತಕಗಳ ಮೂಲಕ ಕಲಿಯಲಿಲ್ಲ. ಬದಲಿಗೆ ಅನುಭವದಿಂದ ಕಲಿತೆವು.

ಕಾಟ್ಜಿ-ಟೋಲಾ ಪ್ರದೇಶದ ಕೆಲವು ಮೀನುಗಾರರಿಗೆ ಬೋಧಗಯಾದ ಚಳುವಳಿ ಭರವಸೆ ಮೂಡಿಸಿತು. ಅವರು ಅಂತಹುದೇ ಚಳುವಳಿಯನ್ನು ಕಟ್ಟುವ ಕನಸು ಕಂಡರು. ಆದುದರಿಂದ ರಾಮ್‌ಶರಣ್ ಮತ್ತು ಅವರ ಗೆಳೆಯರು ಗಂಗಾನದಿಯ ತೀರಕ್ಕೆ ವಾಸ್ತವ್ಯ ಬದಲಾಯಿಸಲು ಅನಿಲ್‌ಗೆ ಕೋರಿದರು. ಅಲ್ಲಿ ಅವರು ಜಲ್‌ಕರ್ ಜಮೀನ್ದಾರರನ್ನು ಎದುರಿಸುವುದಿತ್ತು.

ಬಿಡುಗಡೆಗಾಗಿ ಹೋರಾಟ

ಹೀಗೆ ಕನಸೊಂದು ಆಕಾರ ತಳೆಯಿತು. ಕೇವಲ ಸಣ್ಣ ಲಾಭಕ್ಕಾಗಿ ಸ್ಥಳೀಯ ಗೂಂಡಾಗಳ ಸಂಗಡ ಸೆಣಸದೆ ಹೊಸ ಸಾಮಾಜಿಕ ವ್ಯವಸ್ಥೆಯೊಂದನ್ನು ಸೃಜಿಸುವುದು ಇದರ ಹಿಂದಿನ ಉದ್ದೇಶವಾಗಿತ್ತು. ೧೯೮೨ರ ಫೆಬ್ರವರಿ ೨೨ರಂದು ಆಗಲೇ ಅಸ್ತಿತ್ವದಲ್ಲಿದ್ದ 'ನಿಷಾದ ಜಲ ಶ್ರಮಿಕ ಸಂಘ' ಕಹೇಲ್‌ಗಾಂವ್‌ನಲ್ಲಿ ಸಭೆಯೊಂದನ್ನು ಕರೆಯಿತು. ಈ ಸಭೆ ಜಲ್‌ಕರ್ ಜಮೀನ್ದಾರರ ವಿರುದ್ಧ ಚಳುವಳಿಯನ್ನು ರೂಪಿಸಲು ತೀರ್ಮಾನಿಸಿತು. ಇದು ಗಂಗಾಮುಕ್ತಿ ಆಂದೋಲನದ ಆರಂಭ. ಅದೇ ವರ್ಷ ಏಪ್ರಿಲ್ ೪ರಂದು ಸುತ್ತಲಿನ ೧೯ ಗ್ರಾಮಗಳ ೧೨೦ ಮಂದಿ ಕಹೇಲ್‌ಗಾಂವ್‌ನಲ್ಲಿ ಸಭೆ ಸೇರಿ ಅಹಿಂಸಾತ್ಮಕ ಮಾರ್ಗಗಳಿಂದ ಈ ಚಳುವಳಿಯನ್ನು ನಡೆಸಲು ತೀರ್ಮಾನಿಸಿದರು. ಈ ವಿಷಯ ಹರಡುತ್ತಿದ್ದಂತೆಯೇ ಜಮೀನ್ದಾರರು ಮತ್ತು ಅವರ ಬಾಡಿಗೆಯ ಗೂಂಡಾಗಳು ಅಪಹಾಸ್ಯ ಮಾಡಿದರು. ಆದರೆ ಗಂಗಾಮುಕ್ತಿ ಆಂದೋಲನದ ಹೆಸರಿನಲ್ಲಿ ಇವರೆಲ್ಲ ಒಗ್ಗಟ್ಟಾದ ನಂತರ ಅವರು ಹಿಂದಿನಂತಿಲ್ಲ ಎಂಬುದು ಅರಿವಿಗೆ ಬಂದಿತ್ತು.

ಅನಿಲ್ ಪ್ರಕಾಶ್ ಈ ಎಲ್ಲ ಕ್ರಿಯೆಗೆ ಚುರುಕಾದ ಪ್ರೇರಣೆಗಾಗಿ ಒಂದು ಬಲವತ್ತರವಾದ ನಿದರ್ಶನವೊಂದನ್ನು ನೀಡಿದರು:

'ವಾಲ್ಮೀಕಿ ಒಬ್ಬ ಅಪರಾಧಿ. ತನ್ನ ನಡವಳಿಕೆಯನ್ನು ಬದಲಾಯಿಸಿಕೊಂಡ ನಂತರ ಆತ ರಾಮಾಯಣ ರಚಿಸಿದ. ಆದಕಾರಣ ವಿನಾಶದ ಶಕ್ತಿಗಳನ್ನು ಸತ್ಕಾರ್ಯಕ್ಕೆ ಬಳಸಿಕೊಳ್ಳಬಹುದು ಮತ್ತು ಅದು ಶ್ರೇಷ್ಠ ಫಲ ನೀಡುತ್ತದೆ. ಈಗ ನಮ್ಮಲ್ಲಿ ಹಲವಾರು ವಾಲ್ಮೀಕಿಗಳು ಇದ್ದಾರೆ. ಅವರನ್ನು ಗುರುತಿಸಿ ಅವರಿಗೆ ಸಲ್ಲುವ ಗೌರವ ನೀಡಬೇಕು ಮತ್ತು ಅವರನ್ನು ಸರಿದಾರಿಗೆ ಕೊಂಡೊಯ್ಯಬೇಕು'.

೧೯೮೩ರ ಮಾರ್ಚ್ ೨೩ರಂದು ಜಿಎಂಎ ವತಿಯಿಂದ ಕಹೇಲ್‌ಗಾಂವ್‌ನಿಂದ ಭಾಗಲ್ಪುರದವರೆಗೆ ದೋಣಿ ಜಾಥಾ ನಡೆಸಲಾಯಿತು. 'ಜಲ್, ಬನ್ಸ್, ಔಜಾರ್ ಹಮಾರ, ಗಂಗ ಪರ್ ಅಧಿಕಾರ್ ಹಮಾರಾ' (ನೀರು, ಪುಟ್ಟು ಮತ್ತು ಮೀನುಗಾರಿಕೆಯ ಉಪಕರಣಗಳು ನಮ್ಮವು, ಗಂಗೆಯ ಮೇಲಿನ ಅಧಿಕಾರ ಕೂಡ ನಮ್ಮದು)

ಕೆಲವು ತಿಂಗಳುಗಳ ನಂತರ ಕಹೇಲ್‌ಗಾಂವ್‌ನ ಸಮೀಪದ ದ್ವೀಪದಲ್ಲಿ ಬೃಹತ್ 'ಏಕಲವ್ಯ ಸಮಾವೇಶ' ನಡೆಯಿತು. ಸ್ವಶಿಕ್ಷಿತ, ಅಪ್ರತಿಮ ಬಿಲ್ಲುಗಾರರನ್ನು ಈ ಸಮಾವೇಶದಲ್ಲಿ ಪ್ರಶಂಸಿಸಲಾಯಿತು ಮತ್ತು ಏಕಲವ್ಯನ ಕುರುಡು ಭಕ್ತಿಯನ್ನು ಹೀಗಳೆಯಲಾಯಿತು. ಕಾಲ ಕಳೆದಂತೆ ದಬ್ಬಾಳಿಕೆ ಮತ್ತು ಅನ್ಯಾಯದ ವಿರುದ್ಧ ಹೋರಾಡಲು, ಮತ್ತೊಬ್ಬರ ದುಃಖವನ್ನು ಹಂಚಿಕೊಳ್ಳಲು, ಗೆಳೆತನ ಹಾಗೂ ಪ್ರೀತಿ ಹರಡಲು ಮನುಷ್ಯನಿಗೆ ಶಕ್ತಿಯನ್ನು ನೀಡುವುದೇ ಸಂಸ್ಕೃತಿ ಎಂದು ವ್ಯಾಖ್ಯಾನಿಸಲಾಯಿತು.

ಈ ಜಿಎಂಎನ ಕಾರ್ಯವ್ಯಾಪ್ತಿ ಕೇವಲ ಮೀನುಗಾರರ ಕಾಳಜಿಗೆ ಮಾತ್ರವೇ ಸೀಮಿತಗೊಳ್ಳಲಿಲ್ಲ. ಭಾಗಲ್ಪುರ ಮತ್ತು ಕಹೇಲ್‌ಗಾಂವ್‌ನ ಮಧ್ಯಮ ವರ್ಗದ ವೃತ್ತಿನಿರತರ ಬೆಂಬಲವನ್ನು ಗಳಿಸಿಕೊಂಡಿತು. ಆದರೆ ಕಹೇಲ್‌ಗಾಂವ್‌ನಲ್ಲಿ ಗಂಗಾ ನದಿಯ ದಡದಲ್ಲಿ ಆರಂಭವಾದ ಶಾಖೋತ್ಪನ್ನ ಸ್ಥಾವರದ ವಿರುದ್ಧ ಪ್ರತಿಭಟಿಸಲು ನಿರ್ಧಾರ ಮಾಡಿದಾಗ ಈ ಮಧ್ಯಮ ವರ್ಗದ ಜನರು ಬೆಂಬಲ ನೀಡಲು ನಿರಾಕರಿಸಿದರು. ಈ ಭಾಗದ ಅಭಿವೃದ್ಧಿಗೆ ಈ ಸ್ಥಾವರ ಅತ್ಯಗತ್ಯ ಎಂದು ಅವರೆಲ್ಲ ಭಾವಿಸಿದ್ದರು.

ಸ್ಥಳೀಯ ಚಮ್ಮಾರನ ಕೆಲಸ ಕಿತ್ತುಕೊಂಡು ಹೆಚ್ಚು ವಿದ್ಯುತ್ ಬೇಡುವ ಬಾಟಾ ಫ್ಯಾಕ್ಟರಿಗೆ ಅನುಕೂಲ ಮಾಡಿಕೊಡುವುದು ಹೇಗೆ ಸರಿ ಎಂದು ಅನಿಲ್ ಪ್ರಕಾಶ್ ಪ್ರಶ್ನಿಸಿದರು. ರೈತ ಬೆಳೆದ ಕಬ್ಬುಗಳನ್ನು ಬೃಹತ್ ಸಕ್ಕರೆ ಕಾರ್ಖಾನೆಗೆ ಏಕೆ ಒಯ್ಯಬೇಕು? ಅದೂ ನಿಃಸತ್ವದ ಪಾಲಿಶ್ ಮಾಡಿದ ಬೆಳ್ಳನೆಯ ಸಕ್ಕರೆ ಪಡೆಯಲು! ಬೆಲ್ಲ ಆರೋಗ್ಯಕರ ವಸ್ತು, ಅಲ್ಲದೆ ಈ ವಿಕೇಂದ್ರೀಕೃತ ತಯಾರಿಕಾ ಪ್ರಕ್ರಿಯೆಯಲ್ಲಿ ಹಲವಾರು ಮಂದಿಗೆ ಉದ್ಯೋಗ ದೊರೆತರೂ ಗಂಗಾ ನದಿಗೆ ವಿಷಯುಕ್ತ ಕಲ್ಮಶಗಳನ್ನು ಉಗುಳುವ ಈ ಕಾರ್ಖಾನೆಗಳು ಏಕೆ ಬೇಕು?

ಈ ವಿಷಯುಕ್ತ ಕಲ್ಮಶಗಳನ್ನು ಶುದ್ಧಗೊಳಿಸುವುದರಿಂದಷ್ಟೇ ಈ ಸಮಸ್ಯೆ ಪರಿಹಾರವಾಗದು. ಈ ನದೀ ಬಯಲಿನಗುಂಟ ಹರಡಿರುವ ಕೃಷಿ ಕ್ಷೇತ್ರದಲ್ಲಿ ಬಳಸುವ ವಿಷಯುಕ್ತ ಕೀಟನಾಶಗಳು ಪುನಃ ನದಿ ಸೇರಿ ಜಲಚರಗಳನ್ನು ನಾಶಪಡಿಸುತ್ತವೆ, ಅಭಿವೃದ್ಧಿಗಾಗಿ ನಿರ್ಮಿಸಿದ ಬೃಹತ್ ಸ್ಥಾವರಗಳ ಕಾರಣದಿಂದಾಗಿಯೇ ಗಂಗಾನದಿ ನಿಧಾನವಾಗಿ ಸಾಯುತ್ತಿದೆ.

ಆದರೆ ಜಿಎಂಎಂನ ಈ ನಿಲುವಿನಿಂದಾಗಿ ಅದು ತನ್ನ ಮಧ್ಯಮವರ್ಗದ ಬೆಂಬಲಿಗರನ್ನು ಕಳೆದುಕೊಳ್ಳಬೇಕಾಯಿತು. ಆದರೂ ಆಂದೋಲನ ಮುಂದುವರೆಯಿತು. ಇದು ಕೇವಲ ಮೀನುಗಾರರ ಹಕ್ಕುಗಳಿಗಾಗಿ ಮಾತ್ರ ನಡೆಸುವ 'ಯೂನಿಯನ್' ಕೆಲಸ ಅಲ್ಲ ಎಂಬುದನ್ನು ವಿವರಿಸಲು ರಾಮ್‌ಶರಣ್ ಶ್ರಮಿಸಿದರು. ಸಮಸ್ಯೆ ಇಷ್ಟೇ ಆಗಿದ್ದರೆ, ಇಡೀ ಸಂಘಟನೆ

ಯನ್ನು ಮೀನುಗಾರರ ಆಂದೋಲನ ಎಂದೇ ಕರೆಯಬಹುದಿತ್ತು. ಆದರೆ ಇದು ಗಂಗಾಮುಕ್ತಿ ಆಂದೋಲನ. ನಮ್ಮ ಬದುಕಿನ ಅರ್ಥವ್ಯವಸ್ಥೆ ಮತ್ತು ಸಂಸ್ಕೃತಿಯಲ್ಲಿ ಗಂಗಾನದಿಗಿರುವ ಮಹತ್ವವನ್ನು ಗಮನಿಸಿದ ಆಂದೋಲನ ಸಮಗ್ರ ದೃಷ್ಟಿಯುಳ್ಳದ್ದಾಗಿತ್ತು.

ಜಿಎಂಎಂ ವಿಶಾಲವಾದ ಸಾಮಾಜಿಕ ಚಳುವಳಿಗೆ ಪ್ರಯತ್ನಿಸುತ್ತಿದೆ. ಇದು ಸೃಜನಶೀಲ ಅಭಿವೃದ್ಧಿಯ ಪರಿಕಲ್ಪನೆ ಹೊಂದಿದೆ. ಈ ಹಿನ್ನೆಲೆಯಲ್ಲಿ ತೀರಾ ತುರ್ತು ಎನಿಸುವ, ಜಮೀನ್ದಾರರ ವಿರುದ್ಧ ಬಂಡೇಳುವ ಚಳುವಳಿಯೊಂದಿಗೆ ಇನ್ನೂ ವಿಶಾಲವಾದ ಕಾಣ್ಕೆಯ ಸಾಕಾರಕ್ಕೆ ಇದು ಮನಮಾಡಿತು. ಮುಂದಿನ ವರ್ಷಗಳಲ್ಲಿ ಸಾಮೂಹಿಕ ಉಪವಾಸ, ಸತ್ಯಾಗ್ರಹ, ಧರಣಿ ಮತ್ತು ಇತರ ಚಳುವಳಿಗಳ ಸರಣಿಯೇ ನಡೆಯಿತು. ಈ ಕಾರಣಗಳಿಂದಾಗಿ ವಿವಿಧ ವರ್ಗದ ಜನ ಈ ಚಳುವಳಿಗೆ ಸೇರುವಂತಾಯಿತು. ಕೇವಲ ಐದೇ ವರ್ಷಗಳಲ್ಲಿ ಕಹೇಲ್‌ಗಾಂವ್ ಮತ್ತು ಸುತ್ತಲಿನ ಇತರ ಗ್ರಾಮಗಳಲ್ಲಿ ಜಿಎಂಎಂ ಚಳುವಳಿಗೆ ಉತ್ತಮ ಅಡಿಪಾಯ ಹಾಕಿತು. ಹೀಗೆ ೧೯೮೭ರಲ್ಲಿ ಕಹೇಲ್‌ಗಾಂವ್‌ನಿಂದ ಪಟ್ನಾವರೆಗೆ ಸುಮಾರು ೪೦೦ ಕಿ.ಮೀ ಉದ್ದದ ಬೃಹತ್ ದೋಣಿ ಜಾಥಾವನ್ನು ಸಂಘಟಿಸಿತು.

ಬ್ಯಾನರ್‌ಗಳನ್ನು ಕಟ್ಟಿಕೊಂಡು ಘೋಷಣೆ ಕೂಗುತ್ತಾ ಸಾಗುವ ದೋಣಿಗಳ ಉದ್ದ ಸಾಲು ನೋಡುವುದೇ ವಿಶಿಷ್ಟ ದೃಶ್ಯವಾಗಿತ್ತು.

ಈ ಜಮೀನ್ದಾರರ ಕೈಯಲ್ಲಿ ದಿನನಿತ್ಯ ಸ್ವಲ್ಪ ಸ್ವಲ್ಪವೇ ಸಾಯುವುದಕ್ಕಿಂತ ನಮ್ಮ ಹಕ್ಕುಗಳಿಗಾಗಿ ಒಂದೇ ದಿನ ಸಾಯುವುದು ಒಳ್ಳೆಯದು ಎಂದು ಸಾರ್ವಜನಿಕ ಸಭೆಗಳಲ್ಲಿ ಯಾವತ್ತೂ ಕಾಣಿಸಿಕೊಳ್ಳದ ಹೆಣ್ಣುಮಗಳೊಬ್ಬಳು ಗಂಗಾತಟದಲ್ಲಿ ನಡೆದ ಸಭೆಯಲ್ಲಿ ಧೈರ್ಯವಾಗಿ ಹೇಳಿದಳು. ದೋಣಿ ಜಾಥಾ ಸ್ವಾಗತಿಸಲೆಂದು ಈ ಸಭೆ ಆಯೋಜಿಸಲಾಗಿತ್ತು. ಅಲ್ಲಿಗೆ ಎರಡು ದೋಣಿಗಳು ಬಂದಿದ್ದವು. ಅವುಗಳ ಸಮೀಪವೇ ಲಂಗರು ಹಾಕಿದ್ದ ೫೦ ದೋಣಿಗಳು ಪಟನಾ ಕಡೆ ಹೋಗಲು ತಯಾರಾಗಿದ್ದವು.

ಈ ಹೋರಾಟ ಏಕೆ ಅನಿವಾರ್ಯ ಎಂದು ಕಹೇಲ್‌ಗಾಂವ್‌ನ ಸೋನಿಯಾದೇವಿ ಎಂಬಾಕೆ ಹೀಗೆ ಹೇಳುತ್ತಾಳೆ:

‘ಈ ಹೊಳೆಯಲ್ಲಿ ಮೀನುಗಳು ಇಲ್ಲ. ಇದರಿಂದಾಗಿ ನಾವು ಸಾಲಗಾರರಾಗಿದ್ದೇವೆ. ಜಮೀನ್ದಾರರ ಕ್ರೌರ್ಯ ಹೆಚ್ಚಿದೆ. ಅದು ಎಷ್ಟೆಂದರೆ ನಾವು ಎಲ್ಲವನ್ನು ಬಿಟ್ಟು ಈ ಹೋರಾಟ ಮಾಡುವ ಅನಿವಾರ್ಯತೆ ಉಂಟಾಗಿದೆ. ಹೋರಾಟದಿಂದ ಮಾತ್ರ ನಮಗೆ ಸಲ್ಲಬೇಕಾದ ಪಾಲು ಸಲ್ಲುತ್ತದೆ.

ಹೆಂಗಸರು ಗಂಡಸರಾದಿಯಾಗಿ ಅಹೋರಾತ್ರಿ ಯಾವುದೇ ಭಯವಿಲ್ಲದೇ ಕೆಲಸ ಮಾಡುತ್ತಿರುವುದನ್ನು ಗಂಗಾತೀರದ ಹಾದಿಯುದ್ದಕ್ಕೂ ಕಂಡ ಜನ ಅಚ್ಚರಿಪಟ್ಟರು. ಈ ಘಟನಾವಳಿಗಳನ್ನು ಕುರಿತಂತೆ ‘ಗಂಗಾ ಕೋ ಅವಿರಲ್ ಬಹಾನೇ ದೋ’ (ಗಂಗೆಯನ್ನು ನಿರಂತರ ಹರಿಯಲು ಬಿಡಿ) ಎಂಬ ಹೆಸರಿನ ಪುಸ್ತಕ ಕೂಡ ಬಂತು. ಈ ಜಾಥಾದ ಉದ್ದಕ್ಕೂ

ಡಕಾಯಿತರು ತಂಡದ ಸದಸ್ಯರನ್ನು ಈ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದರು. ಬಹಳಷ್ಟು ಜನ ಈ ಮೀನುಗಾರರ ಹಕ್ಕೊತ್ತಾಯ ಮತ್ತು ಜಿಎಂಎಂದ ಉದ್ದೇಶದಿಂದ ಹೆಚ್ಚು ಪ್ರಭಾವಿತರಾದರು. ಪಟನಾಕ್ಕೆ ಅಭಿಮುಖವಾಗಿ ಹೊರಟ ಬೃಹತ್ ಮೆರವಣಿಗೆ ಯಾವುದೇ ಸಂದರ್ಭದಲ್ಲಿ ಆಕ್ರಮಣಕ್ಕೆ ಗುರಿಯಾಗುವ ಸಾಧ್ಯತೆಯೂ ಇತ್ತು. ಆದರೆ ಜಾಥಾದಲ್ಲಿದ್ದ ಸದಸ್ಯರ ಪ್ರಮಾಣ ಹಾಗೂ ಅವರಲ್ಲಿದ್ದ ಉತ್ಸಾಹ ಇಂಥ ಭಯವನ್ನು ನಿವಾರಿಸಿತು. ಜಿಎಂಎದಲ್ಲಿ ಮೊದಲಿನಿಂದಲೂ ಗುರುತಿಸಿಕೊಂಡಿದ್ದ ಶಾಂತಾದೇವಿ ಎಂಬ ೫೫ ವರ್ಷದ ವಿಧವೆ 'ಏನಾದರಾಗಲೀ, ನಾವು ಹೋರಾಡಿಯೇ ತೀರುತ್ತೇವೆ. ಒಂದು ವೇಳೆ ಈ ಹೋರಾಟದಲ್ಲಿ ಸತ್ತರೆ ತಾಯಿ ಗಂಗೆಯ ಮಡಿಲಲ್ಲಿ ಮಗಳಂತೆ ನಿದ್ರಿಸುತ್ತೇನೆ' ಎಂದು ಶಪಥವನ್ನೇ ಕೈಗೊಂಡಳು. ಲಲಿತಾ ಎಂಬ ಇನ್ನೊಬ್ಬಾಕೆ ಹೇಳಿದ್ದು: 'ನಮ್ಮ ಈ ಹೋರಾಟ ಬಂದೂಕು ಮತ್ತು ಬುಲೆಟ್‌ನ ವಿರುದ್ಧ. ಹಾಗಾಗಿ ತತ್‌ಕ್ಷಣ ದಿಢೀರ್ ಜಯ ಸಾಧ್ಯವಾಗದು. ನಾವು ಹೋರಾಡುತ್ತಿದ್ದೇವೆ. ನಿಧಾನವಾಗಿ ಗೆಲ್ಲುತ್ತೇವೆ'.

ಹದಿನಾಲ್ಕು ದಿವಸಗಳ ಕಾಲ ಈ ಮೆರವಣಿಗೆ ಪಟ್ನಾದತ್ತ ಸಾಗಿತು. ಗಂಗೆಯ ಅಲೆಗಳ ಜೊತೆ ಜೊತೆಯಲ್ಲಿ ಮೊರೆದ ಕ್ರಾಂತಿಕಾರಿ ಹಾಡುಗಳ ಸಾಲುಗಳು ಎಲ್ಲರ ಗಮನ ಸೆಳೆದವು. 'ಗಂಗಾ ಕೋ ಅವಿರಲ್ ಬಹಾನೇ ದೋ' ಕೃತಿಯ ಸಹಕರ್ತೃ ಹಾಗೂ ಚಳುವಳಿಯ ಕಾರ್ಯಕರ್ತ ಯೋಗೇಂದ್ರ 'ಏನೋ ಅದ್ಭುತವಾದದ್ದು ಸಂಭವಿಸಲಿದೆ ಎಂದು ಗಂಗಾತೀರದ ಉದ್ದಕ್ಕೂ ನಿಂತಿದ್ದ ಜನರಿಗೆ ಅನ್ನಿಸಿತ್ತು' ಎಂದು ಬರೆದರು.

ಈ ದೋಣಿ ಜಾಥಾ ಪಟ್ನಾದ ಗಾಂಧಿ ಘಾಟ್‌ನಲ್ಲಿ ಕೊನೆಗೊಂಡಿತು. ಇಲ್ಲಿ ಗಂಗಾನದಿ ಬಹುದೊಡ್ಡ ಸಾಗರದಂತೆ ದಿಗಂತದತ್ತ ಚಾಚುತ್ತದೆ. ಚಳುವಳಿಗಾರರು ಜಮೀನ್ದಾರರಿಗೆ ಇನ್ನು ಮುಂದೆ ಸುಂಕ ಕೊಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿದರು. ಜಿಎಂಎ ಮೀನುಗಾರರ ಆರ್ಥಿಕ ಸುಧಾರಣೆಗೆ ಮಾತ್ರ ಸೀಮಿತವಾಗಿರಲಿಲ್ಲ. ಆದುದರಿಂದ ಈ ಜಮೀನ್ದಾರರ ಮೇಲೆ ಕೋಪ ಕಕ್ಕುವುದಷ್ಟೇ ಸಾಕಾಗದು. ಈ ಚಳುವಳಿ ನದಿಯ ಹಕ್ಕಿಗೆ ಸಂಬಂಧಿಸಿದ್ದು. ಆದುದರಿಂದ ನದಿಯನ್ನು ರಕ್ಷಿಸಬೇಕಾಗಿದೆ.

ಪಟ್ನಾದಲ್ಲಿ ನಡೆದ ಜಿಎಂಎ ರ್‍ಯಾಲಿಯಲ್ಲಿ ಈ ಕುರಿತು ಹಕ್ಕೊತ್ತಾಯಗಳ ಪಟ್ಟಿ ಮಂಡಿಸಲು ಅವಕಾಶ ದೊರೆತಂತಾಯಿತು.

೧೯೮೫ರಲ್ಲಿ ಆರಂಭಗೊಂಡ ಗಂಗಾ ಆಕ್ಷನ್ ಪ್ಲಾನ್ ಒಂದು ವ್ಯರ್ಥ ಪ್ರಯತ್ನ. ಗಂಗಾ ನದಿಯ ತೀರದ ಕೈಗಾರಿಕಾ ಮತ್ತು ನಗರಾಭಿವೃದ್ಧಿ ಯೋಜನೆಗಳಲ್ಲಿ ಸಮಗ್ರ ಬದಲಾವಣೆಗಳು ಆಗಬೇಕಾಗಿವೆ.

ಮಲಿನಗೊಳಿಸುವ ಬೃಹತ್ ಶಾಖೋತ್ಪನ್ನ ಸ್ಥಾವರಗಳಿಗಿಂತ ವಿವಿಧ ಕಡೆ ಸಣ್ಣ ಸಣ್ಣ ಪ್ರಮಾಣದ ಶಕ್ತಿ ಉತ್ಪಾದನಾ ಸ್ಥಾವರಗಳ ನಿರ್ಮಾಣ ಆಗತಕ್ಕದ್ದು. ಇದರಿಂದ ಜನರನ್ನು ಸ್ಥಳಾಂತರಿಸಬೇಕಾದ ಅವಕಾಶ ಕಡಿಮೆ ಇರುತ್ತದೆ. ಇದರ ಆರ್ಥಿಕ ಲಾಭ ಹೆಚ್ಚು ಜನರನ್ನು ತಲುಪುತ್ತದೆ. ನಮ್ಮಲ್ಲಿ ದನದ ಸಗಣಿ ಹೆಚ್ಚಿನ ಪ್ರಮಾಣದಲ್ಲಿ ದೊರೆಯುವುದರಿಂದ ಈ

ಸಂಪನ್ಮೂಲಗಳನ್ನು ಶಕ್ತಿಯು ಹಾಗೂ ಗೊಬ್ಬರದ ಅಗತ್ಯಗಳಿಗಾಗಿ ಪರಿಣಾಮಕಾರಿಯಾಗಿ ಬಳಸಬಹುದಾಗಿದೆ. ಒಂದು ಅಂದಾಜಿನ ಪ್ರಕಾರ ಕಾರ್ಖಾನೆಗಳಲ್ಲಿ ತಯಾರಾಗುತ್ತಿರುವ ಮೂರುಪಟ್ಟಿನಷ್ಟು ಸಾರಜನಕ ಮತ್ತು ಫಾಸ್ಫೇಟ್‌ಗಳನ್ನು ಇದರಿಂದ ತಯಾರಿಸಬಹುದು.

ಗಂಗಾನದಿಯಲ್ಲಿ ಪ್ರವಾಹದ ಭೀಕರತೆಯನ್ನು ಕಡಿಮೆ ಮಾಡುವ ಸಲುವಾಗಿ ಹಿಮಾಲಯದ ಪ್ರದೇಶಗಳಲ್ಲಿ ಅರಣ್ಯ ನಾಶವನ್ನು ಸಂಪೂರ್ಣವಾಗಿ ತಪ್ಪಿಸಬೇಕಾಗಿದೆ.

'ಕಪಡಾಜಾಲ್'ನ್ನು ಪ್ರತಿಬಂಧಿಸಬೇಕು. ಇವು ಸೊಳ್ಳೆ ಪರದೆಯ ರೀತಿಯಲ್ಲಿಯೇ ಇರುವ ನೈಲಾನ್ ನೆಟ್‌ಗಳು. ಇವು ಸುಮಾರು ೧೦೦–೨೦೦ ಮೀಟರ್ ಉದ್ದವಿರುತ್ತವೆ. ಬಿಹಾರದ ಕೆಲವು ಕಡೆ ಮೀನುಗಾರರು ಈ ಬಲೆಗಳನ್ನು ಬಳಸಲು ಆರಂಭಿಸಿದ್ದಾರೆ. ಇವು ಮೀನುಗಳು ತತ್ತಿ ಹಾಕುವ ಜಾಗವನ್ನು ನಾಶಪಡಿಸುತ್ತವೆ. ಈ ಬಲೆಗಳು ದೊಡ್ಡ ಪ್ರಮಾಣದಲ್ಲಿ ನೀರಿನಲ್ಲಿ ಬೆಳೆಯುವ ಕಳೆಯನ್ನು ಎಳೆದು ಬಿಸಾಕುತ್ತವೆ. ಇವು ನೈಸರ್ಗಿಕವಾಗಿ ಗಂಗಾ ಶುದ್ಧೀಕರಣಕ್ಕಾಗಿ ಅಗತ್ಯವಿರುವ ಸಸ್ಯಗಳು.

ಗಂಗೆಗೆ ಕಟ್ಟಲಾದ ಫರಕ್ಕಾ ಬ್ಯಾರೇಜನ್ನು ಒಡೆಯಬೇಕು. ಇದಕ್ಕೆ ಬಾಗಿಲುಗಳಿವೆ. ಇವು ತೆರೆಯುತ್ತವೆ ಹಾಗೂ ಮುಚ್ಚುತ್ತವೆ. ೧೯೬೦ರಲ್ಲಿ ಈ ಯೋಜನೆಯ ಹಂತದಲ್ಲಿ ಹಲವು ಎಂಜಿನಿಯರ್‌ಗಳು ಇದನ್ನು ವಿರೋಧಿಸಿದ್ದರು. ೧೯೭೫ರಲ್ಲಿ ಇದರ ಕಾಮಗಾರಿ ಪೂರ್ಣವಾದ ನಂತರ, ಇದರಿಂದಾಗಿ ಹೆಚ್ಚು ಪ್ರಮಾಣದಲ್ಲಿ ಪ್ರವಾಹ ಉಂಟಾಗುತ್ತಿದೆ ಮತ್ತು ಹೆಚ್ಚು ಹೂಳು ತುಂಬುತ್ತಿದೆ ಎಂದು ತಿಳಿದುಬಂದಿತು. ಇದು ಮೀನುಗಾರರ ಜೀವನಕ್ಕೂ ಧಕ್ಕೆಯನ್ನುಂಟುಮಾಡಿದೆ. ಏಕೆಂದರೆ, ಮೀನುಗಾರರು ಈ ಬ್ಯಾರೇಜಿನ ಒಂದು ಬದಿಯಿಂದ ಮತ್ತೊಂದು ಬದಿಗೆ ಚಲಿಸಲಾರರು.

ಈ ದೋಣಿ ಜಾಥಾದಿಂದ ಜಿಎಂಎ ಈ ಪ್ರದೇಶದ ರಾಜಕೀಯ ಭೂಪಟದಲ್ಲಿ ಕಾಣಿಸಿಕೊಳ್ಳುವಂತಾಯಿತು. ಕಹೇಲ್‌ಗಾಂವ್ ಸುತ್ತ ಸಂಘರ್ಷಕ್ಕೆ ಹೆಚ್ಚಿನ ಕಸುವು ಬರತೊಡಗಿತು. ೧೯೮೯ರ ಡಿಸೆಂಬರ್‌ನಲ್ಲಿ ಜಿಎಂಎನ ನೂರಾರು ಸದಸ್ಯರು ಜಮೀನ್ದಾರರ ಕಚೇರಿ ನಿಯಂತ್ರಣ ಪಡೆದುಕೊಂಡರು. ಕಾಗ್ಜಿ–ಟೋಲಾದ ಹಳೆಯ ಕಟ್ಟಡ ಜಮೀನ್ದಾರಿ ಶಕ್ತಿಯ ಸಾಂಕೇತಿಕ ಕೇಂದ್ರವಾಗಿತ್ತು. ನೂರಾರು ಹೆಣ್ಣು–ಗಂಡುಗಳು ಜೆ.ಪಿ.ಆಂದೋಲನದ ಟ್ರೇಡ್‌ಮಾರ್ಕ್ ಘೋಷಣೆಗಳನ್ನು ಕೂಗುತ್ತಾ ಅತ್ಯಂತ ಶಾಂತಿಯುತವಾಗಿ ಈ ಕಚೇರಿ ಪ್ರವೇಶಿಸಿದರು. 'ಹಮ್ಲಾ ಚಾಹೆ ಜೈಸಾ ಹೋಗಾ, ಹಾತ್ ಹಮಾರಾ ನಹಿ ಉಠೇಗಾ' (ಎಂತಹುದೇ ಆಕ್ರಮಣ ನಡೆಯಲಿ; ನಾವು ಕೈ ಎತ್ತಲಾರೆವು)

ಆ ವೇಳೆಗಾಗಲೇ ಜಿಎಂಎನ ಶಕ್ತಿ ಹಾಗೂ ದೃಢ ನಿರ್ಧಾರ ಬೇರೆ ಬೇರೆ ಕ್ರಿಯೆಗಳ ಮೂಲಕ ಪ್ರತಿಷ್ಠಾಪಿತವಾಗಿತ್ತು. ಜಮೀನ್ದಾರರ ಬಾಡಿಗೆ ಗೂಂಡಾಗಳು ಹೆಚ್ಚಿನ ಪ್ರತಿರೋಧವನ್ನೇನೂ ಒಡ್ಡಲಿಲ್ಲ. ಹಿಂದೆ ಜಮೀನ್ದಾರರ ಕಚೇರಿಯಾಗಿದ್ದ ಕಟ್ಟಡ ಈಗ ಜಿಎಂಎನ ಖಾಯಂ ಕಾರ್ಯಾಲಯವಾಯಿತು. ಹೊರಗಿನಿಂದ ಬಂದ ಕಾರ್ಯಕರ್ತರಾದ ಅನಿಲ್ ಪ್ರಕಾಶ್ ಮತ್ತು ರಾಮ್‌ಶರಣ್ ಒತ್ತುಕೊಟ್ಟ ಕಾರಣವಾಗಿ ಈ ಅಹಿಂಸಾಮಾರ್ಗವನ್ನೇ

ಹಿಡಿಯಲಾಯಿತು ಎಂದು ಮೀನುಗಾರರ ಸಮುದಾಯದಿಂದಲೇ ಬಂದ, ಕಾರ್ಯಕರ್ತ ರಾಜ್‌ಕುಮಾರ್ ಆ ನಂತರದ ದಿನಗಳಲ್ಲಿ ನೆನಪುಮಾಡಿಕೊಂಡರು. ಹೀಗೆ ಆರಂಭವಾದದ್ದು ಈಗ ಸಮುದಾಯದ ಬದ್ಧತೆಯಾಗಿ ಹೋಯಿತು. ಈ ಕಚೇರಿಯನ್ನು ಆಕ್ರಮಿಸಿಕೊಂಡ ನಂತರ ಮತ್ತೆ ಪಟ್ನಾದ ಗಾಂಧಿಘಾಟ್‌ನಲ್ಲಿ ಜನಸ್ತೋಮ ಯಶಸ್ವಿಯಾಗಿ ಸೇರಿತು. ಈ ಸಂಘಟನೆಯ ಅಸ್ತಿತ್ವ ರಾಜಧಾನಿಯ ಜನರಿಗೆ ಅರಿವಾಗಲಿ ಎಂಬುದು ಅವರ ಉದ್ದೇಶವಾಗಿತ್ತು.

ಮೇ ತಿಂಗಳಿನಲ್ಲಿ ನೆತ್ತಿ ಸುಡುವ ಬಿಸಿಲನ್ನೂ ಲೆಕ್ಕಿಸದೆ ಪಟ್ನಾದ ಗಾಂಧಿಘಾಟ್‌ನಲ್ಲಿ ಜನ ಸೇರಿದ್ದರು. ಒಂದು ಕಡೆ ಬಿಸಿಲ ತಾಪವಾದರೆ ಮತ್ತೊಂದೆಡೆ ದಾಹ ಮತ್ತು ಹಸಿವು ಬಾಧಿಸುತ್ತಿತ್ತು. ಇದ್ಯಾವುದನ್ನೂ ಲೆಕ್ಕಿಸದೇ ಜನರು ಉತ್ಸಾಹದಿಂದ ಘೋಷಣೆ ಕೂಗುತ್ತಿದ್ದರು. 'ಗಂಗಾನದಿ ಪೂರ್ಣವಾಗಿ ಸುಂಕ ಮುಕ್ತವಾಗಲಿ', 'ನೀರಿನ ಜಮೀನ್ದಾರಿ ಪದ್ಧತಿ ರದ್ದಾಗಲಿ' 'ಬಾಟಾ ಶೂ ಕಾರ್ಖಾನೆ ಮುಚ್ಚಿ', 'ಫರಕ್ಕಾ ಬ್ಯಾರೇಜು ಒಡೆಯಿರಿ' ಇತ್ಯಾದಿ ಘೋಷಣೆ ಮುಗಿಲುಮುಟ್ಟುತ್ತಿತ್ತು. ಜೆಎಂಎ ಆಹ್ವಾನಿಸಿದ್ದ ಎರಡು ದಿನಗಳ ಈ ಸಭೆಗೆ ಬಿಹಾರದ ಬೇರೆ ಬೇರೆ ಭಾಗಗಳಿಂದ ಮೀನುಗಾರರು, ರೈತರು, ನೇಕಾರರು, ಕುಶಲಕರ್ಮಿಗಳು, ವಿದ್ಯಾರ್ಥಿಗಳು, ಬುದ್ಧಿಜೀವಿಗಳು, ಶಿಕ್ಷಕರು, ಕಲಾವಿದರು ಆಗಮಿಸಿದ್ದರು.

ಸಂತಾಲ ಆದಿವಾಸಿಗಳ ಹಾಡಿನಿಂದ ಸಭೆ ಆರಂಭವಾಯಿತು. ಈ ಹಾಡಿನ ಭಾವಾರ್ಥ ಹೀಗಿದೆ:

ಕಾಡು ಇದ್ದಾಗ ಆಹಾರ ಮತ್ತು ನೀರು ನಮಗೆ ಸುಲಭವಾಗಿ ದೊರೆಯುತ್ತಿತ್ತು, ಮನೆ ಕಟ್ಟಿಕೊಳ್ಳಲು ಮರ ದೊರೆಯುತ್ತಿತ್ತು, ಈ ಕಾಡಿನಲ್ಲಿ ಹೇರಳವಾದ ಇತರೇ ಪದಾರ್ಥಗಳು ಇದ್ದು,ಇದನ್ನು ಮಾರುಕಟ್ಟೆಯಲ್ಲಿ ಮಾರಿ ಅಗತ್ಯ ಪದಾರ್ಥಗಳನ್ನು ಕೊಳ್ಳುತ್ತಿದ್ದೆವು. ಈಗ ಕಾಡು ನಾಶವಾಗಿದೆ. ನಮ್ಮ ಜೀವನವೂ ನಾಶವಾಗಿದೆ. ನಮಗೆ ತಿನ್ನಲು, ಉಡಲು ಸಾಕಷ್ಟಿಲ್ಲ

ಸಂತಾಲರ ಮತ್ತೊಂದು ಹಾಡಿನಲ್ಲಿ ಆದಿವಾಸಿಗಳೆಲ್ಲ ಶಿಕ್ಷಿತರಾಗುವಂತೆ ಮತ್ತು ನಾಡಿಗೆ ಹೊಸ ದಿಕ್ಕುತೋರುವಂತೆ ಕೇಳಲಾಗಿತ್ತು. ಎಂಟು ವರ್ಷಗಳ ಅವಧಿಯಲ್ಲಿ ಜೆಎಂಎ ಹೋರಾಟದ ಯಶಸ್ಸನ್ನು ಅನಿಲ್ ಪ್ರಕಾಶ್ ಹೀಗೆ ನೆನಪಿಸಿಕೊಳ್ಳುತ್ತಾರೆ: '....ಕಹೇಲ್‌ಗಾಂವ್‌ನ ಸುತ್ತಲಿನ ಸುಮಾರು ೩೦ ಕಿಲೋಮೀಟರ್ ಫಾಸಲೆಯಲ್ಲಿ ಎಲ್ಲಿಯೂ ಮೀನುಗಾರರು ಸುಂಕ ನೀಡಲಿಲ್ಲ. ಜಮೀನ್ದಾರರ ಬಂದೂಕುಗಳಿಗೆ ಬೆದರುತ್ತಿದ್ದ ಜನ ಅವರಿಗೇ ಸವಾಲೆಸೆದಿದ್ದರು. ಪಟ್ನಾದಿಂದ ಫರಕ್ಕಾವರೆಗೆ ಹೊಸ ಜಾಗೃತಿ ಮೂಡಿತ್ತು. ಮೀನುಗಾರರ ಸಹಕಾರ ಸಂಘಗಳ ಮಾಫಿಯಾಗಳಿಗೂ ತಲೆಬಾಗಲಿಲ್ಲ. ಗಂಗಾನದಿಯ ಉದ್ದಕ್ಕೂ ಬಿಹಾರ ಸರ್ಕಾರ ಸುಮಾರು ೧೦ ಲಕ್ಷ ರುಪಾಯಿ ಸುಂಕ ಸಂಗ್ರಹಿಸುತ್ತದೆ. ಆದರೆ ಸೊಸೈಟಿಗಳ ಗುತ್ತಿಗೆದಾರರು ಈ ಮೀನುಗಾರರಿಂದ ಕೋಟಿಗಟ್ಟಲೆ ಹಣ ಕಸಿಯುತ್ತಾರೆ. ಜನರ ಹಿತದೃಷ್ಟಿಯಿಂದ ಸರ್ಕಾರ ತೆರಿಗೆ ಸಂಗ್ರಹ ನಿಲ್ಲಿಸಬೇಕಾಗಿದೆ

ಈ ಸಭೆಯಲ್ಲಿ ಭಾಗವಹಿಸಿದವರೆಲ್ಲರೂ ನದಿ, ಸಾಗರ, ಪರ್ವತ, ಕಾಡು, ಭೂಮಿ ಮತ್ತು ಗಾಳಿಯ ವಾಣಿಜ್ಯೀಕರಣದ ವಿರುದ್ಧ ಹೋರಾಡುವುದಾಗಿ ಪ್ರತಿಜ್ಞೆ ಸ್ವೀಕರಿಸಿದರು.

ನಿಸರ್ಗದ ಕೊಡುಗೆಗಳ ಬಿಡುಗಡೆಗಾಗಿ ಈ ಹೋರಾಟ ನಿರಂತರ ಎಂದು ಘೋಷಿಸಿದರು. ಇದರೊಂದಿಗೆ ಸಭೆ ಮುಕ್ತಾಯವಾಯಿತು. ಶೋಷಣಾಮುಕ್ತ, ಸಹಕಾರ, ಸಮಾನತೆ, ಪ್ರೀತಿ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳ ಸಮಾಜ ಸ್ಥಾಪನೆಗೆ ಕೆಲಸ ಮಾಡುವುದಾಗಿ ಸಂಕಲ್ಪ ಮಾಡಿದರು.

ಆ ವರ್ಷದಲ್ಲೇ ಬಿಹಾರದ ಮುಖ್ಯಮಂತ್ರಿ ಲಾಲೂಪ್ರಸಾದ್ ಯಾದವ್ ಅಧಿಕೃತವಾಗಿ ಜಲ್‌ಕರ್ ಜಮೀನ್ದಾರಿಕೆಯನ್ನು ರದ್ದುಮಾಡಿದರು. ಇದರ ಜೊತೆ ನದಿ, ಉಪನದಿಗಳಲ್ಲಿ ನಡೆಸುವ ಮೀನುಗಾರಿಕೆಗೆ ವಿಧಿಸಲಾಗಿದ್ದ ಎಲ್ಲ ಸುಂಕಗಳನ್ನು ರದ್ದುಪಡಿಸಿದರು. ಈ ವಿಜಯದೊಂದಿಗೆ ಜಿಎಂಎ ಅನಿಶ್ಚಿತತೆಯ ಮತ್ತೊಂದು ಹಂತಕ್ಕೆ ಹೊರಳಿಕೊಂಡಿತು. ಇದು ವಿಚಿತ್ರವಾದ ಸೋಮಾರಿತನ ಅಥವಾ ಜಡತ್ವಕ್ಕೆ ದಾರಿಯಾಯಿತು.

ಕೈಗೂಡದ ಪ್ರಯತ್ನಗಳು:

ಈ ಹಿಂದೆ ಆಕ್ರಮಿಸಿಕೊಳ್ಳಲಾದ ಜಮೀನ್ದಾರಿ ಕಚೇರಿ ಮತ್ತೊಮ್ಮೆ ವಾರ್ಷಿಕೋತ್ಸವದ ಸಿದ್ಧತೆ ನಡೆಸಿತು. ಜಿಎಂಎಗೆ ಆಗ ಹನ್ನೆರಡರ ಪ್ರಾಯ. ಸ್ವಲ್ಪ ಎತ್ತರವಾದ ಆದರೆ ತಗ್ಗು ದಿಣ್ಣೆಯ ಪ್ರದೇಶ ಸಭೆಯ ವೇದಿಕೆಯಾಯಿತು. ಜೊತೆಗೆ ಇದು ತೆರೆದ ಹಜಾರವಾಗಿದ್ದು ಮಳೆಯಿಂದ ಒದ್ದೆಯಾಗಿತ್ತು. ಹಳೆಯ ಜಮೀನ್ದಾರಿ ಶಕ್ತಿಯ ಎಲ್ಲ ಅವಶೇಷಗಳನ್ನು ತೆಗೆಯಲಾಗಿತ್ತು. ೧೯೯೪ರ ಫೆಬ್ರವರಿ ೨೨ರಂದು ಈ ವಾರ್ಷಿಕೋತ್ಸವ ತೀರ ಸರಳವಾಗಿ ನಡೆಯಿತು.

ಬೇರೆ ಬೇರೆ ಹಳ್ಳಿಗಳಿಂದ ಸಭೆಗೆ ಪ್ರತಿನಿಧಿಗಳು ಆಗಮಿಸಿದ್ದರು. ಮತ್ತೊಂದು ವರ್ಷವೂ ಕಳೆಯಿತು. ಆದರೆ ಜಿಎಂಎನ ಉದ್ದೇಶಗಳನ್ನು ಮುಂದುವರೆಸಲು ಏನೂ ಮಾಡಲಾಗಲಿಲ್ಲ ಎಂಬ ವಿಷಾದವೂ ಇತ್ತು. ಬಹುತೇಕ ಮಂದಿ ಈ ಜಡ ಸ್ಥಿತಿಯನ್ನು ಒಂದು ರೀತಿಯಲ್ಲಿ ಒಪ್ಪಿಕೊಂಡುಬಿಟ್ಟಿದ್ದರು. ಇನ್ನುಳಿದವರು ಪರಿಸ್ಥಿತಿಯನ್ನು ವಿಶ್ಲೇಷಿಸಿ, ಈ ಜಡತ್ವಕ್ಕೆ ಕಾರಣ ಪತ್ತೆ ಮಾಡಿ ಅರ್ಥೈಸಿಕೊಳ್ಳಲು ಯತ್ನಿಸಿದರು.

೯೦ರ ದಶಕದ ಆದಿಯಲ್ಲಿ ದೇಶದ ಮೂಲೆಮೂಲೆಗಳಿಂದ ಜಿಎಂಎ ಪ್ರತಿನಿಧಿಸುತ್ತಿದ್ದ ಉದ್ದೇಶಗಳಿಗೆ ಬೆಂಬಲ ಸೂಚಿಸಿ ಜನ ಪತ್ರ ಬರೆಯುತ್ತಿದ್ದರು. ಗಂಗಾ ಮುಕ್ತಿಯ ಪರಿಕಲ್ಪನೆ ನದಿಯ ಉದ್ದಕ್ಕೂ ಮುಂದುವರೆಯುತ್ತಲೂ ಇತ್ತು. ಆ ಚಲನಶೀಲತೆಗೆ ಏನಾಗಿದೆ?

ಅನೇಕ ಕಡೆ ಸಂಘಟನೆಯನ್ನು ಸರಿಯಾಗಿ ರಚಿಸದಿದ್ದ ಸಂದರ್ಭದಲ್ಲಿಯೇ ತೆರಿಗೆ ವಿರೋಧಿ ಚಳುವಳಿ ಅತಿ ಕಡಿಮೆ ಅವಧಿಯಲ್ಲಿ ಯಶಸ್ವಿಯಾಗಿದ್ದು ಯೋಗೇಂದ್ರರಿಗೆ ಅಚ್ಚರಿ ಎನ್ನಿಸುತ್ತಿತ್ತು.

ತೆರಿಗೆ ರದ್ದತಿ ಮತ್ತು ಜಮೀನ್ದಾರಿಕೆ–ಇವೆರಡೂ ಮೀನುಗಾರರಿಗೆ ನೇರವಾಗಿ ಸಂಬಂಧಿಸಿದ ವಿಷಯ. ಆದರೆ, ಫರಕ್ಕಾ ಮತ್ತು ಪರಿಸರ ಮಾಲಿನ್ಯ ಅವರಿಗೆ ಪರೋಕ್ಷವಾಗಿ ಸಂಬಂಧಿಸಿದ ವಿಷಯ. ಮೀನುಗಾರಿಕೆ ಇರುವ ಮತ್ತಷ್ಟು ಹಳ್ಳಿಗಳನ್ನು ಇದರಲ್ಲಿ

ತೊಡಗಿಸಬೇಕಾಗಿತ್ತು; ಅಥವಾ ಈ ವಿಷಯದಲ್ಲಿ ಹೆಚ್ಚು ಪ್ರಭಾವಶಾಲಿಯಾಗುವಂತೆ ಮಾಡಬಹುದಿತ್ತು. ಆದರೆ ಬೇರೆ ಬೇರೆ ಹಳ್ಳಿಗಳು ಈ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಲು ಸಾಧ್ಯವಾಗಲಿಲ್ಲ. ಜಿಎಂಎ ಯಶಸ್ಸಿನ ಶಿಖರದಲ್ಲಿದ್ದಾಗ, ಈ ಯಶಸ್ಸು ಎಲ್ಲಕಡೆ ಪಸರಿಸುತ್ತದೆ ಎಂದು ಭಾವಿಸಲಾಗಿತ್ತು. ಆದರೆ ಮುಂದಿನ ಬೆಳವಣಿಗೆ ಆ ರೀತಿ ಇರಲಿಲ್ಲ. ಕಾರ್ಯಕರ್ತರ ಕೊರತೆಯಿಂದ ಈ ಆಂದೋಲನ ತಣ್ಣಗಾಯಿತು

ಈ ಚಳುವಳಿಯಲ್ಲಿನ ಮಧ್ಯಮವರ್ಗೀಯ ಕಾರ್ಯಕರ್ತರಲ್ಲಿ ಅನುಮಾನಗಳಿದ್ದವು. ಪ್ರಾಯಶಃ ಈ ಜನ ತೀರಾ ಹೆಚ್ಚು ಜವಾಬ್ದಾರಿ ವಹಿಸಿಕೊಂಡ ಕಾರಣ ಗ್ರಾಮೀಣ ಕಾರ್ಯಕರ್ತರ ಬೆಳವಣಿಗೆ ಕುಂಠಿತವಾಗುವಂತೆ ಆಯಿತೆ? ಬಹುತೇಕ ಸಾಮಾಜಿಕ ಮತ್ತು ರಾಜಕೀಯ ವಿಷಯಗಳ ವಿಶ್ಲೇಷಣೆ ಮಾಡುತ್ತಿದ್ದವರು ಈ ಮಧ್ಯಮ ವರ್ಗದ ಜನ. ಇಂತಹ ಕಡೆ ಮೀನುಗಾರರು ಕೇವಲ ಪ್ರೇಕ್ಷಕರು ಮಾತ್ರವೇ ಆಗಿರುತ್ತಿದ್ದರು.

ಸ್ವತಃ ಮೀನುಗಾರರೇ ಆಗಿರುವ ರಾಜ್‌ಕಿಶೋರ್ ಹೀಗೆ ಹೇಳುತ್ತಾರೆ:'ಮೀನು ಏಕೆ ಕಡಿಮೆಯಾಗುತ್ತದೆ? ಕಾರ್ಖಾನೆಗಳ ತ್ಯಾಜ್ಯ, ಫರಕ್ಕಾ ಬ್ಯಾರೇಜು, ಹೆಚ್ಚಿನ ಕೊಯ್ಲು ಇತ್ಯಾದಿ ಕಾರಣ ಎಂಬುದನ್ನು ಕೆಲವರಿಗೆ ಅರ್ಥಮಾಡಿಸಲು ಜಿಎಂಎ ಸಹಾಯ ಮಾಡಿತ್ತು. ಇದನ್ನು ತಡೆಯುವ ಮಾರ್ಗ ಕಂಡುಕೊಂಡು ಮುಂದಿನ ಹಾದಿಯನ್ನು ನಿರ್ಧರಿಸುವುದು ಮುಖ್ಯ ವಿಷಯವಾಗಬೇಕಿತ್ತು. ಇಲ್ಲದಿದ್ದರೆ ಮೀನು ಕ್ಷೀಣಿಸುವುದನ್ನು ಯಾರೂ ತಡೆಯಲಾರರು. ಇದರಿಂದ ಜೀವನ ನಡೆಸುವುದು ಹೆಚ್ಚು ಹೆಚ್ಚು ಕಷ್ಟವಾಗಬಹುದು'

ಇಂತಹ ಸಮಯದಲ್ಲಿ ಆಂದೋಲನದ ಯಶಸ್ಸಿನ ಬಗ್ಗೆ ಆಲೋಚಿಸುವುದು ಸಾಧ್ಯವಾಗುತ್ತದೆ. ಮೀನುಗಾರರ ಒಳಗೇ ಇದ್ದ ಜಾತಿ, ಉಪಜಾತಿ ಮತ್ತು ಈ ರೀತಿಯ ಅನೇಕ ತೊಡಕುಗಳನ್ನು ಜಿಎಂಎ ನಿವಾರಿಸಿತ್ತು. ಜಾತಿ, ಉಪಜಾತಿಗಳ ಮಿಲನ ವಾಹಿನಿ (ಯುವ ಛಾತ್ರವಾಹಿನಿ, ಜೆ.ಪಿ.ಚಳುವಳಿ) ಕಾರ್ಯಕರ್ತರಿಗೆ ಸಂತಸವನ್ನೇ ತಂದಿತ್ತು. ಜಾತಿ ಬಿಡಿ-ಜಾತಿ ಪದ್ಧತಿ ರದ್ದತಿ ಇವರ ರಾಜಕಾರಣದ ಒಂದು ಅಭಿಪ್ರಾಯವೂ ಆಗಿತ್ತು. ಅಂತರಜಾತಿ ವಿವಾಹಕ್ಕೆ ಪ್ರೋತ್ಸಾಹ ಸಿಗದೆ ಇದು ಸಂಪೂರ್ಣ ಯಶಸ್ವಿಯಾಗಲಿಲ್ಲ.

ಆದರೆ ಈ ಚಳುವಳಿಯಲ್ಲಿ ಮಹಿಳೆಯರು ಅಪಾರ ಪ್ರಮಾಣದಲ್ಲಿ ತೊಡಗಿಕೊಂಡರು. ಅವರಲ್ಲಿ ಉಂಟಾದ ಜಾಗೃತಿ, ಅರಿವು, ನಾಯಕತ್ವದ ಉದಯ ಜಿಎಂಎ ಕಾರ್ಯಕರ್ತರ ಅತೀವ ಸಮಾಧಾನಕ್ಕೆ ಕಾರಣವಾಗಿತ್ತು.

ಈ ನಡುವೆ ಕಹೇಲ್‌ಗಾಂವ್ ಮತ್ತು ಅದರ ಸುತ್ತಲಿನ ಪ್ರದೇಶಗಳಲ್ಲಿ ಡಕಾಯಿತರ ಹಾವಳಿಯೂ ಹೆಚ್ಚಿತು. ಇದಕ್ಕೆ ಕಾರಣವನ್ನು ಪಾರ್ವತಿದೇವಿ ಹೀಗೆ ಹೇಳುತ್ತಾಳೆ: 'ಆಂದೋಲನ ಈಗ ನಿಧಾನಗತಿಯಲ್ಲಿ ಸಾಗುತ್ತಿದೆ. ಚಳುವಳಿಯ ಒಳಗೆ ಭಿನ್ನಮತ ಇದೆ. ಇಲ್ಲಿರುವವರೆಲ್ಲ ಮೀನುಗಾರರೇ. ಆದರೆ ಇಡೀ ಹಳ್ಳಿ ಚಳುವಳಿಯಲ್ಲಿ ಭಾಗವಹಿಸಲೂ ಇಲ್ಲ, ಬೆಂಬಲಿಸಲೂ ಇಲ್ಲ'.

ಹಳೆಯ ಜಮೀನ್ದಾರರಿಗಿಂತಲೂ ಕೆಟ್ಟವರಾದ ಹೊಸ ಅಪರಾಧಿಗಳು ಹುಟ್ಟಿಕೊಂಡದ್ದನ್ನು ಕುರಿತು ರಾಜಕುಮಾರ್ ಸೈನಿ ಅನಿವಾರ್ಯವಾದ ಕೋಪ ತೋರಿಸುತ್ತಾರೆ:

'ಈ ಬಗ್ಗೆ ಸಂಘಟನೆ ಏನೇ ಕ್ರಮ ತೆಗೆದುಕೊಂಡರೂ ನಮ್ಮನ್ನು ಕೊಲ್ಲಲಾಗುತ್ತದೆ. ನಾವು ಸತ್ತರೆ, ನಮ್ಮ ಮಕ್ಕಳೂ ಸಾಯುತ್ತಾರೆ. ಇದರಲ್ಲಿ ಮುಖಂಡತ್ವ ವಹಿಸುವವರು ಯಾರೇ ಆಗಲಿ ಅವರೂ ಸಾಯುತ್ತಾರೆ. ಸರ್ಕಾರ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ನನಗೆ ಮುಂಚೆ ಈ ಬಗ್ಗೆ ತಲೆನೋವು ಇರಲಿಲ್ಲ. ಈಗ ಇದೆ. ಕೆಲಸ ಮಾಡುವವರ ಕಾಲೆಳೆಯುತ್ತಾರೆ.... ನಾನು ಹೆಚ್ಚು ಕೆಲಸ ಮಾಡುತ್ತೇನೆ. ಆದರೆ ಎಲ್ಲರೂ ನನ್ನನ್ನು ಟೀಕಿಸುತ್ತಾರೆ'.

೧೯೯೪ರ ವೇಳೆಗೆ ಡಂಕೆಲ್ ಪ್ರಸ್ತಾವನೆಯ ವಿಷಯ ದೇಶದೆಲ್ಲೆಡೆ ಚರ್ಚೆಗೊಳಗಾಯಿತು. ಗ್ರಾಮಾಂತರ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದ ರಾಜಕುಮಾರ್‌ರಂತಹ ಕಾರ್ಯಕರ್ತರಿಗೆ ಇದು ಇನ್ನೂ ಕೆಟ್ಟ ಜಮೀನ್ದಾರಿ ಪದ್ಧತಿ ಎನಿಸಿತು. ಇಲ್ಲಿ ಶತ್ರು ದೂರದಲ್ಲಿದ್ದಾನೆ. ಅವನನ್ನು ತಲುಪಲೂ ಸಾಧ್ಯವಿಲ್ಲ. ಡಂಕೆಲ್ ಪ್ರಸ್ತಾವನೆಯಿಂದ ಎಂತಹ ಪರಿಸ್ಥಿತಿ ಉದ್ಭವಿಸಲಿದೆ ಎಂದರೆ ಅದು ನಮ್ಮನ್ನು ಸುಲಿಯುತ್ತಿದ್ದರೂ ನಾವು ಆಕ್ರಮಣಕ್ಕೆ ಒಳಗಾಗಿದ್ದೇವೆ ಎಂದು ಅನ್ನಿಸುವುದೇ ಇಲ್ಲ. ೧೯೯೪ರ ನಡುಭಾಗದಲ್ಲಿ ದೆಹಲಿಯ ಜನಪರ ಚಳುವಳಿ ರಾಷ್ಟ್ರೀಯ ಮೈತ್ರಿಕೂಟ ಹಮ್ಮಿಕೊಂಡಿದ್ದ ಡಂಕೆಲ್ ವಿರೋಧಿ ಚಳುವಳಿಗೆ ಜೆಎಂಎ ಕೂಡ ಒಂದು ಸಣ್ಣ ತಂಡವನ್ನು ಕಳುಹಿಸಿತು. ಈ ಮೈತ್ರಿಕೂಟ ರಾಜಕೀಯ ವೇದಿಕೆಯಾಗಿದ್ದು, ಭಾರತದ ವಿವಿಧ ಭಾಗಗಳಲ್ಲಿ ಜೆಎಂಎಯಂಥ ವೇದಿಕೆಗಳನ್ನು ರೂಪಿಸುವ ಉದ್ದೇಶ ಹೊಂದಿದೆ.

ಪ್ರಾಯಶಃ ರಾಮ್‌ಶರಣ್‌ನ ಈ ಮಾತುಗಳಲ್ಲಿ ಆ ಚಿಂತನೆ ಇದೆ ಎಂದೆನಿಸುತ್ತದೆ. 'ಯುವ ಛಾತ್ರ ಸಂಘರ್ಷ ವಾಹಿನಿಯಲ್ಲಿ ಕಂಡುಬಂದ ದೋಷಗಳು ಜೆಎಂಎ ಚಳುವಳಿಯಲ್ಲೂ ಕಾಣಿಸಿಕೊಂಡವು. ಸಮಾಜವನ್ನು ಬದಲಿಸಿಬಿಡುವ ಜವಾಬ್ದಾರಿಯನ್ನು ನಾವೇ ಸ್ವತಃ ಹೆಗಲಿಗೇರಿಸಿಕೊಂಡೆವು. ಆದುದರಿಂದ ಕಾಗ್ಜಿ–ಟೋಲಾದಲ್ಲಿ ಕೂಡ ಸ್ಥಳೀಯ ನಾಯಕತ್ವ ಬೆಳೆಯಲು ಬಿಡಲಿಲ್ಲ. ಇದು ಸವಾಲುಗಳನ್ನು ಎದುರಿಸಲು ಅವಕಾಶ ನೀಡಲಿಲ್ಲ. ಈಗ ಸ್ಥಳೀಯ ನಾಯಕರ ಕೈಲಿ ಚಳುವಳಿ ನಡೆಸಲು ಸಾಧ್ಯವಿಲ್ಲವಾಗಿದೆ. ಮುದುಕರಾಗುತ್ತಿರುವ ನಮಗೆ ಸಮಯವಿಲ್ಲ. ಅನಿಲ್‌ಜಿಯ ಆರೋಗ್ಯ ಚೆನ್ನಾಗಿಲ್ಲ. ಅನೇಕ ಕಾರ್ಯಕರ್ತರು ಸಂಘಟನೆ ತೊರೆದಿದ್ದಾರೆ'.

ಈ ಎಲ್ಲ ಅನಿಸಿಕೆ, ಭಾವನೆಗಳ ಹಿಂದೆ ಬಹಳ ಜಟಿಲವಾದ ವೈಯಕ್ತಿಕ ಮತ್ತು ಸಾಮಾಜಿಕ ಕಾರಣಗಳು ಇವೆ. ೧೯೯೩ರ ವೇಳೆಗೆ ಕಹೇಲ್‌ಗಾಂವ್ ಪರಿಸರದಿಂದ ಅನಿಲ್ ಪ್ರಕಾಶ್ ದೂರ ಉಳಿದರು. ಆತ ತಮ್ಮ ಹುಟ್ಟೂರಾದ ಮುಜಾಫರ್‌ಪುರ್‌ಗೆ ಮರಳಿದರು. ಅವರ ಪರಿಸ್ಥಿತಿ ಗಾಯಗೊಂಡ ಸೈನಿಕನಂತಾಗಿತ್ತು. ಮಹಾಭಾರತದ ಕೊನೆ ಕೊನೆಯಲ್ಲಿ ಅರ್ಜುನನ ಪರಿಸ್ಥಿತಿಯೂ ಹೀಗೆಯೇ ಆಗಿತ್ತು. ಆತನಿಗೆ ಗಾಂಢೀವದ ದಾರವನ್ನು ಎಳೆಯಲೂ ತ್ರಾಣವಿರಲಿಲ್ಲ. ಅನಿಲ್ ಪ್ರಕಾಶ್‌ರ ಈ ನಡವಳಿಕೆಯನ್ನು ಬಹಳ ಮಂದಿ ಟೀಕಿಸಿದರು.

ಆದರೆ ಆಂದೋಲನದಲ್ಲಿ ಕಾಣದ ಪ್ರಗತಿ ಅವರನ್ನು ಖಿನ್ನತೆಗೆ ನೂಕಿತು ಎಂಬ ಅಂಶ ಕೆವಲರಿಗೆ ಮಾತ್ರ ಗೊತ್ತು.

ಮುಂದೆ....?

ಅನಿಲ್ ತಲೆಯಲ್ಲಿ ಅಲ್ಲೊಂದು ಇಲ್ಲೊಂದು ಬಿಳಿಗೂದಲು ಕಾಣಿಸಿಕೊಳ್ಳುತ್ತಿದ್ದರೂ ಅವರ ಮುಖದಲ್ಲಿ ಹೊಳಪು ಕಡಿಮೆಯಾದಂತಿರಲಿಲ್ಲ. ತಮ್ಮದೇ ನನಸಾಗದ ಬಯಕೆಗಳ ಭಾರದಿಂದ ಅವರು ಸೊರಗಿದ್ದರು. ಆದರೆ ಗಂಗಾಮುಕ್ತಿ ಆಂದೋಲನದ ಅನುಭವ ಕುರಿತಂತೆ ಅವರಿಗೆ ಸಂಪೂರ್ಣ ಕೃತಜ್ಞತೆ ಇತ್ತು. ಅದನ್ನು ಅವರು ಉಳಿಸಿಕೊಂಡಿದ್ದರು. 'ನನ್ನ ಈ ಎಲ್ಲ ಅನಿಸಿಕೆಗಳನ್ನು ರೂಪಿಸಿದ್ದು ಗಂಗೆಯ ತರಂಗಗಳು. ತುರ್ತು ಪರಿಸ್ಥಿತಿಯಿಂದ ಬೋಧಗಯಾದ ಚಳುವಳಿಯವರೆಗೂ ಇಲ್ಲಿ ಅನೇಕ ಪ್ರಯತ್ನಗಳು ನಡೆದಿವೆ. ಆದರೆ ಗಂಗಾತೀರದಲ್ಲಿ ನಡೆದ ಈ ಆಂದೋಲನದಲ್ಲಿ ಸಮಾಜ ಎದ್ದು ನಿಂತಿದ್ದನ್ನು ಹತ್ತಿರದಿಂದ ಕಂಡೆ. ನೀವು ಹಾರಬೇಕಿದ್ದರೆ, ಒಂದೋ ಎರಡೋ ಹೆಜ್ಜೆ ಹಿಂದೆ ಸರಿಯಬೇಕು' ಎಂದು ಅವರು ತಮಾಷೆಯಾಗಿ ಹೇಳುತ್ತಾರೆ. ಇವು ನಡೆದ ಒಂದು ವರ್ಷದ ಬಳಿಕ ಅವರು ಚಂಪಾರಣ್‌ನಲ್ಲಿ ಇದ್ದರು. ಅಲ್ಲಿ ಬೆಲ್ಲದ ಸತ್ಯಾಗ್ರಹವನ್ನು ಸಂಘಟಿಸುತ್ತಿದ್ದರು. ಬಿಹಾರದಲ್ಲಿ ಕಬ್ಬು ಬೆಳೆಗಾರರು ಬೆಲ್ಲ ಮಾಡುವುದನ್ನು ನಿಷೇಧಿಸಲಾಗಿತ್ತು. ಅವರು ಸಕ್ಕರೆ ಕಾರ್ಖಾನೆಗೆ ಕಬ್ಬನ್ನು ಮಾರಬೇಕಿತ್ತು. ಈ ಬೆಲ್ಲದ ಸತ್ಯಾಗ್ರಹದಲ್ಲಿ ಸಾವಿರಾರು ಕಬ್ಬು ಬೆಳೆಗಾರರು ಈ ನಿಷೇಧದ ವಿರುದ್ಧ ಪ್ರತಿಭಟಿಸಿದರು ಮತ್ತು ಸ್ಥಳೀಯವಾಗಿಯೇ ಬೆಲ್ಲ ತಯಾರಿಸಲು ಆರಂಭಿಸಿದರು.

ಆದರೆ ಈ ರೀತಿಯ ಸ್ಥಳೀಯ ಪ್ರತಿಭಟನೆಗಳು, ಸತ್ಯಾಗ್ರಹಗಳು ಅಧಿಕಾರ ವ್ಯವಸ್ಥೆಯಲ್ಲಿ ಯಾವ ಪ್ರಭಾವವನ್ನೂ ಬೀರಲೇ ಇಲ್ಲ. ಇದೇ ಸಮಯದಲ್ಲಿ ಬಿಹಾರ ಸರ್ಕಾರದ ಒಳಗಿನಿಂದಲೇ ಹಲವಾರು ಬಹುಕೋಟಿ ಹಗರಣಗಳ ಸರಣಿಗಳೇ ಹೊರಬೀಳತೊಡಗಿದವು. ಜೆ.ಪಿ.ಚಳುವಳಿಯ ಜೊತೆಗೆ ತಮ್ಮನ್ನು ಗುರುತಿಸಿಕೊಂಡಿದ್ದ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್, ಅನಿಲ್ ಪ್ರಕಾಶ್‌ರಂಥವರಿಗೆ ಮೊದಲ ಶತ್ರುಗಳಾದರು.

ಜಾಗೃತಿ ಹಳ್ಳಿಗಳಲ್ಲಿ ಪೂರ್ತಿ ವ್ಯಾಪಿಸಿದಾಗ ಅದು ಸಾಧ್ಯವಾಗುತ್ತದೆ. ಎಲ್ಲೆಡೆಯಲ್ಲೂ ಸಣ್ಣಸಣ್ಣ ಗುಂಪುಗಳು ಸಂಘಟಿತವಾದರೆ ಇದು ಸಾಧ್ಯ ಎಂತಲೂ ಅನ್ನಿಸುತ್ತದೆ. ಕೆಲವು ತಂಡಗಳು ಸಾರಾಯಿ ವಿರುದ್ಧ ಕೆಲಸ ಮಾಡುತ್ತವೆ. ಪ್ರಜಾಸತ್ತೆ ಮೊದಲು ಜನರ ಮನಸ್ಸಿನಲ್ಲಿ ಬೇರು ಬಿಡಬೇಕು. ಆಗ ಜನರ ನಡುವೆ ಪ್ರಜಾಸತ್ತಾತ್ಮಕ ಸಂಸ್ಥೆಗಳು ಬೆಳೆಯುತ್ತವೆ. ನಮ್ಮ ಸಮಾಜದಲ್ಲಿ ಬೇಕಾದಷ್ಟು ಅರೆಕೊರೆಗಳು ಇರಬಹುದು. ಅದನ್ನು ಸರಿಪಡಿಸಿಕೊಳ್ಳುವ ವ್ಯವಸ್ಥೆಯಲ್ಲಿ ಕಾಲಕಾಲಕ್ಕೆ ಧೂಳು-ಕೊಳೆಗಳನ್ನು ತೆಗೆಯುವ ಕೆಲಸವನ್ನಷ್ಟೇ ನಾವು ಮಾಡಬೇಕಿರುವುದು. ಜನರು ಹೆಚ್ಚು ತಿಳುವಳಿಕೆ ಗಳಿಸುವಂತೆ ಮಾಡಿ ಅವರನ್ನು ಬೆಂಬಲಿಸುವುದಷ್ಟೇ ನಾವು ಮಾಡಬೇಕಿರುವ ಕೆಲಸ. ಈ ದಿಸೆಯಲ್ಲಿ ಕೆಲವು ಸಂಸ್ಥೆಗಳೂ ಸೋತವು. ಆದರೆ ಹೊಸದು ಹುಟ್ಟುತ್ತಲೇ ಇರುತ್ತದೆ. ಈ ಪ್ರಕ್ರಿಯೆ ನಿರಂತರ. ಜಿಎಂವಿ ಇದರ ಒಂದು ಭಾಗ.

ಜನಪರ ಚಳುವಳಿಯ ರಾಷ್ಟ್ರೀಯ ಮೈತ್ರಿಕೂಟಕ್ಕೆ ಹೆಚ್ಚು ಶಕ್ತಿ ಬಂದು, ಭಾರತದ ಎಲ್ಲೆಡೆ ಈ ರೀತಿಯ ಚಟುವಟಿಕೆ ನಡೆಸುತ್ತಿರುವ ಸಂಘಟನೆಗಳ ಸಮನ್ವಯ ಮತ್ತು ಸಂಯೋಜನೆ ಆಗಬೇಕೆಂದು ರಾಮ್‌ಶರಣ್ ಆಶಿಸಿದ್ದರು. ಕಾಲಾನಂತರದಲ್ಲಿ ಈ ಸಮನ್ವಯ ಮತ್ತು ಸಂಯೋಜನೆಯ ದೆಸೆಯಿಂದ ಒಂದು ರಾಜಕೀಯ ಸಂಘಟನೆಯಾಗುವುದೆಂದೂ, ಭಾರತದ ರಾಜಕಾರಣದಲ್ಲಿ ಮಹತ್ವದ ಹೆಜ್ಜೆ ಗುರುತು ಮೂಡಿಸುವುದೆಂದೂ ಅನ್ನಿಸುತ್ತಿತ್ತು. ಈ ಕನಸು ನನಸಾಗಬೇಕಿದ್ದರೆ ನಿರಂತರ ಹಾಗೂ ನಿಯಮಿತವಾದ ಪ್ರಯತ್ನ ನಡೆಯಬೇಕು. ಇದರಿಂದ ಬಹು ಸೂಕ್ಷ್ಮವಾದ ತಾತ್ವಿಕ ವಿಷಯಗಳು ಬಗೆಹರಿಯಲೂಬಹುದು ಮತ್ತು ಅಭಿಪ್ರಾಯ ಭೇದಗಳು ಕೂಡ ಮರೆಯಾಗಬಹುದು.

ಐವತ್ತನೆಯ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಜೆ.ಪಿ. ಚಳುವಳಿಯ ಯುವ ಛಾತ್ರ ಸಂಘರ್ಷ ವಾಹಿನಿಯ ರಾಮ್‌ಶರಣ್, ಯೋಗೇಂದ್ರ ಮತ್ತು ಅನೇಕ ಗೆಳೆಯರು ಸಮಾನಮನಸ್ಕ ಗೆಳೆಯರಿಗೆ ಭಾವಪೂರ್ಣ ಮನವಿಯೊಂದನ್ನು ಕಳಿಸಿದರು. ನವಭಾರತ ನಿರ್ಮಾಣದ ಕನಸು, ರಾಜಕೀಯ ನಾಯಕತ್ವದಿಂದ ಹೇಗೆ ಭಗ್ನಗೊಂಡಿದೆ ಎಂಬುದನ್ನು ಅದರಲ್ಲಿ ವಿವರಿಸಿದ್ದರು. ಜನರ ಮನದಾಳದಲ್ಲಿ ಇರುವ ಕೋಪ ಏಕೆ ಪುಟಿದೇಳುತ್ತಿಲ್ಲ? ನಮ್ಮ ಲೇಖಕರು, ಬುದ್ಧಿಜೀವಿಗಳು, ಸಾಮಾಜಿಕ ಕಾರ್ಯಕರ್ತರು ಏಕೆ ಸುಮ್ಮನಿದ್ದಾರೆ? ಸಾಮೂಹಿಕ ಪ್ರತಿಕ್ರಿಯೆ ಏಕಿಲ್ಲ? ಎಂದು ಪ್ರಶ್ನಿಸಿದ್ದರು.

ಪ್ರಾಮಾಣಿಕತೆ, ನ್ಯಾಯಪರತೆ, ಪ್ರಜಾಪ್ರಭುತ್ವ ಮತ್ತು ಸಮಾನತೆಯಲ್ಲಿ ನಂಬಿಕೆ ಇರುವವರು ಏಕೆ ಏಳುತ್ತಿಲ್ಲ? ನಮ್ಮ ಬಗ್ಗೆ ನಮಗೇ ನಂಬಿಕೆ ಇಲ್ಲವೇ?

ಇವುಗಳ ಜೊತೆಗೆ ಅವರು ಇನ್ನೂ ಒಂದು ವಿಷಯವನ್ನು ಸೇರಿಸಬಹುದಿತ್ತು. ನಾವು ಏಕೆ ಪರಸ್ಪರರನ್ನು ನಂಬುತ್ತಿಲ್ಲ? ನಮ್ಮನ್ನು ವ್ಯಾಪಿಸಿರುವ ಸಾಮಾಜಿಕ ಮತ್ತು ನೈತಿಕ ಅವನತಿಯ ಬಗ್ಗೆ ಇರುವ ಸಿಟ್ಟಿನ ಜೊತೆಗೆ ನಾವು ಸಂಘಟಿತವಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ ಎಂಬ ಅರಿವು ನಮಗೆ ಇತ್ತು. ಬಹುತೇಕ ಮಂದಿ ಗೆಳೆಯರು ಸುತ್ತಲೂ ಆವರಿಸಿರುವ ನೇತ್ಯಾತ್ಮಕತೆಯಿಂದ ಖಿನ್ನರಾಗಿದ್ದಾರೆ ಎಂಬುದು ಅನಿಲ್‌ಗೆ ತಿಳಿದಿತ್ತು. ಮಂಕಾಗಿರುವ ವಾತಾವರಣದಲ್ಲಿ ಒಬ್ಬರನ್ನೊಬ್ಬರು ಉರುಳಿಸುವ ಕೆಲಸಕ್ಕೆ ನಾವು ಮುಂದಾಗುತ್ತೇವೆ. ಸ್ವಲ್ಪ ಚಿಂತಿಸಿದ ನಂತರ ತಮ್ಮ ದೋಷಗಳು ಅನಿಲ್‌ಗೆ ಕಾಣಿಸತೊಡಗಿದವು. ೧೯೯೫ರಲ್ಲಿ ಅವರು ರಾಜ್ಯದ ವಿಧಾನಸಭೆಗೆ ಸ್ಪರ್ಧಿಸುವ ನಿರ್ಣಯವನ್ನು ಏಕಪಕ್ಷೀಯವಾಗಿ ತೆಗೆದುಕೊಂಡು ಹಲವಾರು ಗೆಳೆಯರಿಂದ ದೂರವಾದರು.

ಸದ್ಯದ ಮಟ್ಟಿಗೆ ಅನಿಲ್ ಭಾಗಶಃ ಉತ್ತರ ಪಡೆದುಕೊಳ್ಳುತ್ತಿದ್ದಾರೆ. ಅವರು ತಮ್ಮೊಳಗೇ ಆಲೋಚಿಸುವ ಹಂತ ತಲುಪಿದ್ದಾರೆ. ಫರಕ್ಕಾ ಬ್ಯಾರೇಜು ತಂದೊಡ್ಡಿರುವ ಹಲವಾರು ಸಮಸ್ಯೆಗಳನ್ನು ತಿಳಿಯಲು ಅವರು ಹಲವಾರು ತಿಂಗಳು ಕಳೆದರು. ಈ ಸಮಸ್ಯೆಯ ಗಾತ್ರವನ್ನು ನೋಡಿದರೆ ಜಿಎಂಎನಂಥ ಸಣ್ಣ ಚಳುವಳಿ ಅರ್ಥಹೀನ ಎಂದೆನಿಸಿತು. ಇದರ ಜೊತೆಗೆ ಈಗ ಅಲ್ಪಾವಧಿಯ ಚಳುವಳಿ ಅವರಿಗೆ ಸೇರದು. ಇನ್ನೂ ಹೆಚ್ಚು ಆಳವಾಗಿ ಮತ್ತು ದೀರ್ಘವಾಗಿ ಪ್ರಯತ್ನ ಮಾಡಬೇಕು ಎನಿಸಿತು.

ಜಾಗತೀಕರಣದ ವಿರುದ್ಧದ ಮೊದಲ ಸುತ್ತಿನ ಹೋರಾಟದಲ್ಲಿ ನಾವು ಸೋತಿದ್ದೇವೆ ಎಂಬ ಅರಿವೇ ಈ ಅನಿಸಿಕೆಗೆ ಕಾರಣ. ಅಗೋಚರ ಮತ್ತು ದೂರದ ಶಕ್ತಿಗಳಿಂದ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ದುರಾಕ್ರಮಣ ಮತ್ತು ತಯಾರಿಕಾ ಪ್ರಕ್ರಿಯೆಗಳು ಹೆಚ್ಚು ಮುಂದುವರೆದಿವೆ. ಅನಿಲ್ ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿ ಬಹಳ ವ್ಯಾಪಕವಾಗಿರುವ ಜಡತ್ವದ ಕಾರಣ ಮತ್ತು ಅದಕ್ಕೆ ಮದ್ದೇನು ಎಂದು ಕಂಡುಹಿಡಿಯತೊಡಗಿದರು. ಜನರಲ್ಲಿ ಚೈತನ್ಯ ತುಂಬುವ ಬಗ್ಗೆ ಮತ್ತು ಅವರಿರುವ ಪರಿಸ್ಥಿತಿಯನ್ನು ರಚನಾತ್ಮಕತೆಯಿಂದ, ಸೃಜನಶೀಲತೆಯಿಂದ ಬದಲಿಸುವ ಕ್ರಮಗಳ ಬಗ್ಗೆ ಅವರು ಚಿಂತಿಸುತ್ತಾರೆ.

ಈ ವಾಸ್ತವವನ್ನು ರಾಮ್‌ಶರಣ್ ಸಂಕಟ ಮತ್ತು ತಳಮಳಗಳಿಂದ ಎದುರಿಸುತ್ತಿದ್ದಾರೆ. ಇನ್ನೊಬ್ಬರ ಬಗ್ಗೆ ತೀರ್ಪು ಕೊಡದ ಗುಣದಿಂದಾಗಿ ಅನೇಕ ವಿರೋಧಾಭಾಸದ ಜನರ ನಡುವೆ ಇವರು ಕೊಂಡಿಯಂತಿದ್ದಾರೆ. ಎಲ್ಲ ರೀತಿಯ ಕಾರ್ಯಕರ್ತರೂ ಒಂದೆಡೆ ಕೂಡಿ ಬೃಹತ್ ಆಂದೋಲನ ಕಟ್ಟುವ ಕನಸನ್ನು ಅವರು ಕಾಣುತ್ತಾರೆ. ಗಂಗಾಮುಕ್ತಿ ಆಂದೋಲನದ ವೇಗ ಕಡಿಮೆಯಾಗುತ್ತಾ ಬಂದುದನ್ನು ಅರಿತ ಅವರು, ದಿಗಂತದಲ್ಲಿ ಮೂಡಬಹುದಾದ ಹೊಸ ಸಾಧ್ಯತೆಗಳನ್ನು ಕಾಯುತ್ತಿದ್ದಾರೆ.

ಆದರೆ ರಾಮ್‌ಶರಣ್ ಎಂದೂ ಕರ್ತವ್ಯವಿಮುಖರಾಗುವುದಿಲ್ಲ. ಪ್ರತಿ ಫೆಬ್ರವರಿ ಮೊದಲ ಭಾಗದಲ್ಲಿ ತಮ್ಮ ಪುಟ್ಟ ಪ್ರಿಂಟಿಂಗ್ ಪ್ರೆಸ್ ಕಚೇರಿಯಿಂದ ಆತ್ಮೀಯ ಪತ್ರ ಎಲ್ಲೆಡೆಗೂ ಹೋಗುತ್ತದೆ. ಜಿಎಂಎ ಪರವಾಗಿ ರಾಮ್‌ಶರಣ್ ಸಹಿ ಮಾಡುತ್ತಾರೆ. ಕಹೇಲ್‌ಗಾಂವ್‌ನಲ್ಲಿ ನಡೆಯುವ ಗಂಗಾಮುಕ್ತಿ ಚಳುವಳಿಯ ವಾರ್ಷಿಕೋತ್ಸವದಲ್ಲಿ ಭಾಗವಹಿಸಬೇಕೆಂದು ಎಲ್ಲ ಗೆಳೆಯರಿಗೂ ಆಮಂತ್ರಣ ನೀಡುತ್ತಾರೆ.

ಧರಣಿ ಮತ್ತು ಸತ್ಯಾಗ್ರಹಗಳು ಈಗ ಬಹು ಅಪೂರ್ವ. ಆದರೆ ಫೆಬ್ರವರಿ ೨೨ರ ವಾರ್ಷಿಕೋತ್ಸವ ಕಹೇಲ್‌ಗಾಂವ್‌ನ ಸಂಸ್ಕೃತಿಯ ಒಂದು ಭಾಗವಾಗಿ ಹೋಗಿದೆ. ವಿಚಾರ ಮಂಥನ, ವಾಗ್ವಾದಗಳಿಗೆ ಜನ ಕಡಿಮೆ ಇದ್ದರೂ ಸಂಜೆ ನಡೆಯುವ ದೋಣಿ ಜಾತ್ರೆಗೆ ಜನ ಇದ್ದೇ ಇರುತ್ತಾರೆ. ಹಲವು ದೋಣಿಗಳು ಏಕಲವ್ಯ ಗುಡ್ಡದ ಸುತ್ತ ಪ್ರದಕ್ಷಿಣೆ ಬರುತ್ತವೆ. ಅದಾದ ಬಳಿಕ ಕತ್ತಲು ಕಳೆದ ನಂತರ ಕಾಗ್ಜಿ–ಟೋಲಾದ ಮಹಿಳೆಯರು ಉರಿಯುವ ಹಣತೆಯನ್ನು ಕಾಗದದ ದೋಣಿಯ ಮೇಲಿರಿಸಿ ಗಂಗೆಯಲ್ಲಿ ತೇಲಿಬಿಡುತ್ತಾರೆ.

ರಾಜಕೀಯ ಹೋರಾಟಗಳ ತಿಕ್ಕಲುತನಗಳು ಈ ಭಕ್ತಿಭಾವದ ಕ್ರಿಯೆಗಳಿಗೆ ಭಂಗ ತಂದಿಲ್ಲ. ಇವು ಎಂದಿನಂತೆ ನಡೆಯುತ್ತಲೇ ಇವೆ.

....ಅಶ್ವಮೇಧ ಯಜ್ಞಕ್ಕೆ ಪಟ್ನಾ ಅಭಿಮುಖವಾಗಿ ಹೊರಟ ತುಂಬಿದ ರೈಲಿನತ್ತ ಗಮನಹರಿಸೋಣ. 'ನೀನು ಯಜ್ಞಕ್ಕೆ ಯಾಕಾಗಿ ಹೋಗುತ್ತಿರುವೆ?' ಎಂದು ನಾನು ಒಂದು ಹಂತದಲ್ಲಿ ನನ್ನ ಪಕ್ಕ ಕುಳಿತ ಮುದುಕಿಯನ್ನು ಕೇಳಿದೆ. ಆದಕ್ಕವಳು 'ನನ್ನ ಜೀವಿತಾವಧಿಯಲ್ಲಿ ನಡೆಯುತ್ತಿರುವ ಈ ಯಜ್ಞ ಇದೇ ಮೊದಲನೆಯದು ಹಾಗೂ ಕೊನೆಯದು' ಎಂದಳು. ಆಕೆಯ ಆಯಾಸ ಸ್ವಲ್ಪ ಕಡಿಮೆಯಾದಂತೆನಿಸಿತು. ಹೀಗೆ ಹೇಳುತ್ತಾ ಆಕೆ ಕೈಮುಗಿದು ಕಣ್ಣನ್ನು

ಮೇಲಕ್ಕೆತ್ತಿದಳು. ಇದು ಆಕೆಯಿಂದ ಹೊರಬಿದ್ದ ಮಾತಿಗಿಂತಲೂ ಹೆಚ್ಚಿನದನ್ನು ಹೇಳುವಂತಿತ್ತು. ಈ ಯಜ್ಞದಲ್ಲಿ ಇರಬೇಕೆನ್ನುವ ಛಲ ಮತ್ತು ಅದರಿಂದ ಆಕೆಗೆ ದೊರೆಯುವ ಸಮಾಧಾನದ ಮುಂದೆ ಈ ಸಂಕಟಕರ ಪ್ರಯಾಣ ಏನೂ ಅಲ್ಲ ಅನ್ನಿಸಿತು..

ಈ ಮುದುಕಿಯ ಭಾವನೆ ಮತ್ತು ನನ್ನ ಜೊತೆ ಬಂದಿದ್ದ ಇಬ್ಬರು ಕಾರ್ಯಕರ್ತರ ಭಾವನೆಗಳ ನಡುವೆ ದೊಡ್ಡ ಕಂದರವೇ ಇತ್ತು. ರೈಲ್ವೆ ಪ್ಲಾಟ್‌ಫಾರ್ಮ್‌ನ ಮೇಲೆ ಇದ್ದ ಜನಜಂಗುಳಿಯನ್ನು ಕಂಡು ಅವರಿಗೆ ಕೋಪ ಬಂದಿತ್ತು. 'ಗಂಗಾಮುಕ್ತಿ ಆಂದೋಲನದಂತಹ ಚಳುವಳಿಗೆ ಸೇರುವುದಿಲ್ಲ, ಈ ಯಜ್ಞಕ್ಕೆ ಲಕ್ಷಾಂತರ ಮಂದಿ ಹೇಗೆ ಸೇರುತ್ತಾರೆ?' ಎಂಬುದು ಅವರ ಆಕ್ರೋಶಕ್ಕೆ ಕಾರಣವಾಗಿತ್ತು.

ಮಾರನೆಯ ದಿನ ದಿನ ಬನಾರಸ್‌ನಲ್ಲಿ ಒಂದು ಪ್ರಯಾಣಿಕರ ಮೋಟರ್ ದೋಣಿಯಲ್ಲಿ ಕುಳಿತು ಪಯಣಿಸುವಾಗ ಈ ಪ್ರಶ್ನೆಗಳಿಗೆ ಉತ್ತರದ ಸಾಧ್ಯತೆ ಹೊಳೆಯಿತು. ಈ ಅಂಬಿಗ ಬನಾರಸ್‌ನ ವಿವಿಧ ಘಟ್ಟಗಳ ವಿವರಣೆ ನೀಡಿದ. ಈ ಗಂಗಾ ಆಕ್ಷನ್ ಪ್ಲಾನ್ ಯೋಜನೆಯಡಿ ಗಂಗೆಯ ತ್ಯಾಜ್ಯಗಳನ್ನು ಶುದ್ಧಗೊಳಿಸುವ ಶುದ್ಧೀಕರಣ ಘಟಕ ಇಲ್ಲಿರುವ ಎಲ್ಲ ಪ್ಲಾಟ್ ಫಾರ್ಮ್‌ಗಳಿಗಿಂತ ಹೆಚ್ಚು ಗಮನ ಸೆಳೆಯಿತು. ಮಗು ತಾಯಿಯ ತೊಡೆಯಲ್ಲಿ ಹೇಸಿಗೆ ಮಾಡಿದರೆ ತಾಯಿಯೇ ಅದನ್ನು ಸ್ವಚ್ಛಗೊಳಿಸುತ್ತಾಳೆ. ಗಂಗೆ ನಮ್ಮೆಲ್ಲರ ತಾಯಿ. ಆಕೆಯನ್ನು ಶುಚಿಗೊಳಿಸಲು ನಾವು ಯಾರು? ಎಂದು ಆ ಅಂಬಿಗ ಶುದ್ಧೀಕರಣ ಘಟಕದತ್ತ ಬೊಟ್ಟು ಮಾಡಿ ತೋರಿಸುತ್ತಾ ಅರ್ಥಗರ್ಭಿತವಾಗಿ ನುಡಿದ.

ಸಿ.ವಿ.ಶೇಷಾದ್ರಿ

ಈ ಶತಮಾನದ ಬಹು ದೊಡ್ಡ ಅನ್ವೇಷಕನಾಗಿ ಗಾಂಧಿ

ಅಜಾನುಬಾಹು ವ್ಯಕ್ತಿಯೊಬ್ಬರು ಬಾಪು ಕುಟಿಯೊಳಗಿನ ಮುಖ್ಯ ದ್ವಾರದ ಒಳ ಬದಿಯಲ್ಲಿ ನಿಂತಿದ್ದರು. ಒಂದು ಕಾಲದಲ್ಲಿ ಗಾಂಧೀಜಿ ಮಲಗುತ್ತಿದ್ದ ಮಂಚದ ಮೇಲೆ ಹಾಸಿದ್ದ ಶುಭ್ರ ಬಿಳಿಯ ಖಾದಿ ಮೇಲು ಹಾಸಿಗೆಗೂ, ಈ ವ್ಯಕ್ತಿ ಧರಿಸಿದ್ದ ಶುದ್ಧ ಬಿಳಿಯ ಪ್ಯಾಂಟು, ಶರ್ಟಿಗೂ ಹೋಲಿಕೆಯಿತ್ತು. ಅಲ್ಲಿಯ ಕಿಟಕಿಯ ಬುಡದಲ್ಲಿ ಗಾಂಧಿ ಬರೆಯಲು ಬಳಸುತ್ತಿದ್ದ ಇಳಿಜಾರು ಮೇಜಿನ ಮೇಲೆ ಬಗ್ಗಿದ ಅವರ ಮುಖದ ಹುಬ್ಬು ಗಂಟಿಕ್ಕಿತ್ತು. ಗೌರವ ಭಾವನೆ ಹುಟ್ಟಿಸುವ ಆವರ ಮುಖದಲ್ಲಿ ವಿಷಣ್ಣತೆ ಆವರಿಸಿತ್ತು.

ಬಾಪು ಕುಟಿಯ ಸುತ್ತ ಕಣ್ಣು ಹಾಯಿಸಿ, ಬಿದಿರಿನ ಮೇಲ್ಹಾವಣಿ, ಮರದ ಕಂಬದ ಸೌಂದರ್ಯ ಎಲ್ಲ ಗಮನಿಸಿದ ಅವರಿಂದ ನಿಟ್ಟುಸಿರೊಂದು ಹೊರಟಿತು. ಗಾಂಧಿಯಂತಹ ಬಹುದೊಡ್ಡ ಸಂಶೋಧಕನ ಕೊಡುಗೆಯನ್ನು ಮ್ಯೂಸಿಯಂ ವಸ್ತುವಿನ ಮಟ್ಟಕ್ಕೆ ನಾವು ಇಳಿಸಿದ್ದೇವಲ್ಲ? ಶೇಷಾದ್ರಿಯವರನ್ನು ಬಾಧಿಸಿದ ನೂರಾರು ಪ್ರಶ್ನೆಗಳಲ್ಲಿ ಇದು ಬಹಳ ಪ್ರಮುಖವಾದದ್ದಾಗಿತ್ತು. ನಮ್ಮ ಯುವಜನತೆ ಈ ಗಾಂಧಿಯನ್ನು ನೋಡಿಲ್ಲ. ತನ್ನ ಸ್ವಂತ ಮಗನೇ ಗಾಂಧಿಯನ್ನು ಒಪ್ಪಿರಲಿಲ್ಲ. 'ಈ ಮನುಷ್ಯನಿಗೆ ಲೈಂಗಿಕತೆ ಒಂದು ಗುಂಗಿನಂತೆ ಕಾಡಿದೆ' ಎಂದು ತಿರಸ್ಕರಿಸಿದ್ದ, ಸಿವಿಎಸ್ ತಮ್ಮಷ್ಟಕ್ಕೇ ನಕ್ಕರು. ಎಲ್ಲರಿಗೂ ಹೀಗೆಯೇ ಆಗಿದೆ. ಆದರೆ ಅವರು ಅದನ್ನು ಮುಚ್ಚಿಡದೇ ಧೈರ್ಯವಾಗಿ ಎದುರಿಸಿದರು. ತಮ್ಮ ಹೆಗಲ ಚೀಲದ ಪಟ್ಟಿಯನ್ನು ಮೇಲೆ ಸರಿಸಿಕೊಳ್ಳುತ್ತಾ ಬಾಪು ಕುಟಿಯ ಹೊರ ಆವರಣಕ್ಕೆ ಬಂದರು. ಹೊರ ಆವರಣದಲ್ಲಿ ಕಲ್ಲು ಅಂಗಾಲಿಗೆ ಚುಚ್ಚುತ್ತಿತ್ತು. ಕುಟಿಯ ಪಕ್ಕದ ದೊಡ್ಡ ಬೇವಿನ ಮರವನ್ನು ದಾಟಿ ಮುಂದೆ ಹೋದರು. ತಮಗಾಗಿ ಕಾಯುತ್ತಿದ್ದ ಕಿರಿಯ ಗೆಳೆಯರೊಡನೆ ಸಮಯ ಕಳೆಯಲು ಗೌರಿ ಭವನದತ್ತ ಹೊರಟರು.

ಸೇವಾಗ್ರಾಮದಲ್ಲಿ ಚಳಿಯ ಮಧ್ಯಾಹ್ನದಲ್ಲಿಯೂ ಬಿಸಿಲಲ್ಲಿ ಬಹಳ ಹೊತ್ತು ಕೂರುವುದು ಶಕ್ಯವಿರಲಿಲ್ಲ. ಹಾಗಾಗಿ ಆ ಅತೃಪ್ತ ಯುವಕರ ಸಂಘ ವಿಶಾಲವಾದ ಗೌರಿಭವನದ ಹಜಾರದಲ್ಲಿ ಸೇರಿತ್ತು. ಅಲ್ಲಿ ಗೋಡೆಗಳಿಗೆ ಮತ್ತು ಕಂಬಗಳಿಗೆ ಒರಗಿ ಆರಾಮವಾಗಿ ಕುಳಿತುಕೊಳ್ಳಬಹುದಿತ್ತು.

ಈ ತಂಡ ಜೆ.ಸಿ.ಕುಮಾರಪ್ಪನವರ ಜನ್ಮ ಶತಮಾನೋತ್ಸವದ ಅಂಗವಾಗಿ ಐದು ದಿವಸದ ಉಪಯುಕ್ತ ಕಾರ್ಯಕ್ರಮಕ್ಕೆ ಸ್ವಯಂಪ್ರೇರಿತವಾಗಿ ಬಂದಿತ್ತು. ಬಹಳ ತೀವ್ರವಾದ ಹಾಗೂ ಉಪಯುಕ್ತವಾದ ಚರ್ಚೆ ನಡೆದದ್ದೇ ಈ ಅಧಿವೇಶನದ ಹೊರಗೆ. ಶೇಷಾದ್ರಿಯವರು ಅಧಿವೇಶನದಲ್ಲಿ ಆಡಿದ ಪ್ರಾಸ್ತಾವಿಕ ನುಡಿ ನಮ್ಮನ್ನು ಗಾಢವಾಗಿ ಆವರಿಸಿತ್ತು. ಗ್ರಾಮೀಣ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳ ನೋಡಲಿಕ್ಕೆಂದೇ ಇಡೀ ದಿನವನ್ನು ನಿಗದಿಪಡಿಸಲಾಗಿತ್ತು. ನಾವು ಶೇಷಾದ್ರಿಯವರ ಮೇಲೆ ಒತ್ತಡ ತಂದು ನಮ್ಮೊಂದಿಗೆ ಕಾಲ ಕಳೆಯುವಂತೆ ಪುಸಲಾಯಿಸಿದ್ದೆವು. ಗೌರಿಭವನದ ಸಿಮೆಂಟ್ ನೆಲದ ಮೇಲೆ ಕುಳಿತುಕೊಂಡೇ ಕಾಲದೊಂದಿಗಿನ ಅವರ ಪಯಣದ ಕತೆಯನ್ನೂ, ವಿಜ್ಞಾನದ ತಾತ್ವಿಕತೆಯನ್ನೂ ಕೇಳತೊಡಗಿದೆವು..

ಅಭಿವ್ಯಕ್ತಿ ಪಡೆಯದ ಬಯಕೆಗಳು:

ಚೆನ್ನೈ ನಗರದ ಹೊರಭಾಗದ ಕೋರಮಂಡಲ ತೀರದಲ್ಲಿ ಬೆಳಗಿನ ಹೊತ್ತಿಗೆ ಈಜಲು ಬರುವ ಈ ವ್ಯಕ್ತಿಯ ಪರಿಚಯ ಅಲ್ಲಿಯ ಮೀನುಗಾರರಿಗೆ ಚೆನ್ನಾಗಿಯೇ ಇತ್ತು. ಸೂರ್ಯ ಸಮುದ್ರದ ತೆರೆಗಳೊಡನೆ ಚಿನ್ನಾಟವಾಡುವ ಸಮಯದವರೆಗೂ ಸಿ.ವಿ.ಶೇಷಾದ್ರಿ ಈಜುತ್ತಿದ್ದುದನ್ನು ಅವರು ವರ್ಷಗಳಿಂದ ಗಮನಿಸಿದ್ದರು. ಆತ ಸಮುದ್ರದಲ್ಲಿ ಬಹುದೂರದವರೆಗೆ ಈಜುತ್ತಿದ್ದರು.

ಒಂದು ದಿವಸ ಈಜಲು ನೀರಿಗೆ ಬಿದ್ದರು. ಬಹುಶಃ ಎಂದಿಗಿಂತ ಮುಂದೆ ಹೋಗಿರಬೇಕು ಅಥವಾ ಹೆಚ್ಚು ಆಳಕ್ಕೆ ಹಾರಿರಬೇಕು ಮೇಲೆ ಬರಲೇ ಇಲ್ಲ.

ಮೀನುಗಾರರಿಗೆ ಈತ ತಮ್ಮ ಗೆಳೆಯ, ವಿಜ್ಞಾನಿಯೆಂದೂ ಗೊತ್ತಿತ್ತು. ಬಹಳಷ್ಟು ಸಾರಿ ಈ ಮೀನುಗಾರರು ತಮ್ಮ ಬಲೆಗಳನ್ನು ಸಿದ್ಧಪಡಿಸಿಕೊಳ್ಳುವಾಗ ಅಲ್ಲಿಯೇ ಸುಳಿದಾಡುತ್ತಿದ್ದರು. ಇವರನ್ನು ಸಿವಿಎಸ್ ಎಂದೇ ಗೆಳೆಯರು ಸಂಬೋಧಿಸುತ್ತಿದ್ದರು. ಹೆಚ್ಚು ಮೀನು ಹಿಡಿಯಲು ಸಹಾಯವಾಗುವಂತೆ ಸಿವಿಎಸ್ ನಿರ್ಮಿಸಿಕೊಡುತ್ತಿದ್ದ ಸಣ್ಣಸಣ್ಣ ಉಪಕರಣಗಳಿಂದ ಬೆಸ್ತರು ಬಹಳ ಆರ್ಕತರಾಗುತ್ತಿದ್ದರು. ಕೆಲವೊಮ್ಮೆ ಬುಡಸಮೇತ ಉರುಳಿದ ತೆಂಗಿನ ಮರಗಳನ್ನು ಅದರ ಗರಿಗಳ ಸಮೇತ ಬಹಳ ಆಳವಿಲ್ಲದ ನೀರಿನಲ್ಲಿ ಮುಳುಗಿಸಲಾಗುತ್ತಿತ್ತು. ಇದರಿಂದ ಮೀನುಗಳು ಇದರತ್ತ ಆಕರ್ಷಿತವಾಗುತ್ತಿದ್ದವು.

ವರ್ಷಗಳ ನಂತರ ಸಿವಿಎಸ್ ಹೆಚ್ಚು ಮೀನುಗಳು ಬಲೆಗೆ ಬೀಳುವಂತಾಗಲು ಒಂದು ಉಪಕರಣ ತಯಾರಿಸಿಕೊಟ್ಟರು. ಇದು ಬೃಹತ್ತಾದ ಮೂರು ಆಯಾಮಗಳಿಂದ ಕೂಡಿದ ತ್ರಿಭುಜ. ಇದನ್ನು ಹಳೇಟೈರು, ನಿರುಪಯುಕ್ತ ಪ್ಲಾಸ್ಟಿಕ್ ಮುಂತಾದವುಗಳನ್ನು ಸೇರಿಸಿ ತಯಾರಿಸಲಾಗಿತ್ತು. ಸಮುದ್ರದ ಕೆಳಗೆ ತೀರಾ ಕಡಿಮೆ ಆಳದಲ್ಲಿ ಮುಳುಗಿಸಿದಾಗ ಇದರ ನೆರಳಲ್ಲಿ ಸಾವಿರಾರು ಮೀನುಗಳು ಬಂದು ಬೀಳುತ್ತಿದ್ದವು.

ಸಿವಿಎಸ್ ಭೂಮಿ, ಸಮುದ್ರ ಮತ್ತು ಮೀನುಗಾರರ ಜತೆ ಹೊಂದಿದ್ದ ಸಂಬಂಧ ಕೇವಲ ಭಾವುಕತೆಯದಾಗಿರಲಿಲ್ಲ. ಇಂಥದ್ದೊಂದು ಅವಿನಾಭಾವ ಸಂಬಂಧ ಅವರಿಗೆ ತಮ್ಮ ಪೂರ್ವಜರಿಂದ ಬಂದಿತ್ತು. ಶೇಷಾದ್ರಿಯವರ ಕುಟುಂಬದ ವಂಶಾವಳಿಯನ್ನು ಕ್ರಿ.ಶ.೧೫೩೦ ರಿಂದಲೇ ಗುರುತಿಸಬಹುದು. ಉತ್ತಮ ಜೀವನ, ಸಾಂಪ್ರದಾಯಿಕತೆ, ವಿದ್ವತ್ತು ಈ ಕುಟುಂಬದ ಆಸ್ತಿ. ಚೆಟ್‌ಪಟ್ ವೆಂಕಟಸುಬ್ಬನ್ ಶೇಷಾದ್ರಿ ೧೯೩೦ರಲ್ಲಿ ಹುಟ್ಟಿದರು. ಅವರ ತಂದೆಗೆ ಇಡೀ ವೇದ ಕಂಠಸ್ಥವಾಗಿತ್ತು. ಅಷ್ಟೇ ಸಲೀಸಾಗಿ ಇಂಗ್ಲಿಷ್ ಮತ್ತು ಫ್ರೆಂಚ್ ಭಾಷೆಯ ಕಾವ್ಯಗಳನ್ನು ಹೇಳಬಲ್ಲವರಾಗಿದ್ದರು. ತಾಯಿ ಶಾಲೆಗೇನೂ ಹೋಗಿರಲಿಲ್ಲ. ಆದರೆ ಆಕೆಯಲ್ಲಿ ಜ್ಞಾನದಾಹವಿತ್ತು.

ವಂಶಪಾರಂಪರ್ಯವಾಗಿ ಬಂದ ಈ ಬಳುವಳಿಯ ಜೊತೆಗೆ ಧೈರ್ಯ, ಆದರ್ಶವಾದ ಮತ್ತು ಮೂರ್ಖತನವೂ ಇತ್ತು ಎಂಬುದು ಸಿವಿಎಸ್‌ರ ಅರಿವಿಗೆ ಬಂದಿತ್ತು. ಇದರ ಜತೆಗೆ ಮುನ್ನಡೆಸುವಿಕೆ, ಸೃಷ್ಟಿಸುವಿಕೆ ಮತ್ತು ಕಲಿಸುವಿಕೆಯಿಂದ ಮತ್ತೊಬ್ಬರಿಗಿಂತ ಭಿನ್ನವಾಗಿರಲು ಸಾಧ್ಯ ಎಂಬ ತಿಳುವಳಿಕೆಯೂ ಬಲು ಬೇಗನೆ ಮೂಡಿತ್ತು. ತಮ್ಮ ದೂರದ ಬಂಧುವೊಬ್ಬರ ಬಗ್ಗೆ ಶೇಷಾದ್ರಿಗೆ ಹೆಮ್ಮೆ ಇತ್ತು. ಆತನನ್ನು ಅತಿಯಾಗಿ ಹೊಗಳುತ್ತಲೂ ಇದ್ದರು. ಆತ ವಿಧವೆಯೊಬ್ಬಳನ್ನು ಮದುವೆಯಾಗುವಷ್ಟರಮಟ್ಟಿಗೆ ಹಾಗೂ ಅದ್ವೈತ ಪಥ್ಯದ ಸಂಪಾದನಾ ಕಾರ್ಯದಲ್ಲಿ ನೆರವಿಗೆ ಬರಲಿ ಎಂದು ಭ್ರಾಂತಿಯನ್ನುಂಟುಮಾಡುವ ಔಷಧ ಸೇವಿಸುವಷ್ಟರ ಮಟ್ಟಿಗೆ ಬಂಡುಕೋರನಾಗಿದ್ದ.

ಈ ಕೆಲವು ಗುಣವಿಶೇಷಗಳು ಸಿವಿಎಸ್‌ರಲ್ಲಿ ತಳಮಳ ಹುಟ್ಟಿಸಿದವು. ವಿಜ್ಞಾನದ ವಿದ್ಯಾರ್ಥಿಯಾದ ಅವರ ಕಾಲೇಜಿನ ಬದುಕು ಅಭಿವ್ಯಕ್ತಗೊಳಿಸಲಾಗದ ಬಯಕೆಗಳಿಂದ ತುಂಬಿದ್ದವು. ಅವರಿಗೆ ಏನನ್ನಾದರೂ ಸಂಶೋಧಿಸುವ ಅಭೀಪ್ಸೆ ಇತ್ತು. ಮುಂಬೈ ವಿಶ್ವವಿದ್ಯಾಲಯದ ರಾಸಾಯನಿಕ ತಂತ್ರಜ್ಞಾನ ವಿಭಾಗದಲ್ಲಿ ಬಿ.ಎಸ್ಸಿ ಪದವಿ ಪಡೆದ ನಂತರ ೧೯೫೪ರಲ್ಲಿ ಸಿವಿಎಸ್ ಅಮೆರಿಕೆಗೆ ಹೋದರು. ಅಲ್ಲಿ ಕಾರ್ನೆಗಿ-ಮೆಲಾನ್ ವಿಶ್ವವಿದ್ಯಾಲಯದಲ್ಲಿ ಕೆಮಿಕಲ್ ಎಂಜಿನಿಯರಿಂಗ್‌ನಲ್ಲಿ ಪಿಹೆಚ್.ಡಿಗಾಗಿ ಅಧ್ಯಯನ ಮಾಡಿದರು. ಆನಂತರದ ದಿವಸಗಳಲ್ಲಿ ಬೋಸ್ಟನ್‌ನ ಎಂಐಟಿ (ಮಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ)ಯಲ್ಲಿ ಸಂಶೋಧನಾ ಸಹಾಯಕರಾಗಿದ್ದರು. ಒಬ್ಬ ಸಂಶೋಧಕನಿಗೆ ಕೆಚ್ಚು ಬೇಕಾಗುತ್ತದೆ; ತೇಪೆ ಹಾಕುವ ಕೆಲಸ ಮಾಡಬೇಕಾಗುತ್ತದೆ. ಆದರೆ ಲಭ್ಯವಾಗುವ ಯಶಸ್ಸು ಅಲ್ಪವಾದದ್ದು. ಧೂಮ್ರಗಳ ಅಧ್ಯಯನ ಹಾಗು ಏರೋಪ್ಲೇನ್‌ನ ರೆಕ್ಕೆಗಳನ್ನು ಡಿ-ಐಸ್ ಮಾಡುವ ಕ್ರಮ ಈ ಮರಿವಿಜ್ಞಾನಿಗೆ ಆಕರ್ಷಣೆಯನ್ನೇನೋ ತಂದಿತು. ಆದರೆ ಅದು ಬಹಳ ದಿನ ಇರಲಿಲ್ಲ.

ಚಮತ್ಕಾರಿಕ ಉಪಕರಣಗಳನ್ನು ತಯಾರಿಸುವ ಪ್ರಕ್ರಿಯೆ ಸಿವಿಎಸ್‌ರ ಪೂರ್ಣ ಗಮನ ಸೆಳೆಯಲಿಲ್ಲ. ಈ ಉಪಕರಣಗಳು ಭಾರತದಲ್ಲಿರುವ ಜನ ಸಮೂಹಕ್ಕೆ ಅಷ್ಟೇನೂ ಉಪಯುಕ್ತವಲ್ಲದ್ದು. ಅಷ್ಟೇ ಏಕೆ ಯಾವ ಭಾಗದ ಬಡವರಿಗೂ ಉಪಯೋಗವಿಲ್ಲದ್ದು ಎಂದು ಅವರು ಭಾವಿಸತೊಡಗಿದರು.

ಪಾಶ್ಚಾತ್ಯ ವಿಜ್ಞಾನದ ಬಗ್ಗೆ ಅನುಮಾನಗಳು:

ಸಿವಿಎಸ್ ತಾವು ಕಲಿತ ವಿಜ್ಞಾನದ ಬಗ್ಗೆ ಮೂಲಭೂತವಾದ ಅನುಮಾನ ಇಟ್ಟುಕೊಂಡೇ ಆಳವಾದ ಅಧ್ಯಯನ ಮಾಡಿದರು. ವಿಜ್ಞಾನ ವಾಸ್ತವದ ಪ್ರತಿಕೃತಿಯೋ? ಅಥವಾ ಇದೇ ವಾಸ್ತವವೋ? ಸಿವಿಎಸ್ ಈ ಪ್ರಶ್ನೆಯನ್ನು ತಮಗೆ ತಾವೇ ಕೇಳಿಕೊಂಡರು. ವರ್ಷಾನುಗಟ್ಟಲೆ ಈ ಬಗ್ಗೆ ಚಿಂತಿಸಿದರು. ಆಧುನಿಕ ಪಾಶ್ಚಾತ್ಯ ವಿಜ್ಞಾನವು ಕೇವಲ 'ಒಂದು' ಮಾದರಿ. ಈ ಪ್ರಪಂಚ ಕುರಿತಂತೆ ಬೇರೆ ಬೇರೆ ರೀತಿಯ ದೃಷ್ಟಿಕೋನಗಳು ಇವೆ. ಈ ಹಿನ್ನೆಲೆಯಲ್ಲಿ ಆಧುನಿಕ ಪಾಶ್ಚಾತ್ಯ ವಿಜ್ಞಾನದ ಸಿದ್ಧನಿಯಮಗಳು 'ಸಾರ್ವಕಾಲಿಕವೇ' ಎಂಬುದನ್ನು ಅನ್ವೇಷಿಸತೊಡಗಿದರು. ೧೯೭೦ರ ಆದಿಭಾಗದಲ್ಲಿ ಈ ಪ್ರಶ್ನೆಗಳು ಜನಪ್ರಿಯವೂ ಆಗಿರಲಿಲ್ಲ; ಗೌರವಾರ್ಹವೂ ಆಗಿರಲಿಲ್ಲ. ವಿಜ್ಞಾನವೂ ಮೌಲ್ಯ ಮುಕ್ತವೇನಲ್ಲ ಎಂಬ ಸಿವಿಎಸ್‌ರ ವಾದ ನಗೆಪಾಟಲಿಗೀಡಾಗುತ್ತಿತ್ತು.

ಆದರೆ ಈ ಪ್ರಶ್ನೆಗಳು ಅವರನ್ನು ಕಾಡುತ್ತಲೇ ಇದ್ದವು. ಅವರ ಎಂಜಿನಿಯರಿಂಗ್ ಸಂಶೋಧನೆಯ ಜೊತೆ ಜೊತೆಗೆ ಹುಚ್ಚು ಕುದುರೆ ಏರಿದಂತೆ ಇವು ಜೀವನ ಪರ್ಯಂತ ಹಿಂಬಾಲಿಸಿದವು. ಅಮೆರಿಕೆಯಿಂದ ಮರಳಿ ಭಾರತಕ್ಕೆ ಬಂದು ಚೆನ್ನೈ ಐಐಟಿ ಸೇರಿದರು. ೧೯೬೫ರಲ್ಲಿ ಚೆನ್ನೈ ಐಐಟಿಯಿಂದ ಕಾನ್ಪುರ ಐಟಿಟಿಗೆ ಬಂದರು. ಇಲ್ಲಿ ಶ್ರೇಷ್ಠ ಅಧ್ಯಾಪಕರಾಗಿ ಹಾಗೂ ಫ್ಲೂಯಿಡ್ ಮೆಕಾನಿಕ್ಸ್ ಮತ್ತು ಬಯೋ ಟೆಕ್ನಾಲಜಿಯಲ್ಲಿಯ ಸಂಶೋಧಕರಾಗಿ ಹೆಚ್ಚಿನ ಗೌರವಾದರ, ಕೀರ್ತಿ ಅವರಿಗೆ ಲಭ್ಯವಾದವು.

ಕಾನ್ಪುರದ ಐಐಟಿಯಲ್ಲಿದ್ದ ಇವರ ವಿದ್ಯಾರ್ಥಿಗಳಲ್ಲಿ ಅನೇಕರು ಮುಂದೆ ಇವರೊಡನೆ ಸಹಕಾರ್ಯಕರ್ತರಾದರು. ಅವರ ಅನೇಕ ಮೆಚ್ಚುಗೆಯ ವಿದ್ಯಾರ್ಥಿಗಳಲ್ಲಿ ಒಬ್ಬರಾದ ಸುನಿಲ್ ಸಹಸ್ರಬುದ್ಧೆ ಆನಂತರದ ದಿವಸಗಳಲ್ಲಿ ಸಿವಿಎಸ್ ಬಗ್ಗೆ 'ಯಾವಾಗಲೂ ಬಿಳಿಯ ಹತ್ತಿಯ ಪ್ಯಾಂಟು ಮತ್ತು ಅರ್ಧತೋಳಿನ ಬಿಳಿಯ ಶರ್ಟು ಧರಿಸುವ ಈತ ಸ್ಫುರದ್ರೂಪಿ, ಪ್ರಜಾಪ್ರಭುತ್ವವಾದಿ ಮತ್ತು ಕ್ರೀಡಾಮೌಲ್ಯಗಳನ್ನು ಮೈಗೂಡಿಸಿಕೊಂಡಿರುವ ಆಟಗಾರ' ಎಂದು ಬರೆದರು. ಆತ, ತನಗಿಂತ ೨೦ ವರ್ಷ ಕಿರಿಯರ ಜೊತೆಯಲ್ಲಿ ಅವರಷ್ಟೇ ಶಕ್ತಿಯುತರಾಗಿ ಫುಟ್‌ಬಾಲ್ ಆಡುತ್ತಿದ್ದರು. ಸಿವಿಎಸ್‌ರನ್ನು ವಿದ್ಯಾರ್ಥಿ ಕ್ಷೇಮಪಾಲಕರನ್ನಾಗಿ ಮಾಡುವಂತೆ ವಿದ್ಯಾರ್ಥಿ ಸಂಘ ಒತ್ತಾಯ ತಂದಿತು.

ಸುಮಾರು ೧೯೭೦ ಮತ್ತು ೧೯೮೦ರ ದಶಕದಲ್ಲಿ ಆಧುನಿಕ ಕೈಗಾರಿಕೀಕರಣದ ದೆಸೆಯಿಂದ ಪರಿಸರದ ಮೇಲೆ ಆಗುತ್ತಿರುವ ಹಾನಿ ಎಲ್ಲರ ಗಮನಕ್ಕೆ ಬಂದಿತು. ಕೇವಲ ನಿರ್ವಹಣಾ ಪರಿಹಾರಗಳಿಂದ ಮತ್ತು ಆಡಳಿತದ ರಿಪೇರಿಯಿಂದ ಈ ಸಮಸ್ಯೆ ಪರಿಹಾರವಾಗಲಿಕ್ಕಿಲ್ಲ ಎಂದು ಅಭಿಪ್ರಾಯಪಟ್ಟ ಕೆಲವೇ ವಿಜ್ಞಾನಿಗಳಲ್ಲಿ ಸಿವಿಎಸ್ ಕೂಡ ಒಬ್ಬರಾಗಿದ್ದರು. ಬೈಬಲ್‌ನಲ್ಲಿ ಉಕ್ತವಾದ ನಿಸರ್ಗದ ಮೇಲಿನ ಮನುಷ್ಯನ ಆಕ್ರಮಣದ ಪರಿಕಲ್ಪನೆಗೆ ಅನೇಕ ಪಾಶ್ಚಾತ್ಯ ಚಿಂತಕರಂತೆ ಸಿವಿಎಸ್ ಸಹಮತ ವ್ಯಕ್ತಪಡಿಸಿದರು. ಪಾಶ್ಚಾತ್ಯರ ಈ ಪರಿಕಲ್ಪನೆಗೆ ಉತ್ತರ ಕಂಡುಹಿಡಿಯದ ಹೊರತು ಪರಿಸರದ ಉಳಿವಿನ ಬಗ್ಗೆ ಮಾತನಾಡುವುದು ಅರ್ಥಹೀನ

ಎನಿಸಿತು. ಆಧುನಿಕ ತಂತ್ರಜ್ಞಾನ, ನಿಯಂತ್ರಿತ ಪರಿಸರದಲ್ಲಿ ಒಂದು ಉತ್ತಮ ವ್ಯವಸ್ಥೆಯನ್ನು ಸೃಷ್ಟಿಸುತ್ತದೆಯಾದರೂ ಅದರಾಚೆಗೆ ಅರಾಜಕತೆ, ಅವ್ಯವಸ್ಥೆಯನ್ನು ಹುಟ್ಟುಹಾಕುತ್ತದೆ ಎಂದು ಸಿವಿಎಸ್ ವಾದಿಸಿದರು. ಆಧುನಿಕತೆ, ಪ್ರಗತಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅಪಾರ ಪ್ರಮಾಣದ ಸಮೃದ್ಧಿಯನ್ನು ತಂದಿದೆ. ಈ ಪ್ರಕ್ರಿಯೆ ವಸಾಹತು ಸಂಸ್ಕೃತಿಯನ್ನು ತಂದು ಸಂಪನ್ಮೂಲಗಳನ್ನು ದೋಚುವ ಸ್ಥಿತಿಗೂ ಕಾರಣವಾಗಿದೆ. ವಾಸ್ತವವಾಗಿ ಥರ್ಮೋಡೈನಾಮಿಕ್ಸ್ ಎರಡನೆಯ ನಿಯಮವೇ ಈ ದುರುಪಯೋಗಕ್ಕೆ ತನ್ನ ಅನುಮೋದನೆಯನ್ನು ನೀಡುತ್ತದೆ.

೭೦ರ ದಶಕದ ಆದಿಭಾಗದಲ್ಲಿ 'ಎಂಟ್ರೋಪಿ' ಎಂಬ ಪರಿಕಲ್ಪನೆ ಶೇಷಾದ್ರಿಯವರನ್ನು ಪೂರ್ಣ ಆವರಿಸಿತ್ತು. ಈ ಎಂಟ್ರೋಪಿಯನ್ನು ಜಡಸ್ಥಿತಿಯೆಂದು ಕರೆಯಬಹುದು. ಒಂದು ವ್ಯವಸ್ಥೆಯಲ್ಲಿ ಉಪಯುಕ್ತ ಕೆಲಸಕ್ಕೆ ಸಿಕ್ಕದ ಶಕ್ತಿಯ ಪ್ರಮಾಣ ಅಥವಾ ಶಕ್ತಿ ವ್ಯವಸ್ಥೆ ಅಭಾವ ಸ್ಥಿತಿಯತ್ತ ಸಾಗುವಿಕೆಯೆಂದು ನಿಘಂಟು ಎಂಟ್ರೋಪಿ ಎಂಬ ಶಬ್ದಕ್ಕೆ ಅರ್ಥ ನೀಡುತ್ತದೆ. ವಾಸ್ತವವಾಗಿ ಇದು ನಾವು ಮರಳಿ ಹಿಂದಕ್ಕೆ ಪಡೆಯಲಾರದ ಶಕ್ತಿಗೆ ಮತ್ತೊಂದು ಹೆಸರು. ಶಕ್ತಿ ಶಾಶ್ವತವಾಗಿ ನಾಶವಾಗುವುದು ಸಿವಿಎಸ್‌ರ ಮನಸ್ಸನ್ನು ಕದಡಿತು ಮತ್ತು ಆ ಕಾರಣವಾಗಿ ಥರ್ಮೋಡೈನಾಮಿಕ್ಸ್‌ನ ನಿಯಮಗಳನ್ನು ಅವರು ವಿಮರ್ಶಾತ್ಮಕವಾಗಿ ಮರುಪರಿಶೀಲನೆಗೆ ಒಳಪಡಿಸಿದರು. ಈ ಎಲ್ಲ ನಿಯಮಗಳೂ ಒಂದು ನಿರ್ದಿಷ್ಟ ಮೌಲ್ಯ ವ್ಯವಸ್ಥೆಗೆ ಒಳಪಟ್ಟಿದೆ ಎಂಬುದನ್ನು ತಮ್ಮ ಹುಡುಕುವಿಕೆಯ ಮೂಲಕ ಕಂಡುಹಿಡಿದರು.

ಪ್ರಸಕ್ತ ಶಕ್ತಿಯ ಪರಿಕಲ್ಪನೆಗಳು ನಿಸರ್ಗವನ್ನು ಆಧರಿಸುವ ಬದಲಾಗಿ ಮನುಷ್ಯ ಕೇಂದ್ರಿತವಾಗಿದೆ. ಅಷ್ಟೇ ಅಲ್ಲ; ಪಾಶ್ಚಾತ್ಯ ಬಂಡವಾಳಶಾಹಿ ಸಂಸ್ಕೃತಿಯಿಂದ ಪ್ರೇರಿತವಾಗಿದೆ ಎಂದು ಸಿವಿಎಸ್ ತಮ್ಮ ಪುಸ್ತಕ 'ಡೆವೆಲಪ್‌ಮೆಂಟ್ ಎಂಡ್ ಥರ್ಮೋಡೈನಾಮಿಕ್ಸ್' ಕೃತಿಯಲ್ಲಿ ವಾದಿಸಿದ್ದಾರೆ.

ಸ್ವ-ವ್ಯಕ್ತವಾಗುವಂತಹುದು, ಪರಮಸತ್ಯ ಮತ್ತು ವೈಜ್ಞಾನಿಕ ವಿಧಾನಗಳ ಪರಿಣಾಮವಾಗಿ ಹೊರಹೊಮ್ಮುವಂತಹುದು ಎಂದು ಭಾವಿಸಿರುವ ಪರಿಕಲ್ಪನೆಗಳು ವಾಸ್ತವವಾಗಿ ಆಳದಲ್ಲಿರುವ ಸಾಂಸ್ಕೃತಿಕ ಪಳೆಯುಳಿಕೆ ಅಥವಾ ಬೇರುಗಳಾಗಿರುತ್ತವೆ. ಆದುದರಿಂದ ಇವು ಸಾರ್ವಕಾಲಿಕ ಎಂದು ನಂಬಲೇಬೇಕಿಲ್ಲ. ಈ ರೀತಿ ಗಮನಿಸಿದವರಲ್ಲಿ ಸಿವಿಎಸ್ ಮೊದಲಿಗರೇನೂ ಅಲ್ಲ. ೧೯೫೪ ರಲ್ಲಿಯೇ ಆಲ್ಬರ್ಟ್ ಐನ್‌ಸ್ಟೈನ್ ಇದೇ ರೀತಿಯ ಮಾತುಗಳನ್ನು ಹೇಳಿ ಎಚ್ಚರಿಸಿದ್ದರು. 'ವಿಜ್ಞಾನದ ಹಿತದೃಷ್ಟಿಯಿಂದಲೇ, ಈ ರೀತಿಯ ಪರಿಕಲ್ಪನೆಗಳನ್ನು ತೀವ್ರ ಪರೀಕ್ಷೆಗೊಳಪಡಿಸಬೇಕಾದ ಅಗತ್ಯವಿದೆ. ನಮಗೆ ಗೊತ್ತಿಲ್ಲದೆಯೇ ಅವು ನಮ್ಮನ್ನು ಆಳಬಹುದು' ಎಂದು ಅವರು ಹೇಳಿದ್ದರು.

ಸಿವಿಎಸ್ ಇದಕ್ಕೊಂದು ಉದಾಹರಣೆ ನೀಡುತ್ತಾರೆ. ಅಮೆರಿಕನ್ ಫಿಸಿಕಲ್ ಸೊಸೈಟಿ, (ಎಪಿಎಸ್) ಥರ್ಮೋಡೈನಾಮಿಕ್ಸ್‌ನ ಎರಡನೆಯ ನಿಯಮದ ಆಧಾರದ ಮೇಲೆ ಶಕ್ತಿಯ ಪ್ರಮಾಣವನ್ನು ಸೂತ್ರೀಕರಿಸುತ್ತದೆ. ಅದರ ಪ್ರಕಾರ, ವ್ಯವಸ್ಥೆಗೊಳಿಸಿದ, ಅಂಟಿಕೊಂಡ ಚಲನೆಗಳು ಬಹು ಅಮೂಲ್ಯ. ಅತಿ ಉಷ್ಣತೆ (ಅತಿ ಕಡಿಮೆ ಉಷ್ಣತೆ ಕೂಡ) ಅನಂತರ

ಬರುವ ಪ್ರಮುಖ ಅಂಶ. ತಣ್ಣಗಿದೆ ಎನ್ನಿಸುವ ಅಥವಾ ಉಗುರು ಬೆಚ್ಚಗಿನ ಉಷ್ಣತೆಯನ್ನು 'ಕಡಿಮೆ ದರ್ಜೆಗೆ ಇಳಿಸಲ್ಪಟ್ಟ ಶಕ್ತಿ' ಎಂದು ಅದನ್ನು ವ್ಯಾಖ್ಯಾನಿಸಲಾಗಿದೆ.ಆದರೆ, ಏಷ್ಯಾ ಮತ್ತು ಆಫ್ರಿಕಾದಲ್ಲಿ ಮುಂಗಾರು ಮಳೆ ಕೋಟ್ಯಾಂತರ ಟನ್‌ಗಳಷ್ಟು ನೀರನ್ನು ಒಂದೆಡೆಯಿಂದ ಇನ್ನೊಂದೆಡೆ ಸಾಗಿಸುತ್ತದೆ. ಅಗಣಿತ ಪ್ರಮಾಣದ ಕೆಲಸ ನಡೆಯುತ್ತದೆ. ಆದರೆ ಮೇಲಿನ ಸೂತ್ರದ ಪ್ರಕಾರ ಇದು ಕಡಿಮೆ ಗುಣಮಟ್ಟದ ಕೆಲಸ. ಏಕೆಂದರೆ ಕಡಿಮೆ ಉಷ್ಣತೆಯ ವ್ಯಾಪ್ತಿಯಲ್ಲಿ ಕಡಿಮೆ ದರ್ಜೆಯಲ್ಲಿ ನಡೆದಿರುವ ಕೆಲಸ. ಎಪಿಎಸ್ ಸಂಸ್ಥೆ ಶಕ್ತಿಯ ಗುಣಮಟ್ಟವನ್ನು ಅಳೆಯಲು ಅಥವಾ ಪತ್ತೆ ಹಚ್ಚಲು ವಿಚಿತ್ರವಾದ ಮಾನಕಗಳನ್ನು ಇಟ್ಟುಕೊಂಡಿದೆ. ಇದು ನೇರವಾಗಿ ಆರ್ಥಿಕ ಶೋಷಣೆಗೆ ಸಂಬಂಧಿಸಿದ್ದೇ ಆಗಿದೆ. ಒಂದು ವೇಳೆ, ಉಪಯುಕ್ತ ಕೆಲಸಕ್ಕೆ ಬಾರದ ಶಕ್ತಿ ಹಾಗೂ ಶಕ್ತಿಯ ಗುಣಮಟ್ಟದ ಸಂಬಂಧ ವಿಲೋಮ ಪ್ರಮಾಣ ಎಂದರೆ ಉಪಯುಕ್ತ ಕೆಲಸಕ್ಕೆ ಸ್ವಲ್ಪವೂ ಉಪಯೋಗವಾಗದ ಶಕ್ತಿ ಹೆಚ್ಚಿದಂತೆಲ್ಲಾ ಶಕ್ತಿಯ ಗುಣಮಟ್ಟ ಕುಂದುತ್ತಾ ಹೋಗುತ್ತದೆ. ಈ ರೀತಿ ಆಲೋಚಿಸಿದರೆ, ಐವರಿಕೋರ್ಸ್‌ನ ಗುಣಮಟ್ಟ ಅಮೆರಿಕೆಯಲ್ಲಿಯ ಗುಣಮಟ್ಟಕ್ಕಿಂತ ಉತ್ತಮದ್ದಾಗಿರುತ್ತದೆ. ಅಮೆರಿಕೆ ಹೆಚ್ಚಿನ ಅವ್ಯವಸ್ಥೆಯನ್ನು ಸೃಷ್ಟಿಸುತ್ತದೆ. ಆಮದರಿಂದ ಥರ್ಮೋಡೈನಾಮಿಕ್ಸ್ ಅಧ್ಯಯನ ನಿಸರ್ಗವನ್ನು ಅರಿಯಲು ಪ್ರಯತ್ನಿಸುತ್ತದೆ ಹಾಗೂ ಆಡಳಿತದ ನಿಯಮಗಳನ್ನು ರೂಪಿಸುತ್ತದೆ ಎಂಬುದು ನಿಸರ್ಗಕ್ಕೆ ಮಾಡುವ ಅಪಚಾರ. ಬಹುಶಃ ಶಕ್ತಿಯ ಅಧೀನಕ್ಕೆ ಒಳಪಡಿಸಬಹುದಾದ ಪ್ರಕ್ರಿಯೆಗಳನ್ನು ಮಾತ್ರ ಇದು ಅಧ್ಯಯನ ಮಾಡುತ್ತದೆ ಎಂದು ಹೇಳಬಹುದು.

ಪ್ರತ್ಯೇಕೀಕೃತ ವ್ಯವಸ್ಥೆಯ ಪರಿಕಲ್ಪನೆಯ ಮೇಲೆ ವಿಜ್ಞಾನವೆಂಬುದು ನಿಂತಿದೆ. ಆದರೆ ವಾಸ್ತವದಲ್ಲಿ ಈ ರೀತಿ ಪ್ರತ್ಯೇಕೀಕೃತ ವ್ಯವಸ್ಥೆ ಎಂಬ ಸ್ಥಿತಿ ಇಲ್ಲ. ವೈಜ್ಞಾನಿಕ ವಿಶ್ಲೇಷಣೆಯಲ್ಲಿನ ಈ ಪ್ರತ್ಯೇಕೀಕರಣ ಒಂದು ಕೆಟ್ಟ ಮಾದರಿ.

ಉಪಯೋಗಿಸದ ಅಥವಾ ಉಪಯೋಗಕ್ಕೆ ಬಾರದ ಶಕ್ತಿ ಎಂಬ ಪರಿಕಲ್ಪನೆಯ ಹಿಂದೆ ಒಂದು ಚಿಂತನೆ ಅಡಕವಾಗಿದೆ. ಪ್ರಪಂಚ ಕೀಲಿಕೊಟ್ಟ ಗಡಿಯಾರದಂತೆ ಯಾವಾಗಲೂ ಸುತ್ತುತ್ತಲೇ ಇರುತ್ತದೆ ಎಂಬುದೇ ಆ ಚಿಂತನೆ. ಇದರ ಜೊತೆಗೆ ಪ್ರಪಂಚ ಆರಂಭವಾಗುವುದು ಅತ್ಯಂತ ವೈಭವಪೂರಿತವಾಗಿ. ಆನಂತರ ಅದು ಏಕೆ ಕೊಳೆಯುತ್ತಾ ಹೋಗುತ್ತದೆ? ವಿಜ್ಞಾನದೊಂದಿಗೆ ತಳುಕು ಹಾಕಿಕೊಂಡಿರುವ ಧಾರ್ಮಿಕ ಮೌಲ್ಯಗಳನ್ನು ಪರಿಶೀಲಿಸಲು ಈ ಪ್ರಶ್ನೆಗಳು ಎಡೆಮಾಡಿಕೊಟ್ಟವು. ಈ ದಿಸೆಯಲ್ಲಿ ಬಹಳಷ್ಟು ಸಮಸ್ಯೆಗಳ ಮೂಲವಿರುವುದು ಕಾಲದ ಗಣನೆಯಲ್ಲಿ. ಹಿಂದೆ ಕಾಲದ ಗಣನೆಯಲ್ಲಿನ ಚಕ್ರದೃಷ್ಟಿ ಮತ್ತು ಲಯದೃಷ್ಟಿಯನ್ನು ಈಗ ಸರಳ ರೇಖಾ ದೃಷ್ಟಿ ಆಕ್ರಮಿಸಿದೆ. ಆ ಏಕ ಆಯಾಮದ ಸರಳರೇಖೀಕೃತ ಕಾಲದ ಗಣನೆಯ ಹಿಂದೆ ಬೈಬಲ್ ಇದೆ. ಆದುದರಿಂದಲೇ ಇದು ಸಾರ್ವಕಾಲಿಕವಾಗಿ ಉಳಿದಿಲ್ಲ ಎಂದು ಸಿವಿಎಸ್ ಹೇಳುತ್ತಾರೆ. ಆದರೆ ಅನಿವಾರ್ಯವಾದ ಸರಳರೇಖೀಕೃತ ಕಾಲಗಣನೆ ಬದುಕಿನ ಎಲ್ಲ ರಂಗದಲ್ಲಿ ರಾಜ್ಯಭಾರ ಮಾಡುತ್ತಿದೆ. ಆದುದರಿಂದ ಕಾಲ ಗಣನೆಯ ಲಯದ ಕಲ್ಪನೆಯ ಬಗ್ಗೆ ಸಿವಿಎಸ್ ಸಲಹೆ ನೀಡುತ್ತಾರೆ. ಕಾಲದ ಪರಿಕಲ್ಪನೆಯನ್ನು ಬದಲಾಯಿಸದ ಹೊರತು, ವಿಜ್ಞಾನದ ಸಿದ್ಧಾಂತ ಬದಲಿಸಲು ಸಾಧ್ಯವಿಲ್ಲ ಮತ್ತು ಈಗಿರುವ ಪ್ರಬಲವಾದ

ಜ್ಞಾನವ್ಯವಸ್ಥೆಯನ್ನು ಬದಲಿಸಲು ಸಾಧ್ಯವಾಗುವುದಿಲ್ಲ. ವಿಜ್ಞಾನದ ಮೌಲ್ಯ ಬದಲಾಗಬೇಕಿದ್ದರೆ ಅದರ ವ್ಯಾಪ್ತಿಯೂ ಬದಲಾಗಬೇಕು. ಈ ಮೌಲ್ಯಗಳು ಆರ್ಥಿಕ ರೂಪರೇಷೆಗಳ ಮೇಲೆ ಪರಿಣಾಮ ಬೀರಿದವು. ಇದು 'ದಕ್ಷತೆ'ಯನ್ನು ನಿರ್ದಿಷ್ಟ ರೀತಿಯಲ್ಲಿಯೇ (ಆರ್ಥಿಕ ರೂಪರೇಷೆ ಅನುಸರಿಸಿ) ವ್ಯಾಖ್ಯಾನಿಸಲು ಪ್ರೇರೇಪಿಸಿತು. ಉದಾಹರಣೆಗೆ ಬೃಹತ್ ವಿದ್ಯುತ್ ಸ್ಥಾವರಗಳಲ್ಲಿ ಕೇಂದ್ರೀಕೃತವಾಗಿ ವಿದ್ಯುತ್ ಉತ್ಪಾದಿಸಲು ಸರಬರಾಜು ಮಾಡುವ ಯೋಜನೆ ಯೂರೋಪ್‌ಗೆ ಸರಿಹೋದೀತು. ಯೂರೋಪ್ ದೇಶಗಳ ವಿಸ್ತಾರ ಕಡಿಮೆ. ಭಾರತದಂತಹ ವಿಶಾಲವಾದ ದೇಶಕ್ಕೆ ಬೃಹತ್ ಸ್ಥಾವರದ ಕೇಂದ್ರೀಕೃತ ವ್ಯವಸ್ಥೆ ಉತ್ತರವಾಗಲಾರದು. ಆದರೂ ನಾವೂ ಥರ್ಮೋಡೈನಾಮಿಕ್ಸ್‌ನ ಸಿದ್ಧಾಂತಗಳನ್ನು ಪ್ರಶ್ನಿಸದೇ ಪ್ರಮಾಣ ಆಧಾರಿತ ಆರ್ಥಿಕ ಸಿದ್ಧಾಂತದ ತಪ್ಪು ವ್ಯಾಖ್ಯೆಯನ್ನು ಒಪ್ಪಿಕೊಂಡಿದ್ದೇವೆ–ಎಂದು ಸಿವಿಎಸ್ ಕೆಂಡಕಾರುತ್ತಾರೆ. ಆದುದರಿಂದ ಭಾರತೀಯ ಹಿನ್ನೆಲೆಯಲ್ಲಿಯೇ ಈ ರೀತಿಯ ನಿರ್ಣಯ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತಾರೆ.

'ಭಾರತದಲ್ಲಿ ನಾವು ಪಾಶ್ಚಾತ್ಯ ಕ್ರಿಶ್ಚಿಯನ್ ಮೌಲ್ಯಗಳಿಗಿಂತ ಭಿನ್ನವಾದ ನಮ್ಮದೇ ಮೌಲ್ಯ ವ್ಯವಸ್ಥೆ ಇಟ್ಟುಕೊಂಡಿದ್ದೇವೆ. ಅದು ನಮಗೆ ಹೆಚ್ಚಿನ ಅವಕಾಶ ಕಲ್ಪಿಸುತ್ತದೆ. ನಮ್ಮ ಜ್ಞಾನ ಸಂಗ್ರಹಕ್ಕೆ ಇದನ್ನು ಉಪಯೋಗಿಸಿಕೊಳ್ಳಬೇಕು. ಪರಿಸರಕ್ಕೆ ಒದಗಿದ ಅಪಾಯವನ್ನು ಅರಿತ ಅನೇಕ ವಿಜ್ಞಾನಿಗಳು ವಿಜ್ಞಾನಕ್ಕೆ ಈ ಮೌಲ್ಯ ಹೇಗೆ ಮತ್ತು ಎಲ್ಲಿಂದ ಬಂತು ಎಂದು ಪ್ರಶ್ನಿಸುತ್ತಾರೆ. (ವಿಜ್ಞಾನಕ್ಕೆ ಮೌಲ್ಯ ಬೇಕೆ ಎಂಬುದನ್ನು ಮಾತ್ರ ಅವರು ಪ್ರಶ್ನಿಸುತ್ತಿಲ್ಲ) ಭಾರತೀಯ ವಿಜ್ಞಾನಿಗಳನ್ನು ಹೊರತುಪಡಿಸಿ ಉಳಿದವರೆಲ್ಲ ವಿಜ್ಞಾನ ಮೌಲ್ಯ ವಿಹೀನವಾಗಿದೆ ಎಂದು ನಂಬುತ್ತಾರೆ'.

ಇವೆಲ್ಲದರ ಪರಿಣಾಮವಾಗಿ ಸಿವಿಎಸ್ ಚೈತನ್ಯ ಅಥವಾ ಶಕ್ತಿಗೆ ಇನ್ನಿತರ ಇತರ ಗುಣಗಳನ್ನು ಆರೋಪಿಸಿದರು. ಅದನ್ನು 'ಶಕ್ತಿ' ಎಂದು ಕರೆಯಲಾಗಿದೆ. (ಎನರ್ಜಿ ಎನ್ನುವ ಬದಲಿಗೆ) ಇದರಿಂದಾಗಿ ನಿರ್ದಿಷ್ಟವಾದ ಸಾಂಸ್ಕೃತಿಕ, ಭೌಗೋಳಿಕ ಹಿನ್ನೆಲೆಗೆ ತಕ್ಕುದಾದ ರೀತಿಯಲ್ಲಿ ಇದನ್ನು ಸೂತ್ರೀಕರಿಸಲು ಸಾಧ್ಯ ಎಂದು ವಾದಿಸಿದರು. ಸಿವಿಎಸ್ ವಿಜ್ಞಾನದ ತಾತ್ವಿಕ ಮತ್ತು ಸೈದ್ಧಾಂತಿಕ ಸಮಸ್ಯೆಗಳನ್ನು ಕುರಿತು ಮಾತನಾಡುತ್ತಿರುವಂತೆಯೇ ಅವರು ತಮ್ಮ ಕಾಲದ ರಾಜಕೀಯ ಸ್ಥಿತ್ಯಂತರಗಳು ಮತ್ತು ಸಾಮಾಜಿಕ ಸ್ಥಿತ್ಯಂತರಗಳ ಬಗ್ಗೆಯೂ ತೀಕ್ಷ್ಣವಾಗಿ ಸ್ಪಂದಿಸಬಲ್ಲವರಾಗಿದ್ದರು. ೨೦ನೆಯ ಶತಮಾನದಲ್ಲಿ ಎರಡು ರಕ್ತರಹಿತ ಕ್ರಾಂತಿಗಳು ಭಾರತದಲ್ಲಿ ಸಂಭವಿಸಿವೆ ಎಂಬುದನ್ನು ಸಿವಿಎಸ್ ಮನಗಂಡರು. ಒಂದು ನಾವು ೧೯೪೭ರಲ್ಲಿ ಬ್ರಿಟಿಷರಿಂದ ಸ್ವಾತಂತ್ರ್ಯ ದೊರಕಿಸಿಕೊಂಡಿದ್ದು, ಎರಡನೆಯದು ೧೯೭೦ರಲ್ಲಿ ಪಾಶ್ಚಾತ್ಯ ದೇಶಗಳು ತಮ್ಮ ಆರ್ಥಿಕ ಸಿದ್ಧಾಂತಗಳಿಂದ ಪುನಃ ನಮ್ಮನ್ನು ವಾಪಸು ಎಳೆದುಕೊಂಡಿದ್ದು. ನಾವು ಹೇಗೆ ಪಾಶ್ಚಾತ್ಯ ಸರಕುಗಳನ್ನು ಸ್ವೀಕರಿಸುವ ಮನಸ್ಸಿನವರಾಗಿದ್ದೇವೆ ಎಂಬುದರ ಬಗ್ಗೆ ಸಿವಿಎಸ್‌ಗೆ ಆಕ್ರೋಶವಿತ್ತು. ನಮ್ಮ ಜನಕ್ಕೆ ನಮ್ಮಲ್ಲಿ ಇರುವುದಕ್ಕಿಂತಲೂ ಹೆಚ್ಚು ಕೊಡಲು ಸಾಧ್ಯವಾದರೆ ಅಥವಾ ದೇಶವನ್ನು ಸುಸ್ಥಿರಗೊಳಿಸಲು ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಾದರೆ ಇವೆಲ್ಲವೂ ಚೆನ್ನಾಗಿರುತ್ತವೆ ಎಂದು ಸಿವಿಎಸ್ ಬರೆದರು. ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದರೂ ಸುಮಾರು ಶೇ.೭೦ರಷ್ಟು ಜನ ಒಂದಲ್ಲ

ಒಂದು ನ್ಯೂನ್ಯಪೋಷಣೆಯಿಂದ ನರಳುತ್ತಿದ್ದಾರೆ. ತೃತೀಯ ಜಗತ್ತಿನ ದೇಶಗಳು ಎಂದು ಕರೆಸಿಕೊಳ್ಳುವ ದೇಶಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಪ್ರಶ್ನಿಸುವುದಕ್ಕೆ ಸಾಧ್ಯವಿಲ್ಲ. ಅಲ್ಲದೆ ಇಂದು ಸಮಾಜದ ಎಲ್ಲ ಸಮಸ್ಯೆಗಳಿಗೂ ಇದೇ ಪರಿಹಾರ ಎಂಬಂತೆ ನಿರೂಪಿಸಲಾಗುತ್ತಿದೆ. ನಾವು ನಮ್ಮ ಪರಿಸ್ಥಿತಿಗೆ, ಸಮಸ್ಯೆಗೆ ಪರಿಹಾರಗಳನ್ನು ಕಂಡುಹಿಡಿಯಲು ಅನೇಕ ಮಾದರಿಗಳನ್ನು ಮತ್ತು ಉಪಾಯಗಳನ್ನು ಪಡೆದುಕೊಳ್ಳಲು 'ಮಾರುಕಟ್ಟೆ'ಗೆ ಮೊರೆ ಹೋಗಬೇಕಾಗಿಲ್ಲ ಸಿವಿಎಸ್ ಅವರು ಅಭಿಪ್ರಾಯಪಡುತ್ತಾರೆ.

ಆದುದರಿಂದ ಸಕ್ಕರೆ ಕಾರ್ಖಾನೆಯಿಂದ ಬರುವ ಕಾಕಂಬಿಯನ್ನು ಮನುಷ್ಯರು ಮತ್ತು ಪ್ರಾಣಿಗಳು ಆಹಾರವಾಗಿ ಬಳಸುವ ಯೀಸ್ಟ್ ಆಗಿ ಮಾಡುವುದಕ್ಕಿಂತ ಕೈಗಾರಿಕೆಗಳಿಗೆ ಅಗತ್ಯವಿರುವ ಮದ್ಯಸಾರವನ್ನಾಗಿ ಪರಿವರ್ತಿಸುವುದು ಹೆಚ್ಚು ದಕ್ಷತೆಯಿಂದ ಕೂಡಿದ್ದು ಎಂದು ಸಿವಿಎಸ್ ಭಾವಿಸುತ್ತಾರೆ. ಏಕೆಂದರೆ ಮಾರುಕಟ್ಟೆಯ ಶಕ್ತಿಗಳು ಮತ್ತು ನಮ್ಮ ನೀತಿರೂಪಕರು ಬೆಳೆದ ಕಬ್ಬನ್ನು ಕೇಂದ್ರೀಕೃತವಾದ ಸಕ್ಕರೆ ಕಾರ್ಖಾನೆಗೆ ಮಾರಲು ಒತ್ತಾಯಿಸುತ್ತಾರೆ. ಬೆಲ್ಲ ಮಾಡಲು ಬೆಳೆಗಾರರಿಗೆ ಪ್ರೋತ್ಸಾಹ ನೀಡುವುದಿಲ್ಲ. ಬೆಲ್ಲವನ್ನು ಕಮ್ಮಿ ಖರ್ಚಿನಲ್ಲಿ ಗ್ರಾಮದಲ್ಲಿಯೇ ತಯಾರಿಸಬಹುದು. ಬಿಳಿಯ ಸಕ್ಕರೆಗಿಂತ ಉತ್ತಮಮಟ್ಟದ್ದು ಎಂದು ಗೊತ್ತಿದ್ದೂ ಹೀಗೆ ಮಾಡಲಾಗುತ್ತಿದೆ. ಶೇಷಾದ್ರಿಯವರ ಮಾತನ್ನು ಕ್ಲಾಡ್ ಅಲ್ವಾರಿಸ್ ಹೀಗೆ ಉದ್ಧರಿಸುತ್ತಾರೆ.

ಮುಂದುವರೆದ ತಂತ್ರಜ್ಞಾನವನ್ನು ನಿರಾಕರಿಸುತ್ತೇವ ಮೂಲಕ ನಮ್ಮನ್ನು ನಾವು ಅರಿಯುವುದು ಸಾಧ್ಯ . ಈ ಪರ್ಯಾಯಗಳನ್ನು ಕುರಿತು ನಾವು ಯೋಚಿಸಿಲ್ಲ, ಪ್ರಯತ್ನಿಸಿಲ್ಲ. ನನ್ನನ್ನು 'ಗಾಂಧೀವಾದಿ' ಎನ್ನುತ್ತಾರೆ. 'ಗಾಂಧೀವಾದಿ ಆಗಲು ನೀವು ಪ್ರಯತ್ನಿಸಿಯೇ ಇಲ್ಲ. ಗಾಂಧೀವಾದ ಎಂದರೆ ಏನು ಎಂಬುದು ನಿಮಗೇನು ಗೊತ್ತು?' ಎಂದು ನಾನು ಅವರನ್ನು ಕೇಳುತ್ತೇನೆ. ತಮ್ಮನ್ನು ಪರ್ಯಾಯ ವಿಜ್ಞಾನಿ ಎಂದು ಕರೆಯುವ ಬಗ್ಗೆ ಅವರು ಆಕ್ಷೇಪಿಸುತ್ತಾರೆ. ನಾನು ಸಮಸ್ಯೆಗಳನ್ನು ತಳಮಟ್ಟದಿಂದ ಕಾಣುತ್ತೇನೆ. ತಂತ್ರಜ್ಞಾನ ವಿಜ್ಞಾನವನ್ನು ಸಾಕೀತೇ ಹೊರತೂ ವಿಜ್ಞಾನ ತಾಂತ್ರಿಕತೆಯನ್ನಲ್ಲ ಎಂದು ಬಹಳಷ್ಟು ಭಾರತೀಯರಿಗೆ ಅನಿಸಿದೆ. ವಿಜ್ಞಾನ ತಂತ್ರಜ್ಞಾನಕ್ಕೆ ಆಧಾರವಾಗಿದೆ ಎಂಬುದು ಭಾರತೀಯ ವಿಜ್ಞಾನಿಗಳಲ್ಲಿರುವ ತಪ್ಪು ತಿಳುವಳಿಕೆ.

ಈ ಕಾರಣದಿಂದ ಸಿವಿಎಸ್ ಗಾಂಧಿಯನ್ನು ಗೌರವಿಸುತ್ತಾರೆ. ಗಾಂಧಿ 'ಸಮಸ್ಯೆಯನ್ನು ಬಹಳ ಬೇಗ ಚುರುಕಾಗಿ ಗ್ರಹಿಸುತ್ತಾರೆ ಮಾತ್ರವಲ್ಲ; ಅದಕ್ಕೆ ಸೂಕ್ತ ಪರಿಹಾರವನ್ನು ತಮ್ಮ ಬುದ್ಧಿಮತ್ತೆಯಿಂದ ರೂಪಿಸಿಬಿಡುತ್ತಾರೆ ಎನ್ನುತ್ತಾರೆ ಅವರು. ಖಾದಿಯ ಬಗ್ಗೆ ಗಾಂಧಿ ಹೆಚ್ಚು ಒತ್ತುಕೊಟ್ಟಿದ್ದು ಸಿವಿಎಸ್‌ರಿಗೆ ಹೆಚ್ಚು ಮೆಚ್ಚುಗೆಯಾಗಿದೆ. ಅದಕ್ಕೆ ಅವರು ಹೀಗೆ ಹೇಳುತ್ತಾರೆ.

'...ರೈತರಿಗೆ ಕೂಲಿ ದೊರೆಯದ ಕಾಲದಲ್ಲಿ ಇದು ಆಧಾರವಾಗುತ್ತದೆ. ಸ್ವಾವಲಂಬನೆಗೆ ಇದು ದಾರಿ. ಬೇರೆ ಪದಾರ್ಥ ಕೊಳ್ಳಲು ಇದು ವಿನಿಮಯ ವಸ್ತು. ಇದನ್ನು ಮತ್ತೆ ಮತ್ತೆ ನವೀಕರಿಸಬಹುದು. ಮೇಲಾಗಿ ಮಕ್ಕಳಿಗೆ ನೂಲುತ್ತಲೇ ಗಣಿತ ಕಲಿಸಲು ಇದೊಂದು ಸಾಧನವಾಗಬಲ್ಲುದು. ಇದು ಉದ್ಯೋಗ, ಬೆಳೆ, ಉಡುಪು ಎಲ್ಲ ಸೇರಿರುವ ಪದಾರ್ಥ.

ಹೊಸದಾಗಿ ಕಂಡು ಹಿಡಿಯುವುದು ಅಥವಾ ತಯಾರಿಸುವುದು ಒಂದು ಸಾಮಾಜಿಕ ಕ್ರಿಯೆ. ನಮಗೆ ನಮ್ಮ ಪರಂಪರಾಗತ ತಿಳುವಳಿಕೆಯೂ ಇಲ್ಲ; ಆಧುನಿಕ ಜ್ಞಾನವೂ ಇಲ್ಲ ಎನ್ನುವಂತಾಗಿದೆ. ನಾವು ಎರಡೂ ಕಡೆಯಿಂದ ಅನಕ್ಷರಸ್ಥರಾಗಿದ್ದೇವೆ'.

ಭಾರತೀಯ ವಿಜ್ಞಾನದ ಅನ್ವೇಷಣೆ

ಈ ಸಮಸ್ಯೆಗಳು ಸಿವಿಎಸ್ ಅವರಿಗೆ ತೊಂದರೆ ತಂದವು. ಔಪಚಾರಿಕ ವಿಜ್ಞಾನ ಮತ್ತು ತಂತ್ರಜ್ಞಾನದ ವ್ಯವಸ್ಥೆಗೆ ತಲುಪಲಾಗದ ಸ್ಥಿತಿ ಉಂಟಾಯಿತು. ಆದರೂ ಅವರ ಮಟ್ಟಿಗೆ ಐಐಟಿ ಸಂಸ್ಥೆ ಬಹು ಅಮೂಲ್ಯ ಎಂದೆನಿಸಿತು. ಈ ಸಂಸ್ಥೆಯಲ್ಲಿ ಅವರು ಮತ್ತು ಅವರಂತಹ ಶಿಕ್ಷಕರು ಭಾರತದ ಪ್ರಮುಖ ಸಂಪನ್ಮೂಲವಾದ 'ಯುವಶಕ್ತಿ'ಯನ್ನು ಬೆಳೆಸುತ್ತಿದ್ದರು. ಹೊರದೇಶದತ್ತಮುಖ ಮಾಡಿರುವ ಮೆದುಳಿಗೆ ತರಬೇತಿ ನೀಡಿ ಪ್ರಯೋಜನವಿಲ್ಲ.

೧೯೭೭ರ ವೇಳೆಗೆ ಈ ಸಂಸ್ಥೆಯನ್ನು ಬಿಡಲು ಹಾಗೂ ಅವರ ಇಚ್ಛೆಯಂತೆ ಅಭಿವೃದ್ಧಿ ಕೆಲಸದಲ್ಲಿ ಹೆಚ್ಚಿನ ರೀತಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ನಿರ್ಧರಿಸಿದರು. ವಿಜ್ಞಾನವನ್ನು ನೇರವಾಗಿ ಗ್ರಾಮಗಳಿಗೆ ತೆಗೆದುಕೊಂಡು ಹೋಗಿ, ದೈನಂದಿನ ಬದುಕಿನ ಅಭಿವೃದ್ಧಿಗಾಗಿ, ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ ತುಡಿತ ೭೦ರ ದಶಕದಲ್ಲಿ ಹಲವಾರು ಹೊಸ ಹೊಸ ರೀತಿಗಳಲ್ಲಿ ಹೊರಹೊಮ್ಮುತ್ತಿತ್ತು. ೧೯೭೬ರಲ್ಲಿ ನಡೆದ ಸೈನ್ಸ್ ಕಾಂಗ್ರೆಸ್ ಅಧಿವೇಶನದಲ್ಲಿಯೂ ಗ್ರಾಮೀಣ ಅಭಿವೃದ್ಧಿ ಬಹುಮುಖ್ಯ ವಿಷಯವಾಗಿತ್ತು. ಆದರೆ ಹೆಚ್ಚಿನ ಸೃಜನಶೀಲ ಮತ್ತು ಹೊಸ ಅನ್ವೇಷಣೆಗಳು ಔಪಚಾರಿಕ ವಿಜ್ಞಾನದ ಆಚೆಗೆ ಇದ್ದವು. ಕೇರಳದಲ್ಲಿ ೧೯೬೨ರ ಸುಮಾರಿಗೆ ಮಾರ್ಕ್ಸ್‌ವಾದಿಗಳಿಂದ ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ ಎಂಬ ಸಂಘಟನೆ ಆರಂಭವಾಗಿತ್ತು. 'ಸಾಮಾಜಿಕ ಕ್ರಾಂತಿಗಾಗಿ ವಿಜ್ಞಾನ' ಎಂಬ ಘೋಷಣೆಯೊಂದಿಗೆ ಅದು ಕೆಲಸ ಮಾಡುತ್ತಿತ್ತು. ಇದು ಅಮೂರ್ತ ವಿಜ್ಞಾನ ಮತ್ತು ಜನರ ದೈನಂದಿನ ಬದುಕಿನ ನಡುವೆ ಸೇತುವೆಯಾಗಲು ಯತ್ನಿಸಿತು. ಈ ಕೆಎಸ್‌ಎಸ್‌ಪಿ ಕೇರಳದ ಮೌನ ಕಣಿವೆಯಲ್ಲಿ ಉದ್ದೇಶಿತ ವಿದ್ಯುತ್ ಸ್ಥಾವರದ ವಿರುದ್ಧ ವ್ಯಾಪಕವಾದ ಚಳುವಳಿ ಸಂಘಟಿಸುವಲ್ಲಿ ಯಶಸ್ವಿಯಾಯಿತು. ಅಲ್ಲದೆ ಕೇರಳ ಸಂಪೂರ್ಣ ಸಾಕ್ಷರರಾಜ್ಯವಾಗಲೂ ಶ್ರಮಿಸಿತು. ೧೯೯೬ರ ವೇಳೆಗೆ ಕೇರಳದಲ್ಲಿ ಕೆಎಸ್‌ಎಸ್‌ಪಿಯ ೨೦೦೦ ಘಟಕಗಳೂ ಸುಮಾರು ೬೦ ಸಾವಿರ ಸದಸ್ಯರೂ ಇದ್ದರು. ಅದೇ ವರ್ಷ ಪರ್ಯಾಯ ನೊಬೆಲ್ ಪ್ರಶಸ್ತಿ ಎಂದು ಕರೆಯುವ ರೈಟ್ ಲೈವ್ಲಿಹುಡ್ ಪ್ರಶಸ್ತಿಯೂ ಈ ಕೆಎಸ್‌ಎಸ್‌ಪಿ ಸಂಸ್ಥೆಗೆ ಸಿಕ್ಕಿತು.

ಅನಿವಾರ್ಯವಾಗಿ ಕೆಎಸ್‌ಎಸ್‌ಪಿ ಅಖಿಲ ಭಾರತ ಮಟ್ಟದ ಜನ ವಿಜ್ಞಾನ ಸರಣಿಯ ನೇತೃತ್ವ ವಹಿಸಬೇಕಾಗಿ ಬಂತು. ಈ ಮಟ್ಟದ ಸಂಸ್ಥೆ ಎಲ್ಲೆಡೆಯೂ ಕೆಎಸ್‌ಎಸ್‌ಪಿಯಂಥ ಸಂಸ್ಥೆಗಳನ್ನು ಸೃಷ್ಟಿಸುತ್ತದೆ. ಈ ಸಂಘಟನೆಯಲ್ಲಿ ವಿದ್ಯಾರ್ಥಿಗಳು ಹಾಗೂ ವೈವಿಧ್ಯಮಯವಾದ ವೃತ್ತಿಪರರು ಇರುತ್ತಾರೆ. ವೈದ್ಯರು, ಎಂಜಿನಿಯರ್‌ಗಳು, ಶಿಕ್ಷಕರು, ಸರ್ಕಾರಿ ನೌಕರರು ಮುಂತಾದ ವೃತ್ತಿಪರರನ್ನು ಈ ಸಂಘಟನೆ ತನ್ನ ಜೊತೆಯಲ್ಲಿ ತೊಡಗಿಸಿಕೊಳ್ಳುತ್ತದೆ. ಪರಿಸರ, ರಕ್ಷಣೆ, ಆರೋಗ್ಯ, ಮಹಿಳೆಯರ ಅಭಿವೃದ್ಧಿ, ಶಿಕ್ಷಣ ಸುಧಾರಣೆ, ವೈಜ್ಞಾನಿಕ ಕೃಷಿ ವಿಧಾನಗಳ ಪ್ರಚಾರ ಇವೆಲ್ಲವೂ ಇದರಲ್ಲಿ ಸೇರಿರುತ್ತವೆ.

ಗಾಂಧಿ ಮತ್ತು ಸರ್ವೋದಯ ಮಾದರಿಯಂತೆ ೧೯೭೬ರಲ್ಲಿ ವಾರ್ಧಾದಲ್ಲಿ ಗ್ರಾಮೀಣ ಅಭಿವೃದ್ಧಿಗಾಗಿ ವಿಜ್ಞಾನ ಕೇಂದ್ರ ಸ್ಥಾಪಿಸಲು ದೇವೇಂದ್ರ ಕುಮಾರ್ ಮುಂದಾದರು. ಈ ಕೇಂದ್ರ ಮಗನವಾಡಿಗೆ ಹೊಸ ಜೀವಂತಿಕೆಯನ್ನು ನೀಡಿತು. ಇದೇ ಮಗನವಾಡಿಯಲ್ಲಿ ನಾಲ್ಕು ದಶಕಗಳ ಪೂರ್ವದಲ್ಲಿ ಗಾಂಧಿ ಮತ್ತವರ ಸಹೋದ್ಯೋಗಿಗಳು ಗ್ರಾಮೋದ್ಯೋಗದ ಬಗ್ಗೆ ಹೆಚ್ಚಿನ ಕೆಲಸ ಮಾಡಿದ್ದರು. ಗಾಂಧಿ ಒಬ್ಬ ವಿಜ್ಞಾನವಿರೋಧಿ ಎಂಬ ತಪ್ಪು ಅಭಿಪ್ರಾಯ ಹೋಗಲಾಡಿಸಲು ಜೆ.ಸಿ.ಕುಮಾರಪ್ಪರ ನೇರ ಶಿಷ್ಯರಾದ ದೇವೇಂದ್ರ ಕುಮಾರ್ ಪ್ರಯತ್ನ ಮಾಡಿದರು. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಎ.ಕೆ.ಎನ್.ರೆಡ್ಡಿ ಅಸ್ತ್ರ ಸ್ಥಾಪಿಸಿದರು (ಅಪ್ಲಿಕೇಶನ್ ಆಫ್ ಸೈನ್ಸ್ ಎಂಡ್ ಟೆಕ್ನಾಲಜಿ ಟು ರೂರಲ್ ಏರಿಯಾಸ್) ಭಾರತದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಸಂಸ್ಥೆಗಳು ದಂತ ಗೋಪುರದಲ್ಲಿ ಕುಳಿತು ಬುದ್ಧಿಜೀವಿಗಳತ್ತ ವಾಲಿವೆ. ಸ್ಥಳೀಯ ಬೇರುಗಳಿಲ್ಲದೆ, ನಮ್ಮ ದೇಶಕ್ಕೆ ಅಪರಿಚಿತವೆನಿಸಿವೆ ಎಂಬ ಆಕ್ಷೇಪಣೆಗಳ ಹಿನ್ನೆಲೆಯಲ್ಲಿ ಅಸ್ತ್ರ ಹುಟ್ಟಿತು. ಅಸ್ತ್ರದ ವ್ಯಾಪ್ತಿಗೆ ಬಂದ ವಿಜ್ಞಾನಿಗಳು ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಗ್ರಾಮೀಣ ಅಭಿವೃದ್ಧಿಗೆ ಸೂಕ್ತವಾಗಬಲ್ಲ ತಾಂತ್ರಿಕತೆಯನ್ನು ಬೆಳೆಸುತ್ತಾರೆ.

ಇದು ಕಳೆದ ೨೦ ವರ್ಷಗಳಿಂದ ಕರ್ನಾಟಕದ ಒಂದು ಭಾಗದ ಜನರ ಒಡನಾಟದ ಫಲವಾಗಿ ಜನರಿಗೆ ಶಕ್ತಿ ತುಂಬುವ ಸಲುವಾಗಿ ಹಲವಾರು ತಾಂತ್ರಿಕತೆಯನ್ನೂ, ಉಪಕರಣಗಳನ್ನೂ ನೀಡಿದೆ. ಇವುಗಳಲ್ಲಿ ಬಹುಮುಖ್ಯವಾದುದು ಬಯೋಗ್ಯಾಸ್‌ನ ಶಕ್ತಿಯ ದಕ್ಷ ಬಳಕೆ. ಇದಲ್ಲದೇ ಇದು ಪರಿಸರ ಸ್ನೇಹಿ ಮತ್ತು ಅಲ್ಪವೆಚ್ಚದ ಮನೆಗಳ ಹಲವಾರು ಮಾದರಿಗಳ ವಿನ್ಯಾಸ ರೂಪಿಸಿದೆ.

ಮಧ್ಯಪ್ರದೇಶದ ಹೊಶಂಗಾಬಾದ್ ಜಿಲ್ಲೆಯಲ್ಲಿ ಸರ್ಕಾರಿ ಶಾಲೆಯ ಉಪಾಧ್ಯಾಯರಿಗೆ ವಿಜ್ಞಾನ ಕಲಿಸುವ ಕಾರ್ಯಕ್ರಮವನ್ನು ಕಿಶೋರ್ ಭಾರತಿ ಎಂಬುವವರು ಆರಂಭಿಸಿದರು. ಈ ಯೋಜನೆಯ ಹಿಂದಿನ ಶಕ್ತಿ ಅನಿಲ್ ಶಡಗೋಪಾಲ್ ಎಂಬ ವ್ಯಕ್ತಿ. ಇವರು ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿನ ಪದವೀಧರ ಮತ್ತು ಮುಂಬೈನ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಹಳ್ಳಿಗಳಲ್ಲಿ ಇದ್ದು ಅಲ್ಲಿ ಕೆಲಸ ಮಾಡಬೇಕು ಎನ್ನುವ ಉದ್ದೇಶದಿಂದ ಅದನ್ನು ಬಿಟ್ಟರು. ಮಧ್ಯಪ್ರದೇಶದ ಶಡಹೋಲ್ ಜಿಲ್ಲೆಯಲ್ಲಿ ಐಐಟಿಯ ಕೆಲವು ಪದವೀಧರರು 'ವಿದೂಶಕ್ ಕಾರ್ಖಾನಾ' ಎಂಬುದನ್ನು ಸ್ಥಾಪಿಸಿದರು. ಆ ಮೂಲಕ ಸ್ಥಳೀಯ ಕೌಶಲವನ್ನು ಪತ್ತೆ ಹಚ್ಚುವ ಹಾಗೂ ಅದನ್ನು ಹೆಚ್ಚಿಸುವ ಕೆಲಸದತ್ತ ತೊಡಗಿದರು.

ಸಿವಿಎಸ್ ಅವರ ಪ್ರಯತ್ನ ಪ್ರತ್ಯೇಕವಾದ, ಈ ರೀತಿ ಒಂಟಿ ಪ್ರಯತ್ನವೂ ಆಗಿರಲಿಲ್ಲ. ಆದರೆ ಈ ವಿಷಯದಲ್ಲಿ ಅವರ ತಲ್ಲಣ, ತುಡಿತಗಳು ಮಾತ್ರ ಪ್ರಾಯಶಃ ವಿಶಿಷ್ಟವಾಗಿದ್ದವು. 'ಆಹಾರ, ವಸತಿಯಂತಹ ಮೂಲಭೂತ ಅಗತ್ಯಗಳಿಗೆ ಕೆಲಸ ಮಾಡುವ ಮೂಲಕ ವಿಜ್ಞಾನ ಮತ್ತು ತಾಂತ್ರಿಕತೆಯನ್ನು ಬದಲಿಸಲು ಸಾಧ್ಯ ಎಂದು ಆಲೋಚಿಸಿದವರು ಸಿವಿಎಸ್ ಮಾತ್ರ'

ಎಂದು ಬರೆದವರಲ್ಲಿ ಕ್ಲಾಡ್ ಅಲ್ವಾರೀಸ್ ಕೂಡ ಒಬ್ಬರು. ಭಾರತೀಯ ವಿಜ್ಞಾನದ ಮೊದಲಿಗರು–ಸೀವಿಎಸ್ ಎಂದು ಕರೆದರು.

'...ಈ ರೀತಿಯ ವಿಜ್ಞಾನ.. ಅದು ಕಾರ್ಯನಿರ್ವಹಿಸುವ ಸಮಾಜದ ಆದ್ಯತೆಗಳನ್ನು ಪ್ರತಿಬಿಂಬಿಸುವ ಬೌದ್ಧಿಕ ಆಲೋಚನೆಯಾಗಿದೆ. ವಿಜ್ಞಾನ ಸಾಂಸ್ಕೃತಿಕ ಮೌಲ್ಯಗಳನ್ನು ಪ್ರತಿಧ್ವನಿಸಬೇಕು. ನಮ್ಮ ಪರಿಸರದ ಬದುಕನ್ನು ಅದು ಗೌರವಿಸಬೇಕೆ ವಿನಃ ಪಾಶ್ಚಾತ್ಯ ಪರಿಸರದ ಬದುಕನ್ನಾಗಲೀ ಅಥವಾ ಅದರ ವಿಚಿತ್ರವಾದ ಉತ್ಪಾದನಾ ಕ್ರಮಗಳನ್ನಾಗಲೀ ಅಲ್ಲ'

ತಮ್ಮ ಔಪಚಾರಿಕ ವಿಜ್ಞಾನ ಸಂಸ್ಥೆಯನ್ನು ತೊರೆದು ತಮಿಳುನಾಡಿನ ಹುಟ್ಟೂರಿಗೆ ಮರಳಿದ ಮೇಲೆ ಸಿವಿಎಸ್ ಇದನ್ನೇ ಇನ್ನಷ್ಟು ತೀವ್ರವಾದ ಆಸ್ಥೆಯಿಂದ ಮಾಡಿದರು. ಮುಂದಿನ ಮೂರು ವರ್ಷ ಭಾರತದ ಬಹುದೊಡ್ಡ ಈಸ್ಟ್ ತಯಾರಿಸುವ ಕಾರ್ಖಾನೆಯನ್ನು ಮೈಸೂರಿನಲ್ಲಿ ನಡೆಸಿದರು. ೧೯೭೭ರಲ್ಲಿ ಅವರು ಎ.ಎಂ.ಎಂ ಮುರುಗಪ್ಪ ಚೆಟ್ಟಿಯಾರ್ ರಿಸರ್ಚ್ ಸೆಂಟರ್‌ನ್ನು ಕಟ್ಟಿ ಅದನ್ನು ತಮ್ಮ ಕರ್ಮಭೂಮಿಯನ್ನಾಗಿಸಿಕೊಂಡರು. ಈ ಎಂ.ಸಿ.ಆರ್.ಸಿ ಮೂಲಭೂತ ಕಾಳಜಿಗೆ ಅಂಟಿಕೊಂಡಿರುವ ಸಂಸ್ಥೆ. 'ದಿನೇ ದಿನೇ ಕಡಿಮೆಯಾಗುತ್ತಿರುವ ಸಂಪನ್ಮೂಲಗಳ ಈ ಪ್ರಪಂಚದಲ್ಲಿ ಅರ್ಥಪೂರ್ಣ ಮತ್ತು ಉತ್ತಮ ಗುಣಮಟ್ಟದ ಜೀವನವನ್ನು ಎಲ್ಲ ಜೀವಿಗಳಿಗೆ ನೀಡಿಯೂ ಪರಿಸರ ಸಮತೋಲನ ಕಾಯ್ದುಕೊಳ್ಳುವುದು ಹೇಗೆ?' ಎಂಬುದು ಈ ಕಾಳಜಿಯಾಗಿತ್ತು.

ಈಗ ಈ ಕೆಲಸ ಮಾಡಲು ಸಿದ್ಧಮಾದರಿಗಳು ಇಲ್ಲ ಎಂಬುದು ಮೊದಲೇ ಸಿವಿಎಸ್‌ಗೆ ತಿಳಿದಿತ್ತು. ಆದರೆ ಅವರು ಮಹಾತ್ಮ ಗಾಂಧಿ ಮತ್ತು ಜೆ.ಸಿ.ಕುಮಾರಪ್ಪನವರ ಪ್ರಯೋಗಗಳಿಂದ ಬಹಳಷ್ಟು ಸ್ಫೂರ್ತಿಯನ್ನು ಪಡೆದಿದ್ದರು. ಅವರಿಬ್ಬರೂ ಅನ್ವೇಷಣೆಯ ಮೂಲ ಮಾದರಿಗಳಾಗಿದ್ದರು. ಬೃಹತ್ ದೇವಾಲಯಗಳನ್ನು ನಿರ್ಮಿಸಿದ, ಸೊನ್ನೆಯಿಂದ ಅನ್ವೇಷಿಸಿದ ಹಾಗೂ ನೂರಾರು ವರ್ಷಗಳಿಂದ ಅದರ ಪವಾಡಸದೃಶಗುಣದಿಂದಲೇ ಬೇವಿನ ಮರವನ್ನು ಸಾಕುತ್ತಿರುವ ಸಾಂಸ್ಕೃತಿಕ ಹಿನ್ನೆಲೆಯ ಆಧಾರದಲ್ಲಿಯೇ ಗಾಂಧಿ ಮತ್ತು ಕುಮಾರಪ್ಪ ಚಿಂತನೆ ರೂಪಿಸಿದ್ದರು.

ಅಭಿವೃದ್ಧಿಯ ಪಾಶ್ಚಾತ್ಯ ಪರಿಕಲ್ಪನೆ ಮತ್ತು ಅದೇ ಮಾದರಿಯ ಹಿಂದೆ ಕುರುಡಾಗಿ ಧಾವಿಸುವುದರ ಹಿಂದಿರುವ ಅಸಂಗತತೆಯನ್ನು ಗಾಂಧಿ ಮತ್ತು ಕುಮಾರಪ್ಪನವರಂತೆ ಸಿವಿಎಸ್ ಕೂಡ ಕಂಡಿದ್ದರು. ಆ ನಂತರದ ದಿವಸಗಳಲ್ಲಿ ಅವರು ಹೀಗೆ ಬರೆದರು:

'ಈ ೨೦ನೆಯ ಶತಮಾನದಲ್ಲಿ ಪಾಶ್ಚಾತ್ಯ ಮಾದರಿಗಳು ಏನು ಮಾಡಿವೆ? ಎರಡು ವಿಶ್ವಯುದ್ಧಗಳಲ್ಲಿ ಸರ್ವನಾಶ, ಲಕ್ಷೋಪಲಕ್ಷ ಜನರ ಸ್ಥಳಾಂತರ, ಕುಲನಾಶ, ನೈತಿಕ ದಿವಾಳಿತನ, ಅಣ್ವಸ್ತ್ರಗಳು, ಪರಿಸರ ನಾಶ ಇತ್ಯಾದಿ. ಈ ಪಟ್ಟಿ ಅನಂತವಾದುದು. ಈ ಎಲ್ಲ ಸರ್ವನಾಶಕ್ಕೆ ವಸಾಹತುಶಾಹಿ ಗುಲಾಮಗಿರಿಯೇ ಕಾರಣವಾಗಿದೆ. ಇವೆಲ್ಲವೂ ಪಾಶ್ಚಾತ್ಯ ಜ್ಞಾನ ವ್ಯವಸ್ಥೆಯ ಫಲಶ್ರುತಿ. ಅಂತಿಮವಾಗಿ ಅವರು ಸಮಾನತೆಯನ್ನು ಸಾಧಿಸಲು ಆಗಲೇ ಇಲ್ಲ'.

ಮಾರ್ಗದರ್ಶಕರಾಗಿ ಮಹಾತ್ಮ

ಮಹಾತ್ಮ ಮತ್ತು ಅವರ ಶಿಷ್ಯರ ಜೊತೆಗಿನ ನಂಟು ಸಿವಿಎಸ್‌ರಿಗೆ ತಮ್ಮ ಬಗ್ಗೆ ತೀರ್ಪು ಕೊಡಲು ಕಠಿಣ ಮಾನದಂಡಗಳಿಗೆ ಒಳಗಾಗುವಂತೆ ಮಾಡಿತು.

ದೇಶದ, ಅದರಲ್ಲಿಯೂ ವಿಶೇಷವಾಗಿ ಗ್ರಾಮೀಣ ಬಡವರ ಅಭಿವೃದ್ಧಿ ಸಮಸ್ಯೆಗಳ ಬಗ್ಗೆ ಕೆಲಸ ಮಾಡುವ ವ್ಯಕ್ತಿಗಳನ್ನು ಕೆಲವು ಪ್ರಶ್ನೆಗಳು ಕಾಡುತ್ತವೆ. ನಾನು ಅವರಿಗಾಗಿ ಏನನ್ನಾದರೂ ಮಾಡುತ್ತಿದ್ದೇನೆಯೋ? ಅಥವಾ ನನಗಾಗಿ ನಾನು ಏನನ್ನಾದರೂ ಮಾಡುತ್ತಿದ್ದೇನೆಯೋ? ಬಹುತೇಕ ಮಂದಿಗೆ ತಮ್ಮ ವೃತ್ತಿ ಬದುಕಿನಲ್ಲಿ ಒಂದಲ್ಲ ಒಂದು ಹಂತದಲ್ಲಿ ಈ ಪ್ರಶ್ನೆ ಎದುರಾಗುತ್ತದೆ. ಈ ಪ್ರಶ್ನೆಯನ್ನು ಸಾರ್ವತ್ರಿಕಗೊಳಿಸಿ ಈ ರೀತಿ ಹೇಳಬಹುದು: ಎರಡು ರೀತಿಯ ಅಭಿವೃದ್ಧಿಯ ಮಾದರಿಗಳು ಇವೆ. ಒಂದು ವೈರಸ್. ಅದು ಜೀವಿಯನ್ನು ಆಕ್ರಮಿಸುತ್ತದೆ. ಅದು ಆದರ ಸಂಖ್ಯೆವೃದ್ಧಿ ಮಾಡಿಕೊಳ್ಳಲು ಆ ಜೀವಿಯಲ್ಲಿರುವ ಪದಾರ್ಥವನ್ನು ಬಳಸಿಕೊಳ್ಳುತ್ತದೆ. ಪರಿಣಾಮ ಅಂತಿಮವಾಗಿ ಈ ಜೀವಿ ಸಾಯುತ್ತದೆ. ಬಹುತೇಕ ಅಭಿವೃದ್ಧಿ ಏಜೆನ್ಸಿಗಳು ಈ ಮಾದರಿಯವು. ತಮ್ಮ ಜ್ಞಾನದ ದುರಹಂಕಾರದಲ್ಲಿ ಹಳ್ಳಿಗರಿಗೆ ಏನು ಬೇಕು ಅಥವಾ ಅವರಿಗೆ ಏನು ಕೊಡಲು ಸಾಧ್ಯ ಎಂಬುದರ ಬಗ್ಗೆ ಗಮನ ಹರಿಸುವುದಿಲ್ಲ. ಹೀಗಾಗಿ ಅವು ಹಳ್ಳಿಯನ್ನು ಅಭಿವೃದ್ಧಿಪಡಿಸುವುದೇ ಇಲ್ಲ. ಸಾಮಾನ್ಯವಾಗಿ ನಮ್ಮ ತದ್ವತ್ ಪ್ರತಿಗಳನ್ನು ಸೃಷ್ಟಿಸುತ್ತ ಹಳ್ಳಿಯನ್ನು ನಾಶಪಡಿಸುತ್ತವೆ. ನೀವು 'ಹಳ್ಳಿ' ಎನ್ನುವ ಶಬ್ದವನ್ನು ಬದಲಾಗಿ 'ತೀರಪ್ರದೇಶ', 'ಅರಣ್ಯ', 'ವನ್ಯಮೃಗ' ಅಥವಾ 'ಜೀವಿ' –ಈ ರೀತಿಯ ಯಾವುದೇ ಅಭಿವೃದ್ಧಿ ಕ್ಷೇತ್ರವನ್ನು ಹೆಸರಿಸಿ, ಈ ಏಜೆನ್ಸಿಗಳು ಬೆಳೆಯತೊಡಗಿದಂತೆ ಹಳ್ಳಿಗಳು... ಅರಣ್ಯ, ಜೀವಿ ನಾಶವಾಗುತ್ತವೆ.

ಆದರೆ, ಈ ಸಾವಯವೀಕರಣದ ಅಭಿವೃದ್ಧಿ ಮಾದರಿಯಲ್ಲಿ ಅಭಿವೃದ್ಧಿಕಾರ್ಯ ಮತ್ತು ಹಳ್ಳಿ ಸಹಜೀವಿಯಂತೆ ಒಂದನ್ನೊಂದು ಕೂಡಿಕೊಳ್ಳುತ್ತವೆ. ಅಭಿವೃದ್ಧಿ ಆಕಾಂಕ್ಷಿಗಳು ಜನರ ಜೊತೆಯಲ್ಲಿ ತಾವೂ ಬೆಳೆಯುತ್ತಾರೆ. ಅಭಿವೃದ್ಧಿಪಡಿಸುವವನು ಮತ್ತು ಅಭಿವೃದ್ಧಿಗೊಳಪಡುವವನು ಇಬ್ಬರೂ ಪರಸ್ಪರ ಕಲಿಯುತ್ತಾರೆ. ಸಾಧ್ಯವಾದಷ್ಟುಮಟ್ಟಿಗೆ ನಮ್ಮ ಕೆಲಸ ಈ ಎರಡೂ ಪಕ್ಷಗಳು ಚೆನ್ನಾಗಿ ಬೆಳೆಯುವಂತೆ ತೊಡಗಿಸಿಕೊಳ್ಳುವುದಾಗಿದೆ. ಈ ರೀತಿಯಿಂದ ಮಾತ್ರ ನಾರು ತೆಪ್ಪ, ಶಕ್ತಿಯ ಉಪಕರಣಗಳು, ಪೌಷ್ಟಿಕಾಂಶ ಇತ್ಯಾದಿಗಳನ್ನು ಅನ್ವೇಷಿಸಲು ಸಾಧ್ಯ. ಹೀಗೆ ನಮ್ಮ ಅನೇಕ ಅನ್ವೇಷಣೆ, ಸಂಶೋಧನೆ ಅಥವಾ ತಯಾರಿಕೆಯನ್ನು ಸ್ಥಳೀಯರ ಭಾಗವಹಿಸುವಿಕೆ ಮತ್ತು ಸಲಹೆಯ ಮೇರೆಗೆ ಮಾಡಲಾಗುತ್ತದೆ.

ಈ ರೀತಿ ಮುರುಗುಪ್ಪ ಚೆಟ್ಟಿಯಾರ್ ರಿಸರ್ಚ್ ಸೆಂಟರ್ ವಿಜ್ಞಾನಿಗಳು ಮತ್ತು ಸಾಮಾನ್ಯ ಜನ ಒಟ್ಟಿಗೆ ಕಲೆತು ಸಂಶೋಧನಾ ಕೆಲಸ ಮಾಡುವ ಕೇಂದ್ರವಾಯಿತು. ಈ ಕೇಂದ್ರ ಓಯಸಿಸ್‌ನಂತೆ, ಚೆನ್ನೈ ನಗರದ ಅಂಚಿನಲ್ಲಿ, ಹಸಿರು ಮತ್ತು ಮರಗಳ ನಡುವೆ ಇತ್ತು. ಇಲ್ಲದೇ ಇದ್ದಿದ್ದರೆ, ಚೆನ್ನೈನ ಇತರ ಭಾಗಗಳಂತೆ ಈ ಒಣ, ಬರಡು ಭೂಮಿಯಿಂದ ಕೂಡಿರಬೇಕಾಗುತ್ತಿತ್ತು. ಈ ಕಾಂಪೌಂಡಿನೊಳಗೆ ಪ್ರಯೋಗ ಶಾಲೆಗಳು ಇದ್ದವು. ಅಲ್ಲಿ

ವಿಜ್ಞಾನಿಗಳು ಹಲವು ವಿಧದ ಉಪಕರಣಗಳಿಗಾಗಿ ಪ್ರಯೋಗ ನಡೆಸಿದ್ದರು. ಈ ಕೇಂದ್ರದ ಪುಟ್ಟಾ ಆವರಣದ ಒಂದು ಮೂಲೆಯಲ್ಲಿ ಸಣ್ಣ ಬಯೋಗ್ಯಾಸ್ ಸ್ಥಾವರ ಇತ್ತು. ಇದು ಕೇವಲ ಒಂದೇ ಒಂದು ಹಸು ಹೊದಿದ್ದೂ ರೈತನೂ ಬಳಸಲು ಬರುವಂತಹುದು. ಹೆಚ್ಚಿನ ಬಯೋಗ್ಯಾಸ್ ತಂತ್ರಜ್ಞಾನಗಳು ಹೀಗಿರದೇ ದೊಡ್ಡ ರೈತರಿಗೆ ಸರಿಹೋದುವಂತಿದ್ದು ಅವಕ್ಕೆ ಹೆಚ್ಚು ಸಗಣಿ ಹಾಗೂ ಸ್ಥಳಾವಕಾಶ ಬೇಕಾಗುತ್ತಿತ್ತು.

ಇವೆಲ್ಲದರ ಜೊತೆಗೆ, ದೂದಿ (ಸಿಲ್ಕ್ ಕಾಟನ್)ಯಿಂದ ಪೇಪರ್ ಮಾಡುವ ತಾಂತ್ರಿಕತೆಯನ್ನು ಎಂಸಿಆರ್‌ಸಿ ಅಭಿವೃದ್ಧಿಪಡಿಸಿತು. ಈ ಪ್ರಕ್ರಿಯೆಗೆ ಸೀಬಾ ಪೆಂಟಾಂಡ್ರಾ ಸಸ್ಯದ ಅಗತ್ಯವಿದೆ. ಈ ಸಸ್ಯ ಪ್ರಬೇಧವನ್ನು ಬರಡು ಭೂಮಿಯಲ್ಲಿಯೂ ಬೆಳೆಯಲು ಸಾಧ್ಯವಿದೆ. ಈ ದೂದಿ ಅಥವಾ ರೇಷ್ಮೆಯಂತಹ ಹತ್ತಿಯನ್ನು ಬ್ಯಾಕ್ಟೀರಿಯಾದಿಂದ ಉಪಚರಿಸಿ ಘನರೂಪದ ಪಲ್ಪ್ ತಯಾರಿಸಲಾಗುತ್ತದೆ. ಆದರಿಂದ ಉತ್ತಮ ದರ್ಜೆಯ ಕಾಗದ ತಯಾರಿಸಲು ಸಾಧ್ಯವಿದೆ. ಕಾಗದದ ತಯಾರಿಕೆಗೆಂದೇ, ಅರಣ್ಯ ನಾಶ ಮತ್ತು ಭೂಮಿಯ ಸತ್ವನಾಶ ಆಗುತ್ತಿರುವುದರಿಂದ ಈ ಪರ್ಯಾಯಗಳನ್ನು ಉಪಯೋಗಿಸಿ ಕಾಗದ ತಯಾರಿಸುವಿಕೆಗೆ ಭವಿಷ್ಯದಲ್ಲಿ ಬಹಳ ಮಹತ್ವವಿದೆ. ಈ ತಾಂತ್ರಿಕತೆ ದೊಡ್ಡ ಪ್ರಮಾಣದಲ್ಲಿ ಬಳಕೆಯಾದಲ್ಲಿ ಅರಣ್ಯೀಕರಣಕ್ಕೆ ದಾರಿಯಾಗುತ್ತದೆ. ಇದು ಕಾಗದದ ತಯಾರಿಕೆಯಲ್ಲಿ ಬಹುಕಾಲ ಉಳಿಯುವ ಸಂಪನ್ಮೂಲವಾಗುತ್ತದೆ. ಎಂಸಿಆರ್‌ಸಿಯ ಸ್ಕ್ರೀನ್ ಪ್ರಿಂಟಿಂಗ್ ಘಟಕ ಬಟ್ಟೆ, ಪುಸ್ತಕಗಳನ್ನು ಹೊರತರುತ್ತಿತ್ತು. ದೊಡ್ಡ ಗಾತ್ರದ ಪುಸ್ತಕಗಳಲ್ಲಿ ಗ್ರಾಮದ ದೈನಂದಿನ ಬದುಕು ಅಭಿವೃದ್ಧಿಹೊಂದಲು ಮತ್ತು ನಾಜೂಕಾಗುವಲ್ಲಿ ಉಪಯೋಗವಾಗುವ ತಂತ್ರಜ್ಞಾನದ ಕುರಿತು ಮಾಹಿತಿ ನೀಡಲಾಗಿದೆ. ಕೆಲವು ಪಾಠಗಳನ್ನು ಸೀರೆಯ ಮೇಲೆ ಕೂಡ ಮುದ್ರಿಸಲಾಗಿದೆ. ಇದನ್ನು ಪ್ರದರ್ಶನಕ್ಕಿಡಬಹುದು, ಧರಿಸಬಹುದು. ಪೇಪರ್‌ನಲ್ಲಿ ಮುದ್ರಿಸಲಾಯಿತು. ಭಿತ್ತಿಪತ್ರಗಳಿಗಿಂತಲೂ ಹೆಚ್ಚಿನ ಕಾಲ ಇದು ಬಾಳಿಕೆ ಬರುತ್ತದೆ. ಎಂಸಿಆರ್‌ಸಿಯಲ್ಲಿ ಜೈವಿಕ-ತಂತ್ರಜ್ಞಾನ ವೈವಿಧ್ಯಮಯವಾದ ಕೆಲಸಗಳಿಗೆ ಉಪಯೋಗವಾಗುತ್ತಿತ್ತು. ಬಯೋಗ್ಯಾಸ್‌ನ್ನು ಇಂಧನಕ್ಕೆ, ಜೈವಿಕ ಗೊಬ್ಬರಗಳ ತಯಾರಿಕೆಗೆ, ತೀರಾ ಸಾಂದ್ರವಾದ ಲೋಹಗಳ ತ್ಯಾಜ್ಯ ಸಂಸ್ಕರಣೆ ಇತ್ಯಾದಿ ಕೆಲಸಗಳಿಗೆ ಬಳಸಲಾಗುತ್ತಿತ್ತು. ೧೯೭೭ರಿಂದೀಚೆಗೆ ಕೃಷಿಯಲ್ಲಿ ಜೀವ-ಚೈತನ್ಯ ತುಂಬುವ ಪ್ರಯೋಗಗಳನ್ನು ಯಶಸ್ವಿಯಾಗಿ ಮಾಡಲಾಗಿದೆ. ಈ ಪದ್ಧತಿಯಲ್ಲಿ ಸಸ್ಯಗಳ ನಡುವಿನ ಅಂತರ ಅತಿ ಹೆಚ್ಚಿದ್ದು, ಪ್ರತಿ ಎಕರೆಗೆ ಇಳುವರಿ ಹೆಚ್ಚಾಗುತ್ತದೆ. ಈ ಎಲ್ಲ ಪ್ರಯತ್ನಗಳಿಗಾಗಿ ಎರಡುಬಾರಿ, ಎಂಸಿಆರ್‌ಸಿ ಹೊಸ ಅನ್ವೇಷಣೆಗಳಿಗೆ ಕೊಡಮಾಡುವ ರಾಷ್ಟ್ರಪತಿಗಳ ಪ್ರಶಸ್ತಿ ಹಾಗೂ ಗ್ರಾಮೀಣ ವಿಜ್ಞಾನ ಮತ್ತು ತಂತ್ರಜ್ಞಾನದ ಶ್ರೇಷ್ಠ ಸಾಧನೆಗಳಿಗೆ ನೀಡುವ ಜಮ್ನಾಲಾಲ್ ಬಜಾಜ್ ಪ್ರಶಸ್ತಿಗಳನ್ನು ಪಡೆದಿದೆ.

ಆದರೆ ಈ ಪ್ರಶಸ್ತಿಗಳು ಇವರನ್ನು ಸುಮ್ಮನಿರಗೊಡಲಿಲ್ಲ; ಅವರ ಚಡಪಡಿಕೆ, ತಲ್ಲಣಗಳನ್ನು ಕಡಿಮೆ ಮಾಡಲೂ ಇಲ್ಲ. ಅವರ ಈ ಉಪಕರಣಗಳು, ಸಲಕರಣೆಗಳ ತಾಂತ್ರಿಕತೆಯ ಮಟ್ಟ ಎಷ್ಟೇ ಚೆನ್ನಾಗಿದ್ದರೂ ವಸ್ತು ಸ್ಥಿತಿ ತೀರಾ ಬದಲಾಗಲಿಲ್ಲ. ಮೊದಲು ಇದ್ದ ಪರಿಸ್ಥಿತಿಗಿಂತಲೂ ಮತ್ತಷ್ಟು ಅವಸಾನದತ್ತ ಸಾಗಿತು.

ಉದಾಹರಣೆಗೆ ಸಿವಿಎಸ್ ಹೆಚ್ಚು ಮೀನು ಹಿಡಿಯಲು ಅನುಕೂಲವಾಗಲೆಂದು ತೀರಾ ಆಳವಿಲ್ಲದ ಸಮುದ್ರ ತೀರದಲ್ಲಿ ಇಳಿಸುವ ಒಂದು ಸರಳ ಉಪಕರಣ ಕಂಡುಹಿಡಿದರು. ಈ ವಿನ್ಯಾಸ ಬಹಳ ಸರಳವಾದುದಾಗಿದ್ದು, ಸ್ಥಳೀಯವಾಗಿ ದೊರೆಯುವ ಪದಾರ್ಥಗಳಿಂದ ಅಲ್ಲಲ್ಲಿಯೇ ಇದನ್ನು ತಯಾರಿಸಿಕೊಳ್ಳಬಹುದಿತ್ತು. ಇದರಿಂದಾಗಿ ಸಮುದ್ರದ ಒಳಗೆ ದೂರ ಪ್ರಯಾಣ ಕೈಗೊಳ್ಳದೆಯೇ ಗಮನಾರ್ಹ ಪ್ರಮಾಣದಲ್ಲಿ ಮೀನುಗಳು ಸಿಕ್ಕುತ್ತಿದ್ದವು. ಈ ಪರಿಕಲ್ಪನೆಯನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಲಾಯಿತು. ಆಡಳಿತದ ಚುಕ್ಕಾಣಿ ಹಿಡಿದ ಅಧಿಕಾರಿಗಳು ಇದನ್ನು ತಮ್ಮ ಕಡತದೊಳಗೆ ಭದ್ರವಾಗಿ ಬಂಧಿಸಿದರು. ಅವು ಹೊರದೇಶಗಳ ಸಹಾಯಧನ ಅಥವಾ ಕೊಡುಗೆಗಾಗಿ ಕಾಯುತ್ತಾ ಕುಳಿತಿದೆ.

ಇವೆಲ್ಲದಕ್ಕಿಂತ ಹೆಚ್ಚಾಗಿ ಆಧುನಿಕ ಅರ್ಥಶಾಸ್ತ್ರ ವ್ಯಾಖ್ಯಾನಿಸಿರುವಂತೆ, ನಿರಂತರ ವೃದ್ಧಿಯಾಗುತ್ತಿರುವ 'ಮಾರುಕಟ್ಟೆ' ಶಕ್ತಿಯೂ ಇದೆ. ಈ ಮಾರುಕಟ್ಟೆ ಸಂಪನ್ಮೂಲಗಳ ಗರಿಷ್ಠ ಪ್ರಮಾಣದ ಬಳಕೆಗೆ ಷರತ್ತನ್ನೇನೂ ವಿಧಿಸುವುದಿಲ್ಲ. ಉದಾಹರಣೆಗೆ ಒಂದು ಹೆಕ್ಟೇರ್ ಭೂಮಿಯಲ್ಲಿ ಅಧಿಕ ಲಾಭ ತರುವ 'ವಾಣಿಜ್ಯ ಬೆಳೆ'ಯನ್ನು ಬಳಸಬೇಕೆಂದು 'ಮಾರುಕಟ್ಟೆ' ನಿರೀಕ್ಷಿಸುತ್ತದೆ. ಪರಿಸ್ಥಿತಿ ಹೀಗಿರುವಾಗ ಉರುವಲು, ಮೇವು ಮತ್ತು ಆಹಾರಕ್ಕೆ ಅಗತ್ಯವಾದುದನ್ನು ಬೆಳೆಸುವುದಕ್ಕೆ ಬದಲಾಗಿ ವಾಣಿಜ್ಯ ಬೆಳೆಯನ್ನು ಜನ ಬೆಳೆಯಲಾರಂಭಿಸುತ್ತಾರೆ.

ಆದರೆ ವರ್ಷಗಳು ಕಳೆದಂತೆ ಸಿವಿಎಸ್‌ರಿಗೆ ಭಾರತೀಯರ ಬಗ್ಗೆ ಕೋಪ ಬರತೊಡಗಿತು. ಅಲ್ಲದೆ ಅವರು ಈ ಬಗ್ಗೆ ಭ್ರಮನಿರಸನಗೊಂಡರು. '೧೯೪೫ರಲ್ಲಿ ಜರ್ಮನಿಯಲ್ಲಿನ ಯಾತನಾ ಶಿಬಿರಗಳ ಬಗ್ಗೆ ಅಲ್ಲಿಯ ಬುದ್ಧಿಜೀವಿ ವರ್ಗ ಏಕೆ ಸುಮ್ಮನಿತ್ತು ಎಂಬುದು ಅಚ್ಚರಿಯನ್ನುಂಟುಮಾಡಿತ್ತು. ಈಗ ಅದೇ ಪ್ರಶ್ನೆಯನ್ನು ಕೇಳಿಕೊಳ್ಳುತ್ತೇನೆ. ನಮ್ಮ ಬುದ್ಧಿಜೀವಿ ವರ್ಗ, ಗಾಂಧಿ ತತ್ವಗಳು ಸುಲಭವಾಗಿ ನಿರಾಕರಣೆಗೊಳಗಾಗಲು ಹೇಗೆ ಅವಕಾಶ ನೀಡಿತು? ಸಾಮುದಾಯಿಕ ಮಟ್ಟದಲ್ಲಿ ನಮ್ಮ ಬಗ್ಗೆ ನಮಗೆ ವಿಶ್ವಾಸವಾಗಲೀ, ಬದ್ಧತೆಯಾಗಲೀ ಇಲ್ಲ, ಎಂದು ಬಗ್ಗೆ ದುಃಖಿತರಾದರು. ತಾವು ಹಮ್ಮಿಕೊಂಡ ಕೆಲಸಕ್ಕೆ ಪೂರ್ಣವಾಗಿ ಗಮನ ಕೊಡುವುದರ ಬದಲಿಗೆ ಪ್ರತಿ ಹಂತದಲ್ಲಿಯೂ ನಿರಂತರವಾಗಿ ಹಣ ಎತ್ತಬೇಕಾಗಿ ಬರುತ್ತಿರುವುದು ಅವರಿಗೆ ಖೇದವೆನಿಸಿತು.

ಆದರೆ ಸ್ಪಿರುಲಿನಾ ಬಳಸಿ ಪೂರಕ ಆಹಾರ ತಯಾರಿಸಿ ವಿತರಿಸುವಂಥ ಯೋಜನೆಯ ಯಶಸ್ಸಿನಿಂದಾಗಿ ಇವರು ಈ ಯೋಜನೆಗಳಲ್ಲಿ ಮತ್ತೆ ತೊಡಗುವಂತಾಯಿತು. ಮಗು ನಾಲ್ಕನೆ ವಯಸ್ಸಿಗೆ ಕಾಲಿಡುವ ವೇಳೆಗೆ ವಯಸ್ಕರ ಮೆದುಳಿನ ಸುಮಾರು ಶೇ.೮೦ರಷ್ಟು ಬೆಳವಣಿಗೆಯಾಗುತ್ತದೆ. ಆದುದರಿಂದ ಶಾಲಾ ಪೂರ್ವ ವಯಸ್ಸಿಗೆ ಮಕ್ಕಳ ಮೆದುಳಿನ ಬೆಳವಣಿಗೆಗೆ ತಡೆ ಆಗದಿರಲೆಂಬ ದೃಷ್ಟಿಯಿಂದ ಉತ್ತಮ ಪೌಷ್ಟಿಕ ಆಹಾರ ನೀಡಬೇಕಾದ ಅಗತ್ಯವಿದೆ. ಆದುದರಿಂದ ಎಂಸಿಆರ್‌ಸಿಯಲ್ಲಿ ಒಂದು ತಂಡ, ಪಾಚಿ ಜಾತಿಗೆ ಸೇರಿದ 'ಸ್ಪಿರುಲಿನಾ' ಎಂಬ ಸಸ್ಯ ಬೆಳೆಸಿ ಪೂರಕ ಆಹಾರ ತಯಾರಿಸತೊಡಗಿತು. ಈ ಪಾಚಿಯನ್ನು

ಗ್ರಾಮದಲ್ಲಿಯೇ ಬೆಳೆಸಲು ಸಾಧ್ಯವಿದೆ. ತಮಿಳುನಾಡಿನ ಒಂದು ಜಿಲ್ಲೆಯಲ್ಲಿ ಶಾಲಾಪೂರ್ವ ಮಕ್ಕಳಿಗೆ ಈ ಪೂರಕ ಆಹಾರ ವಿತರಿಸಲಾಯಿತು. ಹೈದರಾಬಾದ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ನ್ಯೂಟ್ರಿಶನ್ ಈ ಪೂರಕ ಆಹಾರದ ಪರಿಣಾಮವನ್ನು ಪರಿಶೀಲಿಸಲು ಕೆಲವು ವರ್ಷ ಅಧ್ಯಯನ ನಡೆಸಿತು. ಆದರೆ ರಾಜಕೀಯ ಇಚ್ಛಾಶಕ್ತಿ ಕೊರತೆಯಿಂದ ಈ ಉತ್ತಮ ಯೋಜನೆ ವ್ಯಾಪಕವಾಗಿ ಬೇರೆ ಬೇರೆ ಕಡೆಗಳಲ್ಲಿ ಅನುಷ್ಠಾನಗೊಳ್ಳಲಿಲ್ಲ. ಆದರೆ ವ್ಯಾಪಾರಿ ಕಂಪೆನಿಗಳು, ಕ್ಯಾನ್ಸರ್ ರೋಗಿಗಳಿಗೆ ಪೂರಕ ಆಹಾರ ತಯಾರಿಕೆಯಲ್ಲಿ ಇದನ್ನು ಯಶಸ್ವಿಯಾಗಿ ಬಳಸಿಕೊಂಡರು.

ಈ ನಡುವೆ ಅವರ ಜೊತೆಗಿದ್ದ ಸಂಗಾತಿಗಳೂ ಕೂಡ ಸಿವಿಎಸ್ ಈ ಯೋಜನೆಯಲ್ಲಿ ಉಳಿಯಲು ಕಾರಣರಾದರು. ಅಲ್ಲಿ ಬೇರೆ ಬೇರೆಯ ದಾರಿಗಳೂ, ಮಹಾತ್ಮ ಗಾಂಧೀಜಿಯವರ ಹಾದಿಯಲ್ಲಿಯೇ ಸಂಗಮಿಸುವುದನ್ನು ನೋಡಬಹುದಾಗಿತ್ತು. ಈ ಎಲ್ಲ ತರುಣ ಸಹಪಯಣಿಗರು ಪರಿಹಾರಗಳಿಗಾಗಿ ತಲೆಕೆಡಿಸಿಕೊಳ್ಳುತ್ತಿದ್ದುದು ಸಿವಿಎಸ್ ಉತ್ಸಾಹಕ್ಕೆ ಕಾರಣವಾಯಿತು. ಇವರಿಗೆ ಸಿವಿಎಸ್ ಉತ್ಸಾಹ ತುಂಬುವ ವ್ಯಕ್ತಿಯಾಗಿದ್ದರು. ಅಷ್ಟೆ ಅಲ್ಲ ಇವರೆಲ್ಲರಿಗಿಂತ ಭಿನ್ನವಾಗಿ ಚಿಂತಿಸುತ್ತಿದ್ದರು ಹಾಗೂ ಅದನ್ನು ಅನುಷ್ಠಾನಕ್ಕೆ ತರುವ ಧೈರ್ಯ ಮಾಡುತ್ತಿದ್ದವರ ಬೆಂಬಲವಾಗಿ ನಿಲ್ಲುತ್ತಿದ್ದರು. ಈ ಸಂಗಾತಿಗಳಲ್ಲಿ ಅನೇಕರು ಕಾನ್ಪುರದ ಐಐಟಿಯ ವಿದ್ಯಾರ್ಥಿಗಳಾಗಿದ್ದವರು. ೭೦ರ ದಶಕದ ಕೊನೆಯ ಭಾಗದಲ್ಲಿ ದೇಶಭಕ್ತ ಜನಪರ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರತಿಷ್ಠಾನ (ಪಿಪಿಎಸ್‌ಟಿ) ಸ್ಥಾಪಿಸಿದರು. ಆ ನಂತರದಲ್ಲಿ ಸಿವಿಎಸ್ ಇದರ ಅಧ್ಯಕ್ಷರಾದರು.

ಹೃದಯದ ಪ್ರಾರ್ಥನೆ ಹಾಡಾದಾಗ

ಭಾರತದ ದೇಸಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ಈಗಲೂ ನಮ್ಮ ಸಮಕಾಲೀನ ಸಮಸ್ಯೆಗಳಿಗೆ ಕಾರ್ಯಸಾಧುವಾದ ಮತ್ತು ಬೇರೆಡೆಯೂ ಅನುಷ್ಠಾನಗೊಳಿಸಬಲ್ಲ ಪರಿಹಾರ ನೀಡಬಲ್ಲವು. ಇದು ಹೇಗೆ ಎಂಬುದನ್ನು ಕಂಡು ಹಿಡಿಯಲು ಅನೇಕ ವಿಜ್ಞಾನಿಗಳಿಗೆ ಪಿಪಿಎಸ್‌ಟಿ ಒಂದು ವೇದಿಕೆಯಾಯಿತು. ಹಳೆಯ ನೀರು ಸಂಗ್ರಹ ಪದ್ಧತಿಗಳು ಅಥವಾ ದೇಸೀ ವೈದ್ಯಕೀಯ ಪದ್ಧತಿ ಇವೇ ಕೆಲವು ಇಲ್ಲಿ ಮುಖ್ಯವಾದವು. ಇವುಗಳಲ್ಲಿ ಕೆಲವು ಮ್ಯೂಸಿಯಂನಲ್ಲಿಡಲು ಯೋಗ್ಯವಾದವುಗಳು. ಇಂದಿಗೂ ಕೆಲವು ಪ್ರಾಯೋಗಿಕವಾಗಿ ಬಳಕೆಯಲ್ಲಿವೆ.

ಮಾನವ ನಿರ್ಮಿತ ಸಲಕರಣೆ ಮತ್ತು ಪ್ರಕ್ರಿಯೆಗಳಿಗಿಂತ ನಿಸರ್ಗಾಧಾರಿತ ಜೈವಿಕ ಪ್ರಕ್ರಿಯೆಗಳು ಅಗತ್ಯವಾದ ಆದರೆ, ಬಳಕೆಯಾಗದ ಶಕ್ತಿಯನ್ನೂ ಬಳಸಿಕೊಳ್ಳುತ್ತವೆ ಎಂಬ ಕಾರಣಕ್ಕಾಗಿ ಸಿವಿಎಸ್‌ರವರಿಗೆ ದೇಸೀ ತಂತ್ರಜ್ಞಾನದಲ್ಲಿ ಅಪಾರ ಆಸಕ್ತಿ ಇತ್ತು. ಈ ಸಾಂಪ್ರದಾಯಿಕ ಬುದ್ಧಿವಂತಿಕೆ ಈ ಸತ್ಯವನ್ನಾಧರಿಸಿದೆ ಮತ್ತು ಇದರ ಆಧಾರದ ಮೇಲೆ ತಾಂತ್ರಿಕ ಮಾದರಿಗಳು ಹಾಗೂ ಸಾಮಾಜಿಕ ವ್ಯವಸ್ಥೆಯ ಮಾದರಗಳೂ ರೂಪುಗೊಂಡಿವೆ ಎಂಬುದನ್ನು ಸಿವಿಎಸ್ ಹಲವಾರು ವರ್ಷಗಳ ಅನುಭವಗಳಿಂದ ಕಂಡುಕೊಂಡರು. ಇವೆಲ್ಲವುಗಳಿಗಿಂತ ಮುಖ್ಯವಾದುದೆಂದರೆ ಕೆಲವು ಪರಂಪರಾಗತ ಸಾಂಪ್ರದಾಯಿಕ

ತಂತ್ರಜ್ಞಾನಗಳು ಈವರೆಗೂ ಉಳಿದುಕೊಂಡು ಬಂದಿವೆ ಎಂಬುದು. ಈ ಸಾಂಪ್ರದಾಯಿಕ ಬುದ್ಧಿಮತ್ತೆಯನ್ನು ಇಂದಿನ ಸಮಕಾಲೀನ ಅಗತ್ಯಗಳಿಗೆ ಮಾರ್ಪಡಿಸಿಕೊಳ್ಳುವುದು ಹೇಗೆ ಎಂಬ ಸವಾಲಿನಿಂದ ಸಿವಿಎಸ್ ಪುಳಕಿತರಾದರು.

ಆದರೆ ಮುಖ್ಯವಾಹಿನಿಯ ನಿರ್ಧಾರಕ ಆಲೋಚನೆಗಳಿಗಿಂತ ಇದು ತೀರಾ ಭಿನ್ನವಾಗಿಯೂ, ವಿರುದ್ಧವಾಗಿಯೂ ಇತ್ತು. ಅದನ್ನು ಸಿವಿಎಸ್ ಹೀಗೆ ಬರೆದಿದ್ದಾರೆ:

'ಇಂಧನದ ಸಮಸ್ಯೆಯನ್ನು ಗಮನಿಸಿ. ನಾವು ಇದನ್ನು ವಾಣಿಜ್ಯೇತರ ಕಾರಣಗಳಿಗಾಗಿ ಮಾತ್ರ ಬಳಸುತ್ತಿದ್ದೇವೆ ಎಂದು ಕಳೆದ ೫೦ ವರ್ಷಗಳಿಂದ ಹೇಳಲಾಗಿದೆ. ನಾವು ಬಳಸುತ್ತಿರುವ ಇಂಧನದ ಶೇ.೫೦ಕ್ಕಿಂತ ಹೆಚ್ಚು ಭಾಗ ಅಡುಗೆ ಒಲೆಗೆ ಮಾತ್ರ ಬಳಕೆಯಾಗುತ್ತಿದೆ. ಉರುವಲಿಗಾಗಿ ಹಳ್ಳಿಯ ಮಹಿಳೆಯರು ಕಟ್ಟಿಗೆಯನ್ನು ಸ್ಥಳೀಯವಾಗಿಯೇ ಸಂಗ್ರಹಿಸುವ ಕಾರಣ ಇದಕ್ಕೆ ಅಂತರ್ಗತವಾಗಿರುವ ಮೌಲ್ಯ ಇಲ್ಲ ಎಂದು ಭಾವಿಸಲಾಯಿತು. ನಮ್ಮ ಜನ ಕಟ್ಟಿಗೆ ಒದಗಿಸಲು ಅಂತಹ ಬಂಡವಾಳ ತೊಡಗಿಸಿಲ್ಲದಿರುವುದೂ ಇದಕ್ಕೆ ಕಾರಣ. ಸಾಮಾಜಿಕ ಅರಣ್ಯ ಯೋಜನೆಗಳು ಬಹುಪಾಲು ಕಾಗದದ ಕಾರ್ಖಾನೆಗೆ ಅಥವಾ ಬೇರೆ ಕಾರ್ಖಾನೆಗಳಿಗೆ ಕಚ್ಚಾವಸ್ತು ಒದಗಿಸಲು ಉಪಯೋಗವಾದವು.

ಇಂತಹ ವಿಷಯಗಳಲ್ಲಿ ಸಾರ್ವಜನಿಕ ಚರ್ಚೆ ನಡೆಯದೇ ಇರುವ ಬಗ್ಗೆ ಮತ್ತು ಸರ್ಕಾರ ಇಂತಹ ವಿಷಯದಲ್ಲಿ ನಿರ್ಣಯ ತೆಗೆದುಕೊಳ್ಳುವ ಮನಸ್ಸು ಮಾಡದೇ ಇರುವ ಬಗ್ಗೆ ಸಿವಿಎಸ್‌ಗೆ ಅಪಾರ ಕೋಪವಿತ್ತು. ಈ ಕಾರಣದಿಂದ ಸಿವಿಎಸ್ ೧೯೯೦ರ ಲೋಕಸಭಾ ಚುನಾವಣೆಯಲ್ಲಿ ಚೆನ್ನೈ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದರು.

'ಚುನಾವಣೆಗಳು ಜನರ ಮೇಲೆ ಯುದ್ಧ ಘೋಷಿಸುತ್ತವೆ ಎಂಬುದು ಅರಿವಾಯಿತು. ಸ್ವತಂತ್ರ ಅಭ್ಯರ್ಥಿಗಳಿಗೆ ನಾಗರಿಕ ಹಕ್ಕುಗಳು ಇರುವುದಿಲ್ಲ ಮತ್ತು ಅದನ್ನು ಪಡೆಯಲು ಸರ್ಕಾರದ ಮೇಲೆ ಮೊಕದ್ದಮೆ ಹೂಡುವಂತೆಯೂ ಇಲ್ಲ. ಇಡೀ ಚುನವಣಾ ಪ್ರಕ್ರಿಯೆ ಮಹಾತ್ಮರ ಆಸೆಗೆ ವಿರುದ್ಧವಾದುದಾಗಿತ್ತು. ಚುನಾವಣೆ ಮತ್ತು ಆ ನಾಗರಿಕತೆಯನ್ನು ಕಾಪಾಡುತ್ತಿರುವುದು ಭಾರತೀಯ ಒಳ್ಳೆಯ ಗುಣ ಮಾತ್ರ. ಇದು ಕ್ಲೀಷೆಯಾಗಿ ಕಾಣಬಹುದು. ಈ ನಾಗರಿಕತೆ ಉಳಿಯಲಿ ಮತ್ತು ದೇಶ ಹೀಗೆ ಅಖಂಡವಾಗಿರಲಿ ಎಂದು ಮನತುಂಬಿ ಹಾಡುತ್ತೇನೆ, ಎದೆಯಾಂತರಾಳದಿಂದ ಪ್ರಾರ್ಥಿಸುತ್ತೇನೆ.

ಎರಡು ವರ್ಷಗಳ ಬಳಿಕ ಈ ನಂಬಿಕೆಗೂ ಪರೀಕ್ಷಾಕಾಲ ಸನ್ನಿಹಿತವಾಯಿತು. ೧೯೯೨ರ ಡಿಸೆಂಬರ್ ೬ರಂದು ಅಯೋಧ್ಯೆಯಲ್ಲಿ ಬಾಬರಿ ಮಸೀದಿಯನ್ನು ಧ್ವಂಸ ಮಾಡಲಾಯಿತು. ಪಿಪಿಎಸ್‌ಟಿ ಅಧ್ಯಕ್ಷರಾಗಿ ತಾವು ಛಿದ್ರಗೊಂಡ ಸಂಘಟನೆಯ ಮುಂದಾಳತ್ವ ವಹಿಸಿದಂತೆ ಸಿವಿಎಸ್‌ಗೆ ಅನ್ನಿಸಿತು. ಆ ಒಂದು ಗುಂಪು ಮಸೀದಿ ಧ್ವಂಸವನ್ನು ಬೆಂಬಲಿಸಿದ್ದು ಅವರಿಗೆ ಆಶ್ಚರ್ಯ ತಂದಿತು. ಈ ಬಗ್ಗೆ ಪಿಪಿಎಸ್‌ಟಿ ಗುಂಪು ಹಲವಾರು ದಿವಸಗಳ ಕಾಲ ಭಾವೋದ್ರೇಕದಿಂದ ನಿರಂತರ ಚರ್ಚೆ ನಡೆಸಿತು. ಒಂದು ಗುಂಪು ಮತ್ತೊಂದು ಗುಂಪಿನವರ

ಮನವೊಲಿಸುವುದು ಸಾಧ್ಯವೇ ಆಗಲಿಲ್ಲ. ಈ ಮಸೀದಿ ಧ್ವಂಸದ ರಾಜಕೀಯ ಉಂಟುಮಾಡಿದ ಭಯಂಕರ ಪರಿಣಾಮಗಳನ್ನು ನೋಡಲು ಕೆಲವರಿಗೆ ಸಾಧ್ಯವಾಗಲೇ ಇಲ್ಲ.

ಒಮ್ಮತ ಮೂಡಿಲ್ಲವಾದ್ದರಿಂದ ಪಿಪಿಎಸ್‌ಟಿ ಗುಂಪು ಅಯೋಧ್ಯಾ ವಿಷಯವಾಗಿ ಮೌನವಾಗಿರಬಯಸಿತು. ಮುಂಬರುವ ರಾಷ್ಟ್ರೀಯ ಸಮಾವೇಶದಲ್ಲಿ ಈ ಸಂಘಟನೆ ಕೋಮುವಾದಿ ಎನಿಸಿಕೊಳ್ಳದಂತೆ ಮಾಡಲು ಮಸೀದಿ ಧ್ವಂಸಕ್ಕೆ ವಿರುದ್ಧವಾಗಿದ್ದ ಗುಂಪು ನಿರಂತರ ಪ್ರಯತ್ನ ಮಾಡಿತು. ಸಿವಿಎಸ್ ತಮ್ಮ ಗೆಳೆಯರು ಮತ್ತು ಪ್ರಶಂಸಕರ ಕಟು ಟೀಕೆಯ ನಡುವೆಯೂ ಈ ಮೇಲಿನ ಧಾಟಿಯಲ್ಲಿ ಯೋಚಿಸುವವರ ಜೊತೆಗೇ ಉಳಿದರು. ಒಂದು ವರ್ಷದ ನಂತರ, ೧೯೯೩ರ ಡಿಸೆಂಬರ್‌ನಲ್ಲಿ ಸಿವಿಎಸ್ ಮತ್ತೆ ವೇದಿಕೆಯಲ್ಲಿ ಕಾಣಿಸಿಕೊಂಡರು. ಆಗ ಮುಂಬೈನ ಐಐಟಿಯಲ್ಲಿ ನಡೆದ ಸಾಂಪ್ರದಾಯಿಕ ವಿಜ್ಞಾನ ಮತ್ತು ತಂತ್ರಜ್ಞಾನ ಕುರಿತ ಪಿಪಿಎಸ್‌ಟಿ ಮೊದಲ ಸಮಾವೇಶದಲ್ಲಿ ಅವರು ಅತಿಥಿಗಳನ್ನು, ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಐಐಟಿಯಲ್ಲಿ ವಿದ್ಯಾರ್ಥಿನಿಲಯದ ದೊಡ್ಡ ಸಭಾಂಗಣ ಕಿಕ್ಕಿರಿದು ತುಂಬಿತ್ತು. ಪಿಪಿಎಸ್‌ಟಿಯ ಕೆಲವು ಕಾರ್ಯಕರ್ತರು ಸಮಾವೇಶದ ಉದ್ದೇಶ ವಿವರಿಸುತ್ತಿದ್ದರು. ಅಂದು ಬೆಳಿಗ್ಗೆ ಖಾದಿ ರೇಷ್ಮೆಯ ಸಾಂಪ್ರದಾಯಿಕ ಕೋಟ್ ಧರಿಸಿದ್ದ ಸಿವಿಎಸ್ ಐಐಟಿ ಘಟಿಕೋತ್ಸವದ ಸಭಾಭವನದಲ್ಲಿ ಸಮಾವೇಶಕ್ಕೆ ಚಾಲನೆ ನೀಡಿದರು. ನಂತರ ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸಿದರು. ವಿಜ್ಞಾನ ಮತ್ತು ತಂತ್ರಜ್ಞಾನದ ವಿಷಯಗಳನ್ನು ಸಾಂಸ್ಕೃತಿಕ ಹಾಗೂ ನಾಗರಿಕ ನೆಲೆಯಲ್ಲಿ ಪ್ರತಿಬಿಂಬಿಸಲು ಕರೆ ನೀಡಿದರು.

ವಿಜ್ಞಾನ ಎಂಬುದು ವಾಸ್ತವಗಳ ಮಾದರಿ. ಮನೆ, ಕೃಷಿ ಮತ್ತು ಕೈಗಾರಿಕೆಗಳಲ್ಲಿ ಈ ಮಾದರಿಗಳನ್ನು ಬಳಸಿಕೊಂಡ ಮಾನವ ನಿರ್ಮಿತ ಪ್ರಕ್ರಿಯೆಗಳು ತಂತ್ರಜ್ಞಾನ. ಇದಕ್ಕೆ ವಿಲೋಮವಾಗಿ ನಾಗರಿಕತೆಯ ಸತ್ಯಗಳನ್ನು ಕಲಾ ಸಾಮಗ್ರಿಗಳ ಬೃಹತ್ ತಯಾರಿಕಾ ಕ್ರಮಗಳ ಮೂಲಕ ಅರಿಯಬಹುದಾಗಿದೆ. ಕೃಷಿ ಪದ್ಧತಿಯಿಂದ ವಾಸ್ತುಶಿಲ್ಪಶಾಸ್ತ್ರದವರೆಗೆ, ನೀರಿನ ನಿರ್ವಹಣೆ, ಕೈಗಾರಿಕೆ ಮತ್ತು ಆರೋಗ್ಯ ಪದ್ಧತಿಯವರೆಗೆ ಹಾಗೂ ತಾತ್ವಿಕವಾದ ವಿಜ್ಞಾನದವರೆಗೆ ಸುಮಾರು ೬೦೦೦ ವರ್ಷಗಳಿಂದ ನಿರಂತರವಾಗಿ ಹರಿದು ಬಂದ ಭಾರತೀಯ ವಿಜ್ಞಾನ ಮತ್ತು ತಂತ್ರಜ್ಞಾನ ಒಂದು ವಾಸ್ತವ. ಕಳೆದ ಒಂದು ಸಾವಿರ ವರ್ಷಗಳಿಂದ ಇತರ ನಾಗರಿಕತೆಗಳು ಈ ಕುರಿತು ಬೆರಗನ್ನು ವ್ಯಕ್ತಪಡಿಸಿರುವುದೆ ಮತ್ತೊಂದು ಸತ್ಯ. ೧೭೫೦ರವರೆಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಶೇ.೨೫ರಷ್ಟು ಸಿದ್ಧಪಡಿಸಿದ ಮತ್ತು ವ್ಯಾಪಾರಿ ಸರಕುಗಳು ಇಲ್ಲಿಯೇ ತಯಾರಾದವು ಎಂಬುದೂ ಸತ್ಯ. ಇವೆಲ್ಲವೂ ಚರಿತ್ರೆಯ ಆಕಸ್ಮಿಕಗಳು ಎಂದಾಗಲೀ, ಹಾದಿ ತಪ್ಪಿಸುವ ದಾಖಲೆಗಳು ಎಂದಾಗಲೀ ಏಕಾಏಕಿ ಹೇಳಿ ನಿರಾಕರಿಸುವುದು ತಪ್ಪಾಗುತ್ತದೆ. ಆದರೆ ಕಳೆದ ೨೦೦ ವರ್ಷಗಳಿಂದ ಪ್ರಪಂಚದ ಸಂದರ್ಭದಲ್ಲಿ ಇದು ನಗಣ್ಯವಾಗಿದೆ ಎಂಬುದು ಅತ್ಯಂತ ದುರದೃಷ್ಟಕರ. ಅದನ್ನು ನಮ್ಮ ನೆನಪಿನಿಂದ ತೆಗೆಯುವ ಕೆಲಸ ಆಗಬೇಕಿದೆ. ಈ ಎಲ್ಲವನ್ನೂ ಸೃಷ್ಟಿಸಲು ಸಾಧ್ಯವಾದ ಹಿಂದಿನ ಸಾಮಾಜಿಕ ವ್ಯವಸ್ಥೆ ಇನ್ನೂ ಜೀವಂತವಿದೆ.

ಅದನ್ನು ಮತ್ತೆ ಪುನರುಜ್ಜೀವನಗೊಳಿಸಲು ಸಾಧ್ಯವಿದೆ ಎಂಬುದು ನಿಸ್ಸಂದೇಹವಾಗಿ ಸತ್ಯವಾದುದು. ಇದು ಈ ಅಧಿವೇಶನದ ಚರ್ಚೆಗಳ ಸಾರ.

ಐಐಟಿಯ ಆಡಳಿತದಲ್ಲಿ ವಿಭಿನ್ನ ಆಯಾಮಗಳ ಕುರಿತು ಚರ್ಚೆ ನಡೆಸುವ ಐದು ದಿನಗಳ ಬೃಹತ್ ಸಮ್ಮೇಳನದ ಹೊಣೆ ಹೊತ್ತು ಬಿಡುವೇ ಇಲ್ಲದಂತಾಯಿತು. ಈ ಅಧಿವೇಶನದ ಖರ್ಚು ಹೆಚ್ಚಾದಂತೆ ದುಡ್ಡು ಹೊಂದಿಸುವ, ಹಣ ಎತ್ತುವ ನಿರಂತರ ಕಾಯಕವಂತೂ ಇದ್ದೇ ಇತ್ತು. ಈ ಪರಿಕಲ್ಪನೆಯನ್ನು ಬಹು ತೀವ್ರವಾಗಿ ಪ್ರತಿಪಾದಿಸುವುದರಲ್ಲಿಯೇ ಅಂತರ್ಗತವಾಗಿರುವ 'ಸಂಘರ್ಷ'ವನ್ನು ತಪ್ಪಿಸಲೂ ಪ್ರಯತ್ನಿಸಿದರು. ಸಿವಿಎಸ್‌ರವರು ತಮ್ಮ ಪಾಡಿಗೆ ಒಂಟಿ ಪಯಣದ ಅಭ್ಯಾಸ ರೂಢಿಸಿಕೊಂಡ ಕಾರಣವಾಗಿ, ವಿಜ್ಞಾನಿಗಳ ಸಮೂಹದ ಪ್ರತಿಕ್ರಿಯೆ ಬಗ್ಗೆ ನಿರ್ಲಕ್ಷ್ಯ ತಾಳಲಿಕ್ಕೆ ಸಾಧ್ಯವಾಯಿತು. ಕೆಲವೊಮ್ಮೆ ಹೊಸ ಪರಿಕಲ್ಪನೆಗಳು ತಾವಾಗಿಯೇ ಆಳಕ್ಕೆ ಇಳಿದುಬಿಡಬಹುದು ಎಂದೂ ಯೋಚಿಸತೊಡಗಿದರು.

ಈ ಅಧಿವೇಶನದ ಅವಧಿಯಲ್ಲಿ ಪ್ರದರ್ಶನಗೊಂಡ ದೇಸಿ ತಂತ್ರಜ್ಞಾನ ಮತ್ತು ವಿಜ್ಞಾನವನ್ನು ವೀಕ್ಷಿಸಿದ ಐಐಟಿಯ ಪ್ರೊಫೆಸರ್‌ಗಳ ಮುಗುಳ್ನಗೆಯಿಂದ ಸಿವಿಎಸ್‌ಗೆ ಕೊಂಚ ಸಮಾಧಾನ ಉಂಟಾಯಿತು. ಗಾಂಧಿ ಮತ್ತು ಕುಮಾರಪ್ಪನವರನ್ನು ಪ್ರಭಾವಗೊಳಿಸಿದ ಗ್ರಾಮೀಣ ಸಂಶೋಧಕರನ್ನು ಗುರುತಿಸುವಲ್ಲಿ ಇದು ಮೊದಲ ಹೆಜ್ಜೆ ಎಂದು ಸಿವಿಎಸ್ ಭಾವಿಸಿದರು.

ಆದರೆ ನಿಜವಾದ ಸಂಘರ್ಷ ದೀರ್ಘಾವಧಿಯದಷ್ಟೇ ಅಲ್ಲ ಅಂತರ್ಮುಖಿ ಪ್ರಕ್ರಿಯೆ ಎಂಬುದನ್ನೂ ಅವರು ಅರಿತಿದ್ದರು.

'ನಮ್ಮೆಲ್ಲರ ಬುದ್ಧಿಮತ್ತೆಯಲ್ಲಿನ ಸಮಾನತೆಯನ್ನು ಗುರುತಿಸಲು ಹೆಚ್ಚಿನ ಪರಿಶ್ರಮ ಬೇಕಾದೀತು. ಅನುಕಂಪ ಮತ್ತು ಪ್ರೀತಿ ಅನುಸರಣೆಯಲ್ಲಿ ಬರುವುದು. ಜನರ ಬಗ್ಗೆ ಪ್ರೀತಿ ಮತ್ತು ಅನುಕಂಪ ಎಲ್ಲಿ ಕಳೆದು ಹೋದವು? ದೂರದ ಹಳ್ಳಿಗಳಲ್ಲಿ ಮೊದಲು ಅವರು ತೋರುವುದು ಪ್ರೀತಿಯನ್ನು! ಅದಕ್ಕೆ ಪ್ರತ್ಯುಪಕಾರವಾಗಿ ನಾವು ಅವರನ್ನು ಶೋಷಿಸುತ್ತೇವೆ. ಭಾರತದಲ್ಲಿ ನಾವು ಮಾದರಿಯಾಗುವ ಮೂಲಕ ಮಾತ್ರ ಏನನ್ನಾದರೂ ಸಾಧಿಸಲಾದೀತು. ಗಾಂಧಿ ತೋರಿದ ಹಾದಿಯೂ ಇದೇ ಆಗಿದೆ. ಅವರ ಪ್ರತಿದಿನವೂ ಒಂದು ಪ್ರಯೋಗವೇ ಆಗಿತ್ತು. ಈ ಸಣ್ಣ ಆಂದೋಲನಗಳಿಂದ ನಾವು ಏನು ಮಾಡಬಲ್ಲೆವು ಎಂಬುದು ಮೂಲಭೂತವಾಗಿ ನಮಗೇ ನಮ್ಮಲ್ಲಿ ನಂಬಿಕೆ ಇಲ್ಲದಿರುವುದನ್ನು ಸೂಚಿಸುತ್ತದೆ. ದೊಡ್ಡ ಸಾಧನೆಗಳು ಸಣ್ಣ ಪ್ರಯತ್ನಗಳಿಂದ ಸಾಧ್ಯವಾಗುತ್ತವೆ. ಈ ಸಣ್ಣ ಗುಡಿಸಲ ಮೂಲಕ ಒಂದು ಸಾಮ್ರಾಜ್ಯವನ್ನೇ ಕಿತ್ತೊಗೆಯಬಹುದು ಎಂಬುದನ್ನು ಯಾರು ಕಲ್ಪಿಸಿಕೊಂಡಿದ್ದರು?'

ಬಾಪು ಕುಟಿಯಲ್ಲಿ ೧೯೯೫ರ ಜನವರಿಯಲ್ಲಿ ದಿನವಿಡೀ ನಡೆದ ಸಂವಾದಗೋಷ್ಠಿಯ ಒಂದು ವರ್ಷದ ನಂತರ ಸಿವಿಎಸ್‌ರನ್ನು ನಾನು ಎಎಂಎಂ ಮುರುಗಪ್ಪ ಚೆಟ್ಟಿಯಾರ್ ಸಂಶೋಧನಾ ಕೇಂದ್ರದಲ್ಲಿ ಭೇಟಿಯಾದೆ. ಅವರು ಒಬ್ಬ ಹಳೆಯ ಗೆಳೆಯನ ರೀತಿಯಲ್ಲಿ ನನ್ನನ್ನು ಪ್ರೀತಿಯಿಂದ ಸ್ವಾಗತಿಸಿದರು. ಅವರು ಸಂಶೋಧನಾ ಕೇಂದ್ರದಲ್ಲಿ ನಡೆಸುತ್ತಿದ್ದ

ಪ್ರಯೋಗಗಳನ್ನು ಮತ್ತು ಯೋಜನೆಗಳನ್ನು ನನಗೆ ತೋರಿಸುತ್ತಲೇ ಬೇರೆ ಬೇರೆ ಕಾರ್ಯಕರ್ತರನ್ನು, ಕೇಂದ್ರಗಳನ್ನು ಭೇಟಿಯಾದ ನನ್ನ ಅನುಭವ ಆಲಿಸಿದರು. ಈ ಬಹುತೇಕ ಜನ ಗಾಂಧಿ ಮಾರ್ಗದತ್ತ ಸಾಹಸ ಮಾಡುತ್ತದ್ದಾರೆ ಎಂಬ ಅಂಶ ಅವರಿಗೆ ಸಂತಸ ತಂದಿತು. ಅವರು ಈ ಮಾತುಗಳನ್ನು ಆಡುವಾಗ ಸಂತಸದ ಹೊಳಪು ಅವರ ಕಣ್ಣುಗಳಲ್ಲಿ ಕಾಣುತ್ತಿತ್ತು.

ಈಗಲೂ ಅವರಿಗೆ ಗಾಂಧೀಜಿಯವರ ಆ ಮಂತ್ರ ಅಗತ್ಯ ಎನಿಸಿತ್ತು. ನಮ್ಮ ಕೆಲಸ ಅಥವಾ ಕ್ರಿಯೆ ಈ ದೇಶದ ಕೊಟ್ಟಕೊನೆಯ ವ್ಯಕ್ತಿಗೆ ಏನಾದರೂ ಲಾಭ ತಂದುಕೊಟ್ಟೀತೇ ಎಂದು ಕೇಳಿಕೊಳ್ಳುವುದೇ ಈ ಮಂತ್ರ. ಗಾಂಧೀಜಿಯವರ ದೃಷ್ಟಿಕೋನದಿಂದ ಪ್ರತಿಯೊಂದು ಸಮಸ್ಯೆಯನ್ನು ವಿಶ್ಲೇಷಿಸುವುದನ್ನು ಕಲಿಯುವುದೆ ನಾವು ಮಾಡಬೇಕಿರುವ ಕೆಲಸ. ನಾವು ಹೇಗೆ ಮುಂದುವರೆಯಬೇಕು ಎಂಬ ಹಾದಿಯನ್ನು ಅದೇ ತೋರುತ್ತದೆ.

ಸಂಜೆಯಾಗುತ್ತಿತ್ತು. ಈಗ ನಾವು ಬೀಳ್ಕೊಡುವ ಸಮಯ. ಸಿವಿಎಸ್ ಮರದ ಕೆಳಗೆ ನಿಂತಿದ್ದ ಮೋಟಾರ್ ಸೈಕಲ್‌ನ್ನು ತೆಗೆದು ನನಗೆ ನನ್ನ ಮುಂದಿನ ನಿಲ್ದಾಣಕ್ಕೆ ತಲುಪಿಸಿದರು. ಅನಂತರ ಅವರು ಚೆನ್ನೈ ನಗರದ ಟ್ರಾಫಿಕ್‌ನೊಳಗೆ ಅದೃಶ್ಯರಾದರು.

ಇದಾದ ಎರಡೇ ವರ್ಷದೊಳಗೆ ಕೋರಮಂಡಲ ಸಮುದ್ರ ತೀರದ ಅಲೆಗಳಲ್ಲಿ ಸಿವಿಎಸ್ ಲೀನವಾದರು.

ಅವರಿಗಿಂತ ಎರಡು ಪೀಳಿಗೆಯಷ್ಟು ಚಿಕ್ಕವರಾಗಿದ್ದು ಅವರನ್ನು ಅರಿಯುವ ತವಕದಲ್ಲಿದ್ದ ನಾವು ಅನಾಥರಾದೆವು. ಭವಿಷ್ಯದಲ್ಲಿನ ಬಹುಮುಖ್ಯವಾದ ಭಾಗವನ್ನು ಕಳೆದುಕೊಂಡಂತೆ ಭಾಸವಾಯಿತು. ಈ ವಿಚಿತ್ರ ಗಾಂಧಿವಾದಿ ಹುಚ್ಚನ ನಿಗೂಢತೆ ಶಾಶ್ವತವಾಗಿಯೇ ಮುಚ್ಚಿಹೋಯಿತು.

'ನೀವು ಬಂದು ಇಲ್ಲಿ ಸಮಯ ಕಳೆಯಬಹುದು, ಅಧ್ಯಯನ ಮಾಡಬಹುದು, ಕೆಲಸ ಮಾಡಬಹುದು, ಈ ಕುರಿತು ಚಿಂತಿಸಬಹುದು' ಎಂದು ಮುಕ್ತ ಆಹ್ವಾನ ಪಡೆದ ಅನೇಕರಲ್ಲಿ ನಾನೂ ಒಬ್ಬಳು. ಸಿವಿಎಸ್‌ರ ಅತ್ಯುತ್ಸಾಹ ಮತ್ತು ಅದಮ್ಯ ಚೇತನ್ಯ ಏಕ ಆಯಾಮದ ಭೌತಿಕ ದೇಹವನ್ನು ಮರೆಯುವಂತೆ ಮಾಡುತ್ತಿತ್ತು. ಆದರೆ ಇವೆಲ್ಲವನ್ನೂ ಸಾಗರ ನಮ್ಮಿಂದ ಕಿತ್ತುಕೊಂಡಿತ್ತು. ಈ ಮನುಷ್ಯ ಕೊಡಮಾಡಿದ್ದ ಸಂಪತ್ತು ನಮ್ಮಲ್ಲಿದೆ. ಅದನ್ನು ಈಗ ಮತ್ತು ಮುಂದೆಯೂ ಕಾಪಾಡಿ ಬೆಳೆಸುವ ಹೊಣೆಗಾರಿಕೆ ಅವರ ಸಹಪಯಣಿಗರ ಮೇಲಿದೆ.

ಬಾಬಾ ಆಮ್ಟೆ ಅವರ ವಾನಪ್ರಸ್ಥಾಶ್ರಮ

ಸಾಧನೆಯ ಸುದೀರ್ಘ ಹಾದಿ

ಸೇವಾಗ್ರಾಮದ ಆಶ್ರಮದ ಅಡುಗೆ ಕೋಣೆಯಲ್ಲಿ ಮುರಳೀಧರ್ ದೇವಿದಾಸ್ ಆಮ್ಟೆ ಕಾಯಿಪಲ್ಲೆ ಹೆಚ್ಚುತ್ತಿದ್ದರು. ಅಥ್ಲೇಟ್ ಆಗಿದ್ದ ಈ ಯುವಕನಿಗೆ ದೈಹಿಕ ಶ್ರಮವುಳ್ಳ ಕೆಲಸ ಮಾಡುವುದು ರೂಢಿಯಾಗಿತ್ತು. ಆದರೂ ಬಾಪು ಆಶ್ರಮದಲ್ಲಿ ಇಂತಹ ಕೆಲಸವೂ ಸಂತಸವನ್ನು ಕೊಡುತ್ತಿತ್ತು.

ಮುರಳೀಧರ್, ಕತ್ತರಿಸಿದ ತರಕಾರಿಯನ್ನು ಅಡುಗೆ ಮಾಡುವವರಿಗೆ ನೀಡಬೇಕೆನ್ನುವಷ್ಟರಲ್ಲಿ ಗಾಂಧೀಜಿ ಬಂದರು. ಕಾಯಿಪಲ್ಲೆಯ ಕೆಲವು ಹಸಿರು ಸೊಪ್ಪು ಕಲ್ಲಿನ ಹಾಸಿನ ಮೇಲೆ ಬಿದ್ದುದನ್ನು ಅವರು ಕಂಡರು. ಹಾಗೆ ನೆಲದ ಮೇಲೆ ಬಿದ್ದ ಪ್ರತಿಯೊಂದು ಬಿಡಿ ಎಲೆಯನ್ನೂ ತೆಗೆದು ಪಕ್ಕದಲ್ಲಿಯೇ ಇದ್ದ ಪೊಟಾಸಿಯಂ ಪರಮಾಂಗನೇಟ್ ದ್ರಾವಣದಲ್ಲಿ ತೊಳೆದು ಅಡುಗೆಗೆ ನೀಡಿದರು. ಮುರಳೀಧರ್‌ಗೆ ಇದು ಅಷ್ಟು ಮುಖ್ಯ ಎನಿಸಲಿಲ್ಲ. ಗಾಂಧೀಜಿ, ಅವರೆಡೆಗೆ ತಿರುಗಿ, ವಿವರಿಸಿದರು. 'ನಾವು ಸಾರ್ವಜನಿಕ ಹಣದ ಮೇಲೆ ಜೀವಿಸುತ್ತಿದ್ದೇವೆ. ಒಂದೇ ಒಂದು ಚೂರನ್ನೂ ದುರ್ಬಳಕೆ ಮಾಡುವಂತಿಲ್ಲ'. ಮುರಳೀಧರ್ ಆ ಕ್ಷಣವನ್ನೆಂದೂ ಮರೆಯಲಿಲ್ಲ. ಎಷ್ಟೋ ವರ್ಷಗಳ ನಂತರ ಆನಂದವನದಲ್ಲಿ ಬಾಬಾ ಆಮ್ಟೆ ಎಂದು ಖ್ಯಾತಿ ಗಳಿಸಿದ ನಂತರ ದೇಣಿಗೆಯಾಗಿ ಪಡೆದ ಬಹುದೊಡ್ಡ ಮೊತ್ತವನ್ನು ಸಮರ್ಪಕವಾಗಿ ವಿನಿಯೋಗಿಸಲು ಇದು ಸಹಾಯ ಮಾಡಿತು.

ಈ ಸಮಯದಲ್ಲಿ ಎಂ.ಕೆ.ಗಾಂಧಿ 'ಮಹಾತ್ಮಾ' ಆಗಿದ್ದರು. ಮುರಳೀಧರ್, ಆಗತಾನೇ ವಕೀಲಿಕೆ ಕಲಿತು ಬಂದಿದ್ದ ತರುಣ. ಬಾಪು ಕುಟಿ, ಚಟುವಟಿಕೆಗಳಿಂದ ತುಂಬಿದ ಮನೆಯಾಗಿತ್ತು. ಕೆಲಸಕ್ಕೆ, ಸಂಘರ್ಷಕ್ಕೆ ಮತ್ತು ಆರಾಧನೆಗೆ ಸೂಕ್ತ ಸ್ಥಳವಾಗಿತ್ತು. ಇದು ಸೇವಾಗ್ರಾಮ ಆಶ್ರಮದ ಕೇಂದ್ರ ಸ್ಥಾನ ಮಾತ್ರವಲ್ಲ; ಸತ್ಯಾಗ್ರಹದ ಮೂಲಕ 'ಸ್ವರಾಜ್ಯ' ಎಂಬ ಆಂದೋಲನದ ಕೇಂದ್ರಸ್ಥಾನವೂ ಆಗಿತ್ತು.

ಇತ್ತ ಗಾಂಧಿ, ಸಾವಿರಾರು ಪತ್ರಗಳಿಗೆ ಉತ್ತರಿಸುತ್ತಿದ್ದರು. 'ಹರಿಜನ್' ಮತ್ತು 'ಯಂಗ್ ಇಂಡಿಯಾ' ಪತ್ರಿಕೆಗಳಿಗೆ ಸಂಪಾದಕೀಯ ಬರೆಯುತ್ತಿದ್ದರು. ಜವಹರಲಾಲ್ ನೆಹರೂ, ಪಟೇಲ್,

ಖಾನ್ ಅಬ್ದುಲ್ ಗಫಾರ್ ಖಾನ್‌ರಂತಹ ಇತಿಹಾಸ ನಿರ್ಮಾಪಕರನ್ನು ಭೇಟಿಯಾಗುತ್ತಿದ್ದರು. ಇಷ್ಟು ಮಾಡಿಯೂ ನೂಲು ತೆಗೆಯುವುದಕ್ಕೆ, ಮಾಲೀಸಿಗೆ, ಮಕ್ಕಳೊಡನೆ ಆಡಲು, ಮುರಳೀಧರ್ ಆಮ್ಟೆಯಂತಹ ಯುವಕರೊಡನೆ ಮಾತನಾಡಲು ಸಮಯ ಉಳಿಸಿಕೊಳ್ಳುತ್ತಿದ್ದರು.

ಅವರ ಪರಿಧಿಯೊಳಗೆ ಬಂದ ಎಲ್ಲರಿಗೂ ಗಾಂಧಿ ಒಂದು ಗುರಿ ಅಥವಾ ಉದ್ದೇಶ ನೀಡುತ್ತಿದ್ದರು. ಮಹಾಬಲಶಾಲಿಯಾದ ಮುರಳೀಧರ್‌ಗೆ ಪನೆ ಬೆಲ್ಲ ಮಾಡುವ ಕಾಯಕವನ್ನು ಅವರ ಜೀವಿತದ ಉದ್ದೇಶವನ್ನಾಗಿ ನೀಡಿದರು. ಆ ಸಮಯದಲ್ಲಿ ಈ ಕಾಯಕ, ತಪತಪದ ಈ ಯುವಕನಿಗೆ ರುಚಿಸಲಿಲ್ಲ. ಬಾಪು ಯಾಕೆ ಹೀಗೆ ಹೇಳಿದರೆಂಬುದು ಆತನಿಗೆ ಅರ್ಥವಾದದ್ದು ತೀರಾ ಕೊನೆಯ ಹಂತದಲ್ಲಿ. ಆ ವೇಳೆಗೆ ಆತ ತಮ್ಮ ಜೀವನದ ಸಂಧ್ಯೆಯಲ್ಲಿದ್ದ.

ನರ್ಮದೆಯಲ್ಲಿ ಸೂರ್ಯೋದಯ

ವಿಪರೀತ ಔಷಧ ಸೇವಿಸುತ್ತಿದ್ದರೂ ಬಾಬಾ, ಕೆಲವು ಘಂಟೆಗಳಿಗಿಂತ ಹೆಚ್ಚು ಕಾಲ ನಿದ್ದೆ ಮಾಡುತ್ತಿದ್ದಿಲ್ಲ. ನಡುರಾತ್ರಿಯ ಹೊತ್ತಿಗೆ ಅವರು ಹಾಸಿಗೆ ಬಿಟ್ಟೇಳುತ್ತಿದ್ದರು. ಅವರ ಘಾಸಿಗೊಂಡ ಬೆನ್ನಿಗೆ ಬೆಂಬಲವಾಗಿರುವ ಬ್ರೇಸ್ ಸರಿಪಡಿಸಿಕೊಂಡು, ಮನೆಯ ಮುಂದೆ, ಕೇವಲ ಕೆಲವು ಗಜಗಳ ದೂರದಲ್ಲಿ ಹರಿಯುವ ನದಿಯತ್ತ ನಡೆದುಬಿಡುತ್ತಿದ್ದರು.

ಅದು ಭೂಮಿಯೊಳಗಿನ ಎಲ್ಲ ಜಂತುಗಳೂ ಸ್ತಬ್ಧವಾಗಿರುವ ಸಮಯ. ಆಗ ಹರಿಯುವ ನದಿಯ ಸಪ್ಪಳ ಅಥವಾ ಬೀಳುವ ನಕ್ಷತ್ರಗಳು ಮಾತ್ರ ಕಾಣುತ್ತಿದ್ದವು. ಬಿದಿರಿನ ಕೋಲಿನ ಸಹಾಯದಿಂದ ಬಾಬಾ ಹರಿವ ಹೊಳೆಯ ನಿರಂತರ ವೈಭವವನ್ನು ನೋಡುತ್ತಾ ನದಿಯಂಚಿನಲ್ಲಿ ಒಂಟಿಯಾಗಿ ನಿಲ್ಲುತ್ತಿದ್ದರು. ಅವರೇ ಜತನದಿಂದ ಬೆಳೆಸಿದ ಗಿಡಗಳಲ್ಲಿ ಅರಳಿದ ಹೂವಿನ ಸುಗಂಧ, ಅವರ ಜೊತೆಗೇ ಮನೆಗೆ ಬರುತ್ತಿತ್ತು.

ಆನಂತರದಲ್ಲಿ ಹಾಸಿಗೆಯ ಮೇಲೆ ಮಲಗಿಯೇ ಬೆಳಗಿನ ಸೂರ್ಯೋದಯದ ಬಣ್ಣಗಳು ನೀರಿನ ಮೇಲೆ ಚೆಲ್ಲಾಟವಾಡುವುದನ್ನು ಬಾಬಾ ನೋಡುತ್ತಿದ್ದರು. 'ನರ್ಮದಾ' ನದಿಯ ದಕ್ಷಿಣ ತೀರದ ಶಿಖರ ಪ್ರದೇಶದಲ್ಲಿ ಬಾಬಾರ ವಾನಪ್ರಸ್ಥಾಶ್ರಮ ಇದೆ. ಈ ನದೀ ತೀರದ ಉದ್ದಕ್ಕೂ ಇರುವ ಜನರಿಗೆ ನದಿ, ದೇವತೆ, ಗೆಳತಿ ಎಲ್ಲವನ್ನೂ ನೀಡುವ ಮಾತೆ.

ನರ್ಮದೆಯ ಒಂದು ಶಾಖೆಯಾದ ರೇವಾ ಮಯ್ಯಾ, ಈ ಜಾಗದಿಂದ ಪೂರ್ವಕ್ಕೆ ನೂರಾರು ಮೈಲುಗಳಾಚೆ, ಭೋಟಾನಾಗಪುರ ಪ್ರಸ್ಥಭೂಮಿಯ ಒಂದು ಪುಟ್ಟ ಕೊಳದಲ್ಲಿ ಹುಟ್ಟುತ್ತದೆ. ಅರಬೀ ಸಮುದ್ರದತ್ತ ನಿಧಾನವಾಗಿ ಹರಿಯುವ ನರ್ಮದಾ, ಅಸಂಖ್ಯ ಘಾಟ್‌ಗಳು ಮತ್ತು ದೇವಾಲಯಗಳಲ್ಲಿ ಶ್ರದ್ಧಾಂಜಲಿ ಸ್ವೀಕರಿಸುತ್ತಾಳೆ. ಈ ನದಿ ಕಾಸರ್‌ವಾಡ್‌ನಲ್ಲಿ ತಿರುವು ಪಡೆಯುವ ಮುಂಚೆ, ಅಹಲ್ಯಾಬಾಯಿ ಹೋಳ್ಕರ್ ನಿರ್ಮಿಸಿದ್ದು ಎನ್ನಲಾದ ಮಹಾಬಲೇಶ್ವರದ ಘಾಟ್‌ನ್ನು ಅತ್ಯಂತ ಶೋಭಾಯಮಾನವಾಗಿ ನೇವರಿಸುತ್ತಾಳೆ.

ಹಳೆಯ ಕಾಲದಿಂದಲೂ ನರ್ಮದೆಗೆ ಪೂಜ್ಯ ಭಾವದಿಂದ ಪ್ರದಕ್ಷಿಣೆ ಬರುವ ಪರಿಪಾಠವಿದೆ. ೨೧ನೆಯ ಶತಮಾನದ ಹೊಸ್ತಿಲಲ್ಲಿಯೂ ಕೂಡಾ ಬಹಳ ಮಂದಿ ಯಾತ್ರಿಕರು

ಈ ಪ್ರದಕ್ಷಿಣಾಯಾತ್ರೆಯನ್ನು ಕೈಗೊಳ್ಳುತ್ತಾರೆ. ಈ ರೀತಿ ಪ್ರದಕ್ಷಿಣಾಯಾತ್ರೆ ಕೈಗೊಳ್ಳುವ ಯಾತ್ರಿಕರಲ್ಲಿ ಬಹುತೇಕ ಮಂದಿ, ಕಾಸರ್‌ವಾಡ್‌ನ ಈ ಆಶ್ರಮಕ್ಕೆ ಭೇಟಿ ನೀಡುತ್ತಾರೆ. ಇಲ್ಲಿ ವೃದ್ಧ ದಂಪತಿಗಳೊಂದಿಗೆ, ಕಾರ್ಯಕರ್ತರ ಒಂದು ತಂಡವೇ ಇದೆ. ಇವರು ನಿರಂತರವಾಗಿ ಭೇಟಿ ನೀಡುವ ಯಾತ್ರಿಕರ ಯೋಗಕ್ಷೇಮದ ಕಡೆಗೂ ಗಮನ ಕೊಡುತ್ತಾರೆ. ಕೊಂಚ ಸುಧಾರಿಸಿಕೊಳ್ಳುವುದಕ್ಕೋ, ಬಾಬಾ ಮತ್ತು ತಾಯಿಯನ್ನು ಕಾಣುವುದಕ್ಕೋ ಅಥವಾ ಊಟ ಮಾಡುವುದಕ್ಕೋ ಇಲ್ಲಿಗೆ ಬರುವ ಯಾತ್ರಿಕರಿರುತ್ತಾರೆ. ಈ ಗುಂಪುಗಳಲ್ಲಿ ಬಾಬಾ ನಿಜವಾದ ಯಾತ್ರಿಕರು ಯಾರು ಎಂದು ಸೂಕ್ಷ್ಮವಾಗಿ ಗಮನಿಸುತ್ತಾರೆ. ಕೆಲವೊಮ್ಮೆ ತಾಯಿಯ ಗೈರುಹಾಜರಿಯಲ್ಲಿಯೂ ಬಂದ ಎಲ್ಲರನ್ನೂ ಸ್ವಾಗತಿಸಿ, ಊಟ ಹಾಕಿ ಕಳಿಸಬೇಕೆಂಬ ನಿಯಮ ಮುರಿಯುವುದಿಲ್ಲ, ಅವರೊಂದಿಗೆ ಯಾವ ಪ್ರಶ್ನೆಯನ್ನೂ ಕೇಳುವುದಿಲ್ಲ.

ಇವರಲ್ಲಿ ಬೇರೆ ಬೇರೆ ರೀತಿಯ ಜನರು ಇರುತ್ತಾರೆ. ಅನೇಕರು ಬಾಬಾರ ಸಹವರ್ತಿಗಳಾಗಿದ್ದು, ಅವರಿಂದ ಸಲಹೆ ಪಡೆಯಲೋ ಅಥವಾ ಅವರೊಡನೆ ಟಿಪ್ಪಣಿ ಹಂಚಿಕೊಂಡು ಚರ್ಚಿಸಲೋ ಬಂದಿರುತ್ತಾರೆ. ಇವರಲ್ಲಿ ಅನೇಕರು ಯುವಕರು. ಇಲ್ಲಿಗೆ ಬಂದೊಡನೆಯೇ ನದಿ ಇವರನ್ನು ಸೆಳೆಯುತ್ತದೆ. ನದಿಯಲ್ಲಿ ಸ್ನಾನ ಮಾಡಲು ನುಗ್ಗುತ್ತಾರೆ. ಈ ಗುಂಪಿನಲ್ಲಿ ಸೇರಲಾಗದ ಬಾಬಾ ಮೇಲಿನಿಂದಲೇ ಅವರ ನಗು, ನೀರಿನಲ್ಲಿ ಅವರಾಡುವ ಮೇಲಾಟಗಳನ್ನು ಗಮನಿಸಿ ಆನಂದಿಸುತ್ತಾರೆ.

ಬಾಬಾರನ್ನು ಕುರಿತಂತೆ, Old man and the River ಎಂಬ ನನ್ನ ಲೇಖನ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಅಚ್ಚಾದಾಗ ಬಾಬಾ ಕಾಸರವಾಡ್‌ಗೆ ಬಂದು ೭ ವರ್ಷಗಳಾಗಿದ್ದವು. ನಾನು ಆ ಬಳಿಕ ಕಾಸರ್‌ವಾಡ್‌ಗೆ ಬಂದಿಳಿದಾಗ ಬಾಬಾ ಇದನ್ನು ಮರೆತಿರಲಿಲ್ಲ. 'Old man and the River' ಎಂದರೆ ಅರ್ಥವೇನು? ಹುಸಿ ಸಿಟ್ಟಿನಲ್ಲಿ ಅವರು ಪ್ರತಿಕ್ರಿಯಿಸಿದರು. ನಾನು ಯೌವನದ ಉತ್ತರಾರ್ಧದಲ್ಲಿದ್ದೇನೆ.

ಮಾಳಿಗೆಯ ಮೇಲಿನ ಮಂಟಪದ ಗೋಡೆಗಳಲ್ಲಿ ಇದಕ್ಕೆ ಪುರಾವೆಯೂ ಸಿಕ್ಕೀತು! ಎರಡು ಹುಲಿಮರಿ ಮತ್ತು ಒಂದು ಬೆಳೆದ ಸಿಂಹದ ಪಕ್ಕದಲ್ಲಿ ಕುಳಿತ ಸುಂದರ ಯುವಕನ ಫೋಟೋ ಅಲ್ಲಿದೆ. ಇದು ಬಾಬಾರ ಎರಡನೆಯ ಮಗ ಪ್ರಕಾಶ್ ಆಮ್ಟೆ. ಇವನಿಗಿಂತ ದೊಡ್ಡವನಾದ ವಿಕಾಸ್, ಡಾಕ್ಟರ್ ಆಗಿದ್ದಾನೆ. ನಲವತ್ತರ ಆಸುಪಾಸಿನಲ್ಲಿರುವ ಈತ, 'ಆನಂದವನ'ದಂತಹ ಬೃಹತ್ ಸಂಸ್ಥೆಯ ಉಸ್ತುವಾರಿ ನೋಡಿಕೊಳ್ಳುತ್ತಾನೆ.

ತಾಯಿಯ ಸಂಗಡ ಮಾತಾಡುವಾಗ ನುಗ್ಗಿ ಬರುವ ನೆನಪುಗಳಲ್ಲಿ ಕಾಲ ಸರಿದುಹೋದಂತೆ ಭಾಸವಾಗುತ್ತದೆ. ಆಕೆ, ಕಾಲದೊಂದಿಗೆ ಬಹುದೂರ ಪಯಣಿಸಿದ್ದಾರೆ ಎನಿಸುತ್ತದೆ. ಸುಮಾರು ೫೦ ವರ್ಷಗಳ ಹಿಂದೆ, ಪ್ರಪಂಚವೆಲ್ಲ 'ತಾಯಿ' ಎಂದು ಕರೆಯುವ ಮುನ್ನ ಈಕೆ, ಇಂದೂ ಗುಳೇಶಾಸ್ತ್ರಿ, ಬ್ರಾಹ್ಮಣ ಕುಟುಂಬವೊಂದರ ನಿಷ್ಠಾವಂತ ಹೆಣ್ಣುಮಗಳಾಗಿದ್ದಳು.

ಭಿನ್ನ ಮನೋಭಾವದ ಬ್ರಾಹ್ಮಣ ವಕೀಲನ ಸಂಗಡ ಆಕೆಯ ವಿವಾಹವಾದಾಗ ತನ್ನ ಬದುಕು ಬದಲಾಗಬಹುದು ಎಂದು ಆಕೆಗೆ ಅನಿಸಿತ್ತು. ಇದು ನಿಜವೇ ಆಯಿತು. ನರ್ಮದಾ

ನದಿಯ ಈ ಸುಂದರ ತಿರುವಿನಲ್ಲಿರುವ ಈ ಆಶ್ರಮಕ್ಕಿಂತ ಬಹುದೂರದಲ್ಲಿರುವ ವರೋರಾ ಎಂಬ ಚಿಕ್ಕಪೇಟೆಯಲ್ಲಿ ಮುರಳೀಧರ್ ಆಮ್ಟೆ ಸಂಗಡ ಈಕೆಯ ಜೀವನ ಪಯಣ ಆರಂಭವಾಯಿತು. ಇದು ನಲವತ್ತರ ದಶಕದ ಉತ್ತರಾರ್ಧದ ಮಾತು.

ಬಾಲ್ಯ

ನಾಗಪುರದಲ್ಲಿ ದೀಪಾವಳಿಯ ಸಂಭ್ರಮ. ತಾಯಿ ನೀಡಿದ ನಾಣ್ಯಗಳನ್ನು ಕೈತುಂಬಾ ಮುಷ್ಟಿ ಕಟ್ಟಿಕೊಂಡು, ಎಂಟು ವರ್ಷದ ಹುಡುಗನೊಬ್ಬ ಮಾರುಕಟ್ಟೆಯ ಉದ್ದಕ್ಕೂ ಓಡುತ್ತಿದ್ದ. ಸಿಹಿ ತಿಂಡಿ ಹಿಡಿದುಕೊಂಡು, ಜೀವನವೆಲ್ಲ ಇಷ್ಟೇ ಸಿಹಿ ಮತ್ತು ಸುಂದರ ಎಂದು ಭಾವಿಸಿದ್ದ ಈ ಹುಡುಗ ಮನಸ್ಸಿಗೆ ಕಂಡುದೆಲ್ಲವನ್ನೂ ಖರೀದಿಸುವ ಇರಾದೆಯಿಂದ ಓಡುತ್ತಿದ್ದ. ಆದರೆ ಇದ್ದಕ್ಕಿದ್ದಂತೆ ಅದೇಕೋ ಗಕ್ಕನೆ ನಿಂತ. ರಸ್ತೆಯ ಬದಿಯಲ್ಲಿ ಕುಳಿತಿದ್ದ ಭಿಕ್ಷುಕ ಆತನ ಕಣ್ಣಿಗೆ ಬಿದ್ದ. ರಸ್ತೆಯಲ್ಲಿದ್ದ ಧೂಳು, ಕೊಳಕು ಆ ಭಿಕ್ಷುಕನ ಮೇಲೆ ಬೀಳುತ್ತಿತ್ತು. ಆತ ತನ್ನ ಕೈಲಿದ್ದ ಖಾಲಿ ಸಿಗರೇಟ್ ಟಿನ್ ಚಾಚುತ್ತಿದ್ದ. ಅದೇ ಅವನ ಭಿಕ್ಷಾ ಪಾತ್ರೆಯಾಗಿತ್ತು. ಅದರಲ್ಲಿ ಯಾರಾದರೂ ನಾಣ್ಯ ಹಾಕುವರೇ ಎಂದು ಕಾಯುತ್ತಿದ್ದ.

ಇದನ್ನು ನೋಡಿದ್ದೇ ಈ ಹುಡುಗನ ಉತ್ಸಾಹ ಜಾರಿಹೋಯಿತು. ಈ ಸುಂದರವಾದ ಪ್ರಪಂಚದಲ್ಲಿ ಇಂತಹ ಕ್ಲೈಬ್ಯ, ದಾರಿದ್ರ್ಯ, ಸಂಕಟ ಇರುವುದಾದರೂ ಹೇಗೆ? ತನ್ನ ಕಿಸೆ ಮತ್ತು ಕೈಯಲ್ಲಿದ್ದ ನಾಣ್ಯಗಳನ್ನು ಹೊರತೆಗೆದು, ಅಷ್ಟನ್ನೂ ಆ ಡಬ್ಬಿಗೆ ಹಾಕಿದ. ಅವರ ತೂಕದಿಂದ ಟಿನ್ ಭಿಕ್ಷುಕನ ಕೈಯಿಂದ ಜಾರಿ ಬೀಳುವಂತಾಯಿತು.

ಹುಡುಗರು ಮಾಡುವ ಚೇಷ್ಟೆಯ ಅನುಭವವಿದ್ದ ಈ ಕುರುಡ 'ನಾನು ಒಬ್ಬ ಭಿಕ್ಷುಕ ಮಗೂ, ನನ್ನ ಈ ಟಿನ್‌ಗೆ ಕಲ್ಲು-ಗಿಲ್ಲು ಹಾಕಬೇಡ' ಎಂದ.

'ಇವು ಕಲ್ಲಲ್ಲ, ನಾಣ್ಯಗಳು. ಬೇಕಿದ್ದರೆ, ಲೆಕ್ಕ ಮಾಡಿಕೋ' ಎಂದು ಈ ಚಿಕ್ಕ ಹುಡುಗನೂ ಹೇಳಿದ.

ಟಿನ್ನಿನಲ್ಲಿ ಇದ್ದುದೆಲ್ಲವನ್ನೂ ಚಿಂದಿ ಬಟ್ಟೆಯ ಮೇಲೆ ಸುರಿದು ಭಿಕ್ಷುಕ ನಾಣ್ಯಗಳನ್ನು ಲೆಕ್ಕ ಮಾಡತೊಡಗಿದ. ಮತ್ತೆ ಮತ್ತೆ ಲೆಕ್ಕ ಮಾಡಿದ. ಇಷ್ಟೊಂದು ನಾಣ್ಯವನ್ನು ಯಾರಾದರೂ ಹಾಕಬಹುದು ಎಂಬುದನ್ನು ನಂಬಲೂ ಸಾಧ್ಯವಾಗುತ್ತಿಲ್ಲ. ಈತ ಮತ್ತೆ ಮತ್ತೆ ನಾಣ್ಯವನ್ನು ಎಣಿಸುತ್ತಿದ್ದುದನ್ನು ಕಂಡ ಬಾಲಕನಿಗೆ ದುಃಖ ತಡೆಯಲಾಗಲಿಲ್ಲ. ಕಣ್ಣಲ್ಲಿ ನೀರು ತುಂಬಿಕೊಂಡು ಆತ ಮನೆಗೆ ಮರಳಿದ.

ಈ ಹುಡುಗನೇ ಮುರಳೀಧರ್ ದೇವಿದಾಸ್ ಆಮ್ಟೆ. ಇವರು ೧೯೧೪ರಲ್ಲಿ ಕ್ರಿಸ್ಮಸ್ ಹಬ್ಬದ ಮಾರನೆಯ ದಿನ ಹುಟ್ಟಿದರು. ಅದೇ ವರ್ಷ ಯುರೋಪಿನಲ್ಲಿ ಮೊದಲ ಮಹಾಯುದ್ಧವೂ ಆರಂಭವಾಗಿತ್ತು. ಇದರಿಂದಾಗಿ, ವಾರ್ಧಾ ಜಿಲ್ಲೆಯ ಸಣ್ಣ ಊರಾದ ಹಿಂಗನ್ ಘಾಟ್‌ನ ಬದುಕೇನೂ ಬದಲಾಗಲಿಲ್ಲ. ಇದು ಬೇರೆಯೇ ಲೋಕದಲ್ಲಿ ಇದ್ದಂತಿತ್ತು. ಶ್ರೀಮಂತ ಜಮೀನ್ದಾರನ ಮೊದಲನೆಯ ಮಗನಾದ ಮುರಳೀಧರರಿಗೆ ಏನೊಂದೂ

ಕಡಿಮೆಯಾಗಲಿಲ್ಲ. ಆಟ, ಚೇಷ್ಟೆ, ಕುಸ್ತಿಗಳಲ್ಲಿ ಇವರ ಬಾಲ್ಯ ಸರಿಯುತ್ತಿತ್ತು. ಇವರ 'ಧಾರಾಳತನ' ತಂದೆಗೆ ಸೇರುತ್ತಿರಲಿಲ್ಲ. ಈಗಲೂ ತಂದೆಯ ಕೋಪದಿಂದ ತಾಯಿ ತನ್ನನ್ನು ಕಾಪಾಡುತ್ತಿದ್ದುದನ್ನು ಬಾಬಾ ನೆನಪಿಸಿಕೊಳ್ಳುತ್ತಾರೆ. ಇವರನ್ನು ಬಾಬಾ ಎಂದು ಕರೆಯುತ್ತಿದ್ದವರು ತಾಯಿಯೇ. ಈ ಹೆಸರೇ ಕೊನೆಯವರೆಗೂ ಅವರಿಗೆ ಅಂಟಿಕೊಂಡಿತು.

ಈ ಹುಡುಗಾಟದ ತಂಟೆಕೋರತನಕ್ಕಿಂತಲೂ ಆಚೆ, ಬಾಬಾರ ವ್ಯಕ್ತಿತ್ವದ ಹರಹು ಇತ್ತು. ಅಷ್ಟು ಸಣ್ಣ ವಯಸ್ಸಿನಲ್ಲಿಯೇ ಕೆಳಜಾತಿಯ ಮಕ್ಕಳ ಜತೆ ಆಟವಾಡಬಾರದು ಎಂಬ ಕಟ್ಟಳೆಗಳ ವಿರುದ್ಧ ಅವರು ಬಂಡೆದ್ದರು. ಅಷ್ಟೇ ಅಲ್ಲ; ಅವರೊಡನೆ ಊಟ ಮಾಡಿ, ಅದಕ್ಕೆ ದೊರೆಯುವ ಶಿಕ್ಷೆಯನ್ನೂ ಸಂತೋಷದಿಂದ ಸ್ವೀಕರಿಸುತ್ತಿದ್ದರು.

ಸಿರಿವಂತರ ಮನೆಯಲ್ಲಿ ಹುಟ್ಟಿದ ಬಾಬಾಗೆ ಎಲ್ಲ ಅನುಕೂಲಗಳೂ ಇದ್ದವು. ಇದರಿಂದಾಗಿ ಯಾವುದೇ ಸಮಸ್ಯೆ ಇರಲಿಲ್ಲ. ಇವರ ತಂದೆ, ಸರ್ಕಾರದ ಹಣಕಾಸು ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ, ಈ ಕುಟುಂಬ ವರೋರಾಗೆ ಬರುವ ಮುನ್ನ ಅನೇಕ ವರ್ಷಗಳ ಕಾಲ ನಾಗ್ಪುರದಲ್ಲಿ ನೆಲೆಸಿತ್ತು. ಬಾಬಾನಿಗೆ ೧೪ವರ್ಷ ಆಗುವ ವೇಳೆಗೆ ಸ್ವಂತ ಬಂದೂಕು ಇದ್ದು ಅವರು ಬೇಟೆಯನ್ನೂ ಆಡುತ್ತಿದ್ದರು. ಸಿನೆಮಾ ಬಗ್ಗೆಯೂ ಆಸಕ್ತಿ ಬೆಳೆಸಿಕೊಂಡಿದ್ದರು. ಅವರು ಕಾರ್ ಚಾಲನೆ ಮಾಡುವುದನ್ನು ಕಲಿತ ವೇಳೆಗೆ ಅವರ ಬಳಿ ಸಿಂಗರ್ ಸ್ಪೋರ್ಟ್ಸ್ ಕಾರು ಇತ್ತು. ಆ ಕಾರಿನ ಸೀಟಿಗೆ ಚಿರತೆಯ ಧರ್ಮವನ್ನು ಹೊಲಿಯಲಾಗಿತ್ತು.

ಮರಳೀಧರ್ ೧೬ರ ಯುವಕನಾಗುವ ವೇಳೆಗೆ ಅತ್ತ ಗಾಂಧಿ ದಂಡಿ ಯಾತ್ರೆ ನಡೆಸಿದ್ದರು. ಈ ದಂಡಿ ಯಾತ್ರೆ, ಪ್ರಪಂಚದ ಗಮನ ಸೆಳೆದಿತ್ತು. ಕೇವಲ ಒಂದು ಹಿಡಿ ಉಪ್ಪಿನಿಂದ ಗಾಂಧಿ ಬ್ರಿಟಿಷ್ ಸಾಮ್ರಾಜ್ಯವನ್ನು ನಡುಗಿಸಿದ್ದರು. ಗಾಂಧಿ ದಂಡಿ ಯಾತ್ರೆಯಿಂದಾಗಿ ಜೈಲಿಗೆ ಹೋದ ಸಂದರ್ಭದಲ್ಲಿ ಬಾಬಾ ಮೆಟ್ರಿಕ್ ಮುಗಿಸಿ, ಕಾಲೇಜಿಗೆ ಪ್ರವೇಶ ದೊರಕಿಸಿಕೊಂಡರು. ೧೯೩೬ರಲ್ಲಿ ಸೇವಾಗ್ರಾಮ ಆಶ್ರಮ ರೂಪು ತಳೆಯುತ್ತಿರುವ ವೇಳೆಗೆ ಬಾಬಾ ವಕೀಲರಾಗಿದ್ದರು.

ಗಾಂಧಿ, ಟಾಗೋರ್ ಮತ್ತು ಇನ್ನಿತರ ಪ್ರಭಾವಗಳು

ಆವರೆಗೆ ಬಾಬಾರಲ್ಲಿದ್ದ ತುಂಟತನ ಕುತೂಹಲವಾಗಿ ಮಾರ್ಪಟ್ಟಿತು. ಕಾಲೇಜಿನಲ್ಲಿರುವಾಗ ಸುಂದರವಾದ ಸ್ಥಳಗಳನ್ನು ಸಂದರ್ಶಿಸುವ ಬಯಕೆಯಿಂದ ಭಾರತವಿಡೀ ಅಲೆದಾಡಿದ್ದ ಬಾಬಾ, ಆಕರ್ಷಕ ವ್ಯಕ್ತಿಗಳ ಒಡನಾಟವನ್ನೂ ಸಂಪಾದಿಸಿದ್ದರು. ಸಹಜವಾಗಿಯೇ ಇದು ಬಾಬಾರನ್ನು ಶಾಂತಿನಿಕೇತನದವರೆಗೂ ಒಯ್ದಿತು. ಬಾಬಾ, ರವೀಂದ್ರರ ಪ್ರಭಾವದ ಪರಿಧಿಗೆ ಬಂದರು. ಮೊದಮೊದಲಿಗೆ ಅವರನ್ನು 'ರವೀಂದ್ರ ಸಂಗೀತ' ಆಕರ್ಷಿಸಿತು. ಆದರೆ ಮುಂದೆ, ಬ್ರಹ್ಮಸಮಾಜದ ಕಾವ್ಯಾತ್ಮಕ ತಾತ್ವಿಕತೆಯನ್ನು ತನ್ನದಾಗಿಸಿಕೊಂಡರು. ದೇವೇಂದ್ರನಾಥ ಟಾಗೋರರ ಈ ಮಾತುಗಳನ್ನು ಅವರಿಗೆ ಮರೆಯಲಾಗಲಿಲ್ಲ.

'ದಿವ್ಯ ಶಕ್ತಿ, ಜಡ ಚೇತನಗಳೆಲ್ಲದರ ಕಣಕಣವನ್ನೂ ವ್ಯಾಪಿಸಿದೆ. ಹೀಗಿದ್ದೂ ಅದು ಇವೆರಡಕ್ಕಿಂತಲೂ ಸಂಪೂರ್ಣ ಭಿನ್ನ. ದಿವ್ಯ ಪ್ರೀತಿಯು ಅಭಯ ಹಸ್ತವಿಲ್ಲದೇ ಗೂಡು

ಬಿಟ್ಟು ತೆರಳಿದ ಪಕ್ಕಿಗಳು ಸಂಜೆ ಸುರಕ್ಷಿತವಾಗಿ ಮರಳಲಾರವು. ಅನಂತ ಸೌಂದರ್ಯದ ಉಸಿರೇ ಕೊಳದ ನೈದಿಲೆ, ತೋಟದ ಗುಲಾಬಿ ಅರಳಲು, ಪರಿಮಳ ಸೂಸಲು ಕಾರಣ. ಆತನಿಂದ ಸ್ಫೂರ್ತವಾಗದ ಸೌಂದರ್ಯವಾಗಲೀ, ಜ್ಞಾನವಾಗಲೀ, ನಂಬಿಕೆಯಾಗಲೀ, ಪರಿಶುದ್ಧತೆಯಾಗಲೀ, ಶ್ರದ್ಧೆಯಾಗಲೀ, ತ್ಯಾಗವಾಗಲೀ ಇಲ್ಲ. ಎಲ್ಲದರಲ್ಲಿರುವ ಒಳ್ಳೆಯ ಅಂಶಗಳು ಅವನ ದಯೆಯಿಂದ ಲಭಿಸಿವೆ. ಅವನು ಶ್ರೇಷ್ಠಾತಿ ಶ್ರೇಷ್ಠ'.

ರವೀಂದ್ರನಾಥ ಟಾಗೋರರ ಕಾವ್ಯ ಪ್ರೀತಿಯ ಬಾಹ್ಯಾಭಿವ್ಯಕ್ತಿಯಾಗಿತ್ತು. ಸಹಜ ಸೌಂದರ್ಯದಿಂದ ಪರಿವೃತವಾದ ಶಾಂತಿನಿಕೇತನ, ಟಾಗೋರರ ಆದರ್ಶ ಪ್ರಪಂಚದ ಪುಟ್ಟ ಪ್ರತಿರೂಪವಾಗಿತ್ತು. ಆನಂದ ಮತ್ತು ಪ್ರೀತಿಯಿಂದ ಒಂದಾದ ಸಮುದಾಯ ಅಲ್ಲಿನದು. ಈ ಪರಿಸರ ಮತ್ತು ಇಲ್ಲಿನ ಪರಿಕಲ್ಪನೆ ಬಾಬಾರನ್ನು ಆಳವಾಗಿ ತಟ್ಟಿತು. ಇದು ಅವರ ಬದುಕನ್ನೇ ಹೆಚ್ಚು ಕಡಿಮೆ ಪರಿವರ್ತಿಸಿತು.

ಸೇವಾಗ್ರಾಮಕ್ಕೆ ಹತ್ತಿರದ ವಾರ್ಧಾ ನಗರದಲ್ಲಿದ್ದ ಬಾಬಾರನ್ನು ಅಷ್ಟೇ ಆಕರ್ಷಿಸಿದ್ದು ಗಾಂಧೀಜಿ, ದೇವರೊಡನೆ ಹೊಂದಿದ್ದ ಸಂಬಂಧ.

ದೇವರನ್ನು ನಾವ್ಯಾರೂ ಕಂಡಿಲ್ಲ. ಆದರೆ, ಅದು ನಮ್ಮ ಅನುಭವಕ್ಕೆ ಬಂದಿದೆ. ಇದನ್ನು ವ್ಯಾಖ್ಯಾನಿಸಲು ಸಾಧ್ಯವಿಲ್ಲ.... ನನಗೆ ದೇವರು ಎಂದರೆ, ಸತ್ಯ ಮತ್ತು ಪ್ರೇಮ. ದೇವರು ಎಂದರೆ ನೈತಿಕತೆ, ನಿರ್ಭಯ. ದೇವರು ಬದುಕಿನ ಮೂಲ ಸೆಲೆ. ಇಷ್ಟಾಗಿಯೂ ಈ ಎಲ್ಲದರಿಂದ ಮೇಲೆ ಮತ್ತು ಈ ಎಲ್ಲದರ ಆಚೆಯದು.

ಬದುಕಿನ ಬಗ್ಗೆ ಗಾಂಧೀಜಿ ಹೊಂದಿದ್ದ ವೈಜ್ಞಾನಿಕ ದೃಷ್ಟಿಕೋನ ಬಾಬಾರನ್ನು ಪ್ರಭಾವಿಸಿತು. ಈ ಆದರ್ಶಗಳು ವೈಯಕ್ತಿಕ ತೆವಲುಗಳಲ್ಲ. ಇವು ಜೀವನದ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ನೆರವಾಗುವ ವೈಚಾರಿಕ ತಳಹದಿಗಳು. ಗಾಂಧಿ ಕಂಡುಕೊಂಡ ಬದುಕಿನ ವಿಧಾನಗಳು ಇದರ ಫಲಶ್ರುತಿ.

ಸೇವಾಗ್ರಾಮ ಮತ್ತು ಶಾಂತಿನಿಕೇತನದಲ್ಲಿ ಇಂತಹ ಮಹಾ ಚೇತನಗಳ ಜತೆ ಬದುಕುವುದು ನಿಜಕ್ಕೂ ಅಪೂರ್ವ ಅವಕಾಶ. ಈ ಇಬ್ಬರ ಸಂಗಡ ಆರೋಗ್ಯಪೂರ್ಣ ಸಂವಾದ ನಡೆಸುತ್ತಲೇ ಅವರ ಪ್ರೀತಿಗೆ ಪಾತ್ರರಾಗುವುದೂ ಗೌರವದ ವಿಷಯವೇ.

ಮಾರ್ಕ್ಸ್ ಮತ್ತು ಮಾವೋ ಸಿದ್ಧಾಂತಗಳು ಅವರನ್ನು ಪ್ರಭಾವಿಸಿದರೂ ರಷ್ಯಾ ಮತ್ತು ಚೀನಾದ ಮಾರ್ಕ್ಸಿಸ್ಟ್ ಕ್ರಾಂತಿಗಳು ಅವರನ್ನು ಪ್ರಭಾವಿಸಲಿಲ್ಲ. ಹೆಚ್ಚಿನ ಅಧಿಕಾರ ಪಡೆದು ಸಮುದಾಯದ ಸಬಲೀಕರಣವನ್ನು ಪ್ರತಿಪಾದಿಸುವ ಜಾನ್ ರಸ್ಕಿನ್ ಮತ್ತು ಪ್ಯೋಟೋರ್ ಅಲೆಕ್ಸೆವಿಚ್ ಕ್ರೊಪೋಟ್ಕಿನ್‌ರ ವಾದ ಇವರಿಗೆ ಹೆಚ್ಚು ಆಪ್ತವಾಯಿತು. ಮಹಾರಾಷ್ಟ್ರದ ಉಜ್ವಲ ಸಮಾಜ ಸುಧಾರಕ, ಸಾನೆ ಗುರೂಜಿ ತಮ್ಮ ಕಾವ್ಯಾತ್ಮಕ ಸರಳತೆಯಿಂದ ಬಾಬಾರನ್ನು ಚುಂಬಕದಂತೆ ಆಕರ್ಷಿಸಿದರು.

ಆದರೆ, ಅವರ ಬದುಕು ಸಾಂಪ್ರದಾಯಿಕ ಹಾದಿಯಲ್ಲಿ ಸಾಗಿದ್ದು ಸ್ವಲ್ಪ ಸಮಯ ಮಾತ್ರ. ವರೋರಾದಲ್ಲಿ ವಕೀಲಿಕೆ ಭರದಿಂದ ಸಾಗಿತ್ತು. ಅಷ್ಟೇ ಅಲ್ಲ; ಅದು ಕಿಸೆ ತುಂಬುವಂತೆಯೂ ಇತ್ತು. ಬಾಬಾ ವರೋರಾಕ್ಕೆ ಸಮೀಪವಿರುವ ಗೋರಾಜದಲ್ಲಿ ಇದ್ದ ೪೫೦ ಎಕರೆ ತೋಟದ ಉಸ್ತುವಾರಿ ಮತ್ತು ಅದರ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು. ರೈತರ ಸಹಕಾರಿ ಸಂಘ ಸ್ಥಾಪಿಸಲು ಅವರು ಪ್ರಯತ್ನಿಸಿದರು. ಅತಿ ಶೀಘ್ರದಲ್ಲೇ ವರೋರಾ ಪುರಸಭೆಯ ಉಪಾಧ್ಯಕ್ಷರಾಗಿಯೂ ಆಯ್ಕೆಯಾದರು. ಇಷ್ಟಿದ್ದೂ, ಶಿಕಾರಿ, ಟೆನಿಸ್, ಇಸ್ಪೀಟು ಮುಂತಾದವುಗಳಿಗೆ ಸಮಯ ಉಳಿಸಿಕೊಳ್ಳುತ್ತಿದ್ದರು. ಹಣ, ಸುಖ ಮತ್ತು ಘನತೆ ಬಾಬಾರನ್ನು ಸಂತೋಷದಲ್ಲಿ ಇಡಲಿಲ್ಲ. ಅದರ ಬದಲಿಗೆ ಅವರು ತಳಮಳಗೊಂಡರು. ಇದೇ ಜೀವನದ ಉದ್ದೇಶವಲ್ಲ ಎಂದು ಅವರಿಗೆ ಅನಿಸಿತು. ಇದರ ಜತೆಗೆ ಕುಟುಂಬದ ಒಳಗೇ ಕಂಡುಬಂದ ಗೊಂದಲಗಳು ಎದೆಗುಂದಿಸಿದವು. ತಮ್ಮ ಕುಟುಂಬದಂತಹವು ಹೊರ ಪ್ರಪಂಚದ ತೊಂದರೆಗಳನ್ನು ನಿವಾರಿಸುವಲ್ಲಿ ಅಡ್ಡಿಯಾಗುವ ವಿರುದ್ಧ ಅವರು ಬಂಡೆದ್ದರು.

'....ಎಂದೂ ನನ್ನ ತೋಟದಲ್ಲಿ ಒಂದೇ ಒಂದು ಗಿಡ ನೆಡದ ನಾನು, ಈ ತೋಟ ತೋಟದ ಬಂಗಲೆ, ಎಲ್ಲ ಐಷಾರಾಮವನ್ನು ಅನುಭವಿಸುತ್ತಿದ್ದೇನೆ. ಆದರೆ ಈ ಜಮೀನಿನಲ್ಲಿ ದುಡಿಯುವ ಜನ ಜೋಪಡಿಗಳಲ್ಲಿ ವಾಸಿಸುತ್ತಾರೆ. ನಾನು ಮೊಕದ್ದಮೆಯೊಂದರಲ್ಲಿ ೧೫ನಿಮಿಷ ವಾದಿಸಲು ೫೦ರೂ ವಸೂಲು ಮಾಡುತ್ತೇನೆ. ಆದರೆ ೧೨ ಘಂಟೆ ದುಡಿದರೆ ಈತನಿಗೆ ಅದರ ಮೂರನೆಯ ಒಂದು ಭಾಗದಷ್ಟೂ ಸಿಗದು. ನನ್ನನ್ನು ತಿನ್ನುತ್ತಿದ್ದ ಪ್ರಶ್ನೆ ಇದೇ....'

ಆದುದರಿಂದ ಬಾಬಾ ತನ್ನಿಂದಾದಷ್ಟು ಬದಲಾವಣೆ ತರಲು ಉದ್ಯುಕ್ತರಾದರು. ತನ್ನ ಭೂಮಿಯಲ್ಲಿ ಕೆಲಸ ಮಾಡುತ್ತಿದ್ದ ಹರಿಜನರು ನೀರು ತರಲು ಬಹಳ ದೂರ ನಡೆಯಬೇಕಾಗಿತ್ತು. ಹಳ್ಳಿಯ ಬಾವಿಯಿಂದ ಅವರು ನೀರು ಸೇದುವ ಹಾಗಿರಲಿಲ್ಲ. ಬಾಬಾ ಇದರ ವಿರುದ್ಧ ದನಿಯೆತ್ತಿದರು. ಸವರ್ಣೀಯರ ಪ್ರತಿಭಟನೆಯನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೇ ಆ ಬಾವಿಯನ್ನು ಎಲ್ಲರಿಗೂ ಮುಕ್ತವಾಗಿಸಿದರು. ೧೯೪೨ರ ಚಲೇಜಾವ್ ಚಳುವಳಿಯಲ್ಲಿ ಸತ್ಯಾಗ್ರಹಿಗಳ ಪರ ವಕಾಲತ್ತು ವಹಿಸಲು ವಕೀಲರನ್ನು ಪುಸಲಾಯಿಸಿದರು. ಅವರೂ ಜೈಲಿಗೆ ಹೋಗಬೇಕಾಯಿತು.

ಬಾಬಾ ಇನ್ನೂ ಅನೇಕ ಸವಾಲುಗಳನ್ನೆದುರಿಸಿದ್ದು ತಮ್ಮ ವೃತ್ತಿರಂಗದಲ್ಲಿ. ತಮ್ಮ ಅನೇಕ ಕಕ್ಷಿದಾರರು, ಅವರ ಪರವಾಗಿ ತಾವು ಸುಳ್ಳು ನುಡಿಯಬೇಕೆಂದು ಬಯಸುತ್ತಾರೆ ಎಂಬುದು ಅವರಿಗೆ ಅರ್ಥವಾಯಿತು.

'ಅತ್ಯಾಚಾರ ಎಸಗಿದವನನ್ನು ನಿರಪರಾಧಿ ಎಂದು ನಾನು ಸಾಬೀತುಪಡಿಸಬೇಕೆಂದು ಅವರು ನಿರೀಕ್ಷಿಸುತ್ತಿದ್ದರು. ಇದಕ್ಕಿಂತಲೂ ಹೀನಾಯವಾದುದೆಂದರೆ, ಅಪರಾಧಿ ಆರೋಪದಿಂದ ಮುಕ್ತಗೊಳಿಸಿದ ಬಳಿಕ ನಡೆಸಲಾಗುವ ಪಾರ್ಟಿಯಲ್ಲಿ ನಾನು ಪಾಲ್ಗೊಳ್ಳಬೇಕೆಂದು ಬಯಸುತ್ತಿದ್ದುದು....'

ಬಹುಬೇಗ ಅವರು ವಕೀಲಿಕೆಯಲ್ಲಿ ಆಸಕ್ತಿ ಕಳೆದುಕೊಂಡರು. 'ಬಡವರ ಹೃದಯ ಶ್ರೀಮಂತಿಕೆ'ಯನ್ನು, 'ಶ್ರೀಮಂತರ ಹೃದಯ ದಾರಿದ್ರ್ಯ'ವನ್ನು ಕುರಿತು ಹೆಚ್ಚು ಹೆಚ್ಚು ಮಾತಾಡತೊಡಗಿದರು. ಈ 'ಸಾಮಾನ್ಯ' ಮನುಷ್ಯನೇ ನಿಜಕ್ಕೂ 'ಅಸಾಧಾರಣ' ಎಂಬುದು ಅವರಿಗೆ ಸ್ಪಷ್ಟವಾಯಿತು. ಪ್ರಾಯಶಃ ಬಡವರು ಮತ್ತು ಶೋಷಿತರೊಂದಿಗೆ ಒಂದಾಗುವುದರಿಂದ ಮಾತ್ರ ಬದುಕಿನ ಪೂರ್ಣತೆಯನ್ನು ಅನುಭವಿಸಬಹುದು ಎನಿಸುತ್ತದೆ. ಆದರೆ ಇದರಲ್ಲಿ ತೊಡಗುವುದು ಹೇಗೆ? ತರುಣ ಆಮ್ಟೆಯೊಂದಿಗೆ ಸಂಬಂಧ ಕುದುರಿಸಲು ಸಿದ್ಧವಾಗಿರುವ ಕನ್ಯಾಪಿತೃಗಳು ತೋರಿಸುತ್ತಿರುವ ಯಾವುದೇ ಹೆಣ್ಣನ್ನು ಮದುವೆಯಾದರೂ ತಮ್ಮ ಕಲ್ಪನೆಯ 'ಶ್ರೀಮಂತ ಬದುಕು' ಕುಸಿಯುತ್ತದೆ ಎಂಬುದಂತೂ ಖಾತರಿ ಇತ್ತು.

ಆದುದರಿಂದ ತಾವು ಬ್ರಹ್ಮಚರ್ಯ ವ್ರತ ಕೈಗೊಂಡಿದ್ದೇನೆಂದು ಪುಕಾರು ಹುಟ್ಟಿಸಿ, ತಮ್ಮ ತಲೆಕೂದಲು, ಉಗುರುಗಳನ್ನು ಬೆಳೆಯಗೊಟ್ಟರು. ಇದರ ಪರಿಣಾಮ ಹೆಚ್ಚು ಮಾಡಲು ಧ್ಯಾನದ ನಟನೆ ಕೂಡಾ ಮಾಡಿದರು. ಮದುವೆಯ ಸಮಾರಂಭವೊಂದರಲ್ಲಿ ಇಂದೂ ಗುಳೇಶಾಸ್ತ್ರಿಯವರನ್ನು ಕಂಡಾಗ ಇದೆಲ್ಲವೂ ಬದಲಾಯಿತು. ತನ್ನ ಅಕ್ಕನ ಮದುವೆಯ ಸಮಾರಂಭದಲ್ಲಿ ಬಟ್ಟೆ ಒಗೆಯುತ್ತಿದ್ದ ಕೆಲಸದಾಕೆಗೆ ಸಹಾಯ ಮಾಡಲು ಇಂದೂ ಸದ್ದಿಲ್ಲದೇ ಜಾರಿದ್ದನ್ನು ಬಾಬಾ ಗಮನಿಸಿದರು.

ಮದುವೆ ಮತ್ತು ಶ್ರಮ ಆಶ್ರಮ

ತಾನು ಮದುವೆಗೆ ಯೋಗ್ಯ ವರನಲ್ಲ ಎಂದು ಪ್ರಯತ್ನಪೂರ್ವಕವಾಗಿ ಜಗತ್ತನ್ನು ನಂಬಿಸಿದ ಬಾಬಾ ತಾನು ಯೋಗ್ಯ ವರ ಎಂದು ಇಂದೂ ತಂದೆತಾಯಿಗಳಿಗೆ ಮನವರಿಕೆ ಮಾಡಿಕೊಡಲು ಹರಸಾಹಸ ಮಾಡಬೇಕಾಗಿ ಬಂತು. ಕೊನೆಗೆ ೧೯೪೬ರ ಡಿಸೆಂಬರ್‌ನಲ್ಲಿ ಬಾಬಾ ಮತ್ತು ಇಂದೂ ಮದುವೆಯಾದರು. ಅಂದು ಇವರಿಬ್ಬರೂ ಮತ್ತೊಂದು ಸಾಹಸಕ್ಕೆ ಕೈಹಾಕಿದರು. ಮದುವೆಯ ದಿನ ಬಾಬಾ ತಮ್ಮ ಆಸ್ತಿಯನ್ನು ತ್ಯಾಗ ಮಾಡಿದರು, ವಕೀಲಿಕೆಯನ್ನು ಬಿಟ್ಟುಕೊಟ್ಟರು. ಹೀಗೆ ಅವರು ತಮ್ಮ ಕುಟುಂಬದ ಬೆಂಬಲವನ್ನೂ ತೊರೆಯಬೇಕಾಯಿತು.

ಈ ದಂಪತಿಗಳು ವರೋರಾ ಸಮೀಪ ಶ್ರಮ-ಆಶ್ರಮ ಸ್ಥಾಪಿಸಿದರು. ಇದೇ ಹೊತ್ತಿನಲ್ಲಿ ಪಂಡರಾಪುರದ ವಿಠೋಬಾ ಮಂದಿರದಲ್ಲಿ ಹರಿಜನರಿಗೆ ಪ್ರವೇಶ ನೀಡಬೇಕೆಂದು ಆಗ್ರಹಿಸಿ ಸಾನೆ ಗುರೂಜಿ ಆಂದೋಲನದ ನೇತೃತ್ವ ವಹಿಸಿಕೊಂಡಿದ್ದರು. ಇದು ವಾರಕರಿ ಗುಂಪಿನ ಪ್ರಮುಖ ತೀರ್ಥಕ್ಷೇತ್ರ ಆಗಿದ್ದು, ಈ ಗುಂಪು ಜಾತೀಯತೆಯ ಅನೇಕ ಕಟ್ಟು ಕಟ್ಟಳೆಗಳನ್ನು ಮುರಿದಿದ್ದರೂ ದೇವಾಲಯದಲ್ಲಿ ಮೇಲುಜಾತಿಯವರಿಗೆ ಮಾತ್ರ ಪ್ರವೇಶ ನೀಡಲಾಗಿತ್ತು. ಮುರಳೀಧರ್ ಮತ್ತು ಇಂದೂ ಮದುವೆ ನಡೆದು ಕೆಲವೇ ತಿಂಗಳುಗಳ ಬಳಿಕ ೧೯೪೭ರಲ್ಲಿ ಪಂಡರಾಪುರದಲ್ಲಿ ಸಾನೇ ಗುರೂಜಿ ಆಮರಣಾಂತ ನಿರಶನ ಆರಂಭಿಸಿದರು. ಈ ಪ್ರಯತ್ನ ಯಶಸ್ವಿಯಾಗಿ, ಹರಿಜನರಿಗೆ ದೇವಾಲಯ ಪ್ರವೇಶಕ್ಕೆ ಅವಕಾಶ ದೊರೆಯಿತು.

ಸಾನೇ ಗುರೂಜಿಯವರ ನಿರಶನ ಬಾಬಾ ಜೀವನದಲ್ಲಿ ಅನುಕಂಪ ಎಂಬ ಶಬ್ದಕ್ಕೆ ಬೇರೆಯೇ ಅರ್ಥ ತಂದಿತು. ಅವರ ಉಳಿದ ಬದುಕಿನುದ್ದಕ್ಕೂ ಸಾನೇ ಗುರೂಜಿಯವರ ಈ ಪದ್ಯ ದಾರಿದೀಪವಾಯಿತು.

ನನ್ನ ಕಣ್ಣೀರಿನ ಮೂಲಕ ನನ್ನ ಆದರ್ಶ ತಲುಪುತ್ತೇನೆ
ಉಕ್ಕನ್ನೂ ಕಲ್ಲನ್ನೂ ಜಜ್ಜುವ ಶಕ್ತಿ ಕಣ್ಣೀರಿಗಿದೆ
ನನ್ನ ಕಣ್ಣೀರು ನನ್ನ ದೇವರು
ನನ್ನ ಕಣ್ಣೀರಿನಿಂದ ನನ್ನನ್ನು ದೂರ ಮಾಡಬೇಡಿ
ನನ್ನ ಕಣ್ಣು ರೆಪ್ಪೆಗಳು ಒಣಗದಿರಲಿ

ಈ ಭಾವನೆಗಳೊಂದಿಗೆ ಇಂದೂ ಮತ್ತು ಬಾಬಾ ತಮ್ಮ ಶ್ರಮ ಆಶ್ರಮ ಸ್ಥಾಪಿಸಿದ ಹಿನ್ನೆಲೆಯಲ್ಲಿಯೇ ಕೃಷಿಯಲ್ಲಿ ಪಳಗಿದ್ದ ಬ್ರಾಹ್ಮಣ ಕುಟುಂಬವೊಂದು ಅಲ್ಲಿಗೆ ಬಂತು. ಇದರ ಹಿಂದೆಯೇ ಒಬ್ಬ ಚಮ್ಮಾರ, ಕೊಡೆ ರಿಪೇರಿಯವ ಮತ್ತು ಕೆಲವು ಹರಿಜನ ಕುಟುಂಬಗಳೂ ಬಂದು ನೆಲೆಸಿದವು. ಇವರೆಲ್ಲರೂ ಸೇರಿ ಕೃಷಿಯಲ್ಲಿ ತೊಡಗಿದರು. ಎಲ್ಲರಿಗೂ ಸೇರಿ ಅಲ್ಲಿದ್ದದ್ದು ಒಂದೇ ಅಡುಗೆ ಕೋಣೆ.

ಈಗ 'ಸಾಧನಾ' ಎಂದು ಕರೆಯಲ್ಪಡುವ ಇಂದೂ ಜಾತಿಭೇದವನ್ನು ಕಟ್ಟುನಿಟ್ಟಾಗಿ ಆಚರಿಸುತ್ತಿದ್ದ ಕುಟುಂಬದಿಂದ ಬಂದಾಕೆ. ಇದರಿಂದ ಪಾರಾಗಲು ಆಕೆ ಬಹು ಕಷ್ಟ ಪಡಬೇಕಾಯಿತು. ಈಜು ಕಲಿಯಲು ಸಮುದ್ರಕ್ಕೇ ಜಿಗಿದಂತಾಗಿತ್ತು ಆಕೆಯ ಪರಿಸ್ಥಿತಿ. ಈ ಹಾದಿಯನ್ನು ಆಯ್ಕೆ ಮಾಡಿಕೊಂಡದ್ದಕ್ಕೆ ಆಕೆ ಬಹುದೊಡ್ಡ ಬೆಲೆಯನ್ನೇ ತೆರಬೇಕಾಗಿ ಬಂತು. ಕೆಳಜಾತಿಯ ಜನರ ಜತೆ ಬದುಕುತ್ತಿದ್ದ ಕಾರಣ ಅವರ ತವರುಮನೆಯನ್ನು ಪ್ರವೇಶಿಸುವಂತಿರಲಿಲ್ಲ. ಬಾಬಾ ಮತ್ತು ಅವರ ಪತ್ನಿ ತಮ್ಮನ್ನು ತಾವು ಬಹಿಷ್ಕೃತರು ಎಂದೇ ಭಾವಿಸಿದರು. ಆಕೆಯ ಮೊದಲಿನ ಹೆರಿಗೆ ಸಮಯದಲ್ಲಿ ಆಕೆ ತನ್ನ ತಾಯಿಯ ನೆರವು ನಿರೀಕ್ಷಿಸುವಂತೆ ಇರಲಿಲ್ಲ. ಅಥವಾ ತಾಯಿಯೇ ಇವರಿರುವಲ್ಲಿಗೆ ಬಂದು ಈ ಕೆಳಜಾತಿಯವರ ಸಂಗಡ ಬದುಕುವುದೂ ದುಸ್ತರವಾಗಿತ್ತು.

ಈ ನಡುವೆ ಬೇರೆ ಬೇರೆ ಸಂಘಟನೆಗಳ ಜತೆ ಬಾಬಾ ಒಡನಾಟ ಹೆಚ್ಚಾಯಿತು. ಆಗ ಅವರು ವರೋರಾ ಪುರಸಭೆಯ ಉಪಾಧ್ಯಕ್ಷರು ಮತ್ತು ಜಲಗಾರ ಅಥವಾ ಜಾಡಮಾಲಿಗಳ ಸಂಘದ ಅಧ್ಯಕ್ಷರೂ ಆಗಿದ್ದರು. ಪೂರಾ ಒಂಬತ್ತು ತಿಂಗಳು ತಲೆಯ ಮೇಲೆ ಮಲದ ಕುಕ್ಕೆಯನ್ನು ಹೊತ್ತುಕೊಳ್ಳುತ್ತಾ ಜಲಗಾರರ ಬದುಕನ್ನು ಅವರು ಬದುಕಿದರು.

ಮಹತ್ವದ ತಿರುವು

ಬಾಬಾ ಮನೆಗೆ ಮರಳುತ್ತಿದ್ದ ಒಂದು ಸಂಜೆ. ಜೋರಾಗಿ ಮಳೆ ಸುರಿಯುತ್ತಿತ್ತು. ಬಾಬಾರ ಬದುಕಿಗೆ ಮಹತ್ವದ ತಿರುವು ದೊರೆತದ್ದು ಇಲ್ಲೇ. ಒಂದು ಮನುಷ್ಯಾಕೃತಿ ರಸ್ತೆಯ

ಬದಿಯಲ್ಲಿ ಕವುಚಿಕೊಂಡು ಬಿದ್ದಿತ್ತು. ಮೊದಲಿಗೆ ಅದು ಒಂದು ಚಿಂದಿಯ ಗಂಟಿನಂತೆ ಕಾಣುತ್ತಿತ್ತು. ಅನಂತರ ಅದು ಚಲಿಸುತ್ತಿರುವಂತೆ ಭಾಸವಾಯಿತು. ಬಾಬಾ ಹತ್ತಿರ ಬಂದು ಬಗ್ಗಿ ನೋಡಿದರು. ಮತ್ತು ತಕ್ಷಣವೇ ಬೆಚ್ಚಿ ಹಿಂದೆ ಸರಿದರು. ಅವರ ಮುಂದೆ ಇದ್ದದ್ದು ಅಂತಿಮ ಹಂತದಲ್ಲಿದ್ದ ಕುಷ್ಠರೋಗಿ. ಸಾವಿನಂಚಿನಲ್ಲಿದ್ದ ಈ ಮನುಷ್ಯನಿಗೆ ಕೈಬೆರಳುಗಳಿರಲಿಲ್ಲ. ಆತನ ಬೆತ್ತಲು ದೇಹದ ಮೇಲೆ ಹುಳುಗಳು ಓಡಾಡುತ್ತಿದ್ದವು. ಈ ಭಯಂಕರ ದೃಶ್ಯ ನೋಡಿ, ಸೋಂಕಿನ ಭಯದಿಂದ ಬಾಬಾ ಮನೆಯ ಕಡೆ ಓಡಿದರು.

ಆದರೆ ಅವರನ್ನು ಆವರಿಸಿದ್ದ ಜುಗುಪ್ಸೆಯಿಂದ ಪಾರಾಗಲು ಸಾಧ್ಯವಾಗಲೇ ಇಲ್ಲ. ಆ ಒಂಟಿ, ತ್ಯಕ್ತ ವ್ಯಕ್ತಿಯನ್ನು ಮಳೆಯಲ್ಲಿ ಹಾಗೇ ಬಿಟ್ಟು ಬರಲು ಸಾಧ್ಯವಾದದ್ದಾದರೂ ಹೇಗೆ? ಅವರಿಗೆ ತಡೆಯಲಾಗಲಿಲ್ಲ. ಆ ಮನುಷ್ಯನಿಗೆ ಊಟ ನೀಡಲು ಮತ್ತೆ ಅವನಿದ್ದಲ್ಲಿಗೆ ತೆರಳಿದರು. ಮಳೆಯಿಂದ ಆತನನ್ನು ಕಾಪಾಡಲು ಬಿದಿರಿನ ಗುಡಿಸಲು ಹಾಕಿದರು. ತುಳಸೀರಾಮ ಎಂಬ ಆ ಮನುಷ್ಯ ಬಾಬಾರ ಆರೈಕೆಯಲ್ಲಿರುವಾಗಲೇ ಮರಣ ಹೊಂದಿದ. ಅಷ್ಟೇ ಅಲ್ಲ; ಆತ ತರುಣ ಬಾಬಾರ ಬದುಕನ್ನು ಪೂರ್ಣ ಬದಲಿಸಿದ.

ಬಾಬಾ ತಮ್ಮನ್ನು ತಾವು ಧೈರ್ಯಶಾಲಿ ಎಂದು ಭಾವಿಸಿಕೊಂಡಿದ್ದರು. ಆದರೆ ತುಳಸೀರಾಮನೊಂದಿಗಿನ ಈ ಭೇಟಿ ಅವರ ನಂಬುಗೆಯನ್ನು ನುಚ್ಚುನೂರಾಗಿಸಿತು. ತುಳಸೀರಾಮನ ಸ್ಥಿತಿಯೇ ಅವರನ್ನು ಭಯಭೀತರನ್ನಾಗಿಸಿತು. ಅವರು ಆತನಿಗೆ ಶುಶ್ರೂಷೆ ಮಾಡುತ್ತಿರುವಾಗಲೂ ಈ ಭಯ ಅವರಿಂದ ಹೋಗಲಿಲ್ಲ.

'ನನ್ನನ್ನು ಈವರೆಗೆ ಯಾವುದೂ ಇಷ್ಟು ಹೆದರುವಂತೆ ಮಾಡಿರಲಿಲ್ಲ. ಭಾರತೀಯ ಮಹಿಳೆಯೊಬ್ಬಳ ಗೌರವ ಕಾಯಲು ನಾನು ಬ್ರಿಟಿಷರೊಂದಿಗೆ ಹೋರಾಡಿದವನು. ಗಾಂಧೀಜಿ ನನ್ನನ್ನು 'ಅಭಯ ಸಾಧಕ' ಎಂದು ಕರೆದದ್ದೂ ಉಂಟು. ವರೋರಾದ ಜಲಗಾರರು ಮೋರಿಯನ್ನು ಸ್ವಚ್ಛಗೊಳಿಸುವ ಸವಾಲು ಒಡ್ಡಿದಾಗ ಅದನ್ನು ನಿಭಾಯಿಸಿದವನು ನಾನು. ಗೂಂಡಾಗಳು ಮತ್ತು ಬ್ರಿಟಿಷ್ ದರೋಡೆಕೋರರೊಂದಿಗೆ ಯುದ್ಧ ಮಾಡಿದ ಮನುಷ್ಯ. ಬೆರಳುಗಳಿಲ್ಲದ, ಬಟ್ಟೆಯಿಲ್ಲದ, ಮೈಮೇಲೆ ನೊಣ ಮುತ್ತಿದ ಜೀವಚ್ಛವವನ್ನು ಕಂಡಾಗ ನಾನು ನಡುಗಿ ಹೋದೆ....'

ಭಯವಿದ್ದಲ್ಲಿ ಪ್ರೀತಿ ಇರಲಾರದು. ಪ್ರೀತಿ ಇಲ್ಲದ ಕಡೆ ದೇವರೂ ಇಲ್ಲ ಎಂಬುದು ಬಾಬಾಗೆ ಸ್ಪಷ್ಟವಾಗಿತ್ತು.

'ಹಾಗಾದರೆ ನಾನು ಮಾಡಬಹುದಾದದ್ದು ಏನು?' ಈ ಯೋಚನೆಯಲ್ಲೇ ಬಾಬಾ ಮುಂದಿನ ಆರು ತಿಂಗಳು ಕಳೆದರು. ಅದಕ್ಕೆ ಇದ್ದುದು ಒಂದೇ ಪರಿಹಾರ. ಕುಷ್ಠರೋಗಿಗಳೊಂದಿಗೆ ಬದುಕಬೇಕು ಮತ್ತು ಅವರೊಂದಿಗೆ ಕೆಲಸ ಮಾಡಬೇಕು.

'.... ಈ ಕಾರಣಕ್ಕಾಗೇ ನಾನು ಕುಷ್ಠರೋಗಿಗಳ ಸೇವೆಯಲ್ಲಿ ತೊಡಗಿದೆ. ಇದು ನನ್ನ ಭಯವನ್ನು ನೀಗಿಕೊಳ್ಳುವ ಸಲುವಾಗೇ ಹೊರತು ಬೇರೆ ಯಾರಿಗೋ ಸಹಾಯ ಮಾಡಲಿಕ್ಕಾಗಿ

ಅಲ್ಲ. ಅದರಿಂದ ಬೇರೆಯವರಿಗೆ ಸಹಾಯವಾಯಿತು. ಅದು ಬೇರೆಯದೇ ವಿಷಯ. ಆದರೆ, ಇದು ನಾನು ಭಯಮುಕ್ತನಾಗಲು ಹಮ್ಮಿಕೊಂಡ ಕೆಲಸ ಎಂಬುದು ವಾಸ್ತವ.... '

ಆದರೆ, ಸಾಧನಾ ಅನಿಸಿಕೆ ಏನಿತ್ತು? ಈ ಎಲ್ಲ ಸಾಧ್ಯತೆಗಳನ್ನು ದಂಪತಿಗಳು ಹಲವಾರು ಬಾರಿ ಚರ್ಚಿಸಿದ್ದರು. ಅಂತಿಮವಾಗಿ ಇದು ಬಾಬಾ ನಿರ್ಣಯವೇ ಆಯಿತು. 'ನೀವು ನಿಮ್ಮ ಹೃದಯದ ಆಣತಿಯನ್ನು ಪಾಲಿಸಿ. ನಾನು ನಿಮ್ಮನ್ನು ಅನುಸರಿಸುವ ಮೂಲಕ ಆನಂದ ಪಡೆಯುತ್ತೇನೆ'.

ಆ ಕಾಲದಲ್ಲಿ ಆನಂದವನದಲ್ಲಿ ಸ್ತ್ರೀ ಸ್ವಾತಂತ್ರ್ಯದ ಪರಿಕಲ್ಪನೆ ಇದ್ದಿದ್ದರೆ ಇವೆಲ್ಲವೂ ಆಗುತ್ತಿರಲಿಲ್ಲವೇನೋ ಎಂದು ಅನೇಕ ದಶಕಗಳ ನಂತರ ಆಕೆಯ ಸನ್ಮಾನ ಸಮಾರಂಭದಲ್ಲಿ ನೆರೆದಿದ್ದ ಬೃಹತ್ ಸಭೆಯನ್ನುದ್ದೇಶಿಸಿ ಇಂದೂ ಹೇಳಿದರು.

ಹೀಗೆ ಬಾಬಾ ಮತ್ತು ಸಾಧನಾ ಕ್ರಮಿಸಿದ ಹಾದಿ ಈಗ ಇತಿಹಾಸ. ಬಾಬಾ ಕುಷ್ಠರೋಗ ಕುರಿತಂತೆ ತೀವ್ರವಾಗಿ ಅಧ್ಯಯನ ಮಾಡತೊಡಗಿದರು. ವರೋರಾದ ಕುಷ್ಠ ಚಿಕಿತ್ಸಾಲಯದಲ್ಲಿ ಸೇವೆ ಆರಂಭಿಸಿದರು. ೧೯೪೯ರಲ್ಲಿ ಅವರು ಕಲ್ಕತ್ತೆಯ 'Calcutta Tropical School of Medicine'ಗೆ ಹೋಗಿ ಹೆಚ್ಚುಹೆಚ್ಚು ತಿಳಿಯತೊಡಗಿದರು. ಅವರು ಮನೆಗೆ ಮರಳುವ ವೇಳೆಗೆ DDS (diamino diphenyl suphone) ಮಾತ್ರೆಯನ್ನು ಹಿಡಿದು ಕುಷ್ಠರೋಗ ಗುಣಪಡಿಸುವ ಸೇವಾ ಕೈಂಕರ್ಯದಲ್ಲಿ ತೊಡಗಿದರು.

ಬಾಬಾ, ಈ ಅದ್ಭುತ ಔಷಧವನ್ನು ಕೈಯಲ್ಲಿ ಹಿಡಿದು ವರೋರಾ ಮತ್ತು ಸುತ್ತಲಿನ ೬೦ ಗ್ರಾಮಗಳಲ್ಲಿ ಕುಷ್ಠ ರೋಗಿಗಳ ಚಿಕಿತ್ಸೆ ಮಾಡತೊಡಗಿದರು. ಇದರ ಹಿಂದೆಯೇ ಸುಮಾರು ೫೦ಕಿ.ಮೀ ಸುತ್ತಳತೆಯಲ್ಲಿ ೧೧ ಸಾಪ್ತಾಹಿಕ ಕ್ಲಿನಿಕ್‌ಗಳು ಸ್ಥಾಪನೆಗೊಂಡು ಸುಮಾರು ೪೦೦೦ಮಂದಿ ಚಿಕಿತ್ಸೆ ಪಡೆಯತೊಡಗಿದರು. ರೋಗ ಗುಣಪಡಿಸಿದ ಮಾತ್ರಕ್ಕೆ ರೋಗಿಯನ್ನು ಮೊದಲಿನಂತೆಯೇ ಮಾಡಲಾಗುತ್ತಿದ್ದಿಲ್ಲ. ಮನುಷ್ಯ ಬೆರಳುಗಳಿಲ್ಲದೇ ಬದುಕುವುದು ಸಾಧ್ಯ; ಆದರೆ ಆತ್ಮಗೌರವಗಳಿಲ್ಲದೆ ಬದುಕುವುದು ಅಸಾಧ್ಯ. ದಾನ ಪಡೆಯುವುದು ಆತ್ಮ ಗೌರವಕ್ಕೆ ಧಕ್ಕೆಯನ್ನುಂಟುಮಾಡುತ್ತದೆ.

ಆನಂದವನ

ಕುಷ್ಠ ರೋಗಿಗಳು ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುವಂತೆ ಅವರಿಗೆ ನೆರವಾಗಲು ೧೯೫೧ರಲ್ಲಿ ವರೋರಾ ಮಹಾರೋಗಿ ಸೇವಾ ಸಮಿತಿಯನ್ನು ಪ್ರಾರಂಭಿಸಲಾಯಿತು. ಸರ್ಕಾರ ೫೦ ಎಕರೆ ಭೂಮಿಯನ್ನು ಭೋಗ್ಯದ ಮೇಲೆ ನೀಡಿತು. ಅಲ್ಲಿ ಕುಷ್ಠ ರೋಗದ ಆಸ್ಪತ್ರೆ ಮತ್ತು ತೋಟವನ್ನು ನಿರ್ಮಿಸಲಾಯಿತು. ಇದು ಕಲ್ಲುಕಂಟಿಗಳಿಂದ ಕೂಡಿದ್ದು ಹಾವು, ಚೇಳುಗಳ ಆವಾಸವಾಗಿತ್ತು. ಅತಿ ಸಮೀಪದ ಬಾವಿ ಇದ್ದದ್ದೂ ೨ ಕಿ.ಮೀ ದೂರದಲ್ಲಿ. ಬಾಬಾಗೆ ತನ್ನ ಹೊಸ ಮನೆಯನ್ನು ದೂರದಿಂದ ನೋಡಿದಾಗ ಹೀಗನಿಸಿತು:

'ನನ್ನ ಬದುಕಿನ ಹೊಸ ಹಾದಿಯನ್ನು ನಿಟ್ಟಿಸಿದಾಗ.... ಇವೆಲ್ಲವೂ ಸಾಂಕೇತಿಕವಾಗಿಯೇ ಕಾಣಿಸಿದವು. ಬಂಡೆ, ಗಿಡ, ಪೊದರು, ಬಳ್ಳಿ ಎಲ್ಲವೂ... ಯಾರಿಗೂ ಬೇಡದ ಭೂಮಿ. ಇದು ತಿರಸ್ಕೃತ ಜನಾಂಗಕ್ಕೆ. ಇನ್ನು ಮುಂದೆ ನಮ್ಮ ಬದುಕು ಇದು. ನಮ್ಮ ಕಾರ್ಯಕ್ಷೇತ್ರ ಇದೇ ಎಂದು ನನಗನಿಸಿತು.

'ಈ ಬರಡು ನೆಲೆಯನ್ನು ಹಸಿರಾಗಿಸಲು ನೀವು ಸಿದ್ಧರೇ?' ಎಂದು ಬಾಬಾ ರೋಗಿಗಳನ್ನು ಕೇಳಿದರು. ಆದರೆ, ಬಯಕೆಯಷ್ಟೇ ಸಾಕೆ? ದೈಹಿಕವಾಗಿ ತೀರಾ ಸಮರ್ಥರಾಗುವವರೆಗೂ ಇದು ಕಷ್ಟ. ವಿಕಲಾಂಗರು ಹೇಗೆ ಈ ಅಸಾಧ್ಯ ಕೆಲಸವನ್ನು ಸಾಧ್ಯವಾಗಿಸಬಲ್ಲರು? ಆದರೆ ಒಬ್ಬರೂ ಬಾಬಾಗೆ 'ಇಲ್ಲ' ಎಂದು ಹೇಳಲಿಲ್ಲ. ಒಡನೆಯೇ ಅವರು ಗಿಡ, ಪೊದರು, ಕೊಂಬೆಗಳನ್ನು ಕಿತ್ತು ಸ್ವಚ್ಛಗೊಳಿಸತೊಡಗಿದರು. ಆನಂದವೇ ತುಂಬಿದ ಕಾಡನ್ನು ನಿರ್ಮಿಸತೊಡಗಿದರು'.

ಎಲ್ಲಕ್ಕಿಂತ ಮೊದಲು ಬಿದಿರಿನ ಕಂಬಗಳ ಮೇಲೆ ತೆಂಗಿನ ಗರಿಗಳನ್ನು ಹೊದಿಸಿದ ಎರಡು ಗುಡಿಸಲು ನಿರ್ಮಿಸಿದರು. ಬಾವಿ ತೋಡಲು ಎರಡು ತಿಂಗಳು ಹಿಡಿಯಿತು. ಆಹಾರದ ಅಭಾವವಿತ್ತು; ಹಣದ ಅಭಾವವೂ ಇತ್ತು. ಮೂರು ವರ್ಷಗಳಲ್ಲಿ ಆಮ್ಟೆ ಕುಟುಂಬ ಮತ್ತು ೬೦ ರೋಗಿಗಳ ಸಮುದಾಯ ಆರು ಬಾವಿಗಳನ್ನು ತೋಡಿತು. ಈ ಕುಟುಂಬಗಳಿಗೆ ಸಾಕಾಗುವಷ್ಟು ಕಾಳು ಕಡಿ, ತರಕಾರಿ ಬೆಳೆದುಕೊಳ್ಳುವಷ್ಟು ಭೂಮಿಯನ್ನು ಸಿದ್ಧಪಡಿಸಿದ್ದರು. ಆದರೆ, ಇವರು ಬೆಳೆದ ಬೆಳೆಗೆ ಮಾರುಕಟ್ಟೆ ಸಿಗುತ್ತಿರಲಿಲ್ಲ. ಈ ಕುಷ್ಠರೋಗಿಗಳು ಬೆಳೆದ ಆಹಾರ ಕಲುಷಿತವಾಗಿರುತ್ತದೆ ಎಂಬ ತಪ್ಪು ಕಲ್ಪನೆ ಇದಕ್ಕೆ ಕಾರಣವಾಗಿತ್ತು.

ಈ ಧೋರಣೆಯನ್ನು ಹೋಗಲಾಡಿಸಲು ಸರ್ವಿಸ್ ಸಿವಿಲ್ ಇಂಟರ್‌ನ್ಯಾಷನಲ್‌ನ ೫೦ ಕಾರ್ಯಕರ್ತರ ಪಡೆ ಬೇಕಾಯಿತು. ಮೂವತ್ತಾರು ದೇಶಗಳಿಗೆ ಸೇರಿದ ಈ ಯುವಕರು ಆನಂದವನದ ಕಟ್ಟಡ, ಚಿಕಿತ್ಸಾಲಯ ಮತ್ತು ಆಸ್ಪತ್ರೆ ವಾರ್ಡುಗಳಲ್ಲಿ ೩ ತಿಂಗಳು ಕಳೆದರು. ವರೋರಾ ಸಮುದಾಯದಲ್ಲಿ ಈ ಬಗ್ಗೆ ಇದ್ದ ಅಡೆತಡೆಗಳು, ತಪ್ಪುಕಲ್ಪನೆಗಳು ಇಲ್ಲವಾದವು. ಈ ವಿದೇಶಿ ತರುಣರು ಕುಷ್ಠ ರೋಗಿಗಳ ಜತೆ ಕಷ್ಟಪಡುವುದನ್ನು ನೋಡುತ್ತಿದ್ದ ಸ್ಥಳೀಯರಿಗೂ ಮನಸ್ಸು ಕರಗಿ, ಈ ಕೆಲಸಕ್ಕೆ ಕೊಡುಗೆ ನೀಡಲು, ಸ್ವಯಂ ಸೇವಕರಿಗೆ ಆಹಾರ ನೀಡಲು ಮುಂದಾದರು. ವರೋರಾದ ನಿವಾಸಿಗಳು ಆನಂದವನದೊಳಗೆ ಬರತೊಡಗಿದಂತೆ ಸ್ವಚ್ಛವಾಗಿ ಹೊಳೆಯುವ ಪರಿಸರ ಕಂಡೊಡನೆ ಈ ಕಲುಷಿತಗೊಳ್ಳುವ ಭಯವೂ ದೂರವಾಯಿತು. ಇವೆಲ್ಲದರ ಪರಿಣಾಮವಾಗಿ ಆನಂದವನ ಹತ್ತಿರ ಮತ್ತು ದೂರದ ಪ್ರದೇಶಗಳಿಂದ ಸಂದರ್ಶಕರನ್ನು ಆಕರ್ಷಿಸುವ, ಬಿಡುವೇ ಇಲ್ಲದ ಸ್ಥಳವಾಯಿತು.

ಕ್ರಮೇಣ ಆನಂದವನ ವಿಸ್ತಾರವಾಯಿತು. ಅನುಕೂಲಗಳೂ ಹೆಚ್ಚಾದವು. ಕುಷ್ಠರೋಗಿಗಳು ಆಸ್ಪತ್ರೆಯನ್ನು ಬಿಡಲು ಸಮರ್ಥವಾದರೆ ಅವರನ್ನು 'ರೋಗಿ' ಎಂದು ಕರೆಯುತ್ತಿರಲಿಲ್ಲ. ಅವರು ಸಮುದಾಯದ ಒಬ್ಬ ಸಕ್ರಿಯ ಸದಸ್ಯರಾಗುತ್ತಿದ್ದರು. ಇವರು ಹೊಲದಲ್ಲಿಯೋ, ಕಾರ್ಯಾಗಾರದಲ್ಲಿಯೋ ದುಡಿಯುತ್ತಿದ್ದರು. ಅಲ್ಲಿ ಅನೇಕ ರೀತಿಯ ಪದಾರ್ಥಗಳನ್ನು

ತಯಾರಿಸಲಾಗುತ್ತಿತ್ತು. ಇದು ಆನಂದವನವನ್ನು ಸ್ವಪರಿಪೂರ್ಣ ಸ್ವಾವಲಂಬಿ ಹಳ್ಳಿಯನ್ನಾಗಿಸಿತು. ಇದರ ಪರಿಣಾಮವಾಗಿ ಉಪ್ಪು, ಸಕ್ಕರೆ, ಪೆಟ್ರೋಲಿನಂತಹ ಪದಾರ್ಥಗಳನ್ನು ಮಾತ್ರ ಹೊರಗಿನಿಂದ ಖರೀದಿಸಲಾಗುತ್ತಿತ್ತು. ಉಳಿದೆಲ್ಲವನ್ನೂ ಸ್ಥಳೀಯವಾಗಿಯೇ ತಯಾರು ಮಾಡಲಾಗುತ್ತಿತ್ತು. ಈ ಆನಂದವನದಲ್ಲಿ ರೋಗಿಗಳಾಗಿದ್ದವರಲ್ಲಿ ಬಹಳ ಮಂದಿ ವೃತ್ತಿ ಕೌಶಲವನ್ನು ಕಲಿತು ಹೊರಗಿನ ಪ್ರಪಂಚಕ್ಕೆ ಹೋಗುತ್ತಿದ್ದರು. ಅವರು ಅಲ್ಲಿ ಸ್ವಾವಲಂಬಿಗಳಾಗಿ ತಮ್ಮ ಬದುಕನ್ನು ರೂಪಿಸಿಕೊಳ್ಳುತ್ತಿದ್ದರು.

೧೯೬೨ರಲ್ಲಿ ಚೀನಾ ಭಾರತವನ್ನು ಆಕ್ರಮಿಸಿತು. ಆನಂದವನದ ಸಮುದಾಯ ರಾಷ್ಟ್ರೀಯ ರಕ್ಷಣಾ ನಿಧಿ ಸಂಗ್ರಹಕ್ಕಾಗಿ ಒಂದು ಪ್ರದರ್ಶನ ನೀಡಿ ೨೦೦೦ರೂ. ಸಂಗ್ರಹಿಸಿಕೊಟ್ಟಿತು. ಕೆಲವು ವರ್ಷಗಳ ನಂತರ ಬೇಸಾಯದಿಂದ ವರಮಾನ ಹೆಚ್ಚಿಗೆ ಬಂದು, ಈ ಹೆಚ್ಚುವರಿ ಹಣದಲ್ಲಿ ವರೋರಾದಲ್ಲಿ ಕಾಲೇಜೊಂದನ್ನು ಪ್ರಾರಂಭಿಸಿದರು. ಅಂತಿಮವಾಗಿ ಆನಂದವನದಲ್ಲೊಂದು ಕೃಷಿ ಕಾಲೇಜು, ಅಂಧರಿಗೆ ಒಂದು ಪ್ರಾಥಮಿಕ ಶಾಲೆ, ಕಿವುಡ-ಮೂಗರಿಗೆ ಒಂದು ಶಾಲೆ ಹಾಗೂ ಅನಾಥಾಲಯವನ್ನೂ ಆರಂಭಿಸಿದರು. ಈ ಬಹು ಆಯಾಮದ ಪ್ರಯತ್ನಗಳಿಂದಾಗಿ ಆನಂದವನಕ್ಕೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಪ್ರಶಸ್ತಿಗಳು ಸಿಕ್ಕವು. ಇದರಿಂದ ಕೀರ್ತಿ ಮತ್ತು ಹಣ ಎರಡೂ ಹರಿದು ಬಂತು.

ಶವದ ಪೆಟ್ಟಿಗೆಯೇ ಗರ್ಭಾಶಯವಾಯಿತು!

ಬಾಬಾ ಚಲನರಹಿತವಾಗಿ ಸೂರನ್ನೇ ದಿಟ್ಟಿಸುತ್ತಾ ಮಲಗಿದ್ದರು. ತಾವು ಶವದ ಪೆಟ್ಟಿಗೆಯೊಳಗೆ ಸಿಲುಕಿಕೊಂಡಂತೆ ಅವರಿಗೆ ಅನಿಸುತ್ತಿತ್ತು. ಹಾಸಿಗೆಯ ಒಂದು ಕೊನೆಯಲ್ಲಿ ಅವರ ಬೆನ್ನುಮೂಳೆಯನ್ನು ನೆಟ್ಟಗಿಡಲು ದಿನದ ೧೨ ಗಂಟೆ ಬಳಸುವ ಪಟ್ಟಿಯಂತಹ ಉಪಕರಣ ಇತ್ತು. ತೀವ್ರವಾಗಿ ಚಟುವಟಿಕೆಯಲ್ಲಿ ತೊಡಗಿದ್ದ ಮನುಷ್ಯನಿಗೆ, ತನ್ನ ಚೈತನ್ಯಕ್ಕೆ ಮಿತಿಯೇ ಇಲ್ಲ ಅಂದುಕೊಂಡಿದ್ದ ಮನುಷ್ಯನಿಗೆ ಉಳಿದ ಬದುಕನ್ನು ಹಾಸಿಗೆಯಲ್ಲಿ ಮಲಗಿಯೇ ಕಳೆಯಬೇಕಾಗುತ್ತದೆ ಎಂದು ವೈದ್ಯರು ಹೇಳಬೇಕಾಗಿ ಬಂತು. ಮುರಳೀಧರ್ ದೇವಿದಾಸ್ ಆವ್ಟೆಗೆ ಕೇವಲ ಐವತ್ತು ವರ್ಷ ಆಗಿತ್ತಷ್ಟೆ. ಅವರ ತೀವ್ರವಾದ ಬೆನ್ನುನೋವಿಗೆ ಸರ್ವಿಕಲ್ ಸ್ಪಾಂಡಿಲೋಸಿಸ್ ಕಾರಣ ಎಂದು ವೈದ್ಯರು ಪತ್ತೆ ಹಚ್ಚಿದರು. ಇದು ಬೆನ್ನುಮೂಳೆಯ ತೊಂದರೆಗೆ ಕಾರಣವಾಗಿತ್ತು.

ಆದರೆ ತನ್ನ ಭಯವನ್ನೇ ಕಳೆದುಕೊಳ್ಳಲು ಉಪಕ್ರಮಿಸಿದ ಈ ವ್ಯಕ್ತಿ ಅಷ್ಟು ಸುಲಭಕ್ಕೆ ಸೋಲೊಪ್ಪಿಕೊಳ್ಳುವವರಲ್ಲ. ಅವರ ದೇಹ ನಿಷ್ಕ್ರಿಯೆಯ ಸೆರೆಯಲ್ಲಿದ್ದಾಗ ಮೆದುಳು ಹೊಸ ಸಾಧ್ಯತೆಗಳತ್ತ ಹಾರತೊಡಗಿತು. ಅವರ ಕೆಲಸ ಒಂದು ಹಂತ ತಲುಪಿತ್ತು. ಅವರ ಮಕ್ಕಳು ವೈದ್ಯರಾಗುವ ಹಾದಿಯಲ್ಲಿದ್ದರು. ಆನಂದವನ ತನ್ನ ಕಾಲಮೇಲೆ ನಿಂತು ಅದರ ಪಾಡಿಗೆ ಅದು ನಡೆಯುವ ಹಂತ ತಲುಪಿತ್ತು. ಬಾಬಾ ತಮ್ಮೆಲ್ಲ ಶಕ್ತಿಯನ್ನೂ ಆ ದಿಸೆಯಲ್ಲಿ ತೊಡಗಿಸಬೇಕೆಂದಿರಲಿಲ್ಲ. ತಕ್ಷಣವೇ ಶವದ ಪೆಟ್ಟಿಗೆ ಎನಿಸಿದ್ದು ಗರ್ಭಾಶಯ ಆಯಿತು. ಬಾಬಾರ ಉಳಿದ ಜೀವನ ಅರಳಿಕೊಳ್ಳತೊಡಗಿತು.

ಆನಂದವನದ ಅನುಭವದ ಆಧಾರದ ಮೇಲೆ ನವಭಾರತವನ್ನು ನಿರ್ಮಿಸುವ ಕಾಣ್ಕೆ ಅವರ ಮನಸ್ಸನ್ನು ತುಂಬಿತು. ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳು ಸಮಾಜದ ಕೆಳಸ್ತರದಲ್ಲಿರುವ ಮನುಷ್ಯನಿಗೆ ತಲುಪುತ್ತಿಲ್ಲ ಎಂಬುದು ಸ್ಪಷ್ಟವಾಗಿ ತಿಳಿದುಹೋಯಿತು. ಕೃಷಿ ಆಧಾರಿತ ಸಮುದಾಯವನ್ನು ಹೆಚ್ಚು ಉತ್ಪಾದಕ ಸಾಮರ್ಥ್ಯವುಳ್ಳ ಕೃಷಿ-ಕೈಗಾರಿಕಾ ಸಮುದಾಯವನ್ನಾಗಿ ಪರಿವರ್ತಿಸುವುದೇ ಇದಕ್ಕೆ ಯೋಗ್ಯ ಪರಿಹಾರ ಎಂದು ಬಾಬಾ ಅರಿತರು.

ಅವರು ಈ ಹೊಸ ಆಯಾಮದ ಕುರಿತು ಚಿಂತನೆ ನಡೆಸುತ್ತಿದ್ದಂತೇ ಸ್ಪಾಂಡಿಲೋಸಿಸ್ ನಿರಂತರ ಅವರ ದೇಹವನ್ನು ಬಾಧಿಸುತ್ತಿತ್ತು. ೧೯೭೧ರ ವೇಳೆಗೆ ಗೆಳೆಯರು ಹಣ ಕೂಡಿಸಿ, ಅವರ ಬೆನ್ನುಮೂಳೆಗೆ ಪ್ರಮುಖ ಶಸ್ತ್ರ ಚಿಕಿತ್ಸೆ ಮಾಡಿಸಲು ಲಂಡನ್ನಿಗೆ ಕಳುಹಿಸಿಕೊಟ್ಟರು. ಇದರಿಂದಾಗಿ ೧೯೭೧ ಮತ್ತು ೭೨ರ ಬಹುಪಾಲು ಸಮಯ ಅವರು ಹಾಸಿಗೆಯಲ್ಲಿಯೇ ಕಳೆಯಬೇಕಾಗಿ ಬಂತು. ಇನ್ನೊಂದು ಶಸ್ತ್ರಚಿಕಿತ್ಸೆಯೂ ಅಗತ್ಯವೆನಿಸಿ ಕೆಲವು ವರ್ಷಗಳಲ್ಲಿ ಅದು ಮುಂಬೈನಲ್ಲಿ ನೆರವೇರಿದಾಗ ಅವರ ಸಂಕಟ ಹೆಚ್ಚಾಯಿತು. ಈ ಶಸ್ತ್ರ ಚಿಕಿತ್ಸೆಗಳಿಂದಾಗಿ ಬಾಬಾ ಜೀವಂತವಿರುವಂತೆನೋ ಆಯಿತು. ಆದರೆ, ಶಾಶ್ವತ ಅಂಗವಿಕಲರಾಗಿ ಬದುಕುವಚಿತಾಯಿತು. ಅವರು ಇನ್ನೆಂದೂ ಹೆಚ್ಚು ಹೊತ್ತು ಮೇಲೆದ್ದು ಕೂರಲಾರರು; ನಿಲ್ಲಲಾರರು; ಮಲಗಲಾರರು. ಕೇವಲ ಸ್ವಲ್ಪ ಹೊತ್ತು ಕೂರಲು, ಮಲಗಲು, ನಿಲ್ಲಲು ಸಾಧ್ಯ.

ಈ ಎಲ್ಲ ದೈಹಿಕ ತೊಂದರೆಗಳ ನಡುವೆಯೇ ಅವರ ಚೇತನ ಪುನರುಜ್ಜೀವನದ ಉತ್ಸಾಹದಿಂದ ಪುಟಿಯತೊಡಗಿತು. 'ಅವು ದುಃಖದ ದಿನಗಳು. ಪ್ರಾಯಶಃ ಸ್ವಲ್ಪ ಸೋಲು ಕಂಡಿರಬಹುದು. ಆದರೆ ಕೊನೆಗೆ 'ನನ್ನ ಸೋವು ಮತ್ತು ದುಃಖಗಳು ನನ್ನ ಸುಖಕ್ಕೆ ಸಾಕ್ಷಿಗಳಾಗಿ ನಿಂತವು. ನನ್ನ ಕೊನೆಯ ಉಸಿರಿರುವತನಕ ಏನಾದರೂ ಮಾಡುತ್ತಲೇ ಇರಬೇಕು ಎಂದುಕೊಂಡೆ' ..... ಎಂದು ಬಾಬ ಹೇಳುತ್ತಾರೆ. ಈ ಯುದ್ಧದಲ್ಲಿ ಬಾಬಾರ ಅಮಿತ ಚೈತನ್ಯಕ್ಕೇ ಜಯ ಸಂದಿತು.

ಈ ಅವಧಿಯಲ್ಲಿ 'ಪೂರ್ಣಸ್ವರಾಜ್' ನನಸಾಗಿಸುವುದರತ್ತ ಅವರ ಚಿಂತನೆಗಳು ಹರಿದವು. ಬಹುಸಂಖ್ಯಾತ ಮೂಕ ಜನತೆಯ ಅಭಿವೃದ್ಧಿಗಾಗಿ ನಡೆಸುವ ತೀವ್ರ ಪ್ರಯತ್ನವೇ ಈ ಪೂರ್ಣ ಸ್ವರಾಜ್ ಆಗಿತ್ತು. ಬಾಬಾ ಆಮ್ಟೆಯ ಜೀವನ ಚರಿತ್ರೆಯನ್ನು ಬರೆದ ಹಾನ್ಸ್ ಸ್ಟಿಫ್‌ನರ್, 'ಬಾಬಾ ಆಮ್ಟೆಯವರ ಕಾಣ್ಕೆ' ಎಂಬುದಾಗಿ ಹೀಗೆ ಬರೆಯುತ್ತಾರೆ.

'ಆನಂದವನವನ್ನು ಕಟ್ಟುವಲ್ಲಿ ಬಾಬಾ ಕಂಡ ಯಶಸ್ಸು ಎರಡು ಬಗೆಯದು. ತಮ್ಮ ತಮ್ಮ ಅಭಿವೃದ್ಧಿಗಾಗಿ ಪ್ರಯತ್ನಿಸುತ್ತಿರುವ ಭಾರತದ ಮಿಲಿಯಗಟ್ಟಲೆ ಬಡವರನ್ನು ಇದು ಮುನ್ನಡೆಸಬೇಕೆಂಬ ಅವರ ಹಂಬಲಕ್ಕೆ ನೀರೆರೆಯಿತು ಮತ್ತು ಸಾವಿರಾರು ಮಂದಿಯಲ್ಲಿ ಕ್ರಿಯಾಶೀಲ ಜಾಗೃತಿಯನ್ನುಂಟುಮಾಡುವುದರ ಮೂಲಕ ಇದು ಸಾಧ್ಯ ಎಂಬ ಅವರ ನಂಬಿಕೆಯನ್ನಿದು ಬಲಪಡಿಸಿತು'.

'ನಾವು ತೀರಾ ಪ್ರತಿಕೂಲ ಪರಿಸ್ಥಿತಿಯಲ್ಲಿ ಒಂದು ಸುಖದ ಸಮುದಾಯವನ್ನು ಕಟ್ಟಿಕೊಳ್ಳಲು ಸಾಧ್ಯವಾಗುವುದಾದರೆ, ಆರೋಗ್ಯವಂತ ಜನ ಅನುಕೂಲಕರವಾದ ಪರಿಸರದಲ್ಲಿ ಇಷ್ಟೂ ಮಾಡುವುದು ಸಾಧ್ಯವಿಲ್ಲವೇ? ಭಾರತದ ಯುವಕರು ಏಕೆ ಮನಸ್ಸು ಮಾಡುತ್ತಿಲ್ಲ'ಎಂದು ಅವರು ಈಗ ಪ್ರಶ್ನಿಸಿತೊಡಗಿದರು.

ನವಭಾರತದ ಕಾಣ್ಕೆ

ಬಹು ಆವೇಶದಿಂದ ಬಾಬಾ ಈ ಪ್ರಶ್ನೆಗಳನ್ನು ಮುಂದಿಟ್ಟಿದ್ದರೂ ಮನಸ್ಸಿನಲ್ಲಿ ಅವರ ಬಗ್ಗೆ ಯಾವ ಕಹಿ ಭಾವನೆಯನ್ನೂ ಉಳಿಸಿಕೊಂಡಿರಲಿಲ್ಲಲ್ಲ. 'ಅದು ಸಾಧ್ಯ' ಎಂಬ ಬಗ್ಗೆ ಅವರಲ್ಲಿ ಯಾವ ಅನುಮಾನವೂ ಇರಲಿಲ್ಲ. 'ಸಾಮಾನ್ಯ ಮನುಷ್ಯರ ಹೃದಯದಲ್ಲಿ ಒಂದು ದಿವ್ಯ ಕಿಡಿ ಇದೆ. ಅದನ್ನು ಜ್ವಾಲೆಯಾಗಿಸಬೇಕು' ಇದು ಹೇಗೆ?

. ನಿಜವಾದ ಕ್ರಾಂತಿ ಜನರಿಗೆ ಅವರ ಸ್ವಸಾಮರ್ಥ್ಯದ ಅರಿವು ಉಂಟುಮಾಡುತ್ತದೆ' ಎಂದು ಚೀನಾ ಮತ್ತು ರಷ್ಯಾದ ಬೆಳವಣಿಗೆಯನ್ನು ಅಧ್ಯಯನ ಮಾಡಿದ ಬಾಬಾಗೆ ಅನಿಸಿತು. ಇದು ಅವರನ್ನು ಮತ್ತಷ್ಟು ಕ್ರಿಯಾಶೀಲರನ್ನಾಗಿಸಿತು.

'ಯಾವುದೇ ರಚನಾತ್ಮಕ ಕೆಲಸವಿಲ್ಲದ ರಾಜಕೀಯ ಅರಿವು ನಿರ್ವೀರ್ಯವಾದುದು. ಹಾಗೆಯೇ ರಾಜಕೀಯ ಪ್ರಜ್ಞೆ ಇಲ್ಲದ ರಚನಾತ್ಮಕ ಕೆಲಸ ಕೂಡಾ ನಿಷ್ಫಲವಾದುದು, ಬಂಜೆಯಾದುದು ಎಂದು ನಾನು ನಂಬುತ್ತೇನೆ. ನನ್ನನ್ನು ಕ್ರಿಯೆಗೆ ತೊಡಗಿಸುವ ಶಕ್ತಿ ಯಾವುದು ಎಂದು ತಿಳಿಯಬಯಸಿದರೆ ಅದನ್ನು 'ಸೃಷ್ಟಿಶೀಲ ಮಾನವೀಯತೆ' ಎಂದು ಕರೆಯಬಯಸುತ್ತೇನೆ'.

ಈ ರೀತಿ ಬಾಬಾ ಆನಂದವನವನ್ನು ಭಾರತದ ಕನಸುಗಳಿಗೆ ಮಾದರಿಯಾಗಿ ಬೆಳೆಸಿದರು. ಈ ಆದರ್ಶ ಸಮಾಜ ಎರಡು ಸ್ತಂಭಗಳ ಮೇಲೆ ನಿಂತಿದೆ. ಒಂದು, ಪರಸ್ಪರ ಹಕ್ಕುಗಳನ್ನು ಗುರುತಿಸುವಿಕೆ ಮತ್ತು ಎಲ್ಲರ ಒಳಿತಿಗಾಗಿ ಪರಸ್ಪರ ಸಹಕಾರ. ಎಲ್ಲ ಜೀವಿಗಳ ಘನತೆಯನ್ನು ಗೌರವಿಸಬೇಕು ಎಂಬುದು ಇದರ ಅರ್ಥ. ಪ್ರತಿಯೊಬ್ಬನೂ ಸ್ವಾವಲಂಬಿಯಾಗುವ ಮೂಲಕ ಇದು ಸಾಧ್ಯವಾಗುತ್ತದೆ.

'ವೈಯಕ್ತಿಕ ಸ್ವಾತಂತ್ರ್ಯ' ಮತ್ತು 'ಸಮುದಾಯದ ಮಾಲೀಕತ್ವ' ಎಂಬ ಈ ಎರಡು ಸಿದ್ಧಾಂತಗಳಿಂದ ಒಡಗೂಡಿದ ಒಂದು ವ್ಯವಸ್ಥೆಯನ್ನು ಪ್ರಯೋಗಗಳ ಮೂಲಕ ರೂಪಿಸಬೇಕು. ನಮ್ಮ ಎಲ್ಲ ಯೋಜನೆಗಳಲ್ಲಿ ಕುಷ್ಠರೋಗಿಗಳು, ಆದಿವಾಸಿಗಳು, ವಿಕಲಾಂಗರು ಹೀಗೆ ಎಲ್ಲರನ್ನೂ ಜತೆ ಸೇರಿಸಿಕೊಂಡಿದ್ದೇವೆ. ಜೇನು ನೊಣವನ್ನೇ ತೆಗೆದುಕೊಳ್ಳಿ. ಅದು ಮೆಣಸಿನ ಗಿಡದಿಂದಲೂ ಮಧುವನ್ನು ಹೀರುತ್ತದೆ. ಈ ಪ್ರಕ್ರಿಯೆಯಲ್ಲಿ ಅದು ಹೂವನ್ನು ನಾಶಮಾಡುವುದಿಲ್ಲ. ವಾಸ್ತವವಾಗಿ ನೋಡುವುದಾದರೆ, ಈ ಪ್ರಕ್ರಿಯೆ ಗಿಡದ ಬೆಳವಣಿಗೆಗೆ ಸಹಾಯ ಮಾಡೀತು. ಇದನ್ನು ಖಲೀಲ್ ಗಿಬ್ರಾನ್, ಮಾರ್ಕ್ಸ್, ಗೊರ್ಬಚೇವ್ ಇಷ್ಟೇ ಏಕೆ ಗಾಂಧಿಯಿಂದಲೂ ಕಲಿಯಬೇಕಾದ ಅಗತ್ಯವೇ ಇಲ್ಲ. ನೀವು ಇದನ್ನು ಜೇನು ನೊಣದಿಂದ ಕಲಿಯಿರಿ. ನಾಶ ಮಾಡದೆ ಬೆಳೆಸುವುದು ಹೇಗೆ ಎಂಬುದನ್ನು ಅವು ಹೇಳಿಕೊಡುತ್ತದೆ'.

ಈ ಆದರ್ಶಗಳನ್ನು ಕೃತಿಗಿಳಿಸುವುದು ಬಾಬಾಗೆ ಎಂದೂ ಕಷ್ಟವಾಗಿ ತೋರಲಿಲ್ಲ. ಅವರು ಒಂದು 'ಕೆಲಸಗಾರರ ವಿಶ್ವವಿದ್ಯಾಲಯ'ವನ್ನು ರೂಪಿಸುವಲ್ಲಿ ತಮ್ಮ ಗಮನವನ್ನು ಕೇಂದ್ರೀಕರಿಸಿದರು. ಪದವಿ ತರಗತಿಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ತಮ್ಮ ಈ ಕಲಿಕೆಯ ಸಂಗಡವೇ ಪ್ರಾಯೋಗಿಕ ಕೌಶಲವನ್ನು ಕಲಿಸುವ 'ಕಾಣ್ಕೆ'ಯನ್ನು ನೀಡಿದರು. ಪ್ರತಿ ವಿದ್ಯಾರ್ಥಿಗೆ ಎರಡು ಎಕರೆ ಭೂಮಿಯನ್ನು ಕೃಷಿ ಮಾಡಲು ನೀಡುವುದು. ಈ ಭೂಮಿಯಿಂದ ಬಂದ ಉತ್ಪತ್ತಿಯಲ್ಲಿ ಅವನ ಊಟದ ಖರ್ಚಿಗೆ ಪಣ ನೀಡಿ, ಉಳಿದ ಪಣ ಅಥವಾ ಉತ್ಪಾದನೆಯನ್ನು ತನಗಾಗಿ ಇಟ್ಟುಕೊಳ್ಳಬಹುದು, ಬಳಸಬಹುದು. ಈ ಉತ್ಪಾದನಾ ಕೆಲಸದಿಂದ ವಿಶ್ವವಿದ್ಯಾಲಯ ಸ್ವಾವಲಂಬಿಯಾಗುತ್ತದೆ.

ಯೋಜನಾ ಆಯೋಗ ಇದಕ್ಕೆ ಒಪ್ಪಿಗೆ ನೀಡಿತು. ಆನಂದವನದ ದಕ್ಷಿಣಕ್ಕೆ ಸುಮಾರು ೧೦೦ಕಿ.ಮೀ ದೂರದ ಸೋಮನಾಥದಲ್ಲಿ ಸುಮಾರು ಎರಡು ಸಾವಿರ ಎಕರೆ ಪ್ರದೇಶದಷ್ಟು ವಿಸ್ತಾರದ ಬರಡು ಭೂಮಿಯನ್ನು ಈ ಕೆಲಸಕ್ಕೆ ನೀಡಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯರಿಂದ ತೀವ್ರ ಪ್ರತಿಭಟನೆ ಉಂಟಾಯಿತು. ಇದರ ಪರಿಣಾಮವಾಗಿ ಬಹಳಷ್ಟು ಭೂಮಿಯನ್ನು ಮರಳಿಸಬೇಕಾಗಿ ಬಂತು, ಕೆಲಸಗಾರರ ವಿಶ್ವವಿದ್ಯಾಲಯ ಯೋಜನೆಯನ್ನೂ ಕೈಬಿಡಬೇಕಾಗಿ ಬಂತು. ಉಳಿದ ಭೂಮಿಯನ್ನು ವಾರ್ಷಿಕ ಯುವ ಶಿಬಿರದ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲಾಯಿತು. ೧೯೬೭ರಲ್ಲಿ ಇಲ್ಲಿ ಮೊದಲ ಶಿಬಿರ ನಡೆಸಲಾಯಿತು. ಭಾರತದ ವಿವಿಧ ಕಡೆಗಳಿಂದ ಬಂದಿದ್ದ ಸುಮಾರು ೧೪೦೦ ಹುಡುಗ-ಹುಡುಗಿಯರು ಈ ಶಿಬಿರದಲ್ಲಿ ಭಾಗವಹಿಸಿದ್ದರು. ಈ ಸಮಯದಲ್ಲಿ ಅಲ್ಲಿ ಯಾವ ಕಟ್ಟಡಗಳೂ ಇಲ್ಲದೇ ಇದ್ದ ಕಾರಣ ಶಿಬಿರಾರ್ಥಿಗಳೆಲ್ಲ ಬಯಲಿನಲ್ಲೇ ಮಲಗಬೇಕಾಗಿ ಬಂತು. ಸುಮಾರು ಎರಡು ಕಿ.ಮೀ ಆಚೆಯಿಂದ ಪೀಪಾಯಿಗಟ್ಟಲೆ ನೀರನ್ನು ಎತ್ತಿನ ಗಾಡಿಯಲ್ಲಿ ಸರಬರಾಜು ಮಾಡಬೇಕಾಯಿತು.

ಈ ತರುಣ-ತರುಣಿಯರು ಬಯಲಿನಲ್ಲಿ ಚೆಕ್ ಡ್ಯಾಮ್ ನಿರ್ಮಿಸಬೇಕಿತ್ತು, ತೆವರುಗಳನ್ನು ನಿರ್ಮಿಸಬೇಕಿತ್ತು; ಗಿಡಗಂಟೆಗಳನ್ನು ಕಡಿದು ಭೂಮಿಯನ್ನು ಕೃಷಿಯೋಗ್ಯ ಮಾಡಬೇಕಿತ್ತು. ಪ್ರತಿದಿನ ಸಂಜೆ ಗುಂಪು ಚರ್ಚೆಗಳನ್ನು ನಡೆಸಿಕೊಡುತ್ತಿದ್ದರು. ಆ ಚರ್ಚೆಗಳಲ್ಲಿ ಜಾತ್ಯತೀತತೆ, ರಾಷ್ಟ್ರೀಯ ಭಾವೈಕ್ಯ, ಸಮಾಜವಾದ, ಪ್ರಜಾಪ್ರಭುತ್ವ, ವಿದ್ಯಾರ್ಥಿಗಳ ಸಮಸ್ಯೆ ಮೊದಲಾದ ವಿಷಯಗಳು ಚರ್ಚಿತವಾಗುತ್ತಿದ್ದವು. ಬಳಿಕದ್ದು ಹಾಡು, ಕುಣಿತ, ನಾಟಕ, ಕವಿತೆ, ಆಟಗಳ ಸಮಯ.

ಬಹಳಷ್ಟು ವರ್ಷಗಳ ಕಾಲ ಸೋಮನಾಥದ ಈ ಶಿಬಿರಗಳು ವಿದ್ಯಾರ್ಥಿ ಸಮುದಾಯದಲ್ಲಿ ಬಹಳ ಮಹತ್ವದ ಸಾಮಾಜಿಕ ಚಟುವಟಿಕೆಯಾಗಿದ್ದವು. ಈ ಶಿಬಿರದಲ್ಲಿ ಸಾವಿರಾರು ತರುಣ-ತರುಣಿಯರು 'ಸೃಜನಶೀಲ ತಳಮಳ'ವನ್ನು ತಮ್ಮಲ್ಲಿ ತುಂಬಿಕೊಂಡರು. ಅನೇಕ ಮಂದಿ ಸಾಮಾಜಿಕ ಕಾರ್ಯಕರ್ತರಿಗೆ ಈ ಶಿಬಿರಗಳು ಆರಂಭದ ಹೆಜ್ಜೆಯಾಗಿದ್ದು ಅನಂತರದ ದಿವಸಗಳಲ್ಲಿ ಇವರು ಗಾಂಧಿವಾದದಿಂದ ಮಾರ್ಕ್ಸಿಸ್ಟ್, ಲೆನಿನಿಸ್ಟ್ ಸಿದ್ಧಾಂತದವರೆಗೆ ತಮಗೊಪ್ಪುವ ಸೈದ್ಧಾಂತಿಕ ಹಾದಿಯ ಪಯಣಿಗರಾದರು. ಬಾಬಾ 'ಯೌವನದ

ಉತ್ತರಾರ್ಧ'ವನ್ನು ತಲುಪುವ ವೇಳೆಗೆ ಈ ತರುಣರು ಮಧ್ಯವಯಸ್ಕರಾಗಿದ್ದರು. ಅವರು ಬೇರೆ ಬೇರೆ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿ ಜೀವಂತಿಕೆ ಕಾಯ್ದುಕೊಂಡರು.

ಸೋಮನಾಥದಲ್ಲಿ ನಡೆದ ಈ ಕೆಲಸ ೮೦ರ ದಶಕದ ಮಧ್ಯಭಾಗದಲ್ಲಿ 'ಭಾರತ್ ಜೋಡೋ' ಅಭಿಯಾನಕ್ಕೆ ನಾಂದಿಯಾಯಿತು. ಬಾಬಾ ಮತ್ತು ಅವರ ಒಡನಾಡಿ ತರುಣರ ದಂಡು ಗ್ರಾಮ ಗ್ರಾಮಗಳನ್ನು ಸಂಚರಿಸಿ ಕೋಮು ಸೌಹಾರ್ದ ಕಾಪಾಡಿಕೊಳ್ಳಲು ಮತ್ತು ಅಲ್ಲಿಯ ಸಮಸ್ಯೆಗಳಿಗೆ ಶಾಂತಿಯುತ ಉತ್ತರ ಕಂಡುಕೊಳ್ಳಲು ಮನವಿ ಮಾಡಿಕೊಂಡರು.

ದೊಡ್ಡ ಅಣೆಕಟ್ಟುಗಳು ಬೇಡ

ಬಾಬಾರ 'ಯೌವನದ ಉತ್ತರಾರ್ಧ'ದ ದಿವಸಗಳ ರಾಜಕಾರಣವನ್ನು ರೂಪಿಸಿದ್ದು ವಾಸ್ತವವಾಗಿ 'ಹೇಮಲ್ಕಸಾ'. ಇದು ನಾಗಪುರದಿಂದ ಸುಮಾರು ೩೫೦ಕಿ.ಮೀ ದೂರದಲ್ಲಿರುವ ಪ್ರದೇಶ. ಈ ಸಂದರ್ಭದಲ್ಲಿ ಅವರು ದೈಹಿಕ ನೋವುಗಳನ್ನೂ ಮೀರಿ ಮುನ್ನುಗ್ಗಿದ್ದು ಅವರ ಅಪಾರ ಧೈರ್ಯಕ್ಕೆ ನಿದರ್ಶನ. ೧೯೭೩ರಲ್ಲಿ ಬೆನ್ನಿನ ಶಸ್ತ್ರಚಿಕಿತ್ಸೆಯಾಗಿ ಕೇವಲ ಒಂದು ವರ್ಷದ ನಂತರ ಹೇಮಲ್ಕಸಾ ಅರಣ್ಯ ಪ್ರದೇಶದಲ್ಲಿ ಟೆಂಟ್ ಹಾಕಿಕೊಂಡು ಕುಳಿತರು. ಬಾಲ್ಯಕಾಲದಲ್ಲಿ ಈ ಕಾಡುಗಳಲ್ಲಿಯೇ ಅವರು ಶಿಕಾರಿ ಮಾಡುತ್ತಿದ್ದುದು. ಬಾಬಾ ಆದಿವಾಸಿಗಳೊಂದಿಗೆ ಒಂದಾಗಿರಲು ಬಯಸಿದರು. ಅವರ ಮುಗ್ಧತೆ ಮತ್ತು ಉತ್ಸಾಹ ಇವರಿಗೆ ಇಷ್ಟವಾಗುತ್ತಿತ್ತು.

ಆದರೆ ಅವರು ಬದುಕುತ್ತಿದ್ದ ರೀತಿ ಇವರನ್ನು ಭಯಭೀತರನ್ನಾಗಿಸಿತು. ತಮ್ಮ ಪರಿಸರ, ಅದರ ಸೌಂದರ್ಯ, ಸಂಸ್ಕೃತಿ ಮತ್ತು ಅವು ನೀಡುವ ಶಕ್ತಿಗಳಿಂದ ವಂಚಿತರಾಗದೇ ಆಧುನಿಕತೆಯ ಲಾಭ ಪಡೆಯುವಂತೆ ಅವರಿಗೆ ಸಹಾಯ ಮಾಡಬೇಕು ಎಂದು ಸುಮಾರು ಮೂವತ್ತು ವರ್ಷಗಳಿಂದಲೂ ಬಾಬ ಕನಸು ಕಂಡಿದ್ದರು. ಈ ಕನಸನ್ನು ಸಾಕಾರಗೊಳಿಸಲು ತಮ್ಮ ದೈಹಿಕ ನೋವನ್ನೂ ಮರೆತು ತೀವ್ರವಾಗಿ ಕಾರ್ಯನಿರತರಾದರು. ಹಳ್ಳಿ ಹಳ್ಳಿಗೆ ಪ್ರಯಾಣ ಮಾಡಿ, 'ಮಾದಿಯಾಗೊಂಡ'ರ ಆರೋಗ್ಯ ಸ್ಥಿತಿ ಸುಧಾರಿಸಲು ಯತ್ನಿಸಿದರು.

೧೯೭೪ರಲ್ಲಿ ಬಾಬಾ ದಂಪತಿಗಳ ಕಿರಿಯ ಮಗ ಪ್ರಕಾಶ್ ವೈದ್ಯಕೀಯ ಪದವಿ ಪಡೆದು ಹೇಮಲ್ಕಸಾದಲ್ಲಿ ಕಾರ್ಯನಿರ್ವಹಿಸಲು ಬಂದಿಳಿದ. ಪ್ರಕಾಶ್ ಮತ್ತು ಆತನ ಸಹಪಾಠಿಯಾಗಿದ್ದ ಮಂದಾಕಿನಿ ಇಲ್ಲಿ ಶಾಶ್ವತವಾಗಿ ನೆಲೆಸಲು ಬಯಸಿದರು. ತಮ್ಮ ತಂದೆ ತಾಯಿಗಳಂತೆ ಪ್ರಕಾಶ ಮತ್ತು ಆತನ ಪತ್ನಿ ಬಹಳ ವರ್ಷ ಕಷ್ಟಪಡಬೇಕಾಯಿತು. ಈ ಅವಧಿಯಲ್ಲಿ ಆಹಾರದ ಕೊರತೆ, ಔಷಧಗಳ ಕೊರತೆ, ಕಾಯಿಲೆಗಳಿಗೆ ಪಕ್ಕಾಗುವುದೇ ಮೊದಲಾದ ಅನೇಕ ಕಷ್ಟಪರಂಪರೆಗಳನ್ನು ಎದುರಿಸಬೇಕಾಗಿ ಬಂತು.

ಕ್ರಮೇಣ ಈ ಕಷ್ಟಗಳು ಕಡಿಮೆಯಾಗತೊಡಗಿದವು. ಕಾರ್ಯಕರ್ತರ ಸಮುದಾಯವೇ ಕೆಲಸ ಮಾಡಲು ಬರತೊಡಗಿತು. ಅಲ್ಲಿನ ಸ್ಥಳೀಯರು, ವನ ಸಂಪತ್ತು ಎಲ್ಲವೂ ಈ ಹೊರೆಯಲ್ಲಿ ಪಾಲು ಪಡೆದುಕೊಂಡವು. ಈ ಸಮುದಾಯದಲ್ಲಿ ಬಾಬಾ ಮತ್ತು ತಾಯಿ

ದತ್ತು ತೆಗೆದುಕೊಂಡಿದ್ದ ರೇಣುಕಾ ಇದ್ದಳು. ಆಕೆಯ ಸಂಗಡ ಆಕೆಯ ಪತಿ ವಿಲಾಸ್ ಮನೋಹರ್ ಕೂಡಾ ಇದ್ದರು. ಹೇಮಲ್ಕಸಾ ಪರಿವಾರದ ಅನ್ವೇಷಣೆಯ ಜಾಡನ್ನು ನಂತರದ ದಿವಸಗಳಲ್ಲಿ ವಿಲಾಸ್ ನೇಗಾಲ್(ಮರಿಹುಲಿ) ಎಂಬ ಮರಾಠಿ ಪುಸ್ತಕದಲ್ಲಿ ವಿವರಿಸಿದ್ದಾರೆ. ಹೇಮಲ್ಕಸಾಗೆ ಭೇಟಿ ನೀಡಿದ ಯುರೋಪಿಯನ್ ಗೆಳೆಯರು ಪ್ರಕಾಶ್ ಮತ್ತು ಮಂದಾಕಿನಿಯನ್ನು ಭಾರತದ ಆಲ್ಬರ್ಟ್ ಶ್ವೈಟ್ಜರ್ಸ್ ಎಂದೇ ಕರೆದರು. ೮೦ ದಶಕದ ಕೊನೆಯ ವೇಳೆಯಲ್ಲಿ ಇದನ್ನು ಮೆಚ್ಚಿದ ಜನರ ಗುಂಪಿನ ಪ್ರಯತ್ನದಿಂದ ಮೋನಾಕೋದ ರಾಜ ಈ ಕಿರಿಯ ಆಮ್ಟೆಗಳ ಹೆಸರಿನಲ್ಲಿ ಒಂದು ವಿಶೇಷ ಅಂಚೆ ಚೀಟಿಯನ್ನು ಹೊರಡಿಸಿದ.

ಅಭಿವೃದ್ಧಿ ಕಾಯಕ್ರಮಗಳು ಹೇಗೆ ಬುಡಕಟ್ಟು ಜನಾಂಗದ ಜನರ ಕಷ್ಟ ಪರಂಪರೆಗಳನ್ನು ಹೆಚ್ಚು ಮಾಡಿವೆ ಎಂಬುದು ಬಾಬಾಗೆ ಹೆಚ್ಚು ಸ್ಪಷ್ಟವಾಗುತ್ತಾ ಹೋಯಿತು. ಈ ಪ್ರದೇಶದಲ್ಲಿ ಎರಡು ಬೃಹತ್ ಅಣೆಕಟ್ಟುಗಳು ತಲೆಯೆತ್ತಲಿದ್ದವು. ಒಂದು ಗೋದಾವರಿ ನದಿಗೆ ಅಡೆವಾಗಿ ಕಟ್ಟಿದ ಇಂಚಪಳ್ಳಿ ಅಣೆಕಟ್ಟು ಮತ್ತೊಂದು ಇಂದ್ರಾವತಿ ನದಿಗೆ ಅಡ್ಡವಾಗಿ ಭೋಪಾಲಪಟ್ಟಂ ಅಣೆಕಟ್ಟು. ಈ ಯೋಜನೆಗಳ ದೆಸೆಯಿಂದ ಸುಮಾರು ಎರಡು ಲಕ್ಷ ಎಕರೆ ಪ್ರದೇಶ ಮುಳುಗಡೆಯಾಗಲಿದ್ದು ಅದರಲ್ಲಿ ಅರ್ಧಕ್ಕೂ ಹೆಚ್ಚಿನದು ಅರಣ್ಯ ಪ್ರದೇಶ. ಜಿಲ್ಲಾ ಯೋಜನಾ ಸಮಿತಿಯ ಸದಸ್ಯರಾಗಿದ್ದ ಅವರು, ಈ ಯೋಜನೆಯ ರೂಪರೇಷೆ ಮತ್ತು ಅಂಕಿ ಅಂಶ ತರಿಸಿಕೊಂಡು ಇವು ಆದಿವಾಸಿ ಜನರ ಬದುಕಿನ ಮೇಲೆ ಬೀರುವ ಪರಿಣಾಮಗಳ ಕುರಿತು ಅಧ್ಯಯನ ನಡೆಸಿದರು. ಈ ಅಧ್ಯಯನದ ಫಲವಾಗಿ ಇಂತಹ ಯೋಜನೆಗಳಿಂದ ಸ್ಥಳೀಯರ ಬದುಕು ದುಸ್ತರವಾಗುತ್ತದೆ ಮಾತ್ರವಲ್ಲ, ಇವುಗಳಿಂದ ಸಮಾಜಕ್ಕೆ ಯಾವ ಪ್ರಯೋಜನವೂ ಇಲ್ಲ ಎಂಬ ವಿಷಯವನ್ನು ಬೋರ್ಡಿನ ಇತರ ಸದಸ್ಯರಿಗೆ ಮನವರಿಕೆ ಮಾಡಿಕೊಟ್ಟರು.

೧೯೮೩ ಜುಲೈನಲ್ಲಿ ಆಗಿನ ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರಿಗೆ ಬಾಬಾ ಪತ್ರವೊಂದನ್ನು ಬರೆದು ವಿದ್ಯುತ್ ಉತ್ಪಾದನೆಯ ಪರ್ಯಾಯ ಮಾರ್ಗಗಳತ್ತ ಸರ್ಕಾರ ಗಮನ ಹರಿಸಬೇಕೆಂದು ಮನವಿ ಮಾಡಿದರು. ಈ ಬೃಹತ್ ಯೋಜನೆಗಳಿಗಾಗಿ ಭಾರೀ ಮೊತ್ತವನ್ನು ಸುರಿಯುವುದಾದರೂ ಏತಕ್ಕೆ? ಎಂದು ಬಾಬಾ ಪ್ರಶ್ನಿಸಿದರು. 'ಇದಕ್ಕೆ ಬದಲಾಗಿ ಸಣ್ಣ ಸಣ್ಣ ಯೋಜನೆಗಳ ಸರಣಿ ನೀರು ಮತ್ತು ಶಕ್ತಿಯ ಅಗತ್ಯವನ್ನು ಪೂರೈಸುತ್ತದೆ. ಇದರಿಂದ ಪರಿಸರಕ್ಕೆ ಯಾವ ಹಾನಿಯೂ ಆಗುವುದಿಲ್ಲ. ಈ ವಿಷಯದಲ್ಲಿ ನಾನು ಪರಿಸರ ತಂತ್ರಜ್ಞರೊಡನೆ ನಡೆಸಿದ ಚರ್ಚೆ ನನ್ನ ಈ ನಂಬಿಕೆಯನ್ನು ದೃಢಪಡಿಸಿದೆ' ಎಂದೂ ಅವರು ಬರೆದರು.

ಇದಕ್ಕೆ ನಮ್ರವಾಗಿ ಉತ್ತರಿಸಿದ ಇಂದಿರಾ ಗಾಂಧಿ ಈ ಪ್ರಕರಣ ಕುರಿತು ಪರಿಶೀಲನೆ ನಡೆಸಲು ಯೋಜನಾ ಆಯೋಗಕ್ಕೆ ತಿಳಿಸಿದರು. ಈ ನಡುವೆ ಬೇರೆ ಬೇರೆ ಕಡೆಗಳಿಂದ ಯೋಜನೆಗೆ ಪ್ರತಿಭಟನೆಗಳು ಕೇಳಿಬರತೊಡಗಿದವು. ಈ ಯೋಜನೆಗೆ ಆಧಾರವೆನ್ನಲಾದ ವೆಚ್ಚ-ಲಾಭದ ಅನುಪಾತವನ್ನೇ ಪರಿಸರವಾದಿಗಳು ಪ್ರಶ್ನಿಸಿದರು. ಉದಾಹರಣೆಗೆ, ಮಹಾರಾಷ್ಟ್ರ ಸರ್ಕಾರ ನಾಶವಾಗಲಿರುವ ೪೦ಸಾವಿರ ಎಕರೆ ಅರಣ್ಯದ ಮೌಲ್ಯವನ್ನು ೬ಕೋಟಿ ಎಂದು

ಅಂದಾಜಿಸಿತು. ಆದರೆ ೪೦ಸಾವಿರ ಎಕರೆ ಪ್ರದೇಶದಿಂದ ಬರಬಹುದಾದ ವಾರ್ಷಿಕ ಉತ್ಪಾದನೆಯನ್ನು ಗಮನಕ್ಕೆ ತಂದುಕೊಂಡು ಅದನ್ನು ಸೂಕ್ತವಾಗಿ ನಿರ್ವಹಿಸಿದರೆ ಇದರ ಅಂದಾಜು ಮೌಲ್ಯ ಹೆಚ್ಚುಕಡಿಮೆ ೨೫೦೦ಕೋಟಿ ರೂಪಾಯಿಗಳಾಗುತ್ತವೆ.

ಈ ಯೋಜನೆಗಳ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಬಾಬಾ ದನಿಗೂಡಿಸಿದರು. ಈ ಯೋಜನೆಯನ್ನು ಹಿಂತೆಗೆದುಕೊಳ್ಳಿ ಎಂಬ ಬೇಡಿಕೆಯನ್ನು ೧೯೮೪ರಲ್ಲಿ ಸಾವಿರಾರು ಮಂದಿ ಆದಿವಾಸಿಗಳು ಒಟ್ಟಾಗಿ ಜಿಲ್ಲಾ ಕಲೆಕ್ಟರರಿಗೆ ಒಪ್ಪಿಸಿದರು. ಈ ಸ್ಥಳೀಯ ಪ್ರತಿಭಟನೆ ಮತ್ತು ಆಯಕಟ್ಟಿನ ಸ್ಥಳಗಳಲ್ಲಿ ಇರುವವರಿಗೆ ಮನವರಿಕೆ ಮಾಡಿಕೊಟ್ಟ ಪರಿಣಾಮವಾಗಿ ಈ ಎರಡೂ ಯೋಜನೆಗಳು ರದ್ದಾದವು. ನರ್ಮದೆಯ ತೀರದಲ್ಲಿ ವಿಧಿ ಅವರಿಗಾಗಿ ನೆಲೆಗೊಳಿಸಿದ ಜಾಗಕ್ಕೆ ಬಾಬಾ ಇನ್ನಷ್ಟು ಹತ್ತಿರವಾದರು.

ನರ್ಮದಾ ಬಚಾವೋ

ಪಯಣಿಸುತ್ತಿದ್ದ ವ್ಯಾನಿನಲ್ಲಿ ತಮ್ಮ ಮೊಣಕೈ ಊರಿ ಬಾಬಾ ಕಷ್ಟ ಪಟ್ಟು ಹೊರಗಡೆ ಹಣುಕಿದರು. ೧೯೯೦ರ ಸಮಯವದು. ಈ ವ್ಯಾನ್ ನರ್ಮದಾ ನದಿಯ ಮೇಲಿನ ಸೇತುವೆಯಲ್ಲಿ ನಿಧಾನವಾಗಿ ಸಾಗಿತ್ತು. ಒಂದರ ಹಿಂದೆ ಒಂದು ಟ್ರೇಲರ್‌ಗಳನ್ನೊಳಗೊಂಡ ಟ್ರಾಕ್ಟರ್‌ಗಳು ಈ ವ್ಯಾನಿನ ಮುಂದೆ ಸಾಗುತ್ತಲೇ ಇದ್ದವು. ಈ ಟ್ರಾಕ್ಟರುಗಳ ಮೇಲೆ ನರ್ಮದಾ ಬಚಾವೋ ಆಂದೋಲನದ ಚಿಹ್ನೆಯುಳ್ಳ ನೀಲಿ ಬಾವುಟ ಹಾರಾಡುತ್ತಿತ್ತು. ಇದರೊಳಗೆ ಇಡಿಕಿರಿದು ಕುಳಿತಿದ್ದ ಗಂಡಸರು, ಹೆಂಗಸರು, ಮಕ್ಕಳು, ಮುದುಕರು ಈ ಆಂದೋಲನದ ಘೋಷ ವಾಕ್ಯವಾದ 'ಕೋಯಿ ನಹಿ ಹಟೆಗಾ, ಬಾಂದ್ ನಹಿ ಬನೇಗಾ (ಯಾರೂ ಸರಿಯಲಾರರು, ಅಣೆಕಟ್ಟು ಕಟ್ಟಲಾಗದು) ಎಂಬ ಘೋಷಣೆಯನ್ನು ಕೂಗುತ್ತಿದ್ದರು.

ಸೂರ್ಯ ಮುಳುಗುತ್ತಿದ್ದ. ದಿಗಂತದಂಚಿನಲ್ಲಿ ಹೊನ್ನ ಬಣ್ಣದ ಛಾಯೆ. ಬಾಬಾ ಸೇತುವೆಯ ನಡುವೆ ಬಂದು ನಿಂತರು. ಇದರ ಹಿಂದೆ ಬಂದ ಟ್ರಾಕ್ಟರುಗಳು ಅವರ ಪಕ್ಕಕ್ಕೆ ಅಲ್ಲಿ ಇಲ್ಲಿ ನಿಂತು ರಸ್ತೆ ತಡೆ ಉಂಟುಮಾಡಿದವು. ನರ್ಮದಾ ಬಚಾವೋ ಆಂದೋಲನ ಅಲ್ಲಿನ ಕಾರ್ಯನಿರತ ಪೋಲೀಸರಿಗೆ ಸುದ್ದಿ ಮುಟ್ಟಿಸಿತು. ಮುಂಬೈ-ಆಗ್ರಾ ಹೆದ್ದಾರಿಯ ಮೇಲಿರುವ ಸೇತುವೆಯಲ್ಲಿ ನಾವು ರಸ್ತೆ ತಡೆ ಮಾಡಿದ್ದೇವೆ. ಸರ್ದಾರ್ ಸರೋವರ ಯೋಜನೆಯನ್ನು ಮರುಪರಿಶೀಲನೆಗೆ ಒಳಪಡಿಸುವ ನಮ್ಮ ಬೇಡಿಕೆ ಈಡೇರುವವರೆಗೆ ನಾವು ಕದಲುವುದಿಲ್ಲ.

ಮುಂದಿನ ೩೦ ಗಂಟೆಗಳವರೆಗೆ ನರ್ಮದಾ ಕಣಿವೆಯ ಮೂಲೆಮೂಲೆಗಳಿಂದ ಜನ ಬಂದು ಈ ಸೇತುವೆಯನ್ನೇ ಮನೆಮಾಡಿಕೊಂಡರು. ಬಾಬಾರನ್ನು 'ನಿಟ್ ಇಂಡಿಯಾ' ಆಂದೋಲನಕ್ಕೆ ಕೊಂಡೊಯ್ದಿದ್ದ ಈ ವ್ಯಾನು, ಪ್ರತಿಭಟನೆಯ ಕೇಂದ್ರವಾಯಿತು.

ಕೆಲವು ದಿವಸಗಳ ಹಿಂದೆ ಬಾಬಾ ಭವಿಷ್ಯದ ಕುರಿತು ಮಹತ್ವದ ನಿರ್ಧಾರ ತೆಗೆದುಕೊಂಡು ಆನಂದವನವನ್ನು ತೊರೆದು ಬಂದಿದ್ದರು. ಬಾಬಾ ಎಲ್ಲಿಂದ ಬಂದಿದ್ದಾರೆ ಎಂಬ ಮಾಹಿತಿ ಬಹಳಷ್ಟು ಜನರಿಗೆ ತಿಳಿದಿರಲಿಲ್ಲ. ಈ ಬಾಬಾ ತಾವು ನೋಡಿದ ಸ್ವಾಮೀಜಿಯನ್ನೋ,

ಮಹಾತ್ಮನನ್ನೋ ಹೋಲುತ್ತಿಲ್ಲ ಎಂದೆನಿಸಿ ಅನೇಕ ಗ್ರಾಮಸ್ಥರಿಗೆ ಅಚ್ಚರಿಯಾಯಿತು. ಇಲ್ಲಿ ರಾಸ್ತಾ-ರೋಕಾ ಚಳುವಳಿಯಾದ ನಂತರ ಬಾಬಾ ಇದ್ದ ವ್ಯಾನನ್ನು ಮುಂದಿರಿಸಿಕೊಂಡು ಸಣ್ಣ ಮೆರವಣಿಗೆ ಕಾಸರವಾಡದತ್ತ ಮುಂದುವರೆಯಿತು. ಈ ಕಾಸರವಾಡ್, ಮಧ್ಯಪ್ರದೇಶದ ಪಶ್ಚಿಮದ ಮೂಲೆಯಲ್ಲಿ ಬದವಾನಿ ನಗರಕ್ಕೆ ಸುಮಾರು ೫ಕಿ.ಮೀ ದೂರದಲ್ಲಿದೆ.

ಸ್ವಲ್ಪ ಹೊತ್ತಾದ ನಂತರ ಈ ಮೆರವಣಿಗೆ ಕರಗಿತು. ಬಾಬಾರಿಗೆ ತಮ್ಮ ಹೊಸ ನೆಲೆಯನ್ನು ಪರಿಶೀಲಿಸಲು ಅನುಕೂಲವಾಯಿತು. ಅವರ ಎದುರಿನ ಬಂಜರು ಮರಳುಭೂಮಿಯಲ್ಲಿ ಗ್ರಾಮಸ್ಥರು ನಿರ್ಮಿಸಿದ ಎರಡು ಕೋಣೆಗಳ ಒಂದು ಸಣ್ಣ ಮನೆ ಇತ್ತು. ಒಂದು ಕ್ಷಣ ಕಾಲ ಕರಗಿಹೋಯಿತೇನೋ ಎಂದೆನಿಸಿತು. ಬಹಳ ಹಿಂದೆ ವರೋರಾದಲ್ಲಿ ಗಿಡಗಂಟೆಗಳು ಬೆಳೆದ ನೆಲದ ಮುಂದೆ ನಿಂತಾಗ ಅವರಿಗಾದ ಅನುಭವ ಮರುಕಳಿಸಿತು. ಬಾಬಾ ತಮ್ಮ ವ್ಯಾನೊಳಗೆ ಮರಳಿ ಬಂದರು. ನಲವತ್ತು ವರ್ಷಗಳ ಕಾಲ ನೆಲೆಸಿದ್ದ ಆನಂದವನವನ್ನು ಅವರು ತೊರೆದು ಬಂದಿದ್ದರು. ಈಗ ನಿಧಾನವಾಗಿ ರೇವಾ ಮಯ್ಯಾ ಅವರ ಮೇಲೆ ಮೋಡಿ ಮಾಡತೊಡಗಿತ್ತು.

ಬಾಬಾ ಆನಂದವನದಿಂದ ಕಾಸರವಾಡಕ್ಕೆ ಬಂದುದು 'ನರ್ಮದಾ ಬಚಾವೋ' ಆಂದೋಲನಕ್ಕೆ ಸಾರ್ವಜನಿಕ ಸಂಪರ್ಕ ಸಾಧಿಸುವ ಗುರಿಯಿರಿಸಿಕೊಂಡು ಎಂದು ಮೇಲ್ನೋಟಕ್ಕೆ ಕಾಣುತ್ತದೆ. ಆದರೆ ಬಾಬಾರ ಈ ಹಿಂದಿನ ಎಲ್ಲ ಕ್ರಿಯೆಯಂತೆ ಇದೂ ಕೂಡಾ ಅವರು ತಮ್ಮ ಮನದೊಳಗಿನ ದನಿಗೆ ಕೊಟ್ಟ ಕಿವಿಯಾಗಿತ್ತು. ಅದು ಬೇರಾವ ಕಾರಣದಿಂದಲೂ ಅಲ್ಲ, ನರ್ಮದೆಯ ಕಡೆಗಿನ ಸೆಳೆತವೇ ಕಾರಣ. ನರ್ಮದೆ ಅಷ್ಟು ಪವಿತ್ರಳೂ, ಶುದ್ಧಳೂ ನೋಡಿದ ಮಾತ್ರಕ್ಕೇನೇ ಪಾಪ ತೊಳೆಯಬಲ್ಲ ಶಕ್ತಿಯುಳ್ಳವಳೂ ಆಗಿದ್ದಾಳೆ.

ಬೃಹತ್ ಅಣೆಕಟ್ಟುಗಳ ಬಗೆಗಿನ ಅವರ ವಿಚಾರ ೧೯೮೦ರ ದಶಕದಿಂದಲೂ ಒಂದು ರೂಪ ಪಡೆಯುತ್ತಿತ್ತು. ೧೯೮೮ರಲ್ಲಿ ಆನಂದವನ ಸಮುದಾಯ ಬೃಹತ್ ಸಮಾವೇಶವನ್ನು ಆಯೋಜಿಸಿ, ಭಾರತದಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ಸುಮಾರು ನೂರು ಮಂದಿ ಪರಿಸರವಾದಿಗಳಿಗೆ ಆಹ್ವಾನ ನೀಡಿತ್ತು. 'ಆನಂದವನ ನಿರ್ಣಯ' ಎಂದು ಕರೆಯಲಾಗುವ ಈ 'ಬೃಹತ್ ಅಣೆಕಟ್ಟಿನ ವಿರುದ್ಧ ಸಮುದಾಯ ಸಂಕಲ್ಪ'ವು ಈ ಬಗೆಯ ಚಳುವಳಿಗಳಲ್ಲಿ ಬಹಳ ಮುಖ್ಯವಾದುದಾಗಿತ್ತು.

ಬಾಬಾ ೧೯೮೯ರಲ್ಲಿ ಸರ್ದಾರ್ ಸರೋವರ್ ಪ್ರಾಜೆಕ್ಟ್ ಕುರಿತಂತೆ 'ಪ್ರೀತಿಯ ನರ್ಮದೆಯ ಅಳು'(Cry of Beloved Narmada) ಪ್ರಕಟಿಸಿದರು. ಭಾರತದ ಜನರನ್ನು ಉದ್ದೇಶಿಸಿಯೇ ಬರೆದ ಈ ಪುಸ್ತಕ, ಅದರ ಎಲ್ಲ ಕಾವ್ಯಾತ್ಮಕ ಅಭಿವ್ಯಕ್ತಿಯೊಂದಿಗೇ ಯಾಕೆ ಈ ಯೋಜನೆ ಸಾಮಾಜಿಕವಾಗಿ, ಆರ್ಥಿಕವಾಗಿ, ಪಾರಿಸರಿಕವಾಗಿ ಹಾನಿಯುಂಟುಮಾಡುತ್ತದೆ ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸುತ್ತದೆ. ೧೯೮೭-೮೮ರಲ್ಲಿ ಈ ಯೋಜನೆಯ ಅಂತಿಮ ವೆಚ್ಚ ೧೧ಸಾವಿರ ಕೋಟಿ ರೂಪಾಯಿಗಳೆಂದು ಅಂದಾಜಿಸಲಾಗಿತ್ತು. ಅಣೆಕಟ್ಟಿನ ಮುಳುಗಡೆ ಪ್ರದೇಶದಿಂದ ೧ಲಕ್ಷ ಜನ ನಿರಾಶ್ರಿತರಾಗುತ್ತಾರೆ. ಇದರ ಜತೆ ಇದರ ಕಾಲುವೆಗಳ ಜಾಲದ ದೆಸೆಯಿಂದ ಮತ್ತೆ ಒಂದು ಸಾವಿರ ಜನ ವಸತಿಹೀನರಾಗುತ್ತಾರೆ.

ಸರ್ದಾರ್ ಸರೋವರ್ ಪ್ರಾಜೆಕ್ಟ್‌ನಿಂದ (ಎಸ್‌ಎಸ್‌ಪಿ) ಬರುವ ಲಾಭವನ್ನು ಉತ್ಪ್ರೇಕ್ಷಿಸಲಾಗಿದೆ ಹಾಗೂ ಇದರ ವೆಚ್ಚವನ್ನೂ ವಾಸ್ತವವಾಗಿ ಆಗುವ ವೆಚ್ಚಕ್ಕಿಂತ ಕಡಿಮೆ ಮಾಡಿ ಹೇಳಲಾಗಿದೆ ಎಂಬುದನ್ನು ಸರ್ಕಾರದ ಅಂಕಿ ಅಂಶ ಬಳಸಿಕೊಂಡೇ ಬಾಬಾ ವಿವರಿಸಿದರು. ಇದು ಸರ್ಕಾರ ತಾನೇ ರೂಪಿಸಿದ ಶಾಸನಗಳ ಮುರಿಯುವಿಕೆಯ ಪ್ರಹಸನಕ್ಕೆ ಸಾಕ್ಷಿ ಎಂದರು. ಈ ಯೋಜನೆಯಿಂದ ನಿರಾಶ್ರಿತರಾದ ಎಲ್ಲರಿಗೆ ಪುನರ್ವಸತಿ ಕಲ್ಪಿಸುವುದು ಅಸಾಧ್ಯ ಎಂದು ವಾದಿಸಿದರು. ಈ ಯೋಜನೆಯ ವಿರುದ್ಧ ರೂಪುಗೊಳ್ಳುತ್ತಿರುವ ಆಂದೋಲನದ ಚಿತ್ರವನ್ನು ಮತ್ತು ಈ ಪ್ರತಿಭಟನೆಯನ್ನು ಹತ್ತಿಕ್ಕಲು ಸರ್ಕಾರ 'ಸರ್ಕಾರಿ ಗೋಪ್ಯ ಕಾಯ್ದೆ' ಮತ್ತು ಪೊಲೀಸ್ ಶಕ್ತಿಯನ್ನು ಬಳಸುತ್ತಿರುವುದನ್ನು ವಿವರಿಸಿದರು. ಈ ಬೃಹತ್ ಅಣೆಕಟ್ಟಿಗೆ ಪರ್ಯಾಯವಾಗಿ ನರ್ಮದಾ ನದಿಗೆ ಕಟ್ಟಬಹುದಾದ ಸಣ್ಣಸಣ್ಣ ಅಣೆಕಟ್ಟುಗಳ ಬಗ್ಗೆ ಚಿಂತಿಸಲು 'ಪ್ರೀತಿಯ ಗುಜರಾತ್ ರಾಜ್ಯ'ಕ್ಕೆ ಮನವಿ ಮಾಡಿಕೊಂಡರು.

'ವಿಜ್ಞಾನ ತಂತ್ರಜ್ಞಾನದ ಎಲ್ಲೆಗಳು ಸೂರ್ಯನ ಹೊಂಬಣ್ಣದ ಕಿರಣಗಳಂತೆ ದೂರದೂರದವರೆಗೂ ಪಸರಿಸುತ್ತಿವೆ. ಈ ಸಂದರ್ಭದಲ್ಲಿ ನನ್ನ ಪ್ರೀತಿಯ ಗುಜರಾತ್ ವಿನಾಶಕಾರಿ ಯೋಜನೆಗಳಿಂದ ತನ್ನ ನಾಶಕ್ಕೆ ತಾನೇ ನಾಂದಿಹಾಡದಿರಲಿ. ಈ ಬೃಹತ್ ಅಣೆಕಟ್ಟುಗಳನ್ನು ರೂಪಿಸುತ್ತಿರುವ ತಂತ್ರಜ್ಞಾನ ವಿವೇಕದ ಬಾಗಿಲು ಮುಚ್ಚಿದೆ. ಮುಂಬರುವ ಶತಮಾನ ಸಣ್ಣ ಮತ್ತು ಅತಿಸಣ್ಣ ಜಲಾಶಯಗಳನ್ನು ಬೆಂಬಲಿಸುತ್ತದೆ. ಗುಜರಾತ್ ಈ ಭವ್ಯ ಭವಿತವ್ಯದೆಡೆಗೆ ಮುಖಮಾಡಬೇಕೆಂದು ನಾನು ಬಯಸುವೆ'.

೧೯೮೯ರ ಕೊನೆಯ ವೇಳೆಗೆ ಬಾಬಾ ನರ್ಮದಾ ನದಿ ತೀರದೆಡೆಗೆ ತೆರಳಿ ಅಲ್ಲೇ ನೆಲೆಸಲು ನಿರ್ಧರಿಸಿದರು.

'ಈಗ ಆನಂದವನ ಬಿಡುವ ಸಮಯ ಬಂದಿದೆ. ನಾನು ಆನಂದದ ಪ್ರಪಂಚಕ್ಕೆ ಪಾದಾರ್ಪಣೆ ಮಾಡಿದ್ದು ಇಲ್ಲೇ. ಈ ಸ್ಥಳ ನನ್ನ ಬದುಕಿನ ಅರ್ಥವನ್ನೂ ಸಂಕೇತಿಸುತ್ತದೆ. ನರ್ಮದೆಯ ಬಳಿ ನೆಲೆಸುವುದಕ್ಕಾಗಿ ನಾನಿದನ್ನು ತೊರೆಯುತ್ತಿದ್ದೇನೆ. ಇಡೀ ಮನುಕುಲ ಬಯಸುವ ಶಾಂತಿ ಪಡೆಯಲು ನಾನು ಇದನ್ನು ತೊರೆಯುತ್ತಿದ್ದೇನೆ. ನವಭಾರತಕ್ಕಾಗಿ ಸಂಘರ್ಷ ನರ್ಮದಾ ಬಳಿ ಪ್ರಾರಂಭವಾಗಿದೆ. ಕೆಲವರಲ್ಲಿ ಮಾತ್ರ ಅಗತ್ಯಕ್ಕಿಂತ ಹೆಚ್ಚು ಸಂಪತ್ತು ಇರುವುದರಿಂದ ಎಲ್ಲರಿಗೂ ಅವರವರ ಅಗತ್ಯಕ್ಕೆ ತಕ್ಕಷ್ಟು ಸಮೃದ್ಧಿ ಇರುವ ಸಮಾಜದ ಕಲ್ಪನೆ ಮರುಕ್ರಿಯಾಶೀಲತೆಯ ಆಡುಂಬೊಲವಾಗಿ ನರ್ಮದಾ ಕಣಿವೆ ಪರಿವರ್ತಿತವಾಗಿದೆ.

ಎಲ್ಲ ಜೀವಿಗಳನ್ನು ಮುತ್ತಿರುವ ಹಿಂಸೆಯ ಮರ್ಮರವನ್ನು ಬಾಬಾ ನರ್ಮದೆಯ ತೀರದಲ್ಲಿ ಬದುಕುತ್ತಾ ಕೇಳಿಸಿಕೊಂಡರು. ತಾಯಿ ದೇವಿಯ ಆಶೀರ್ವಾದ ಈ ಕಾರ್ಯದಲ್ಲಿ ನಮಗೆ ಜಯ ತಂದುಕೊಡಬಲ್ಲದೇ?

ಜಗತ್ತಿನ ಯಾವುದೇ ಅಧಿಕಾರವಾಗಲೀ, ಶಕ್ತಿಯಾಗಲೀ ಆಕೆಯ ಪ್ರಭೆಯನ್ನು ಮಸುಳಿಸುವುದು ಸಾಧ್ಯವಿಲ್ಲ. ಇಂತಹ ಆಕೆಯ ಹಿರಿಮೆಯನ್ನು ನಾವು ದಿಕ್ಕು ದಿಕ್ಕುಗಳಿಗೆ

ಹರಡಲಾರೆವೇ? ಆಕೆಯ ಆಕ್ರಂದನ ಮತ್ತೆ ಕೇಳದಂತೆ ಮಾಡಬಲ್ಲೆವೇ? ಅಥವಾ ಬರೇ ದುಃಖದ ಕತೆಯನ್ನೇ ಹೇಳುವ ಸಮಾಧಿಯ ಕಲ್ಲುಗಳಿಂದಲೇ ಇದನ್ನು ತುಂಬಿಸಿಬಿಡೋಣವೇ?

ಈ ಉತ್ತರವಿಲ್ಲದ ಪ್ರಶ್ನೆಗಳ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಲೇ ಬಾಬಾ ಅಕ್ಷರಶಃ ಪುಟ್ಟ ಆನಂದವನದ ಬೀಜವನ್ನು ಬಿತ್ತಿದರು. ಸಂಗಾತಿಗಳು ಮತ್ತು ತಾಯಿಯೊಡಗೂಡಿ ತನ್ನ ಎರಡು ಕೊಠಡಿಯ ನಿವಾಸದ ಸುತ್ತಲೂ ಬಹಳ ಎಚ್ಚರಿಕೆಯಿಂದ ಆಯ್ದ ಮರಗಿಡಗಳನ್ನು ನೆಟ್ಟರು. ಅದರ ಹಿಂದೆಯೇ ತಾತ್ಕಾಲಿಕವಾದ ಒಂದು ಗುಡಿಸಲು ಇಲ್ಲಿಗೆ ಬರುತ್ತಲೇ ಇರುವ ಅತಿಥಿ ಅಭ್ಯಾಗತರಿಗಾಗಿ ನಿರ್ಮಾಣವಾಯಿತು. ಎನ್.ಬಿ.ಎ (ನರ್ಮದಾ ಬಚಾವೋ ಆಂದೋಲನ್) ಚಟುವಟಿಕೆಗಳು ಶೃಂಗಕ್ಕೆ ಏರುತ್ತಿರುವ ಪ್ರಕ್ರಿಯೆಯಲ್ಲಿ ಬಾಬಾ ಹೆಚ್ಚು ಸಮಯ ಪ್ರವಾಸದಲ್ಲಿಯೇ ಇರುತ್ತಿದ್ದರು.

ವಿರೋಧಕ್ಕೆ ಮುಖಾಮುಖಿ

ಫೆರೂಕ್ವಾ ಗುಜರಾತ್-ಮಧ್ಯಪ್ರದೇಶದ ಗಡಿಯಲ್ಲಿರುವ ಒಂದು ಹೋಬಳಿ ಕೇಂದ್ರ. ಇದು ಐತಿಹಾಸಿಕ ಚಳುವಳಿಗೆ ಯಾವ ರೀತಿಯಲ್ಲೂ ತಕ್ಕುದಾದ ಗ್ರಾಮವಾಗಿರಲಿಲ್ಲ. ಆದರೆ ಬಾಬಾರ ಬದುಕಿನಲ್ಲಿ ಇದು ಅತ್ಯಂತ ತಳಮಳದ ಗಳಿಗೆಯನ್ನು ಸೃಷ್ಟಿಸಿತು. ಇಲ್ಲಿ ಎಸ್.ಎಸ್.ಪಿ ದೆಸೆಯಿಂದಾಗಿ ಮುಳುಗಡೆಯಾಗಲಿರುವ ಪ್ರದೇಶಕ್ಕೆ ಸೇರಿದ ಸಾವಿರಾರು ಜನ ಕೈಮುಗಿದ ಭಂಗಿಯಲ್ಲಿ ಪೋಲೀಸ್ ಬ್ಯಾಂಕೇಡ್‌ನತ್ತ ಮೆರವಣಿಗೆ ಹೊರಟಿದ್ದರು. ಅವರು ಶಾಂತರೀತಿಯಲ್ಲಿ ಗುಜರಾತ್ ಪ್ರವೇಶಿಸಲು ಅನುವು ಮಾಡಿಕೊಡುವಂತೆ ಬಾಬಾ ಪೋಲೀಸರಲ್ಲಿ ಮನವಿ ಮಾಡಿಕೊಂಡರು. ಆದರೆ ಅದಕ್ಕೆ ಉತ್ತರವಾಗಿ ದೊರೆತದ್ದು ಲಾಠಿ ಚಾರ್ಜ್. ಪೋಲೀಸರ ಹಿಂದಿದ್ದ ನೂರಾರು ಮಂದಿ ಅಣೆಕಟ್ಟಿನ ಪರವಾಗಿ ಘೋಷಣೆ ಕೂಗತೊಡಗಿದರು. ಕೋಪೋದ್ರಿಕ್ತರಾದ ಬಾಬಾ ಅವರಿಗೆ 'ಗೋ ಬ್ಯಾಕ್' ಎಂದು ಕಿರುಚಿದರು.

೯೦ರ ದಶಕದ ಕೊನೆಯ ವಾರದಲ್ಲಿ ಈ ಯೋಜನೆಯಿಂದ ತೊಂದರೆಗೊಳಗಾಗುವ ಜನರು ಮಧ್ಯಪ್ರದೇಶದ ಬದವಾನಿಯಿಂದ ಅಣೆಕಟ್ಟಿನ ಸ್ಥಳದ ತನಕ ಪಾದಯಾತ್ರೆ ನಡೆಸಿದರು. ಈ ಸಂಘರ್ಷ ಯಾತ್ರೆಯನ್ನು ಗುಜರಾತ್ ಗಡಿಯಲ್ಲಿ ತಡೆಯಲಾಯಿತು. ಈ ಸಂಘರ್ಷ ಯಾತ್ರಿಗಳು ರಸ್ತೆಯ ಬದಿಯಲ್ಲಿ ಕುಳಿತರು. ಆದರೆ ಬ್ಯಾರಿಕೇಡ್‌ನ ಆ ಬದಿಯಲ್ಲಿ ಗುಜರಾತ್ ಮುಖ್ಯಮಂತ್ರಿಯ ಪತ್ನಿ ಎಸ್.ಎಸ್.ಪಿ ಪರವಾದ ಧರಣಿಯ ನೇತೃತ್ವ ವಹಿಸಿದ್ದರು.

ಹೆಚ್ಚು ಕಡಿಮೆ ಮೂರು ವಾರಗಳ ಕಾಲ ಎರಡೂ ಪಕ್ಷಗಳು ಘೋಷಣೆಗಳನ್ನು ಕೂಗುತ್ತಾ, ಪರಸ್ಪರ ದೋಷಾರೋಪಣೆ ಮಾಡುತ್ತಾ ಎದುರುಬದುರಾಗಿ ಕುಳಿತಿದ್ದವು. ಬಾಬಾ ತಮ್ಮ ವ್ಯಾನಿನೊಳಗೆ ಕುಳಿತು ಎರಡು ಪಕ್ಷಗಳ ನಡುವೆ ಅನೇಕ ರೀತಿಯಲ್ಲಿ ಸಿಲುಕಿಕೊಂಡಿದ್ದರು. ಸಂಘರ್ಷ ಇದಕ್ಕೆ ಉತ್ತರವಲ್ಲ ಎಂಬುದು ಅವರಿಗೆ ತಿಳಿದಿತ್ತು. ಬೃಹತ್ ಅಣೆಕಟ್ಟಿನಿಂದ ಆಗುವ, ಆಗಬಹುದಾದ ಅನಾಹುತಗಳ ಕುರಿತು ಪ್ರತಿ ಪಕ್ಷಗಳಿಗೆ ಮನವರಿಕೆ ಮಾಡಿಕೊಡಲು ತಾವು ಅಸಮರ್ಥರಾದುದಕ್ಕೆ ಅವರಿಗೆ ತಮ್ಮ ಬಗ್ಗೆಯೇ ಸಿಟ್ಟು ಬಂದಿತ್ತು. ಹೆಚ್ಚು ಕಡಿಮೆ

೩೦ವರ್ಷಗಳಿಂದ ಸರ್ದಾರ್ ಸರೋವರ್ ಅಣೆಕಟ್ಟು ಗುಜರಾತ್‌ನ ಭವಿಷ್ಯವನ್ನು ಬದಲಿಸುವುದೆಂದೂ, ಗುಜರಾತ್‌ನ ಭಾಗ್ಯರೇಖೆಯಾಗುವುದೆಂದೂ ತಿಳುವಳಿಕೆ ನೀಡಲಾಗಿತ್ತು. ಈ ನಂಬಿಕೆಗೆ ಮುಖಾಮುಖಿಯಾಗುವುದು ಕಷ್ಟದ ಕೆಲಸವೇ. ಬೃಹತ್ ಅಣೆಕಟ್ಟಿಗೆ ವಿರುದ್ಧವಾಗಿ ನಿಂತ ಜನರಿಗೆ, ಅದರಲ್ಲಿಯೂ ಕಿರಿಯ ಕಾರ್ಯಕರ್ತರಿಗೆ ಇದನ್ನು ವಿರೋಧಿಸಲು ತಾವು ಅನುಸರಿಸುತ್ತಿರುವ ಮಾರ್ಗದ ಕುರಿತು ಸಂದೇಹವಿತ್ತು. ಸಂಘರ್ಷ ಮಾತ್ರ ಈ ಸಮಸ್ಯೆಯನ್ನು ಪರಿಹರಿಸಬಲ್ಲದು ಎಂದು ಅವರು ನಂಬಿದ್ದರು.

ಇದು ಗುಜರಾತ್ ಮತ್ತು ಮಧ್ಯಪ್ರದೇಶದ ಜನರ ನಡುವಿನ ಯುದ್ಧವಲ್ಲ ಎಂದು ಮನವರಿಕೆ ಮಾಡಿಕೊಡಲು ಬಾಬಾ ಬಹಳ ಶ್ರಮಪಟ್ಟರು. ಉಪವಾಸ ನಿರತ ಕಾರ್ಯಕರ್ತರ ಬಗ್ಗೆ ಬಾಬಾಗೆ ಆತಂಕವಾಗುತ್ತಿತ್ತು. ಉಪವಾಸ ಮೂರು ವಾರಗಳ ನಂತರವೂ ಮುಂದುವರೆದಾಗ ದೇಶದ ಎಲ್ಲೆಡೆ ಈ ರೀತಿ ಚಿಂತಿಸುವ ಜನರಲ್ಲಿ ಆತಂಕ ಮನೆಮಾಡಿತು. ಮೇಧಾ ಪಾಟ್ಕರ್ ಅವರ ಮೂತ್ರಪಿಂಡಗಳು ನಿಷ್ಕ್ರಿಯವಾಗುತ್ತಿವೆ ಎಂಬ ವದಂತಿ ಕೂಡಾಹಬ್ಬಿತು. ಸರ್ದಾರ್ ಸರೋವರ ಯೋಜನೆಯನ್ನು ಸಮಗ್ರವಾಗಿ ಮರುಪರಿಶೀಲಿಸಲು ಆಗ್ರಹಿಸಿ ಕೇಂದ್ರ ಸರ್ಕಾರಕ್ಕೆ ಮೇಲಿಂದ ಮೇಲೆ ರಾಷ್ಟ್ರೀಯ, ಅಂತರರಾಷ್ಟ್ರೀಯ ದೂರವಾಣಿ ಕರೆಗಳು ಮತ್ತು ತಂತಿಗಳು ಬರತೊಡಗಿದವು. 'ಮರುಪರಿಶೀಲನೆಯ ಪ್ರಶ್ನೆಯೇ ಇಲ್ಲ' ಎಂದು ಗುಜರಾತಿನ ಮುಖ್ಯಮಂತ್ರಿ ಚಿಮನ್‌ಭಾಯಿ ಪಟೇಲ್ ಹೇಳಿದರು. 'ಮರುಪರಿಶೀಲನೆಯ ಆಶ್ವಾಸನೆ ದೊರೆಯುವವರೆಗೆ ಉಪವಾಸ ಮುರಿಯುವ ಪ್ರಶ್ನೆ ಇಲ್ಲ' ಎಂದು ಮೇಧಾ ತಿಳಿಸಿದರು. ಪರಿಸ್ಥಿತಿ ಬಿಗಡಾಯಿಸುತ್ತಾ ಹೋಯಿತು.

ಇವೆಲ್ಲದರ ಪರಿಣಾಮವಾಗಿ ಎನ್.ಬಿ.ಎ ಈ ಯೋಜನೆಯನ್ನು ಮರುಪರಿಶೀಲನೆಗೆ ಒಳಪಡಿಸಲು ಹೆಸರಾಂತ ತಜ್ಞರಿಂದ ಕೂಡಿದ ತಂಡವನ್ನು ಸಂಘಟಿಸಿತು. ಸುಮಾರು ತಿಂಗಳುಗಳಿಂದ ನಿಂತಿದ್ದ ಸಾವಿರಾರು ಮಂದಿ ರಾಸ್ತಾರೋಕೋ ನಿಲ್ಲಿಸಿ ದಾರಿಮಾಡಿಕೊಟ್ಟರು. ಹೀಗೆ ಉಪವಾಸ, ಮುಷ್ಕರ ನಿಲ್ಲಿಸಲಾಯಿತು. ಸರ್ಕಾರ ಮರುಪರಿಶೀಲನೆಗೆ ಆದೇಶ ನೀಡುವಂತೆ ಮಾಡುವಲ್ಲಿ ಈ ಧರಣಿ ಸೋತಿತು. ಆದರೆ ಪೂರಾ ಒಂದು ತಿಂಗಳಿನ ಚಟುವಟಿಕೆ ಕೊಲ್ಲಿಯುದ್ಧಕ್ಕಿಂತ ಕಡಿಮೆಯಾದುದೇನೂ ಆಗಿರಲಿಲ್ಲ. ಎನ್.ಬಿ.ಎ ಈ ಹೋರಾಟವನ್ನು ರಂಗದ ಮಧ್ಯಕ್ಕೆ ತಂದು ನಿಲ್ಲಿಸಿತು. ಮೇಧಾ ಈಗ ರಾಷ್ಟ್ರೀಯ ವ್ಯಕ್ತಿಯಾದರು. ಹಲವಾರು ಸಾಪ್ತಾಹಿಕ ಮತ್ತು ಮಾಸಿಕಗಳು ರಕ್ಷಾಪುಟದಲ್ಲಿ ಆಕೆಯ ಭಾವಚಿತ್ರವನ್ನು ಮುದ್ರಿಸಿ ಹೋರಾಟದ ವಿವರಗಳನ್ನು ಪ್ರಕಟಿಸಿದರು. ನಾವು ಯುದ್ಧದಲ್ಲಿ ಭಾಗಶಃ ಗೆದ್ದಿರುವೆವಾದರೂ ಯುದ್ಧದ ತರಂಗಗಳು ನಮ್ಮ ಪರ ಬೀಸಲು ಅನುವು ಮಾಡಿಕೊಟ್ಟಿದ್ದೇವೆ ಎನ್ನುವ ಸಮಾಧಾನದೊಂದಿಗೆ ಬಾಬಾ ಕಾಸರವಾಡ್‌ಗೆ ಹಿಂದಿರುಗಿದರು.

ಸಹಪಯಣಿಗನಿಗೆ ಶ್ರದ್ಧಾಂಜಲಿ

ನದಿಯಲ್ಲಿ ಮೊದಲ ಅಲೆ ಅಗ ತಾನೇ ಎದ್ದಿರಬಹುದು. ಅಷ್ಟರಲ್ಲೇ ಭಯಂಕರ ಹೊಡೆತ ಬಂದು ಬಿತ್ತು. ಬದವಾನಿಯಿಂದ ಧಾವಿಸಿ ಬಂದವರೊಬ್ಬರು ಶಂಕರ್ ಗುಹಾ

ನಿಯೋಗಿಯನ್ನು ಗುಂಡಿಟ್ಟು ಕೊಲ್ಲಲಾಗಿದೆ ಎಂಬ ಸುದ್ದಿಯನ್ನು ತಂದರು. ದುಃಖ ಮತ್ತು ಕೋಪದಿಂದ ಕೂಡಿದ ಬಾಬಾ ತೀವ್ರವಾದ ಆಘಾತಕ್ಕೊಳಗಾಗಿ ಕಾಸರವಾಡ್‌ನ ಮನೆಯ ಸುತ್ತ ಶತಪಥ ನಡೆಯತೊಡಗಿದರು. ಆರೋಗ್ಯ ಚೆನ್ನಾಗಿದ್ದು, ಸಣ್ಣ ವಯಸ್ಸಿನವರಾಗಿದ್ದಲ್ಲಿ ಬಾಬಾ ಸಾವಿರಾರು ಮಂದಿಯ ಜತೆ ಡೆಲ್ಲಿ ರಾಜಹರಾದಲ್ಲಿ ಇರುತ್ತಿದ್ದರು. ನಿಯೋಗಿಯನ್ನು ಬಾಬಾ ಕಂಡದ್ದು ಒಂದೇ ಸಲ. ಆದರೆ ಅಪೂರ್ವವೆನಿಸುವ ಈ ಕಾರ್ಮಿಕ ನಾಯಕನ ಬದುಕು ಮತ್ತು ಆತನ ಕೆಲಸವನ್ನು ಇವರು ಮೆಚ್ಚಿಕೊಂಡಿದ್ದರು. ಈಗ ನಿಯೋಗಿ ಇನ್ನೂ ಹತ್ತಿರವಾದರು. ತನ್ನ ಬದುಕು ಗಂಡಾಂತರದಲ್ಲಿ ಇದೆ ಎಂದರಿತೂ ಆಯುಧದೊಂದಿಗೆ ಓಡಾಡಲು ಬಯಸಲಿಲ್ಲ. ರಕ್ಷಣಾ ವ್ಯವಸ್ಥೆಯನ್ನೂ ಬೇಡಲಿಲ್ಲ.

ಇದಾದ ನಾಲ್ಕು ದಿವಸಗಳ ನಂತರ, ಗಾಂಧಿ ಜಯಂತಿಯ ದಿನ ಬಾಬಾ ಛತ್ತೀಸ್‌ಗರ್‌ನ ಮುಕ್ತಿ ಮೋರ್ಚಾ ಸಂಗಾತಿಗಳಿಗೆ ಪತ್ರವೊಂದನ್ನು ಬರೆದರು. ನಿಯೋಗಿ ಈ ಗುಂಪಿನ ನಾಯಕರಾಗಿದ್ದರು.

ಇದು ಮೋಸದ ಕೊಲೆ
ಎಲ್ಲರನೂ ದಂಗು ಬಡಿಸಿದ ಕೃತ್ಯವಿದು
ಈ ಕೊಲೆ ನಮ್ಮ ನಾಗರಿಕತೆಯನ್ನು ಅಣಕಿಸೀತು
ಈ ನಾಗರಿಕತೆ ಒಂದು ಹಂತಕ್ಕೆ ಬರಲು
ಶತಮಾನಗಳೇ ಬೇಕಾಗಬಹುದು
ಆದರೆ ಇದು ಎವೆ ಇಕ್ಕುವುದರೊಳಗೆ
ಅನಾಗರಿಕ ಕ್ರೌರ್ಯಕ್ಕೆ ನುಸುಳಬಲ್ಲುದು
ಸಮತೆಯ ಸಮಾಜವನ್ನು ಇಷ್ಟಪಡದ ಜನರು
ಈತನನ್ನು ಕ್ರೌರ್ಯದಿಂದ ಅಣಕಿಸಿದರು

ಅವನ ರಕ್ತಕ್ಕೆ ಕಾತರಗೊಂಡವರು
ಇಂದು ಆತನನ್ನು ಹುತಾತ್ಮ ಎನ್ನುತ್ತಿದ್ದಾರೆ

ಶಂಕರ್ ಗುಹಾ ನಿಯೋಗಿ ಎಂಬ ಭದ್ರಕೋಟೆ
ಹೇಡಿಗಳಿಗೆ ಬಲಿಯಾಯಿತು

ದೇವರ ಸ್ಫೂರ್ತ ಮುಖವಾಣಿ ಈತ ಎನ್ನಿ
ಈತ ಮಹಾ ತಲ್ಲಣಗಳನ್ನು ಸಹಿಸಬಲ್ಲವನಾಗಿದ್ದ
ಧೈರ್ಯ ಮತ್ತು ಸಿದ್ಧಾಂತ

ಈತನ ಮಾಂಸ ಮತ್ತು ಮೂಳೆ
ಅಚ್ಚರಿ ಮೂಡಿಸುವ ಸೂಕ್ಷ್ಮ ಸಂವೇದನೆಯ
ಇಂಥ ಇನ್ನೊಬ್ಬನನ್ನು ನಾನು ಕಂಡಿಲ್ಲ

ಅನುಕಂಪದಿಂದ ತುಂಬಿದವ
ಧೈರ್ಯಶಾಲಿ, ಬುದ್ಧಿವಂತ
ತಾನು ಯಾರು ಎಂಬುದನ್ನು ಜನರಿಗೆ ತೋರಿಸಿಕೊಟ್ಟ
ಎಲ್ಲಿ ಹೇಗೆ ಸಮರ ಸಾರಬೇಕೆಂಬ ನಕಾಶೆ ಬಿಡಿಸಿ
ಅವರಿಗೆ ತಿಳಿಸಿ ಹೇಳಿದ

ಕಾರ್ಮಿಕರಿಗೆ ಬಿಡುಗಡೆ ಮತ್ತು ನ್ಯಾಯದ
ರುಚಿ ಹಿಡಿಸಿದ
ತನ್ನಲ್ಲಿ ಅಂತರ್ಗತವಾದ ಗುರಿಗೆ
ಪ್ರಾಮಾಣಿಕವಾಗಿ, ಪೂರ್ಣವಾಗಿ ತನ್ನನ್ನೇ ತೆತ್ತ
ಎಂದೂ ಬಾಗದ ದೃಢ ನಿಶ್ಚಯ ಇವನದು
ಶಕ್ತಿಯಿಂದ ಗೆದ್ದೇನೆಂಬ ಸೈನಿಕನ ಸಹಜ ಛಲ
ಅಧಿಕಾರಸ್ಥರನ್ನು ಪರದಾಡಿಸಿತು

ಅವರ ತೀರ್ಪು ಯಾವುದೆಂದು
ಇವನಿಗೆ ಗೊತ್ತು
ಅದನ್ನು ಮುನ್ನವೇ ತಿಳಿದವನೇ
ತನ್ನ ಸಂಗಾತಿಗಳಿಗೆ
ಸರಿಯಾದ ದಿಕ್ಕು ತೋರಿಸಿ
ಶಕ್ತಿಶಾಲಿ ಸಂಘಟನೆ ಕಟ್ಟಿದ
ಅವನಿಗಿತ್ತು ಓಟಗಾರನ ಸಮಯ ಪ್ರಜ್ಞೆ
ಜನರನ್ನು ಒಲಿಸುವ ಕೌಶಲ !
ಇವೆಲ್ಲಕ್ಕಿಂತ ಮಿಗಿಲು
ಈ ಸನ್ನಡತೆಯವನ ಸಮತೂಕ
ಈತ ನಂಬುಗೆಯಲ್ಲಿ ಮಾರ್ಕ್ಸಿಸ್ಟ್

ಸೋಲಬಲ್ಲ, ಕರಗಬಲ್ಲ
ರಾಜಕಾರಣಿ ಮಾರ್ಕ್ಸ್‌ನನ್ನು ಹಿಂದೆ ತಳ್ಳಿದ ಇವನು
ಹಿಡಿದದ್ದು ಕೇವಲ ಮನುಷ್ಯ ಮಾರ್ಕ್ಸ್‌ನನ್ನು
ಏನನ್ನೂ ಮುಚ್ಚಿಟ್ಟವನಲ್ಲ
ಸ್ಫಟಿಕ–ಶುಭ್ರ ಶಂಕರ ಗುಹಾ ನಿಯೋಗಿ
ಈ ಧರ್ಮ ಯುದ್ಧದಲ್ಲಿ
ಭವಿತವ್ಯವ ನೆನದು ನಿಯೋಗಿ
ಆನಂದ ಪಡೆದ
ಸುತ್ತಮುತ್ತಲೂ ಯುದ್ಧ ಮುತ್ತಿರಲು
ಸನ್ನಡತೆಯ ಎಲ್ಲ ನಾಗರಿಕರು
ಎಲ್ಲರ ಒಳಿತಿಗಾಗಿ, ಸರ್ವೋದಯಕ್ಕಾಗಿ
ನಿಯೋಗಿ ತೋರಿದ ಪಥದಲ್ಲಿ
ಕೈಕೈ ಹಿಡಿದು ಸಾಗಬೇಕು

ಪ್ರತಿ ಪಕ್ಷದವರ ಮೇಲೆ ಕರುಣೆ ತೋರಬೇಕು
ನಿಯೋಗಿಯ ಕೊಂದ ಹೇಯತೆಗಿಂತ
ಇದು ಹೆಚ್ಚು ಪರಿಣಾಮಕಾರಿ
ಓ ಮಹಾನ್ ಅಪಮಾನವೇ!
ಗಾಂಧಿಯ ನಾಡಲ್ಲಿ ಇಂಥ ಸಂಗಾತಿಗಳ ರಕ್ತ ತರ್ಪಣ
ರಕ್ತದಾಹಿಗಳು ಮಾಫಿಯಾ ಕೈಗಾರಿಕಾಕೋರರು
ಘುಡಾರಿಗಳು, ಇದನ್ನು ವಿರೋಧಿಸುವವರು
ಹೊಡೆ, ಬಡಿ, ಕೊಲ್ಲು ಎಂದು ಅರಚುತ್ತಿದ್ದಾರೆ
ಛತ್ತೀಸ್‌ಗರ್‌ನಲ್ಲಿ ಮತ್ತು ಈ ನರ್ಮದಾ ಕಣಿವೆಯಲ್ಲೂ
ನರ್ಮದೆಯ ತೀರದಲ್ಲಿ
ಕೊನೆಯ ನಿಟ್ಟುಸಿರು, ಪಿಸುಮಾತಿದು
ನಾಗರಿಕತೆ ನಾಗರಿಕತೆಯನ್ನು
ನ್ಯಾಯ ನ್ಯಾಯವನ್ನು ಸ್ವಾಗತಿಸುತ್ತದೆ
ನಿಯೋಗಿಗಳಂತಹವರು ಸಾಯುವುದಿಲ್ಲ

ಕೇಡಿಗೆ ತುತ್ತಾಗುತ್ತಾರೆ
ಇದಕ್ಕೆ ಕಾರಣ ಹುಡುಕಿ ಪರಿಹರಿಸುವುದು
ಅವರಿಗೆ ನೀಡುವ ಶ್ರದ್ಧಾಂಜಲಿ
ಸಂಘರ್ಷ ಕೊನಚುಗೊಳಿಸಲು,
ದಿಗಂತ ವಿಸ್ತರಿಸಲು
ವಿರಾಮವಿಲ್ಲದೇ,
ದುಡಿಯಬೇಕು
ಲೂಥರ್ ಹೇಳಿದಂತೆ,
ಇಲ್ಲ, ನಾನೇ ನಾಶವಾದೇನು
ಸಚ್ಚಿದಾನಂದದ ತೊಡೆಯಲ್ಲಿ ತಲೆ ಇರಿಸಿರುವ
ಈ ಸಂಗಾತಿಗೆ
ನರ್ಮದೆಯ ಕಣ್ಣಿಂದ ಇಳಿಯದ ಕಣ್ಣ ಹನಿ
ಮೌನ ಶ್ರದ್ಧಾಂಜಲಿ.

ನಿಯೋಗಿಯ ಜೀವಂತ ನಿದರ್ಶನ, ಬಾಬಾರಲ್ಲಿ ಕ್ರಾಂತಿಯ ಬಗೆಗಿನ ವಿಶ್ವಾಸವನ್ನು ಬಲಪಡಿಸಿತು. ರೇವಾಮಯ್ಯ ಬಳಿಯ ಶಾಂತಿಯೇ ಕ್ರಾಂತಿ ಬಳಿಕದ ಸ್ಥಿತಿ ಎಂದುಕೊಂಡರು. ಬಾಬಾ ಕಾಸರವಾಡ್‌ಗೆ ಬಂದ ಸಮಯದಲ್ಲಿ ಬರ್ಲಿನ್ ಗೋಡೆ ಬಿದ್ದಿತು. ಅದು ಕಮ್ಯುನಿಸಂನ ಕೊನೆಯನ್ನು ಸಂಕೇತಿಸುತ್ತಿತ್ತು. (ಈ ಘಟನೆ ಕಮ್ಯುನಿಸಂನ ಸೈದ್ಧಾಂತಿಕ ಇತಿಹಾಸದಲ್ಲಿ ಒಂದು ತಿರುವು ಎಂದು ಪರಿಗಣಿತವಾಗಿದೆ). 'ಪ್ರತಿ ಕ್ರಾಂತಿಯೂ ಅದರ ಮಕ್ಕಳನ್ನು ಬಲಿ ತೆಗದುಕೊಳ್ಳುತ್ತದೆ' ಎಂದು ಗಾಂಧಿ ಮತ್ತು ಟಾಗೋರರಿಂದ ತಾನು ತನ್ನ ತಾರುಣ್ಯದಲ್ಲಿ ಕಲಿತ ಪಾಠವನ್ನು ಪ್ರಾಯಶಃ ಈಗ ಒಪ್ಪಬಹುದು ಎಂದು ಬಾಬಾಗೆ ಅನಿಸಿತು.

ನಾಳೆಯ ಗಿಲೋಟಿನ್ನಿನ ಬ್ಲೇಡು ನಿನ್ನದೇ ರಕ್ತದಿಂದ ತೋಯುವ ಅಪಾಯ ಇದೆ. ನಿಜವಾದ ಕ್ರಾಂತಿ ಎಂದೂ ವಿನಾಕಾರಿಯಲ್ಲ; ಅದು ರಚನಾತ್ಮಕವಾದುದು. ಅದರ ಮುಖ ರಕ್ತದಿಂದ ತೊಯ್ದಿರುವುದಿಲ್ಲ, ಬೆವರಿನಿಂದ ಮುಚ್ಚಿರುತ್ತದೆ. ಇದಕ್ಕೆ ವಿರುದ್ಧವಾದ ಘೋಷಣೆಗಳು ಬಲಯುತ ಎನಿಸಬಹುದು. ಆದರೆ ಅವು ಅಲ್ಪಾಯುಸ್ಸಿನವು. ರಚನಾತ್ಮಕ ಆಂದೋಲನಗಳು ಬಹಳ ದುರ್ಬಲ ಎಂದೆನಿಸಿದರೂ ಅವು ಬಹುಕಾಲ ಜೀವಂತವಾಗಿರುತ್ತವೆ.

ನಾಳಿನ ನಾಯಕರು

ಇದನ್ನು ಹೇಳುವುದಕ್ಕೆ ಸುಲಭವಾದರೂ ಮಾಡುವುದು ಬಹಳ ಕಷ್ಟ. ಈಗ ಬಾಬಾ ಸುತ್ತ ರಾಜಕೀಯ ಕಾರ್ಯಕರ್ತರ ಹೊಸ ಪೀಳಿಗೆಯೊಂದು ರೂಪುಗೊಳ್ಳುತ್ತಿತ್ತು. ಇವರಲ್ಲಿ

ರಚನಾತ್ಮಕ ಕಾರ್ಯ ಮತ್ತು ನೇರವಾಗಿ ವ್ಯವಸ್ಥೆಯ ಬುಡಕ್ಕೇ ಕೊಡಲಿ ಇಡುವ ಸಂಘರ್ಷ ಇವುಗಳ ನಡುವಣ ಆಯ್ಕೆಯ ಗೊಂದಲ ಮನಮಾಡಿತ್ತು. ಎಲ್ಲ ಕಿರಿಯ ಕಾರ್ಯಕರ್ತರು ಬಾಬಾಗೆ ಗೌರವ ಮತ್ತು ಪ್ರೀತಿ ತೋರುತ್ತಿದ್ದರೂ ಕೆಲವರಲ್ಲಿ ಅನುಮಾನಗಳೂ ಮನೆಮಾಡಿರುವುದು ಬಾಬಾರ ಗುರುತಿಸದೇ ಇರಲಿಲ್ಲ. ಕುಷ್ಠ ರೋಗಿಗಳನ್ನು ಗುಣಮುಖರನ್ನಾಗಿಸಿದ ಬಾಬಾರ ಚೈತನ್ಯ ಸರ್ದಾರ್ ಸರೋವರ್ ಅಣೆಕಟ್ಟನ್ನು ತಡೆಯುವಲ್ಲಿ ಸಫಲವಾಗಿದ್ದರೆ, ಭಾರತದೆಲ್ಲೆಡೆ ವ್ಯಾಪಿಸಿರುವ ಆರ್ಥಿಕ ತಾರತಮ್ಯವನ್ನು ತೊಡೆದು ಹಾಕುವಂತಿದ್ದರೆ ಎಂದು ಈ ಸಂದೇಹವಾದಿಗಳಿಗೆ ಅನಿಸಿತ್ತು.

ಈ ಎಲ್ಲ ಅನುಮಾನ ಮತ್ತು ಟೀಕೆಗಳ ನಡುವೆಯೂ ಬಾಬಾ ತಮ್ಮ ಕಿರಿಯ ಸಹೋದ್ಯೋಗಿಗಳಿಗೆ ತಿಳಿಹೇಳುವುದನ್ನು ಮುಂದುವರೆಸಿದರು.

ನಿಮ್ಮ ಆದರ್ಶಗಳನ್ನು ಬಿಡಬೇಡಿ. ವೇದಿಕೆಯ ಮೇಲೆ ಮಾತನಾಡಿದರಷ್ಟೆ ಸಾಲದು. ಸಮುದಾಯಗಳನ್ನು ಒಗ್ಗೂಡಿಸುವ ಆದರ್ಶಗಳು ಹೆಚ್ಚು ಬಲಯುತವಾದವು. ಅದರ ಶಕ್ತಿ ಲೌಕಿಕ ಲಾಭಕ್ಕಿಂತ ಬಲಯುತ ಅಷ್ಟೇ ಅಲ್ಲ, ಇವು ಸಂಪತ್ತನ್ನು ಸೃಷ್ಟಿಸುವ ಉತ್ಪಾದಕ ಶಕ್ತಿಯನ್ನೂ ಹೊಂದಿವೆ. ಮಾಲಿಕತ್ವದ ಕತ್ತು ಹಿಚುಕುವುದರಿಂದ ಕ್ರಾಂತಿಯ ಪರೀಕ್ಷೆ ನಡೆಸಲಾಗುವುದಿಲ್ಲ. ಕೆಲಸಗಾರರು ಹೆಚ್ಚು ಕ್ರಿಯಾಶೀಲರಾಗಲು ನಿರ್ಣಯ ತೆಗೆದುಕೊಳ್ಳುವಲ್ಲಿ ಅವರ ಭಾಗವಹಿಸುವಿಕೆ ಇರಬೇಕು. ಸಮುದಾಯದ ಮಾಲಿಕತ್ವ ಇದರ ಗುರಿ.

...ಯುದ್ಧಘೋಷಣೆ ಮಾವೋ ಮತ್ತು ಮಾರ್ಕ್ಸ್‌ರದ್ದಲ್ಲ. ಸೇಡಿನ ಮನೋಧರ್ಮ ಹೊಸ ಜಗತ್ತನ್ನು ಸೃಷ್ಟಿಸಲಾರದು. ಮನುಷ್ಯನ ಘನತೆಯನ್ನು ಹೆಚ್ಚಿಸುವ ಕ್ರಾಂತಿ ಮಾತ್ರ ಉನ್ನತವಾದ ಹಾಗೂ ಉತ್ತಮ ಗುಣಮಟ್ಟದ ಜೀವನವನ್ನು ಕೊಡಬಲ್ಲದು. ದ್ವೇಷ ಮತ್ತು ಹಿಂಸೆಯಿಂದ ಪ್ರೇರಿತವಾದ ಕ್ರಾಂತಿ ಪರಿಸರದಲ್ಲಿ ಮಹತ್ತರ ಬದಲಾವಣೆಯನ್ನೇನೂ ತರಲಾರದು. ಇಲ್ಲಿಯವರೆಗೆ ಶೋಷಿತರಾದವರು ಮತ್ತೆ ಶೋಷಕರಾಗಿ ಹುಟ್ಟುತ್ತಾರೆ. ದ್ವೇಷ ಮತ್ತು ಶೋಷಣೆ ಮುಂದುವರೆಯುತ್ತದೆ. ಆದುದರಿಂದ ಗಾಂಧಿಯವರ ಹಾದಿಯಿಂದ ಬಡ, ದುರ್ಬಲ ಸಮುದಾಯವನ್ನು ಸೃಜನಶೀಲ ಪ್ರಜ್ಞಾವಂತರನ್ನಾಗಿ ಮಾಡಬೇಕಲ್ಲದೆ, ಅದಕ್ಕೆ ಪರ್ಯಾಯ ಮಾರ್ಗಗಳಿಲ್ಲ.

ಸೋಮನಾಥದ ಎರಡೂವರೆ ದಶಕದ ಅನುಭವ ಬಾಬಾರಲ್ಲಿ ಈ ವಿಶ್ವಾಸವನ್ನು ಹುಟ್ಟಿಸಿತು.

ಭಾರತದಲ್ಲಿ ಹೊಸ ನಾಯಕತ್ವ ಸದ್ದಿಲ್ಲದೆ ರೂಪುಗೊಳ್ಳುತ್ತಿದೆ. ಜನರ ನಡುವಿನ ಶಕ್ತಿಯ ಹಲವಾರು ಕೇಂದ್ರಸ್ಥಾನಗಳು ಚಲನಶೀಲತೆಯನ್ನು ಪಡೆಯುತ್ತಿವೆ. ತಲೆಯೆತ್ತುತ್ತಿರುವ ಈ ಜನಾಂಗ ಆತ್ಮವನ್ನು ಕಳೆದುಕೊಂಡಿದೆ ಎಂದೋ ಇದಕ್ಕೆ ಆಧಾರವೇ ಇಲ್ಲ ಎಂದೋ ಅನಿಸಬಹುದು. ಆದರೆ ಒಂದಲ್ಲ ಒಂದು ದಿನ ಅದು ಅದರ ನಾಯಕನನ್ನೂ, ಪ್ರವಾ[illegible] ಆಯ್ದುಕೊಳ್ಳುತ್ತದೆ. ಹೊಸ ನಾಯಕತ್ವದ ಫೀನಿಕ್ಸ್ ತನ್ನ ಸೋಲುಗಳ ಬೂದಿಯಿಂದ

ಮೇಲೇಳುತ್ತಿರುವ ಬಗ್ಗೆ ನನಗೆ ಪೂರ್ಣ ನಂಬಿಕೆ ಇದೆ. ಈ ಪಕ್ಷಿಯ ಕೊಕ್ಕಿನಲ್ಲಿ ,ಮಿಂಚು ಇರುವುದನ್ನೂ, ಅದರ ರೆಕ್ಕೆಯಲ್ಲಿ ಬಿರುಗಾಳಿ ಇರುವುದನ್ನೂ ಪ್ರಪಂಚ ಕಾಣುತ್ತದೆ.

ಮಿಡಿದ ಕ್ರಿಸ್ತನ ತಂತಿ

ಈ ಪರಿಕಲ್ಪನೆ ಮತ್ತು ಇದಕ್ಕೆ ಸಂಬಂಧಿಸಿದ ಕೆಲಸಗಳಿಂದ ಬಾಬಾ ಅಭಿಮಾನಿಗಳು ಹೆಚ್ಚಿದರು. ಆದರೆ ಅವರನ್ನು ಮೆಚ್ಚುವ ಅನೇಕರು, ಬೆಂಬಲಿಗರು ಬಾಬಾ ಮಾನವೀಯ ಕಾರ್ಯಗಳನ್ನು ಬಿಟ್ಟು ವ್ಯವಸ್ಥೆಯನ್ನು ಪಲ್ಲಟಿಸುವ ರಾಜಕಾರಣವನ್ನು ಕೈಗೆತ್ತಿಕೊಂಡುದಕ್ಕೆ ಗಾಬರಿಗೊಳಗಾದರು. ಸರ್ದಾರ್ ಸರೋವರ್ ಯೋಜನೆಯ ವಿರೋಧ ಮತ್ತು ಕಾಸರವಾಡ್‌ಗೆ ಸ್ಥಳಾಂತರಗೊಂಡ ಅವರ ನಿರ್ಧಾರವನ್ನು ಭಾವಾತಿರೇಕದಿಂದ ಕೈಗೊಂಡ ನಿರ್ಧಾರ ಎಂದು ಹಾಸ್ಯ ಮಾಡಿದರು. ೧೯೯೨ರಲ್ಲಿ ಎನ್.ಬಿ.ಎ ಚಟುವಟಿಕೆ ಅದರ ಶೃಂಗ ತಲುಪಿದಾಗ ಅವರ ತಾಳ್ಮೆ ಮತ್ತು ಮನಸ್ಥೈರ್ಯಗಳು ತೀವ್ರ ಪರೀಕ್ಷೆಗೆ ಒಳಗಾದವು. ಬಾಬಾ ಆಮ್ಟೆ ಸ್ಥಾಪಿಸಿದಂತೆ, ಮಧ್ಯ ಪ್ರದೇಶದ ಪೊಲೀಸರು ಕಂಡಲ್ಲಿ ಅರಚುವ ತಂತ್ರವನ್ನು ಆರಂಭಿಸಿದಾಗ ಇದು ಅನುಭವಕ್ಕೆ ಬಂದಿತು. ಪೊಲೀಸರು ಇವರ ಮನೆಯ ಮುಂದೆ ಟೆಂಟ್ ಹಾಕಿ, ಹಲವಾರು ರೀತಿಯ ಗದ್ದಲಗಳನ್ನು ಮಾಡಿದರು ಮತ್ತು ದಿನವಿಡೀ ಧ್ವನಿವರ್ಧಕಗಳ ಮೂಲಕ ಬೈಗುಳಗಳ ಸುರಿಮಳೆಗರೆದರು.

ಇದಾದ ನಂತರ ೧೯೯೨ ಡಿಸೆಂಬರ್‌ನಲ್ಲಿ ಅಯೋಧ್ಯೆಯಲ್ಲಿ ಬಾಬರಿ ಮಸೀದಿಯ ಧ್ವಂಸ ಮತ್ತು ಅದರ ಹಿಂದೆಯೇ ಕೋಮು ಹಿಂಸೆ ಬಾಬಾರನ್ನು ಕದಡಿತು. ಬಾಬಾ ಮತ್ತು ತಾಯಿ ಸೂರತ್‌ನತ್ತ ಧಾವಿಸಿದರು. ಅಲ್ಲಿ ಅತ್ಯಂತ ಅನಾಗರಿಕವಾಗಿ ಹಿಂಸೆ ತಾಂಡವವಾಡುತ್ತಿತ್ತು. ಇವರು ವ್ಯಾನಿನಲ್ಲಿ ಸೂರತ್ತಿನ ಮೊಹಲ್ಲಗಳಿಗೆ ತೆರಳಿದಾಗ ಜನ ಸ್ವಾಗತಿಸಿದರು. ಎಸ್.ಎಸ್.ಪಿಯ ಭಿನ್ನಾಭಿಪ್ರಾಯ ಈ ಕ್ಷಣದಲ್ಲಿ ಮುಖ್ಯವಾಗಲಿಲ್ಲ. ಕೆಲವು ವಾರಗಳ ಬಳಿಕ ಮುಂಬೈ ಸತತ ಮತೀಯ ಹಿಂಸೆಯಿಂದ ನರಳುತ್ತಿದ್ದಾಗ ಬಾಬಾ ಮತ್ತು ತಾಯಿ ತೀರಾ ತೊಂದರೆಗೊಳಗಾದ ಬೆಹ್ರಾಂಪದ ಎಂಬ ಸ್ಥಳಕ್ಕೆ ತೆರಳಿ ಅಲ್ಲಿ ನೆಲಸಿದರು. ಹೊತ್ತಿ ಉರಿಯುತ್ತಿದ್ದ ಮನೆಗಳ ಬೆಂಕಿ ಆರಿಸಲು ಸಾಗುತ್ತಿದ್ದ ಅಗ್ನಿಶಾಮಕ ವಾಹನವನ್ನು ಶಿವಸೇನಾ ಕಾರ್ಯಕರ್ತರು ತಡೆದಾಗ ಅಲ್ಲಿಗೋಡಿ, ಬಾಬಾ ಇದನ್ನು ವಿರೋಧಿಸಿದರು. ಗಲಭೆಗಳನ್ನು ನಿಲ್ಲಿಸಲು ಸಾಧ್ಯವಾಗದೇ ಹೋದರೂ ಕೊನೆಪಕ್ಷ ಅಲ್ಲಿನ ಜನರ ಸಂಕಟಗಳಿಗಾದರೂ ಸ್ಪಂದಿಸಲು ಸಾಧ್ಯವಾಯಿತು. ಇದನ್ನೆಲ್ಲ ಕಂಡ ಬಾಬಾ ಮ್ಲಾನರಾಗಿ ಕಾಸರವಾಡ್‌ಗೆ ಹಿಂದಿರುಗಿದರು.

ಈ ಅನುಭವಗಳಿಂದಾಗಿ ಬಾಬಾ ಕ್ರಿಸ್ತನಿಗೆ ಇನ್ನೂ ಹತ್ತಿರವಾದರು. ರೋಮನ್ ಸೈನಿಕ ಕ್ರಿಸ್ತನನ್ನು ತಿವಿದು, ಶಿಲುಬೆಯೆಡೆ ಸೆಳೆದಾಗ ಆತನ ಕೈಯಿಂದ ಉರುಳಿದ ಲ್ಯೂಟ್‌ನ ನಾದ ಅವರ ಕಿವಿಯಲ್ಲಿ ಗುಂಯ್‌ಗುಡುತ್ತಿತ್ತು.

'ನೀನು ಯಾವ ಶಿಲುಬೆಯೇರಿ ಕೊನೆಯ ಉಸಿರು ಬಿಟ್ಟೆಯೋ ಅದು ನನಗೆ ನಿನ್ನ ಬದುಕು ಕೊನೆಗೊಂಡುದರ ಸಂಕೇತವಲ್ಲ. ಅದರಲ್ಲಿ ನಾನು ಬದುಕಿಗೆ ಮೌಲ್ಯವನ್ನು ಕೊಡಬಲ್ಲ ಎಲ್ಲ ಅಂಶಗಳ ಮೊತ್ತವನ್ನು ನೋಡುತ್ತಿದ್ದೇನೆ. ನನ್ನ ಪಾಲಿಗೆ ಅದು ನಿನ್ನ ಮೇಲೆ ಪ್ರಯೋಗಿಸಲಾದ ಹಿಂಸೆಯ ಸಂಕೇತವಲ್ಲ. ಅದು ನನಗೆ ದಯೆಯ ದನಿಯಾಗಿ ತೋರುತ್ತದೆ'.

ಶಿಲುಬೆ ಬದುಕಿನ ಬಗೆಗಿರುವ ಪ್ರೀತಿಯನ್ನು ಪ್ರೀತಿಯ ಬದುಕಿಗಾಗಿ ತ್ಯಜಿಸುವಂತೆ ಹೇಳುತ್ತದೆ. ಎಲ್ಲಿ ಭಯವಿರುವುದೋ ಅಲ್ಲಿ ಪ್ರೀತಿ ಇರುವುದಿಲ್ಲ. ಈ ಭಯವೆಂಬ ಬೆದರುಬೊಂಬೆ ಪ್ರಜ್ಞೆಯನ್ನು ಆಳಲು ಬಿಡಬಾರದು. ಎಲ್ಲರೂ ಈ ಶಿಲುಬೆಯ ನೆರಳಿನಲ್ಲಿ ಹಾದುಹೋಗುವುದನ್ನು ಕಲಿಯಬೇಕು. ಈ ಶಿಲುಬೆಯ ಭಾರ ಹೊರುತ್ತೇನೆ ಎಂಬ ಧಾರ್ಷ್ಟ್ಯ ನನಗಿಲ್ಲ. ಆದರೆ ಅದರ ನೆರಳಲ್ಲಿ ನಡೆಯಲು ಯತ್ನಿಸುತ್ತೇನೆ. ಶಿಲುಬೆಯ ಮೇಲೆ ಮೊಳೆ ಹೊಡೆದ ಕ್ರಿಸ್ತನ ಪ್ರತಿಮೆಯಂತಾಗಬೇಕು ನಮ್ಮ ಬದುಕು. ಪ್ರತಿಯೊಂದು ಅವಘಡವೂ ಒಂದು ಶಿಲುಬೆಗೇರಿಸುವ ಪ್ರಕ್ರಿಯೆಯೇ. ನಿಮ್ಮ ಬಯಕೆಗಳನ್ನು, ಕಾಮನೆಗಳನ್ನು ಬಲಿಕೊಡಬೇಕು. ಇವೆಲ್ಲವೂ ಸಣ್ಣ ಸಣ್ಣ ಪಾಠಗಳು.

ನಾವು ಸಾಮಾನ್ಯ ಮನುಷ್ಯರು. ನಮ್ಮ ಮಕ್ಕಳಿಗಾಗಿ ತ್ಯಾಗ ಮಾಡುತ್ತೇವೆ. ಆದರೆ ಕ್ರಿಸ್ತ ನಾಳಿನ ಪ್ರಪಂಚದ ಎಲ್ಲರಿಗಾಗಿ ತ್ಯಾಗ ಮಾಡಿದ. ಕೊಳೆಗೇರಿಯ ನಿವಾಸಿಗಳನ್ನು, ಅವರ ಹಸಿವು, ಬಡತನವನ್ನು ಕಂಡಾಗಲೆಲ್ಲ ನನಗೆ ಹೀಗೇ ಕ್ರಿಸ್ತನನನು ಶಿಲುಬೆಗೇರಿಸಿದ್ದು ಎಂದೆನಿಸುತ್ತದೆ. ವ್ರಣಗಳ ದುರ್ವಾಸನೆಯಿಂದ ತುಂಬಿದ ಕುಷ್ಠರೋಗಿಯನ್ನು ಕಂಡಾ ಕ್ರಿಸ್ತನನ್ನು ಕಂಡಂತೆ ಆಗುತ್ತದೆ. ಈ ಕ್ರಿಸ್ತ ಅವರ ಬಗ್ಗೆ ಗಮನ ಹರಿಸಿದ, ಅವರನ್ನು ಸ್ಪರ್ಶಿಸಿದ. ಆ ಹಸ್ತ ನನ್ನ ಸಂಕೇತ. ಅತ್ಯಂತ ಒಂಟಿ ಮತ್ತು ತಳಮಟ್ಟದ ಮನುಷ್ಯನ ನೆರವಿಗೆ ಧಾವಿಸಿದ ಹಸ್ತ ಅದು. ಪ್ರಪಂಚದ ಕತ್ತಲಿಗೆ ಬೆಳಕು ಕೊಡುವವನು ಮಾತ್ರವಲ್ಲ, ತನ್ನ ಹೃದಯದ ಕತ್ತಲನ್ನು ಬೆಳಗಿಸಿಕೊಳ್ಳುವವನೇ ನಿಜವಾದ ಕ್ರೈಸ್ತ.

ಇದರ ಅರ್ಥ ಒಂದು ನಿಯತ ಉದ್ದೇಶಕ್ಕಾಗಿ ಬದುಕುವುದು ಮತ್ತು ಕೆಲಸ ಮಾಡುವುದು; ಅದಕ್ಕಾಗಿ ಸಾಯುವುದು ಅಲ್ಲ. ಬಾಬಾ ಹೀಗೆ ಕೆಲಸದಲ್ಲಿ ಶ್ರದ್ಧೆ ಹೊಂದಿದ್ದರು. 'ನಾನಾಗೇ ಸುಳಿಗೆ ಸಿಲುಕುವುದಿಲ್ಲ. ಒಂದೊಮ್ಮೆ ಅದು ನನ್ನತ್ತ ಧಾವಿಸಿದಾಗ ನಾನು ಒಂದಿನಿತೂ ಕದಲುವುದಿಲ್ಲ' ಎನ್ನುತ್ತಾರೆ ಬಾಬಾ.

ಈ ವರ್ಷಗಳಲ್ಲಿ ಬಹಳಷ್ಟು ಸಲ ನೀರು ೬೦ ಅಡಿಗಳಿಗಿಂತಲೂ ಮೇಲೆ ಹೋಗಿದೆ. ಅದು ಬಾಬಾ ವಾಸಿಸುತ್ತಿದ್ದ ಮನೆಯ ಬಾಗಿಲವರೆಗೂ ಬಂದಿದೆ. ೧೯೯೪ಳರಲ್ಲಿ ನೀರು ಅಪಾಯದ ಮಟ್ಟವನ್ನು ಮೀರಿದಾಗ ಬಾಬಾ ಮತ್ತು ತಾಯಿ ಸರ್ಕ್ಯೂಟ್ ಹೌಸಿಗೆ ಸ್ಥಳಾಂತರಗೊಳ್ಳುವಂತೆ ಜಿಲ್ಲಾ ಕಲೆಕ್ಟರ್ ಆದೇಶಿಸಿದರು. ಬಾಬಾ ಇದಕ್ಕೆ ಹೇಗೆ ಅನುಮತಿಸಿಯಾರು? ಬಾಬಾ ದುಃಖದಿಂದ ಕೇಳುತ್ತಾರೆ. 'ಈಗ ನಾನೇನು ಮಾಡಲಿ?'.

ಹೀಗೆ ಬಾಬಾ ಅನಿರೀಕ್ಷಿತ ದ್ವಂದ್ವಕ್ಕೆ ಸಿಲುಕಿದರು. ಅವರು ರೇವಾಮಯ್ಯಾದ ಬಳಿ ವಿಧಿ ಬರೆದಷ್ಟು ಕಾಲ ಇದ್ದು ಕಾಲ ಸಮೀಪಿಸಿದಾಗ ಈ ನದಿಯು ಪ್ರವಾಹದೊಡನೆ ಕೊಚ್ಚಿ ಹೋಗಲು ಬಯಸಿದ್ದರು. ಎರಡು ಆಸೆಗಳಿಂದಲೂ ಇವರು ವಂಚಿತರಾದರು. ನೀರು ಅಪಾಯದ ಹಂತ ತಲುಪಿದಾಗಲೆಲ್ಲ ಅಧಿಕಾರಿಗಳು ಇವರನ್ನು ಮನೆಯಿಂದ ಒಕ್ಕಲೆಬ್ಬಿಸುವುದು ನಿಶ್ಚಿತವಿತ್ತು.

ತಮ್ಮ ದೈಹಿಕ ಮಿತಿಗಳಿಂದಾಗಿ ಅವರ ಓಡಾಟಕ್ಕೆ ನಿರ್ಬಂಧಗಳು ಏರ್ಪಟ್ಟು ದೈನಂದಿನ ಅನೇಕ ಚಟುವಟಿಕೆಗಳಿಂದ ದೂರವಿರಬೇಕಾಗಿ ಬಂದುದು ಅವರನ್ನು ತ್ರಸ್ತಗೊಳಿಸಿತು. ಇವರು ಕ್ರಿಯೆಯ ಮುಂಚೂಣಿಯಲ್ಲಿ ನಿಲ್ಲುವುದು ಕಷ್ಟವಾಯಿತು. ಎನ್.ಬಿ.ಎ ಅನೇಕ ರಚನಾತ್ಮಕ ಕೆಲಸಗಳನ್ನು ಹಮ್ಮಿಕೊಂಡಿತು ಮತ್ತು ಅದೇ ಕಾಲದಲ್ಲಿ ಇತರ ಅಣೆಕಟ್ಟುಗಳ ವಿರುದ್ಧವೂ ಹೋರಾಟವನ್ನು ವಿಸ್ತರಿಸಿತು.

ಹಣದ ಕೊರತೆ ಮತ್ತು ಸುಪ್ರೀಂ ಕೋರ್ಟಿನ ತಡೆಯಾಜ್ಞೆಯಿಂದಾಗಿ ಎಸ್.ಎಸ್.ಪಿ ನಿರ್ಮಾಣ ವಿಳಂಬವಾಯಿತು. ಅಣೆಕಟ್ಟಿನ ಗೋಡೆ ಇನ್ನೂ ಹೆಚ್ಚು ಎತ್ತರಕ್ಕೆ ಹೋದಲ್ಲಿ ಕಾಸರವಾಡ್‌ನಲ್ಲಿರುವ ಬಾಬಾ ಆಮ್ಟೆಯ ವಾನಪ್ರಸ್ಥಾಶ್ರಮವೂ ಮುಳುಗುತ್ತದೆ. ಅನಂತರ 'ನೀನೆಲ್ಲಿಗೆ ಹೋಗುವೆ' ಎಂದು ಮಗ ಕೇಳುತ್ತಾನೆ. ಮುಂದೇನು? ಎಂಬ ಪ್ರಶ್ನೆಗೆ ಸಿದ್ಧ ಉತ್ತರವಿಲ್ಲ. ಈ ಅನಿಶ್ಚಿತತೆ ಬಾಬಾಗೆ ಕಿರಿಕಿರಿ ಉಂಟುಮಾಡುತ್ತದೆ. ದೇವರು ಮತ್ತು ಪ್ರಕೃತಿ ಈ ಪ್ರಶ್ನೆಗಳಿಗೆ ಪರಿಹಾರ ನೀಡಬಲ್ಲದು ಎಂದು ಅವರು ದೃಢವಾಗಿ ನಂಬುತ್ತಾರೆ.

ಕಾಸರವಾಡ್‌ನಲ್ಲಿ ಜೀವನ

ಆಲದ ಮರದ ನೆರಳು ಸುತ್ತ ಚಾಚಿಕೊಂಡಿದೆ. ಇಲ್ಲಿ 'ಜನ ಸಹಯೋಗ ಟ್ರಸ್ಟ್'ನ ಸಭೆ ನಡೆದಿದೆ. ೧೯೯೨ರಲ್ಲಿ ಎನ್.ಬಿ.ಎಗೆ ದೊರೆತ ರೈಟ್ ಲೈವ್ಲಿ ಹುಡ್ ಅಥವಾ ಪರ್ಯಾಯ ನೋಬೆಲ್ ಪ್ರಶಸ್ತಿಯ ೧೮ ಲಕ್ಷ ರೂಪಾಯಿ ಹಣದೊಂದಿಗೆ ಈ ಟ್ರಸ್ಟನ್ನು ಸ್ಥಾಪಿಸಲಾಗಿದೆ. ಇದು ಈ ಹಣದ ಬಡ್ಡಿಯಲ್ಲಿ ಇದೇ ರೀತಿ ಕೆಲಸ ಮಾಡುತ್ತಿರುವ ಅನೇಕ ಕಾರ್ಯಕರ್ತರಿಗೆ, ಅಭಿವೃದ್ಧಿಯ ಪರ್ಯಾಯ ಮಾರ್ಗದ ಅನ್ವೇಷಕರಿಗೆ ಮತ್ತು ಸಂಘ ಸಂಸ್ಥೆಯ ಕೆಲಸಗಳಿಗೆ ನೆರವು ನೀಡುವ ಉದ್ದೇಶ ಹೊಂದಿದೆ. ಇದಕ್ಕೆ ಬಾಬಾ ಅಧ್ಯಕ್ಷರು. ವರ್ಷದಲ್ಲಿ ಎರಡು ಬಾರಿ ಈ ಸದಸ್ಯರು ಸಭೆ ಸೇರುತ್ತಾರೆ.

ಬಾಬಾ ತಮ್ಮ ಈ ಹೊಸಮನೆಗೆ ಬಂದು ಎಂಟು ವರ್ಷಗಳಾದ ನಂತರ ಮೊದಲು ಬಂಜರಾಗಿದ್ದ ಈ ಭೂಮಿ, ನಿಡಿದಾದ ವೃಕ್ಷಗಳಿಂದ, ಗಿಡಗುಲ್ಮಗಳಿಂದ ಕಂಗೊಳಿಸುತ್ತಿದೆ. ತಾಯಿಗೆ ಪಕ್ಕದಲ್ಲಿರುವ ಶಿವದೇವಾಲಯದಲ್ಲಿ ಪೂಜೆ ಸಲ್ಲಿಸಲು ಎಂದೂ ಹೂಗಳ ಕೊರತೆ ಬೀಳುವುದಿಲ್ಲ. ಮನೆಯ ಅಡುಗೆಗೆ ಬಳಸುವ ಎಲ್ಲ ಸೊಪ್ಪು ತರಕಾರಿಗಳನ್ನು ಕೈತೋಟದಲ್ಲಿ ಬೆಳೆದುಕೊಳ್ಳಲಾಗುತ್ತದೆ.

ಸಭೆಯ ಬಳಿಕ ಅಲ್ಲಿ ನೆರೆದ ಎಲ್ಲರ ಯೋಗಕ್ಷೇಮ ತಾಯಿಗೆ ಸೇರಿದ್ದು. ಅವರು ಎಲ್ಲರಿಗೂ ಉಣಬಡಿಸುತ್ತಾರೆ. ಮೇಧಾರನ್ನು ಹೊರತುಪಡಿಸಿ ಉಳಿದೆಲ್ಲರೂ ಅಲ್ಲೇ

ಉಳಿದುಕೊಳ್ಳುತ್ತಾರೆ. ಆಕೆ ಬೇರೆಲ್ಲೋ ಧಾವಿಸಬೇಕಾಗಿದೆ. ಮೊಗ್ಗಾಗಿ, ಹೂವಾಗಿ ಪ್ರೌಢಾವಸ್ಥೆ ತಲುಪುತ್ತಿರುವ ಮೇಧಾ ಪಾಟ್ಕರ್ ಅವರ ಅಪಾರ ಮತ್ತು ವಿಶಿಷ್ಟ ಚೈತನ್ಯ ಕಂಡು ಬಾಬಾರ ಬದುಕಿನ ಸಂಧ್ಯೆಗೆ ಒಂದು ಹೊಳಪು ಮೂಡುತ್ತದೆ. ಅವರಲ್ಲಿ ಭಿನ್ನಾಭಿಪ್ರಾಯವಿರಬಹುದು, ಜಗಳ ಕಾದಿರಬಹುದು. ಆದರೆ ವರ್ಷಗಳು ಅರಿದಂತೆ ಅವರ ಬಾಂಧವ್ಯ ಗಟ್ಟಿಯಾಗುತ್ತಾ ಹೋಗಿದೆ.

ಮೇಧಾರ ಅವಿರತ ಪ್ರಯಾಣಗಳಿಗೆ ತಡೆಹಾಕಿ, ಕಾಸರವಾಡ್‌ನಲ್ಲಿ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಮನವೊಲಿಸಬೇಕು ಎಂದು ತಾಯಿ ಕಾದಿದ್ದಾರೆ. ಈ ಆಲದ ನೆರಳಲ್ಲಿ ಮೇಧಾ ನೆಮ್ಮದಿಯಾಗಿ ನಿದ್ದೆ ಮಾಡುವುದನ್ನು ನೋಡುವುದೇ ಒಂದು ಸಂತಸದ ಸಂಗತಿ. ಆಕೆ ಮತ್ತೆ ದಡಬಡಿಸಿ ಹೋಗಬೇಕು. ಮುಂದಿನ ಸಭೆಗಾಗಿ ಜನ ತುಂಬಿದ ಮೋಟಾರಿನಲ್ಲಿಯೋ ಅಥವಾ ಎರಡನೆಯ ದರ್ಜೆ ಬೋಗಿಯಲ್ಲಿಯೋ ಪ್ರಯಾಣಿಸುವಾಗಲೂ ಪತ್ರವ್ಯವಹಾರ ನಿರ್ವಹಿಸಲೇಬೇಕು. ಈ ಎಲ್ಲ ಕೆಲಸ ಆಕೆಯ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರೀತು ಎಂಬ ಆತಂಕ ಬಾಬಾಗೆ. ಆದರೆ ಆಕೆ ಹೀಗೆ ಚಟುವಟಿಕೆಯಿಂದ ತುಂಬಿದ್ದರೇ ಚೆನ್ನ ಎಂದು ಬಾಬಾಗೆ ಅನಿಸುತ್ತದೆ.

ಬಾಬಾ ಮತ್ತು ತಾಯಿ ಇಬ್ಬರೂ ದೀರ್ಘಾವಧಿಯಲ್ಲಿ ಒಂಟಿಯಾಗಿ ಇದ್ದುದಿಲ್ಲ. ದಿನದ ಅಷ್ಟೂ ಹೊತ್ತು ಅಕ್ಕಪಕ್ಕದ ಮನೆಯ ಮಕ್ಕಳು ಈ ಮನೆಯನ್ನು ದಾಟಿಯೇ ಹೋಗುತ್ತಾರೆ. ಇವರಿಗೆ ನಮಸ್ಕರಿಸಿ, ಇವರು ನೀಡುವ ಊದಾ ಬಣ್ಣದ ಸಿಹಿಯನ್ನು ಸವಿದು ಹೋಗುತ್ತಾರೆ. ತೀರಾ ಇತ್ತೀಚಿನ ಘಟನೆಗಳ ವರದಿ ಮಾಡಿ, ಸಲಹೆ ಪಡೆಯಲು ಆಲೋಕ್ ಅಗರವಾಲ್ ಬರುತ್ತಾರೆ. ಆಲೋಕ್ ಐಐಟಿಯಲ್ಲಿ ತರಬೇತಾದ ಇಂಜಿನಿಯರ್. ಇವರು ಎನ್.ಬಿ.ಎಯ ಬದವಾನಿ ಕಚೇರಿಯನ್ನು ನೋಡಿಕೊಳ್ಳುತ್ತಾರೆ. ಮಹೇಶ್ವರ್ ಅಣೆಕಟ್ಟಿನ ವಿರುದ್ಧದ ಪ್ರತಿಭಟನೆಯಲ್ಲಿ ಮುಖ್ಯ ಕಾರ್ಯಕರ್ತರಾಗಿ ಹೊರಹೊಮ್ಮಿದ್ದಾರೆ. ವಿವಿಧ ಹಂತದ ಸರ್ಕಾರಿ ಅಧಿಕಾರಿಗಳು ಗೌರವ ಸೂಚಿಸಲು ಅಲ್ಲಿಗೆ ಬರುತ್ತಾರೆ. ಸುತ್ತಲಿನ ಹಳ್ಳಿಯ ಜನ ಉತ್ತಮ ನೆರೆಹೊರೆಯವರಂತೆ ಆಗಾಗ್ಗೆ ಹರಟೆ ಹೊಡೆಯಲು ಬರುತ್ತಾರೆ. ಕಾರ್ಯತಂತ್ರ ರೂಪಿಸಲು ಬರುವವರೂ ಇದ್ದಾರೆ.

೮೩ರ ವಯಸ್ಸಿನಲ್ಲಿಯೂ ಬಾಬಾರ ರುಗ್ಣ ದೇಹ ಹಿಂದಿನ ಚಪರೆಗಳನ್ನು ಇನ್ನೂ ಉಳಿಸಿಕೊಂಡಿದೆ. ಎಲ್ಲ ನೋವು ಸಂಕಟಗಳು ಅವರ ದಿನಚರ್ಯೆಯ ಭಾಗಗಳೇ. ಆದರೆ ಬಾಬಾರ ಚೇತನ ಚಿರನೂತನ. ಅವರು ಹಳೆಯ ನೆನಪುಗಳನ್ನು ಮೆಲುಕು ಹಾಕುತ್ತಾರೆ. ಅಷ್ಟೇ ಉತ್ಸಾಹದಿಂದ ಭವಿಷ್ಯದ ದ್ವಂದ್ವಗಳ ಕುರಿತು ಚರ್ಚಿಸುತ್ತಾರೆ. ಕೆಲವೊಮ್ಮೆ ಉದ್ವೇಗಕ್ಕೊಳಗಾಗುವ ಸಂದರ್ಭಗಳೂ ಇವೆ. ಕಾಸರವಾಡ್‌ನ ಬದುಕು ಅಷ್ಟೊಂದು ಸಲೀಸು ಅಲ್ಲ. ನಿರಂತರ ಚಟುವಟಿಕೆ ಮತ್ತು ಸಂವಾದಗಳಲ್ಲಿ ತೊಡಗಿರುವವರಿಗೆ ಈ ಮೌನ ಕಷ್ಟಕರವೂ ಹೌದು. ಬಾಬಾ ಶಾಂತಿಯನ್ನರಸಿ ಇಲ್ಲಿಗೆ ಬಂದರು. ಆದರೆ ಅದು ಸಂಕಷ್ಟಗಳ ಹಾದಿ. ನರ್ಮದೆಯೊಡನೆ ಆಪ್ತವಾಗಿ ಕಳೆದ ಎಂಟು ವರ್ಷ ಅವರನ್ನು ಪೂರ್ಣ ಬದಲಾಯಿಸಿತು.

'ಈ ಜಾಗದಲ್ಲಿ ನನ್ನೊಂದಿಗೆ ನಾನೇ ಮಾತಾಡಿಕೊಳ್ಳಬಲ್ಲೆ. ತಾಯಿ ನರ್ಮದೆಯ ಅತಿಸೂಕ್ಷ್ಮ ಕಂಪನಗಳನ್ನು ಕೇಳಿಸಿಕೊಳ್ಳಬಲ್ಲೆ. ಆಕೆಯ ಹರಿವಿಗೆ ತಡೆಯೊಡ್ಡದೇ ನಾವು ಸಣ್ಣ ಸಣ್ಣ ಅಣೆಕಟ್ಟುಗಳ ಮೂಲಕ ಆಕೆಯನ್ನು ಸಿಂಗರಿಸಬಹುದು' ಎನ್ನುತ್ತಾರೆ ಬಾಬಾ.

ಕಾಸರವಾಡ್‌ನ ಅವರ ಬದುಕನ್ನು ಯಾರಾದರೂ ಸನ್ಯಾಸವೇ ಎಂದು ಕೇಳಿದರೆ ಬಾಬಾ ನಗುತ್ತಾರೆ. 'ನಿಜಕ್ಕೂ ಇದು ರೋಮಾನ್ಸ್' ಎಂದು ಬಾಬಾ ತಾಯಿಯತ್ತ ತಿರುಗಿ ನಗೆ ಬೀರುತ್ತಾರೆ.ನಾವು ಈ ನದಿಯನ್ನು ನೋಡುತ್ತಾ ಉಸಿರು ಬಿಗಿ ಹಿಡಿದು ನಿಂತುಬಿಡುತ್ತೇವೆ.

ನರ್ಮದಾ ಬಚಾವೋ ಆಂದೋಲನವನ್ನು ಜಗತ್ತು ಗಮನಿಸಿದೆ. ಆಧುನಿಕ ಅಭಿವೃದ್ಧಿ ಮತ್ತು ಪ್ರಗತಿಯ ವ್ಯಾಖ್ಯೆಯನ್ನೇ ಮರುಪರಿಶೀಲನೆಗೆ ಒಳಪಡಿಸುವ ಹೋರಾಟವಾಗಿ ಇದು ಕಂಡುಬರುತ್ತದೆ. ಇಲ್ಲಿ ಸಂಘರ್ಷ ಪರಿಹಾರ ನೀಡಲಾರದು. ಈ ನಂಬಿಕೆಯಿಂದ ಬದುಕುವವರಿಗೆ ಹೆಚ್ಚು ದೂರ ಓಡಬೇಕಾದ ಓಟಗಾರನಿಗೆ ಇರಬೇಕಾದ ತಾಳ್ಮೆ ಮತ್ತು ಕ್ರೋಢೀಕೃತ ಚೈತನ್ಯ ಇರಬೇಕಾಗುತ್ತದೆ.

ಪುಟ್ಟ ಶಿವದೇವಾಲಯದಾಚೆ ಸೂರ್ಯ ಮುಳುಗಿದ. ಹೊರಗಡೆಯ ತೋಟದ ಮನೆಯಿಂದ ಕೊಳಲನಾದ ಕೇಳಿಬರುತ್ತಿದೆ. ಬಾಬಾರ ಹಾಸಿಗೆ ಪಕ್ಕದಲ್ಲಿ ಕುಳಿತು ಕಿರಿಯ ವಯಸ್ಸಿನ ಗೆಳೆಯ, ಸಹಪಯಣಿಗ ಸಾಂಗ್ವಿ ಬಿದಿರ ಕೊಳಲನ್ನು ನುಡಿಸುತ್ತಿದ್ದಾನೆ.

ಬಾಬಾ ಗಾಂಧಿಯ ಸಲಹೆಯನ್ನು ನೆನಪಿಸಿಕೊಳ್ಳುತ್ತಾರೆ. ತಾಳೆಯಲ್ಲಿ ಬೆಲ್ಲ ಮಾಡುವುದು ನಿಮ್ಮ ಬದುಕಿನ ಗುರಿಯಾಗಿರಲಿ ಎಂದು ಬಾಪು ಹೇಳಿದ್ದರು. ಅರುವತ್ತು ವರ್ಷಗಳ ಬಳಿಕ ಬಾಬಾಗೆ ಈ ಸಲಹೆ ಸರಿ ಎನಿಸುತ್ತಿದೆ. 'ಈ ತಾಳೆಯ ಮರವನ್ನು ನೋಡು, ಇದು ಸಕ್ಕರೆಯ ಕೊಳ' ಎಂದು ಬಾಪು ಹೇಳಿದ್ದರು. ಕಸಬರಿಕೆ ತಯಾರಿಸಲು ಬಳಕೆಯಾಗುವ ಅದರ ಎಲೆಗಳನ್ನು ನೆನೆದಾಗ ಇದು ಎಂತಹ ಕಾವ್ಯಾತ್ಮಕ ಅಭಿವ್ಯಕ್ತಿ ಎನಿಸುತ್ತದೆ.

ಸಾಮುದಾಯಿಕ ತಾಳೆ ಬೆಳೆಸುವ ಕೆಲಸಕ್ಕೆ ಅರ್ಪಿಸಿಕೊಳ್ಳಬೇಕೆಂದು ಗಾಂಧಿ ಯುವಕ ಮುರಳೀಧರನಿಗೆ ಹೇಳಿದ್ದರು. ತಾಳೆ ಸಸಿಯನ್ನು ನೆಡುವುದು, ಅದನ್ನು ಬೆಳೆಸುವುದು, ಕಾಪಾಡುವುದು ಹಾಗೂ ಅದರ ರಸವನ್ನು ಸೆಳೆದು ಬೆಲ್ಲ ಮಾಡುವ ಬಹುದೊಡ್ಡ ಆಂದೋಲನ ಇದು. ಆದರೆ ವಿಧಿ ಬೇರೆಯದೇ ಹಾದಿ ಹಾಕಿಕೊಟ್ಟಿತ್ತು. ಆದರೆ, ಹಿಂದಿರುಗಿ ನೋಡಿದಾಗ ಗಾಂಧಿಯುವರ ಈ ಯೋಜನೆ ಬಹುಮುಖವಾದದ್ದು ಎನಿಸುತ್ತದೆ. ನಿಜಕ್ಕೂ ನಾನು ಈ ಕೆಲಸವನ್ನು ಹಮ್ಮಿಕೊಂಡಿದ್ದರೆ ಅದನ್ನೊಂದು ಸಾಮಾಜಿಕ ಮತ್ತು ಆರ್ಥಿಕ ಪ್ರಕ್ರಿಯೆಯಾಗಿ ರೂಪಿಸಿದ್ದರೆ ಮಹಾರಾಷ್ಟ್ರದಲ್ಲಿ ಈ ಸಕ್ಕರೆ ಲಾಬಿ ಇರುತ್ತಿರಲಿಲ್ಲ ಮತ್ತು ಅಂತರ್ಜಲದ ಮಟ್ಟ ಈ ರೀತಿ ಕುಸಿಯುತ್ತಲೂ ಇರಲಿಲ್ಲ. ಈ ತಾಳೆಬೆಲ್ಲ ಬೆಳೆಸುವಿಕೆ ಮತ್ತು ಅದರ ಬಳಸುವಿಕೆಯಿಂದ ಗ್ರಾಮೀಣ ಭಾಗದಲ್ಲಿ ಅನೇಕ ಜನರಿಗೆ ಉದ್ಯೋಗ ದೊರೆಯುತ್ತಿತ್ತು. ಇದರ ಜೊತೆಗೇ ಭೂಮಿಯಲ್ಲೆಲ್ಲ ಮರಗಳು ಹರಡಿಕೊಳ್ಳುತ್ತಿದ್ದವು.

ಈ ಬೃಹತ್ ಯೋಜನೆಗೆ ಹೋಲಿಸಿದರೆ ಆನಂದವನ ಮತ್ತು ಕಾಸರವಾಡ್‌ದಲ್ಲಿಯ ಹಸಿರು ಓಯಸಿಸ್ ಮತ್ತು ಅಲ್ಲಿ ಸಾಗಿಸಿದ ಬದುಕು ಅಂತಹ ದೊಡ್ಡ ಸಾಧನೆ ಅನಿಸುವುದಿಲ್ಲ. ಸರಿದು ಹೋಗುವ ಈ ಆಲೋಚನೆ ಮತ್ತು ಬಯಕೆಗಳು 'ರೇವಾ ಮಯ್ಯಾ'ಳ ಅನಂತ ಪ್ರವಾಹದಲ್ಲಿ ತೇಲಿಹೋಗುತ್ತವೆ. ಈ ನಿರ್ಭಯ ಸಾಧಕ ವರ್ತಮಾನದಲ್ಲಿ ಬದುಕಲು ತನ್ನ ಹೋರಾಟವನ್ನು ನವೀಕರಿಸಿಕೊಳ್ಳುತ್ತಲೇ ಇರುತ್ತಾನೆ.

ದಸ್ತಕರ್ ಆಂಧ್ರ

ಕೌಶಲದ ಕಾಣ್ಕೆಯೊಂದನ್ನು ನೇಯುತ್ತಾ

ಗಾಂಧೀಜಿ ಈ ಮನೆಯನ್ನು ಶಾಶ್ವತವಾಗಿ ತೊರೆದು ೫೦ ವರ್ಷಗಳು ಸಂದಿವೆ. ಈಗಲೂ ವರ್ಷದ ಎಲ್ಲ ದಿನಗಳಲ್ಲಿ ಇಲ್ಲಿ ಮಧ್ಯಾಹ್ನದ ವೇಳೆ ಬಾಕ್ಸ್ ಚರಕಾಗಳು ಕೆಲಸ ಮಾಡುವುದನ್ನು ನೋಡಬಹುದು, ಅದರ ಶಬ್ದಗಳನ್ನು ಕೇಳಬಹುದು. ಬಿರು ಬೇಸಗೆಯಿರಲಿ, ಧೋ ಎಂದು ಸುರಿಯುವ ಮಳೆಯಿರಲಿ ಅಥವಾ ಅವುಡುಗಚ್ಚಿಸುವ ಚಳಿ ಇರಲಿ ಸೇವಾಗ್ರಾಮ ಆಶ್ರಮದ ಒಂದು ಧಾರ್ಮಿಕ ಕಟ್ಟಳೆ ಎಂಬಂತೆ ಅಲ್ಲಿನ ಜನರು ಕುಟೀರದ ಮುಂದಿನ ಪಡಸಾಲೆಗೆ ಬಂದು ಒಂದರ್ಧ ಗಂಟೆಯಾದರೂ ನೂಲುತ್ತಾರೆ.

ಒಮ್ಮೊಮ್ಮೆ ಈ ನೂಲು ತೆಗೆಯುವ ಕಲೆ ಗೊತ್ತಿರದ ಕೆಲವು ಯುವಕರು ಪರದಾಡುವುದನ್ನೂ ನೋಡಬಹುದು. ಈ ರೀತಿಯ ಜನರಲ್ಲಿ ಬಹುತೇಕ ಮಂದಿ ಒಂದೆರಡು ದಿವಸ ಇದ್ದು ಮತ್ತೆ ತಮ್ಮ ಮನೆಗಳಿಗೆ ಮರಳುವ ಯಾತ್ರಿಗಳು.

೧೯೯೭ರ ವಸಂತದಲ್ಲಿ ನಾನು ಇವರಂತೆಯೇ ನೂಲು ತೆಗೆಯುವುದರಲ್ಲಿ ತರಬೇತಿ ಪಡೆಯುತ್ತಿದ್ದೆ. ಆ ಕಲೆಯಲ್ಲಿ ಪಳಗಿ ಪ್ರಶಾಂತರಾಗಿ ಕಾರ್ಯ ನಿರ್ವಹಿಸುತ್ತಿದ್ದವರ ಮುಖವನ್ನು ದಿಟ್ಟಿಸುತ್ತಿದ್ದೆ. ಮೊದಲ ಎರಡು ದಿವಸ ಕಳೆದ ನಂತರ ಕಿಂಚಿತ್ ಭಯ ಆವರಿಸಿತು. ಚರಕಾದಲ್ಲಿ ನೂಲು ತೆಗೆಯುವುದು ದೇವರು ನೀಡಿದ ವಿಶೇಷ ವರದಾನವೇ? ನನಗೆ ಇದನ್ನು ಕಲಿಸುತ್ತಿದ್ದ ಸಹನಾಮಯಿ ಶಿಕ್ಷಕಿ ಅಖಿಲಾಬಾಯಿ ಪಾಂಡ್ಯ ಈ ಪ್ರಶ್ನೆಗೆ ನಕ್ಕರು. ಈ ಪ್ರಶ್ನೆಯೇ ಅಸಂಗತ ಎನ್ನುವುದನ್ನು ಸೂಕ್ಷ್ಮವಾಗಿ, ನಯವಾಗಿ ತಿಳಿಸಿದರು. ಐದನೆಯ ದಿವಸದ ಹೊತ್ತಿಗೆ ನಾನು ಯಾವುದೇ ಹತ್ತಿ ಕೊಟ್ಟರೂ ದಾರ ತೆಗೆಯುತ್ತಿದ್ದೆ ಎಂಬುದನ್ನು ನಂಬಲೇ ಆಗುತ್ತಿರಲಿಲ್ಲ.

ಅದೃಷ್ಟವಶಾತ್ ಆಶ್ರಮವಾಸಿಗಳು ಯಾರೂ ನಾನು ಏಕೆ ನೂಲುವುದನ್ನು ಕಲಿಯುತ್ತಿದ್ದೇನೆ ಎಂದು ಕೇಳಲಿಲ್ಲ. ಇದಕ್ಕೆ ಯಾವುದೇ ಸ್ಪಷ್ಟ ಉತ್ತರವಿರಲಿಲ್ಲ. ಬಹುಶಃ ಸೇವಾಗ್ರಾಮದಲ್ಲಿ ಇರುವಾಗ ಸಹಜವಾಗಿಯೇ ಮಧ್ಯಾಹ್ನದ ವೇಳೆ ಕಳೆಯಲು ನೂಲುವುದನ್ನು ಕಲಿಯತೊಡಗಿದೆ ಎಂಬುದೇ ಇದಕ್ಕೆ ಉತ್ತರ. ಗಾಂಧೀಜಿಯ ಪ್ರಪಂಚವನ್ನು ಮುಟ್ಟಲು ಇರುವ ಅನೇಕ ದಾರಿಗಳಲ್ಲಿ ಚರಕಾ ಕೂಡಾ ಒಂದು ಎಂದು ನನಗನಿಸಿತು. ನೂಲುವುದು ಸಲೀಸಾದ ನಂತರ

ಅದರ ಮೂಲಕ ಧ್ಯಾನದ ಆಯಾಮ ತೆರೆದುಕೊಳ್ಳತೊಡಗಿತು. ಚರಕಾ ಕುರಿತ ಅನೇಕ ಆರ್ಥಿಕ, ತಾಂತ್ರಿಕ ಪ್ರಶ್ನೆಗಳನ್ನು ಬಿಡಿಸುವಲ್ಲಿ ನಾನು ತಲೆಕೆಡಿಸಿಕೊಳ್ಳಲಿಲ್ಲ. ಕಡಿಮೆ ಯಾಂತ್ರಿಕವಾದ, ಹೆಚ್ಚು ಕ್ರಿಯಾಶೀಲವಾದ ಭಿನ್ನ ಪ್ರಪಂಚಕ್ಕೆ ಚರಕಾ ಕೀಲಿಕೈ ಎಂದು ಅನಿಸತೊಡಗಿತು. ಇಷ್ಟು ನನಗೆ ಸಾಕಾಗಿತ್ತು. ಆದರೆ ನೂಲುವುದು ನನಗೆ ದೈನಂದಿನ ಅಭ್ಯಾಸ ಆಗಲೇ ಇಲ್ಲ. ಅದನ್ನು ಹಾಗೆಯೇ ಬಿಟ್ಟೆ.

ಕೆಲವು ವರ್ಷಗಳ ನಂತರ ಗೆಳೆಯರು ಕುಶಲಕರ್ಮಿಗಳು ತಯಾರಿಸಿದ ವಸ್ತುಗಳಿಗೆ ಮಾರುಕಟ್ಟೆ ದೊರಕಿಸಿಕೊಡಲು ಯತ್ನಿಸುತ್ತಿದ್ದ ಸಂದರ್ಭದಲ್ಲಿ ಚರಕಾ ಕುರಿತು ಈವರೆಗೂ ತಿಳಿಯದಿದ್ದ ಅಂಶಗಳನ್ನು ತಿಳಿದುಕೊಳ್ಳುವಂತಾಯಿತು. ಅವರ ಹುಡುಕಾಟದಲ್ಲಿ ಚರಕಾ ಕೂಡಾ ಒಂದು ಎಂದು ನಾನು ತಿಳಿದೆ. ಇದರಲ್ಲಿ ಆಳವಾಗಿ ಮುಳುಗಿದಂತೆ ಈ ಕುರಿತು ವಿಶಾಲವಾದ ದೃಷ್ಟಿಕೋನ ಹೊರಹೊಮ್ಮತೊಡಗಿತು.

ಹೊಂದದ ಚಿತ್ರಗಳು

ಮುಂಬೈ ಹೊರವಲಯದ ಪೋವೈ ಐಐಟಿಯ ನೆಲದಲ್ಲಿ ಮರದ ಚರಕಾ ಮತ್ತು ಕೈಮಗ್ಗ ಹೊಂದದ ಚಿತ್ರಗಳಾಗಿದ್ದವು. ಲೇಸರ್, ರೋಬೋಟ್ ಬಳಸುವ ಹೈಟೆಕ್ ವಿದ್ಯಾರ್ಥಿಗಳು ಆಧುನಿಕ ಪೂರ್ವ ಯುಗದ ಈ ಪರಿಕರಗಳನ್ನು ಕುತೂಹಲದಿಂದ ನೋಡುತ್ತಿದ್ದರು. ಕೆಲವರಂತೂ ನೇಕಾರರು ಬಣ್ಣ ಹಾಕಿದ ನೂಲನ್ನು ಬಟ್ಟೆ ನೇಯಲು ಮಗ್ಗಕ್ಕೆ ಕರಾರುವಾಕ್ಕಾಗಿ ಜೋಡಿಸುವುದನ್ನು ಕಂಡು ಅವಾಕ್ಕಾದರು. ಐಐಟಿಯ ಈ ಗುಂಪಿನಲ್ಲಿ ಸಂಶೋಧಕರು, ವಿದ್ಯಾರ್ಥಿಗಳು, ಅರ್ಥಶಾಸ್ತ್ರಜ್ಞರು, ರಾಷ್ಟ್ರೀಯ ವಿಜ್ಞಾನ ಸಂಸ್ಥೆಯ ಅಧ್ಯಾಪಕ ವೃಂದ, ನೈಸರ್ಗಿಕ ಬಣ್ಣ ತಯಾರಿಕಾ ತಜ್ಞರು, ಗ್ರಾಮೀಣ ಭಾಗದ ಕುಶಲ ಕರ್ಮಿಗಳ ಜತೆ ಕೆಲಸ ಮಾಡುತ್ತಿರುವ ಕಾರ್ಯಕರ್ತರು ಇದ್ದರು.

ಈ ಜನ ಏಕೆ ಕೈಮಗ್ಗ ಮತ್ತು ಅದಕ್ಕೂ ಪೂರ್ವದ ಚರಕಾ ಬಗ್ಗೆ ತಲೆಕೆಡಿಸಿಕೊಂಡಿದ್ದಾರೆ? ಈ ಸಮಾವೇಶಕ್ಕೆ ಇವರುಗಳು ಬರಲು ಕಾರಣವೇನು?

ಈ ಎಲ್ಲ ಪ್ರಶ್ನೆಗಳು ನಮ್ಮನ್ನು ಹುಲ್ಲು ಹಾಸಿನ ಮೇಲೆ ವಿಶ್ರಮಿಸಿಕೊಳ್ಳುತ್ತಿದ್ದ ಇಬ್ಬರ ಬಳಿ ಕರೆದೊಯ್ದವು. ಒಬ್ಬರು ಉಜರಮ್ಮ ಬಿಲ್‌ಗ್ರಾಮಿ. ಆಕೆ ಹಳ್ಳಿ ಹಳ್ಳಿ ತಿರುಗುತ್ತಾ ಮೂಲೆಯಲ್ಲಿ ಉಪಯೋಗಿಸದೇ ಬಿದ್ದಿದ್ದ ಚರಕಾದ ಧೂಳು ಜಾಡಿಸಿ ಹೊರತೆಗೆಯುತ್ತಿದ್ದಾರೆ. ಮತ್ತೊಬ್ಬರು ಇಂಜಿನಿಯರ್ ಶಂಭುಪ್ರಸಾದ್. ಇವರು ತಾವು ತೊಡುವ ಖಾದಿಯ ನಿಜವಾದ ಮೌಲ್ಯದ ಬಗ್ಗೆ ಚಿಂತನೆ ನಡೆಸುವವರು.

ಪಯಣದ ಆರಂಭ

ಉಜರಮ್ಮ ಹುಟ್ಟಿದ್ದು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಬಳಿಕ. ಆಕೆಯದು ಹೈದರಾಬಾದ್ ಸಂಸ್ಥಾನದ ಬಹುಮುಖ್ಯ ಆಡಳಿತ ಕೇಂದ್ರಗಳಲ್ಲಿ ಕೆಲಸ ಮಾಡಿದ ಕುಟುಂಬ. ಈ ರೀತಿಯ ಹಿನ್ನೆಲೆ ದೈನಂದಿನ ಬದುಕಿನ ಎಲ್ಲ ಸಣ್ಣ ಸಣ್ಣ ವಿವರಗಳಲ್ಲಿಯೂ ಸೌಂದರ್ಯಾಭಿವ್ಯಕ್ತಿಯನ್ನು

ಬಯಸುವಂತಹುದು. ಆದರೆ ಉಜರಮ್ಮಾಗೆ ಸಾಲಾರ್ ಜಂಗ್ ಮ್ಯೂಸಿಯಂನಲ್ಲಿ ಸಂಗ್ರಹಿಸಿಟ್ಟ ಪದಾರ್ಥಗಳಲ್ಲಿ ಅಂತಹ ಆಸಕ್ತಿ ಇರಲಿಲ್ಲ. ಆದರೆ ರಸ್ತೆ ಬದಿಯಲ್ಲಿ ಮಾರಾಟಕ್ಕಿಟ್ಟಿರುವ ಪದಾರ್ಥಗಳು ಮತ್ತು ಅವುಗಳ ಬಹು ಉಪಯುಕ್ತತೆ ಬಗ್ಗೆ ತೀವ್ರ ಆಸಕ್ತಿ ಇತ್ತು.

ಮದುವೆಯಾದ ಬಳಿಕ ಆಕೆ ಇಂಗ್ಲೆಂಡಿಗೆ ಹೋದರು. ಆಕೆ ಅಲ್ಲಿ ಸಹಿಸಲಸಾಧ್ಯವೆನಿಸುವಷ್ಟು ದೀರ್ಘ ಕಾಲ ಇರಬೇಕಾಗಿ ಬಂತು. ಆಕೆ ತಮ್ಮ ಮನೆಕೆಲಸ ನಿರ್ವಹಿಸುತ್ತಾ, ಮಕ್ಕಳ ಬೆಳವಣಿಗೆಗೆ ಗಮನ ನೀಡುತ್ತಿರುವಂತೆಯೇ ಚಿನ್ನದ ಒಡವೆ ತಯಾರಿಸುವ ಕಲೆಯನ್ನೂ ಕಲಿತರು. ಗ್ರಾಮೀಣ ಕಸುಬುದಾರರ ಸಂಗಡ ಅವರಿಗೆ ಕೆಲಸ ಮಾಡಬೇಕೆನಿಸಿತು. ಆಕೆಯ ಸೌಂದರ್ಯಾಭಿರುಚಿಯ ಜತೆಗೆ ಇತರರೊಂದಿಗೆ ಬೆರೆಯಬೇಕೆಂಬ ತೀವ್ರ ತವಕವೂ ಇತ್ತು. ಆದುದರಿಂದ ಆಕೆ ಭಾರತಕ್ಕೆ ತಿಂಗಳು ಅಥವಾ ಎರಡು ತಿಂಗಳ ಮಟ್ಟಿಗೆ ಬಂದಾಗ ಹೈದರಾಬಾದಿನ ಸಮೀಪದ ಎರಡು ಹಳ್ಳಿಗಳಲ್ಲಿನ ಕುಶಲಕರ್ಮಿಗಳು ಮತ್ತು ಕಸುಬುದಾರರ ಸಮಸ್ಯೆ, ಸ್ಥಿತಿಗತಿಗಳನ್ನು ಅರಿಯಲು ಕೆಲ ಸಮಯ ವ್ಯಯಿಸುತ್ತಿದ್ದರು. ಗ್ರಾಮೀಣ ಬದುಕಿನ ಸೌಂದರ್ಯವನ್ನು ಕಂಡು ಆಕೆಗೆ ಅಚ್ಚರಿಯಾಗುತ್ತಿತ್ತು.

ಆದರೆ ಬಹುತೇಕ ಗ್ರಾಮಗಳಲ್ಲಿ ದೈನಂದಿನ ಅಗತ್ಯಗಳಾದ ಮಡಿಕೆ, ಕುಡಿಕೆ ಮತ್ತು ಬಟ್ಟೆ ಮೊದಲಾದವುಗಳನ್ನು ತಯಾರಿಸುತ್ತಿದ್ದ ಕಸುಬುದಾರರು ಅಳಿವಿನಂಚಿನಲ್ಲಿದ್ದರು. ಒಂದು ಕಾಲದಲ್ಲಿ ಕುಶಲಕರ್ಮಿಗಳಾಗಿದ್ದವರು ಇಂದು ಕಾರ್ಖಾನೆಗಳಲ್ಲಿ ಯಾಂತ್ರಿಕ ಜವಾಬ್ದಾರಿ ನಿರ್ವಹಿಸುತ್ತಿದ್ದರು. ಅವರೀಗ ಕೇವಲ ಕೂಲಿಯಾಳುಗಳಾಗಿದ್ದರು. ಇವರಿಗಿಂತಲೂ ದುರದೃಷ್ಟವಂತರು ಕೆಲಸಕ್ಕಾಗಿ ಕಾರ್ಖಾನೆಯಿಂದ ಕಾರ್ಖಾನೆಗೆ ಅಲೆಯುತ್ತಿದ್ದರು. ನ್ಯೂಯಾರ್ಕ್‌ನ ಬ್ಲೂಮಿಂಗ್ ಡೇಲ್ ಅಥವಾ ಲಂಡನ್‌ನ ಹೆರಾಡ್ಸ್ ಮತ್ತು ಇತರ ದೊಡ್ಡ ನಗರಗಳ ಕರಕುಶಲ ಮಳಿಗೆಗಳಿಗೆ ಅಲಂಕಾರಿಕ ವಸ್ತುಗಳನ್ನು ತಯಾರಿಸಿ ಪೂರೈಸಬಲ್ಲ ಕುಶಲಕರ್ಮಿಗಳು ಮಾತ್ರ ಅಸ್ತಿತ್ವ ಉಳಿಸಿಕೊಳ್ಳಬಲ್ಲವರಾಗಿದ್ದರು.

ಇಲ್ಲಿನ ಕುಂಬಾರರು ಮತ್ತು ನೇಕಾರರಿಗೆ ಸಹಾಯ ಮಾಡುವ ದಾರಿಗಳೇನಾದರೂ ಇವೆಯೇ?

ಈ ಶೋಧನಾ ಪಯಣದಲ್ಲಿ ಅನೇಕ ಪ್ರಶ್ನೆಗಳು ಉಜರಮ್ಮರಿಗೆ ಎದುರಾದವು. ಆಕೆ ಇದಕ್ಕೆ ಸಂಬಂಧಿಸಿದ ಬರಹಗಳನ್ನು ಕಲೆಹಾಕಿ ಶತಶತಮಾನಗಳಿಂದ ಭಾರತದಲ್ಲಿ ವ್ಯಾಪಾರ ಮತ್ತು ಕೈಗಾರಿಕೆ ಹೇಗೆ ನಡೆಯುತ್ತಿತ್ತೆಂದು ಅಭ್ಯಸಿಸಿದರು. ಇದರಿಂದ ಆಧುನಿಕ ಪೂರ್ವ ಕಾಲದಲ್ಲಿ ಏಷಿಯಾ ಮತ್ತು ಯುರೋಪಿನೊಂದಿಗಿನ ವ್ಯಾಪಾರ ವಹಿವಾಟುಗಳ ಆಧಾರದಿಂದ ನಿರ್ಮಿತಿಗೊಂಡ ವಿಸ್ತಾರವಾದ ಕೈಗಾರಿಕಾ ನೆಲೆಯ ಪರಿಚಯ ಆಕೆಗಾಯಿತು. ಬಂಜಾರರು ಮತ್ತು ಇತರ ವ್ಯಾಪಾರ ಸಮುದಾಯದವರು ಎತ್ತಿನ ಬಂಡಿಯ ಮೇಲೆ ಪದಾರ್ಥಗಳನ್ನು ಹೇರಿಕೊಂಡು ಹಳ್ಳಿಹಳ್ಳಿಗೆ ಒಯ್ದು ವಿನಿಮಯ ಮಾಡಿಕೊಳ್ಳುತ್ತಿದ್ದರು ಎಂಬ ಅಂಶವೂ ತಿಳಿದು ಬಂದಿತು.

ಗ್ರಾಮದ ಎಲ್ಲ ನೇಕಾರರು ಬೇರೆ ಬೇರೆ ರೀತಿಯ ಬಟ್ಟೆ ತಯಾರಿಸಿ ಎರಡೂ ಖಂಡಗಳಲ್ಲಿ ನಡೆಯುವ ಈ ವ್ಯಾಪಾರಕ್ಕೆ ಬಲ ನೀಡಿದರು. ಬ್ರಿಟಿಷರು ಭಾರತವನ್ನು ಪ್ರವೇಶಿಸಿದ ನಂತರ, ಉಗಿ ಇಂಜಿನ್ ಆವಿಷ್ಕಾರದಿಂದ ಬೆಳೆದ ಕೈಗಾರಿಕಾ ಕ್ರಾಂತಿಯು ಫಲವಾಗಿ ಎಲ್ಲವೂ ತಲೆಕೆಳಗಾಯಿತು. ಆಧುನಿಕ ಕೈಗಾರಿಕೀಕರಣ ಈ ಕುಶಲಕರ್ಮಿಗಳನ್ನು ತೀವ್ರವಾಗಿ ಕಡೆಗಣಿಸಿದ್ದಷ್ಟೆ ಅಲ್ಲ; ಅವರ ವ್ಯಾಪಾರವನ್ನೂ ನಾಶಗೊಳಿಸಿತು.

ಕೈಗಾರಿಕಾ ಕ್ಷೇತ್ರದಲ್ಲಿ ದೈತ್ಯ ಸಾಧನೆ ಮಾಡಿದ ಇಂಡಿಯಾ ಮತ್ತು ಚೀನಾ ಕಚ್ಚಾ ವಸ್ತುಗಳನ್ನು ಕನಿಷ್ಠ ಮಟ್ಟಕ್ಕೆ ಇಳಿಸಿದವು. ಕ್ರಿಶ ೧೭೫೦ರ ವೇಳೆಗಾಗಲೇ ಪ್ರಪಂಚದ ಶೇ ೨೪.೫ರಷ್ಟು ಸಿದ್ಧ ವಸ್ತುಗಳನ್ನು ಭಾರತ ತಯಾರಿಸುತ್ತಿತ್ತು ಎಂದು ಪಾಲ್ ಕೆನಡಿ The Rising and Fall of Great Power ಎಂಬ ಪುಸ್ತಕದಲ್ಲಿ ಹೇಳುತ್ತಾರೆ. ೧೮೦೦ರ ವೇಳೆಗೆ ಇದು ಶೇಕಡ ೧೯.೭ಕ್ಕೆ ಮತ್ತು ೧೮೬೦ರ ವೇಳೆಗೆ ಇದು ಶೇಕಡ ೮.೬ಕ್ಕೆ ಇಳಿಯಿತು. ಚೀನಾದ ಕತೆ ಇದಕ್ಕಿಂತ ಭಿನ್ನವಾಗಿರಲಿಲ್ಲ. ೧೭೫೦ರಲ್ಲಿ ಚೀನಾದ ಸಿದ್ಧವಸ್ತು ಉತ್ಪಾದನೆ ಪ್ರಪಂಚದ ಒಟ್ಟು ಉತ್ಪಾದನೆಯಲ್ಲಿ ಶೇಕಡ ೩೨.೮ ಇತ್ತು. ಆದರೆ ೧೮೬೦ರ ವೇಳೆಗೆ ಇದು ಶೇಕಡ ೧೯.೭ಕ್ಕೆ ಇಳಿಯಿತು.

ಬ್ರಿಟಿಷರು ಅಧಿಕಾರಕ್ಕೆ ಬಂದ ಮೊದಲ ಸ್ಥಳವಾದ ಬಂಗಾಳ ಮಿಲ್‌ನಲ್ಲಿ ತಯಾರಾದ ಪದಾರ್ಥಗಳ ಭರಾಟೆಯಲ್ಲಿ ಕೈಮಗ್ಗ ಬಟ್ಟೆಗಳ ಸದ್ದಡಗಿತು. ವಸಾಹತು ನೀತಿಯೇ ಇದಕ್ಕೆ ಕಾರಣ. ಆದರೆ ಈ ಪರಿಣಾಮ ಭಾರತದ ಎಲ್ಲಾ ಕಡೆ ಒಂದೇ ತೆರನಾಗಿರಲಿಲ್ಲ. ಈಶಾನ್ಯ ಹಾಗೂ ದಕ್ಷಿಣ ಭಾರತದ ಕೆಲವೆಡೆ ಗುಡಿಕೈಗಾರಿಕೆಗಳು ತಮ್ಮ ಅಸ್ತಿತ್ವ ಉಳಿಸಿಕೊಂಡವು. ೧೯೬೦ರಷ್ಟು ಈಚೆಗೆ ಭಾರತದ ಒಟ್ಟು ಕೈಮಗ್ಗಗಳು ಶೇಕಡ ೩೫ ರಷ್ಟು ಅಸ್ಸಾಂ ಒಂದರಲ್ಲೇ ಇತ್ತು. ಆದರೆ ಇವುಗಳ ಹಿಂದೆ ಯಾವುದೇ ಉದ್ದೇಶ ಇರಲಿಲ್ಲ. ಅದು ಅವರ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾದ ಉಡುಪಿನ ಅಗತ್ಯವನ್ನು ಪೂರೈಸುತ್ತಿತ್ತು; ಅವರ ಕುಟುಂಬದೊಂದಿಗೆ ಬೆರೆತು ಅವರ ಸೌಂದರ್ಯ ಅಭಿರುಚಿ ಹೆಚ್ಚಿಸಿತ್ತು.

ಭಾರತದ ಅನೇಕ ಭಾಗಗಳಲ್ಲಿ ಗುಡಿಕೈಗಾರಿಕೆಗಳು ಶತಮಾನದ ಹಿಂದೆಯೇ ಕೊನೆ ಕಂಡಿವೆ. ಆದರೆ ಆಂಧ್ರಪ್ರದೇಶದ ಅದಿಲಾಬಾದ್ ಜಿಲ್ಲೆಯಲ್ಲಿ ೧೯೫೦ರಷ್ಟು ಈಚೆಗೆ ಸುಮಾರು ೩೦ ಸಾವಿರ ಸ್ವತಂತ್ರ ನೇಕಾರರು ಇದ್ದರು ಎಂಬ ಸಂಗತಿ ಉಜರಮ್ಮ ಅವರಲ್ಲಿ ಆಚ್ಚರಿ ಹುಟ್ಟಿಸಿತು. ೧೯೮೦ರ ಕೊನೆಯಲ್ಲಿ ಈ ಜಿಲ್ಲೆಯಲ್ಲಿ ಕೇವಲ ಸಾವಿರ ನೇಕಾರರು ಉಳಿದಿದ್ದರು. ಉಜರಮ್ಮ ಇವರನ್ನು ಭೇಟಿಯಾದರು.

ಇಲ್ಲಿನ ಸಾಮಾನ್ಯ ಜನರು ಇನ್ನೂ ನೇಕಾರರ ಸಂಪರ್ಕ ಇಟ್ಟುಕೊಂಡಿದ್ದಾರೆ. ಬಟ್ಟೆಗಾಗಿ ಬೇಡಿಕೆ ಕೊಟ್ಟು ಅವರಿಂದಲೇ ಮಾಡಿಸಿಕೊಳ್ಳುತ್ತಾರೆ. ಮದುವೆ ಇನ್ನಿತರ ಸಮಾರಂಭಗಳಿಗೆ ಜವಳಿಯನ್ನು ನೇಯ್ದುಕೊಟ್ಟು ಅವರಿಂದ ಪಡೆದ ಉಡುಗೊರೆಗಳ ಕುರಿತು ನೇಕಾರರು ಈಗಲೂ ನೆನೆಸಿಕೊಳ್ಳುತ್ತಾರೆ.

ನೇಕಾರರು ಸ್ಥಳೀಯ ಬೇಡಿಕೆಯನ್ನು ಆಧರಿಸಿ ತಮ್ಮ ಬದುಕು ಸಾಗಿಸುತ್ತಿದ್ದರು. ಇವರಿಗೆ ಸಮೀಪದ ಗ್ರಾಮಗಳ ಗ್ರಾಹಕರ ಜತೆ ನೇರ ಸಂಬಂಧ ಇತ್ತು. ಹಲವೆಡೆ ಸಹಕಾರ ಸಂಘ ನಿರ್ವಹಿಸುತ್ತಿದ್ದ ಕಾರ್ಖಾನೆಗಳಲ್ಲಿ ಇವರು ಕಾರ್ಯನಿರ್ವಹಿಸುತ್ತಿದ್ದರು. ಈ ಕಾರ್ಖಾನೆಗಳಲ್ಲಿ ನೇಕಾರರು ಕೇವಲ ಕೂಲಿಗಳಾಗಿದ್ದರು. ಉತ್ಪಾದನೆಯೂ ಏಕಮಾದರಿಯಾಗಿತ್ತು ಹಾಗೂ ಮಾರುಕಟ್ಟೆಯ ಅಗತ್ಯ ಪೂರೈಸುತ್ತಿತ್ತು.

ಉಜರಮ್ಮ ಆಂಧ್ರಪ್ರದೇಶದಲ್ಲಿ ಪ್ರವಾಸ ಮಾಡಿದ ಕಡೆಯಲ್ಲೆಲ್ಲಾ ನೇಕಾರಿಕೆಯ ಪಳೆಯುಳಿಕೆಗಳು ಕಂಡವು. ಹತ್ತಿ ಸ್ವಚ್ಛ ಮಾಡುವುದು, ನೂಲುವಿಕೆ, ನೂಲಿಗೆ ಬಣ್ಣ ಹಾಕುವುದು.... ಹೀಗೆ ಒಂದಲ್ಲಾ ಒಂದು ಕ್ರಿಯೆಯ ಕುರುಹುಗಳು ಸಿಗುತ್ತಿದ್ದವು. ಸಾಂಪ್ರದಾಯಿಕ ಕಸುಬಿನಿಂದ ದೂರವಾದ ಜನ ಪಟ್ಟಣಗಳ ಪುಟ್‌ಪಾತ್‌ಗಳಲ್ಲಿ ಆಶ್ರಯ ಕಂಡುಕೊಂಡರು. ಅವರೀಗ ಕೂಲಿ ಕಾರ್ಮಿಕರಾಗಿ ಜೀವನ ನೂಕುತ್ತಿದ್ದಾರೆ.

ಈ ಮಧ್ಯೆ ನೇಕಾರಿಕೆಯಲ್ಲೇ ಉಳಿದ ಕೆಲ ನೇಕಾರರು ನೂಲಿಗಾಗಿ ಮಿಲ್‌ನ್ನೇ ಆಧರಿಸಿದ್ದಾರೆ. ಮಿಲ್‌ನ ನೂಲು ದುಬಾರಿ. ಜತೆಗೆ ಅದರ ಕೊರತೆಯಂತೂ ಇದ್ದದ್ದೇ. ನೂಲನ್ನು ರಫ್ತು ಮಾಡುವುದರಲ್ಲಿ ಹೆಚ್ಚಿನ ಲಾಭ ಇದೆ. ಇದರಿಂದ ಹೆಚ್ಚಿನ ಲಾಭ ಗಳಿಸುವುದು ಗಿರಣಿಗಳೇ. ನೇಕಾರರೇನು ತಮ್ಮ ಉತ್ಪಾದನೆಗೆ ಮಾರುಕಟ್ಟೆ ಇಲ್ಲದೆ ಬಡವರಾಗಿಲ್ಲ. ಆದರೆ ತಮ್ಮ ಕಸುಬಿಗೆ ಅಗತ್ಯ ಕಚ್ಚಾ ವಸ್ತುವಿಲ್ಲದೆ ಬಡವರಾಗಿದ್ದಾರೆ.

ಸ್ವಾತಂತ್ರ್ಯೋತ್ತರ ಭಾರತ ವಿವೇಚನೆ ಇಲ್ಲದೆ ಪಶ್ಚಿಮವನ್ನು ಅನುಕರಿಸುತ್ತಿದೆ. ಐದು ಸಾವಿರ ವರ್ಷಗಳಿಂದಲೂ ನೇಕಾರಿಕೆ ಮಾಡಿಕೊಂಡು ಬಂದಿರುವ ಭಾರತ ಏಕೆ ಮತ್ತಾರನ್ನೋ ಅನುಕರಿಸಬೇಕು? ಪರಿಸರ ಮಲಿನಗೊಳಿಸಲೆ? ಸಮುದಾಯ ಹಾಗು ಸಂಬಂಧಗಳು ವಿಘಟಿತವಾಗಲೆಂದೇ?

ಬಹುಶಃ ಈ ಕಾರಣಗಳಿಗಾಗಿಯೇ ಮಹಾತ್ಮಾ ಗಾಂಧಿ ಚರಕದ ಪುನರುತ್ಥಾನವನ್ನು ತಮ್ಮ ಜೀವಿತದದ ಉದ್ದೇಶವಾಗಿಸಿಕೊಂಡರು. ಉಜರಮ್ಮನಿಗೆ ಮಾತ್ರ ಹೀಗನ್ನಿಸಿದ್ದಲ್ಲ. ಹಾರ್ವರ್ಡ್‌ನಲ್ಲಿ ಅರ್ಥಶಾಸ್ತ್ರ ಕಲಿತ ಅಹಮದಾಬಾದಿನ ನಂದಿನಿ ಜೋಷಿಯವರಿಗೂ ಹೀಗೇ ಅನ್ನಿಸಿತು. ಗಾಂಧಿಗೆ ಚರಕ ಸೌರವ್ಯೂಹದಲ್ಲಿನ ಸೂರ್ಯನ ಹಾಗೆ. ಗ್ರಾಮಾಧಾರಿತ ಕೈಗಾರಿಕೆಗಳೇ ಸೌರವ್ಯೂಹ. ಚರಕವೇ ಸೂರ್ಯ. ಇದು ಸಮೃದ್ಧ ಸಮಾಜಕ್ಕೆ ಭದ್ರ ನೆಲಗಟ್ಟು. ಮನೆಯಲ್ಲಿ ನೂಲುವಿಕೆ ಮತ್ತೆ ಆರಂಭಿಸುವುದರಿಂದ ಈ ದೇಶದ ನಿರುದ್ಯೋಗ ಸಮಸ್ಯೆ ಪರಿಹಾರವಾದೀತು ಎಂದು ನಂದಿನಿ ತಮ್ಮ 'ವಿನಾಶ ರಹಿತ ಅಭಿವೃದ್ಧಿ: ಚರಕ ಅರ್ಥಶಾಸ್ತ್ರ' ಎಂಬ ಕೃತಿಯಲ್ಲಿ ಚರ್ಚಿಸುತ್ತಾರೆ.

ಈ ಪುಸ್ತಕ ಓದುವ ಮುನ್ನವೇ ಉಜರಮ್ಮ ಇದೇ ಧಾಟಿಯಲ್ಲಿ ಯೋಚಿಸಿದ್ದರು. ೧೯೮೮ರ ವೇಳೆಗೆ ಉಜರಮ್ಮ ಭಾರತಕ್ಕೆ ಮರಳಿ ಹೈದರಾಬಾದಿನಲ್ಲಿ ನೆಲಸಿದಾಗ, ಈ ರೀತಿಯ ಪ್ರಶ್ನೆಗಳು ಅವರಿಗೆ ಮಹತ್ವದ್ದಾದವು. ಈಗ ತಮ್ಮ ಪೂರ್ಣ ಸಮಯವನ್ನು ಈ ಪ್ರಶ್ನೆಗಳಿಗೆ ಉತ್ತರ ಕಾಣಲು ತೊಡಗಿಸಿಕೊಳ್ಳಬಹುದಿತ್ತು. ಈ ಕುರಿತು ಸರಕಾರದ

ನಿರ್ಣಯಗಳಿಗೆ ಕಾಯುವುದಕ್ಕಿಂತ ಸ್ವತಃ ಸಣ್ಣ ಮಟ್ಟದಲ್ಲಿ ಕೆಲಸ ಆರಂಭಿಸುವುದು ಸೂಕ್ತ ಎಂದು ಅವರಿಗೆ ಅನ್ನಿಸಿತು. ಇದರ ಫಲಶ್ರುತಿಯೇ 'ದಸ್ತಕರ್'. ೧೯೮೨ರಲ್ಲಿ ದಿಲ್ಲಿಯನ್ನು ಕೇಂದ್ರ ಮಾಡಿಕೊಂಡು ಕುಶಲಕರ್ಮಿಗಳ ಬಗ್ಗೆ ಕಾಳಜಿ ಉಳ್ಳ ಜನ ಕಟ್ಟಿಕೊಂಡ ಸಂಘಟನೆಯೇ 'ದಸ್ತಕರ್'. ದಸ್ತಕರ್ ಹಾತ್ಸ್ (ಬಜಾರು) ಪಟ್ಟಣ ಪ್ರದೇಶಗಳಲ್ಲಿ ಮಧ್ಯವರ್ತಿಗಳ ಕಾಟ ಇಲ್ಲದೆ ಕರಕುಶಲ ಸಾಮಾಗ್ರಿಗಳನ್ನು ಮಾರಾಟ ಮಾಡುವ ಸಂಸ್ಥೆ. ಹೀಗೆ ೧೯೮೮ರಲ್ಲಿ (ದಸ್ತಕರ್ ಆಂಧ್ರ) ಅಸ್ತಿತ್ವಕ್ಕೆ ಬಂತು. ಈ ರೀತಿ ಯೋಚಿಸುವ ಅನೇಕ ಚೇತನಗಳು ಈ ಸಂಘಟನೆಯಲ್ಲಿ ಸಂಗಮಿಸಿದವು.

ಶಂಭು ಪ್ರಸಾದ್ ಚೆನ್ನೈ ಐಐಟಿಯಲ್ಲಿ ಎಂಜಿನಿಯರಿಂಗ್ ಪದವಿಗಾಗಿ ಓದುತ್ತಿದ್ದ. ಪದವಿಯಿಂದ ಯಾವ ಪ್ರಯೋಜನವಿಲ್ಲ ಎಂದು ಅವನಿಗೆ ಅನ್ನಿಸುತ್ತಿತ್ತು. ಐಐಟಿಯಲ್ಲಿ ಕಳೆದ ಐದು ವರ್ಷಗಳಲ್ಲಿ ತನ್ನ ಅಕಾಡೆಮಿಕ್ ವಿದ್ಯಾಭ್ಯಾಸದ ಜತೆಗೆ ಕ್ರಿಯಾಶೀಲ ಬದುಕಿನ ಕನಸು ಕಾಣುತ್ತಿದ್ದ. ಈ ವಿದ್ಯಾಭ್ಯಾಸ ಹೇಗೆ ಭಾರತದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನೆರವಾದೀತು ಎಂಬ ಪ್ರಶ್ನೆ ಆತನನ್ನು ಕಾಡುತ್ತಿತ್ತು. ಅವನ ಅನೇಕ ಗೆಳೆಯರೂ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಭ್ರಮನಿರಸನಗೊಂಡಿದ್ದರು.

ಪಿ.ಎಚ್‌ಡಿಗಾಗಿ ಅಮೆರಿಕಾಕ್ಕೆ ಹೋಗುವುದಾಗಲಿ ಅಥವಾ ಯಾವುದಾದರೂ ದೊಡ್ಡ ಉದ್ಯಮದಲ್ಲಿ ದೊಡ್ಡ ಹುದ್ದೆ ಸೇರುವುದಾಗಲಿ, ಆತನಿಗೆ ವಿಶೇಷ ಅನ್ನಿಸಲಿಲ್ಲ. ಆತ ಬೇರೆ ಸಾಧ್ಯತೆಗಳನ್ನು ಹುಡುಕುತ್ತಿದ್ದಾಗ ಈ ಕುಶಲಕರ್ಮಿಗಳ ಸಂಘಟನೆ ಆತನನ್ನು ಸೆಳೆಯಿತು. ೧೯೯೦ರಲ್ಲಿ ಶಂಭು ಎಂಜನಿಯರಿಂಗ್ ಪದವಿ ಪಡೆಯುವ ವೇಳೆಗೆ, ಆಂಧ್ರಪ್ರದೇಶದಿಂದ ಸ್ಥಳಾಂತರಗೊಂಡವರು ಆತ್ಮಹತ್ಯೆ ಮಾಡಿಕೊಂಡ ವರದಿಗಳು ಪತ್ರಿಕೆಗಳಲ್ಲಿ ಪ್ರಕಟವಾಗ ತೊಡಗಿದವು. ಖಾದಿಯ ಕಲ್ಪನೆ ಹೇಗೆ ಮತ್ತು ಏಕೆ ನಾಶವಾಗುತ್ತಿದೆ ಎಂದು ಆತನಿಗೆ ಆಶ್ಚರ್ಯವಾಯಿತು. ದಸ್ತಕರ್ ಆಂಧ್ರ ಸಂಘಟನೆ ಆರಂಭವಾದಾಗ ಶಂಭೂ ಸಂಘಟನೆ ಸೇರಿದ.

ಇದೇ ರೀತಿ ಆಗಷ್ಟೆ ಎಂಜಿನಿಯರಿಂಗ್ ಪದವಿ ಮುಗಿಸಿದ್ದಳು ಅನ್ನಪೂರ್ಣ. ಆಕೆಗೂ ಆಧುನಿಕ ಜಗತ್ತಿನ ಯಾಂತ್ರಿಕ ಕೆಲಸಗಳಿಗೆ ಹೋಗುವುದು ಇಷ್ಟವಿರಲಿಲ್ಲ. ದಸ್ತಕರ್ ಆಂಧ್ರ ಸೇರಿಕೊಳ್ಳಲು ಬಂದ ಆಹ್ವಾನಕ್ಕೆ ಆಕೆ ಓಗೊಟ್ಟಳು. ಉಜರಮ್ಮಳ ಉತ್ಸಾಹ ಇತರರನ್ನೂ ಆಕರ್ಷಿಸುವಂತಹದು. ಅದಿಲಾಬಾದ್‌ನ ಈ ಪಯಣದಲ್ಲಿ ಪಿ.ಬಿ ಶ್ರೀನಿವಾಸ್ ಎಂಬಾತ ಕೂಡಾ ಖುಷಿಯಿಂದ ಇವರೊಡನೆ ಸೇರಿದ. ಚೆನ್ನೈ ಐಐಟಿ ಮತ್ತು ಕೊಲ್ಕತ್ತಾದ ಐಐಎಂ ಪದವೀಧರ ಶ್ರೀನಿವಾಸ್ ಕಪಾರ್ಟ್ (CAPART – Council for Advancement of People's Action and Rural Technology) ಶಿಷ್ಯವೇತನ ಪಡೆದು ಅದಿಲಾಬಾದ್‌ನ ಕುಶಲಕರ್ಮಿಗಳ ಜತೆ ಕೆಲಸ ಮಾಡುತ್ತಿದ್ದ. ಉಜರಮ್ಮ ಮತ್ತು ಶ್ರೀನಿವಾಸ್ ಜತೆ ಸೇರಿದ್ದು, ಇಬ್ಬರ ಬದುಕಿನಲ್ಲೂ ಮೈಲುಗಲ್ಲಾಯಿತು. ಇಬ್ಬರೂ ಸೇರಿ ಸಣ್ಣ ಕೈಗಾರಿಕೆಗಳ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಿದರು. ಜೆ.ಸಿ ಕುಮಾರಪ್ಪನವರ 'ಶಾಶ್ವತ ಅರ್ಥಶಾಸ್ತ್ರ' ಮತ್ತು ಮಹಾತ್ಮಾ ಗಾಂಧಿಯವರ 'ಹಿಂದ್ ಸ್ವರಾಜ್' ಪುಸ್ತಕಗಳನ್ನು ವಿಶ್ಲೇಷಣಾತ್ಮಕವಾಗಿ ಓದಿದ್ದು ಮಾತ್ರವಲ್ಲದೆ, ಈ ಸಮಸ್ಯೆಗಳಿಗೆ ಪರಿಹಾರ ಗುರುತಿಸಲು ಯತ್ನಿಸಿದರು.

ಈ ಎರಡೂ ಪುಸ್ತಕಗಳು ಅನ್ವೇಷಕರ ಹೃದಯ ತಂತಿಯನ್ನು ಮೀಟಿದವು. ಗಾಂಧೀ ವಿಚಾರಗಳು ನಡೆದ ಹಾದಿ ಅಷ್ಟು ಸ್ಪಷ್ಟವಾಗಿರುವಾಗ, ಕೇವಲ 'ಹಿಂದ್ ಸ್ವರಾಜ್'ನ ವಿಚಾರಗಳಿಗಷ್ಟೆ ಏಕೆ ಅಷ್ಟು ಮಹತ್ವ ನೀಡಲಾಗಿದೆ ಎಂದು ಉಜರಮ್ಮ ಅಚ್ಚರಿಪಟ್ಟಳು. 'ಅಂತ್ಯೋದಯ' ನಮ್ಮ ಗುರಿಯಾಗಬೇಕು. ಈ ಆದರ್ಶವನ್ನು ಕೃತಿಗಿಳಿಸಲು ಗಾಂಧಿ ಅನುಸರಿಸಿದ ಹಾದಿಯತ್ತ ನಾನು ಗಮನ ಹರಿಸುತ್ತೇನೆ. ಗಾಂಧಿ ಚಿಂತನೆಯ ವೈಶಿಷ್ಟ್ಯ ಇರುವುದು ಇಲ್ಲೇ....

ಸಾಮುದಾಯಿಕ ಬದುಕು ಆರೋಗ್ಯಪೂರ್ಣ ಉತ್ಪಾದನಾ ವ್ಯವಸ್ಥೆಗೆ ಉತ್ತಮ ನೆಲಗಟ್ಟು ಎಂಬುದರ ಆಧಾರದ ಮೇಲೆ ದಸ್ತಕರ್ ರೂಪುಗೊಂಡಿತ್ತು. ಆದರೆ ಸಾಮುದಾಯಿಕ ನೆಲೆಯಲ್ಲಿ ಉತ್ಪಾದನೆ ಆಗುವ ಬಟ್ಟೆ ಲಾಭದಾಯಕವಲ್ಲ. ಆದಕಾರಣ ಅದನ್ನು ಸಹಕಾರಿ ವ್ಯವಸ್ಥೆಯ ಮೂಲಕ ರಕ್ಷಿಸಬೇಕು ಎಂಬುದು ಸರಕಾರದ ನೀತಿಯಾಗಿತ್ತು. ಹೀಗೆ ಕೈಮಗ್ಗ ವಲಯವನ್ನು ಮೂಲೆಗೆ ಸರಿಸಿ ಅದು ನಯವಾದ ಬಟ್ಟೆಯನ್ನು ಮಾತ್ರ ಉತ್ಪಾದಿಸುವಂತೆ ಮಾಡಿತ್ತು. ವರ್ಷಗಳು ಕಳೆದಂತೆ ನೇಕಾರರೂ ಸರಕಾರದ ನೀತಿಗೆ ದನಿಗೂಡಿಸುತ್ತ ಬಂದಿದ್ದರು. ತಾವು ಅಸಹಾಯಕರು ಮತ್ತು ಪರಾವಲಂಬಿಗಳು ಎಂಬ ಅಭಿಪ್ರಾಯ ಅವರಲ್ಲಿ ನೆಲೆಗೊಂಡಿತು. ಆದರೆ ನೇಕಾರರು ಜವಳಿ ಉದ್ಯಮದ ತಂತ್ರಜ್ಞರು ಎಂದು ದಸ್ತಕರ್ ಆಂಧ್ರದ ಗೆಳೆಯರು ಭಾವಿಸಿದರು ಹಾಗೂ ಸ್ವತಃ ನೇಕಾರರು ಇದನ್ನು ಅರಿಯಬೇಕೆಂದು ಬಯಸಿದರು.

ಅದಿಲಾಬಾದ್ ಜಿಲ್ಲೆಯ ಸಣ್ಣ ಊರಾದ ಚಿನ್ನೂರಿನ ಆರು ಮಂದಿ ನೇಕಾರರನ್ನು ಒಟ್ಟು ಗೂಡಿಸಿ 'ಚಿನ್ನೂರು ಚೆಯಿನೇತಾ ಕಲಾಸಂಗಂ' ಎನ್ನುವ ಸಂಸ್ಥೆಯನ್ನು ಸಂಘಟಿಸಲು ನೆರವಾದರು. ನೇಕಾರ ಸಮುದಾಯ ಸ್ವಾವಲಂಬಿಯಾಗಲು ಸಂಗಂ ದಾರಿ ಮಾಡಿಕೊಟ್ಟಿತು. ಇದರ ಜತೆಗೆ ಪರಂಪರಾಗತ ಕೌಶಲ ಬಿಡದೆ, ಆಧುನಿಕ ಕೌಶಲ ರೂಢಿಸಿಕೊಂಡು ಸಾಂಸ್ಥಿಕ ಪರ್ಯಾಯವಾಗಿ ಈ ಸಂಗಂ ಕೆಲಸ ಮಾಡುತ್ತಿದೆ.

ಮಹಿಳೆಯರು ಉತ್ಪಾದನಾ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುವುದು ದುಸ್ತರವಾಗಿತ್ತು. ಆದರೆ ದಸ್ತಕರ್ ಆಂಧ್ರದ ಪ್ರಯತ್ನದಿಂದಾಗಿ ಮಹಿಳೆಯರು ಮತ್ತೆ ತೊಡಗಿಕೊಳ್ಳುವಂತಾಯಿತು. ಅವರು ತಮ್ಮ ಮಕ್ಕಳ ಯೋಗಕ್ಷೇಮವನ್ನು ಗಮನಿಸುವುದರ ಜತೆಗೆ ಕೆಲಸದಲ್ಲೂ ತೊಡಗಿಕೊಂಡರು. ಕುಟುಂಬದ ಹಿರಿಯರು ಮಗ್ಗಕ್ಕೆ ಹೋಗುವ ಮೊದಲಿನ ಚಟುವಟಿಕೆಗಳನ್ನು ನೋಡಿಕೊಳ್ಳುತ್ತಿದ್ದರು. ನೆರೆಹೊರೆಯವರು ನೂಲನ್ನು ಒಂದೇ ಅಳತೆಯುಲ್ಲಿಡಲು ನೆರವಾಗುತ್ತಿದ್ದರು. ಕ್ರಮೇಣ ಬಹುತೇಕ ನೇಕಾರ ಕುಟುಂಬಗಳು ನೈಸರ್ಗಿಕ ಬಣ್ಣಗಳನ್ನು ತಯಾರಿಸುವುದನ್ನು ಕಲಿತರು. ಅವರು ಹೊಸ ಹೊಸ ಬಣ್ಣಗಳನ್ನು ಕಂಡು ಹಿಡಿದು ಕೈಮಗ್ಗದ ಬಟ್ಟೆ ಧರಿಸಲು ತೊಡಗಿದರು.

ಈ ನೈಸರ್ಗಿಕ ಬಣ್ಣಗಳ ಬಗ್ಗೆ ಹೆಚ್ಚಿನ ತಿಳುವಳಿಕೆ ಪಡೆಯಲು ದಸ್ತಕರ್ ಆಂಧ್ರ ತಂಡ ಕೆ.ವಿ ಚಂದ್ರಮೌಳಿಯವರನ್ನು ಸಂಪರ್ಕಿಸಿತು. ನೈಸರ್ಗಿಕ ಬಣ್ಣ ತಯಾರಿಕಾ ಕ್ಷೇತ್ರದಲ್ಲಿ ಚಂದ್ರಮೌಳಿ ನಿಷ್ಣಾತರು. ಅವರು ಕಳೆದ ೪೦ ವರ್ಷಗಳಿಂದ ನೈಸರ್ಗಿಕ ಬಣ್ಣ ತಯಾರಿಕೆ

ಕುರಿತು ಸಾಕಷ್ಟು ಅಧ್ಯಯನ ಮಾಡಿದ್ದರು. ಈ ಕಲೆ ಸಂಪೂರ್ಣವಾಗಿ ಅಳಿದು ಹೋಗುವ ಮೊದಲೇ ಅನೇಕ ಹಳ್ಳಿಗರಿಂದ ಕರಗತ ಮಾಡಿಕೊಂಡಿದ್ದರು. ದಸ್ತಕರ್ ಆಂಧ್ರ ಗುಂಪಿಗೆ ಇವರು ಪ್ರಿಯರಾಗುವುದಕ್ಕೆ ಕಾರಣ, ತಾಂತ್ರಿಕ ವಿವರಗಳ ಕುರಿತ ಇವರ ಅತಿಯಾದ ಆಸ್ಥೆ ಮಾತ್ರವಲ್ಲ, ಬದ್ಧತೆ ಕೂಡ.

ತಮ್ಮ ಅಭಿವೃದ್ಧಿಗೆ ಮಾತ್ರ ಪ್ರಾಮುಖ್ಯ ನೀಡದೆ, ಜ್ಞಾನ ವಿನಿಮಯ ಸಾಧ್ಯವಾಗಿಸುವುದು ಹೇಗೆ ಎಂಬುದನ್ನು ಚಂದ್ರಮೌಳಿಯವರಿಂದ ಈ ತಂಡ ಅರಿಯಿತು. ನಂತರದ ದಿನಗಳಲ್ಲಿ ಅವರು ಹೀಗೆ ಬರೆದರು...

'ಪ್ರಪಂಚದ ಎಲ್ಲೆಡೆ ಪ್ರಾಚೀನ ಸಮಾಜಗಳಿಗೆ ಸ್ಥಿರತೆ ನೀಡಿದ ಒಂದು ಪರ್ಯಾಯ ದೃಷ್ಟಿಯೊಂದಿದೆ. ಅದು ವಾತಾವರಣ, ನೀರು, ಮಣ್ಣು ಮತ್ತು ಸಾಮರ್ಥ್ಯಕ್ಕೆ ತಕ್ಕುದಾದ ಕಡಿಮೆ ಶಕ್ತಿ ಬೇಡುವ ತಾಂತ್ರಿಕತೆ ರೂಪಿಸಿಕೊಳ್ಳುವ ಅವಕಾಶ ನೀಡಿತು. ಈ ದೃಷ್ಟಿಕೋನದ ಪ್ರಕಾರ, ಜ್ಞಾನದ ಮೇಲೆ ಸಮುದಾಯಕ್ಕೆ ವಿಶೇಷ ಹಕ್ಕಿದೆ. ಜ್ಞಾನ ಎಲ್ಲರ ಒಳಿತಿಗಾಗಿಯೇ....'

ಆದರೆ ಈ ಆದರ್ಶವನ್ನು ಕೃತಿಗಿಳಿಸಲು ಸಾಧ್ಯವೇ? ಅದನ್ನು ಚಿನ್ನೂರಿನ ನೇಕಾರರ ಜತೆ, ಶ್ರೀ ಕಾಳಹಸ್ತಿಯ ಕಲಾವಿದರ ಜತೆ, ಎಲ್ಲೂರಿನ ನೇಕಾರರ ಜತೆ ಕೆಲಸ ಮಾಡಿ ಪರೀಕ್ಷೆಗೆ ಒಡ್ಡಿದರು. ಆರು ವರ್ಷಗಳ ನಂತರ ಸ್ವದೇಶಿ ಎಂದರೆ ಸಾಮುದಾಯಿಕ ಸಂಶೋಧನೆ, ತಯಾರಿಕೆ ಎಂಬ ಅಭಿಪ್ರಾಯಕ್ಕೆ ಬಂದರು. ನಂತರದ ದಿವಸಗಳಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಶಂಭು ಹೀಗೆ ಬರೆಯುತ್ತಾನೆ:

'ಕುಶಲ ಕಲಾವಿದ ಜ್ಞಾನದ ಭಂಡಾರ ಮಾತ್ರವಲ್ಲ. ಜ್ಞಾನವನ್ನು ಮರುಸೃಷ್ಟಿಸುವಲ್ಲಿ ಕ್ರಿಯಾಶೀಲವಾಗಿ ಅವನ ತಿಳುವಳಿಕೆ ಯಾವುದೇ ಒಂದು ಮ್ಯೂಸಿಯಂನಲ್ಲಿ ಪ್ರದರ್ಶನಕ್ಕಿಡುವುದಕ್ಕಿಂತ ಮುಖ್ಯವಾಗಿ, ಅದು ಅವನ ಹಾಗೂ ನಮ್ಮೆಲ್ಲರ ಬದುಕಿನ ಒಂದು ಭಾಗ. ನಮ್ಮ ಸ್ವದೇಶಿ ಆಲೋಚನೆಯಲ್ಲಿ ಆತನದೇ ಬಹುಮುಖ್ಯ ಪಾತ್ರ. ಅಲ್ಲದೇ ಹೋದರೆ, ಆ ಆಲೋಚನೆ ಅನೇಕ ಮಿತಿಗಳಿಂದ ಬಳಲಬೇಕಾಗುತ್ತದೆ. ಕಲಾವಿದ ನಮ್ಮ ಆಲೋಚನೆ, ನಾವು ಊಹಿಸಲಾರದ ಅನೇಕ ಕ್ಷೇತ್ರಗಳನ್ನು ಆವರಿಸಿಕೊಳ್ಳುವಂತೆ ಮಾಡಬಲ್ಲ.

ಆದರೆ ಈ ಸೃಷ್ಟಿಶೀಲ ಸಾಧ್ಯತೆ ನಮ್ಮ ಆರ್ಥಿಕ ಪರಿಮಿತಿಯೊಳಗೇ ರೂಪುಗೊಳ್ಳಬೇಕಾಗುತ್ತದೆ.

ದೇಸೀ ಹತ್ತಿ ಕತೆ

ಶತಮಾನಗಳಿಂದ ಅದಿಲಾಬಾದ್ ಸುತ್ತಮುತ್ತ ಹತ್ತಿಯನ್ನು ಹೇರಳವಾಗಿ ಬೆಳೆಯಲಾಗುತ್ತಿದೆ. ಜವಳಿ ಉದ್ಯಮ ಗ್ರಾಮೀಣ ಬದುಕಿನಲ್ಲಿ ಬೆರೆತು ಹೋಗಿತ್ತು. ಹತ್ತಿಗಿಡದ ಕಡ್ಡಿಗಳನ್ನು ಉರುವಲಿಗೆ ಬಳಸಿದರೆ, ಅದರ ಬೀಜಗಳನ್ನು ಮೇವಿಗಾಗಿ ಬಳಸಲಾಗುತ್ತಿತ್ತು. ದೀಪ ಬೆಳಗಿಸಲು ಹತ್ತಿ ಬೀಜದ ಎಣ್ಣೆ ಬಳಸಲಾಗುತ್ತಿತ್ತು. ಹತ್ತಿ ಗಿಡದಲ್ಲಿ ವ್ಯರ್ಥ ಎನ್ನುವುದು ಯಾವುದೂ ಇರಲಿಲ್ಲ.

ಆದರೆ ಇತ್ತೀಚೆನ ದಶಕಗಳಲ್ಲಿ, ರೈತರು ಹತ್ತಿಯನ್ನು ಮಾರಾಟ ಮಾಡುತ್ತಿದ್ದಾರೆ. ಅದನ್ನು ಜಿನ್ನಿಂಗ್ ಕಾರ್ಖಾನೆಗಳಲ್ಲಿ ಹಲವಾರು ಪ್ರಕ್ರಿಯಗಳಿಗೆ ಒಳಪಡಿಸಲಾಗುತ್ತದೆ. ಇವುಗಳನ್ನು ಬೇಲ್‌ಗಳಲ್ಲಿ ಕಟ್ಟುವ ಮುನ್ನ ಹತ್ತಿ ಮತ್ತು ಅದರ ಬೀಜಗಳನ್ನು ಬೇರ್ಪಡಿಸಿ, ಬೇಲ್‌ಗಳನ್ನು ದೂರದ ಗಿರಣಿಗಳಿಗೆ ಕಳುಹಿಸಲಾಗುತ್ತದೆ. ರೈತ ತನ್ನ ಹಿತ್ತಲಲ್ಲಿ ಬೆಳೆದ ಹತ್ತಿ, ನೂಲಾಗಿ ಅವನ ಕೈ ಸೇರುವಾಗ ದುಬಾರಿಯಾಗಿರುತ್ತದೆ. ಈ ವಿಷವರ್ತುಲಕ್ಕೆ ಕೊನೆ ಹಾಡಲು ಸಾಧ್ಯವೇ? ಎಂಬ ಪ್ರಶ್ನೆಯತ್ತ ಗುಂಪು ತನ್ನ ಗಮನ ಕೇಂದ್ರೀಕರಿಸಿತು.

ಆರಂಭದಲ್ಲಿ ಒಂದು ಸಣ್ಣ ರೋಲರ್ ಜಿನ್ ಯಂತ್ರವನ್ನು ಸ್ಥಳೀಯವಾಗಿ ತಯಾರಿಸಲಾಯಿತು. ಅಲ್ಲಿನ ಮಹಿಳೆಯರಿಗೆ ಮನೆಯ ಮೂಲೆಯಲ್ಲಿ ಧೂಳು ತಿನ್ನುತ್ತಿದ್ದ ಚರಕಗಳನ್ನು ಹೊರತೆಗೆಯಲು ತಿಳಿಸಲಾಯಿತು. ಕೆಲ ಹೆಣ್ಣುಮಕ್ಕಳು ನೂಲು ತೆಗೆಯಲು ಸಿದ್ಧರಾದರು. ಆದರೆ ಕೈಯಿಂದ ನಡೆಸುವ ಜಿನ್ನಿಂಗ್ ಮಿಲ್ ಕೆಲಸ ಮಾಡದಾಯಿತು. ಮೃದುವಾದ ಹತ್ತಿ ಬೀಜಗಳು ಪುಡಿಪುಡಿಯಾಗುತ್ತಿದ್ದವು. ಮೊದ ಮೊದಲು ಕೈಯಿಂದ ನಡೆಸುವ ಈ ಜಿನ್ನಿಂಗ್ ಯಂತ್ರದ ಮೂಲಕ ಕೆಲಸ ಮಾಡಲು ಸಾಧ್ಯವೇ ಇಲ್ಲ ಎನಿಸುತ್ತಿತ್ತು. ಆದರೆ ಹಿಂದೆ ಇದೇ ರೀತಿ ಕೆಲಸ ಮಾಡುತ್ತಿದ್ದರಲ್ಲ! ಹಾಗಾದರೆ ಹತ್ತಿಯಲ್ಲಿಯೇ ದೋಷವಿದೆಯೇ?

ಈಗ ಬಿತ್ತನೆಗೆ ಬಳಸುವುದು, ಅಮೆರಿಕೆಯ ಹೈಬ್ರಿಡ್ ತಳಿ ಹತ್ತಿ ಬೀಜ. ಸ್ಥಳೀಯ ಮತ್ತು ದೇಸಿ ಬೀಜಗಳು, ಕೈಯಿಂದ ನಡೆಸುವ ಜಿನ್ನಿಂಗ್ ಯಂತ್ರಕ್ಕೆ ತಕ್ಕುದಾಗಿದ್ದವು. ಹಾಗಾದರೆ, ನಾಟಿ ತಳಿಯ ಹತ್ತಿಯನ್ನು ಏಕೆ ಬೆಳೆಯಲಾಗುತ್ತಿಲ್ಲ? ಇದನ್ನು ತಿಳಿದುಕೊಳ್ಳಲು ದಸ್ತಕರ್ ಆಂಧ್ರ ಮುಂದಾಯಿತು. ಈ ಗೆಳೆಯರ ಜತೆಗೆ ಎಲ್. ಕಣ್ಣನ್ ಎಂಬ ಎಂಜಿನಿಯರ್ ಇದ್ದರು. ಅವರು ಈಗ ಚೆನ್ನೈನ ಪಿಪಿಎಸ್‌ಟಿ ಪ್ರತಿಷ್ಠಾನದಲ್ಲಿ (Patriotic and People Oriented Science and Technology) ಪೂರ್ಣಾವಧಿ ಕಾರ್ಯಕರ್ತರಾಗಿದ್ದರು. ಈ ಪ್ರತಿಷ್ಠಾನ ೧೯೭೦ರಲ್ಲಿ ಸ್ಥಾಪನೆಯಾಯಿತು. ಭಾರತೀಯ ಸಂದರ್ಭಕ್ಕೆ ಕಿಂಚಿತ್ತೂ ಸಂಬಂಧವಿಲ್ಲದ ಔಪಚಾರಿಕ ರಾಜಕೀಯ ಸಿದ್ಧಾಂತಗಳಿಂದ ಭ್ರಮನಿರಸನಗೊಂಡ ಕಿರಿಯ ವಿಜ್ಞಾನಿಗಳು ಇದನ್ನು ಸ್ಥಾಪಿಸಿದರು. ನಮ್ಮ ನೆಲದ ಹಿನ್ನೆಲೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಕಾಣ್ಕೆಯನ್ನು ಇರಿಸಿಕೊಂಡು ಕಳೆದೆರಡು ದಶಕಗಳಿಂದ ಪಿಪಿಎಸ್‌ಟಿ ಕೆಲಸ ಮಾಡುತ್ತಿದೆ. ಈ ಸಂಘಟನೆ ಭಾರತೀಯ ಶ್ರೀ ಸಾಮಾನ್ಯನ ನಿರೀಕ್ಷೆ ಮತ್ತು ಬಯಕೆಗಳೊಡನೆ ಬೆಸೆದುಕೊಂಡಿದೆ. ಹತ್ತಿ ವ್ಯವಸಾಯದ ಇತಿಹಾಸ ಮತ್ತು ರಾಜಕಾರಣದ ಬಗ್ಗೆ ಕಣ್ಣನ್ ಅಧ್ಯಯನ ಈ ದಿಸೆಯಲ್ಲೊಂದು ಸಣ್ಣ ಆದರೆ ಮಹತ್ವದ ಪ್ರಯತ್ನ.

ಕೇವಲ ಒಂದು ಶತಮಾನದ ಹಿಂದೆ ಭಾರತ ವಿವಿಧ ಬಗೆಯ ಹತ್ತಿಯನ್ನು ಬೆಳೆಯುತ್ತಿತ್ತು. ಮತ್ತು ಅದರಿಂದ ಪ್ರಪಂಚದಲ್ಲಿಯೇ ಅತ್ಯುತ್ತಮ ಗುಣಮಟ್ಟದ ಬಟ್ಟೆಯನ್ನು ತಯಾರಿಸುತ್ತಿತ್ತು. ಹತ್ತಿಯ ಈ ದೇಸಿ ತಳಿಗಳು ನೀರು ಹೀರಿಕೊಳ್ಳುವಿಕೆಯಲ್ಲಿ, ಬಣ್ಣ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯದಲ್ಲಿ ಹಾಗೂ ತಾಳಿಕೆಯಲ್ಲಿ ಮೇಲ್ಮಟ್ಟದವು.

ಆದರೆ ಬ್ರಿಟಿಷ್ ತಯಾರಿಕೆಯ ನೂಲುವ ಯಂತ್ರಗಳು ಈ ದೇಸಿ ತಳಿ ಹತ್ತಿಯಿಂದ ನೂಲು ತೆಗೆಯಲು ವಿನ್ಯಾಸಗೊಳಿಸಿದ್ದಲ್ಲ. ದೇಶ ಗುಲಾಮಗಿರಿಯಲ್ಲಿದ್ದ ಸಂದರ್ಭದಲ್ಲಿ ಹಾಗೂ ಸ್ವಾತಂತ್ರ್ಯೋತ್ತರ ಭಾರತದಲ್ಲಿಯೂ ಸರಕಾರದ ನೀತಿ ಅಮೆರಿಕ ತಳಿಯನ್ನು ಉತ್ತೇಜಿಸುವಂತೆ ಇತ್ತು ಮತ್ತು ಅದರಿಂದಾಗಿಯೇ ದೇಸಿ ತಳಿಗಳು ನಾಶವಾದವು.

ಈ ಹೈಬ್ರಿಡ್ ತಳಿಯ ಹತ್ತಿಗಳಿಗೆ ಹೆಚ್ಚು ನೀರು, ಕೀಟನಾಶಕ ಮತ್ತು ರಾಸಾಯನಿಕ ಗೊಬ್ಬರಗಳು ಬೇಕಾಗುತ್ತವೆ. ಹಿಂದೆ ರೈತರು ತಮ್ಮ ಆಹಾರಕ್ಕೆ ಅಗತ್ಯವಾದ ಕಾಳು ಕಡಿಗಳ ಜತೆ ಹತ್ತಿಯನ್ನೂ ಬೆಳೆಯುತ್ತಿದ್ದರು. ಈಗ ಕೊಯಿಲು ಉತ್ತಮವಾಗಿ ಹೇರಳ ಲಾಭ ತರುವ ಅಮೆರಿಕನ್ ಹತ್ತಿಯನ್ನು ಬೆಳೆಯತೊಡಗಿದರು. ಆದರೆ ಇದರಿಂದಾಗಿ ಸಣ್ಣ ಮತ್ತು ಅತಿ ಸಣ್ಣ ರೈತರು ಸಂಕಷ್ಟಕ್ಕೆ ಸಿಲುಕಬೇಕಾಯಿತು. ಈ ಎಲ್ಲ ಅನುಕೂಲಗಳಿದ್ದಾಗ್ಯೂ ಏಕ ರೀತಿ ಬೆಳೆ ಬೆಳೆಯುವುದರಿಂದ ರೈತ ತೀವ್ರ ನಷ್ಟ ಅನುಭವಿಸುತ್ತಿದ್ದ.

೧೯೯೦ರ ವೇಳೆಗೆ ಹತ್ತಿ ಬೆಳೆಯ ದುಷ್ಪರಿಣಾಮಗಳು ಬೃಹತ್ ಸಾಮಾಜಿಕ ಸಂಕಷ್ಟವನ್ನು ಸೃಷ್ಟಿಸಿದವು. ಸಾಲಗಾರರಾದ ಹಲವಾರು ಮಂದಿ ರೈತರು ಆಂಧ್ರ, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಆತ್ಮಹತ್ಯೆ ಮಾಡಿಕೊಳ್ಳತೊಡಗಿದರು.

ಇವೆಲ್ಲಕ್ಕೂ ಕಾರಣ ಹೈಬ್ರಿಡ್ ಹತ್ತಿಯ ಕೃಷಿ. ಭಾರತದಲ್ಲಿ ಹತ್ತಿ ಬೆಳೆಯುತ್ತಿದ್ದುದು ಒಟ್ಟು ಕ್ಷೇತ್ರದ ಶೇಕಡಾ ೫ರಷ್ಟು ಪ್ರದೇಶದಲ್ಲಿ. ಆದರೆ ದೇಶದ ಒಟ್ಟು ಕೀಟನಾಶಕ ಬಳಕೆಯಲ್ಲಿ ಶೇ.೫೦–೬೦ ಭಾಗ ಈ ಬೆಳೆಗೆ ವ್ಯಯವಾಗುತ್ತಿತ್ತು. ೧೯೯೬ರಲ್ಲಿ ಕಣ್ಣನ್ ಈ ರೀತಿ ಬರೆದರು:

'ಬಹುತೇಕ ಹತ್ತಿಯೊಂದನ್ನೇ ಬೆಳೆಯುವ ಪ್ರದೇಶ ಹಸಿರು–ಮರಳುಗಾಡಿನಂತಿರುತ್ತದೆ. ಈ ಇಡೀ ಪ್ರದೇಶವು ವಾತಾವರಣದಲ್ಲಿ ವಿಷವನ್ನು ಸುರಿಸುತ್ತಿರುವ ಒಂದು ದೊಡ್ಡ ಗ್ಯಾಸ್ ಛೇಂಬರಿನಂತೆ ಕಾಣುತ್ತದೆ. ಇಲ್ಲಿ ಬಳಸುವ ರಾಸಾಯನಿಕಗಳು ಭೂಮಿಯನ್ನು ವಿಷಯುಕ್ತವಾಗಿಸುತ್ತವೆ; ಅಂತರ್ಜಲವನ್ನು ಕಲುಷಿತಗೊಳಿಸುತ್ತವೆ ಮತ್ತು ಆಹಾರ ಸರಪಳಿಯನ್ನೂ ಸೇರಿ ಅನೇಕ ತೊಂದರೆಗಳನ್ನುಂಟುಮಾಡುತ್ತವೆ...'

ಇದಕ್ಕೆ ತದ್ವಿರುದ್ಧವಾಗಿ ದೇಸಿ ತಳಿಗಳು ಬಹಳ ಉಪಯುಕ್ತವಾಗಿವೆ. ಈ ಕುರಿತು ದಸ್ತಕರ್ ಆಂಧ್ರ ಹೊರತಂದ Weaving a Vision (ಕಾಣ್ಕೆಯೊಂದನ್ನು ನೇಯುತ್ತಾ) ಉದ್ಧೃತ ಭಾಗ ಹೀಗಿದೆ:

'ದೇಸಿ ಹತ್ತಿ ತಳಿಗಳಿಗೆ ನೀರಾವರಿಯ ಅಗತ್ಯವಿಲ್ಲ. ಸ್ವಲ್ಪ ಗೊಬ್ಬರವಷ್ಟೇ ಸಾಕು. ಕೀಟಗಳ ಉಪಟಳ ತಡೆದುಕೊಳ್ಳುವ ಶಕ್ತಿ ಇವುಗಳಿಗೆ ಇರುತ್ತದೆ. ಇದನ್ನು ತೊಗರಿಯಂತಹ ಆಹಾರದ ಬೆಳೆಯ ಸಂಗಡ ಅಂತರ ಬೆಳೆಯಾಗಿ ಬೆಳೆಯಲಾಗುತ್ತದೆ. ಅದನ್ನು ಮುಂಗಾರಿನಲ್ಲಾಗಲೀ ಹಿಂಗಾರಿನಲ್ಲಾಗಲೀ ಬೆಳೆಯಬಹುದಾಗಿದೆ. ಈ ಬೆಳೆ ತಳಿ ಮತ್ತು ಬಿತ್ತನೆಯ ಸಮಯವನ್ನು ಆಧರಿಸಿ ೫ರಿಂದ ಹತ್ತು ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ. ಮಣ್ಣು ಮತ್ತು ವಾತಾವರಣದ ಭೇದಗಳಿಗೆ ಈ ಬೆಳೆ ಹೊಂದಿಕೊಳ್ಳುತ್ತದೆ. ನಿರ್ದಿಷ್ಟ ಸಮಯದಲ್ಲಿ

ನೀರನ್ನು ನೀಡಲಾಗುತ್ತದೆ. ಅಂತರ ಬೆಳೆಯಾಗಿ ಬೆಳೆಯುವುದರಿಂದ ಇದಕ್ಕೆ ಕೀಟಗಳ ಉಪಟಳ ತಡೆದುಕೊಳ್ಳುವ ಶಕ್ತಿ ಬರುತ್ತದೆ ಮತ್ತು ಕೆಲವು ವೇಳೆ ಇದೇ ಗಿಡ ಕೀಟ ವಿಕರ್ಷಕವಾಗಿಯೂ, ಹಸಿರೆಲೆ ಗೊಬ್ಬರ ಒದಗಿಸುವುದಕ್ಕಾಗಿಯೂ ಮತ್ತು ಬಣ್ಣ ಮಾಡುವುದಕ್ಕಾಗಿಯೂ ಬಳಕೆಯಾಗುತ್ತದೆ.

ಈ ಬಗ್ಗೆ ಅನ್ವೇಷಣೆಗಳು ಮುಂದುವರೆದಂತೆ ಅಮೆರಿಕದಲ್ಲಿ, ಅದರಲ್ಲೂ ವಿಶೇಷವಾಗಿ ಪೆರುವಿನಲ್ಲಿ ಬಣ್ಣ ಬಣ್ಣದ ಹತ್ತಿಯನ್ನು ಹೇರಳವಾಗಿ ಬೆಳೆಯಲಾಗುತ್ತಿತ್ತು ಎಂಬುದು ತಿಳಿದು ಬಂತು. ಆದರೆ ಭಾರತದಲ್ಲಿ ಹೇಗೋ ಹಾಗೇ ಪೆರುವಿನಲ್ಲೂ ಅತಿ ಸೂಕ್ಷ್ಮ ಹೈಬ್ರಿಡ್ ತಳಿಗಳನ್ನು ರಕ್ಷಿಸುವ ಸಲುವಾಗಿ ದೇಸಿ ಹತ್ತಿ ಮರಗಳನ್ನು ನಿರ್ದಯವಾಗಿ ನಾಶಪಡಿಸಲಾಯಿತು. ಆ ದೇಶಗಳಲ್ಲಿ ಈಗಲೂ ದೇಸಿ ತಳಿಗಳನ್ನು ಬೆಳೆಸಲು ಅಡ್ಡಿಯುಂಟುಮಾಡುವ ಕಾನೂನುಗಳಿವೆ.

ಈ ಬಗ್ಗೆ ಆಳವಾದ ಅಧ್ಯಯನ ನಡೆಸಿದ ದಸ್ತಕರ್ ಆಂಧ್ರ ಹಲವಾರು ದೇಸಿ ತಳಿಗಳನ್ನು ಗುರುತಿಸಿತು. ಅವುಗಳಲ್ಲಿ ಎರಡು ಬಗೆಯ ತಳಿಗಳು ದೀರ್ಘವಾದ ಸೂಕ್ಷ್ಮ ಎಳೆಯನ್ನು ಹೊಂದಿದ್ದವು. ಈ ಹುಡುಕಾಟ ಇವರನ್ನು ಸಂಶೋಧನಾ ಕೇಂದ್ರಗಳಿಗೂ ಮತ್ತು ರೈತರ ಬಳಿಗೂ ಕರೆದೊಯ್ದಿತು. ಈಗಲೂ ಸಾಂಪ್ರದಾಯಿಕ ವಿಧಾನದಲ್ಲಿ ಉತ್ತಮ ದರ್ಜೆ ಖಾದಿ ತಯಾರಿಸುತ್ತಿದ್ದ ಶ್ರೀಕಾಕುಳಂ ಜಿಲ್ಲೆಯ ನೇಕಾರರ ಸಣ್ಣ ಸಮುದಾಯ ದಿಗ್ಭ್ರಮೆಗೊಳಿಸುವ ಪಾಠ ಹೇಳಿಕೊಟ್ಟಿತು. ಇದನ್ನು ಯಾವುದೇ ಬಟ್ಟೆ ತಯಾರಿಸುವ ಯಂತ್ರದಿಂದ ಮಾಡಲು ಸಾಧ್ಯವೇ ಇಲ್ಲ.

ಹೀಗೆ ದಸ್ತಕರ್ ಆಂಧ್ರ ತಂಡದ ಅನ್ವೇಷಣೆ ಸಾಗಿತು. ಗಾಂಧಿ ಕೂಡಾ ತಮ್ಮ ಖಾದಿ ಪಯಣದಲ್ಲಿ ಹಲವಾರು ಕಡೆ ಈ ರೀತಿಯ ಅನುಭವ ಪಡೆದಿದ್ದರು ಎಂದು ನಂತರದ ದಿನಗಳಲ್ಲಿ ಶಂಭೂಗೆ ಗೊತ್ತಾಯಿತು. 'ನಾನೊಬ್ಬ ಅನ್ವೇಷಕ, ನಾನು ಒಂದು ವಸ್ತುವನ್ನು ಅನ್ವೇಷಿಸಿದ ನಂತರ ಅದಕ್ಕೇ ಅಂಟಿಕೊಳ್ಳಬೇಕು. ಹಳೆಯ, ಬದಿಗೆ ಸರಿದ ವಸ್ತುಗಳ ಸಾಧ್ಯತೆಯನ್ನು ಹೊರಗೆಡಹುವುದಷ್ಟೇ ನಾನು ಮಾಡಬಹುದಾದ ಕೆಲಸ' ಎಂದು ಗಾಂಧಿ ಚರಕಾ ಕುರಿತು ಮಾತನಾಡುತ್ತಾ ಹೇಳುತ್ತಾರೆ.

'ಸ್ವದೇಶಿಯ ಹುಡುಕಾಟ ಎಂದರೆ ನಮ್ಮ ಪರಂಪರೆಯಲ್ಲಿ ಹುದುಗಿರುವ ಸಾಧ್ಯತೆಗಳನ್ನು ಅನ್ವೇಸುವುದು ಎಂದೇ ಅರ್ಥ' ಎಂಬುದು ದಸ್ತಕರ್ ಆಂಧ್ರಕ್ಕೆ ಕ್ರಮೇಣ ಅರಿವಾಯಿತು. ಇದು ಹಲವಾರು ಪರಂಪರೆಗಳ ವಿವರಗಳನ್ನು ಅಧ್ಯಯನ ಮಾಡುವಂತೆ ಅವರನ್ನು ಪ್ರೇರೇಪಿಸಿತು. ನಮ್ಮ ದೇಶದ ಆರ್ಥಿಕತೆಯನ್ನು ಅಭ್ಯಸಿಸಲು ಹೊರಟಾಗ ಗ್ರಂಥಾಲಯಗಳಲ್ಲಿ, ಭಂಡಾರಗಳಲ್ಲಿ ಲಭ್ಯವಾದ ಎಲ್ಲ ಆಕರಗಳೂ ವ್ಯಾಪಾರದ ರಾಜಕಾರಣ, ಈಸ್ಟ್ ಇಂಡಿಯಾ ಕಂಪೆನಿಯ ವ್ಯಾಪಾರ ವಹಿವಾಟನ್ನು ಮಾತ್ರ ತಿಳಿಸುತ್ತಿದ್ದವು. ಸಾಮಾನ್ಯ ಜನ ಹೇಗೆ ಜೀವನ ಸಾಗಿಸುತ್ತಿದ್ದರು ಎಂಬ ಬಗ್ಗೆ 'ಇತಿಹಾಸ'ಕ್ಕೆ ಏನೇನೂ ಆಸಕ್ತಿ ಇರಲಿಲ್ಲ. ನಾವು ಈ ಸಾಂಪ್ರದಾಯಿಕ ಸಮುದಾಯಗಳ ದೃಷ್ಟಿಯಿಂದ ಭಿನ್ನ ರೀತಿಯ ಇತಿಹಾಸ ಬರೆಯಲು ಸಾಧ್ಯವೇ ಎಂಬುದು ಇನ್ನೊಂದು ಪ್ರಶ್ನೆಯೂ ಮೂಡತೊಡಗಿತು.

ಪ್ರಾಯಶಃ ಕಳೆದ ಇನ್ನೂರು ವರ್ಷಗಳಿಂದೀಚೆಗೆ ವ್ಯಕ್ತಿಗಳು ತೆಗೆದುಕೊಂಡ ನಿರ್ಧಾರ ಮತ್ತು ಆಯ್ಕೆಯ ಮೇಲೆ ಸಮಕಾಲೀನ ವಾಸ್ತವ ರೂಪುಗೊಂಡಿದೆ. ಮೊದಮೊದಲು ವ್ಯಕ್ತಿಯನ್ನು ಸಮುದಾಯದ ಒಂದು ಭಾಗವಾಗಿ ಪರಿಗಣಿಸಿದ್ದರೆ, ಅದಕ್ಕೆ ಪ್ರತಿಯಾಗಿ ಈಗ ಸಮುದಾಯವನ್ನು ಬಲಿಗೊಟ್ಟು ವೈಯಕ್ತಿಕ ಕಾಳಜಿಗಳನ್ನು ಪೋಷಿಸುವ ಪ್ರಕ್ರಿಯೆ ಕಂಡುಬರುತ್ತಿದೆ. ವರ್ತಮಾನವನ್ನು ಅರ್ಥಮಾಡಿಕೊಂಡು ಭವಿಷ್ಯದತ್ತ ಹೊಸ ನೋಟ ಹಾಯಿಸುವುದು ಇತಿಹಾಸಕಾರರು ಮತ್ತು ಸಮುದಾಯಗಳು ಕೂಡಿ ಮಾಡಬೇಕಾದ ಪ್ರಯತ್ನ ಅಥವಾ ಸಾಹಸವಾಗಿದೆ. ಇದನ್ನು ಉಜರಮ್ಮ ಕಾಣುವುದು ಹೀಗೆ:

'ನೆರಳಿಲ್ಲದ ಮನುಷ್ಯರಂತೆ ಸಾಂಪ್ರದಾಯಿಕ ಸಮುದಾಯಗಳು ಚರಿತ್ರೆಯಿಂದ ಬೇರ್ಪಟ್ಟಿವೆ. ಭವಿಷ್ಯದ ಬಗ್ಗೆ ಕನಸು ಕಾಣಲು ಚರಿತ್ರೆಯಲ್ಲದೇ ಬೇರೆ ಆಧಾರವಿಲ್ಲ. ನೆರಳಿಲ್ಲದವರು ಅವರಿವರ ಕನಸಿಗಾಗಿ ಬದುಕುವ ದುರ್ಭರ ಸ್ಥಿತಿ ತಲುಪುತ್ತಾರೆ. ಒಂದು ತಲೆಮಾರಿನ ಹಿಂದೆ ನಾವು ಏನನ್ನು ನೇಯುತ್ತಿದ್ದೆವು ಅಥವಾ ಐದು ವರ್ಷಗಳ ಹಿಂದೆ ಏನನ್ನು ನೇಯುತ್ತಿದ್ದೆವು ಎಂಬುದು ಆಂಧ್ರದ ಬಹುತೇಕ ನೇಕಾರರಿಗೆ ನೆನಪಿಲ್ಲ. ವಂಶ ಪಾರಂಪರ್ಯವಾಗಿ ಇವರು ಗಳಿಸಿರುವ ಕೌಶಲ ಅನೇಕ ಸಂಶೋಧನೆಗಳಿಗೆ ವಸ್ತುವಾಗುತ್ತದೆ. ನೈಸರ್ಗಿಕವಾಗಿ ಬಣ್ಣ ತಯಾರಿಸುವ ಕಲೆಗೆ ಅತ್ಯಂತ ಸೋಪಜ್ಞವಾದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಇದೆ. ಇವ್ಯಾವುವೂ ಅವರಿಗೆ ತಿಳಿದಿಲ್ಲ.

ಈ ಕುಶಲಕರ್ಮಿಗಳ ಉತ್ಪಾದನೆಗೆ ಮಾರುಕಟ್ಟೆ ದೊರಕಿಸಿಕೊಡುವ ಸರ್ಕಾರೇತರ ಸಂಸ್ಥೆಯಾಗಿ ಹುಟ್ಟಿದ 'ದಸ್ತಕರ್' ಒಂದು ಸಂಶೋಧನಾ ಸಂಘಟನೆಯಾಗಿ ಅರಳತೊಡಗಿತು. ವ್ಯವಸ್ಥೆ ತನ್ನ ನೆಲದ ಸತ್ವವನ್ನು ಬದಿಗಿಟ್ಟು ಏಕೆ ಇನ್ನೊಂದು ಹಾದಿಯನ್ನು ಆರಿಸಿಕೊಂಡಿತು ಎಂಬುದನ್ನು ಇದು ಅರ್ಥಮಾಡಿಕೊಳ್ಳಲು ಯತ್ನಿಸಿತು. ಇಂದು ವಿಕೇಂದ್ರೀಕೃತ ಉತ್ಪಾದನೆಗೆ ಸಹಾಯವಾಗುವ ಮಾಹಿತಿ, ಕ್ರಮ, ನಿರ್ದೇಶನ ಈ ಹುಡುಕಾಟದಲ್ಲಿ ಸಿಕ್ಕರೆ, ಇದರ ಆಧಾರದಲ್ಲಿ ಹೊಸತನ್ನು ಸಾಧಿಸಲು ಯತ್ನಿಸಲಾಗುತ್ತಿತ್ತು. ನಂತರದ ದಿವಸಗಳಲ್ಲಿ ಶಂಭು ಈ ಕುರಿತು ಬರೆದದ್ದು ಹೀಗೆ,

'ಇತಿಹಾಸದಲ್ಲಿ ಸೇರಿಹೋಗಿದ್ದ ಹಾದಿಯನ್ನು ನಾವು ಕಂಡುಕೊಂಡೆವು. ಇದನ್ನು ಏಕೆ ತ್ಯಜಿಸಲಾಯಿತು ಎಂಬುದನ್ನು ತಿಳಿಯಲು ನಮಗೆ ತೀವ್ರ ಆಸಕ್ತಿ ಇತ್ತು. ಕಾಲ ಇನ್ನೂ ಪಕ್ವವಾಗುವ ಮೊದಲೇ ಹೊಮ್ಮಿದ, ಉದ್ದೇಶಪೂರ್ವಕವಾಗಿ ಸದೆಬಡಿಯಲಾದ ಅನೇಕ ಪ್ರಯತ್ನಗಳನ್ನು ಕಂಡು ನಾವು ಶೋಧನೆಯ ಹೊಸ ಇತಿಹಾಸವನ್ನೇ ಬರೆಯಬಹುದಾಗಿದೆ. ಇದನ್ನು ಅರಿಯುವ ಮೂಲಕ ಭಿನ್ನವಾದ ಪರಿಕಲ್ಪನೆ ಮೊಳಕೆಯೊಡೆಯಬಹುದು. ಈ ರೀತಿಯ ಒಂದು ಪ್ರಯತ್ನವನ್ನು ವಿಕೇಂದ್ರೀಕೃತ ನೂಲುವಿಕೆಯಲ್ಲಿ ಮಾಡಲಾಯಿತು'.

ಈ ಪಯಣದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಸ್ಥಳೀಯ ಕಚ್ಚಾವಸ್ತುಗಳ ಗುಣಧರ್ಮಗಳಿಗೆ ಅನುಗುಣವಾಗಿ ಉತ್ಪಾದನಾ ಪ್ರಕ್ರಿಯೆಯನ್ನೇ ಹೊಸ ರೀತಿಯಲ್ಲಿ ಪರಿಭಾವಿಸುವ ಅಗತ್ಯವಿತ್ತು. ಇದಕ್ಕೆ ಹೊಸ ಯಂತ್ರಗಳ ಜತೆಗೆ ಉತ್ಪಾದನಾ ಸರಪಳಿಗಳಲ್ಲಿಯೇ

ಬದಲಾವಣೆ ಆಗಬೇಕಿತ್ತು. ಉದಾಹರಣೆಗೆ: ಪತ್ತಿಯನ್ನು ಬೇಲ್‌ಗಳಲ್ಲಿ ಪ್ಯಾಕ್ ಮಾಡಲು ಅಪಾರವಾದ ಶಕ್ತಿ ಬೇಕು. ಆದರೆ ಸ್ಥಳೀಯವಾಗಿ ಹತ್ತಿ ಪರಿಷ್ಕರಣೆ ಮಾಡಿದರೆ ಬೇಲ್‌ಗಳನ್ನು ಮಾಡುವ ಅಗತ್ಯವೇ ಇರುವುದಿಲ್ಲ. ಇಂಥಹುದೇ ಅನೇಕ ವಿಧಾನಗಳನ್ನು 'ದಸ್ತಕರ್' ಗುಂಪು ತನ್ನ ಅನುಭವದಿಂದ ಕಲಿಯಿತು. ಆನಂತರ ಗಾಂಧಿಯವರೂ ಇದೇ ಹಾದಿ ಹಿಡಿದಿದ್ದರು ಎಂಬ ಅಂಶವನ್ನೂ ಇದು ಕಂಡುಕೊಂಡಿತು.

ಸ್ವದೇಶಿಗಾಗಿ ಹುಡುಕಾಟ

ವರ್ಷಗಳು ಕಳೆದಂತೆ ದಸ್ತಕರ್ ಸದಸ್ಯರು ಗಾಂಧಿಗೆ ಇನ್ನಷ್ಟು ಹತ್ತಿರವಾಗುತ್ತಾ ಬಂದರು. ಗಾಂಧಿಯವರ ಚಿಂತನೆಯನ್ನು ಅಧ್ಯಯನ ಮಾಡುತ್ತಲೇ ಮುನ್ನಡೆಯಬೇಕು ಎಂದು ಶಂಭುಗೆ ಅನಿಸಿತು. ಹೀಗೆ ಶಂಭು ದಸ್ತಕರ್‌ನ ದೈನಂದಿನ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ಬಿಟ್ಟು ಎರಡು ವರ್ಷಗಳ ಅವಧಿಯನ್ನು ಈ ಶತಮಾನದ ಆರಂಭದ ವರ್ಷಗಳ ಖಾದಿ ಇತಿಹಾಸದ ಸಂಶೋಧನೆಗೆ ಮೀಸಲಿಟ್ಟರು. ಖಾದಿ ಕೇವಲ ಬಟ್ಟೆಗೆ ಮಾತ್ರ ಸಂಬಂಧಿಸಿದ್ದಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಪರ್ಯಾಯ ಮಾದರಿಯನ್ನು ರೂಪಿಸುವಲ್ಲಿ ಸಮುದಾಯದ ಪಾತ್ರ ಕುರಿತ ಗಾಂಧಿಯವರ ಕಾಣ್ಕೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಖಾದಿ ಒಂದು ಕೀಲಿಕೈ ಎಂಬುದನ್ನು ಅರಿತ ಶಂಭುಗೆ ಅಚ್ಚರಿಯಾಯಿತು.

ಕೇವಲ 'ವಿನಾಶಕಾರಕ ಅಭಿವೃದ್ಧಿ'ಯನ್ನು ನಿರಾಕರಿಸಿದರೆ ಸಾಲದು ಎಂಬ ಶಂಭು ಅವರ ಬಲವಾದ ನಂಬಿಕೆ ಖಾದಿ ಇತಿಹಾಸ ಅರಿಯುವ ಪಯಣವನ್ನು ಸ್ಫೂರ್ತಗೊಳಿಸಿತು. ಪರ್ಯಾಯ ಮಾದರಿಗಳನ್ನು ಅರಿಯಲು ಇನ್ನೂ ಹೆಚ್ಚಿನ ಶ್ರಮ ಬೇಕಾಗುತ್ತದೆ. ಈ ಪರ್ಯಾಯಗಳನ್ನು ಕಟ್ಟಿಕೊಳ್ಳುವ ಜಾಡು ಗಾಂಧಿಯವರ ಪ್ರಯೋಗಗಳಲ್ಲಿ ಸಿಕ್ಕಿತು. ಬಹಳ ಸುಲಭವಾಗಿ ಸಿಗುವ 'ಗಾಂಧಿ ಸಾಹಿತ್ಯ'ದಲ್ಲಿ ಗಾಂಧೀಜಿಯವರ ಪರಿಕಲ್ಪನೆಯ ಖಾದಿ ಬಗ್ಗೆ ಯಾವ ವಿವರಗಳೂ ದೊರಕಲಿಲ್ಲ. ಆದುದರಿಂದ ಶಂಭು 'ಯಂಗ್ ಇಂಡಿಯಾ' ಮತ್ತು 'ಹರಿಜನ' ಪತ್ರಿಕೆಯ ಸಂಪುಟಗಳನ್ನು ಅಧ್ಯಯನ ಮಾಡತೊಡಗಿದರು. ಅಧ್ಯಯನ ಸಾಗಿದಂತೆ ಗಾಂಧಿ ಜನರನ್ನು ಒಗ್ಗೂಡಿಸುವ ಮಾಂತ್ರಿಕ ಶಕ್ತಿ ಉಳ್ಳವರು ಎಂಬುದು ಹೆಚ್ಚು ಸ್ಪಷ್ಟವಾಗುತ್ತಾ ಹೋಯಿತು ಮಾತ್ರವಲ್ಲ; ನೈಜವಾದ, ಸಾರ್ವಕಾಲಿಕ, ರಚನಾತ್ಮಕ ಯೋಜನೆಗಳ ಹೊಳಹು ಅವರ ಕೃತಿಗಳಲ್ಲಿ ಅಡಗಿರುವುದನ್ನು ಕಂಡುಕೊಳ್ಳತೊಡಗಿದರು.

'ಖಾದಿ, ಕೇವಲ ಬಟ್ಟೆಯ ಬಗೆಗಿನ ಆಂದೋಲನವಲ್ಲ. ವಿವಿಧ ಬಗೆಯ ಜನರನ್ನು ತೊಡಗಿಸಲು ಇದೊಂದು ವಾಹಕ. ಇದರಲ್ಲಿ ಎಲ್ಲರಿಗೂ ಅಂದರೆ–ರಾಜನಿಂದ ರೈತನವರೆಗೆ, ಮಹಿಳೆಯರಿಗೆ, ಕವಿಗಳಿಗೆ, ಕೆಲಸಗಾರರಿಗೆ, ಮಿಲ್ ಮಾಲೀಕರಿಗೆ ಮತ್ತು ಕೊನೆಗೆ ಇಂಗ್ಲಿಷ್‌ನವನಿಗೂ ಪಾತ್ರವಿದೆ. ಈ ಪ್ರಕ್ರಿಯೆಯಲ್ಲಿ ಖಾದಿ ರಚನಾತ್ಮಕ ಕಾರ್ಯಕ್ರಮಗಳ ಬೇರೆ ಬೇರೆ ವಾಹಿನಿಗಳ ನಡುವೆ ಸಂಪರ್ಕ ಕಲ್ಪಿಸುತ್ತಿತ್ತು. ಹೀಗೆ ಮುಖ್ಯವಾಹಿನಿ ರಾಜಕಾರಣ ಮತ್ತು ಅದರಿಂದ ದೂರವಿರುವ ಸಮಾಜದ ನಡುವೆ ಸಂಪರ್ಕ ತರಲು ಸಹಾಯ ಮಾಡಬಲ್ಲುದಾಗಿತ್ತು. ಕಣ್ಣಿಗೆ ಢಾಳಾಗಿ ಕಾಣಿಸುವ ವಿರೋಧಿಯ 'ಅನ್ಯತನ' (ಅದು ಸ್ವದೇಶಿಗೆ

ಸಂಬಂಧಿಸಿರಲಿ ಅಥವಾ ಹಿಂದು ಮುಸ್ಲಿಂ ಸಂಬಂಧಗಳಿಗೆ ಸಂಬಂಧಿಸಿರಲಿ) ಅಳಿಸಲು ಇದು ಗಾಂಧಿ ಕಂಡುಕೊಂಡ ಹಾದಿ ಎನಿಸುತ್ತಿತ್ತು' ವಿಷಯದ ಬಿರುಸನ್ನು ಕಡಿಮೆ ಮಾಡಿ ಪರಿಹಾರದ ಕುರಿತು ಮೂಲಭೂತ ಚರ್ಚೆ ನಡೆಸಲು ಸೂಕ್ತವಾದ ಹಿತಕರ ವಾತಾವರಣ ನಿರ್ಮಿಸಲಾಗುತ್ತಿತ್ತು.

ಖಾದಿಯ ಸಂಸ್ಕರಣೆ ಪ್ರಕ್ರಿಯೆಯನ್ನು ಗಮನಿಸಿದಾಗ ಹತ್ತಿ ಬೆಳೆ, ನೂಲುವಿಕೆ ಮತ್ತು ನೆಯ್ಗೆಯ ನಡುವಣ ಕೊಂಡಿ ಕಳಚಿರುವಂತೆ ಶಂಭೂಗೆ ಅನಿಸಿತು. ಈಗ ಗುಣಮಟ್ಟ ಮತ್ತು ಉತ್ಪಾದಕತೆಯೇ ಹೊಸ ಅರ್ಥ ಪಡೆದುಕೊಳ್ಳಲು ಪ್ರಾರಂಭಿಸಿದೆ ಎನಿಸಿತು.

ಖಾದಿ ಚಳುವಳಿ ಎಂದೂ ಸಾಂಪ್ರದಾಯಿಕ ಮೌಲ್ಯಮಾಪನಕ್ಕೆ ಸಿಕ್ಕಿರಲಿಲ್ಲ. ಎಷ್ಟು ಹಳ್ಳಿಗಳಿಗೆ ಇದು ತಲುಪಿತು ಮತ್ತು ದೇಶಾದ್ಯಂತ ಎಷ್ಟು ಮಂದಿ ಕಾಂಗ್ರೆಸ್ಸಿಗರಿಗೆ ಈ ಪರಿಕಲ್ಪನೆ ಮುಟ್ಟಿತು ಎಂಬ ಆಧಾರದ ಮೇಲೆ ಖಾದಿ ಬೆಳವಣಿಗೆಯನ್ನು ಅರಿಯಬಹುದಿತ್ತು. ಅಖಿಲ ಭಾರತ ನೇಕಾರರ ಸಂಘ ತನ್ನ ಗುರಿಗಳನ್ನೇ ಬದಲಿಸಿಕೊಂಡಿತು. ಮಾರಾಟಕ್ಕೆ ಪ್ರತಿಯಾಗಿ ಖಾದಿಯ ಹರಡುವಿಕೆಯನ್ನು ಮಾನದಂಡವಾಗಿಟ್ಟುಕೊಳ್ಳಲಾಯಿತು. ಖಾದಿ ಈ ಪರಿಕಲ್ಪನೆಯಿಂದ ಜನರ ಮನೆಗಳಲ್ಲಿ ಸ್ವ ಸಂಪೂರ್ಣ ರೀತಿಯಲ್ಲಿ ಬೆಳೆಯತೊಡಗಿತು. ಖಾದಿಯ ಪ್ರಗತಿ ಹೆಚ್ಚಿದಂತೆಲ್ಲ ಆವರೆಗೂ ವಾಣಿಜ್ಯ ಪ್ರಪಂಚ ಅನುಸರಿಸಿಕೊಂಡು ಬಂದ ಕ್ರಮಕ್ಕಿಂತ ತೀರಾ ಭಿನ್ನವಾದ ಮಾರ್ಗ ಕಂಡುಹಿಡಿಯಬೇಕು ಎಂದು ಗಾಂಧಿ ತಿಳಿಸಿದ್ದೂ ಈ ಹಿನ್ನೆಲೆಯಲ್ಲಿ ಅರ್ಥಪೂರ್ಣವಾದ ಮಾತಾಗಿದೆ.

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ವತಿಯಿಂದ ತಯಾರಿಸಿ ಮಾರುವ ಕೆಲವೇ ವಸ್ತುಗಳನ್ನು ಖಾದಿ ಎಂದು ಕರೆದು ಅದರ ವ್ಯಾಪ್ತಿಯನ್ನು ಸಂಕುಚಿತಗೊಳಿಸಲಾಗಿದೆ. ವಾಣಿಜ್ಯ ವಲಯದ ಲಾಭದ ಆಸೆಗೆ ಹೊರತಾದ ಎಲ್ಲ ವಸ್ತುಗಳೂ ಖಾದಿಯ ವ್ಯಾಪ್ತಿಗೆ ಬರುತ್ತವೆ. ಜನರ ಕೈಗಾರಿಕೆಗಳಿಗೆ ಖಾದಿ ಒಂದು ಶಬ್ದರೂಪ. ದುರಾಸೆ ಮತ್ತು ಶೋಷಣೆ ಆರ್ಥಿಕ ಚಟುವಟಿಕೆಗಳ ಆಧಾರವಾಗಬೇಕಿಲ್ಲ ಎಂಬುದನ್ನು ಖಾದಿ ತೋರಿಸಿತು. ಅದರ ಬದಲಾಗಿ ಇಲ್ಲಿ ಕಚ್ಚಾವಸ್ತುವಿನ ಬಳಕೆಯಿಂದ ಸಂಘಟನೆಯ ನಿರ್ವಹಣೆಯವರೆಗೆ ಎಲ್ಲವೂ ಪರಸ್ಪರ ಸಹಕಾರ ಮತ್ತು ಅಹಿಂಸೆಯಿಂದ ಪ್ರೇರಿತವಾದವುಗಳಾಗಿರುತ್ತವೆ.

ಈ ಹಿನ್ನೆಲೆಯಲ್ಲಿ ತೀರಾ ಸಮಕಾಲೀನವೆನಿಸುವ ಸರ್ಕಾರೇತರ ಸಂಘಟನೆಗಳ ಕೆಲಸವನ್ನು ಶಂಭು ಭಿನ್ನ ದೃಷ್ಟಿಯಿಂದ ನೋಡತೊಡಗಿದರು. ಈ ಸಂಘಟನೆಗಳ ಬೆಳವಣಿಗೆ ಮತ್ತು ಯಶಸ್ಸು ಅವು ಜನರ ಆದಾಯವನ್ನು ಎಷ್ಟರಮಟ್ಟಿಗೆ ಹೆಚ್ಚಿಸುತ್ತವೆ ಎಂಬುದರ ಮೇಲೆ ನಿರ್ಧರಿತವಾಗಿರುತ್ತವೆ. ಸ್ವಯಂ ಸೇವಾ ಸಂಸ್ಥೆಗಳು, ಇವಕ್ಕೆ ಹಣ ಸರಬರಾಜು ಮಾಡುವ ಸಂಸ್ಥೆಗಳು ಮತ್ತು ಜನರ ನಿರೀಕ್ಷೆ ಇದೇ ಆಗಿರುತ್ತದೆ. 'ಸಮುದಾಯ ಕಾರ್ಯಕರ್ತರಾದ ನಮ್ಮ ಕೆಲಸ ನಿಜಕ್ಕೂ ಜನರ ಆದಾಯವನ್ನು ಹೆಚ್ಚಿಸುವುದೇ?' ಎಂದು ಶಂಭು ತಮ್ಮನ್ನು ತಾವೇ ಕೇಳಿಕೊಂಡರು. ಆದರೆ ಇವರ ಗುರಿ ಸಮಾಜವನ್ನು ಬಲಪಡಿಸುವುದಾಗಿದೆ. ಸಶಕ್ತ ಸಮಾಜ ಜನರ ಆದಾಯವನ್ನು ಹೆಚ್ಚಿಸಬಲ್ಲದು. ಆದರೆ ಹೆಚ್ಚಿನ ಆದಾಯಮಟ್ಟ ಸಮುದಾಯವನ್ನು ಬಲಪಡಿಸೀತು ಎಂದು ಹೇಳಲು ಸಾಧ್ಯವಿಲ್ಲ.

ಹೀಗಾಗಿ ಗಾಂಧಿಯವರ ದೃಷ್ಟಿಯಲ್ಲಿ ಖಾದಿ, ಆಹಾರಕ್ಕೆ ಸಂಬಂಧಿಸಿದುದಾಗಿತ್ತು; ಸಾಮುದಾಯಿಕ ಮೌಲ್ಯಗಳನ್ನು ವೃದ್ಧಿಗೊಳಿಸುವಂತಹುದಾಗಿತ್ತು; ಸಮುದಾಯದ ಸಂಘಟನಾ ಶಕ್ತಿಯನ್ನು ಹೆಚ್ಚಿಸುವಂತಹುದಾಗಿತ್ತು. ಖಾದಿಯನ್ನು ಕೇವಲ ಬಟ್ಟೆ ಎಂಬುದಾಗಿ ಗಾಂಧೀಜಿಯವರು ನೋಡಲಿಲ್ಲ. 'ಲಕ್ಷಾಂತರ ಮಂದಿಯನ್ನು ಒಳಗೊಂಡ ಪ್ರಪಂಚದ ಬಹತ್ ಸಹಕಾರಿ ಸಂಘಟನೆಯನ್ನು ಸೃಷ್ಟಿಸಬಲ್ಲ ಹಾದಿ' ಎಂದು ಭಾವಿಸಿದರು. ಪರಸ್ಪರ ಅವಲಂಬನೆಯೆ ಇದರ ಅಂತಃಸತ್ವವಾಗಿತ್ತು. ಮಾದರಿ ಖಾದಿ ಕೇಂದ್ರಗಳು ಜಾತಿ, ಗುಂಪುಗಳ ಭೇದವಿಲ್ಲದೇ ನೇಕಾರರು ಮತ್ತು ಗ್ರಾಹಕರು, ಈ ಪ್ರಕ್ರಿಯೆಯಲ್ಲಿ ತೊಡಗಿದ ಇನ್ನಿತರರ ಜತೆ ಸಂವಾದ ಸಾಧಿಸಬೇಕಿತ್ತು. ಇದರ ಯಶಸ್ಸು ಗ್ರಾಮೀಣ ಬದುಕಿನಲ್ಲಿ ಆರೋಗ್ಯ, ನೈರ್ಮಲ್ಯ ಇತ್ಯಾದಿಗಳನ್ನು ಸಾಧಿಸಲು ಅನುವು ಮಾಡಿಕೊಡುತ್ತದೆ. ಖಾದಿ ಭದ್ರ ಆರ್ಥಿಕ ಸಿದ್ಧಾಂತದ ಮೇಲೆ ರೂಪುಗೊಂಡದ್ದು.

ಸ್ವದೇಶಿ ಪರಿಕಲ್ಪನೆಯ ಮೂಲಕ ವಿಜ್ಞಾನವನ್ನು ಮರುವ್ಯಾಖ್ಯೆಗೆ ಒಳಪಡಿಸಬೇಕಾಗಿದೆ. ಇದು ಪೂರ್ವ ಮತ್ತು ಪಶ್ಚಿಮಗಳ ನಡುವಿನ ಚರ್ಚೆಯಲ್ಲ. ಬದಲಿಗೆ ನಿರ್ದಿಷ್ಟ ಮತ್ತು ಕಾರ್ಯಸಾಧುವಾದ ಉತ್ತರಗಳಿಗಾಗಿ ನಡೆಸುವ ಸಾಮುದಾಯಿಕ ಅನ್ವೇಷಣೆಯಾಗಿದೆ.

ಚರಕಾ ಸಂಘ ಸ್ಥಳೀಯ ವ್ಯಾಪಾರಿಗಳ ಸಂಘಟನಾ ಕೌಶಲವನ್ನು ಖಾದಿ ಬೆಳವಣಿಗೆಗೆ ಚೆನ್ನಾಗಿಯೇ ಬಳಸಿಕೊಂಡಿತು. ಈ ಸಾಹಸದಲ್ಲಿ ವ್ಯಾಪಾರಿಗಳನ್ನು ತೊಡಗಿಸಿಕೊಳ್ಳುವುದರಿಂದ ಈ ಸಂಘದ ಗುರಿಯ ತೀವ್ರತೆ ಏನೇನೂ ಕಡಿಮೆಯಾಗುತ್ತಿರಲಿಲ್ಲ. ಗ್ರಾಮೀಣ ಮಾರುಕಟ್ಟೆಯತ್ತ ಗಮನ ಹರಿಸುವ ಮೂಲಕ ಮಾರುಕಟ್ಟೆಯ ಏರುಪೇರುಗಳ ಮೇಲೆ ಹಿಡಿತ ಸಾಧಿಸಬಹುದು ಎಂಬ ನಂಬಿಕೆ ಚರಕಾ ಸಂಘಕ್ಕೆ ಇತ್ತು. ಆ ಸಾಮರ್ಥ್ಯವೂ ಅದಕ್ಕಿತ್ತು. ಚರಕಾ ಸಂಘವು ತನ್ನ ಲಾಭದ ಹಣವನ್ನು ಕಾರ್ಮಿಕ ಸೇವಾನಿಧಿಯ ಮೂಲಕ ನೂಲುವಿಕೆಯಲ್ಲಿ ಸಂಶೋಧನೆ ನಡೆಸಲು ಮತ್ತು ತರಬೇತಿ ಕೇಂದ್ರ ಸ್ಥಾಪನೆಗಾಗಿ ವಿನಿಯೋಗಿಸಿತು. ಚರಕಾ ಸಂಘದ ಈ ಔದ್ಯಮಿಕ ಕಾಣ್ಕೆ ಮತ್ತು ಅದರ ವ್ಯಾಪಾರೀ ಕುಶಲತೆ ಅತ್ಯುನ್ನತಮಟ್ಟದ್ದಾಗಿತ್ತು. ಆದರೆ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದಂತಹ ಸಂಸ್ಥೆಗಳು ಚರಕಾ ಸಂಘದಿಂದ ಪಾಠ ಕಲಿಯಲಿಲ್ಲ ಎಂಬುದು ಬೇಸರದ ವಿಚಾರ. ಎಲ್ಲಕ್ಕಿಂತ ಹೆಚ್ಚಾಗಿ ಸ್ವದೇಶಿ ಎಂದರೆ ಸಾಮಾನ್ಯ ಜನಕ್ಕೆ ಸಂಬಂಧಿಸಿದ್ದು ಎಂಬುದನ್ನು ಖಾದಿ ಸಾಬೀತುಪಡಿಸಿತು. ಅಸಾಧಾರಣವನ್ನು ಸಾಧ್ಯವಾಗಿಸುವವರು ಸಾಧಾರಣ ಜನರೇ ಎಂದು ಶಂಭುಗೆ ಅನಿಸಿತು.

ಕ್ರಮಿಸಬೇಕಾದ ಹಾದಿ ಇನ್ನೂ ಇದೆ

ಸ್ವದೇಶಿ ಪರಿಕಲ್ಪನೆಯ ಈ ನಂಬಿಕೆಯು ದಸ್ತಕರ್ ಆಂಧ್ರದ ಪರಿಶ್ರಮದ ಫಲ. ಸಾಂಪ್ರದಾಯಿಕ ದೃಷ್ಟಿಕೋನದಿಂದ ನೋಡುವುದಾದರೆ ಮೇಲ್ನೋಟಕ್ಕೆ ಯಶಸ್ಸು ಅಷ್ಟಾಗಿ ಕಾಣುತ್ತಿರಲಿಲ್ಲ. ಮನೆಯಲ್ಲಿಯೇ ನೂಲುವಿಕೆಯ ಪ್ರಯತ್ನ ನೆಲದಿಂದ ಮೈದಾಳಬೇಕಿತ್ತು. ಚಿನ್ನೂರಿನ ಆರು ಮಂದಿ ನೇಕಾರರು ತಯಾರಿಸಿದ ಬಟ್ಟೆಗಳು ಭಾರತದಾದ್ಯಂತ ಮಾರಾಟವಾಗತೊಡಗಿದವು. ಅದು ಜನಪ್ರಿಯವೂ ಆಯಿತು. ಆದರೂ ೧೯೯೫-೯೬ರಲ್ಲಿ

ಹನ್ನೊಂದು ಪ್ರದರ್ಶನ ಮತ್ತು ಮಾರಾಟ ಕಾರ್ಯಕ್ರಮಗಳಿಂದ ದಸ್ತಕರ್ ಆಂಧ್ರಕ್ಕೆ ದೊರೆತ ಮೊತ್ತ ಹೆಚ್ಚು ಕಡಿಮೆ ೧೩ಲಕ್ಷ ರೂಪಾಯಿಗಳು. ವಿಶಾಲವಾದ ಆರ್ಥಿಕ ಕ್ಷೇತ್ರದ ಹಿನ್ನೆಲೆಯಲ್ಲಿ ಗಮನಿಸಿದಾಗ ಇದೊಂದು ಸಣ್ಣ ಬಿಂದು. ಆದರೆ ಈ ಗುಂಪು ಮೇಲ್ನೋಟಕ್ಕೆ ಥಾಳಾಗಿ ಕಾಣುವ ದೊಡ್ಡ ಮೊತ್ತಕ್ಕಿಂತ ಕ್ರಮಕ್ರಮವಾಗಿ ಕಲಿಯುವುದನ್ನು ಆಯ್ದುಕೊಂಡಿತು. ಹೀಗಾಗಿ ಚಿನ್ನೂರು ಚುಯಿನೇತಾ ಕಲಾ ಸಂಗಂ ಉದ್ದೇಶಪೂರ್ವಕವಾಗಿ ಆರು ನೇಕಾರರಿಗೇ ತನ್ನನ್ನು ಸೀಮಿತಗೊಳಿಸಿಕೊಂಡಿತು.

ನೈಸರ್ಗಿಕ ಪದಾರ್ಥಗಳಿಂದ ಉತ್ತಮ ಬಟ್ಟೆ ತಯಾರಿಸಿ ಮಾರಾಟ ಮಾಡುವುದು ಸಾಧ್ಯವಷ್ಟೇ ಅಲ್ಲ; ಇದು ತಯಾರಕನಿಗೂ ಬಳಕೆದಾರನಿಗೂ ಲಾಭದಾಯಕ. ಇದು ಪರಿಸರ ಮತ್ತು ಸಮಾಜಕ್ಕೆ ಹಾನಿಯುಂಟುಮಾಡುವುದಿಲ್ಲವಾದ್ದರಿಂದ ಸಮಾಜಕ್ಕೂ ಲಾಭದಾಯಕ. ಇದನ್ನು ಸಾಧಿಸಿ ತೋರಿಸಿದ್ದು ಈ ಸಂಘಟನೆಯ ಹೆಗ್ಗಳಿಕೆ.

ಈ ಅನುಭವ, ಅಂತರಂಗದ ಹೊಳಹುಗಳನ್ನು ಕಾರ್ಯತಃ ದೃಢಗೊಳಿಸಿತು. ೧೯೯೩ರಲ್ಲಿ ಮುಂಬೈ ಐಐಟಿಯಲ್ಲಿ ನಡೆದ Traditional Sciences and Technologies of India ಅಧಿವೇಶನಕ್ಕೆಂದು ಕಣ್ಣನ್ ಮತ್ತು ವಿನೂ ಕಾಳೆ ಇತರ ಗೆಳೆಯರ ನೆರವಿನಿಂದ 'Dastakar Andhra: Weaving a Vision' ಎಂಬ ಹೆಸರಿನಲ್ಲಿ ಅಧ್ಯಯನ ಪ್ರಬಂಧವೊಂದನ್ನು ಮಂಡಿಸಿದರು.

ಭವಿಷ್ಯದ ಜವಳಿ ಉದ್ಯಮವನ್ನು ನಿರ್ಲಿಪ್ತವಾಗಿ ಮತ್ತು ಪೂರ್ಣವಾಗಿ ನೋಡಬೇಕು. ಕೌಶಲ, ಪದಾರ್ಥಗಳು, ಮಾರುಕಟ್ಟೆ ಇವು ಎಲ್ಲರಿಗೂ ಸುಭವಾಗಿ ಎಟುಕುವಂತಿದೆ. ಇಲ್ಲಿ ಬಳಕೆಯಾಗುವುದು ಜನಸಾಮಾನ್ಯರ ತಾಂತ್ರಿಕ ಕೌಶಲ. ಈ ಉದ್ಯಮದಲ್ಲಿ ಹತ್ತಿ ಬೆಳೆಯುವವರು, ನೂಲು ತೆಗೆಯಲು ಬೇಕಾಗುವ ಉಪಕರಣ ತಯಾರಿಸುವವರು, ಬಣ್ಣ ಹಾಕುವವರು, ನೂಲುವವರು, ಜಿನ್ನಿಂಗ್ ಮಾಡುವವರು ಇವರೆಲ್ಲ ಗ್ರಾಮೀಣ ಸಮೃದ್ಧಿಯ ಹರಿಕಾರರು. ಇದರಲ್ಲಿ ಪರಿಸರ ಮಾಲಿನ್ಯವಾಗಲೀ, ವ್ಯರ್ಥವೆನಿಸುವುದಾಗಲೀ ಇಲ್ಲ. ಇದು ಸಲಕರಣೆ, ತಂತ್ರ, ಕೌಶಲಗಳ ಒಟ್ಟು ಮೊತ್ತ. ಬಟ್ಟೆ ತಯಾರಿಕೆ ಕೇವಲ ತಾಂತ್ರಿಕತೆ ಅಲ್ಲ. ಇದನ್ನು ಬೆಂಬಲಿಸುವ ಹಲವಾರು ಸಂರಚನೆಗಳು, ಜಟಿಲವಾಗಿರುವ ಸಾಮಾಜಿಕ ಸಂಬಂಧಗಳು ಮತ್ತು ಮೌಲ್ಯಗಳಿಂದ ಈ ತಾಂತ್ರಿಕತೆ ಅಸ್ತಿತ್ವಕ್ಕೆ ಬಂದು ಇವುಗಳಿಂದಲೇ ಅವು ಬದುಕಿರಲು ಆಹಾರ ಪಡೆಯುತ್ತದೆ. ಈ ಪರಂಪರಾಗತ ತಾಂತ್ರಿಕ ಕೌಶಲಗಳು ನಾಲ್ಕು ಗೋಡೆಗಳ ಮಧ್ಯದಲ್ಲಿ ತಜ್ಞರು ಸೃಷ್ಟಿಸಿ ಲಕ್ಷಾಂತರ ಮೂಢರಿಗೆ ತಲುಪಿಸುವ ತಂತ್ರಜ್ಞಾನವಲ್ಲ. ಇದು ಸಾವಿರಾರು ಕುಶಲ ಕರ್ಮಿಗಳು, ಕಲಾವಿದರು, ರೈತರು ಮತ್ತಿತರು ಸೃಷ್ಟಿಶೀಲ ಕ್ರಿಯೆಯಲ್ಲಿ ತೊಡಗಿಸಿಕೊಂಡು, ಅವರಿಂದ ಹೊರಹೊಮ್ಮಿದ ತಂತ್ರಜ್ಞಾನ. ಕೇವಲ ಯಾವೊಬ್ಬನೂ ಅಥವಾ ಯಾವುದೇ ಗುಂಪೂ ಈ ಕೌಶಲಕ್ಕೆ ವಾರಸುದಾರರಲ್ಲ. ಇದು ಸಾಮುದಾಯಿಕ ಪ್ರಯತ್ನ. ತಾವೇ ಸರ್ವಜ್ಞರು ಎಂದು ಭಾವಿಸಲಾಗುವ ಯಾವುದೇ ಅಲ್ಪಸಂಖ್ಯಾತ ಗುಂಪಿನ ಅಧೀನಕ್ಕೆ ಇದು ಒಳಪಟ್ಟಿಲ್ಲ.

ಇದು ಸರಿಯಾಗಿ ಅರ್ಥವಾದರೆ ವರ್ತಮಾನದ ವ್ಯವಸ್ಥೆಯನ್ನು ತೇಪೆ ಹಚ್ಚಿ ಬದಲಾಯಿಸಲು ಸಾಧ್ಯವಿಲ್ಲ ಎಂಬುದು ಅರ್ಥವಾಗಿಬಿಡುತ್ತದೆ. ಇಂದು ಮೂಲಭೂತ ಪರಿವರ್ತನೆ ಆಗಬೇಕಾಗಿದೆ. ಇಂದಿನ ಸಂದರ್ಭದಲ್ಲಿ ಇದು ಎಷ್ಟರಮಟ್ಟಿಗೆ ಸಾಧ್ಯ ಎಂದು ಗೊತ್ತಿಲ್ಲ. ಆದರೆ ಕೆಲವು ಕ್ಷೇತ್ರಗಳಲ್ಲಿ ದಸ್ತಕರ್ ಗುಂಪಿನ ಈ ಪ್ರಯತ್ನ ಇದೇ ರೀತಿಯ ಅನೇಕ ಯೋಜನೆಗಳೊಂದಿಗೆ ಕೈ ಜೋಡಿಸಿದೆ. ಉದಾಹರಣೆಗೆ ಹತ್ತಿ ಬೇಸಾಯದಲ್ಲಿ ಸಾವಯವ ಕೃಷಿ ಅಳವಡಿಸಿಕೊಳ್ಳುವ ಬಗೆ ಮತ್ತು ಪರಿಸರ ಸ್ನೇಹಿ ಹತ್ತಿ ಬೆಳೆಸುವುದರ ಮಹತ್ವವನ್ನು ಎಲ್ಲ ಪ್ರಮುಖ ಹತ್ತಿ ಸಂಶೋಧನಾ ಕೇಂದ್ರಗಳು ಅಂಗೀಕರಿಸಿವೆ.

ಇದಕ್ಕಿಂತ ಮಿಗಿಲಾಗಿ ದಸ್ತಕರ್ ಆಂಧ್ರಾದ ಉತ್ಪನ್ನಗಳನ್ನು ಜಾಗತಿಕ ಮಾರುಕಟ್ಟೆ ಬೆಂಬಲಿಸಿದೆ. ಪಶ್ಚಿಮದಲ್ಲಿ ಶುದ್ಧ ಹತ್ತಿ ಬಟ್ಟೆಗಳು ಅತ್ಯುತ್ತಮ ಎಂದೆನಿಸಿಕೊಂಡರೆ, ಯೂರೋಪಿನಲ್ಲಿ ನೈಸರ್ಗಿಕ ಬಣ್ಣಗಳಿಗೆ ಹೆಚ್ಚಿನ ಬೇಡಿಕೆ ಇದೆ. ಆದರೆ ಈ ನೈಸರ್ಗಿಕ ಬಣ್ಣ ತಯಾರಿಕೆಯನ್ನು ಈ ಸಣ್ಣ ಕುಶಲ ಕರ್ಮಿಗಳಿಂದ ಕಾರ್ಖಾನೆಗಳು ಕಿತ್ತುಕೊಂಡಲ್ಲಿ ಅದು ದುರಂತ ಎಂದು ಚಂದ್ರಮೌಳಿ ನೋವಿನಿಂದ ಹೇಳುತ್ತಾರೆ. ಆದರೂ ೧೯೮೦ರ ನಡುಭಾಗದಲ್ಲಿ ನೈಸರ್ಗಿಕ ಬಣ್ಣ ತಯಾರಿಕೆಗೆ ಆಗತ್ಯವಾದ ಕಚ್ಚಾ ವಸ್ತುಗಳನ್ನು ಬೃಹತ್ ವಾಣಿಜ್ಯ ಉದ್ಯಮಗಳು ತಮ್ಮ ಕೈಲಿಟ್ಟುಕೊಂಡು ಸಮಸ್ಯೆ ಸೃಷ್ಟಿಸಿದ್ದು ದಸ್ತಕರ್ ಆಂಧ್ರಾದ ನೈಸರ್ಗಿಕ ಬಣ್ಣ ಕುರಿತ ಕಾರ್ಯಾಗಾರವನ್ನು ಮಸುಳಿಸಿತು.

ಈ ಸಂಪನ್ಮೂಲಗಳಿಗೆ ಪೂರ್ಣ ಜವಾಬ್ದಾರರಾದ ಸಣ್ಣ ಕೈಗಾರಿಕಾ ಸಮುದಾಯಗಳು ಈ ನೈಸರ್ಗಿಕ ಬಣ್ಣ ತಯಾರಿಸಿ ಅಸ್ತಿತ್ವದಲ್ಲಿ ಉಳಿಯಲು ಸಾಧ್ಯ ಎಂಬುದನ್ನು ಸರಕಾರಕ್ಕೆ ಮನವರಿಕೆ ಮಾಡಿಕೊಡಲು ದಸ್ತಕರ್ ಆಂಧ್ರಾ ಶತ ಪ್ರಯತ್ನ ಮಾಡಿತು.

ಈ ನಡುವೆ ಬಣ್ಣ ತಯಾರಿಸಲು ಬಳಸುವ ಸಸ್ಯಗಳನ್ನು ಬೆಳೆಸಲು ಭಾರತದಾದ್ಯಂತ ಇತರ ಬೀಜಗಳನ್ನು ಸಂಗ್ರಹಿಸಲಾಯಿತು. ಆದರ ಬೀಜಗಳನ್ನು ಬಳಸಿ ಗಿಡ ಬೆಳೆಸಲು ಮತ್ತು ಬೇರೆ ಬೇರೆ ಬೀಜಗಳನ್ನು ಮಾಡಿಕೊಳ್ಳಲು ಧರ್ಮಾವರಂ ಸಮೀಪದ ಟಿಂಬಕ್ಟು ಟ್ರಸ್ಟ್ ಮತ್ತು ತಿರುಪತಿ ಸಮೀಪದ ವೆಂಕಟಾಪುರಂನ ಸ್ವದೇಶೀ ಟ್ರಸ್ಟ್‌ನಲ್ಲಿ ಪ್ರಯತ್ನಿಸಲಾಯಿತು. ಇವುಗಳನ್ನು ತೀರ್ಥಕ್ಷೇತ್ರಗಳೆಂದು ಶಂಭು ಕರೆಯುತ್ತಾರೆ. ಇಲ್ಲಿ ಸಹಜವಾದ ಬಣ್ಣ ಇರುವ ಬೇರೆ ಬೇರೆ ರೀತಿಯ ಹತ್ತಿಗಳನ್ನು ಬೆಳೆಯಲಾಗುತ್ತದೆ. ಈ ರೀತಿಯ ಚಟುವಟಿಕೆಗಳಿಂದಾಗಿ ಬಣ್ಣ ತಯಾರಿಸಬಹುದಾದ ಸಸ್ಯ ಪ್ರಭೇದ, ಹತ್ತಿ ಸಸ್ಯ ಪ್ರಭೇದಗಳ ಜೀವ ವೈವಿಧ್ಯತೆಯನ್ನು ಕಾಪಾಡಿಕೊಂಡು ಅವರಿಗೆ ಎಟಕುವ ಬೆಲೆಗೆ ಮಾರಬಹುದಾಗಿದೆ.

ಈ ರೀತಿ ಹಳ್ಳಿಗಾಡುಗಳ ಜತೆಗೆ ಅಂತರ್ ಸಂಪರ್ಕವನ್ನು ಪಿ.ಪಿ.ಎಸ್.ಟಿ ಆಯೋಜಿಸಿದ್ದ ಸಾಂಪ್ರದಾಯಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಮೊದಲ ಸಮ್ಮೇಳನದಲ್ಲಿಯೇ ಹುಡುಕಲಾಯಿತು. ಬಹಳ ವೈವಿಧ್ಯಮಯವಾದ ವ್ಯಕ್ತಿಗಳನ್ನು, ಗುಂಪುಗಳನ್ನು ಗುರುತಿಸಿ ಮಾಹಿತಿಯನ್ನು ವಿನಿಮಯ ಮತ್ತು ಪರಸ್ಪರ ಸಹಾಯ ಮಾಡಿಕೊಳ್ಳಲು ಒಂದು ಜಾಲವನ್ನು ರಚಿಸಲಾಯಿತು. ಉದಾಹರಣೆಗೆ ರಾಮಕೃಷ್ಣ ಎಂಬ ಐಐಟಿಯ ವಿದ್ಯಾರ್ಥಿ ತಮ್ಮ ಸಮಯದ

ಬಹುಪಾಲನ್ನು ವಿಕೇಂದ್ರೀಕೃತ ನೂಲುವಿಕೆಯ ಕುರಿತ ಸಂಶೋಧನೆಗಾಗಿ ಮೀಸಲಿಟ್ಟು ವಿವರಗಳನ್ನು ಕಲೆ ಹಾಕಿದರು. ಈ ನೂಲುವ ತಂತ್ರಜ್ಞಾನವನ್ನು ಮರುವಿನ್ಯಾಸಗೊಳಿಸುವ ಎಲ್ಲ ಪ್ರಯತ್ನಗಳಿಗೆ ರಾಮಕೃಷ್ಣ ದನಿಗೂಡಿಸುತ್ತಾರೆ. ಹೊಸ ವಿನ್ಯಾಸ, ಖಾದಿ ವ್ಯವಸ್ಥೆ ರೂಪಿಸಿದ ಅನೇಕ ಪದಾರ್ಥಗಳು ಮತ್ತು ಶತಮಾನಗಳಿಂದ ಬಳಸುತ್ತಿರುವ ಸಾಂಪ್ರದಾಯಿಕ ಕೌಶಲದಿಂದ ಬಹಳಷ್ಟನ್ನು ಪಡೆಯಬಹುದಾಗಿದೆ.

ಜವಳಿ ಉದ್ಯಮದ ಕಾರ್ಯಪ್ರವೃತ್ತ ಗುಂಪಿನ ವಾರ್ತಾ ಪತ್ರದಲ್ಲಿ 'ವಿಕೇಂದ್ರೀಕೃತ ಪ್ರಕ್ರಿಯೆ ತಾಂತ್ರಿಕ ಮತ್ತು ಆರ್ಥಿಕ ದೃಷ್ಟಿಯಿಂದ ಕಾರ್ಯ ಸಾಧುವಲ್ಲ ಎಂದು ಹೇಳಲು ಯಾವ ಕಾರಣಗಳೂ ಇಲ್ಲ' ಎಂದು ರಾಮಕೃಷ್ಣ ಹೇಳುತ್ತಾರೆ. 'ಏನೇ ಆದರೂ ಈ ಹೊಸ ತಂತ್ರಜ್ಞಾನ ಮಿಲ್ ವಾತಾವರಣಕ್ಕಿಂತ ಉತ್ತಮ ಪರಿಸರವನ್ನು ಸೃಷ್ಟಿಸುತ್ತದೆ' ಎನ್ನುತ್ತಾರೆ ಅವರು. ಇಲ್ಲಿ ಬೇಲ್ ಕಟ್ಟುವಿಕೆ ಮತ್ತು ಸಾಗಾಣಿಕೆ ಮಾಡುವ ಅಗತ್ಯವಿಲ್ಲ. ಇದರ ಜತೆ ಯಂತ್ರ ಮತ್ತು ಮೂಲ ಸೌಕರ್ಯಗಳ ಖರ್ಚೂ ಕಡಿಮೆ. ಸ್ಥಳೀಯ ಪರಿಸರದಲ್ಲಿ ಸಣ್ಣ ಪ್ರಮಾಣದಲ್ಲಿ ಇದು ತಯಾರಾಗುವ ಕಾರಣ ಬಂಡವಾಳ ಹೂಡಿಕೆ ಮತ್ತು ಪದಾರ್ಥಗಳ ಬೆಲೆಗಳೂ ಕಡಿಮೆ ಇರುತ್ತವೆ.

ಈ ರೀತಿಯ ಸಂಶೋಧನಾ ಒಳಸುಳಿಗಳು ಸಂಪೂರ್ಣವಾಗಿ ಕುಶಲಕರ್ಮಿಗಳ ಪರವಾದ ಒಂದು ಸಂಶೋಧನಾ ಸಂಘಟನೆಯಾಗಿ ಹೊರಹೊಮ್ಮುವ ಸಾಮರ್ಥ್ಯ ಮತ್ತು ವಿಶ್ವಾಸವನ್ನು ದಸ್ತಕರ್ ಆಂಧ್ರಾಗೆ ಮೂಡಿಸಿದವು. ಈ ಕ್ಷೇತ್ರದ ಪರಿಣತರು, ಕ್ಷೇತ್ರ ಕಾರ್ಯಕರ್ತರು ಮತ್ತು ಕುಶಲ ಕರ್ಮಿಗಳ ಸಮುದಾಯ ಒಟ್ಟಾಗಿ ತಾಂತ್ರಿಕ ಕೌಶಲದ ಬಗ್ಗೆ ಗಮನವಹಿಸಿ ಕೆಲಸ ಮಾಡುವ ಒಂದು ವಾತಾವರಣ ಸೃಷ್ಟಿಯಾಯಿತು' ಎಂದು ದಸ್ತಕರ್ ಆಂಧ್ರಾ ತನ್ನ ೯೫-೯೬ನೆಯ ವಾರ್ಷಿಕ ವರದಿಯಲ್ಲಿ ಹೇಳಿದೆ.

ಪಟ್ಟಣ ಪ್ರದೇಶದ ಕಾರ್ಯಕರ್ತರು ಮತ್ತು ಕುಶಲಕರ್ಮಿಗಳ ನಡುವಿನ ದೃಷ್ಟಿಕೋನದಲ್ಲಿ ಖಂಡಿತವಾಗಿಯೂ ಗಮನಾರ್ಹ ಭಿನ್ನತೆ ಇರುತ್ತದೆ.

ನೇಕಾರರು ತಮ್ಮನ್ನು ತಾವು ಹೇಗೆ ಕಂಡುಕೊಳ್ಳುತ್ತಾರೆ ಮತ್ತು ನಾವು ಹೇಗೆ ಅವರನ್ನು ನೋಡುತ್ತೇವೆ ಎಂಬುದರ ನಡುವೆ ಸಾಕಷ್ಟು ಅಂತರವಿದೆ. ತಾವು ಪೂರಕ ಎಂದು ಅವರು ಭಾವಿಸುತ್ತಾರೆಯೇ ಹೊರತು ನಾವು ನಿರೀಕ್ಷಿಸಿದಷ್ಟು ತೀವ್ರತೆಯಲ್ಲಿ ತಮ್ಮ ಅಸ್ತಿತ್ವವನ್ನು ಪ್ರತಿಷ್ಠಾಪಿಸಲು ಬಯಸುವುದಿಲ್ಲ. ಇದಾಗದೆ ಹೋದರೆ ಬದಲಾವಣೆ ಹೇಗೆ ಸಾಧ್ಯ? ನೀವು ತಾಂತ್ರಿಕ ಕೌಶಲ ಹೊಂದಿರುವ ಜನ, ನಿಯಮಗಳನ್ನು ರೂಪಿಸಬೇಕಾದವರು ನೀವು ಎಂದು ನಾವು ಅವರಿಗೆ ಹೇಳಿದರೆ ಅವರು ನೆಲಕ್ಕಿಳಿದು ವಾಸ್ತವವನ್ನು ಗ್ರಹಿಸಬೇಕೆಂದು ಹೇಳುತ್ತಾರೆ. ಇದು ನಮ್ಮ ಮತ್ತು ಅವರ ನಡುವೆ ಇರುವ ಅಂತರ. ಆದರೆ ನಾವು ಒಟ್ಟಿಗೆ ಕೆಲಸ ಮಾಡುವುದನ್ನು ನಿಲ್ಲಿಸುವುದಿಲ್ಲ. ಒಟ್ಟಿಗೆ ಕೆಲಸ ಮಾಡುವುದರಿಂದ ಉಭಯ ಸಾಮಾನ್ಯವಾದ ಆಲೋಚನೆ ಹೊರಹೊಮ್ಮುತ್ತದೆ. ನಾವು ಆರೇ ಮಂದಿ ನೇಕಾರರಾದರೂ ಸರಿ, ನಮ್ಮ ಕೆಲಸದಲ್ಲಿ ಗಟ್ಟಿತನವಿದ್ದರೆ ಪರಿಣಾಮ ಅದ್ಭುತವಾದುದಾಗಿರುತ್ತದೆ. ಈ ಭದ್ರ ಬುನಾದಿಯ ಮೇಲೆ ನಾವೆಲ್ಲರೂ ಒಂದುಗೂಡಬಹುದಾಗಿದೆ.

ಇಂದು ತಂತಾನೆ ಸಾಮಾನ್ಯ ನೇಕಾರನ ಮನಸ್ಸಿನಲ್ಲಿ ವಿಶ್ವಾಸ ಮೂಡಿಸಬಲ್ಲದು ಎಂದು ಖಾತರಿಯಾಗಿ ಹೇಳುವುದು ಸಾಧ್ಯವಿಲ್ಲ. ಬಹಳಷ್ಟು ವರ್ಷಗಳಿಂದ ಅವರ ಮನದಲ್ಲಿ ತಾವು ಕಳೆದು ಹೋದ ಸಂಸ್ಕೃತಿಯ ಪಳೆಯುಳಿಕೆಗಳು, ಲಾಭದಾಯಕವಲ್ಲದ ಕಸುಬನ್ನು ಮಾಡುತ್ತಿರುವವರು ಎಂಬ ಭಾವನೆ ಇದೆ. ಎಲ್ಲೋ ಒಂದು ಕಡೆ ಬೆರಳೆಣಿಕೆಯಷ್ಟು ನೇಕಾರರ ಸ್ಥಳೀಯ ಯಶಸ್ಸಿನಿಂದ ಭವಿಷ್ಯದಲ್ಲಿ ಕೈಮಗ್ಗ ಬಟ್ಟೆ ಉದ್ಯಮ ಆರ್ಥಿಕವಾಗಿ ಉತ್ತಮವಾದುದು ಎಂಬುದನ್ನು ಅವರು ನಂಬಲಾರರು. ಈ ಹಿನ್ನೆಲೆಯಲ್ಲಿ ಈಗ ದಸ್ತಕರ್ ಆಂಧ್ರಾ ಎಷ್ಟರಮಟ್ಟಿಗೆ ಪ್ರಗತಿ ಸಾಧಿಸಿದೆ ಎಂಬುದನ್ನು ಅರಿಯಬಹುದಾಗಿದೆ. ಚರಕ ಮತ್ತು ಕೈಮಗ್ಗದ ಆರ್ಥಿಕ ಸಾಧ್ಯತೆಯ ಬಗ್ಗೆ ಈ ಗುಂಪಿಗೆ ಇರುವುದು ಪೊಳ್ಳು ಆಶಾವಾದವೋ ಅಥವಾ ಭರವಸೆಯೋ?

ಪ್ರಾಯಶಃ ಯಾವುದೇ ವ್ಯವಸ್ಥೆಯ ವಿರುದ್ಧ ಸವಾಲೆಸೆಯುವವನಿಗೆ ತನ್ನ ಚಿಂತನೆಯಲ್ಲಿ ಅದಮ್ಯ ವಿಶ್ವಾಸವಿರುವುದು ಅತ್ಯಗತ್ಯ. ಈ ನಂಬಿಕೆ ವಾಸ್ತವದಾಚೆಗೇನೂ ಇಲ್ಲ. ಗ್ರಾಮದ ಸ್ವಾವಲಂಬನೆ ಸಾಧ್ಯವಾಗದೇ ಹೋದರೂ ಹಳ್ಳಿ ಹಳ್ಳಿಗಳ ನಡುವಿನ ಪರಸ್ಪರ ಅವಲಂಬನೆಯಿಂದ ಸಮೃದ್ಧಿ ಸಾಧ್ಯ.

ಈ ಪರಿಕಲ್ಪನೆಯನ್ನು ನಾವು ಒಪ್ಪಿಕೊಂಡು ಅನುಷ್ಠಾನಕ್ಕೆ ತರಬೇಕಾದರೆ 'ಆರ್ಥಿಕ ಸಾಧ್ಯತೆ'ಯ ಪರಿಕಲ್ಪನೆಯನ್ನು ನಮ್ಮ ಜಮಾ ಖರ್ಚು ತಃಖ್ತೆಯಾಚೆಗೆ ನೋಡಬೇಕಾಗುತ್ತದೆ. 'ನಾವು ಮಹಾಚುನಾವಣೆಗಳನ್ನು ಆರ್ಥಿಕ ಸಾಧ್ಯಾಸಾಧ್ಯತೆಗಳ ಆಧಾರದ ಮೇಲೆ ರದ್ದು ಮಾಡುವುದಿಲ್ಲ' ಎಂದು 'Weaving Vision'ನಲ್ಲಿ ವಾದಿಸಲಾಯಿತು. 'ಇದೇ ರೀತಿ, ಇದಕ್ಕಿಂತಲೂ ಮಿಗಿಲಾಗಿ ನಾವೆಲ್ಲರೂ ನೆಮ್ಮದಿ, ಗೌರವ ಮತ್ತು ಸಾಮರಸ್ಯದಿಂದ ಬದುಕಲು ಅನುವಾಗುವ ತಂತ್ರಜ್ಞಾನವನ್ನು ಆಯ್ದುಕೊಳ್ಳಬೇಕು. ಎಂದೂ ಇದರಲ್ಲಿ ತಿಳಿಸಲಾಗಿದೆ. ನಮ್ಮ ನೀತಿ ನಿರೂಪಕರು, ಯೋಜಕರು Gross National Product, Balance of Trade, Export Plus ಇತ್ಯಾದಿ ಪರಿಕಲ್ಪನೆಗಳ ಗುಂಗಿನಿಂದ ಹೊರಬರಬೇಕು. ಇದರ ಬದಲಿಗೆ ಶ್ರೀಸಾಮಾನ್ಯನ ಅಗತ್ಯಕ್ಕೆ ಸ್ಪಂದಿಸುವ ರೀತಿಯಲ್ಲಿ ಕೌಶಲಗಳು ಬಳಕೆಯಾಗುವಂತಹ ನೀತಿಯನ್ನು ರೂಪಿಸಬೇಕು. ಕೇವಲ ರಫ್ತು ಮಾರುಕಟ್ಟೆಗಾಗಿ ಅಲ್ಲ.

ಅಂದರೆ ನಾವು 'ಪ್ರಗತಿ' ಎಂಬ ಪರಿಕಲ್ಪನೆಯನ್ನು ಮರುಪರಿಶೀಲನೆ ಮತ್ತು ಹೊಸ ವ್ಯಾಖ್ಯೆಗೆ ಒಳಪಡಿಸಬೇಕು. ಇಂದು ಒಂದು ಹೊಸ ನಾಗರಿಕ ಯುಗದ ಕಲ್ಪನೆ ಮನೆಮಾಡಿದೆ. ದಸ್ತಕರ್ ಗುಂಪು ಬಟ್ಟೆ ನೇಯ್ಗೆ ಮತ್ತು ಬಣ್ಣದ ವಿವಿಧ ಸೂಕ್ಷ್ಮ ಛಾಯೆಗಳ ಬಗ್ಗೆ ತಲೆಕೆಡಿಸಿಕೊಳ್ಳುತ್ತಿರುವಂತೆಯೇ ಈ ಹೊಸ ಪರಿಕಲ್ಪನೆಗಳಿಂದ ಮೂಡಿದ ಸವಾಲಿನೊಂದಿಗೆ ಗುದ್ದಾಡತೊಡಗಿತು. ಇದನ್ನು Weaving Visionನಲ್ಲಿ ಹೀಗೆ ಬರೆಯಲಾಗಿದೆ:

ಈಗಾಗಲೇ ನಮ್ಮ ಸಂಪ್ರದಾಯದಲ್ಲಿ ಬೇರುಬಿಟ್ಟಿರುವ ಕೈಗಾರಿಕಾ ರೂಪವನ್ನು ಹೇಗೆ ಪುನಾರಚಿಸಬಹುದು? ಜನರು ತಮಗೆ ಬೇಕಾದ ಪ್ರಪಂಚ ಸೃಷ್ಟಿಸಿಕೊಳ್ಳಲು ಅಡ್ಡಿಯಾಗಿರುವ ತಂತ್ರಜ್ಞಾನದ ಬೆಳವಣಿಗೆ ಎಂಬ ದಂತ ಗೋಪುರದಿಂದ ದೂರವಿರುವುದು ಹೇಗೆ? ಉತ್ಪಾದನಾ ಪ್ರಕ್ರಿಯೆಯಲ್ಲಿ ಪ್ರತಿ ವೃತ್ತಿಯಲ್ಲಿ ತೊಡಗಿರುವ ಪ್ರತಿಯೊಬ್ಬನನ್ನೂ ಸೃಜನಶೀಲವಾಗಿ

ತೊಡಗಿಸಿಕೊಂಡು ಅದನ್ನು ಪರಂಪರೆಯ ಮುಂದುವರಿಕೆಯಾಗಿ ಪರಿಭಾವಿಸಲು ಸಾಧ್ಯವೇ? ಹೊಸ ವ್ಯವಸ್ಥೆಯನ್ನು ಹೇಗೆ ರೂಪುಗೊಳಿಸುವುದು? ಈ ದಿಸೆಯಲ್ಲಿ ಮಾಡಬೇಕಾದ ಆರಂಭಿಕ ಕೆಲಸಗಳೇನು? ವಿವಿಧೆಡೆಗಳ ಅಂತದೃಷ್ಟಿಯನ್ನು ಕ್ರೋಢೀಕರಿಸಿ ಒಂದು ಸಮಗ್ರ ಕಾಣ್ಕೆ ಮತ್ತು ಭವಿಷ್ಯದಲ್ಲಿ ಭದ್ರವಾದ ಕಾರ್ಯಕ್ರಮ ಯೋಜಿಸಲು ಇದು ಸಕಾಲ.

ದಸ್ತಕರ್ ಆಂಧ್ರಾ ತನ್ನ ಪ್ರಣಾಳಿಕೆ ಎನ್ನಬಹುದಾದ ಬರಹದಲ್ಲಿ 'ಆದರ್ಶದ ಕಾಣ್ಕೆ ಮತ್ತು ಅದರ ಗಟ್ಟಿತನ'ದ ಬಗ್ಗೆ ಮಾತಾಡುತ್ತಲೇ ಈ ಆದರ್ಶದ ಆಚೆಗಿರುವ ವಾಸ್ತವಗಳನ್ನು ಗಮನದಲ್ಲಿರಿಸಿಕೊಂಡಿದೆ ಎಂದೂ ಹೇಳುತ್ತದೆ. ಭೂತಕಾಲ ನಮ್ಮನ್ನು ಸ್ಫೂರ್ತಗೊಳಿಸಬಹುದಾದರೂ ಹೊಸ ಸವಾಲುಗಳನ್ನು ಎದುರಿಸಲು ಹೊಸ ದಾರಿ ಹುಡುಕುವುದು ನಿಜಕ್ಕೂ ಸವಾಲು. ಸಂಪೂರ್ಣವಾಗಿ ಹೊಸ ಮಾದರಿಯನ್ನು ಸಾಧ್ಯವಾಗಿಸಲು ಸಮಯದ ನಿರ್ಬಂಧವಿಲ್ಲ. ಈ ಕಾಣ್ಕೆ ಮೂರ್ತವಾಗಬೇಕಾದರೆ ಹಲವು ಹಂತಗಳನ್ನು ದಾಟಬೇಕಾಗುತ್ತದೆ.

ಈ ಉದ್ದೇಶದ ತೀವ್ರತೆಯಷ್ಟು ಇಂದಿನ ತುರ್ತು ಇಲ್ಲ ಎಂದು ಮೇಲ್ನೋಟಕ್ಕೆ ಕಾಣಬಹುದು. ಈ ಗುಂಪು ಏಕನಿಷ್ಠೆಯಿಂದ ಕೆಲಸ ಮಾಡಿದೆ ಎಂಬುದರಲ್ಲಿ ಸಂದೇಹವಿಲ್ಲವಾದರೂ ಈ ಗುಂಪಿನಲ್ಲಿ ಇರುವ ಎಲ್ಲರಲ್ಲೂ ಪರಿವರ್ತನೆಯ ತುಡಿತ ತೀವ್ರವಾಗಿರಲಿಲ್ಲ. ಇವರೆಲ್ಲ ತಾವು ಬಿತ್ತಿರುವ ಬೀಜದ ಶಕ್ತಿಯ ಮೇಲೆ ನಂಬಿಕೆ ಇಟ್ಟವರು. ಅವರಿಗೆ ಕಲಿಯುವುದು ಮತ್ತು ಬುನಾದಿಯನ್ನು ಗಟ್ಟಿಗೊಳಿಸುವುದು ಮುಖ್ಯವಾಗಿತ್ತೇ ಹೊರತು ನಾಟಕೀಯವಾದ ಮತ್ತು ಮೇಲ್ನೋಟಕ್ಕೆ ಎದ್ದು ಕಾಣುವ ಫಲಿತಾಂಶಗಳಲ್ಲಿ ಅಷ್ಟು ನಂಬಿಕೆ ಇರಲಿಲ್ಲ.

ಆದುದರಿಂದ ಇಂದಿನ ಸಂದರ್ಭವನ್ನು ಹೆಚ್ಚು ವಿವೇಕಪೂರ್ಣವಾಗಿ ಅರ್ಥ ಮಾಡಿಕೊಳ್ಳುವುದು ಅಗತ್ಯ ಎಂದು ಅವರಿಗೆ ಅನಿಸಿತು. ಇದು ಇಂದಿನ ಅಗತ್ಯಗಳಿಗೆ ತಕ್ಕಂತೆ ಗಾಂಧಿ ಮಾರ್ಗವನ್ನು ಮರುಶೋಧಿಸಿಕೊಳ್ಳಲು ಪೂರ್ವ ಸಿದ್ಧತೆ ಎನಿಸಿತು. ಈ ಪಯಣ ಇತರ ಸಹಪಯಣಿಗರನ್ನು ಸೇರಿಸಿಕೊಳ್ಳುವುದರ ಮೂಲಕ ಹೆಚ್ಚು ಸಂತಸದಾಯಕವಾಗಿತ್ತು. ಇವರೆಲ್ಲರೂ ಕೂಡಿ ಪರಿಣಾಮಕಾರಿ ಹಾದಿ ಯಾವುದು ಎಂಬುದರ ಬಗ್ಗೆ ತಲೆಕೆಡಿಸಿಕೊಂಡಿದ್ದರು. ಉತ್ತರಗಳಿಗಾಗಿ ಹುಡುಕಾಟ ಏಕಕಾಲದಲ್ಲಿ ವೈಯಕ್ತಿಕವಾದುದೂ, ಸಾಮುದಾಯಿಕವಾದುದೂ ಆಗಿತ್ತು. ಶಂಭು ಅವರ ಗೆಳೆಯರಲ್ಲಿ ಬಹುತೇಕರು ೨೦ರ ಆಸುಪಾಸಿನವರು. ಹೆಚ್ಚು ಓದಿಕೊಂಡವರು. ಇವರನ್ನೆಲ್ಲ ಸಂಸ್ಕೃತಿಯ ಮುಖ್ಯ ವಾಹಿನಿಯಲ್ಲಿ ಸೇರಿಸುವುದಕ್ಕಿಂತ ಭಿನ್ನವಾದುದು ಏನೋ ಮಾಡಬೇಕಿದೆ ಎಂದು ಶಂಭುಗೆ ಅನಿಸಿತು. ಗೊಂದಲಗೊಂಡ ಈ ಯುವಕರಿಗೆ ಬೇಕಾದ ಹೊಸ ಪರಿಕಲ್ಪನೆ ಯಾವುದು?

ಎಂಟು ವರ್ಷಗಳ ಬಳಿಕ ಶಂಭು ಹೀಗೆ ಬರೆಯುತ್ತಾರೆ:

'ಇಂದು ನನ್ನ ಖಾದಿ ಕುರ್ತಾವನ್ನು ಹೆಮ್ಮೆಯಿಂದ ಧರಿಸುತ್ತೇನೆ. ನಾವು ಪ್ರಾಯಶಃ ಹೊಸ ಸ್ವದೇಶಿ ಆಂದೋಲನವನ್ನು ಆರಂಭಿಸಿದ್ದೇವೆ. ನಾವು ಪೂರ್ಣ ಸ್ವದೇಶಿ ವ್ರತವನ್ನು

ಅಪ್ಪಿಕೊಂಡ ಗಾಂಧಿಯ ಸ್ಥಾನದಲ್ಲಿ ಇಲ್ಲ. ಈ ಆಂದೋಲನ ಇನ್ನೂ ಆರಂಭವಾಗದ ೧೯೯೯ರ ಸ್ಥಿತಿ ಹೇಗಿತ್ತೋ ಅಂತಹುದೇ ಸ್ಥಿತಿಯಲ್ಲಿ ನಾವಿದ್ದೇವೆ. ಜಾಗತೀಕರಣವನ್ನು ಒಪ್ಪದ ನಾವು ಹೊಸ ಪರಿಸರವನ್ನು ರೂಪಿಸಬಹುದಾಗಿದೆ. ಗಾಂಧಿಗೆ ಈ ಬಗ್ಗೆ ಖಚಿತತೆ ಇತ್ತು. ಮಧ್ಯಮವರ್ಗದ ಜನ ಮತ್ತು ವಿದ್ಯಾವಂತರು ಈ ಆಂದೋಲನ ಹಬ್ಬಲು ಬೇಕಾದ ವಾತಾವರಣ ನಿರ್ಮಿಸಬೇಕಾಗಿದೆ. ಇದೇ ಗಾಂಧಿ ರಾಜಕಾರಣ. ಅದು ವ್ಯಕ್ತಿಯಿಂದಲೇ ಆರಂಭವಾಗಬೇಕು'.

ವೈಯಕ್ತಿಕ ನಿದರ್ಶನ ಮತ್ತು ಗುಂಪು ಚಟುವಟಿಕೆಗೆ ಒತ್ತುಕೊಡುವುದು ಸಂವೇದನಾ ಶೂನ್ಯ ಆಡಳಿತವನ್ನು ನಿಭಾಯಿಸಲು ಇರುವ ಒಂದು ಮಾರ್ಗ.

ಒಳಗೆ ಸುಸಂಗತವೆನ್ನಿಸುವ ಆಧುನಿಕ ಅರ್ಥಶಾಸ್ತ್ರ ಹೊರಗಿನ ಸಂವಾದಗಳಿಗೆ ಕಿವಿಗೊಡದ ಸ್ಥಿತಿಯಲ್ಲಿ ಇದೆ. ನಮ್ಮ ವೈಯಕ್ತಿಕ ಆಯ್ಕೆಯನ್ನು ಬಲವಾಗಿ ಪ್ರತಿಪಾದಿಸುವುದೇ ಈ ಅರ್ಥಶಾಸ್ತ್ರದ ಅಧಿಪತ್ಯಕ್ಕೆ ಮದ್ದು. ಆಧುನಿಕತೆಯಿಂದ ತೀವ್ರ ಸಂಕಟಕ್ಕೆ ಈಡಾಗಿರುವ ವ್ಯಕ್ತಿ ಮತ್ತು ಸಮುದಾಯಗಳು ಈ ಅಮಾನವೀಯತೆ ವಿರುದ್ಧ ನಿಲ್ಲಲು ನೈತಿಕ ನೆಲೆಗಟ್ಟಾಗಬಹುದೇ?

ಕೆಲವು ಪ್ರಶ್ನೆಗಳು ನಮ್ಮನ್ನು ವಿಚಲಿತರನ್ನಾಗಿಸುತ್ತವೆ. ವ್ಯಕ್ತಿ ಮತ್ತು ಸಮುದಾಯಗಳು ನಮ್ಮ ಕ್ರಿಯೆಗಳಿಗೆ ನೈತಿಕ ನೆಲಗಟ್ಟು ಒದಗಿಸಬಲ್ಲವಾದರೂ ಇದನ್ನು ವ್ಯವಸ್ಥೆಯನ್ನು ಪರಿವರ್ತಿಸುವ ರಾಜಕೀಯ ಆಂದೋಲನವನ್ನಾಗಿ ಮಾಡುವುದು ಹೇಗೆ? ಗಾಂಧೀಜಿಯಂತೆ ಪರ್ಯಾಯ ಮಾರ್ಗ ಕಂಡುಕೊಂಡು ಇದನ್ನು ರಾಜಕಾರಣದ ಅಸ್ತ್ರವನ್ನಾಗಿ ಮಾಡಿಕೊಂಡವರು ವಿರಳ.

ಈ ವಿಷಮ ಸ್ಥಿತಿಯಿಂದಾಗಿ ಆಂಧ್ರ ಪ್ರದೇಶದಲ್ಲಿ ಹತ್ತಿ ಬೆಳೆಗಾರರು ಆತ್ಮಹತ್ಯೆಯ ಹಾದಿ ಹಿಡಿದರು. ದಸ್ತಕರ್ ಆಂಧ್ರ ಇಂತಹದೊಂದು ದುರಂತದ ಸನ್ನಿವೇಶ ಎದುರಾಗಬಹುದು ಎಂಬ ಮುನ್ನೆಚ್ಚರಿಕೆ ನೀಡಿತ್ತು. ರೈತರ ಸಂಕಷ್ಟಕ್ಕೆ ದೀರ್ಘಕಾಲೀನ ಪರಿಹಾರ ಕಂಡುಕೊಳ್ಳುವ ಸೂಚನೆಯನ್ನು ಇದು ನೀಡಿತ್ತು. ಆದರೂ ಸಮಸ್ಯೆ ಕಾಣಿಸಿಕೊಂಡ ಬಳಿಕ ಈ ವಿಚಾರ ಚರ್ಚೆಗೆ ಬರಲಿಲ್ಲ. ಪ್ರಮುಖವಾಹಿನಿಯಲ್ಲಿ ಈ ಕುರಿತು ಚರ್ಚೆ ನಡೆದಾಗಲೂ ಕೂಡಾ ಸದ್ಯದ ವ್ಯವಸ್ಥೆಯ ನಿರ್ವಹಣಾ ಮಟ್ಟದಲ್ಲಿ ಪರಿಹಾರ ಕಂಡುಕೊಳ್ಳುವ ಕುರಿತು ಮಾತ್ರ ಮಾತಾಡಲಾಯಿತು.

ಹೀಗಾಗಿ ಇವರೆಲ್ಲರ ತೀವ್ರ ಪ್ರಯತ್ನಗಳು ಸಮಸ್ಯೆಯ ಸಾಗರದಲ್ಲಿ ಕೇವಲ ಬಿಂದುಗಳು ಎಂಬ ಅರಿವು ಅವರಲ್ಲಿ ಮೂಡಿದೆ. ಆದರೆ 'ನಿಜವಾದ ಚೇತನಕ್ಕೆ ಅದರದ್ದೇ ಆದ ಪಾವಿತ್ರ್ಯವಿದೆ. ಇದಕ್ಕೆ ಚಿಕ್ಕದು, ದೊಡ್ಡದು ಎಂಬ ಭೇದವಿಲ್ಲ' ಎನ್ನುವ ಶಂಭು ಹೀಗೆ ಹೇಳುತ್ತಾರೆ:

'ಸಮಾಜದ ರೂಪರೇಷೆ ಮತ್ತು ಕರ್ತವ್ಯ ಅದರ ಸಾಮಾಜಿಕ ಸಂರಚನಾ ಶಕ್ತಿಯನ್ನು ಅವಲಂಬಿಸಿದೆ. ಈ ಸಾಮಾಜಿಕ ಸಂರಚನೆಯ ಶಕ್ತಿ ಅಲ್ಲೊಂದು, ಇಲ್ಲೊಂದು ಇರುವ ಗಟ್ಟಿ

ಎಳೆಗಳನ್ನು ಅವಲಂಬಿಸಿಲ್ಲ. ಬದಲಿಗೆ ಅದರ ದುರ್ಬಲ ಎಳೆಗಳ ತಾಳಿಕೆ ಮತ್ತು ಅವುಗಳು ಹೆಣೆದುಕೊಂಡ ರೀತಿಯನ್ನು ಅವಲಂಬಿಸಿದೆ.

ಈ ದುರ್ಬಲ ಎಳೆಗಳನ್ನು ಬಲಪಡಿಸಬೇಕು. Weaving a Vision ಕಣ್ಣನ್ ಅವರ ಈ ಕವಿತೆಯಿಂದ ಕೊನೆಗೊಳ್ಳುತ್ತದೆ,

ನಮ್ಮ ನಿರಂತರ ಅನ್ವೇಷಣೆಯ ಈ ಲಾಳಿಯಲ್ಲಿ
ವಿಭಿನ್ನ ಎಳೆಗಳ ಮೇಲೆ
ನಮ್ಮೆಲ್ಲರ ಹೊಳಹುಗಳು ಬೆಸೆದುಕೊಂಡಿವೆ
ನಮ್ಮ ಕನಸಿನ ಚಿತ್ತಾರದ ಬಟ್ಟೆಯನ್ನು
ನಾವು ನೇಯಬಲ್ಲೆವಾದರೆ
ನಾಳಿನ ಬೆಳಗು
ತನ್ನ ಕಾಂತಿಯುಕ್ತ ಬಣ್ಣಗಳಿಂದ
ಈ ಬಟ್ಟೆಗಳನ್ನು ತೋಯಿಸದೇ ಬಿಡದು

ಸೂರ್ಯ ಪಡುವಣದಲ್ಲಿ ಮುಳುಗುತ್ತಿದ್ದಂತೆ ಬಾಪು ಕುಟೀರದ ಮರಗಳು ತಮ್ಮ ನೆರಳನ್ನು ಪೂರ್ವದತ್ತ ಚೆಲ್ಲುತ್ತಿದ್ದವು. ತಮ್ಮ ಗೂಡಿಗೆ ತೆರಳುತ್ತಿದ್ದ ಹಕ್ಕಿಗಳ ಚಿಲಿಪಿಲಿ ಮೊಳಗುತ್ತಿತ್ತು. ಹೊಸಬರಿಗೆ ಅಖಿಲಾ ಬಾಯಿ ಬಾಕ್ಸ್ ಚರಕಾ ಬಳಸುವುದು ಹೇಗೆ ಎಂಬುದನ್ನು ಕಲಿಸುತ್ತಿದ್ದರು. ಇದು ಬಲು ಸರಳ. ಆತ ನಕ್ಕರು. ಜಹ್ಲಾ ಸಂಘರ್ಷ್ ಹೆ, ವಹ್ಲಾ ಸ್ನೇಪ್ ಲೇ ಜಾವ್ಹೋ.

ಕುಮಾರಪ್ಪನವರ ಬಳುವಳಿ

ಶಾಶ್ವತ ಅರ್ಥಶಾಸ್ತ್ರದ ಅನ್ವೇಷಣೆ

ಜನವರಿ ೧೯೯೩, ಸೇವಾಗ್ರಾಮದಲ್ಲಿ ಹಬ್ಬದ ವಾತಾವರಣ ಮೂಡಿತ್ತು. ಬಾಪು ಕುಟೀರದ ಬಳಿ ಇರುವ ಹಳೆಯ ಮರದ ಸುತ್ತ ನೂರಾರು ಮಂದಿ ಸೇರಿದ್ದರು. ಈ ಕುಟೀರದ ಎದುರಿಗೆ ಹಳದಿ ಬಣ್ಣದ ಹೂವು ಮತ್ತು ಮಾವಿನ ತಳಿರುಗಳನ್ನು ಕಟ್ಟಿ ಶೃಂಗರಿಸಿದ್ದ ವೇದಿಕೆ ಸಿದ್ಧವಾಗಿತ್ತು. ಅವತ್ತಿನ ಗೌರವಾನ್ವಿತ ಅತಿಥಿ ಕೆ. ಆರ್. ನಾರಾಯಣ್. ಅವರ ಹಿರಿಯರನ್ನೇ ಗಾಂಧಿ 'ಹರಿಜನರು' ಎಂದು ಕರೆಯುತ್ತಿದ್ದುದು. ಅವರು ಯಾವುದೇ ಜಾತಿಯ ಪ್ರತಿನಿಧಿಯಾಗಿ ಬಂದವರಲ್ಲ. ಆತ ಭಾರತದ ಉಪರಾಷ್ಟ್ರಪತಿಯಾಗಿ, ಜೋಸೆಫ್ ಕಾರ್ನೆಲಿಯಸ್ ಕುಮಾರಪ್ಪ ಅವರ ನೂರನೆಯ ಹುಟ್ಟುಹಬ್ಬ (ಜನ್ಮಶತಾಬ್ದಿ)ದ ಆಚರಣೆಯ ಉದ್ಘಾಟಕರಾಗಿ ಸಮಾರಂಭಕ್ಕೆ ಬಂದಿದ್ದರು.

ಜೆ. ಸಿ. ಕುಮಾರಪ್ಪನವರನ್ನು ಪ್ರೇರೇಪಿಸಿದ ಅವೇ ಬಯಕೆಗಳನ್ನು ಹೊತ್ತ ಮೂರನೆಯ ಪೀಳಿಗೆಯ ಪುರುಷರು ಮತ್ತು ಮಹಿಳೆಯರು ಈ ಸಮಾರಂಭದಲ್ಲಿ ಪ್ರೇಕ್ಷಕರಾಗಿದ್ದರು. ಅವರಿಗೆ ಬಾಪು ಕುಟೀರದಲ್ಲಿ ನಡೆಯುವ ಹಲವಾರು ಸಭೆಗಳಲ್ಲಿ ಇದೂ ಒಂದು. ಇಂತಹ ಸಭೆಗಳಲ್ಲಿ ಜನರು ಭಾಗವಹಿಸಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಾರೆ. ಅಷ್ಟೆ ಅಲ್ಲ; ಅವರನ್ನು ಕಾರ್ಯರಂಗಕ್ಕೆ ಇಳಿಯಲು ಬೇರೆ ಬೇರೆ ತಂತ್ರ ರೂಪಿಸಲು ಇದು ಅವಕಾಶವೀಯುತ್ತದೆ. ಈ ಬಯಕೆಯನ್ನು ಸಾಕಾರಗೊಳಿಸಲು ಅವರು ತೆಗೆದುಕೊಳ್ಳುವ ಕ್ರಮಗಳ ವ್ಯಾಪ್ತಿಯನ್ನು ಚರ್ಚಿಸುವುದು ಇಲ್ಲಿ ಅಸಾಧ್ಯ. ಗಾಂಧಿ ಮತ್ತು ಕುಮಾರಪ್ಪನವರನ್ನು ಸಹ ಪಯಣಿಗರು ಎಂದು ಭಾವಿಸುವ ಆ ಸ್ವಾತಂತ್ರ್ಯೋತ್ತರ ಭಾರತದ ಪ್ರಜೆಗಳು ಈ ಬಯಕೆಯನ್ನು ಸಾಕಾರಗೊಳಿಸಲು ಮಾಡುವ ಪ್ರಯತ್ನಗಳ ಒಂದು 'ಝಲಕ್'ನ್ನು ಮಾತ್ರ ನಾವು ನೋಡಲು ಸಾಧ್ಯ.

ಈ ಹಾದಿಯಲ್ಲಿ ಸ್ವಲ್ಪ ದೂರ ಸಾಗೋಣ. ಸೇವಾಗ್ರಾಮ ಆಶ್ರಮದಿಂದ ಸುಮಾರು ಹತ್ತು ಕಿಲೋಮೀಟರ್ ದೂರದಲ್ಲಿರುವ ದತ್ತಾಪುರ ಕೇಂದ್ರಕ್ಕೆ ಹೋಗೋಣ. ಇದು CENTRE OF SCIENCE FOR VILLAGES (ಗ್ರಾಮೀಣ ವಿಜ್ಞಾನ ಕೇಂದ್ರ)ದ ಒಂದು ಕೇಂದ್ರವಾಗಿದೆ.

ಕುಮಾರಪ್ಪನವರ ಬಳುವಳಿ

ಗ್ರಾಮೀಣ ವಿಜ್ಞಾನ ಕೇಂದ್ರ ಕಚೇರಿಯ ಆಯತಾಕಾರದ ಮೀಟಿಂಗ್ ಹಾಲ್ ತುಂಬಿತ್ತು. ಹತ್ತಾರು ಮಂದಿ ಪುರುಷರು ಮತ್ತು ಮಹಿಳೆಯರು ನೆಲದ ಮೇಲೆ ಹಾಸಿದ್ದ ಚಾಪೆಯ ಮೇಲೆ ಕುಳಿತಿದ್ದರು. ಇತರರು ಈ ಕೊಠಡಿಯ ಕಿಟಕಿ, ಬಾಗಿಲುಗಳ ಮೂಲಕ ಗಿಡಗಳಿಂದ ಬರುವ ತಂಗಾಳಿಗೆ ಮೈಯೊಡ್ಡಿ ನಿಂತಿದ್ದರು. ಎಲ್ಲ ಕಣ್ಣುಗಳೂ ಆಗಾಗ್ಗೆ ನಗುತ್ತಾ ನಿಂತು ಮಾತನಾಡುತ್ತಿದ್ದ ಯುವತಿಯತ್ತ ನೆಟ್ಟಿತ್ತು. ಆಕೆಯ ಮಾತುಗಳನ್ನು ತೀರಾ ಕುತೂಹಲದಿಂದ ಕೇಳಿಸಿಕೊಳ್ಳುತ್ತಿದ್ದರು. ಪತ್ರಿಕೆಗಳಲ್ಲಿ ಆಗಾಗ್ಗೆ ಪ್ರಕಟಗೊಳ್ಳುತ್ತಿದ್ದ ಫೋಟೋದಿಂದ ಈಕೆ ನರ್ಮದಾ ಬಚಾವೋ ಆಂದೋಲನದ ನಾಯಕಿ ಎಂದು ಜನ ಅರಿತಿದ್ದರು. ಆಕೆ ದೂರದಲ್ಲೆಲ್ಲೊ ಮಿನುಗುವ ತಾರೆಯಂತಿರಲಿಲ್ಲ.ಹಾಗಿದ್ದೂ ಮೇಧಾಪಾಟ್ಕರ್ ಹಳೆಯ ಸಹೋದ್ಯೋಗಿ ಅಥವಾ ಕುಟುಂಬದ ಒಬ್ಬ ಸದಸ್ಯೆಯಂತೆ ಸಹಜವಾಗಿ ಮಾತನಾಡುತ್ತಿದ್ದರು.

ಮೇಧಾ ತನ್ನ ಹಲವಾರು ಸಹ ಕಾರ್ಯಕರ್ತರೊಂದಿಗೆ ಸೇವಾಗ್ರಾಮ ಆಶ್ರಮಕ್ಕೆ ಒಂದು ಸಭೆಯ ಸಲುವಾಗಿ ಬಂದಿದ್ದರು. ಗ್ರಾಮೀಣ ವಿಜ್ಞಾನ ಕೇಂದ್ರವಿರುವ ದತ್ತಾಪುರದ ಕ್ಷೇತ್ರ ಕಚೇರಿಗೆ ಕಿರು ಭೇಟಿ ಅವರ ಕಾರ್ಯಕ್ರಮದ ಭಾಗವಾಗಿತ್ತು. ಎಲೆ, ಸಣ್ಣ ಕೊಂಬೆಗಳು ಮತ್ತು ಸಗಣಿಯನ್ನು ಉತ್ತಮ ಗೊಬ್ಬರವನ್ನಾಗಿ ಅಥವಾ ಶಕ್ತಿ ಮೂಲವಾಗಿ ಪರಿವರ್ತಿಸುವುದು, ಸಣ್ಣಸಣ್ಣ ಮಣ್ಣಿನ ಮಡಕೆಗಳ ಮೂಲಕ ಹನಿ ನೀರಾವರಿ ತಾಂತ್ರಿಕತೆ, ಅಲ್ಪ ವೆಚ್ಚದ ನೈರ್ಮಲ್ಯ ಸಲಕರಣೆ ತಂತ್ರಜ್ಞಾನ, ಅಲ್ಪ ವೆಚ್ಚದ ಮನೆ ನಿರ್ಮಿತಿ ಇತ್ಯಾದಿಗಳನ್ನು ಈ ಜನ ಕಣ್ಣಾರೆ ಕಂಡರು.

ಮೇಧಾರ ಮಾತುಗಳು, ಕೇಳುಗರನ್ನು ಅತ್ಯಂತ ಕಠೋರವಾದ ಹೋರಾಟದ ತೆಕ್ಕೆಗೆ ಕರೆದೊಯ್ದುವು. ಅವರ ನುಡಿ ಕಠಿಣ ನಿರ್ಧಾರದ ಯೋಧನ ಶಕ್ತಿಯನ್ನು ಹೊರಸೂಸುತ್ತಿದ್ದುದನ್ನು ಗಮನಿಸಬಹುದಾಗಿತ್ತು. ಈ ಶಕ್ತಿ ಹೇಗೆ ನರ್ಮದಾ ನದಿಯ ದಂಡೆಯ ಮೇಲೆ ಸತ್ಯಾಗ್ರಹವಾಗಿ ಪರಿವರ್ತಿತವಾಗುತ್ತದೆ ಮತ್ತು ಬಹುರಾಷ್ಟ್ರೀಯ ಎನ್ರಾನ್ ಕಂಪನಿಯ ವಿರುದ್ಧ ಧರಣಿಯಾಗಿ ಪರಿವರ್ತಿತವಾಗುತ್ತದೆ ಎಂಬುದನ್ನು ಆ ಮೂಲಕ ಚಿತ್ರಿಸಿಕೊಳ್ಳಬಹುದಿತ್ತು. 'ಇದು ದೊಡ್ಡ ಚಿತ್ರದ ಸಣ್ಣ ಭಾಗ ಮಾತ್ರ' ಎಂದು ಮೇಧಾ ಹೇಳುತ್ತಿದ್ದರು. ಭಾರತದಾದ್ಯಂತ ಕೆಲವು ವ್ಯಕ್ತಿಗಳು 'ಇದು ಅಭಿವೃದ್ಧಿ ಎಂದು ಕರೆಯಲಾಗುತ್ತಿರುವ ವಿನಾಶಕ್ಕೆ ಪ್ರತಿಯಾಗಿ, ಎಲ್ಲರಿಗೂ ಪೂರ್ಣ ಸೃಜನಶೀಲ ಶಕ್ತಿಯನ್ನು ತೊಡಗಿಸಲು ಅವಕಾಶವೀಯುವ ಬೇರೊಂದು ವ್ಯವಸ್ಥೆ ತರಲು ತವಕಗೊಂಡಿದ್ದಾರೆ' ಎಂದು ಅವರು ವಿವರಿಸಲು ಯತ್ನಿಸುತ್ತಿದ್ದರು.

ಸಿ. ಎಸ್. ವಿ ಎಂದು ಕರೆಯಲಾಗುವ ಈ ಕೇಂದ್ರದ ಹುಟ್ಟಿನ ಹಿಂದಿನ ಆಶಯ ಶಾಶ್ವತ ಅರ್ಥಶಾಸ್ತ್ರಕ್ಕೆ ತುಡಿಯುವಿಕೆ. ನಿಸರ್ಗ ನಮಗೆ ಕೊಡಮಾಡಿರುವ ದೇಣಿಗೆ ಅಥವಾ ವರವನ್ನು ನಾಶಗೊಳಿಸದೆ ಉತ್ಪಾದನಾ ವಿಧಾನ ಮತ್ತು ಸಾಮಾಜಿಕ ಸಂಘಟನೆಗಳ ಮೂಲಕ ಸೃಜನಶೀಲವಾಗಿ ಬಳಸಿಕೊಳ್ಳುವ ಚಿಂತನೆ ಈ ಆಶಯದ ಬೆನ್ನಿಗಿದೆ. ಇದು ಮನುಷ್ಯನ ಬಯಕೆ ಮತ್ತು ಲೌಕಿಕ ಅಗತ್ಯಗಳ ನಡುವೆ ಸಮತೂಕ ಏರ್ಪಡಿಸಿಕೊಳ್ಳುವ ಮೂಲಕ ಎಲ್ಲರೂ

ನೆಮ್ಮದಿಯಿಂದ ಬದುಕಬಹುದಾದ್ದನ್ನು ಖಾತರಿಗೊಳಿಸುವ ಕನಸು ಕೂಡ. ೧೯೯೦ರ ದಶಕದಲ್ಲಿ ಈ ಕಾಣ್ಕೆಗಳು 'ಪರ್ಯಾಯ ಅಭಿವೃದ್ಧಿ' ಅಥವಾ 'ಸುಸ್ಥಿರ ಅಭಿವೃದ್ಧಿ' ಎಂಬ ನುಡಿಗಟ್ಟುಗಳ ಮೂಲಕ ಪ್ರಕಟವಾದವು.

ಒಂದಾನೊಂದು ಕಾಲದಲ್ಲಿ ವಾರ್ಧಾ ನಿದ್ರಿಸುವಂತಿದ್ದ ಪುಟ್ಟ ಪೇಟೆಯಾಗಿತ್ತು. ಮಗನವಾಡಿ ಚಟುವಟಿಕೆ ಮತ್ತು ಉತ್ಸಾಹದಿಂದ ಕೂಡಿತ್ತು. ಒಂದು ಕಾಲದಲ್ಲಿ ಇದು ಬಾಪು ಮನೆಯಾಗಿತ್ತು. ಅದಕ್ಕಿಂತ ಹೆಚ್ಚಾಗಿ, ಭಾರತದ ಗ್ರಾಮೀಣ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಲು ನಡೆದ ಅನೇಕ ಉಪಕ್ರಮಗಳಿಗೂ ಇದು ಕೇಂದ್ರವಾಗಿತ್ತು. ಸರಿಸುಮಾರು ೧೯೩೪ರ ಇದೇ ಸಮಯದಲ್ಲಿ ಗಾಂಧಿ ವಾರ್ಧಾಗೆ ಹೋಗಿ, ಅಖಿಲ ಭಾರತ ಗ್ರಾಮೀಣ ಕೈಗಾರಿಕೆಗಳ ಸಂಘವನ್ನು ಸ್ಥಾಪಿಸಿದರು. ಈ ಸಂಘಟನೆಯನ್ನು ಹಲವಾರು ಶ್ರೀಮಂತ ಕೈಗಾರಿಕೋದ್ಯಮಿಗಳು ಬೆಂಬಲಿಸಿದ್ದರು. ಅದರ ಸಲಹಾ ಸಮಿತಿಯಲ್ಲಿ ಜೆ. ಸಿ. ಬೋಸ್‌ರಂತಹ ಸಸ್ಯವಿಜ್ಞಾನಿಗಳು, ಸಿ. ವಿ. ರಾಮನ್‌ರಂತಹ ಭೌತವಿಜ್ಞಾನಿಗಳು, ಪಿ.ಸಿ. ರೇರಂತಹ ರಸಾಯನಶಾಸ್ತ್ರಜ್ಞರು, ಸ್ಯಾಮ್ ಹಿಗ್ಗಿನ್ ಬಾತಮ್‌ರಂತಹ ಕೃಷಿ ವಿಜ್ಞಾನಿಗಳು ಹಾಗೂ ರವೀಂದ್ರನಾಥ ಠಾಕೂರರಂತಹ ದಾರ್ಶನಿಕರೂ ಇದ್ದರು. ಗಾಂಧಿಯವರು–ಬದಲಾಗುತ್ತಿದ್ದ ವೈಜ್ಞಾನಿಕ ಬೆಳವಣಿಗೆಯನ್ನು ತೀವ್ರವಾಗಿ ಗಮನಿಸುತ್ತಿದ್ದರು ಮಾತ್ರವಲ್ಲ; ಆ ಜ್ಞಾನವನ್ನು ಗ್ರಾಮೀಣ ಭಾರತಕ್ಕೆ ಅನುಕೂಲವಾಗುವ ಹಾಗೆ ಹೇಗೆ ಬಳಸಿಕೊಳ್ಳಬಹುದು ಎಂದೂ ಯೋಚಿಸುತ್ತಿದ್ದರು.

ಇಪ್ಪತ್ತನೆಯ ಶತಮಾನ ಕೊನೆಗೊಳ್ಳುತ್ತಿರುವ ಈ ಹೊತ್ತಿನಲ್ಲಿಯೂ ಮಗನವಾಡಿಯಲ್ಲಿ ಸದ್ದುಗದ್ದಲವಿಲ್ಲದೆ ಈ ಕೆಲಸ ನಡೆಯುತ್ತಿದೆ. ತೀರಾ ಗದ್ದಲ ತುಂಬಿದ, ಆಧುನಿಕ, ಉಪಗ್ರಹದಿಂದ ಜೋಡಿಸಿದ ಮತ್ತು ರಸ್ತೆಯ ತುಂಬಾ ಆಟೋರಿಕ್ಷಾ ಇರುವ ಈಗಿನ ವಾರ್ಧಾಗೆ ಹೋಲಿಸಿದರೆ ಮಗನವಾಡಿ ಶಾಂತವಾಗಿದೆ ಎಂದೇ ಹೇಳಬೇಕು. ಇಲ್ಲಿ ಈಗಲೂ ಅರ್ಧ ಶತಮಾನದ ಹಿಂದೆ ನಿರ್ಮಿಸಲಾದ 'ಮಗನ್ ಸಂಗ್ರಹಾಲಯ' ಎಂಬ ಎತ್ತರದ ಎರಡು ಕಟ್ಟಡಗಳು ಇದ್ದು, ಗ್ರಾಮೀಣ ಕೈಗಾರಿಕೆ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ವಸ್ತುಗಳನ್ನು ನೋಡಬಹುದಾಗಿದೆ. ಸಣ್ಣ ಕೊಠಡಿಗಳಲ್ಲಿ ಸಿ.ಎಸ್.ವಿ ಕಾರ್ಯಾಲಯಗಳಿದ್ದು ಇಲ್ಲಿ ತುರ್ತು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಗುತ್ತಿದೆ. ದೊಡ್ಡ ಸಿಮೆಂಟು ಮತ್ತು ಇಟ್ಟಿಗೆಗಳಿಂದ ನಿರ್ಮಿತವಾದ ಈ ಕಟ್ಟಡಗಳ ಹಿಂದೆ ಮಣ್ಣು ಮತ್ತು ಗರಿ ಹೊದಿಕೆಯ ಸಣ್ಣ ಗುಡಿಸಲು ಇದೆ. ಇದನ್ನು 'ಕುಮಾರಪ್ಪ ಕುಟಿ' ಎಂದು ಕರೆಯಲಾಗುತ್ತದೆ. 'ಬಾಪೂ ಕುಟಿ'ಯೊಂದಿಗೆ ಇದರ ಸಂಬಂಧ ನಿಚ್ಚಳವಾಗಿರುವುದು ವೇದ್ಯವಾಗುತ್ತದೆ.

'ಕುಮಾರಪ್ಪ ಕುಟಿ'ಯಲ್ಲಿ ಜೋಸೆಫ್ ಕಾರ್ನಿಲಿಯಸ್ ಕುಮಾರಪ್ಪ ೧೯೪೦ರಲ್ಲಿ ವಾಸವಾಗಿದ್ದರು. ಅವರು ಅಖಿಲ ಭಾರತ ಗ್ರಾಮೀಣ ಕೈಗಾರಿಕಗಳ ಸಂಘದ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು. ಇಂದೂ ಕೂಡಾ ಮಗನ್ ಸಂಗ್ರಹಾಲಯದಲ್ಲಿ ಕೆಲಸ ಆರಂಭವಾಗುವುದು ಕುಮಾರಪ್ಪ ಕುಟಿಯ ಮುಂಭಾಗದ ನೆಲದ ಮೇಲೆ ಪ್ರಾರ್ಥನಾ

ಸಭೆ ಮುಗಿದ ನಂತರವೇ. ಸಾಮಾನ್ಯವಾಗಿ ಒಬ್ಬ ಎತ್ತರದ, ತೆಳ್ಳಗಿನ ವ್ಯಕ್ತಿ ಈ ಪ್ರಾರ್ಥನಾ ಸಭೆ ನಡೆಸಿಕೊಡುತ್ತಾರೆ ಅವರೇ ದೇವೇಂದ್ರ ಕುಮಾರ್.

ಐವತ್ತು ವರ್ಷಗಳ ಹಿಂದೆ ವಾರ್ಧಾಗೆ ಬಂದಾಗ ದೇವೇಂದ್ರ ಕುಮಾರ್ ಯುವಕರಾಗಿದ್ದರು. ಸ್ವಾತಂತ್ರ್ಯ ಹೋರಾಟ ಬಿರುಸಿನಿಂದ ಸಾಗಿತ್ತು. ಆಗಿನ ಅನೇಕ ಯುವಕರಂತೆ ದೇವೇಂದ್ರ ಕುಮಾರ್‌ರಿಗೂ ವೈಯಕ್ತಿಕ ಬದುಕಿಗಿಂತ ಮಹತ್ತರವಾದ ಕೆಲಸ ಮಾಡಬೇಕೆಂಬ ಆಸೆ ಉತ್ಕಟವಾಗಿತ್ತು. ಈ ಕಾರಣದಿಂದಲೇ ಯಾವುದಾದರೂ ಕಾರ್ಖಾನೆಯಲ್ಲಿ ತಾಂತ್ರಿಕ ನೈಪುಣ್ಯತೆಯ ಕೆಲಸ ಅಥವಾ ಅದರ ಆಡಳಿತದಲ್ಲಿನ ಕೆಲಸವೂ ಇವರನ್ನು ಆಕರ್ಷಿಸಲಿಲ್ಲ. ವಿಜ್ಞಾನದ ವಿದ್ಯಾರ್ಥಿಯಾದ ದೇವೇಂದ್ರಕುಮಾರ್‌ಗೆ ಕಾಲೇಜಿನಿಂದ ಹೊರಬಿದ್ದ ಕೂಡಲೇ ತನಗಿರುವ ಅಲ್ಪ ವೈಜ್ಞಾನಿಕ ಮತ್ತು ತಾಂತ್ರಿಕ ತಿಳುವಳಿಕೆಯನ್ನು ಗ್ರಾಮೀಣ ಪುನರುಜ್ಜೀವನಕ್ಕೆ ಬಳಸುವ ಮಾರ್ಗಗಳ ಅನ್ವೇಷಣೆಗೆ ಬಳಸಬೇಕೆಂಬ ತುಡಿತ ಇತ್ತು. ಹೀಗಾಗಿ ಇವರು ಕುಮಾರಪ್ಪನವರನ್ನು ಹುಡುಕಿಕೊಂಡು ಬಂದರು.

ಕುಮಾರಪ್ಪ ಖಂಡಿತವಾಗಿ ಇದನ್ನು ಬೇರೆ ಸಂದರ್ಭಕ್ಕೆ ಹೋಲಿಸಬಲ್ಲರು. ೧೯೨೯ರಲ್ಲಿ ಇದೇ ರೀತಿಯ ತುಡಿತ ಅವರನ್ನು ಗಾಂಧಿಯೆಡೆಗೆ ಕರೆತಂದಿತ್ತು. ಆಗ ಕುಮಾರಪ್ಪ ಯುವಕರಾಗಿದ್ದರು. ಅತ್ಯಂತ ಫ್ಯಾಶನಬಲ್ ಎನಿಸುವ ಪಾಶ್ಚಾತ್ಯ ದಿರಿಸು ತೊಟ್ಟಿದ್ದರು. ಕೊಲಂಬಿಯಾ ವಿಶ್ವವಿದ್ಯಾನಿಲಯದಿಂದ ಪದವಿ ಪಡೆದು, ಅಮೆರಿಕೆಯಿಂದ ಬಂದಿದ್ದರು. ೧೯೫೬ರಲ್ಲಿ ವೃದ್ಧಾಪ್ಯದತ್ತ ಸರಿಯುತ್ತಿರುವ ಕುಮಾರಪ್ಪ ತನ್ನ ಭಾವೀ ಶಿಷ್ಯ ದೇವೇಂದ್ರರತ್ತ ಒಮ್ಮೆ ನೋಡಿದರು. ಸಮಕಾಲೀನ ವಿಜ್ಞಾನ ಧನಪಿಶಾಚಿಯ ತೊತ್ತಾಗಿದೆ. ದೇವೇಂದ್ರರಿಗೆ ಇದನ್ನು ಬದಲಾಯಿಸಬಲ್ಲ ಶಕ್ತಿ ಇದೆಯೇ? ಒಂದು ಕ್ಷಣ ಯೋಚಿಸಿದರು 'ಸಾಮಾಜಿಕ ಅಸಮಾನತೆಯನ್ನು ತೊಡೆಯಲು ಹಾಗೂ ಶಾಂತಿಯುತ ಬಾಳ್ವೆಯನ್ನು ಬದುಕಲು ಬಯಸಿದಲ್ಲಿ ಮಗನ್ ಸಂಗ್ರಹಾಲಯದ ಬಾಗಿಲುಗಳು ತೆರೆದಿವೆ' ಎಂದು ಹೇಳಿದರು ಕುಮಾರಪ್ಪ. ದೇವೇಂದ್ರ ಈ ಆಹ್ವಾನವನ್ನು ಅಂಗೀಕರಿಸಿದರು. ಆನಂತರ ಜೀವನಪೂರ್ತಿ ತಮ್ಮನ್ನು ಅದಕ್ಕಾಗಿಯೇ ಅರ್ಪಿಸಿಕೊಂಡರು.

ಹೀಗಾಗಿ ೧೯೫೬ರಲ್ಲಿ ದೇವೇಂದ್ರ AIVIA ಸಂಘಟನೆಗೆ ಸೇರಿ, ಕುಮಾರಪ್ಪನವರ ಮಾರ್ಗದರ್ಶನದಲ್ಲಿ ವೈವಿಧ್ಯಮಯವಾದ ಪ್ರಯೋಗಗಳಲ್ಲಿ ತೊಡಗಿಕೊಂಡರು. ಪರಿಸರ ಆಂದೋಲನ ತಲೆಯೆತ್ತುವ ಎಷ್ಟೋ ಮುಂಚೆ ಮಗನವಾಡಿಯಲ್ಲಿ AIVIA 'ನವೀಕರಿಸಬಹುದಾದ ಶಕ್ತಿ'ಯ ಬಗ್ಗೆ ಚಿಂತನೆ ನಡೆಸಿತ್ತು. ದೀಪಕ್ಕೆ ಸೀಮೆಣ್ಣೆಯ ಬದಲಿಗೆ ಖಾದ್ಯೇತರ ಸಸ್ಯಜನ್ಯ ಎಣ್ಣೆಯನ್ನು ಬಳಸಲು ಆರಂಭಿಸಿತು. ಕೆಲವು ಮರಗಳಲ್ಲಿ ದೊರೆಯುವ ಬೀಜದಿಂದ ತೆಗೆದ ಎಣ್ಣೆಯನ್ನು ಸಾಬೂನು ತಯಾರಿಕೆಯಲ್ಲಿ ಬಳಸಲಾಯಿತು.ಇದು ಇರುವ ವೃಕ್ಷಗಳ ಉತ್ಪಾದನೆ ಹಾಗೂ ವಾಣಿಜ್ಯ ಮೌಲ್ಯವನ್ನು ಹೆಚ್ಚಿಸುವ ಮತ್ತು ಅರಣ್ಯನಾಶ ಅಥವಾ ವೃಕ್ಷನಾಶವನ್ನು ತಡೆಯುವ ಬಗೆ ಇದೆಂದು ಭಾವಿಸಲಾಯಿತು. ಯಾಂತ್ರಿಕ ಪರಿಕರಗಳನ್ನು ಅಭಿವೃದ್ಧಿಗೊಳಿಸುವ ಮೂಲಕ ಬಂಡಿಗಳಿಗೆ ಹೂಡುವ, ಎಣ್ಣೆ ಗಿರಣಿಗಳಲ್ಲಿ ಬಳಸುವ,

ಧಾನ್ಯಗಳ ಹಿಟ್ಟು ಮಾಡುವ ಹಾಗೂ ನೀರಾವರಿಗೆ ಬಳಸುವ ಎತ್ತುಗಳ ಶಕ್ತಿಯನ್ನು ಪೆಚ್ಚಿಸುವ ಯತ್ನ ಮಾಡಲಾಯಿತು. 'ಇಕಾಲಜಿ' ಎಂಬ ಶಬ್ದದ ಬಳಕೆ ಆಗ ಹೆಚ್ಚಿಲ್ಲದಿದ್ದರೂ ಇವೆಲ್ಲ ಪರಿಸರಸ್ನೇಹಿ ಉತ್ಪಾದನಾ ಕ್ರಮಗಳೇ ಆಗಿದ್ದುವು.

ಐವತ್ತರ ದಶಕದ ಆರಂಭದಲ್ಲಿ ಬೃಹತ್ ಅಣೆಕಟ್ಟುಗಳ ವಿವಾದಕ್ಕೆ ಸಿಲುಕುವ ಮುಂಚೆಯೇ AIVIA ಆಧುನಿಕ ನೀರಾವರಿ ವ್ಯವಸ್ಥೆಯ ಇತಿಮಿತಿಗಳನ್ನು ಅರಿತುಕೊಂಡಿತು. ನೀರಾವರಿ ಮತ್ತು ರಾಸಾಯನಿಕ ಗೊಬ್ಬರಗಳ ಹೆಚ್ಚಿನ ಬಳಕೆ ಅಲ್ಪಕಾಲೀನ ಲಾಭ ತಂದುಕೊಡಬಹುದು. ಆದರೆ ಅಂತಿಮವಾಗಿ ಇವು ಮಣ್ಣನ್ನು ನಾಶಮಾಡಿ ಹಲವಾರು ರೀತಿಯ ಸಮಸ್ಯೆಗಳಿಗೆ ನಮ್ಮನ್ನು ದೂಡುತ್ತವೆ ಎಂದು ಎಚ್ಚರಿಸಿತು. ಕೆರೆ ಮತ್ತು ಕೊಳಗಳಲ್ಲಿ ನೀರನ್ನು ಉಳಿಸುವ ವ್ಯವಸ್ಥೆ ನೀರಾವರಿಯ ಉತ್ತಮ ಮಾರ್ಗವಾಗಿರುವುದರ ಜೊತೆಗೆ, ಮೇಲ್ಮಣ್ಣಿನ ನಾಶವನ್ನು ತಡೆಯಬಲ್ಲದಾಗಿದೆ ಎಂದು ತಿಳಿಸಿತು.

ಭಾರತದ ಹಳ್ಳಿಗಳು ಉತ್ತಮಸ್ಥಿತಿಯುವಾಗಬೇಕಾದರೆ ವಿಕೇಂದ್ರಿಕೃತ ಕೈಗಾರಿಕೀಕರಣ ಅಗತ್ಯ ಎಂದು ದೇವೇಂದ್ರ ಕುಮಾರ್‌ಗೆ ಮನವರಿಕೆಯಾಯಿತು. ಮಗನವಾಡಿಯಲ್ಲಿ ಆರು ವರ್ಷ ಕೆಲಸ ಮಾಡಿದ ನಂತರ ಹಳ್ಳಿಗಳನ್ನು ಅರ್ಥಮಾಡಿಕೊಂಡು ಅದರ ಬೆಳವಣಿಗೆಯತ್ತ ಗಮನಕೊಡಬೇಕಾದರೆ, ಹಳ್ಳಿಗಳಲ್ಲೇ ವಾಸಮಾಡುವ ಅಗತ್ಯವಿದೆ ಎಂಬುದನ್ನು ಅವರು ಮನಗಂಡರು. 'ಹಳ್ಳಿಗಳಲ್ಲಿ ವಾಸಮಾಡುವ ಅಪೂರ್ವ ಅವಕಾಶ ಈಗ ಬಂದಿದೆ' ಎಂಬ ಸಮಾಧಾನದೊಂದಿಗೆ ತಮ್ಮ ಪತ್ನಿ ಪ್ರಭಾ ಮತ್ತು ತಮ್ಮಂತೆ ಆಲೋಚಿಸುವ ಕೆಲ ಸಹ ಪ್ರಯಣಿಗರನ್ನು ಕರೆದುಕೊಂಡು ಮಧ್ಯಪ್ರದೇಶದಲ್ಲಿ ವಿಂಧ್ಯ ಬೆಟ್ಟದ ಮೇಲಿನ ಮಚಾಲ ಎಂಬ ಗ್ರಾಮದಲ್ಲಿ ನೆಲಸಿದರು. 'ನಾವು ಹಳ್ಳಿಗಳಿಗೆ ಕೊಡುವುದಕ್ಕಿಂತಾಲ್ಲಿಂದ ಕಲಿಯುವುದೇ ಸಾಕಷ್ಟಿದೆ' ಎಂಬ ಅರಿವು ಆ ತಂಡಕ್ಕಿತ್ತು. ಆನಂತರದ ದಿವಸಗಳಲ್ಲಿ ದೇವೇಂದ್ರ ಹೀಗೆ ಬರೆದರು: 'ನಾವು ನೆಲದ, ಅದರ ಅಂತಃಸತ್ವದ ಭಾಷೆಯನ್ನು ಕಲಿತೆವು. ಋತುಗಳು, ಪ್ರಕೃತಿ, ಈ ನೆಲದ ಜನ ಮತ್ತು ಅವರಿಂದ ಸ್ಫೂರ್ತಿಗೊಂಡಿದ್ದೇ ಅಲ್ಲದೇ ಗ್ರಾಮೀಣ ಭಾರತವು ನಮ್ಮೆದುರು ತಂದು ನಿಲ್ಲಿಸಿದ ಸವಾಲಿಗೆ ಭಯಭೀತರೂ ಆದೆವು'.

ಮಚಾಲಾದ ಈ ತಂಡ ೩೦೦ ಎಕರೆ ಬಂಜರು ಭೂಮಿಯಲ್ಲಿ ಸಾಮುದಾಯಿಕ ಸಹಕಾರ ಕೃಷಿಯನ್ನು ಸಂಘಟಿಸಿತು. ಸುಮಾರು ೩೦ ಭೂರಹಿತ ಕೃಷಿಕರು ಮತ್ತು ದೇವೆಂದ್ರ ಕುಮಾರ್ ತಂಡದ ಸದಸ್ಯರು. ಈ ಭೂಮಿಯುಲ್ಲಿ ಸಾಗುವಳಿ ಮಾಡತೊಡಗಿದರು. ಅದಕ್ಕೆ ಮಗನವಾಡಿಯಲ್ಲಿನ ಅನೇಕ ಪರಿಕರಗಳನ್ನು ಬಳಸತೊಡಗಿದರು. ಜೊತೆಗೆ ಅಲ್ಲಿ ಮಕ್ಕಳಿಗಾಗಿ ಶಾಲೆಯನ್ನು ಪ್ರಾರಂಭಿಸಿದರು, ಬಾವಿಗಳನ್ನು ತೋಡಿದರು, ವೈದ್ಯಕೀಯ ಅನುಕೂಲ ಒದಗಿಸಿದರು, ಕಾಂಪೋಸ್ಟ್ ಗುಂಡಿಗಳನ್ನು ನಿರ್ಮಿಸಿದರು, ಅಸ್ಪೃಶ್ಯತೆಯು ವಿರುದ್ಧ ಹೋರಾಟವನ್ನೂ ಮಾಡಿದರು. ಅವರ ಸುತ್ತಲೂ ವೇಗವಾಗಿ ಆಗುತ್ತಿದ್ದ ಬದಲಾವಣೆ ಈ ಸ್ಥಳೀಯ ಯಶಸ್ಸನ್ನು ಮಸುಳಿಸಿಬಿಟ್ಟವು.

ಸರಕಾರದ ನೀತಿ ಹೈಬ್ರೀಡ್ ಬೀಜ, ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕ ಬಳಸುವತ್ತ ಹಾಗೂ ಟ್ರಾಕ್ಟರುಗಳ ಉಪಯೋಗದತ್ತಲೇ ಇತ್ತು. ಹತ್ತು ವರ್ಷಗಳಲ್ಲಿ ಈ ಗುಂಪು ಸ್ಥಳೀಯ ಪ್ರಯೋಗಗಳನ್ನು ಮುಂದುವರೆಸುತ್ತಿರುವಾಗ, ಗ್ರಾಮೀಣ ಶ್ರೀಮಂತರು ಇನ್ನೂ ವೇಗವಾಗಿ ಶ್ರೀಮಂತರಾಗುತ್ತಲೇ ಹೋದರು, ಪರಿಸರ ತೀವ್ರವಾಗಿ ಹಾಳಾಯಿತು. ಗ್ರಾಮಗಳು ಹೆಚ್ಚುಹೆಚ್ಚು ಪ್ರಮಾಣದಲ್ಲಿ ನಗರಗಳನ್ನು ಅವಲಂಬಿಸುವಂತಾಯಿತು. ಗ್ರಾಮಗಳಲ್ಲಿ ಸಹಕಾರಿ ಮತ್ತು ಸಾಮುದಾಯಿಕ ಮನೋಧರ್ಮ ನಾಶವಾಗಿ, ಬರಿದಾಗುತ್ತಿರುವ ಸಂಪನ್ಮೂಲವನ್ನು ದೋಚಲು ವ್ಯಕ್ತಿಗತ ಸ್ಪರ್ಧೆ ಹೆಚ್ಚಾಗುತ್ತಿರುವುದನ್ನು ದೇವೇಂದ್ರ ಗಮನಿಸಿದರು.

ಇವು ಸ್ವತಂತ್ರವಾದ, ಸ್ಥಳೀಯ ಪ್ರಯತ್ನಗಳ ಮಿತಿಯನ್ನು ತನ್ನಷ್ಟಕ್ಕೇ ತೋರಿಸಿಕೊಟ್ಟವು. ೧೯೬೦ರಲ್ಲಿ ದೇವೇಂದ್ರ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕೆಲಸ ಮಾಡುವಂತೆ ವಿನೋಬಾ ಭಾವೆಯವರು ಮನ ಒಲಿಸಿದರು. ಇದರಿಂದ ದೇವೇಂದ್ರ ಹಲವಾರು ಸರ್ವೋದಯ ಸಂಸ್ಥೆಗಳಲ್ಲಿ ಪ್ರಮುಖ ಪಾತ್ರ ವಹಿಸಬೇಕಾಯಿತು. ಇವುಗಳಿಗಿಂತ ಹೆಚ್ಚಾಗಿ, ಚಂಬಲ್‌ನ ಡಕಾಯಿತರನ್ನು ಶರಣಾಗತರಾಗಿಸುವುದರಲ್ಲಿ ನಡೆದ ಶಾಂತಿಯುತ ಮಾತುಕತೆಗಳಲ್ಲಿ ದೇವೇಂದ್ರ, ವಿನೋಬಾ ಮತ್ತು ಜೆ. ಪಿ. ಅವರಿಗೆ ಸಹಾಯ ಮಾಡಿದರು.

೧೯೭೦ರ ಮಧ್ಯಭಾಗದ ವೇಳೆಗೆ ಜಾಗತಿಕ ಚಿಂತನೆಯಲ್ಲಿ ಗಮನಾರ್ಹ ಬದಲಾವಣೆಯನ್ನು ದೇವೇಂದ್ರ ಗುರುತಿಸಿದರು. ಗಾಂಧಿ ಮತ್ತು ಕುಮಾರಪ್ಪನವರ ಬುದ್ಧಿಮತ್ತೆ, ಅವರು ಬದುಕಿದ್ದ ಕಾಲಕ್ಕಿಂತಲೂ ಹೆಚ್ಚಾಗಿ, ಆಗ ಸ್ವೀಕೃತವಾಗತೊಡಗಿತು. ಅನೇಕ ಪ್ರಮುಖ ಘಟನೆಗಳ ಒಟ್ಟು ಪರಿಣಾಮ ಇದಾಗಿತ್ತು. ೧೯೬೨ರಷ್ಟು ಮುಂಚೆಯೇ ರಾಶೆಲ್ ಕಾರ್ಸನ್‌ರ ಶ್ರೇಷ್ಠ ಕೃತಿ 'SILENT SPRING' ಮುಂಬರುವ ಪರಿಸರ ನಾಶದ ಬಗ್ಗೆ ಪ್ರಪಂಚವನ್ನು ಎಚ್ಚರಿಸಿತ್ತು.

೧೯೬೦ರ ಮಧ್ಯಭಾಗದಲ್ಲಿ ಇ.ಎಫ್. ಶೂಮೇಕರ್ ಎಂಬ ಇಂಗ್ಲಿಷ್ ಮನುಷ್ಯ 'ನನ್ನ ಆರ್ಥಿಕ ಸಿದ್ಧಾಂತಗಳಲ್ಲಿ ಗಾಂಧೀಜಿಯವರ ಅಹಿಂಸಾ ಸಿದ್ಧಾಂತವನ್ನು ಕಾಣಬಹುದಾಗಿದೆ' ಎಂದು ಪಾಶ್ಚಾತ್ಯ ಬುದ್ಧಿಜೀವಿಗಳಿಗೆ ತಿಳಿಸಲು ಪ್ರಯತ್ನಿಸಿದ. ೧೯೭೩ರಲ್ಲಿ ಎಕನಾಮಿಕ್ಸ್‌ನಲ್ಲಿ ಹಾವರ್ಡ್‌ನ ವಿದ್ವನ್ಮಣಿಯಾದ ಶೂಮೇಕರ್ SMALLA IS BEAUTIGUL-ECONOMICS AS IF PEOPLE MATTERED ಎಂಬ ಪುಸ್ತಕ ಬರೆದು ಅಂತರರಾಷ್ಟ್ರೀಯ ವಲಯವನ್ನು ತಲ್ಲಣಗೊಳಿಸಿದ. ಈ ಪುಸ್ತಕದಲ್ಲಿ ಆತ ಆಧುನಿಕ ಕೈಗಾರಿಕಾ ಸಂಸ್ಕೃತಿ ಮತ್ತು ಅದರ ಅರ್ಥಶಾಸ್ತ್ರ ಕುರಿತು ಗಾಂಧೀ ಮತ್ತು ಕುಮಾರಪ್ಪನವರ ವಿಮರ್ಶೆಗಳನ್ನು ಪುನರುಚ್ಚರಿಸಿದ. ಶಾಂತಿಯುತ ಪ್ರಪಂಚ ನಿರ್ಮಿಸಬಯಸುವವರೆಲ್ಲರಿಗೆ ಈ ಪುಸ್ತಕ ಪಠ್ಯಪುಸ್ತಕವೆನಿಸಿತು. ಅಷ್ಟೇ ಅಲ್ಲ; ಈ ಪುಸ್ತಕ ಜಾಗತಿಕ ನುಡಿಗಟ್ಟಾಯಿತು. ಪುಸ್ತಕದ ಹೊದಿಕೆಯಲ್ಲಿ ಮರಗಳು, ಗಿಡಗಳು, ಒಂದು ಚಿಟ್ಟೆ, ಒಂದು ಬೃಹತ್ ಟ್ರೈಸಿಕಲ್‌ನ ಮೇಲೆ ಒಬ್ಬ ಮನುಷ್ಯ ಮತ್ತು ಗಾಂಧೀಜಿಯ ಚಿತ್ರಗಳು ಇದ್ದುವು.

ಇದಕ್ಕೆ ೨೦ ವರ್ಷ ಮುಂಚೆ ಶೂಮೇಕರ್ ಬ್ರಿಟಿಷ್ ಕಲ್ಲಿದ್ದಲು ಬೋರ್ಡ್‌ನಲ್ಲಿ ಉನ್ನತ ಮಟ್ಟದ ಅರ್ಥಶಾಸ್ತ್ರಜ್ಞನಾಗಿದ್ದ. ಇದರ ಜೊತೆಗೆ ಆತ ಬ್ರಿಟನ್ನಿನ ಅತ್ಯಂತ ಹಳೆಯ ಸಾವಯವ ಕೃಷಿ ಸಂಘಟನೆಯಾದ 'ಸಾಯಿಲ್ ಅಸೋಸಿಯೇಷನ್'ನ ಅಧ್ಯಕ್ಷನಾಗಿದ್ದ. ಒಂದು ವ್ಯವಸ್ಥೆಯ ಒಳಗಿದ್ದೂ, ಆಧುನಿಕ ಅರ್ಥಶಾಸ್ತ್ರದ ಅಡಿಗಲ್ಲುಗಳನ್ನು ಅಲುಗಾಡಿಸಿದ. ಈ ವಿಷಯದಲ್ಲಿ ಮೊದಲಿಗರಾದ ಪ್ರಿನ್ಸ್ ಕೊಪೋಟ್ಕಿನ್, ಲಿಯೋ ಟಾಲ್‌ಸ್ಟಾಯ್ ಮತ್ತು ಗಾಂಧಿಯವರುಗಳು ಪ್ರತಿಪಾದಿಸಿದ ಸಾವಯವ ವಿಕೇಂದ್ರಿಕೃತ ಅರ್ಥವ್ಯವಸ್ಥೆಯ ಪರಂಪರೆಗೆ ಈತ ಸೇರಿದವನಾಗಿದ್ದ. ಶೂಮೇಕರ್ ಪುಸ್ತಕ ಹೊರಬಿದ್ದ ಹಿಂದೆಯೇ ರೋಮ್‌ನ ಕ್ಲಬ್ ವರದಿಯೂ ಪ್ರಕಟಗೊಂಡಿತು. ಈ ವರದಿಯಲ್ಲಿ ಬುದ್ಧಿಜೀವಿಗಳ ಅಂತರರಾಷ್ಟ್ರೀಯ ಗುಂಪು ಅನಿಯಂತ್ರಿತ ಬಳಕೆಯ ಅಪಾಯಗಳ ಬಗ್ಗೆ ಜಗತ್ತನ್ನು ಎಚ್ಚರಿಸಿ, ಅಭಿವೃದ್ಧಿಗೆ ಪರ್ಯಾಯ ಮಾರ್ಗ ಕಂಡುಕೊಳ್ಳಲು ಕರೆ ನೀಡಿತು.

ಈ ನಡುವೆ ಪರಂಪರಾಗತವಾದ ಮತ್ತು ತೀರಾ ಔಪಚಾರಿಕವಾದ ಗಾಂಧಿ ಸಂಸ್ಥೆಗಳು ಗಾಂಧೀಜಿಯವರ ತೀವ್ರತರವಾದ ಆರ್ಥಿಕ ಕಾಣ್ಕೆಯನ್ನು ಗಮನಿಸಲೇ ಇಲ್ಲ. ಬಹುಮಟ್ಟಿಗೆ ಖಾದಿ ಕೇಂದ್ರಗಳನ್ನು ನಿರ್ವಹಿಸುವಮಟ್ಟಿಗೆ ಇವು ಸೀಮಿತಗೊಂಡವು. ಆದರೆ, ಸ್ವಾತಂತ್ರ್ಯ ನಂತರದ ಹೊಸ ಜನಾಂಗ, ಹೊಸ ರೀತಿಯ ಯೋಜನೆಗಳನ್ನು, ಪ್ರಯೋಗಗಳನ್ನು ಕೈಗೆತ್ತಿಕೊಂಡಿತು. ಇದು ಯಥಾಸ್ಥಿತಿಗೆ ಸವಾಲೆಸೆದುದೂ ಅಲ್ಲದೇ, ಸಮಾನತೆ ಮತ್ತು ನ್ಯಾಯಪರವಾದ ಅಭಿವೃದ್ಧಿಯ ಮಾದರಿಯನ್ನು ಬಯಸಿತು.

ಅಂತರರಾಷ್ಟ್ರೀಯ ಮಟ್ಟದಲ್ಲಿಈ ಕುರಿತು ವಾಗ್ವಾದಗಳು ನಡೆಯುತ್ತಿದ್ದ ಸಮಯದಲ್ಲಿಯೇ ಹೊಸ ಜನಾಂಗದ ಗಾಂಧಿವಾದಿಗಳಲ್ಲಿ ಒಬ್ಬರಾದ ದೇವೇಂದ್ರಕುಮಾರ್ ಕಾರ್ಯಪ್ರವೃತ್ತರಾದರು. ಹೀಗೆ ೧೯೭೬ರಲ್ಲಿ ಸಿಎಸ್‌ವಿಯನ್ನು ಸ್ಥಾಪಿಸುವ ಕೆಲಸದಲ್ಲಿ ತಮ್ಮನ್ನು ಪೂರ್ಣ ತೊಡಗಿಸಿಕೊಂಡರು. ಈ ಸಂಘಟನೆಯ ಉದ್ದೇಶ–ಸೂಕ್ತವಾದ ಸಾಮುದಾಯಿಕ, ವಿಕೇಂದ್ರಿಕೃತ ನೆಲೆಯಿಂದ ಗ್ರಾಮೀಣ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿ, ಅದರ ಬಳಕೆಯನ್ನು ಜಗತ್ತಿಗೆ ತೋರಿಸಿಕೊಡುವುದಾಗಿತ್ತು.

ಆ ಸಂದರ್ಭದ ಈ ಪ್ರಯತ್ನ ದೇಶದ ಪ್ರಮುಖ ನೀತಿ ನಿರೂಪಕರಾದ ಪ್ರೊ॥ನಾಯುಡಮ್ಮ, ಪ್ರೊ॥ಡಿ,ಎಸ್. ಕೊಠಾರಿ ಮತ್ತು ಡಾ॥ಎಂ.ಎಸ್. ಸ್ವಾಮಿನಾಥನ್‌ರಂತಹವರನ್ನು ಸೆಳೆಯಿತು. ಆದರೆ ಇದಕ್ಕಿಂತ ಹೆಚ್ಚಾಗಿ, ಅನೇಕ ಕಿರಿಯರನ್ನು ಅಂದರೆ, ಸುಮಾರು ೨೫ಕ್ಕೂ ಕಡಿಮೆ ವಯಸ್ಸಿನ ದೇವೇಂದ್ರ ಕುಮಾರ್‌ರಂತಹವರನ್ನು ಆಕರ್ಷಿಸಿತು.

ECONOMY OF PERMANENCE, A QUEST FOR A SOCIAL ORDER BASED ON NON-VIOLENCE. (ಶಾಶ್ವತ ಅರ್ಥಶಾಸ್ತ್ರ–ಅಹಿಂಸೆಯನ್ನು ಆಧರಿಸಿದ ಸಮಾಜ ವ್ಯವಸ್ಥೆಯ ಅನ್ವೇಷಣೆ) ಎಂಬುದು ಜೆ.ಸಿ. ಕುಮಾರಪ್ಪನವರು ಬರೆದ ಪುಸ್ತಕದ ಶೀರ್ಷಿಕೆ. ಸುಮಾರು ಎರಡು ದಶಕಗಳ ತಾತ್ವಿಕ ಚಿಂತನೆ ಮತ್ತು ಪ್ರಾಯೋಗಿಕ ಅನುಭವವನ್ನು ಭಟ್ಟಿ ಇಳಿಸಿದ ಪುಸ್ತಕ ಇದು. ಕುಮಾರಪ್ಪ ಕೇರಳದವರು. ಅವರು ಅಧಿಕೃತ

ಅಕೌಂಟೆಂಟ್ ಆಗಿ, ತಮ್ಮದೇ ಸ್ವಂತ ಆಡಿಟಿಂಗ್ ಫರ್ಮ್ ಸ್ಥಾಪಿಸಿಕೊಂಡು ಮುಂಬೈಯಲ್ಲಿ ಜೀವನ ಆರಂಭಿಸಿದರು. ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರ ಅಭ್ಯಾಸ ಮಾಡಲು ಹೊರಟರು. ಅಲ್ಲಿಯೇ ಅವರು ಆಧುನಿಕ ಅರ್ಥಶಾಸ್ತ್ರದ ಪ್ರಮುಖ ವಿಮರ್ಶಕರಾಗಿ ರೂಪುಗೊಂಡಿದ್ದು. ಇದು ಅವರು ಗಾಂಧಿ ಸಂಪರ್ಕಕ್ಕೆ ಬರುವ ಮೊದಲ ವಿಚಾರ.

ಮನುಷ್ಯ, ಸಂಪತ್ತು ಸೃಷ್ಟಿಸುವವನು ಮಾತ್ರ ಅಲ್ಲ; ರಾಜಕೀಯ, ನೈತಿಕ ಮತ್ತು ಆಧ್ಯಾತ್ಮಿಕ ಜವಾಬ್ದಾರಿ ಹೊಂದಿರುವ ಸಮಾಜದ ಒಬ್ಬ ಸದಸ್ಯ. ಕುಮಾರಪ್ಪ ಕೊಲಂಬಿಯಾದಲ್ಲಿರುವಾಗಲೇ, ಭಾರತದ ಸಾರ್ವಜನಿಕ ಹಣಕಾಸಿನ ಬಗ್ಗೆ ತೀವ್ರ ಅಧ್ಯಯನ ಮಾಡಿ, ಹೇಗೆ ಬ್ರಿಟಿಷರು ತಮ್ಮ ತೆರಿಗೆ ನೀತಿಯಿಂದಾಗಿ ಶೋಷಿಸುತ್ತಿದ್ದಾರೆ ಎಂಬುದನ್ನು ಬರೆದು ತಿಳಿಸಿದರು. ೧೯೨೯ರಲ್ಲಿ ಅವರು ಭಾರತಕ್ಕೆ ವಾಪಾಸು ಬಂದು, ಈ ಪ್ರಬಂಧವನ್ನು ಪ್ರಕಟಿಸುವ ಹವಣಿಕೆಯಲ್ಲಿದ್ದಾಗ ಗಾಂಧೀಜಿಗೆ ಇದನ್ನು ಓದುವ ಆಸಕ್ತಿ ಇದೆ ಎಂದು ಗೆಳೆಯರ ಮೂಲಕ ತಿಳಿದುಬಂತು. ಹೀಗಾಗಿ ಸಾಬರಮತಿ ಆಶ್ರಮದ ಮರದ ಕೆಳಗೆ ಸಗಣಿ ಸಾರಿಸಿದ ನೆಲದ ಮೇಲೆ ಚರಕದಲ್ಲಿ ನೂಲುತ್ತಾ ಕುಳಿತ ವೃದ್ಧನ ಮುಂದೆ ಕುಮಾರಪ್ಪ ಹಾಜರಾದರು.

ತಮ್ಮಂತೆಯೇ ಚಿಂತಿಸುವ ಅರ್ಥಶಾಸ್ತ್ರದ ಗಂಭೀರ ವಿದ್ಯಾರ್ಥಿಯನ್ನು ಕಂಡು ಗಾಂಧೀಜಿಗೆ ಅಚ್ಚರಿ ಎನಿಸಿತು. 'ಗುಜರಾತಿನ ಗ್ರಾಮೀಣ ಪ್ರದೇಶದಲ್ಲಿ ಸಮೀಕ್ಷೆ ನಡೆಸುವ ಮನಸ್ಸಿದೆಯೇ?' ಎಂದು ಗಾಂಧೀಜಿ ತಕ್ಷಣವೇ ಕುಮಾರಪ್ಪನವರನ್ನು ಕೇಳಿದರು. ಅದರ ಫಲಸ್ವರೂಪವೇ ವಿವರಪೂರ್ಣವಾದ, ಈಗ ಐತಿಹಾಸಿಕವೆನಿಸಿಕೊಳ್ಳುವ ಮಾಟಾರ್ ತಾಲ್ಲೂಕಾದ ಸರ್ವೆ. ಇದು ಕುಮಾರಪ್ಪನವರನ್ನು ಪರಿವರ್ತಿಸಿತು. ಈ ರೇಷ್ಮೆ ಪ್ಯಾಂಟು ಶರ್ಟುಗಳ ಪಟ್ಟಣವಾಸಿ ಆಡಿಟರ್, ಖಾದಿ ಧೋತ್ರ ಕುರ್ತಾ ಧರಿಸಿ ರಚನಾತ್ಮಕ ಕೆಲಸಗಳಲ್ಲಿ ತೊಡಗಿದರು. ಅರ್ಥಶಾಸ್ತ್ರೀಯ ಮತ್ತು ಗ್ರಾಮೀಣ ಕೈಗಾರಿಕೆಯ ಕಾಣ್ಕೆಯ ನಿಜವಾದ ಹಾಗು ಪ್ರಮುಖ ವಾರಸುದಾರರಾದರು.

ತನ್ನ ಗುರುವಿನಂತೆ ಅವರಿಗೆ ಹೇಳಲು ಹೊಸದೇನೂ ಇರಲಿಲ್ಲ. ಅವರು ನಿಸರ್ಗದಲ್ಲಿ ಬೇರೆ ಬೇರೆ ಜೀವಜಂತುಗಳು ಪರಸ್ಪರಾವಲಂಬಿಗಳಾಗಿ ಹೇಗೆ ಬದುಕುತ್ತವೆ ಎಂಬುದನ್ನಷ್ಟೆ ಗಮನಿಸಿದರು ಮತ್ತು ಅದರಿಂದ ಮನುಷ್ಯ ಸಮಾಜ ಕಲಿಯಬಹುದಾದ ಪಾಠಗಳನ್ನು ಹೆಕ್ಕಿ ತೆಗೆದರು. ಈ ನೆಲದ ಪ್ರತಿಯೊಂದು ಜೀವಿಯೂ, ಜೀವನಚಕ್ರದಲ್ಲಿ ಅಗತ್ಯ ಪಾತ್ರವನ್ನು ವಹಿಸುತ್ತದೆ ಮತ್ತು ಆ ಮೂಲಕ ತನ್ನ ಸ್ವಂತದ ಕೆಲಸ ನಿರ್ವಹಿಸುತ್ತದೆ ಎಂಬುದನ್ನು ಕುಮಾರಪ್ಪ ಗಮನಿಸಿದರು.

'...ಈ ರೀತಿ ನಿಸರ್ಗ ತನ್ನ ಎಲ್ಲಾ ಘಟಕಗಳ ಸಹಕಾರ ಬಯಸುತ್ತದೆ. ಪ್ರತಿಯೊಂದೂ ತನ್ನಷ್ಟಕ್ಕೆ ಕೆಲಸ ಮಾಡುತ್ತಾ, ಈ ಪ್ರಕ್ರಿಯೆಯಲ್ಲಿ ಸಮಾಜದ ಬೇರೆ ಬೇರೆ ಘಟಕಗಳು ಅದರದರ ಕೆಲಸ ಮಾಡಲು ಅನುವು ಮಾಡಿಕೊಡುತ್ತದೆ. ಓಡಾಡಬಲ್ಲವರು, ಓಡಾಡಲಾಗದವರಿಗೆ, ಬುದ್ಧಿ ಇರುವವರು ಬುದ್ಧಿ ಇಲ್ಲದವರಿಗೆ ನೆರವು ನೀಡುತ್ತಾರೆ. ಹೀಗಾಗಿ ನಿಸರ್ಗದಲ್ಲಿ ಪ್ರತಿಯೊಂದು ಸಾಮಾನ್ಯ ಉದ್ದೇಶಕ್ಕಾಗಿ ಒಂದನ್ನೊಂದು ಹೊಂದಿ

ಕೊಂಡಿರುತ್ತದೆ. ಯಾವುದೂ ಅದಕ್ಕಾಗಿ ಮಾತ್ರ ಇಲ್ಲ. ಹಿಂಸೆ ಈ ಸರಪಳಿಯನ್ನು ಒಡೆಯದೇ, ಇವೆಲ್ಲವೂ ಸುಸಂಗತವಾಗಿ ನಡೆದಲ್ಲಿ ಶಾಶ್ವತ ಅರ್ಥಶಾಸ್ತ ಜನ್ಮತಾಳುತ್ತದೆ'. ಕುಮಾ ಪ್ಪನವರು ಶಾಶ್ವತ ಅರ್ಥಶಾಸ್ತ್ರದೊಂದಿಗೆ, ನಶ್ವರ ಅರ್ಥಶಾಸ್ತ್ರವನ್ನು ಹೋಲಿಸಿದರು. ದೊಡ್ಡ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕ ಬಳಸಿ, ಆ ಮೂಲಕ ಅಲ್ಪಕಾಲದವರೆಗೆ ಅತಿ ಹೆಚ್ಚು ಇಳುವರಿ ಪಡೆಯುವ ನಾಟಕೀಯ ದೃಶ್ಯವಾಗಿ ನಶ್ವರ ಅರ್ಥಶಾಸ್ತ್ರ ಗೋಚರವಾಗುತ್ತದೆ. ಇದರ ಪರಿಣಾಮ ಮಣ್ಣು ನಾಶವಾಗುತ್ತದೆ. ಇದೇ ರೀತಿ, ಆಹಾರದಲ್ಲಿ ಸ್ವಾವಲಂಬಿಯಾಗುವ ಬದಲಿಗೆ ವಾಣಿಜ್ಯ ಬೆಳೆಗೆ ಆದ್ಯತೆ ನೀಡುವುದರಿಂದ ಆಗುವ ಅಪಾಯಗಳ ಬಗ್ಗೆಯೂ ಎಚ್ಚರಿಸಿದ್ದರು.

'ಪೂರ್ಣವಾಗಿ ಹಣ ಅಥವಾ ಲೌಕಿಕ ವಸ್ತುಗಳ ಮೌಲ್ಯದ ಆಧಾರದ ಮೇಲೆ ಕಟ್ಟಿದ ಅರ್ಥಶಾಸ್ತ್ರ, ಸಮಯ ಮತ್ತು ಸ್ಥಳದ ವಾಸ್ತವಿಕ ಹಿನ್ನೆಲೆಯನ್ನು ಪಡೆದುಕೊಳ್ಳುವುದಿಲ್ಲ. ಈ ತೊಂದರೆಯಿಂದ ಹಿಂಸೆ ಮತ್ತು ನಾಶ ಆರಂಭವಾಗಿ, ಅದರಿಂದ ಪಾರಾಗಲು ಯಾವ ಮಾರ್ಗವೂ ಇರಲಾರದು..... ಇದನ್ನು ಶಾಶ್ವತೀಕರಿಸಲು ಮೌಲ್ಯಗಳ ಗುಣಮಟ್ಟ, ದೃಶ್ಯಗಳ ಮಿತಿಯನ್ನು ಮೀರಬೇಕು. ಇದು ನಿರ್ಲಿಪ್ತವೂ ವೈಯಕ್ತಿಕ ಆಸೆ ಆಕಾಂಕ್ಷೆಗಳಿಂದ ಮುಕ್ತವೂ ಆಗಿರುತ್ತದೆ ಮತ್ತು ವಸ್ತುಗಳ ಶಾಶ್ವತ ನೆಲೆಗಟ್ಟಿನಲ್ಲಿ ಬೇರುಬಿಟ್ಟ ಆದರ್ಶಗಳು ಇದನ್ನು ನಿಯಂತ್ರಿಸುತ್ತವೆ. ಹೀಗಾಗಿ ಇದು ವಸ್ತುನಿಷ್ಠವೂ ಮಾರ್ಗದರ್ಶಕವೂ ಆಗಿರುತ್ತದೆ'.

ಮೇಲಿನ ಪುಸ್ತಕ ಬರೆಯುವಾಗ ಕುಮಾರಪ್ಪನವರು ಆಧ್ಯಾತ್ಮಿಕ ಮತ್ತು ಲೌಕಿಕ ಬದುಕನ್ನು ಬೆಸೆಯುವ ಗುರಿ ಹೊಂದಿದ್ದರು. ದೈನಂದಿನ ಬದುಕಿಗೆ ಈ ಉದಾತ್ತತೆ ಮಾರ್ಗದರ್ಶನ ಮಾಡೀತು ಎಂದವರಿಗೆ ಅನಿಸಿತ್ತು..... ಶಾಶ್ವತ ಅರ್ಥಶಾಸ್ತ್ರವು ಧಾರ್ಮಿಕ ವ್ಯಕ್ತಿಗಳು ಹೇಳುವ 'ಚಿರಂತನ ಬದುಕ'ನ್ನು ಪ್ರತಿದಿನ ಸಾಕ್ಷಾತ್ಕರಿಸಿಕೊಳ್ಳುವ ರೀತಿ. ಇಪ್ಪತ್ತನೆಯ ಶತಮಾನದ ಮಧ್ಯಭಾಗದಲ್ಲಿ ಈ ಹೊಸ ಪರಿಕಲ್ಪನೆಯ ಬಗ್ಗೆ ಬಹಳ ಜನರು 'ಇದು ಪ್ರಾಯೋಗಿಕವಲ್ಲ, ಅಸಾಧ್ಯವಾದುದು' ಎಂಬ ದೃಷ್ಟಿಯನ್ನಿಟ್ಟುಕೊಂಡಿದ್ದಾರೆ ಎಂಬುದು ಕುಮಾರಪ್ಪನವರಿಗೆ ಅರ್ಥವಾಗಿತ್ತು. ತಮ್ಮ ಈ ಆಲೋಚನೆ, ಚಿಂತನೆಗಳು ಮುಂದೊಂದು ದಿವಸ ಜನರು ಈ ಬಗ್ಗೆ ಚಿಂತಿಸುವಂತೆ ಮತ್ತು ಅದನ್ನು ಸಾಕಾರಗೊಳಿಸಲು, ಮೂರ್ತಗೊಳಿಸಲು, ಹಾದಿಯನ್ನು ಹುಡುಕುವಂತೆ ಮಾಡೀತು ಎಂಬ ಆಶೆಯೂ ಅವರಲ್ಲಿತ್ತು.

ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣದ ಮುಖ್ಯವಾಹಿನಿ, ಕುಮಾರಪ್ಪನವರನ್ನು, ಅವರ ಚಿಂತನೆಗಳನ್ನು ನಿರ್ಲಕ್ಷಿಸಿತು. ಅವರು ಇತಿಹಾಸದಲ್ಲಿನ ಒಂದು ಅಡಿ ಟಿಪ್ಪಣಿಯಂತಾದರು. ಆದರೆ ಇತರರನ್ನು ಆಲೋಚಿಸಲು ಹಚ್ಚುವ ಅವರ ಆಶೆ, ಅವರು ೧೯೬೧ರಲ್ಲಿ ಮರಣ ಹೊಂದಿದಾಗ ಇನ್ನು ಚಿಕ್ಕವರಾಗಿದ್ದ ಮಕ್ಕಳಿಂದ ಸಾಕಾರಗೊಳ್ಳಬೇಕಾಗಿತ್ತು. ಇವರಲ್ಲಿ ಈ ತೆಳ್ಳನೆಯ ಮನುಷ್ಯನೂ ಇದ್ದ. ಆತ ತನ್ನ ಅರೆ ನರೆತ ಗಡ್ಡದಿಂದ ತನ್ನ ನೈಜ ವಯಸ್ಸಿಗಿಂತಲೂ ಹೆಚ್ಚು ವಯಸ್ಸಾದಂತೆ ಕಾಣುತ್ತಿದ್ದ. ವಿನೂ ಕಾಳೆಗೆ ಮಗನ್ ಸಂಗ್ರಹಾಲಯ ಮತ್ತು ಬಾಪು ಕುಟೀರದ ಪರಿಸರ ಮನೆಯಿದ್ದಂತೆ.

ವಿನೂ ಕಾಳೆ–ಬಿದಿರಿನ ಒಡನಾಟ

ಖಮಾನಾದಲ್ಲಿ ಗೋಧೂಳಿ ಸಮಯಕ್ಕೊಂದು ಚಿರಂತನತೆ ಇದೆ. ಈ ಹಳ್ಳಿಯ ಕಿರಿದಾದ ಓಣಿಯಲ್ಲಿ ಧೂಳೆಬ್ಬಿಸುತ್ತಾ ಹಸುಗಳು ಬರುವದು ರೀತಿ ಸದಾ ಒಂದೇ ತೆರ! ಹಸುವಿನ ಕೊರಳಿಗೆ ಕಟ್ಟಿದ ಗೆಜ್ಜೆಯ ನಾದ, ಎತ್ತಿನ ಗಾಡಿಯ ಶಬ್ದದ ಜೊತೆ ಮಿಳಿತವಾಗುತ್ತಿತ್ತು. ಇದರಿಂದ ಉತ್ತೇಜಿತಗೊಂಡು ಪಕ್ಷಿಗಳು ಚಿಲಿಪಿಲಿಗುಟ್ಟುತ್ತಾ ರಾತ್ರಿಯ ತಮ್ಮ ವಾಸ್ತವ್ಯಕ್ಕಾಗಿ ತಾಣ ಹುಡುಕುತ್ತಿದ್ದುವು.

ಈ ಅಪೂರ್ವ ಕ್ಷಣಗಳು ಪಟ್ಟಣದಲ್ಲಿಯೇ ಬೆಳೆದ ವಿನೂ ಕಾಳೆಯ ಎದೆಯನ್ನು ಬೆಚ್ಚಗಾಗಿಸುತ್ತಿದ್ದವು. ಖಾದಿ ಪಂಚೆ ಮತ್ತು ಕುರ್ತಾದ ವಿನೂ, ಉತ್ತರ ಆಂಧ್ರಾದ ಈ ಹಳ್ಳಿಯ ಜೊತೆ ಒಂದಾಗಬಲ್ಲವನಾಗಿದ್ದ. ಆದರೂ ಈತ ವಿಶಿಷ್ಟ ವ್ಯಕ್ತಿ ಎನಿಸುತ್ತಿದ್ದ. ಅವನು ಹಳ್ಳಿಯ ಯಾವ ಕಡೆಯೇ ಹೋಗಲಿ, ಅವನಿಗೆ ಪರಿಚಯವಿಲ್ಲದವರೂ 'ರಾಮ್ ರಾಮ್ ಗುರೂಜಿ' ಎಂದು ಮಾತನಾಡಿಸುತ್ತಿದ್ದರು. ವಿನೂ ಕೂಡ 'ರಾಮ್ ರಾಮ್' ಎಂದು ಉತ್ತರಿಸುತ್ತಾ ನಗೆಯ ಅಲೆ ಎಬ್ಬಿಸುತ್ತಿದ್ದ.

ನಾಗಪುರದ ನಿವಾಸಿ, ತರಬೇತಿಯಿಂದ ವಾಸ್ತುಶಿಲ್ಪಿಯಾದ ಈ ವಿನೂ ಕಾಳೆ ಹೇಗೆ ಈ ಖಮಾನಾದಲ್ಲಿ ಬಂದು ಕೆಲಸ ಮಾಡುತ್ತಿದ್ದಾನೆ? ಈ ಕತೆ ವಿನೂನ ಯೌವ್ವನದತ್ತ ನಮ್ಮನ್ನು ಕರೆದುಕೊಂಡು ಹೋಗುತ್ತದೆ. ಆಗ, ಆತ ಅವಿರತ ಅನ್ವೇಷಕನಾಗಿ ಭಾರತದಾದ್ಯಂತ ಅಲೆಯುತ್ತಿದ್ದ. ಆ ಸಮಯದಲ್ಲಿ ನಕ್ಸಲೀಯರ ಕ್ರಾಂತಿಕಾರಿ ಉತ್ಸಾಹ ಭಾರತದ ಹಲವು ರಾಜ್ಯಗಳನ್ನು ಸ್ಫೂರ್ತಗೊಳಿಸಿತ್ತು. ೧೯೬೮ರಲ್ಲಿ ವಿನೂ ಮುಂಬೈನ ಜೆ.ಜೆ. ಸ್ಕೂಲ್ ಆಫ್ ಆರ್ಟ್ ಸಂಸ್ಥೆಯಿಂದ ಆರ್ಕಿಟೆಕ್ಟ್ ಎಂದು ಹೊರಬಿದ್ದಾಗ, ಆತನ ಸಹಪಾಠಿಗಳು ಬೂರ್ಜ್ವಾ ರಾಜ್ಯದ ವಿರುದ್ಧದ ಸಶಸ್ತ್ರ ದಂಗೆಗೆ ಸೇರಿದರು. ಇದು ವಿನೂವನ್ನು ಆಕರ್ಷಿಸಲಿಲ್ಲ. ಹಿಂಸೆ, ಸೃಷ್ಟಿಶೀಲ ಅಥವಾ ಕ್ರಿಯಾಶೀಲ ಪರಿವರ್ತನೆಯನ್ನು ತರಲಾರದು ಎಂಬುದು ಅವನಿಗೆ ಚೆನ್ನಾಗಿ ಗೊತ್ತಿತ್ತು.

ಆದರೂ ಆಮೂಲಾಗ್ರ ಪರಿವರ್ತನೆಯ ತುಡಿತ ಇದ್ದದ್ದು ಸ್ವಯಂವೇದ್ಯವಾಗಿತ್ತು. ಸ್ವಾತಂತ್ರ್ಯ ಬಂದು ೨೦ ವರ್ಷಗಳಾದರೂ, ಹೆಚ್ಚೂ ಕಡಿಮೆ ಜನಸಂಖ್ಯೆಯ ಅರ್ಧದಷ್ಟು ಮಂದಿ ಬದುಕಿನ ತೀರಾ ಮೂಲಭೂತ ಅಗತ್ಯಗಳಾದ ಆಹಾರ, ಬಟ್ಟೆ, ಮನೆಗಳಿಂದ ವಂಚಿತರಾಗಿದ್ದಾರೆ. ಆರ್ಕಿಟೆಕ್ಟ್ ಅಥವಾ ವಾಸ್ತುಶಿಲ್ಪಿಯನ್ನಾಗಿಸಿದ ತನ್ನ ವಿದ್ಯಾಭ್ಯಾಸ ಲಕ್ಷಾಂತರ ಜನರ ತಲೆಯ ಮೇಲಿನ ಸೂರಿನ ಅಗತ್ಯಕ್ಕೆ ಗಮನವೇ ಕೊಟ್ಟಿಲ್ಲ ಎಂಬ ಅಂಶ ವಿನೂ ಕಾಳೆಯನ್ನು ಖಿನ್ನನಾಗಿಸಿತು. ತನ್ನ ಸಹಪಾಠಿಗಳನೇಕರು ತಮ್ಮ ಕೌಶಲವನ್ನು ಪಟ್ಟಣ ಪ್ರದೇಶದ ಗುತ್ತಿಗೆದಾರರಿಗೆ ಮಾರಿಕೊಳ್ಳಲು ತವಕಿಸುತ್ತಿದ್ದರು. ಆದರೆ ವಿನೂಗೆ ಜೀವನಪೂರ್ತಿ ಕಾಂಕ್ರೀಟ್ ಬೆಂಕಿಪೊಟ್ಟಣಗಳನ್ನು ಮಾಡುತ್ತಲೇ ಹೋಗುವ ವೃತ್ತಿ 'ಸಾವಿನಂತೆ' ಎನಿಸಿತು.

ಆದುದರಿಂದ ವಿನೂ ದೇಶದ ಉದ್ದಗಲಕ್ಕೂ ಅಲೆದಾಡಲು ನಿರ್ಧರಿಸಿದ. ತಾನು ಏನು ಮಾಡಬೇಕು? ಎಂಬುದರ ಬಗ್ಗೆ ತೀವ್ರ ಗೊಂದಲಗೊಂಡಿದ್ದ. ಈ ಪ್ರಯಾಣಗಳು ಕಿಂಚಿತ್ ದಾರಿ ತೋರಬಹುದು ಎನಿಸಿತು. ತನಗೆ ಪ್ರಾಯೋಗಿಕವಾದ ಅಂದರೆ ಗೋಡೆ ಕಟ್ಟಲು ಇಟ್ಟಿಗೆಯನ್ನು ಜೋಡಿಸುವ ಕ್ರಮ ಇತ್ಯಾದಿ ಯಾವ ಅನುಭವವೂ ಇಲ್ಲ ಎನಿಸಿತು. ಈ ಅನುಭವ ಗಳಿಸಿಕೊಳ್ಳಲು ಆತ ಮಧ್ಯಪ್ರದೇಶದ ಬಿಲಾಸಪುರದಲ್ಲಿ ಗುತ್ತಿಗೆದಾರರೊಬ್ಬರ ಬಳಿ ಕೂಲಿಯಾಗಿ ದುಡಿದ. ಈ ಸುತ್ತಾಟದಲ್ಲಿ ವೈವಿಧ್ಯಮಯವಾದ, ಬಗೆ ಬಗೆಯಲ್ಲಿ ನಿರ್ಮಿಸಿದ ಸಾಂಪ್ರದಾಯಿಕ ಮನೆಗಳನ್ನು ಗಮನಿಸಿದ. ಪ್ರತಿಯೊಂದೂ ಆ ಪ್ರದೇಶದ ಹವಾಮಾನಕ್ಕೆ ಮತ್ತು ನೈಸರ್ಗಿಕ ಸಂಪನ್ಮೂಲಕ್ಕೆ ಸರಿ ಹೊಂದುವಂತಿತ್ತು. ವಿನೂ, ಈ ಬಗ್ಗೆ ತೀವ್ರ ಆಸಕ್ತಿಯಿಂದ ಮತ್ತು ಅಷ್ಟೇ ವಿನೀತನಾಗಿ, ಸಾಮಾನ್ಯ ಜನ ಬಳಸುವ ವಿವಿಧ ಕಟ್ಟಡ ಸಾಮಾಗ್ರಿಗಳಾದ ಕಲ್ಲು ಮಣ್ಣು, ಬಿದಿರು ಮತ್ತು ಹುಲ್ಲು, ಮಣ್ಣು ಮರಗಳ ವಿಚಿತ್ರ ಹೊಂದಾಣಿಕೆಯ ಬಗ್ಗೆ ತಿಳುವಳಿಕೆ ಪಡೆದ.

ಈ ಹಾದಿಯಲ್ಲಿ ೧೯೭೫ರಲ್ಲಿ ತುರ್ತುಸ್ಥಿತಿ ಘೋಷಣೆಯಾಗುವುದಕ್ಕೂ ಮುಂಚೆ-ವಿನೂ ಹಲವಾರು ಪ್ರತಿಭೆಗಳನ್ನು ಭೇಟಿ ಮಾಡಿದ. ಇವರೆಲ್ಲ ಸೇರಿ ಒಂದು ಸಂಘಟನೆ ರಚಿಸಿಕೊಂಡರು. ಈ ಗುಂಪನ್ನು 'ಅಕಾಡೆಮಿ ಆಫ್ ಯಂಗ್ ಸೈಂಟಿಸ್ಟ್ಸ್' (ಕಿರಿಯ ವಿಜ್ಞಾನಿಗಳ ಅಕಾಡೆಮಿ) ಎಂದು ಕರೆದುಕೊಂಡರು. ಮುಂದಿನ ದಶಕದಲ್ಲಿ ಈ ಗುಂಪು ಬೇರೆ ಬೇರೆ ರೀತಿಯಲ್ಲಿ ಗ್ರಾಮೀಣ ಭಾರತದ ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸಿತು. ತಾವು ಕಲಿತ ಕೌಶಲ ಹಾಗೂ ಹಳ್ಳಿಗರ ಸಾಂಪ್ರದಾಯಿಕ, ಪರಂಪರಾಗತ ಕೌಶಲ ಅಥವಾ ತಿಳುವಳಿಕೆಯನ್ನು ಮಿಶ್ರ ಮಾಡಿ ಹಲವಾರು ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸಿದರು. ಇಡೀ ದೇಶಕ್ಕೆ ಅನ್ವಯಿಸುವ ದೇಶ ವ್ಯಾಪಿ ಯೋಜನೆಗಳ ಅನುಷ್ಠಾನಕ್ಕಾಗಿ ಅಧಿಕಾರದ ಜೊತೆ ಹೋರಾಟ ನಡೆಸಬೇಕಾಗಿ ಬಂತು. ಈ ನೀತಿ ನಿರೂಪಕರ ಚಿಂತನೆಯನ್ನು, ಆಲೋಚನಾ ಕ್ರಮವನ್ನು ಅವಿರತ ಯತ್ನದಿಂದ ವಿಶಾಲಗೊಳಿಸಬಹುದು ಮತ್ತು ಅವರ ಚಿಂತನಾ ವಿಧಾನವನ್ನೇ ಬದಲಾಯಿಸಬಹುದು ಎಂಬ ನಂಬಿಕೆಯಿಂದ ಈ ಕಿರಿಯ ವಿಜ್ಞಾನಿಗಳು ಪ್ರಯತ್ನಿಸಿದರು. ಹೆಚ್ಚೂ ಕಡಿಮೆ ಒಂದೂವರೆ ದಶಕ ಈ ಗುಂಪಿನ ಜೊತೆಯೇ ಅನೇಕ ಸಾಹಸ ಮತ್ತು ಪ್ರಯತ್ನಗಳನ್ನೂ ವಿನೂ ಮಾಡಿದ.

ಎಂಬತ್ತರ ದಶಕದ ಪ್ರಾರಂಭದಲ್ಲಿ ಈ ಕುಶಲಕರ್ಮಿಗಳ ಆರ್ಥಿಕ ದುಸ್ಥಿತಿ ವಿನೂವಿನ ಎಲ್ಲ ಕೆಲಸಗಳ ಕೇಂದ್ರ ಕಾಳಜಿಯಾಗಿತ್ತು. ಇಪ್ಪತ್ತನೆಯ ಶತಮಾನ ಕೊನೆಯಾಗುತ್ತಿರುವ ಈ ಹೊತ್ತಿನಲ್ಲಿಯೂ ಇಂಡಿಯಾದ ಒಟ್ಟು ರಾಷ್ಟ್ರೀಯ ಉತ್ಪನ್ನಗಳಲ್ಲಿ ೬೫ ಸಾವಿರ ಕೋಟಿ ರುಪಾಯಿಗಳು ಈ ಕುಶಲಕರ್ಮಿಗಳಿಂದಲೇ ಬಂದುದು. ಈ ವಲಯ ಸುಮಾರು ೧೫ ಸಾವಿರ ಕೋಟಿ ರುಪಾಯಿಗಳನ್ನು ರಫ್ತಿನಲ್ಲಿಸಂಪಾದಿಸಿಕೊಡುತ್ತದೆ. ಭಾರತದಾದ್ಯಂತ ಈ ವಿಶ್ವಕರ್ಮ ಸಮುದಾಯದ-ಅಂದರೆ ಜವಳಿ, ಚರ್ಮ, ಲೋಹ, ಮರ, ಬಿದಿರು, ಕಲ್ಲು ಮಣ್ಣಿನಲ್ಲಿ ಕೆಲಸ ಮಾಡುವ ಕುಶಲಕರ್ಮಿಗಳ-೨.೫ ಕೋಟಿ ಕುಟುಂಬಗಳು ಇವೆ. ಅಂದರೆ ಸುಮಾರು ಇವರ ಒಟ್ಟು ಜನಸಂಖ್ಯೆ ಸುಮಾರು ಹತ್ತು ಕೋಟಿ. (ಅಥವಾ ನೂರು ಮಿಲಿಯನ್ ಎಂದರೆ

ಭಾರತದ ಜನಸಂಖ್ಯೆಯ ಪ್ರತಿಶತ ೧೧ರಷ್ಟು ಮಂದಿ ಈ ಕಸುಬಿನವರು) ಈ ಮಂದಿ ಎರಡು ಹೊತ್ತಿನ ಸರಳ ಊಟ ಮತ್ತು ತಲೆಯ ಮೇಲೊಂದು ಸೂರಿಗಾಗಿ ಹೋರಾಡಬೇಕಾಗಿ ಬಂದಿರುವುದನ್ನು ವಿನೂ ಗಮನಿಸಿದ. ಈ ಕುಶಲ ಕರ್ಮಿಗಳಿಗೆ ಒಂದು ಜೀವನೋಪಾಯ ಹಾಗೂ ಘನತೆಯನ್ನು ಕಲ್ಪಿಸಿಕೊಡುವುದು ವಿನೂನ ಜೀವನದ ಪ್ರಮುಖ ಧ್ಯೇಯವಾಯಿತು. 'ಈ ಜನ ಬಡವರು, ಅನಕ್ಷರಸ್ತರು, ಹಿಂದುಳಿದವರು. ಇವರಿಗೆ ಶ್ರೀಮಂತರ ಮತ್ತು ಬಲಾಢ್ಯರ ನೆರವಿನ ಅಗತ್ಯ ಇದೆ ಎಂಬ ಗ್ರಹಿಕೆಗಳನ್ನು ಮುರಿಯಬೇಕಾದುದು ತಕ್ಷಣ ಆಗಬೇಕಾಗಿರುವ ಕೆಲಸ' ಎಂದು ವಿನೂಗೆ ಅನಿಸಿತು. ಬಹುತೇಕ ಸರಕಾರದ ಮತ್ತು ಸಾಮಾಜಿಕ ಕಾರ್ಯದ ಎಲ್ಲ ಪ್ರಯತ್ನಗಳಲ್ಲಿ ಕುಶಲಕರ್ಮಿಗಳ ಅವಗಣನೆ ಅವರ ಆತ್ಮವಿಶ್ವಾಸ ಹಾಗು ಆತ್ಮಗೌರವಕ್ಕೆ ತೀವ್ರ ಧಕ್ಕೆ ತಂದಿತ್ತು. ಇದರ ಪರಿಣಾಮ ಪರಂಪರಾಗತವಾಗಿ ಬಂದ ಈ ಕಸುಬನ್ನು ತ್ಯಜಿಸುವಂತಾಯಿತು. ಇದು ತೂಗಾಡುತ್ತಿರುವ ಅಪಾಯದ ಮುನ್ಸೂಚನೆ ಎಂದೆನಿಸಿತು. ಇದು ಹೀಗೇ ಮುಂದುವರೆದರೆ ಸಮಾಜದಲ್ಲಿ ತಾಂತ್ರಿಕ ಕೌಶಲದ ಬರ ಬಂದೀತು ಎಂತಲೂ ಅನಿಸಿತು. ಈ ಹಿಂದೆ ಕುಶಲ ಕರ್ಮಿಗಳು ತಮ್ಮ ಕೌಶಲ ಕಳೆದುಕೊಂಡು, ಕೂಲಿಗಳಾದಂತೆ ಈಗಲೂ ಆಗಬಹುದು ಎಂಬ ಭಯವೂ ಆವರಿಸಿತು.

ಈ ಪರಿಜ್ಞಾನ ವಿನೂವನ್ನು ಗಾಂಧಿ ಮತ್ತು ಕುಮಾರಪ್ಪನವರ ಬಾಗಿಲ ಬಳಿ ಬರುವಂತೆ ಮಾಡಿತು. ಗಾಂಧೀಜಿಯವರ ಸಿದ್ಧಾಂತದಲ್ಲಿ ಗ್ರಾಮೋದ್ಯೋಗಕ್ಕೆ ಏಕೆ ಇಷ್ಟು ಮಹತ್ವ ಎಂಬುದು ವಿನೂಗೆ ಈಗ ಸ್ಪಷ್ಟವಾಯಿತು. ಅದು ಎಷ್ಟು ಮುಖ್ಯವಾಗಿತ್ತು ಮತ್ತು ಸೂಕ್ಷ್ಮವಾಗಿತ್ತು ಎಂದರೆ ಈ ಕೆಲಸನಿರತರನ್ನು ಸತ್ಯಾಗ್ರಹಿಗಳಾಗಿಸಿ, ಜೈಲಿಗೆ ಕಳುಹಿಸಲು ಗಾಂಧಿ ಒಪ್ಪಲಿಲ್ಲ. ವಿನೂ ಮತ್ತು ಆತನ ಸಹಕಾರ್ಯಕರ್ತರು ಗಾಂಧಿ ಚಳುವಳಿಯ ಈ ಎಳೆಯನ್ನು ಹಿಡಿದು, ಇಡೀ ಭಾರತದ ಕ್ಷೇಮ ಮತ್ತು ಭದ್ರತೆ ಸಾಧಿಸಲು ಹೆಣಗಿದರು. ಇದರರ್ಥ ಈ ಕೆಲಸದಲ್ಲಿ ವಾಸ್ತವವಾಗಿ ತೊಡಗಿಸಿಕೊಳ್ಳುವುದು ಮತ್ತು ಪರ್ಯಾಯಗಳನ್ನು ಸೃಷ್ಟಿಸಿಕೊಳ್ಳುವುದು.

ಈಗಲೂ ಕುಶಲಕರ್ಮಿಗಳು ತಯಾರಿಸಿದ ವಸ್ತುಗಳಾದ ಬಿದಿರಿನ ಸೌಟು, ಮಣ್ಣಿನ ಮಡಕೆ, ಮಣ್ಣಿನ ಹಣತೆ, ಅಲ್ಲಿನ ಕಸಬರಿಕೆ ಇವೇ ಮುಂತಾದುವುಗಳನ್ನು ಸಾಮಾನ್ಯ ಜನರು ಬಳಸುತ್ತಿರುವ ರಾಷ್ಟ್ರಗಳಲ್ಲಿ ಭಾರತವೂ ಒಂದು ಎಂಬುದು ಈ ಕೆಲಸದಲ್ಲಿ ತೊಡಗಿಸಿಕೊಳ್ಳುವ ಉಮೇದನ್ನು ಹೆಚ್ಚಿಸಿತು. ಅಂತಿಮವಾಗಿ ಬಿದಿರು ವಿನೂವಿನ ಕೆಲಸದ ಕೇಂದ್ರಸ್ಥಾನ ಪಡೆಯಿತು.

ವಿನೂಗೆ ಬಾಲ್ಯದಿಂದಲೂ ಬಿದಿರಿನ ಬಗ್ಗೆ ಆಸಕ್ತಿ ಇತ್ತು. ಆತ ಬೆಳೆದ ವಾರ್ಧಾ ಪರಿಸರದಲ್ಲಿ ಬಿದಿರಿನ ಕೆಲಸ ಮಾಡುವವರು ಹೆಚ್ಚಿದ್ದರು. ವರ್ಷಗಳು ಕಳೆದಂತೆ ಬಿದಿರು ದುಬಾರಿಯಾಗಿ, ಅದರ ಅಭಾವ ಉಂಟಾದಾಗ ಅವರ ಪರದಾಟವನ್ನು ವಿನೂ ಆಗಲೇ ಗಮನಿಸಿದ್ದರು. ಅಗ್ಗವಾದ ಮತ್ತು ಸುಲಭವಾಗಿ ಉತ್ಪಾದಿಸಿಕೊಳ್ಳಬಹುದಾದ ನೈಸರ್ಗಿಕ ಪದಾರ್ಥದ ಅನ್ವೇಷಣೆಯಲ್ಲಿದ್ದ ವಿನೂಗೆ ಬಿದಿರು ಸೂಕ್ತವೆನಿಸಿತು. ಮರ ಕೂಡಾ ಬಿದಿರಿನಷ್ಟು ವೇಗವಾಗಿ ಮತ್ತು ಸುಲಭವಾಗಿ ಬೆಳೆಯುವುದಿಲ್ಲ ಎಂಬ ಅಂಶ ಅವರಿಗೆ ಸ್ಪಷ್ಟವಾಯಿತು. ಈ ಬಿದಿರಿನ ಬಗ್ಗೆ ಅಧ್ಯಯನ ನಡೆಸಲು ಈಶಾನ್ಯ ರಾಜ್ಯಗಳನ್ನು ಸಂಚರಿಸಿದಾಗ ಈ ಸತ್ಯ ಇನ್ನಷ್ಟು ಗಟ್ಟಿಯಾಯಿತು.

ಇಂದಿಗೂ ಸುಮಾರು ೨೦ ಲಕ್ಷ ಕುಟುಂಬಗಳು ಬಿದಿರಿನ ಕೆಲಸ ಮಾಡುತ್ತಿವೆ. ಹೆಚ್ಚೂ ಕಡಿಮೆ ಹತ್ತು ಮಿಲಿಯನ್ ಅಂದರೆ ಒಂದು ಕೋಟಿ ಜನ ಈ ಉದ್ಯೋಗವನ್ನವಲಂಭಿಸಿದ್ದಾರೆ ಎಂದಾಯಿತು. ಇವರ ಉತ್ಪಾದನೆ ಗ್ರಾಮೀಣ ಕೃಷಿ ಕೈಗಾರಿಕೆಗಳ ಕೇಂದ್ರಸ್ಥಾನದಲ್ಲಿ ಇದ್ದರೂ, ಇದನ್ನು ತಯಾರಿಸುವ ಜನರಿಗೆ ಸಮಾಜದಲ್ಲಿ ಯಾವ ಸ್ಥಾನವೂ ಇಲ್ಲ. ಬಿದಿರಿನ ಕೆಲಸ ಮಾಡುವ ಬಹುತೇಕ ಸಮುದಾಯಗಳು ಪರಿಶಿಷ್ಟ ಜಾತಿಯ ಗುಂಪಿಗೆ ಬರುತ್ತವೆ. ಇದೇ ರೀತಿ ಬಿದಿರನ್ನು ಕೂಡಾ ಅಪಮೌಲ್ಯಗೊಳಿಸಲಾಗಿದೆ.

೧೯ನೆಯ ಶತಮಾನದ ಭಾರತದಲ್ಲಿ ತೀರಾ ಸಮೃದ್ಧವಾಗಿದ್ದ ಬಿದಿರು ಬ್ರಿಟಿಷರಿಗೆ ತೊಡಕಾಗಿತ್ತು. ಮರ ಉರುಳಿಸುವ ಅವರ ಕಾರ್ಯಕ್ರಮಕ್ಕೆ ಈ ಬಿದಿರು ಅಡ್ಡವಾಗುತ್ತಿತ್ತು. ಇದು ಅರಣ್ಯದಲ್ಲಿನ ಕಳೆ ಎನಿಸಿತು. ಆದುದರಿಂದ ದಟ್ಟವಾದ ಬಿದಿರಿನ ಬೆಳವಣಿಗೆಯ ಜಾಗಗಳನ್ನು ಅವರು ಪೂರ್ಣವಾಗಿ ಅಳಿಸಿಹಾಕಿದರು. ಕಾಗದದ ಕಾರ್ಖಾನೆಗಳು ಎದ್ದಾಗ, ಇದನ್ನು ಅತಿ ಕಡಿಮೆ ಬೆಲೆಗೆ ಗುತ್ತಿಗೆ ನೀಡಲಾಯಿತು. ಕಾಗದದ ಮಿಲ್ಲುಗಳು ೧ ರೂಪಾಯಿಗೆ ೧ ಟನ್ ಬಿದಿರನ್ನು ಅಂದರೆ ಸುಮಾರು ೨೦೦ ಬಿದಿರಿನ ಗಳಗಳನ್ನು ಪಡೆದುವು. ಇದೇ ವೇಳೆಯಲ್ಲಿ ಸರಕಾರದಲ್ಲಿ ನೋಂದಣಿ ಮಾಡಿಕೊಂಡ ಕುಶಲಕರ್ಮಿಗಳ ಸಂಘ ಒಂದು ಬಿದಿರಿನ ಗಳಕ್ಕೆ ರು. ೨.೭೫ನ್ನು ತೆರಬೇಕಾಗುತ್ತಿತ್ತು. ಇಂದೂ ಪ್ರತಿವರ್ಷ ಕಡಿಯಲಾಗುವ ಬಿದಿರಿನಲ್ಲಿ ಹೆಚ್ಚೂಕಡಿಮೆ ೨/೩ ಭಾಗ ಕಾಗದ ಅಥವಾ ರೆಯಾನ್ ಕಾರ್ಖಾನೆಗೆ ಹೋಗುತ್ತದೆ.

ಬಿದಿರಿನ ಅಲಭ್ಯತೆ ಮತ್ತುಅವುಗಳಿಂದ ತಯಾರಿಸಲಾದ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆ ದೊರೆಯುತ್ತಿದ್ದ ಕಾರಣಗಳಿಂದ ಅನೇಕ ಮಂದಿ ಬಿದಿರು ಕೆಲಸಗಾರರು, ತಮ್ಮ ಕಸುಬು ಬಿಟ್ಟು ಬೇರೆ ಕಸುಬು ಹಿಡಿಯುವಂತಾಯಿತು. ಹೀಗಾಗಿ ವಿನೂ, ಬೇರೆ ಬೇರೆ ಹಂತದಲ್ಲಿ ಈ ನೀತಿಯ ಮಾರ್ಪಾಡಿಗಾಗಿ ಇತರರ ಮನ ಒಲಿಸಬೇಕಾಗಿ ಬಂತು. ಬಿದಿರು, ಕುಶಲಕರ್ಮಿಗಳಿಗೆ ಕಚ್ಚಾ ಪದಾರ್ಥವಾಗಿ ಮತ್ತು ಮನೆ ನಿರ್ಮಾಣದ ಸಂಪನ್ಮೂಲವಾಗಿ ಹೆಚ್ಚಿನ ಲಾಭತರಲು ಸಾಧ್ಯವಿದೆ. ಕಾಗದವನ್ನು ಕಬ್ಬಿನ ಬಗಾಸ್ ಹಾಗೂ ಇತರ ಪದಾರ್ಥಗಳಿಂದ ತಯಾರಿಸಬಹುದಾಗಿದೆ ಎಂದು ವಿನೂ ವಾದಿಸತೊಡಗಿದರು. ಬಿದಿರಿನ ಶಕ್ತಿ, ಅದರ ಭಾರ ಹೊರುವ ಸಾಮರ್ಥ್ಯ ಮತ್ತು ಅದರ ಬಾಗುವಿಕೆಯ ಗುಣ ಮೊದಲಾದವುಗಳಿಂದ ಇದನ್ನು 'ಪುನಃ ಹುಟ್ಟಬಲ್ಲ ಉಕ್ಕು' ಎಂದು ಕರೆಯಬಹುದಾಗಿದೆ. ಮರಕ್ಕಿಂತ ಅಧಿಕ ವೇಗವಾಗಿ ಬಿದಿರು ಬೆಳೆಯುತ್ತದೆ ಅಷ್ಟೇ ಅಲ್ಲ; ಇದು ನಿಸರ್ಗದ ಅತ್ಯುತ್ತಮ ಸೌರಶಕ್ತಿಯ ಪರಿವರ್ತಕ ಕೂಡ. ಬೌದ್ಧಿಕ ಆಸ್ತಿಯ ಹಕ್ಕಿನ ಈ ಕಾಲದಲ್ಲಿ ಚೀನಿಯರು ಸುಮಾರು ೨೦೦೦ ಬಿದಿರಿನ ಉತ್ಪನ್ನಗಳ ಪೇಟೆಂಟ್ ಹಿಡಿದಿದ್ದಾರೆ.

ಭಾರತದ ಹವಾಗುಣವನ್ನು ಗಮನಿಸಿದರೆ, ಈ ಅರಣ್ಯ ಕೃಷಿ ಪದ್ಧತಿ ಹೆಚ್ಚು ಲಾಭದಾಯಕ ಉದ್ಯಮವೂ ಆಗುತ್ತದೆ. ಬಿದಿರಿನ ಅರಣ್ಯಗಳನ್ನು ಪುನರುಜ್ಜೀವನಗೊಳಿಸುವುದರಿಂದ, ಅರಣ್ಯನಾಶದ ಸಮಸ್ಯೆಯನ್ನು ಮತ್ತು ದೊಡ್ಡ ಪ್ರಮಾಣದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಏಕಕಾಲದಲ್ಲಿ ಪರಿಹರಿಸಬಹುದಾಗಿದೆ. ಇದಕ್ಕೆ ಬಂಡವಾಳ, ಸಾಹಸ, ವೈಜ್ಞಾನಿಕತೆ, ವಿನ್ಯಾಸ ಮತ್ತು ತಂತ್ರಜ್ಞಾನದ ಅಗತ್ಯ ಇದೆ.

ಆದರೆ ಕೇವಲ ತಾತ್ವಿಕ ತಿಳುವಳಿಕೆಯಿಂದ ಆಗುವ ಉಪಯೋಗವಾದರೂ ಏನು? 'ಇದರಲ್ಲಿ ನಿಜಕ್ಕೂ ಈ ಶಕ್ತಿ ಇದ್ದರೆ, ನಾನು ಈ ಕಸುಬನ್ನು ಕಲಿಯಬೇಕು' ಎಂದು ವಿನೂ ಭಾವಿಸಿದ. ಹೀಗಾಗಿ ಆತ ಬಿದಿರು ಕೆಲಸಗಾರರ ಜೊತೆ ಬದುಕುತ್ತಾ, ಕೆಲಸ ಕಲಿಯುತ್ತಾ ಒಂಬತ್ತು ತಿಂಗಳ ತರಬೇತಿ ಪಡೆದ. ಅನಂತರ ಈ ಸಾಂಪ್ರದಾಯಿಕ ಬಿದಿರು ಕುಶಲಕರ್ಮಿಗಳ ಜೊತೆಗೂಡಿ, ಉಕ್ಕು, ಮರ ಮತ್ತು ಪ್ಲಾಸ್ಟಿಕ್‌ನ ವಸ್ತುಗಳಿಗೆ ಪರ್ಯಾಯವಾಗಿ ಬಳಕೆಯಲ್ಲಿರುವ ಬಿದಿರಿನ ಪದಾರ್ಥಗಳು ಮತ್ತು ಗೃಹೋಪಯೋಗಿ ಸಾಮಗ್ರಿಗಳನ್ನು ತಯಾರಿಸುವ ಪ್ರಯೋಗವನ್ನು ಮಾಡತೊಡಗಿದ. ಈ ಪ್ರಯೋಗಗಳ ಪರಿಣಾಮವಾಗಿ, ಬಿದಿರಿನ ಸೋಪ್‌ಸ್ಟ್ಯಾಂಡ್, ಬುಕ್‌ಶೆಲ್ಫ್, ಹಾಸಿಗೆ, ಮೇಜು ಮತ್ತು ಬಿದಿರಿನ ಕರೆಗಂಟೆ ಕೂಡಾ ನಿರ್ಮಾಣವಾದವು.

ಗೆಳೆಯರೊಡನೆ ವಿನೂ, ಬಿದಿರಿನಲ್ಲಿ ಕೆಲಸ ಮಾಡುವ ವೃತ್ತಿನಿರತ ಕುಶಲಕರ್ಮಿಗಳು ಹಾಗೂ ಅದಕ್ಕೆ ಸಂಬಂಧಿಸಿದ ಎಲ್ಲ ಜನಗಳನ್ನು ಸೇರಿಸಿ 'ಅರೂಪ್ ನಿರ್ಮಾಣ್' ಎಂಬ ಅನೌಪಚಾರಿಕ ಗುಂಪನ್ನು ವಿನೂ ನಿರ್ಮಿಸಿದ. ನಂತರದಲ್ಲಿ ಈ ಗುಂಪು ಸಿ.ಎಸ್.ವಿ. ಜೊತೆ ಸೇರಿ 'ವೇಣುಪುತ್ರರು' ಎಂಬ ಯೋಜನೆಯೊಂದನ್ನು ರೂಪಿಸಿತು. ಈ ಯೋಜನೆಯಲ್ಲಿ ಕಿರಿಯ ವಯಸ್ಸಿನ ವೃತ್ತಿನಿರತರು, ಬಿದಿರಿನ ಬೇರೆ ಬೇರೆ ಆಯಾಮಗಳಲ್ಲಿ ಕಾರ್ಯನಿರ್ವಹಿಸುವವರು ಇರುತ್ತಾರೆ. ತಾತ್ವಿಕವಾದ ವಿಜ್ಞಾನ–ತಂತ್ರಜ್ಞಾನದ ವಿಷಯಗಳನ್ನು ಮೊದಲುಗೊಂಡು, ವಿನ್ಯಾಸ, ತಯಾರಿಕೆ ಮತ್ತು ಮಾರಾಟ ವ್ಯವಸ್ಥೆಗೂ ಈ ಯೋಜನೆಯಲ್ಲಿ ಸ್ಥಾನವಿದೆ.

ಈ ಪ್ರಯೋಗಗಳು ಹೊಸ ಪದಾರ್ಥಗಳ ಸಂಶೋಧನೆಗಿಂತ ಹೆಚ್ಚಿನದನ್ನು ಕೊಡಲು ಶಕ್ಯವಾದವು. 'ಮಿತವ್ಯಯ, ಮನುಷ್ಯರಿಗೆ ಹೆಚ್ಚಿನ ಸ್ವಾತಂತ್ರ್ಯ ತಂದುಕೊಡುತ್ತದೆ' ಎಂಬುದನ್ನು ಈ ಪ್ರಯೋಗ ವಿನೂಗೆ ಹೇಳಿಕೊಟ್ಟಿತು. ಇದರ ಜೊತೆ 'ಅಲ್ಪ ವೆಚ್ಚ' ಎಂಬುದು 'ಎಲ್ಲದಕ್ಕೂ ಪರಿಹಾರ ಅಲ್ಲ'ಎಂಬುದನ್ನೂ ಇದು ಕಲಿಸಿತು. ಉದಾಹರಣೆಗೆ: ಮೇಲ್ಛಾವಣಿ ಮಣ್ಣಿನ ಹೆಂಚುಗಳ ಬದಲಾಗಿ ತಗಡು ಬಳಸುವುದರಿಂದ ಹಣ್ ಉಳಿತಾಯವಾಗಬಹುದು. ಆದರೆ ಇದಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಮತ್ತು ಪಾರಿಸರಿಕ ಪರಿಕಲ್ಪನೆಗಳೆಲ್ಲವನ್ನೂ ಗಣನೆಗೆ ತೆಗೆದುಕೊಂಡರೆ, ನಿಜಕ್ಕೂ ಮಣ್ಣಿನ ಹೆಂಚುಗಳು, ಅಲ್ಪ ವೆಚ್ಚದವೂ, ಹೆಚ್ಚಿನ ಮೌಲ್ಯದವೂ ಆಗಿಬಿಡುತ್ತವೆ.'

ವೈಯಕ್ತಿಕವಾಗಿ ಮತ್ತು ಒಂದು ಗುಂಪಿನ ಮಧ್ಯದಲ್ಲಿ ಇದನ್ನು ಸ್ಪಷ್ಟಪಡಿಸಲು ಸಾಧ್ಯ. ಈ ಸತ್ಯಕ್ಕೆ ದೊಡ್ಡ ಪ್ರಮಾಣದಲ್ಲಿ ಸಾಮಾಜಿಕ ಮಾನ್ಯತೆ ದೊರಕಿಸಿಕೊಡುವುದು ಹೇಗೆ? ಈ ಸಂಕ್ರಮಣ ಹಂತದಲ್ಲಿ ತಾಂತ್ರಿಕತೆಗಳು ಆರಂಭಿಕ ಅಗತ್ಯಗಳಿಂದ ರೂಪುಗೊಳ್ಳುತ್ತವೆಯೇ ವಿನಃ ಅದರ ಉಪಯೋಗ ಮತ್ತು ಆರ್ಥಿಕ ಸಾಧ್ಯಾಸಾಧ್ಯತೆಗಳ ಮೇಲೆ ಅಲ್ಲ ಎಂದು ವಿನೂ ಅರ್ಥ ಮಾಡಿಕೊಂಡ. ಇವು ಆಕರ್ಷಣೀಯವಾಗಿರಬೇಕು. ಸಮಕಾಲೀನ ಅಭಿರುಚಿಗೆ ಹೊಂದಿಕೊಳ್ಳುವಂತಿರಬೇಕು. ಈ ಅಧ್ಯಯನವನ್ನು ಪಟ್ಟಣ ಪ್ರದೇಶದಲ್ಲಿ ಇದ್ದ ಸಾವಿರಾರು

ಪಿತ್ರೈಷಿಗಳು ಕೈಗೊಂಡರು. ಇದು ಕುಶಲಕರ್ಮಿಗಳಲ್ಲಿ ಅವರ ಕೌಶಲದ ಬಗ್ಗೆ ಹೆಚ್ಚಿನ ಆತ್ಮವಿಶ್ವಾಸ ಹುಟ್ಟಿಸಲು ಕೈಗೊಂಡ ಸವಾಲೆನಿಸುವ ಪ್ರಯತ್ನ. ಇದು ವಿನೂವನ್ನು ಮಿಕ್ಕೆಲ್ಲವುಗಳಿಗಿಂತ ಹೆಚ್ಚಾಗಿ ಕಾರ್ಯಪ್ರವೃತ್ತನನ್ನಾಗಿಸಿತು. ಇದು ನಗರ ಪ್ರದೇಶದ ಮಧ್ಯವರ್ತಿ ಅಥವಾ ದಳ್ಳಾಳಿಗಳ ಅವಲಂಬನೆಯಿಂದ ಬಿದಿರ ಕೆಲಸದ ಕುಶಲಕರ್ಮಿಗಳನ್ನು ಮುಕ್ತವಾಗಿಸುತ್ತದೆ. ಅವರು ಸ್ವಾವಲಂಬಿಗಳಾಗಲು ಸಹಾಯಮಾಡುತ್ತದೆ.

ಈ ಹುಡುಕಾಟ ವಿನೂ ಅದಿಲಾಬಾದ್ ಜಿಲ್ಲೆಯ ಹಲವಾರು ಹಳ್ಳಿಗಳಿಗೆ ಹೋಗುವಂತೆ ಮಾಡಿತು. ಇದು ಆಂಧ್ರ ಮತ್ತು ಮಹಾರಾಷ್ಟ್ರದ ಗಡಿಯ ಅಂಚಿನಲ್ಲಿರುವ ಗ್ರಾಮ. ಖಮಾನಾದಲ್ಲಿ ಕುಶಲಕರ್ಮಿಗಳು ಜೊತೆಗೂಡಿ ಬಿದಿರಿನ ಚೀಲಗಳನ್ನು, ಆಕರ್ಷಕ ಶೈಲಿ ಮತ್ತು ಬಹುಬಾಳಿಕೆಯ ಶಕ್ತಿಹೊಂದಿದ ಪ್ಲಾಸ್ಟಿಕ್ ಮೌಲ್ಡೆಡ್ ಸೂಟ್‌ಕೇಸ್‌ಗಳಿಗೆ ಸಾಟಿಯಾಗಬಲ್ಲ ಹೊಸ ವಿನ್ಯಾಸದ ಸೂಟ್‌ಕೇಸ್‌ಗಳನ್ನು ತಯಾರಿಸತೊಡಗಿದರು. ಪಟ್ಟಣ ಪ್ರದೇಶದಲ್ಲಿ ಈ ಸೂಟ್‌ಕೇಸ್‌ಗಳಿಗೆ ಬೇಗನೆ ಮಾರುಕಟ್ಟೆ ದೊರೆಯಿತು. ಬಹಳ ಜನಪ್ರಿಯವಾದ ಹಿಂದಿ ಚಲನಚಿತ್ರ 'ಬಾಂಬೆ'ಯ ದೃಶ್ಯವೊಂದರಲ್ಲಿ ನಾಯಕಿ ಈ ಸೂಟ್‌ಕೇಸ್ ಹಿಡಿದು ಹೋಗುತ್ತಿರುವುದನ್ನು ಚಿತ್ರಿಸಲಾಗಿತ್ತು.

ಆದರೆ, ಸ್ಥಳೀಯ ಮಾರುಕಟ್ಟೆಯನ್ನು ಇದು ಪುನರುಜ್ಜೀವನಗೊಳಿಸಲಿಲ್ಲ. ವಿನೂಗೆ ಈ ಸೂಟ್‌ಕೇಸ್ ಸಾಹಸ ಸಂಕ್ರಮಣದ ಹಂತ ಎನಿಸಿತು. ಈ ಹಂತದಲ್ಲಿ ಬಿದಿರಿನ ಉತ್ಪನ್ನಗಳಿಗೆ ಹೆಚ್ಚಿನ ಗೌರವ ಮತ್ತು ಅಂಗೀಕಾರ ದೊರಕಿಸಲು ಆದ್ಯತೆ ನೀಡಲಾಯಿತು. ವಿನೂನ ಕನಸಿನ ಮುಖ್ಯವಾದ ಭಾಗವನ್ನು ಈ ಸಾಹಸ ಸಾಧಿಸಿ ತೋರಿಸಿತು. ಈ ಯೋಜನೆ ಆರಂಭವಾದ ಒಂದು ವರುಷದೊಳಗೆ, ಕುಶಲಕರ್ಮಿಗಳು ಸೂಟ್‌ಕೇಸ್‌ಗಳ ಅಂದ ಮತ್ತು ತಾಂತ್ರಿಕ ವಿವರಗಳನ್ನು ಅಭಿವೃದ್ಧಿಪಡಿಸಲು ಅನೇಕ ಅನ್ವೇಷಣೆಗಳನ್ನು ಮಾಡಿದರು. ಆದರೆ ಈ ಯೋಜನೆ, ಬಹುಪಾಲು ಯೋಜನೆಗಳಂತೆ ಅನೇಕ ಪ್ರಶ್ನೆಗಳನ್ನು ಮುಂದಿರಿಸಿತು. ಬಿದಿರಿನ ಅಭಾವವನ್ನು ನೀಗಿಸುವುದು ಹೇಗೆ? ಬಿದಿರಿನ ಪದಾರ್ಥಗಳನ್ನು ಅಂಚಿಗೆ ತಳ್ಳಿರುವ ಪ್ಲಾಸ್ಟಿಕ್ ಮತ್ತು ಆ ಬಗೆಯ ಕೃತಕ ಪದಾರ್ಥಗಳ ಜೊತೆ ಇದು ಸ್ಪರ್ಧಿಸಿ ಗೆಲ್ಲಬಹುದೇ? ದೊಡ್ಡ ಮಟ್ಟದಲ್ಲಿ (ರಾಜ್ಯ ಮತ್ತು ದೇಶದ ಮಟ್ಟದಲ್ಲಿ) ಈ ಸಮಸ್ಯೆಗಳಿಗೆ ಸಮರ್ಪಕ ಉತ್ತರ ದೊರಕಿಸಿಕೊಳ್ಳುವ ಸವಾಲು ಹಾಗೆಯೇ ಉಳಿಯಿತು. ಆದರೆ ಖಮಾನಾದ ಈ ಅನುಭವಗಳಿಂದಾಗಿ ಕೆಲವು ಮೂಲಭೂತ ಅಂಶಗಳು ಸ್ಪಷ್ಟವಾದವು. ಬಾಪು ಕುಟಿಯಲ್ಲಿ ನಡೆಯುವ ಸಭೆ, ಅಧಿವೇಶನ, ಸಮಾವೇಶಗಳಿಗೆ ಬರುವ ಇತರ ಗೆಳೆಯರಂತೆ ವಿನೂಗೆ 'ಸಾಮಾಜಿಕ ಆಸ್ತಿ ಮತ್ತು ಸಾಮಾಜಿಕ ಸಂಪನ್ಮೂಲಗಳು ವಿಕೇಂದ್ರಿಕರಣಕ್ಕೆ ಒಳಗಾಗಲೇಬೇಕು' ಎಂಬುದು ಖಾತರಿಯಾಯಿತು. ಸಿದ್ಧ ಮಾದರಿ ಇಲ್ಲದಿರುವುದು ಕೆಲಸ ಮಾಡಲು ತೊಡಕೇನೂ ಆಗಲಿಲ್ಲ. ಹಳ್ಳಿ-ತನಗೆ ಬೇಕಾದ ರೀತಿಯ ಚರಂಡಿಯ ವಿನ್ಯಾಸವನ್ನು, ಅಲ್ಲಿ ಯಾವ ಬೆಳೆಯಬೇಕು, ಯಾರಿಗೆ ಸಾಲ ಕೊಡಬೇಕು ಮುಂತಾದವನ್ನು-ಅದೇ ನಿರ್ಧರಿಸುವಂತಾಗಬೇಕು.

ವಿನೂನ ಈ ದಿಕ್ಕಿನ ಪಯಣ ಸಿ.ಎಸ್.ವಿ. ಸಂಘಟನೆಯೊಂದಿಗಿನ ಸಹಪಯಣದಂತಿತ್ತು. ಸಂಘಟನೆಯು ಮತ್ತು ಕಿರಿಯ ವಿಜ್ಞಾನಿಗಳ ಅಕಾಡೆಮಿಯ ಸಹೋದ್ಯೋಗಿಗಳ ಜೊತೆಗಿನ ಕೆಲಸದಿಂದ ಯೋಜನಾ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಮಿತಿಯನ್ನು ಕುರಿತು ವಿನೂ ಒಳ್ಳೆಯ ಪಾಠವನ್ನು ಕಲಿತ. ಯೋಜನಾ ಆಯೋಗದ ಹಲವಾರು ಹಂತಗಳಲ್ಲಿ 'ಸಲಹೆಗಾರರ' ಪಾತ್ರವನ್ನು ಈ ಕಿರಿಯ ವಿಜ್ಞಾನಿಗಳು ಒಪ್ಪಿಕೊಂಡಿದ್ದರು. ಆದರೆ ಇದನ್ನು ಕ್ರಿಯೆ ಎನ್ನಬಹುದಾದರೆ 'ಈ ಕ್ರಿಯೆ'ಯಲ್ಲಿ ದಿನಕಳೆದಂತೆ ಕೊರತೆ ಹೆಚ್ಚುಹೆಚ್ಚಾಗಿ ಕಾಣಿಸಿಕೊಂಡಿತು. ದಕ್ಕಿದ ಅಲ್ಪಸ್ವಲ್ಪ ಯಶಸ್ಸು ಕೂಡಾ ತೀರಾ ಮಿತವಾಗಿತ್ತು ಮತ್ತು ಬಹುತೇಕ ಸಮಯದಲ್ಲಿ ಒಮ್ಮೆ ಕಾಣಿಸಿಕೊಂಡು ಮಾಯವಾಗುವಂತಹುದಾಗಿತ್ತು. ೧೯೯೭ರ ಸುಮಾರಿಗೆ ಮಹಾರಾಷ್ಟ್ರ ಸರ್ಕಾರ ಪ್ರತಿಯೊಬ್ಬ ಕುಶಲಕರ್ಮಿಗೆ ವಾರ್ಷಿಕ ೧೫೦೦ ಬಿದಿರು ಬೊಂಬನ್ನು ದೊರಕಿಸಿ ಕೊಡುವ ನೀತಿಯನ್ನು ಅಂಗೀಕರಿಸಿತು. ಈ ರೀತಿಯ ಹೆಜ್ಜೆಗಳು ತೀರಾ ಮಿತವಾಗಿದ್ದವು.

ವಿನೂ ೧೯೬೦ರ ದಶಕದ ಉತ್ತರಾರ್ಧದ ಸಮಯ ಮತ್ತು ಶಕ್ತಿಯನ್ನು ಮುಂಬರುವ ವರುಷಗಳಲ್ಲಿ ಈ ಕೆಲಸವನ್ನು ಮುಂದುವರೆಸುವ ಜನರನ್ನು ಸಿದ್ಧಗೊಳಿಸುವುದಕ್ಕಾಗಿ ವಿನಿಯೋಗಿಸಿದ. ಈ ಪ್ರಯತ್ನದಲ್ಲಿ ವಿನೂಗೆ ಹೆಚ್ಚಿನ ಯಶಸ್ಸು ದೊರಕಿತು. ವಿನೂವಿನ ಸರಳ ಜೀವನ ಹಾಗೂ ನಿಶ್ಚಿತ ಗುರಿಸಾಧನೆಯ ಪ್ರಯೋಗ ಕಿರಿಯ ಸಹಪಯಣಿಗರ, ಸಹ ಅನ್ವೇಷಕರ ಸಂಖ್ಯೆಯನ್ನು ಹೆಚ್ಚಿಸಿತು.

ಇಪ್ಪತ್ತು ವರ್ಷಗಳ ಅವಧಿಯಲ್ಲಿ ಸಿ.ಎಸ್.ವಿ. ಎಲ್ಲ ಕಡೆಯೂ ಪ್ರಯತ್ನಿಸಬಹುದಾದ ಜೈವಿಕ ಅನಿಲ ಸ್ಥಾವರದ ವಿನ್ಯಾಸ ಮಾಡಿದ್ದೂ ಅಲ್ಲದೇ, ಅದನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಮಾಡುವ ದೃಷ್ಟಿಯಿಂದ ತೀವ್ರತರವಾದ ಅಧ್ಯಯನ ಮತ್ತು ಸಂಶೋಧನೆಯನ್ನು ಕೈಗೊಂಡಿತು. ಈ ಕೆಲಸ ಮಾಡಲು ನೂರಾರು ಮಂದಿ ಗಾರೆ ಕೆಲಸದವರಿಗೆ ತರಬೇತಿ ನೀಡಲಾಯ್ತು ಮತ್ತು ಈ ತರಬೇತಿ ಪಡೆದವರು ಸಾವಿರಾರು ಘಟಕಗಳನ್ನು ಕಟ್ಟಿದರು. ಕಳೆದ ೧೦ ವರ್ಷಗಳಲಿ ವಾರ್ಧಾ ಜಿಲ್ಲೆಯಲ್ಲಿ 'ಮಗನ್ ಚೂಲ್ಹಾ' ಎಂದು ಕರೆಯಲಾಗುವ ೧೦ ಸಾವಿರ ಹೊಗೆರಹಿತ ಅಡುಗೆ ಒಲೆಯನ್ನು ಸಿ.ಎಸ್.ವಿ. ನಿರ್ಮಿಸಿತು. ಈ ಅಡುಗೆ ಒಲೆಯನ್ನು ತರಬೇತಿ ಪಡೆದ ೧೯೦೦ ಮಂದಿ ಮಹಿಳೆಯರು ನಿರ್ಮಿಸಿದರು.

ಇದರ ಜೊತೆಗೆ ವಿವಿಧ ಬಗೆಯ ಕಾಂಪೋಸ್ಟ್ ಮಾಡುವ ವಿಧಾನ ಕೂಡಾ ಈ ಸಂಶೋಧನೆಯಲ್ಲಿ ಸೇರಿತ್ತು. ವಿವಿಧ ಬಗೆಯ ಮೂಲಿಕೆಗಳಿಂದ ಅಗ್ಗವಾಗಿ ಮತ್ತು ಸ್ಥಳೀಯವಾಗಿ ತಯಾರಿಸಬಹುದಾದ ಕೀಟನಾಶಕಗಳ ಸಂಶೋಧನೆಯನ್ನು ಮಾಡಲಾಯಿತು. ಆಡುಗಳು ತಿನ್ನದ ಅನೇಕ ಸೊಪ್ಪುಗಳಲ್ಲಿ ಕೀಟನಾಶಕ ಗುಣವಿದೆ ಮತ್ತು ಕುರಿ, ಆಡು ಮತ್ತು ಹಸುವಿನ ಮೂತ್ರದಲ್ಲಿಯೂ ಈ ಗುಣವಿದೆ ಎಂಬುದು ಸಂಶೋಧನೆಗಳಿಂದ ತಿಳಿದುಬಂತು. ದುರ್ಬಲಗೊಳಿಸಿದ ಆಡಿನ ಮೂತ್ರ ಸಿಂಪಡಿಸಿ, ಬೆಳೆಗಳನ್ನು ಆಡುಗಳು ತಿನ್ನದಂತೆ ಎಚ್ಚರ ವಹಿಸಲಾಗುತ್ತಿತ್ತು. ಉತ್ತರದಲ್ಲಿ ಬೇಶ್ರಾಮ್ ಎಂದು ಕರೆಯುವ (Ipomoea Fistulosa)

ಕಾಡುಗಿಡಗಳನ್ನು ಜನಪ್ರಿಯ ಮೂಲಿಕಾ ಕೀಟನಾಶಕದ ಮೂಲ ವಸ್ತುವಾಗಿ ಬಳಸಲಾಗುತ್ತಿತ್ತು. ಕೃತಕವಾಗಿ ತಯಾರಿಸಿದ ಕೀಟನಾಶಕದಷ್ಟೇ ಸಮರ್ಥವಾಗಿ ಹತ್ತಿಯ ಗಿಡಕ್ಕೆ ತಗಲುವ ಕೀಟಗಳನ್ನು ಇದು ನಿಯಂತ್ರಿಸುತ್ತಿತ್ತು.

ಗೃಹನಿರ್ಮಾಣ, ಸಿ.ಎಸ್.ವಿ.ಯ ಮತ್ತೊಂದು ಮುಖ್ಯ ಕಾರ್ಯಕ್ಷೇತ್ರ. ಮಣ್ಣಿನ ತ್ರಿಕೋನಗಳಿಂದ ಮಾಡಿದ ಖಮಾನಾದ ಮೇಲ್ಛಾವಣಿಗಳು, ಸಿ.ಎಸ್.ವಿ. ಅಲ್ಪವೆಚ್ಚದ ಮನೆಗಳ ಗುರುತಾಯಿತು. ವಿನೂ, ನಾಗಪುರದಲ್ಲಿ ಗೆಳೆಯರೊಡನೆ ಆರಂಭಿಸಿದ ಅರೂಪ್ ನಿರ್ಮಾಣ್ ತಂಡದ ಜತೆಗೂಡಿ, ಸೂರ್ಯನ ಶಾಖದಿಂದ ಒಣಗಿಸಬಹುದಾದ ಮಣ್ಣಿನ ಬ್ಲಾಕ್‌ಗಳ ಹಲವಾರು ವಿನ್ಯಾಸಗಳನ್ನು ರೂಪಿಸಿದ. ಬೆಳೆಗಳನ್ನು ಬೆಳೆಸುವ, ಕಾಪಾಡುವ, ಕೊಯಿಲು ಮಾಡುವ ವಿವಿಧ ಹಂತಗಳಲ್ಲಿ ಹಾಗೂ ಕಟ್ಟಡಗಳ ನಿರ್ಮಾಣದಲ್ಲಿ ಬಿದಿರನ್ನು ಬಳಸುವಂತಾಯಿತು. ಬಿದಿರಿನ ಮೂಲೆಗಳನ್ನು ನೈಸರ್ಗಿಕ ದಾರಗಳು, ರೆಸಿನ್, ಮರ ಮತ್ತು ಉಕ್ಕಿನಿಂದ ಗಟ್ಟಿಗೊಳಿಸಲಾಗುತ್ತಿತ್ತು.

೧೯೯೭ರಲ್ಲಿ ಸಿ.ಎಸ್.ವಿ. ಮತ್ತು ಅರೂಪ್ ನಿರ್ಮಾಣ್ ಎರಡೂ ಜೊತೆಗೂಡಿ ೨೦ ಬೇರೆ ಬೇರೆ ರಾಜ್ಯಗಳಿಂದ ೨೫೦ ಕುಶಲಕರ್ಮಿಗಳನ್ನು ಆಹ್ವಾನಿಸಿ, ಸಮಾವೇಶ ಏರ್ಪಡಿಸುವ ಮೂಲಕ ತನ್ನ ಕನಸನ್ನು ನನಸಾಗಿಸಿತು. ಈ ಸಮಾವೇಶವನ್ನು 'ಮಂಥನ್'ಎಂದು ಕರೆಯಲಾಯಿತು. ಇದು ಮುಂದೆ ರೂಪಿಸಲಾದ 'ರಾಷ್ಟ್ರೀಯ ಕಾರಿಗಾರ್ ಪಂಚಾಯತ್'ನ ಪೂರ್ವರೂಪವಾಗಿತ್ತು. ಈ ಪಂಚಾಯತ್, ತಮ್ಮ ಉತ್ತಮ ಭವಿಷ್ಯಕ್ಕಾಗಿ ಕುಶಲಕರ್ಮಿಗಳೇ ರೂಪಿಸಿಕೊಂಡ ಸಮನ್ವಯ ಸಂಘಟನೆ. ಈ ವೇದಿಕೆ ಕುಶಲಕರ್ಮಿಗಳಿಗೆ ತಮ್ಮ ಕೌಶಲದ ಬಗ್ಗೆ ಮತ್ತು ಸಮಕಾಲೀನ ಸಂದರ್ಭದಲ್ಲಿ ಅವರ ಶಕ್ತಿಯ ಬಗ್ಗೆ ವಿಶ್ವಾಸವನ್ನು ತಂದುಕೊಡುವುದಾಗಿತ್ತು. ಅಷ್ಟೆ ಅಲ್ಲ; ಅವರಲ್ಲಿ ಆತ್ಮಗೌರವದ ಪ್ರಾದುರ್ಭಾವವು ಅವರ ಬದುಕು ಮತ್ತು ಕೆಲಸದಲ್ಲಿ ಹೆಚ್ಚಿನ ಶಕ್ತಿಯನ್ನು ತುಂಬಿತು.

ಆದರೂ, ಈ ರೀತಿಯ ಯಶಸ್ಸು ಮತ್ತು ಸುಸ್ಥಿರಗೊಂಡ ಅನೇಕ ಉಪಕ್ರಮಗಳು ಭಾರತದ ವ್ಯಾಪ್ತಿಗೆ ಹೋಲಿಸಿಕೊಂಡರೆ, ಕೇವಲ ಬಿಂದು ಮಾತ್ರದಂತೆ ಕಂಡಿತು. ಸಿ.ಎಸ್.ವಿ. ತಾನು ಏನಾಗಬೇಕೆಂದು ಕನವರಿಸಿತ್ತೋ, ಆ ಭವ್ಯವಾದ ಬೃಹತ್ ಕನಸಿನ ಒಂದು 'ಮಿಂಚು' ಮಾತ್ರವಾಗಿತ್ತು. ಈ ಸಂಸ್ಥೆ, ವಿಜ್ಞಾನಿಗಳು, ನೀತಿ ನಿರೂಪಕರು ಮತ್ತು ಗ್ರಾಮೀಣ ಜನತೆಯ ನಡುವೆ ಕೊಂಡಿ ನಿರ್ಮಿಸಲು ಇರುವ ಆಂದೋಲನ ಎಂಬುದನ್ನು ಶ್ರುತಪಡಿಸಲು ಇರುವ ಆಸೆ ಈ 'ಮಿಂಚು' ಮಾತ್ರ.

ಕಿರಿಯ ವಿಜ್ಞಾನಿಗಳ ಅಕಾಡೆಮಿಯ ಪ್ರಮುಖ ಸದಸ್ಯೆಯಾದ ವಿಭಾ ಗುಪ್ತಾ, ಸಿ.ಎಸ್.ವಿ.ಯ ಆರಂಭದ ದಿನಗಳಿಂದಲೂ ಇದ್ದವರು. ಎರಡು ದಶಕಗಳ ನಂತರ, ಅಗಣಿತ ಪ್ರಾಜೆಕ್ಟ್‌ಗಳ ಬಳಿಕ, ಗ್ರಾಮೀಣ ಮಹಿಳೆಯರಿಗಾಗಿ ತಂತ್ರಜ್ಞಾನದ ಬಗ್ಗೆ ಸಚಿತ್ರ ಪುಸ್ತಕವನ್ನು ರಚಿಸಿದರು. ಆಕೆಯ ವ್ಯಕ್ತಿತ್ವದ ಒಂದು ಭಾಗ ಸಿ.ಎಸ್.ವಿ.ಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಕೆಲಸದ ಸೂಕ್ಷ್ಮ ವಿವರಗಳನ್ನು ಗಮನಿಸುತ್ತಲೇ, ಕೇವಲ ಕೆಲವು ತಾಲ್ಲೂಕುಗಳ ಹಳ್ಳಿಗಳಲ್ಲ,

ಬದಲಿಗೆ ಗ್ರಾಮೀಣ ಭಾರತದ ಮುಖವನ್ನೇ ಬದಲಿಸಿಬಿಡುವ ವ್ಯಾಪಕವಾದ ಆಂದೋಲನಕ್ಕಾಗಿ ತುಡಿಯುತ್ತದೆ.

ಕಳೆದ ೨೦ ವರ್ಷಗಳ ಕೆಲಸವನ್ನು ಅವಲೋಕಿಸುತ್ತಾ ವಿಭಾ ನುಡಿಯುತ್ತಾರೆ:

'ಏಕಕಾಲದಲ್ಲಿ ಶ್ರೀಮಂತರ ಮತ್ತು ಬಡವರ ಜತೆ-ಧನಾತ್ಮಕ ಮತ್ತು ಋಣಾತ್ಮಕ ಚೈತನ್ಯಗಳ ಜತೆ-ಕೆಲಸ ಮಾಡುವ ಸಾಧ್ಯತೆಯೇ, ಗಾಂಧೀಜಿಯ ತತ್ವಗಳ ಮಹತ್ವ' ಬಡವರು ನಮ್ಮ ಕೆಲಸದ ಕೇಂದ್ರ. ಅದು ನಮ್ಮದೆ ಸ್ಥಾಪಿತ ಹಿತಾಸಕ್ತಿಗಳ ಜತೆ ಲಾಬಿ ಮಾಡುತ್ತಾ ಅವರ ಜತೆ ಸಂಪರ್ಕದಿಂದಿರುವ ಮೂಲಕ ತೇಪೆ ಹಚ್ಚುವ ಕೆಲಸವಲ್ಲ. ಮನುಷ್ಯ ಮೂಲಭೂತವಾಗಿ ಒಳ್ಳೆಯವನು ಎಂಬ ನಂಬಿಕೆಯೇ ಇದಕ್ಕೆ ಆಧಾರವಾಗಿದೆ. ಇಲ್ಲಿನ ಸಮುದಾಯದ ನಡುವಣ ಸಂಪರ್ಕವೂ ಅಪೂರ್ವವಾದುದು. ಪ್ರಾಯಶಃ ಭವಿಷ್ಯದಲ್ಲಿ ಇದು ಉತ್ತಮ ಚಿಹ್ನೆಯಾಗಬಹುದು'.

ಇದು ಬೃಹತ್ ಒಂದು ಚಳುವಳಿಯ ಭಾಗ ಎಂದು ಬಗೆದೇ ಸಿ.ಎಸ್.ವಿ. ಹೊರದೇಶದ ಹಣವನ್ನು ಸಾರಸಗಟಾಗಿ ನಿರಾಕರಿಸಿತು. ಇದು ಸರಕಾರಿ ಇಲಾಖೆ ಮತ್ತು ವಿಶ್ವಸಂಸ್ಥೆಯ ಕೆಲವು ಸಂಘಟನೆಗಳಿಂದ ಬಂದ ಹಣವನ್ನು ಮಾತ್ರ ತೆಗೆದುಕೊಳ್ಳುತ್ತಿತ್ತು. ಈ ನಿಲುವು ಆಂದೋಲನಗಳಿಗೆ ಸಮೀಪವಾಗಿದ್ದು, ಯೋಜನೆಯನ್ನು (ಪ್ರಾಜೆಕ್ಟ್) ದೃಷ್ಟಿಯಲ್ಲಿಟ್ಟುಕೊಂಡು ಸಮಾಜಕಾರ್ಯಕ್ಕೆ ತೊಡಗುವ ಬಹುತೇಕ ಎನ್.ಜಿ.ಓ.ಗಳಿಗಿಂತ ಭಿನ್ನಸ್ವರೂಪದ್ದು.

ಈ ಕಾರಣದಿಂದಲೇ ಮೇಧಾ ಮತ್ತು ಆ ರೀತಿಯಲ್ಲಿ ಬೇರೆ ಬೇರೆ ಸಮರ ಕಣದಲ್ಲಿ ಕಾರ್ಯನಿರ್ವಹಿಸುವವರು ಸಿ.ಎಸ್.ವಿಯಲ್ಲಿ ವಿಶೇಷ ಅತಿಥಿಗಳಾಗಿ ಕಂಡುಬರುತ್ತಾರೆ. ಇತರರ ಹೋರಾಟ ಮತ್ತು ಸಿ.ಎಸ್.ವಿ. ನಡುವೆ ಸಂಪರ್ಕ ಕಲ್ಪಿಸುವ ಸಾಧ್ಯತೆ ಹಾಗು ಹಾದಿಯನ್ನು ಚಿಂತಿಸುತ್ತಾರೆ. ಈ ಹೋರಾಟಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತರ ಸಮಾವೇಶದಲ್ಲಿ, ಮುಂದೊಂದು ದಿನ ಹೇಗೋ ವಿಭಿನ್ನ ಹಂತಗಳಲ್ಲಿ ನಡೆಯುತ್ತಿರುವ ವಿಭಿನ್ನ ಪ್ರಯತ್ನಗಳು ಒಂದಕ್ಕೊಂದು ಸೇರಿ ರಾಜಕೀಯವಾಗಿ ಬಹಳ ಗಟ್ಟಿಯಾದ ಪ್ರಕ್ರಿಯೆಗೆ ಎಡೆಮಾಡಿಕೊಡುತ್ತವೆ ಎಂಬ ವಿಶ್ವಾಸ ತಳದಲ್ಲೆಲ್ಲೋ ಹರಿಯುತ್ತಿರುತ್ತದೆ.

ಆದರೆ ಹೇಗೆ?

ಸೇವಾಗ್ರಾಮದ ಆಶ್ರಮದಲ್ಲಿ ಈ ಪ್ರಶ್ನೆ ಎಲ್ಲರನ್ನೂ ಒಟ್ಟಿಗೆ ಸೇರಿಸಿತ್ತು. ಈ ಸಮಾವೇಶವನ್ನು ಸಂಘಟಿಸಿದ್ದು 'ಜನಸಹಯೋಗ ಟ್ರಸ್ಟ್'. ಇದು ನರ್ಮದಾ ಬಚಾವೋ ಆಂದೋಲನದ ಮರಿ. ೧೯೯೨ರಲ್ಲಿ ನರ್ಮದಾ ಬಚಾವೋ ಆಂದೋಲನಕ್ಕೆ ರೈಟ್ ಲೈವ್ಲಿಹುಡ್ ಪ್ರಶಸ್ತಿಯನ್ನು ನೀಡಿದ್ದರು. ಆ ಹಣ ಪಡೆದುಕೊಂಡ ಆಂದೋಲನ ಅದರ ೧೮ ಲಕ್ಷ ರೂಪಾಯಿಗಳನ್ನು ತನಗಾಗಿ ಬಳಸಿಕೊಳ್ಳದೇ ಅಭಿವೃದ್ಧಿಯ ಪರ್ಯಾಯ ಮಾರ್ಗಗಳಲ್ಲಿ ದುಡಿಯುತ್ತಿರುವವರೆಗೆ ನೆರವು ನೀಡಲು ವಿನಿಯೋಗಿಸಿತು. ಈ ಹಣದ ಸದುಪಯೋಗ ಮತ್ತು ಪರ್ಯಾಯ, ಸೃಜನಶೀಲ ಅಭಿವೃದ್ಧಿಯ ಮಾದರಿಯ ರೂಪರೇಷೆ

ಹಾಗೂ ಇದರ ವ್ಯಾಪ್ತಿಯನ್ನು ನಿರ್ಧರಿಸಲು ವಾಗ್ವಾದ, ಸಂವಾದ ಚರ್ಚೆ ರೂಪಿಸಲು 'ಜನಸಹಯೋಗ ಟ್ರಸ್ಟ್' ಅಸ್ತಿತ್ವಕ್ಕೆ ಬಂತು.

ಸಭೆ ಬಾಪೂ ಕುಟೀರಕ್ಕೆ ಸುಮಾರು ೨೦೦ ಗಜ ದೂರದಲ್ಲಿ ಇದ್ದ ಕಲಾಭವನದಲ್ಲಿ ನಡೆಯಿತು. ಇದರಲ್ಲಿ ಭಾಗವಹಿಸಿದ್ದ ಅನೇಕರಲ್ಲಿ ಸಂಜಯ್ ಸಾಂಗ್ವಾಯ್ ಒಬ್ಬರು. ಇವರು ನರ್ಮದಾ ಬಚಾವೋ ಆಂದೋಲನದ ಮುಂಚೂಣಿಯ ಯೋಧರಾಗಿದ್ದರು. ಆದುದರಿಂದ ೧೯೯೭ರ ಡಿಸೆಂಬರ್ ಸಭೆಯ ವಿಷಯವನ್ನು ಇಲ್ಲಿಯೇ ನಿಲ್ಲಿಸಿ, ನಾಲ್ಕು ವರ್ಷಗಳ ಹಿಂದಕ್ಕೆ ಪಯಣಿಸೋಣ.

ನರ್ಮದೆಯ ತೀರದಲ್ಲಿ

ತನ್ನ ಆಂದೋಲನದ ಯಶಸ್ಸಿನ ತುತ್ತ ತುದಿಯಲ್ಲಿಯೂ, ಈ ಹೋರಾಟವು ರಾಷ್ಟ್ರೀಯ ಸುದ್ದಿಯಾದಾಗಲೂ, ಬರೋಡಾದಲ್ಲಿರುವ ನರ್ಮದಾ ಬಚಾವೋ ಆಂದೋಲನದ ಕೇಂದ್ರ ಕಚೇರಿಗೆ ಹತ್ತುವುದು ಸ್ವಲ್ಪ ತ್ರಾಸದಾಯಕ ಕೆಲಸವೇ! ರಸ್ತೆಯ ಮಟ್ಟದಿಂದ ಎಂಬತ್ತೈದು ಡಿಗ್ರಿ ಬಾಗಿದ ಮರದ ಏಣಿ ಎರಡನೆಯ ಅಂತಸ್ತಿನಲ್ಲಿರುವ ಸಣ್ಣ ಕೊಠಡಿಗೆ ನಮ್ಮನ್ನು ಕೊಂಡೊಯ್ಯುತ್ತದೆ. ಇದನ್ನು ಹತ್ತುವವನಿಗೆ ಎರಡು ಆಯ್ಕೆಗಳಿವೆ. ಒಂದು, ಈ ಮರದ ಏಣಿಯ ಪಕ್ಕದಲ್ಲಿ ಜೋತು ಬಿದ್ದಿದ್ದ ಹಗ್ಗಕ್ಕೆ ಜೋತು ಬೀಳುವುದು ಅಥವಾ ಇದರ ನೆರವಿನಿಂದ ಏಣಿಯ ಮೆಟ್ಟಿಲನ್ನು ಹತ್ತುವುದು.

ಏದುಸಿರು ಬಿಡುತ್ತಾ ಮೇಲೆ ತಲುಪಿದ ಸಂದರ್ಶಕರನ್ನು ಸಾಮಾನ್ಯವಾಗಿ ನಗುಮುಖದ ಸಂಜಯ್ ಸಾಂಗ್ವಾಯ್ ಅಥವಾ ಶ್ರೀಪಾದ್ ಧರ್ಮಾಧಿಕಾರಿ ಸ್ವಾಗತಿಸುವರು. ಇವರು ಇಳಿಜಾರು ಮೇಜಿನ ಹಿಂದೆ ಕುಳಿತಿರುತ್ತಾರೆ. ಅವರ ಹಿಂದೆ ಪ್ರಾರ್ಥನೆ ಮಾಡುತ್ತಿದ್ದಾರೋ ಎಂದು ಭಾಸವಾಗುವ ಕಣ್ಣುಮುಚ್ಚಿದ ಗಾಂಧೀಜಿಯ ಭಾವಚಿತ್ರವಿರುತ್ತದೆ. ಮಸುಕಾಗಿರುವ ಈ ಕಪ್ಪುಬಿಳುಪು ಫೋಟೋ ಪಕ್ಕದಲ್ಲಿ ಈ ಆಂದೋಲನದ ಜಾಥಾದ ಒಂದು ಸಂದರ್ಭದಲ್ಲಿ ಪೊಲೀಸ್ ಫೈರಿಂಗ್‌ಗೆ ಬಲಿಯಾದ ೧೫ ವರುಷ ಹುಡುಗನ ಚಿತ್ರವಿರುವ ಭಿತ್ತಿಪತ್ರವೂ ಇದೆ.

ಕಿರಿದಾದ ಒಂದು ಕೋಣೆಯ ಆಫೀಸಿನ ಗೋಡೆಗಳು ಪ್ರಪಂಚದಾದ್ಯಂತ ನಡೆಯುತ್ತಿರುವ ಈ ಬಗೆಯ ಹೋರಾಟಗಳ ಚಿತ್ರಗಳು, ಸಂದೇಶಗಳು, ಸ್ಟಿಕರ್‌ಗಳಿಂದ ತುಂಬಿ ಹೋಗಿದೆ. ಪ್ರಪಂಚದ ನದಿಗಳನ್ನು ಈ ಅಣೆಕಟ್ಟುಗಳು ಮತ್ತು ಮಾಲಿನ್ಯದಿಂದ ರಕ್ಷಿಸಿ ಎಂದು International River Networkನ ಮನವಿ ಇದೆ. ಫ್ರೆಂಡ್ಸ್ ಆಫ್ ಅರ್ತ್ ಮತ್ತು ಬರ್ಗಿ ಅಣೆಕಟ್ಟಿನಿಂದ ನಿರಾಶ್ರಿತರಾದವರ ಸಂಘಟಣೆಗಳು ಮಳೆ ಕಾಡುಗಳನ್ನು ರಕ್ಷಿಸಿ ಎಂದು ಕೇಳುತ್ತಿವೆ. ಈ ರೀತಿಯ ಭಿತ್ತಿಪತ್ರಗಳ ನಡುನಡುವೆ ಇವುಗಳನ್ನು ಜೋಡಿಸುವ ರೀತಿಯಲ್ಲಿ ಗಾಂಧೀಜಿಯ ಪರಿಚಿತ ರೇಖಾಚಿತ್ರ ಹಾಗೂ ಆಂದೋಲನದ ಘೋಷವಾಕ್ಯ 'ಕೋಯಿನಹಿ ಹಟೇಗಾ, ಬಾಂದ್ ನಹಿ ಬನೇಗಾ' (ನಾವು ಇಲ್ಲಿಂದ ಕದಲುವುದಿಲ್ಲ. ಅಣೆಕಟ್ಟು ಕಟ್ಟಲಾಗದು) ಇರುವ ಪುಟ್ಟಪುಟ್ಟ ಸ್ಟಿಕರ್‌ಗಳು ಇವೆ.

೧೯೮೯ರಿಂದ, ಈ ಘೋಷಣೆ ನರ್ಮದಾ ನದಿಯ ಉದ್ದಕ್ಕೂ ವಿವಿಧ ಸ್ಥಳಗಳಲ್ಲಿ ಪ್ರತಿಧ್ವನಿಸಿದೆ; ಮುಂಬೈ ದಿಲ್ಲಿಯ ಬೀದಿಬೀದಿಗಳಲ್ಲಿಯೂ ಮಾರ್ದನಿಗೊಂಡಿದೆ. ನರ್ಮದಾ ನದಿಗೆ ಎದುರಾಗಿ ನಿರ್ಮಿಸಲಿರುವ ಬೃಹತ್ ಅಣೆಕಟ್ಟು ಸರ್ದಾರ್ ಸರೋವರ್ ಪ್ರಾಜೆಕ್ಟ್‌ನಿಂದ ಮನೆ ಮತ್ತು ಭೂಮಿ ಕಳೆದುಕೊಳ್ಳುವ ಸಾವಿರಾರು ಕುಟುಂಬಗಳ ಘೋಷ ವಾಕ್ಯ ಇದು. ಇದರ ಜತೆಗೆ 'ವಿನಾಶ್ ನಹಿ ವಿಕಾಸ್ ಚಾಹಿಯೇ' (ನಾಶವಲ್ಲ, ಬೇಕಾಗಿರುವುದು ಅಭಿವೃದ್ಧಿ) ಎಂಬುದು ಈ ಜನಗಳ ಹಕ್ಕೊತ್ತಾಯವಾಗಿದೆ.

ನರ್ಮದಾ ಚಳುವಳಿಯಲ್ಲಿ ನಿರತರಾದ ಈ ಜನಕ್ಕೆ 'ಶಾಶ್ವತ ಅರ್ಥಶಾಸ್ತ್ರ' ಎಂಬ ತಾಂತ್ರಿಕ ಶಬ್ದ ಪರಿಚಿತವಿಲ್ಲದಿರಬಹುದು. ಆದರೆ ಸರ್ದಾರ್ ಸರೋವರ್ ಪ್ರಾಜೆಕ್ಟ್ (ಎಸ್.ಎಸ್.ಪಿ.)ಗೆ ವಿರುದ್ಧವಾಗಿ ಸಿಡಿದ ಈ ಗ್ರಾಮೀಣ ಜನತೆ, ಕೇವಲ ತಮ್ಮ ದೇಸಿ ಜೀವನೋಪಾಯ ಮತ್ತು ನೆಲೆಗೆ ಮಾತ್ರವೇ ಅಂಟಿಕೊಂಡವರಾಗಿರಲಿಲ್ಲ. ಈ ಅಣೆಕಟ್ಟಿನ ಸುಸ್ಥಿರತೆ, ಇಂತಹ ಯೋಜನೆಗಳಿಗೆ ತೊಡಗಿಸುವ ಹಣ ಮತ್ತು ಅದರಿಂದಾಗುವ ಲಾಭದ ಅನುಪಾತವನ್ನೇ ಪ್ರಶ್ನಿಸುತ್ತಿದ್ದರು. ಈ ಆಂದೋಲನದಲ್ಲಿ ಪೂರ್ಣಾವಧಿ ಕಾರ್ಯಕರ್ತರಾದ ಬಹುತೇಕ ಮಧ್ಯಮ ವರ್ಗದ ಯುವಕರು ಸುಸ್ಥಿರ ಬದುಕಿಗೆ ಅನುವು ಮಾಡಿಕೊಡುವ ಉತ್ಪಾದನೆ ಮತ್ತು ಸಂಪನ್ಮೂಲಗಳ ಬಳಕೆ ಬಗ್ಗೆ ಚಿಂತಿಸುವವರಾಗಿದ್ದರು.

ಹೀಗಾಗಿ ಈ ಚಳುವಳಿ ಕೇವಲ ಬೃಹತ್ ಅಣೆಕಟ್ಟಿನ ವಿರುದ್ಧ ನಡೆಯುವ ಚಳುವಳಿಯಾಗಿ ಉಳಿಯಲಿಲ್ಲ. ಆದರೆ ಅವುಗಳು ಅತ್ಯಗತ್ಯ ಎಂದು ಭಾವಿಸುವ ಅಭಿವೃದ್ಧಿಯ ಮಾದರಿಯ ವಿರುದ್ಧ ನಡೆಯುತ್ತಿರುವ ಅಂತರರಾಷ್ಟ್ರೀಯ ಮಟ್ಟದ ಚಳುವಳಿಯಾಗಿ ಉಳಿಯಿತು. 'ನನ್ನ ಮನೆ ಮತ್ತು ಈ ಫಲವತ್ತಾದ ಭೂಮಿಯು ನಾಶವಾಗದೆ ದೇಶದ ಪ್ರಗತಿ ಸಾಧ್ಯವಿಲ್ಲವೇ?' ಎಂದು ಬಹಳಷ್ಟು ಮಂದಿ ಗ್ರಾಮೀಣ ಜನ ಕೇಳಿದರು. ಈ ಪ್ರಶ್ನೆ ಆಧುನಿಕ ಬೆಳವಣಿಗೆಯ ಲಾಭ ಪಡೆದವರನ್ನು ಮತ್ತು ಅದಕ್ಕಾಗಿ ದುಬಾರಿ ಬೆಲೆ ತೆತ್ತವರನ್ನು ಮುಖಾಮುಖಿಯಾಗಿಸಿತು.

ತನ್ನ ಒಳಗಿನಿಂದಲೇ ಅಸ್ಥಿರತೆಯನ್ನು, ಅನ್ಯಾಯವನ್ನು ಇಟ್ಟುಕೊಂಡಿರುವ ಆರ್ಥಿಕ ಸಂಘಟನೆಯ ಹೊರರೂಪ ಈ ಅಣೆಕಟ್ಟು ಎಂಬುದನ್ನು ಈ ಚಳುವಳಿ ನಿರೂಪಿಸಲು ಯತ್ನಿಸಿತು. ಉತ್ಪಾದನಾಕ್ರಮ ಮತ್ತು ಸಂಪನ್ಮೂಲಗಳು ನಿಸರ್ಗಸ್ನೇಹಿಯಗಿರಬೇಕೆಂಬುದನ್ನು ಇದು ಎತ್ತಿ ಹಿಡಿಯಿತು. ಈ ಸಂಘಟನೆ ಶಾಶ್ವತ ಅರ್ಥಶಾಸ್ತ್ರದ ಪರ ಇತ್ತು.

ಯಾರದ್ದೂ ಅಲ್ಲದ ಈ ಜಾಗೆಯ ಭರ್ತಿಗಾಗಿ ಹಲವಾರು ಧ್ವನಿಗಳು ಮೊಳಗಿದವು. ಇವರಲ್ಲಿ ಬಾವಾ ಮಹಾರಿಯೂ ಒಬ್ಬರು. ಈತ ಮಧ್ಯಪ್ರದೇಶದ ನರ್ಮದಾ ನದಿ ತೀರದಲ್ಲಿರುವ ಜಲಸಂಧಿ ಎಂಬ ಆದಿವಾಸಿ ಜನರು ಹೆಚ್ಚಿರುವ ಗ್ರಾಮದ ನಿವಾಸಿ. ತನ್ನ ಇಬ್ಬರು ಪಟ್ಟಣ ಪ್ರದೇಶದ ಕಾರ್ಯಕರ್ತರ ಮೂಲಕ ಆತ ಹೇಳಿದರು: 'ಈ ನದಿಯ ಮತ್ತು ವನಸಿರಿಯ ತೊಡೆಯ ಮೇಲೆ ನಾವು ಬೆಳೆದಿರುವುದು. ಅದರ ಮೊಲೆ ಹಾಲಿನ ಮೇಲೆ ಹೇಗೆ ಬದುಕಬೇಕೆಂಬುದು ನನಗೆ ಗೊತ್ತು'. ಅವರು ತಮ್ಮ ಸಹ ಕಾರ್ಯಕರ್ತರೊಂದಿಗೆ ಮಧ್ಯಪ್ರದೇಶದ ಮುಖ್ಯಮಂತ್ರಿಗಳಿಗೆ ಬರೆದ ಪತ್ರದಲ್ಲಿ ಈ ಸಾಲುಗಳು ಇದ್ದುವು 'ನಾವು

ಬಡವರು ಎಂದು ನೀವು ಭಾವಿಸಿದ್ದೀರಿ. ನಾವು ಬಡವರಲ್ಲ; ನಾವು ಬದುಕುವ ಜಾಗದಲ್ಲಿ ನಾವೇ ನಮ್ಮ ಸ್ವಂತಮನೆಯನ್ನು ನಿರ್ಮಿಸಿಕೊಂಡಿದ್ದೇವೆ. ನಾವು ರೈತರು; ನಮ್ಮ ಬೇಸಾಯದ ಭವಿಷ್ಯ ಇಲ್ಲಿದೆ'.

ಅರೆಪಟ್ಟಣ ಪ್ರದೇಶಕ್ಕೆ ಗುಳೇ ಹೋಗುವುದರಿಂದ ಬಾವಾ ಮತ್ತು ಅವರ ಕುಟುಂಬ ಅಭಿವೃದ್ಧಿ ಹೊಂದುವುದೆಂದು ಅಧಿಕಾರಿಗಳು ಬಾವಾಗೆ ಹೇಳಿದರು. ಸ್ವಾತಂತ್ರ್ಯ ಪಡೆದ ಈ ಐವತ್ತು ವರುಷದಲ್ಲಿ ಬಾವಾರ ಸಂಗಡಿಗರು ಉದ್ದಕ್ಕೂ ಪಟ್ಟಣದತ್ತ ಪಾದ ಬೆಳೆಸಿದ್ದೂ ಇದೆ. ಅಂತಿಮವಾಗಿ ಅವರು ಪಟ್ಟಣದಲ್ಲಿ ಸುಂದರ ಬಂಗಲೆಗಳನ್ನು ಕಟ್ಟುವ ಮತ್ತು ರಸ್ತೆಯ ಬದಿಯ ಬಿಲದಲ್ಲಿ ವಾಸಮಾಡುವ ಕೂಲಿಗಳಾಗಿ ಹೋಗಿದ್ದಾರೆ.

ಜಲ್ಸಿಂಧಿ ಗ್ರಾಮದಲ್ಲಿ ಬಾವಾರ ಪರ್ಣಕುಟಿ, ಬಾಪು ಕುಟೀರದ ದೂರದ ಸಂಬಂಧಿ ಎಂಬಂತೆ ಕಾಣುತ್ತದೆ. ಈ ಗ್ರಾಮದಲ್ಲಿ 'ಬಾಪು ಯಾರು?' ಎಂಬುದು ಯಾರಿಗೂ ಗೊತ್ತಿಲ್ಲ. ಜಲ್ಸಿಂಧಿಯಂತಹ ದೂರದ ಹಳ್ಳಿಗಳನ್ನು 'ಚರಿತ್ರೆ' ಬಿಟ್ಟು ಸಾಗಿದೆ ಎಂಬುದನ್ನು ಪಠ್ಯಪುಸ್ತಕಗಳಿಂದ ನಾವು ಬಲ್ಲೆವು. ಆದರೆ ಬಾವಾರ ಬದುಕಿನಲ್ಲಿ ಇದು ತಿರುವು ಮುರುವಾಯಿತು. ಜಲ್ಸಿಂಧಿಯೇ ಒಂದು ಐತಿಹಾಸಿಕ ಸ್ಥಳವಾಗಿ ಹೋಯಿತು.

ಎನ್.ಬಿ.ಎ. ದೃಷ್ಟಿಯಿಂದಲೂ, ಎರಡೂ ತೀರದ ಜಾಥಾ ಒಂದು ವಿಶಿಷ್ಟ ಚಳುವಳಿಯಾಗಿತ್ತು. ಕಲ್ಲು ಬಂಡೆಯ ನದಿಯ ಈ ತೀರದಲ್ಲಿ ನೂರಾರು ಮಂದಿ ಮತ್ತು ನದಿಯ ಆ ಬದಿಯ ಉಸುಕಿನ ಮಹಾರಾಷ್ಟ್ರಕ್ಕೆ ಸೇರಿದ ತೀರದಲ್ಲಿ ಇದಕ್ಕಿಂತಲೂ ಹೆಚ್ಚಿನ ಜನಸಂದಣಿ ಸೇರಿತ್ತು. ಈ ಜಾಥಾ, ಜಲಸಂಧಿ ಸತ್ಯಾಗ್ರಹದ ಉದ್ಘಾಟನೆಗಾಗಿ ಸೇರಿತ್ತು. ೧೯೯೫ರ ಮಳೆಗಾಲದಲ್ಲಿ ಇದು ಎನ್.ಬಿ.ಎ. ಚಳುವಳಿಯ ಬಹುಪ್ರಮುಖ ಕಾರ್ಯವಾಗಿತ್ತು. ದೋಣಿಗಳ ಕೊರತೆ ಮತ್ತು ಅಪಾಯಕಾರಿಯಾದ ನೀರಿನ ಕಾರಣದಿಂದ ಎಲ್ಲರನ್ನೂ ಒಂದೇ ತೀರಕ್ಕೆ ಕರೆದುಕೊಂಡು ಬರುವುದು ಅಸಾಧ್ಯವಾಗಿತ್ತು.

ಸೂರ್ಯ ಈ ನದಿಯ ನೀರಿನಲ್ಲಿ ಮುಳುಗುತ್ತಿರುವಂತೆ, ಮೇಧಾ ಪಾಟ್ಕರ್ ತನ್ನೆಲ್ಲ ಶಕ್ತಿಯನ್ನೂ ಒಗ್ಗೂಡಿಸಿ, ಎರಡೂ ಬದಿಯ ಸತ್ಯಾಗ್ರಹಿಗಳಿಗೆ ಕೇಳುವಂತೆ ಮಾತನಾಡುತ್ತಿದ್ದರು. ಆದರೆ ಸಂಜೆಯ ತಣ್ಣನೆಯ ಗಾಳಿ ಆಕೆಯ ಧ್ವನಿ ನದಿಯ ಅಲೆಯಲ್ಲಿ ಚೆಲ್ಲಾಪಿಲ್ಲಿಯಾಗುವಂತೆ ತುಂಟಾಟವಾಡುತ್ತಿತ್ತು. ಅವರಿಗೆಲ್ಲ ಗೊತ್ತಿತ್ತು. ೧೯೯೩ರಿಂದ ವಾರ್ಷಿಕ ಆಚರಣೆಯೇ ಆಗಿಬಿಟ್ಟಿರುವ ಈ ಮಳೆಗಾಲದ ಸತ್ಯಾಗ್ರಹವನ್ನು ತೀವ್ರಗೊಳಿಸುವ ನಿರ್ಧಾರವನ್ನು ಆಕೆ ಪುನಃ ಪುನಃ ಹೇಳುತ್ತಿದ್ದರು. ಈ ಚಳುವಳಿಯ ಮೊದಲೆರಡು ವರ್ಷ ಅಣೆಕಟ್ಟಿನ ಮೇಲುಭಾಗದ ಗ್ರಾಮವಾದ ಮಹಾರಾಷ್ಟ್ರದ ಮನಿಬೆಲ್ಲಿಯಲ್ಲಿ ಇತಿಹಾಸ ಸೃಷ್ಟಿಸಲಾಗಿತ್ತು.

ಈ ಎಲ್ಲ ಘಟನೆಗಳಿಂದ ಮೇಧಾ ರಾಷ್ಟ್ರೀಯ ವ್ಯಕ್ತಿಯಾಗಿ ಹೊರಹೊಮ್ಮಿದರು. ಬಸ್, ಟ್ರೈನುಗಳಲ್ಲಿ ಅಥವಾ ಆಕೆ ನಡೆದು ಹೋಗುತ್ತಿರುವಾಗಲೂ ಜನ ಆಕೆಯನ್ನು ಗುರುತಿಸುವ ಹಾಗಾಯಿತು. ಕೆಲವರು ಆಕೆಯನ್ನು ರಸ್ತೆಯಲ್ಲಿಯೇ ತಡೆದು ಪ್ರಶ್ನಿಸುತ್ತಿದ್ದರು. ಆಕೆ ಏಕೆ ಪ್ರಗತಿಗೆ ವಿರೋಧವಾಗಿದ್ದಾರೆ ಎಂದು ಕೆಲವರು ತಿಳಿಯಬಯಸುತ್ತಿದ್ದರು.

'ಈಕೆ ಆದರ್ಶದ ಧ್ವನಿ' ಎಂದೂ, 'ತಾತ್ವಿಕ ಕ್ರಿಯಾಶೀಲಳು' ಎಂದೆಲ್ಲ ಹೊಗಳುತ್ತಲೂ ಇದ್ದರು. 'ಈಕೆಯ ಒಳಗೆ ಗಾಂಧಿಗಿದ್ದ ಶಕ್ತಿಸಾಮರ್ಥ್ಯ ಇದೆ' ಎಂದು ಕೆಲವರಿಗೆ ಅನ್ನಿಸುತ್ತಲೂ ಇತ್ತು. ಇದು ಆಕೆಯನ್ನು ಹೆಚ್ಚು ನಮ್ರಳಾಗುವಂತೆ ಮಾಡಿತು. ಆಕೆಯ ಸಹಜ ನಡವಳಿಕೆ, ತೆರೆದ ಮನ ಮತ್ತು ಎಲ್ಲರೊಡನೆ ಬೆರೆಯುವಿಕೆ ಸಾರ್ವಜನಿಕರ ನಡುವೆ ಇದ್ದೂ ಎಚ್ಚರ ತಪ್ಪದಂತೆ ಮಾಡಿತು. 'ಗಾಂಧಿಯನ್', 'ಸೋಶಲಿಸ್ಟ್' ಮುಂತಾದ ತಾತ್ವಿಕ ಹಣೆಪಟ್ಟಿಗಳೂ, ಹೋಲಿಕೆಗಳೂ ಆಕೆಯನ್ನು ತ್ರಸ್ತಗೊಳಿಸಿದುವು.

ಮೇಧಾ ಬೆಳೆದದ್ದು ನಿಷ್ಠ ಸಮಾಜವಾದಿ ಕುಟುಂಬದಲ್ಲಿ. ಆಕೆಯ ತಂದೆ ವಸಂತ್ ಖನೊಲ್ಕರ್ ಕಾರ್ಮಿಕ ನಾಯಕರಾಗಿದ್ದವರು. ಆಕೆಯ ತಾಯಿ ಇಂದೂ, ಸೋಶಲಿಸ್ಟ್ ಚಳುವಳಿಯ ಒಂದು ಭಾಗವಾಗಿದ್ದ 'ರಾಷ್ಟ್ರೀಯ ಸೇವಾದಳ'ದ ಸಕ್ರಿಯ ಕಾರ್ಯಕರ್ತೆಯಾಗಿದ್ದಳು. ೧೯೪೧ರಲ್ಲಿ ಆರಂಭವಾದ ಈ ಸಂಘಟನೆಯಲ್ಲಿ ಕೌಶಲವನ್ನು ಕಲಿಯಲು ಯುವಕರಿಗೆ ತರಬೇತಿ ನೀಡಲಾಗುತ್ತಿತ್ತು. ಹೀಗಾಗಿ ಇದೊಂದು ಸೋಶಲಿಸ್ಟ್ ಕಾರ್ಯಕರ್ತರನ್ನು ಅಣಿಗೊಳಿಸುವ ಕೇಂದ್ರವಾಗಿತ್ತು. ಸಾಮಾಜಿಕ ಮತ್ತು ರಾಜಕೀಯದ ಉನ್ನತ ಪರಂಪರೆಯನ್ನು ಮೇಧಾ ತನ್ನಲ್ಲಿ ಅಳವಡಿಸಿಕೊಂಡದ್ದು ಮಾತ್ರವಲ್ಲ; ಶಿಕ್ಷಣದ ಜತೆ ಜತೆಗೆ ಮುಂಬೈನ ಕೊಳೆಗೇರಿಗಳಲ್ಲಿ ಸಾಮಾಜಿಕ ಕಾರ್ಯಗಳ ಯೋಜನೆಗಳನ್ನು ಕೈಗೆತ್ತಿಕೊಂಡಳು.

ಆರಂಭದಲ್ಲಿ ಆಕೆ ನರ್ಮದಾ ಕಣಿವೆಗೆ ಹೋದುದು ಕ್ರಿಯಾಶೀಲ ಸಂಶೋಧಕಿಯಾಗಿ. ಎಸ್.ಎಸ್.ಪಿ. (ಸರ್ದಾರ್ ಸರೋವರ್ ಪ್ರಾಜೆಕ್ಟ್)ಯಿಂದ ಹಾನಿಗೊಳಗಾದ ಜನರಿಗೆ ದಕ್ಕಬೇಕಾದ ಪರಿಹಾರ ಕೊಡಿಸಲು ಸಹಾಯ ಮಾಡುವ ಕೆಲಸ ಆರಂಭಿಸಿದಳು. ಆದರೆ ಇದಾದ ಎರಡು ವರ್ಷಗಳ ತರುವಾಯ, ಮೇಧಾ ಮತ್ತು ಆಕೆಯ ಸಹೋದ್ಯೋಗಿಗಳು ತೀರ್ಮಾನಗಳಿಗೆ ಬಂದರು

ಮೊದಲನೆಯದಾಗಿ ಸೂಕ್ತವಾದ ಪುನರ್ವಸತಿ ಸಾಧ್ಯವಿಲ್ಲ. ಎರಡನೆಯದಾಗಿ 'ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಈ ಅಣೆಕಟ್ಟು ಉಪಯೋಗವಿಲ್ಲದ್ದು, ಇದರಲ್ಲಿ ತೊಡಗಿಸಿದ ಹಣ ಮತ್ತು ಅದರಿಂದ ಬರಬಹುದಾದ ಲಾಭಕ್ಕೆ ತಾಳ-ಮೇಳವಿಲ್ಲ' ಎಂಬುದನ್ನು ಕಂಡುಕೊಂಡರು.

ಔಪಚಾರಿಕ ಸಿದ್ಧಾಂತಗಳು ಮತ್ತು ಹಣೆಪಟ್ಟಿಗಳ ಬಗ್ಗೆ ಯುವಜನಾಂಗಗಳಿಗಿರುವ ಪ್ರಾಮಾಣಿಕ ಅಪನಂಬಿಕೆ ಮೇಧಾಪಾಟ್ಕರ್‌ಗೂ ಇತ್ತು. ಇದು ಸ್ವಾತಂತ್ರ್ಯೋತ್ತರದ ಪೀಳಿಗೆಗೆ ಚೆನ್ನಾಗಿ ಗೊತ್ತಿತ್ತು. ಅಮೆರಿಕನ್ ಬಂಡವಾಳಶಾಹಿ ಪದ್ಧತಿ ಮತ್ತು ಸೋವಿಯತ್ ಅಥವಾ ಚೀನಿ ರಖಮಿನ ಕಮ್ಯುನಿಸಂ ನಡುವೆ ಆಯ್ಕೆ ಎಂಬುದಿಲ್ಲ. ಆಯ್ಕೆ ಎಂಬುದೇ ಅಸಂಗತ. ನ್ಯಾಯಯುತ ಮತ್ತು ಸಮಾನತಾ ವ್ಯವಸ್ಥೆಗಾಗಿ ಹೋರಾಟದ ಸಿದ್ಧಾಂತವನ್ನು ತಂತಾವೇ ರೂಪಿಸಿಕೊಳ್ಳಬೇಕೆಂಬ ನಿಲುವು ಮೇಧಾ ಅವರದ್ದು.

'ಸತ್ಯಾಗ್ರಹ' ಎಂಬ ಶಬ್ದವನ್ನು ಉಪಯೋಗ ಮಾಡಲು ಅವರಿಗೆ ಯಾವ ಮುಜುಗರವೂ ಇರಲಿಲ್ಲ. ಅದು ತೀರಾ ಸಹಜವಾಗಿತ್ತು. ಹೀಗಾಗಿ ಈ ಚಳುವಳಿ ತೀರಾ ಮುಖ್ಯವಾದ ಪ್ರಶ್ನೆಗೆ ಮುಖಾಮುಖಿಯಾಯಿತು. ಚಳುವಳಿಗಾರರು ಸತ್ಯ, ಅಹಿಂಸೆ ಮತ್ತು ಆತ್ಮಪರೀಕ್ಷೆಗೆ ಬದ್ಧರಾದ ಕಠಿಣ ಸತ್ಯಾಗ್ರಹಿಗಳೇ? ಎಂಬುದೇ ಈ ಪ್ರಶ್ನೆಯಾಗಿತ್ತು. ಸತ್ಯಾಗ್ರಹಕ್ಕೆ ಈಗ ಅದರದ್ದೇ ಆದ ಸ್ವತಂತ್ರ ರೂಪ ಪ್ರಾಪ್ತವಾಗಿತ್ತು. ಅದರ ಪ್ರತಿಪಾದಕ ಉದ್ದೇಶಿಸಿದ ಅರ್ಥಕ್ಕಿಂತ ಇದು ಭಿನ್ನವಾಗಿತ್ತು. ದೈಹಿಕವಾಗಿ ಅಹಿಂಸಕವಾಗಿರುವ ಎಲ್ಲ ರೀತಿಯ ಪ್ರಯತ್ನ ಅಥವಾ ಉದ್ದೇಶಗಳನ್ನು ಸತ್ಯಾಗ್ರಹ ಎಂದು ಕರೆಯಲಾಗುತ್ತಿತ್ತು.

ಎನ್.ಬಿ.ಎ. ಚಳುವಳಿ ಸತ್ಯಾಗ್ರಹದ ವ್ಯಾಪ್ತಿ ಮತ್ತು ತೀವ್ರತೆಯನ್ನು ವಿಸ್ತರಿಸುವ ಪ್ರಯತ್ನ ಮಾಡಿತು. ಆದರೆ ಕೆಲವು ಗಾಂಧಿವಾದಿಗಳಿಗೆ ಇದು ಸರಿತೋರಲಿಲ್ಲ. ಈ ಪವಿತ್ರ ಶಬ್ದ ಸಡಿಲವಾಗಿ ಬಳಕೆಯಾಗುತ್ತಿರುವ ಬಗ್ಗೆ ಅವರ ಆಕ್ಷೇಪಣೆಗಳು ಇದ್ದವು. ಗುಜರಾತ್‌ನಲ್ಲಿಯ ಬಹುತೇಕ ಸರ್ವೋದಯ ಕಾರ್ಯಕರ್ತರು ಎಸ್.ಎಸ್.ಪಿ. ಪರ ಇದ್ದರು. ಇದು ಗುಜರಾತಿನ ಭಾಗ್ಯರೇಖೆ ಎಂಬುದಾಗಿ ಮೂರು ಪೀಳಿಗೆಗಳಿಂದ ನಂಭಿಸಲಾಗಿತ್ತು. ಗುಜರಾತ್ ಮತ್ತು ಗಾಂಧಿಯೊಡನಿದ್ದ ಸಂಬಂಧ ಕೂಡಾ 'ಹಿಂದ್ ಸ್ವರಾಜ್'ನ್ನು ಒಪ್ಪಿಕೊಳ್ಳಲು ಅವಕಾಶ ನೀಡಲಿಲ್ಲ.

ಈ ರೀತಿಯ ಆಂದೋಲನಗಳು ಭವಿಷ್ಯದಲ್ಲಿ ಅನಿವಾರ್ಯವಾಗುತ್ತವೆ ಎಂಬ ಮುನ್ನೋಟ 'ಹಿಂದ್ ಸ್ವರಾಜ್'ನಲ್ಲಿ ಇತ್ತಾದರೂ ಐತಿಹಾಸಿಕ ಗಾಂಧಿಯ ಬಗ್ಗೆ ತನ್ನ ವಾರಸುದಾರಿಕೆಯನ್ನು ವ್ಯಕ್ತಪಡಿಸಲಿಲ್ಲ. ಆದುದರಿಂದ ಚಳುವಳಿಯ ಉದ್ದಕ್ಕೂ 'ಹಿಂದ್ ಸ್ವರಾಜ್' ಅಥವಾ 'ಶಾಶ್ವತ ಅರ್ಥಶಾಸ್ತ್ರ' ಎದ್ದುಕಾಣುವಂತೆ ಪ್ರಸ್ತಾಪವಾಗಲಿಲ್ಲ.

ಆದರೆ ಆಂದೋಲನದ ಗಡಿಬಿಡಿಯಲ್ಲಿಯೂ ಯುಗಪ್ರವರ್ತಕ ಗಾಂಧೀಜಿಯ ಅಸ್ತಿತ್ವ ಕಾಣಿಸಿಕೊಳ್ಳುತ್ತಿತ್ತು.

ಸಂಜಯ್ ಸಾಂಗ್ವಾಯ್ ಈ ಚಳುವಳಿಯ ಪೂರ್ಣಾವಧಿ ಕಾರ್ಯಕರ್ತರಾಗಿದ್ದುದು ಮಾತ್ರವಲ್ಲ; ಗಾಂಧೀಜಿಯ ನಿಕಟ ಸಂಪರ್ಕ ಇದ್ದವರು. ೧೯೬೭ರಲ್ಲಿ ಜನಸಹಯೋಗ ಟ್ರಸ್ಟ್ ಅಸ್ತಿತ್ವಕ್ಕೆ ಬಂದಾಗ, ಅವರ ಗೆಳೆಯರು ವೈವಿಧ್ಯಮಯ ಆಸಕ್ತಿ ಮತ್ತು ಸಾಮರ್ಥ್ಯ ಉಳ್ಳ ಕಿರಿಯವಯಸ್ಸಿನ ನುರಿತ ಕಾರ್ಯಕರ್ತ ಅಥವಾ ನಿಪುಣ ಎಂದೇ ಇವರನ್ನು ಗುರುತಿಸಿದರು.

ಸ್ವಾತಂತ್ರ್ಯ ಬಂದ ಒಂದು ದಶಕದ ತರುವಾಯ ಹುಟ್ಟಿದ ಸಂಜಯ್, ಮರಾಠವಾಡಾ ಪ್ರದೇಶದಲ್ಲಿ ಬೆಳೆದವರು. ಸಾಂಸ್ಕೃತಿಕವಾಗಿ ಮರಾಠವಾಡಾ ಪ್ರದೇಶ ಮಹಾರಾಷ್ಟ್ರ ಮತ್ತು ಹಿಂದಿನ ನಿಜಾಮ್ ರಾಜ್ಯದ ಮಿಶ್ರಣದಂತಿದೆ. ಇವರ ಮನೆಯ ಹಿರಿಯರು ನಾಲ್ಕು ಭಾಷೆಗಳನ್ನು ಬಲ್ಲವರಾಗಿದ್ದರು. ಮರಾಠಿ, ತೆಲುಗು, ಉರ್ದು-ಹಿಂದೀ ಮತ್ತು ಇಂಗ್ಲಿಷ್. ಅವರ ಶಾಲಾ ದಿವಸಗಳ ಬದುಕಿನಲ್ಲಿ ಗಾಂಧಿ, ಒಂದು ಭಾಗವೇ ಆಗಿಹೋಗಿದ್ದರು. ಆದುದರಿಂದ ಅವರು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಪುಣೆಗೆ ಹೋದಾಗ ಗಾಂಧಿಸಾಹಿತ್ಯ ಹೆಚ್ಚಿನ ಆಕರ್ಷಣೆ ಎನಿಸಲಿಲ್ಲ.

ವಿಪರೀತ ಓದುವ ಅಭ್ಯಾಸ ಇಟ್ಟುಕೊಂಡವರಾಗಿದ್ದುದರಿಂದ ರಸೆಲ್, ದಯಾನಂದಸರಸ್ವತಿ, ಸಾವರ್ಕರ್, ಸ್ವಾಮಿ ವಿವೇಕಾನಂದ, ಮಹಾತ್ಮಾಪುಲೇ, ಬಾಬಾ ಸಾಹೇಬ್‌ಅಂಬೇಡ್ಕರ್ , ರಾಮಮನೋಹರ ಲೋಹಿಯಾರ ಕೃತಿಗಳು, ಉಪನಿಷತ್ತುಗಳು, ಮಹಾರಾಷ್ಟ್ರದ ಭಕ್ತ(ಸಂತ) ಕವಿಗಳು, ಪುರಾಣ ಕತೆಗಳು ಮತ್ತು ಮಹಾಭಾರತ ಅವರ ಓದಿನ ವಿಷಯಗಳಾಗಿದ್ದುವು. ಅಲ್ಲದೆ ಸೋವಿಯತ್ ರಷ್ಯಾ ಮತ್ತು ಚೀನಾದಲ್ಲಿನ ಮಾರ್ಕ್ಸ್‌ವಾದದ ಸ್ಥಿತಿಗತಿಯನ್ನು ಸಮೀಪದಿಂದ ಗಮನಿಸುತ್ತಿದ್ದರು.

ಈ ಎಲ್ಲ ಹಿನ್ನೆಲೆಯಲ್ಲಿ ಗಾಂಧಿ ಹೇಳಿದ್ದು ಮತ್ತು ಜೀವಿಸಿದ್ದು ಭಾರತೀಯ ಪರಂಪರೆಯ ನೆಲೆಯಲ್ಲೇ ಎನಿಸಿತು. ಗಾಂಧೀವಾದ ಅಥವಾ ಪಾರಿಸರಿಕ ಮಾನವತಾವಾದ–ಭಾರತೀಯ ಪರಂಪರೆಯ ಒಂದು ಭಾಗ. ಆ ಪರಂಪರೆಯಲ್ಲಿನ ತಾತ್ವಿಕ ಮತ್ತು ನೈತಿಕ ಕಾಳಜಿಗಳಿಗೆ ಗಾಂಧಿ ಮಾರುಹೋಗಿದ್ದರು ಎನಿಸಿತು.

ತೀರಾ ತೆಳ್ಳಗಿನ ಆದರೆ ಅಪ್ರತಿಮ ಶಕ್ತಿವಂತನಾದ ಸಂಜಯ್‌ಗೆ ಭಾರತದ ಇತರ ಭಾಗಗಳನ್ನು ನೋಡಬೇಕೆಂಬ ಹುಚ್ಚು ಹತ್ತಿತು. ಆ ಕಾರಣದಿಂದ ರಾಜ್ಯಶಾಸ್ತ್ರದಲ್ಲಿ ಎಂ.ಎ. ಮುಗಿಸಿದ ತಕ್ಷಣ ಉತ್ತರದ ಕಡೆ ಅನ್ವೇಷಣೆಗೆ ಹೊರಟರು. ಅವರ ತೀವ್ರ ಕುತೂಹಲ ಪಂಜಾಬ್‌ಗೆ ಕರೆದುಕೊಂಡು ಬಂತು. ಖಾಲಿಸ್ಥಾನ್ ಚಳುವಳಿಯ ಗದ್ದಲದಲ್ಲಿ ಪಂಜಾಬ್‌ನ ಹಳ್ಳಿ ಮತ್ತು ಪಟ್ಟಣಗಳಲ್ಲಿ ಹಲವಾರು ವಾರಗಳನ್ನು ಕಳೆದರು. ಆಗ ಪಂಜಾಬ್‌ನ ಗ್ರಾಮಗಳಲ್ಲಿ ತೀವ್ರ ತಳಮಳ ಮತ್ತು ಜನಜೀವನದ ಸರಳ ಸೌಂದರ್ಯ ಒಟ್ಟೊಟ್ಟಿಗೆ ಇರುವುದನ್ನು ಗಮನಿಸಿದರು. ಅವರ ಈ ಅನುಭವಗಳು ನಮ್ಮ ಭಾಷೆಯ ಅಸಮರ್ಥತೆ ಹಾಗೂ ಕಾಲೇಜುಗಳಲ್ಲಿ ಕಲಿಸುವ ರಾಜಕೀಯ ವಿಶ್ಲೇಷಣೆಯ ಕೊರತೆಯನ್ನು ತೋರಿಸಿಕೊಟ್ಟವು. ಸಮಾಜವಿಜ್ಞಾನದ ಸಿದ್ಧಾಂತಗಳೇ ಬೇರೆ, ವಾಸ್ತವದ ಬದುಕೇ ಬೇರೆ ಎನಿಸಿತು.

ಈ ನಡುವೆ ಮಹಾರಾಷ್ಟ್ರದಲ್ಲಿ ಶರದ್ ಜೋಷಿ ನೇತೃತ್ವದಲ್ಲಿ ಶೇತ್ಕರಿ ಸಂಘಟನೆಯ –ರೈತ ಚಳುವಳಿ ಗರಿಗಟ್ಟುತ್ತಿತ್ತು. ಶೇತ್ಕರಿ ಸಂಘಟನೆಯ ಹಲವಾರು ಸಭೆಗಳಲ್ಲಿ ಸಂಜಯ್ ಭಾಗವಹಿಸಿದ್ದು ಮಾತ್ರವಲ್ಲ; ಚಳುವಳಿಕಾರರ ನಡುವೆ ಸಂವಾದ ನಡೆಸುವುದರಲ್ಲಿ ಬಹು ಸಮಯ ಕಳೆದರು. ೧೯೮೦ರ ಈ ಹಂತದಲ್ಲಿ ಗಾಂಧಿ ಮತ್ತು ವಿನೋಬಾ ಕಡೆ ತಾವು ಒಲಿಯುತ್ತಿರುವುದನ್ನು ಕಂಡುಕೊಂಡರು.

ಆಗಲೂ ಇವರಿಗೆ ಗಾಂಧೀ ತೀರಾ ಸರಳ ಮತ್ತು ಇತರ ಹಿರಿಯ ಚಿಂತಕರಿಗೆ ಹೋಲಿಸಿದರೆ ಗಾಂಧಿಯಲ್ಲಿ ಮೊನಚುತನದ ಅಭಾವವಿದೆ ಎಂದೆನಿಸುತ್ತಿತ್ತು. ಆದರೆ ಗಾಂಧೀಜಿಯ ಬದುಕಿನಲ್ಲಿ ವಿಚಿತ್ರ ಶಕ್ತಿ ಇದೆ. 'ನೀನು ಮತ್ತು ನಾನು ಮಾಡಲಾಗದ್ದನ್ನು ಗಾಂಧಿ ಮಾಡಲಿಲ್ಲ. ಆದರೆ ನಾವು ಅದನ್ನು ಮಾಡಲಿಲ್ಲ. ಆತ ಮಾಡಿದ' ಎಂದು ಅವರ ಚಿಕ್ಕಪ್ಪ ಏಕೆ ಹೇಳುತ್ತಿದ್ದರು ಎಂಬುದು ಸಂಜಯ್ ಅರಿವಿಗೆ ಬಂತು. ಗಾಂಧಿಗೆ ಇದ್ದ ಬುದ್ಧನ ರೀತಿಯ ವ್ಯಕ್ತಿತ್ವದಿಂದ ಈ ಶಕ್ತಿ ಲಭಿಸಿದೆ ಎಂಬುದೂ ತಿಳಿಯಿತು. ಮಾನವನ ಭವಿಷ್ಯ ಕುರಿತು ಮೂಲಭೂತ ಪ್ರಶ್ನೆಗಳಿಗೆ ದೇಸಿ ಉತ್ತರ ಅನ್ವೇಷಣೆಯ ವಿಸ್ತೃತ ಕ್ಯಾನ್ವಾಸಿನಲ್ಲಿ

ಗಾಂಧಿಯ ಚಿತ್ರ ಕಾಣಿಸತೊಡಗಿತು. ಬುದ್ಧನಂತೆ ಗಾಂಧಿಯೂ, ಮರಣದ ನಂತರದ 'ಬದುಕು' ಅಥವಾ 'ಪರ'ದ ಬದುಕಿನ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. 'ಈಗ, ಇಲ್ಲಿ, ನೈತಿಕತೆಯನ್ನು ಉಳಿಸಿಕೊಳ್ಳುವುದು ಹೇಗೆ?' ಎಂಬುದಷ್ಟೇ ಗಾಂಧೀಜಿಯ ಕಾಳಜಿಯಾಗಿತ್ತು. 'ಇಲ್ಲಿ' , 'ಈಗ' ಎಂಬ ಕಾಳಜಿಯೇ 'ರಾಜಕಾರಣ'ವೂ ಆಗಿದೆ.

ಕೆಲವು ವರ್ಷಗಳ ನಂತರ ಸಂಜಯ್ ನರ್ಮದಾ ಬಚಾವೋ ಆಂದೋಲನದಲ್ಲಿ ಪೂರ್ಣಾವಧಿ ಕಾರ್ಯಕರ್ತನಾಗಿ ಸೇರಿಕೊಂಡರು. ಆ ತರುಣದಲ್ಲಿಯೇ ಆಂದೋಲನದ 'ಸಂಜಯ'ನಾಗಿ ಹೋದರು. ಪುರಾಣದ ಸಂಜಯನಿಗೆ ವಿಶೇಷವಾದ ದಿವ್ಯದೃಷ್ಟಿ ಇದ್ದು, ಅವನು ಕುರುಕ್ಷೇತ್ರದ ನಡಾವಳಿಯನ್ನು ಅಂಧ ಧೃತರಾಷ್ಟ್ರನಿಗೆ ಹೇಳುತ್ತಿದ್ದ. ಈ ಸಂಜಯ್, ತನ್ನ ದುರ್ಬಲ ತೆಳುದೇಹದ ಮಿತಿಯನ್ನು ಮೀರಿ, ಅವಿರತವಾಗಿ ಕೆಲಸದಲ್ಲಿ ನಿರತರಾದರು. ನರ್ಮದಾ ಕಣಿವೆಯಲ್ಲಿ ನಡೆಯುವ ಪ್ರತಿಯೊಂದರ ವಿವರವನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾಧ್ಯಮಗಳಿಗೆ ವರದಿ ಮಾಡತೊಡಗಿದರು.

ಇತ್ತೀಚಿನ ವರ್ಷಗಳಲ್ಲಿ ಅವರ ಬಾಲ್ಯದ ನೆನಪುಗಳಿಗೆ ವಿಶೇಷ ಅರ್ಥ ಬರತೊಡಗಿತು. ತಮ್ಮ ತಾತ ಗಾಂಧಿಯನ್ನು ಹೊಗಳುತ್ತಿದ್ದರು, ಪ್ರತಿಯೊಂದು ಕ್ರಿಯೆ ಅಥವಾ ಕೆಲಸದಲ್ಲೂ ಅತ್ಯಂತ ಸಾಧಾರಣ ಮನುಷ್ಯನೂ ಸಾಗಬಹುದಾದ ಹಾದಿ ಹುಡುಕಲು ಹೆಣಗುತ್ತಿದ್ದುದಕ್ಕಾಗಿ ಈ ಹೊಗಳಿಕೆ ಎಂಬುದು ನೆನಪಿಗೆ ಬಂತು. ಇದನ್ನು ಎಲ್ಲರೂ ಕಲಿತುಕೊಳ್ಳಬಹುದಾಗಿದೆ. ಆದುದರಿಂದ ಎಲ್ಲರೂ ಶಾಂತಿಯಿಂದ ಕುಳಿತುಕೊಳ್ಳುವುದೂ ಪ್ರತಿಭಟನೆಯಾಗಬಲ್ಲದು.

ಜನರು ಸಹಜವಾಗಿಯೇ ಅಹಿಂಸಕರು ಎಂಬುದನ್ನು ನಾನು ಈ ಆಂದೋಲನದಲ್ಲಿ ಕಂಡುಕೊಂಡೆ. ಅವರು ಕಲ್ಲು ಎಸೆಯಲು ಇಷ್ಟಪಡುವುದಿಲ್ಲ. 'ಸತ್ಯ ನಮ್ಮ ಕಡೆ ಇರಬೇಕಾದರೆ, ಏಕೆ ಕಲ್ಲು ಒಗೆಯಬೇಕು?....' ರಾಜಕೀಯ ಚಟುವಟಿಕೆ ಎಂಬುದು ಹೀರೋಗಳ ಮತ್ತು ಕಾರ್ಯಕರ್ತರ ಆಸ್ತಿಯಾಗಿ ಹೋಗಿದೆ. ನೀವು ಭಗತ್ ಸಿಂಗ್ ಅಥವಾ ಸುಭಾಶ್‌ಚಂದ್ರ ಬೋಸ್ ಆಗಲು ಅಸಾಮಾನ್ಯವಾದ ಧೈರ್ಯ ಮತ್ತು ಚತುರತೆ ಬೇಕು. ಗಾಂಧಿ ಇದನ್ನು ಬದಲಾಯಿಸಿದರು. ಅನೇಕರನ್ನು ಮೀರಿಸಿದರು ಎಂಬುದನ್ನು ಶ್ರುತಪಡಿಸಲು ಇದೊಂದೇ ಸಾಕು. ನಾವು ಆಂದೋಲನದಲ್ಲಿ ಕಲಿತದ್ದೂ ಇದೇ. ಹೋರಾಟದಲ್ಲಿ ತೊಡಗಿಕೊಂಡ ಕಾರ್ಯಕರ್ತ ಹೇಗೆ ಬದುಕಬೇಕು ಮತ್ತು ಹೇಗೆ ಕ್ರಿಯಾಶೀಲನಾಗಬೇಕು ಎಂಬುದಕ್ಕೆ ಗಾಂಧಿಗಿಂತ ಬೇರೆ ಮಾರ್ಗದರ್ಶಿ ಬೇಡ.

ಎನ್.ಬಿ.ಎ ಚಳುವಳಿಯ ಅನೇಕ ಮುಖಗಳು 'ಹಿಂದ್ ಸ್ವರಾಜ್'ನಲ್ಲಿರುವ ತಾತ್ವಿಕತೆಯನ್ನು ಧ್ವನಿಸಿದರೂ, ಸಂಜಯ್‌ಗೆ ಈ ಕುರಿತು ಸಂದೇಹಗಳಿದ್ದುವು. ಗಾಂಧೀಜಿಯ ವಿಶ್ಲೇಷಣೆಯಲ್ಲಿ ಮೇಲ್ನೋಟಕ್ಕೆ ಸಂಕೀರ್ಣತೆ ಇಲ್ಲದಿರುವುದೇ ಇದಕ್ಕೆ ಕಾರಣವಾಗಿತ್ತು. ಕೈಗಾರಿಕಾ ಕ್ರಾಂತಿಯಿಂದ ಎಂಜಿನ್ನುಗಳು ನಮ್ಮನ್ನು ಚಲಿಸುವಂತೆ ಮಾಡುವ ಬಹಳ ಪೂರ್ವದಲ್ಲಿ ಮಾನವ ಕುಲದಲ್ಲಿ ಸಂಚಲನೆ ಉಂಟು ಮಾಡಿದ್ದ ಅನೇಕ ವಿಚಾರಗಳನ್ನು ನಾವು ಬಿಟ್ಟು ಕೊಡಲು ಸಾಧ್ಯವೇ? ಉದಾಹರಣೆಗೆ, ಅಧಿಕಾರದ ವಿಕೇಂದ್ರೀಕರಣ, ಕೊಳ್ಳುಬಾಕತನ

ಇಲ್ಲದಿರುವಿಕೆ, ಹಮಾರಾಗಾಂವ್, ಹಮಾರಾರಾಜ್ – ಎಂಬ ಸ್ವಯಮಾಡಳಿತದ ಕಲ್ಪನೆ ಇವು ಆಂದೋಲನದ ಮುಖ್ಯ ತಿರುಳಾಗಿತ್ತು. ಜನಕ್ಕೆ ನಿಜಕ್ಕೂ ಬೇಕಾಗಿರುವುದು ಇದೇನಾ ಎಂದು ಸಂಜಯ್‌ಗೆ ಅಚ್ಚರಿಯಾಗುತ್ತಿತ್ತು.

ಈ ಗುರಿಗಳನ್ನು ತಲುಪಲು ಸಹಕಾರ್ಯಕರ್ತರ ತುಡಿತವನ್ನು ಇವರು ಹಂಚಿಕೊಂಡಿದ್ದರೂ ಮೂರ್ತಿಪೂಜೆಯ ಬಗ್ಗೆ ಅಸಹನೆ ಮತ್ತು ಗ್ರಾಮಕಲ್ಪನೆಯ ಸರಳೀಕರಣ ಇದು ಎಂದು ಭಾವಿಸಿದರು. ಇದು ವಾಸ್ತವದಿಂದ ಪಲಾಯನಗೊಳ್ಳುವ ಸೂತ್ರ. ಗಾಂಧಿಯನ್ನು ನಾಯಕ ಅಥವಾ ಮೂರ್ತಿಪೂಜೆಯ ನೆಲೆಗೆ ತರಬಾರದು.

ಪಟ್ಟಣದಲ್ಲಿ ಬೆಳೆದ 'ಪರಿಸರವಾದಿಗಳಿಗೂ' ಮತ್ತು 'ಗ್ರಾಮಸ್ಥನಿಗೂ' ಗಾಂಧಿಯನ್ನು ಮೆಚ್ಚಲು ಸಮಾನ ಕಾರಣಗಳಿವೆ ಎನ್ನುವ ಸಂಜಯ್ ಹೀಗೆ ಹೇಳುತ್ತಾರೆ:

'ನನ್ನ ಹಿರಿಯ ದೊಡ್ಡಮ್ಮ, ಚಿಕ್ಕಮಕ್ಕಳೂ, ಚಿಕ್ಕ ವಯಸ್ಸಿನ ಮಹಿಳೆಯರೂ ಎಲ್ಲರೂ ಸೇರಬಹುದಾದ ಅತ್ಯಂತ ಸೂಕ್ತವಾದ ಚಳುವಳಿ ಇದು. ನಾವು ಭಯಮುಕ್ತರಾಗಿ ಪೊಲೀಸರ ಎದುರು ಕುಳಿತಾಗ ಇದು ನಿಚ್ಚಳವಾಗುತ್ತದೆ. ನಾವು ಕಲ್ಲನ್ನು ಕೈಗೆತ್ತಿಕೊಳ್ಳದಿರುವಾಗ, ಅವರು ನಮ್ಮತ್ತ ಹೇಗೆ ಗುಂಡು ಹಾರಿಸಬಲ್ಲರು?'

ಆದರೂ ಕೆಲವೊಮ್ಮೆ ಪೊಲೀಸರು ಅಮಾಯಕ ಪ್ರತಿಭಟನಾಕಾರರ ಮೇಲೆ ಗುಂಡು ಹಾರಿಸುತ್ತಾರೆ. ಅನಂತರ ಜನ ರೊಚ್ಚಿಗೇಳುತ್ತಾರೆ. ಇದು ಶಾಂತಿಯುತವಾದ ಪ್ರತಿಭಟನೆಯ ತಂತ್ರದ ಬಗ್ಗೆಯೇ ಅನುಮಾನ ಸೃಷ್ಟಿಸುತ್ತದೆ. ಈ ಆಂದೋಲನದಲ್ಲಿಯೂ ಕೆಲವೊಂದು ಸಂದರ್ಭದಲ್ಲಿ–ಅಣೆಕಟ್ಟಿನ ಸ್ಥಳದಲ್ಲಿ ಹಿಂಸಾತ್ಮಕ ಪ್ರತಿಭಟನೆಯತ್ತ ಜನರು ಒಲವು ತೋರಿದರು. ಆದರೆ ಎಲ್ಲ ಭಯೋತ್ಪಾದಕ ಚಳುವಳಿಗಳ ಸಂದರ್ಭದಲ್ಲಿಯೂ ಪ್ರತಿಹಿಂಸೆಯ ಪರಿಣಾಮಗಳು ಎಲ್ಲರಿಗೂ ತಿಳಿದಿವೆ. ಆದಕಾರಣ ಶಾಂತಿಯುತ ಪ್ರತಿಭಟನೆ ಹೊರತುಪಡಿಸಿ ಅನ್ಯಮಾರ್ಗ ಇಲ್ಲವಾಗಿದೆ.

ಈ ಆಂದೋಲನದ ಸಂಬಂಧ ಸತ್ಯಾಗ್ರಹ ಎಂದರೆ, ಪ್ರತಿಭಟನಾರ್ಥವಾಗಿ ದೈಹಿಕವಾಗಿ ಸುಮ್ಮನೆ ಕೂರುವುದಲ್ಲ. ಜನ ಜಾಗೃತಿ, ರಾಜಕೀಯ ತಂತ್ರಗಾರಿಕೆ ರೂಪಿಸುವುದು, ಅಣೆಕಟ್ಟಿನ ವಿರುದ್ಧ ವಾದವನ್ನು ಬಲಗೊಳಿಸಲು ವೃತ್ತಿನಿರತರ ಜತೆ ಕಾರ್ಯನಿರ್ವಹಿಸುವುದು ಮುಂತಾದ ಅನೇಕ ಚಟುವಟಿಕೆಗಳು ಇಲ್ಲಿ ಸೇರಿರುತ್ತವೆ. ಈ ಎಲ್ಲದರ ಮೊತ್ತವಾಗಿ ವಿಶ್ವಬ್ಯಾಂಕ್ ಎಸ್.ಎಸ್.ಪಿಯ ಬಗ್ಗೆ ಸ್ವತಂತ್ರ ಸಮೀಕ್ಷೆ ನಡೆಸುವಂತೆ ಮಾಡುವಲ್ಲಿ ಯಶಸ್ವಿಯಾಯಿತು. ಅವರೆಗೆ ವಿಶ್ವಬ್ಯಾಂಕ್ ತನ್ನ ಯೋಜನೆಯಲ್ಲಿ ಹೊರಗಿನ ಸಂಸ್ಥೆಗೆ ಸ್ವತಂತ್ರ ಸಮೀಕ್ಷೆ ನಡೆಸುವ ಜವಾಬ್ದಾರಿ ನೀಡಿರಲಿಲ್ಲ. ಮೋರ್ಸ್ ವರದಿ ಎಂಬ ಹೆಸರಿನಲ್ಲಿ ಹೆಸರುವಾಸಿಯಾದ ಈ ಸಮೀಕ್ಷೆ ಆಂದೋಲನದ ತಂತ್ರಗಾರಿಕೆಯ ಯಶಸ್ಸುಗಳಲ್ಲೊಂದು.

೧೯೮೮ರಲ್ಲಿ ಸಂಜಯ್ ಈ ಚಳುವಳಿಯನ್ನು ಪ್ರವೇಶಿಸಿದಾಗ, ಇದೊಂದು ಸೋಲುವ ಯುದ್ಧ ಎಂದೇ ಎಲ್ಲರೂ ಹೇಳಿದ್ದರು. 'ಈ ರೀತಿ ಹೋರಾಟ ನಡೆಸುವುದರಲ್ಲಿಯೇ ಒಂದು

ಆನಂದ ಇದೆ. ಎಲ್ಲರೂ ಗೆಲ್ಲುವ ಹೋರಾಟ ಸೇರುತ್ತಾರೆ. ಆದರೆ ಸೋಲುವ ಹೋರಾಟವನ್ನು ಗೆಲ್ಲುವ ಹೋರಾಟವನ್ನಾಗಿ ಮಾಡಿಕೊಳ್ಳುವುದರಲ್ಲಿ ನಿಜವಾದ ಸವಾಲು ಅಡಗಿದೆ'

ಸರ್ದಾರ್ ಸರೋವರ್ ಯೋಜನೆ ಕೊನೆಗಾಣುವುದೋ ಇಲ್ಲವೋ ಎಂಬ ಅನುಮಾನ ಇನ್ನೊಂದು ಪಖ್ಖಕ್ಕೆ ಮೂಡುವ ರೀತಿಯಲ್ಲಿ ಈ ಚಳುವಳಿ ಯಶಸ್ಸು ಕಂಡಿತು.

ಮುಂಬೈ ಐಐಟಿಯಲ್ಲಿ ಎಂಜನಿಯರಿಂಗ್ ಪದವಿ ಪಡೆದು ನಿಜವಾದ ಗುರಿಗಾಗಿ ಅವಿರತ ಅನ್ವೇಷಣೆ ನಡೆಸುತ್ತಿರುವ ಶ್ರೀಪಾದ್ ಧರ್ಮಾಧಿಕಾರಿ ಈ ಚಳುವಳಿಗೆ ಬಂದರು. ನೀಳ ಕಾಯದ ಎಲ್ಲರೊಡನೆ ಬೆರೆಯುವ ಶ್ರೀಪಾದ್ ಧರ್ಮಾಧಿಕಾರಿ ಆ ವೇಳೆಗಾಗಲೇ ಹಲವಾರು ಮಹತ್ವಾಕಾಂಕ್ಷೆಗಳನ್ನು ಇರಿಸಿಕೊಂಡಿದ್ದರು. ತನ್ನದೇ ಸ್ವಂತದ ಉತ್ಪಾದನಾ ಘಟಕವೊಂದನ್ನು ಹೊಂದಬೇಕು ಮತ್ತು ಆ ಮೂಲಕ ಹಣಗಳಿಸಬೇಕು ಎಂಬ ಅವರ ಯೋಜನೆ ಇಂದು ತನ್ನ ಆಕರ್ಷಣೆ ಉಳಿಸಿಕೊಂಡಿರಲಿಲ್ಲ. ಮಾಲಿನ್ಯ ನಿಯಂತ್ರಣ ಸಲಹೆಗಾರನಾಗಿ ಕಾರ್ಯನಿರ್ವಹಿಸುವುದು ಅವರಿಗೆ ವ್ಯರ್ಥ ಎನಿಸಿತು. ಆಧುನಿಕ ಕೈಗಾರಿಕೆ ನಿರ್ಮಿಸಿದ ತಾಂತ್ರಿಕತೆಗಳು ಸಮಸ್ಯೆಗಳನ್ನು ಬಗೆಹರಿಸಲಾರವು ಎಂಬುದು ಅವರಿಗಾಗಲೇ ಖಾತರಿಯಾಗಿ ಹೋಗಿತ್ತು.

ಸ್ಫೂರ್ತಿಗೊಂಡ ವ್ಯಕ್ತಿಗಳ ಅನ್ವೇಷಣೆ ಇವರನ್ನು ಮಧ್ಯಪ್ರದೇಶದ ಅನೂಪುರ್‌ದ ವಿದೂಶಕ್ ಕಾರ್ಖಾನೆಗೆ ಒಯ್ದಿತು. ಅಲ್ಲಿ ಹಿಂದಿನ ಪೀಳಿಗೆ 'ಐಐಟಿ ಮತಾಂತರಿಗಳು' ಗ್ರಾಮೀಣ ಪ್ರದೇಶಗಳಿಗೆ ಸೂಕ್ತವಾದ ಉಪಕರಣಗಳ ತಯಾರಿಕೆ ಮತ್ತು ವಿನ್ಯಾಸದ ಕುರಿತು ಕಾರ್ಯಾಗಾರವೊಂದನ್ನು ನಡೆಸುತ್ತಿದ್ದರು. ಜನವರಿ ೧೯೮೮ರಲ್ಲಿ ಪುಣೆಯ 'ಪರಿಸರ' ಎಂಬ ಪರ್ಯಾವರಣ ಸಂಸ್ಥೆ ನೀರಿನ ನಿರ್ವಹಣೆಯ ಬಗ್ಗೆ ನಡೆಸಿದ ಕಮ್ಮಟಕ್ಕೆ ಮೇಧಾಪಾಟ್ಕರ್ ಭೇಟಿ ನೀಡಿದ ಸಂದರ್ಭದಲ್ಲಿ ಶ್ರೀಪಾದ್‌ರ ಬದುಕಿನಲ್ಲಿ ಮಹತ್ತರ ತಿರುವು ಕಾಣಿಸಿಕೊಂಡಿತು. ನರ್ಮದಾ ಕಣಿವೆಯಲ್ಲಿ ರೂಪುಗೊಳ್ಳುತ್ತಿರುವ ಹೋರಾಟದ ಬಗ್ಗೆ ಆಕೆ ಮಾತನಾಡಿದರು. ಎಲ್ಲರೂ ಈ ಚಳುವಳಿಗೆ ಸಹಾಯ ಹಸ್ತ ನೀಡಬೇಕೆಂದು ಮನವಿ ಮಾಡಿಕೊಂಡರು. ಆ ವರ್ಷದ ಡಿಸೆಂಬರ್‌ನಲ್ಲಿ ಶ್ರೀಪಾದ್ ನರ್ಮದಾ ಕಣಿವೆಯ ದಾರಿ ಹಿಡಿದರು.

ಅಲ್ಲಿಂದಾಚೆಗೆ ಕಠಿಣಶ್ರಮ, ಆತ್ಮವಿಮರ್ಶೆ, ಹುಡುಕಾಟ, ಬೆಳವಣಿಗೆ ಎಲ್ಲ ನಡೆದವು. ತನ್ನ ಅನೇಕ ಸಹೋದ್ಯೋಗಿಗಳು, ಬೇರೆ ಬೇರೆ ರೀತಿಯಲ್ಲಿ ಮತ್ತೆ ಮತ್ತೆಗಾಂಧಿಯ ಚಿಂತನೆಗಳಿಗೆ ಹತ್ತಿರವಾಗುವುದನ್ನು ಶ್ರೀಪಾದ್ ಈ ಎಲ್ಲ ಗದ್ದಲದ ನಡುವೆ ಗಮನಿಸಿದರು. ಕೆಲವು ಮೂಲಭೂತ ಅಂಶಗಳನ್ನು ಪುನಃ ಪರಿಶೀಲನೆಗೆ ಒಳಪಡಿಸಲು 'ಗಾಂಧಿ ಬಾಗಿಲ'ನ್ನು ತೆರೆದಿರುವುದರ ಬಗ್ಗೆ ಎಲ್ಲರಿಗೂ ಸ್ಪಷ್ಟವಾದ ಅರಿವು ಇತ್ತು. ಆದುದರಿಂದಲೇ ಈ ಚಳುವಳಿಯಲ್ಲಿ ಸೇರಿಕೊಂಡವರು, ಗಾಂಧೀಜಿಯ ಸಿದ್ಧಾಂತ ಕುರಿತಂತೆ ಅಚ್ಚರಿ ವ್ಯಕ್ತಪಡಿಸುತ್ತಿದ್ದರು. ಕೆಲವರು ಅದರಲ್ಲಿಯೇ ವಿವರ ಹುಡುಕ ಹೊರಟರು.

ಶ್ರೀಪಾದ್‌ಗೆ ಅಚ್ಚರಿ ಮೂಡಿಸಿದ ಅಂಶವೆಂದರೆ: ಗಾಂಧಿ..... ವೈಯಕ್ತಿಕ ನೆಲೆಯಿಂದ ಕುಟುಂಬ ವ್ಯವಸ್ಥೆಯಿಂದ ಸಂಸ್ಥೆಯಗಳವರೆಗೂ, ಅವುಗಳ ನಡುವೆ ಯಾವ ಗೋಡೆಗೂ

ಅವಕಾಶವಿಲ್ಲದೇ ಎಲ್ಲ ಹಂತಗಳಲ್ಲಿಯೂ ಆಲೋಚಿಸಿದ್ದರು. ಅದರಲ್ಲಿ ಬದುಕಿದ್ದರೂ ಕೂಡಾ! ಇವು ಕೇವಲ ಗಾಂಧಿ ಹೇಳಿದ ಕೆಲವು ಮಾತುಗಳಲ್ಲ; ಬದಲಿಗೆ ಇದು ಆತನಿಗೆ ಸ್ಫೂರ್ತಿ ನೀಡಿದ್ದಾಗಿತ್ತು. ಉದಾಹರಣೆಗೆ ಚರಕಾ. ಇದು ಏಕಮಾತ್ರ ನಿರ್ದಿಷ್ಟ ಪರಿಹಾರವಾಗಿಲ್ಲದೇ ಇರಬಹುದು. ಆದರೆ ಆತ ಅನುಭವಿಸಿದ್ದ, ಇದರ ಹಿಂದೆ ಇದ್ದ ಮೌಲ್ಯ ಏನು ಎಂದು ಭಾವಿಸಿದ್ದ, ಈ ಮೂಲಭೂತ ಸಿದ್ಧಾಂತಗಳಿಗನುಗುಣವಾಗಿ ಜೀವನ ಶೈಲಿ ಮತ್ತು ಆರ್ಥಿಕತೆಯನ್ನು ರೂಪಿಸುವುದು ನಿಜವಾದ ಸವಾಲಿನ ಕೆಲಸವಾಗಿದೆ.

ಆಂದೋಲನದ ಬಳಗಕ್ಕೆ ಗಾಂಧಿ ಎಂದೂ ಮಂತ್ರವಾಗಿ ಉಳಿಯಲಿಲ್ಲ. ಆದರೆ ಎಲ್ಲ ಕಾರ್ಯಕರ್ತರೂ ನೆಹರೂ ಮಾದರಿಯ ಅಭಿವೃದ್ಧಿಯ ವಿರುದ್ಧ ಹೋರಾಡುತ್ತ, ವರುಷಗಳ ಕೆಳಗೆ ಚರಿತ್ರೆಯ ಶಕ್ತಿಗಳು ಹೊರದಬ್ಬಿದ್ದ ಗಾಂಧಿ ಮಾದರಿ ಅಭಿವೃದ್ಧಿಯ ಸನಿಹಕ್ಕೆ ಬರುತ್ತಿದ್ದುದು ಸ್ಪಷ್ಟವಿತ್ತು.

ಆದುದರಿಂದ ಎಸ್.ಎಸ್.ಪಿ.ಯನ್ನು ನಿಜಕ್ಕೂ ತಡೆಯಲು ತಾವು ಸಮರ್ಥರಾಗುತ್ತೇವೆಂಬ ಬಗ್ಗೆ ಚಿಂತೆ ಸಾಕಷ್ಟಿದ್ದರೂ ಕೊನೇ ಪಕ್ಷ ಎನ್.ಬಿ.ಎ. ಪರ್ಯಾಯಗಳಿಗೆ ಅವಕಾಶ ತೆರೆಯಿತು ಎಂಬ ತೃಪ್ತಿ ಮತ್ತು ವಿಶ್ವಾಸ ಇತ್ತು. ಈ ಪರ್ಯಾಯಗಳನ್ನು ವ್ಯಕ್ತಿಗತ ಬದುಕಿನೊಳಗೆ ಅಳವಡಿಸಿಕೊಳ್ಳುವುದು ಇನ್ನೂ ಕಠಿಣತರ ಕೆಲಸವಾಗಿತ್ತು.

ಆಂದೋಲನ ಸಾಗುತ್ತಿದ್ದ ವೇಗದಲ್ಲಿ ಬಹುತೇಕ ಕಾರ್ಯಕರ್ತರಿಗೆ ಈ ಪ್ರಶ್ನೆಗಳನ್ನು ಕೇಳಿಕೊಳ್ಳುವ ವ್ಯವಧಾನವೇ ಇರಲಿಲ್ಲ. ಆದರೂ ಶ್ರೀಪಾದ್‌ರ ಪ್ರಕಾರ ವೈಯುಕ್ತಿಕ ಮಟ್ಟದಲ್ಲಿ ಮತ್ತು ಆಂದೋಲನದಲ್ಲಿ ಬೆಳವಣಿಗೆಯ ಪ್ರಕ್ರಿಯೆ ಕಾಣಿಸಿಕೊಂಡಿತು. ಈ ತೀವ್ರ ಪ್ರತಿಭಟನಾ ಚಟುವಟಿಕೆಯ ಕಾಲದಲ್ಲಿಯೂ ಹೋರಾಟದ ವಿಸ್ತೃತ ರೂಪ ಕುರಿತಂತೆ ಕಾರ್ಯಕರ್ತರೊಳಗೆ ತೀವ್ರವಾದ ಚರ್ಚೆ ನಡೆಯುತ್ತಿತ್ತು. ನಮ್ಮಲ್ಲಿರುವ ವೈರುದ್ಧ್ಯಗಳನ್ನು ನಿರಂತರ ಗಮನಿಸಿದ ಕಾರಣ ಹೆಚ್ಚಿನ ಬೆಳವಣಿಗೆ ಸಾಧ್ಯವಾಯಿತು ಎಂದು ಶ್ರೀಪಾದ್ ನೆನಪಿಸಿಕೊಳ್ಳುತ್ತಾರೆ.

ಉದಾಹರಣೆಗೆ ರಾಸಾಯನಿಕ ಕೀಟನಾಶಕ ಮತ್ತು ಗೊಬ್ಬರದ ಮೇಲಿನ ಅವಲಂಬನೆಯನ್ನು ಚಳುವಳಿ ತೀವ್ರವಾಗಿ ಟೀಕಿಸಿತು. ನರ್ಮದಾ ಪ್ರದೇಶದ ಹೆಚ್ಚಿನ ಪಾಲು ಕೃಷಿ ರಾಸಾಯನಿಕಗಳನ್ನೇ ಅವಲಂಬಿಸಿತ್ತು. ಆಂದೋಲನದಲ್ಲಿ ತೊಡಗಿಸಿಕೊಂಡಿದ್ದ ರೈತರಿಗೆ ಈ ವೈರುದ್ಧ್ಯ ಅರ್ಥವಾಗುತ್ತಿತ್ತು. ಆದರೆ ಈ ಯಾವುದಕ್ಕೂ ಸಿದ್ಧ ಉತ್ತರಗಳು ಇರಲಿಲ್ಲ. ಆದರೆ ಜನರು ಅಸ್ತಿತ್ವದಲ್ಲಿದ್ದ ನೀತಿನಿಯಮಗಳನ್ನು, ಅಭ್ಯಾಸಗಳನ್ನು ಟೀಕಿಸುತ್ತಿರುವ ಹಾದಿಯಲ್ಲಿಯೇ ಅದರ ಫಲಶ್ರುತಿಯನ್ನೂ ಪಡೆಯಲಾರಂಭಿಸಿದರು.

ಅವರೆಲ್ಲರ ಬದುಕೂ ತಕ್ಷಣಕ್ಕೆ ಸಂಪೂರ್ಣವಾಗಿ ಸಾವಯವ ಮತ್ತು ಸುಸ್ಥಿರ ಹಾದಿಗೆ ಬಂದವು ಎಂದು ಹೇಳುವ ಹಾಗಿಲ್ಲ. ಆದರೆ ಪರ್ಯಾಯಗಳನ್ನು ಶೋಧಿಸುವ ಮತ್ತು ಅದಕ್ಕೆ ಅವಕಾಶ ಕಲ್ಪಿಸಿಕೊಳ್ಳುವ ಸನ್ನಿವೇಶ ನಿರ್ಮಾಣವಾಯಿತು. ಶ್ರೀಪಾದ್ ಒಂದು ನೆಲೆಯಲ್ಲಿ ಪರಿಪೂರ್ಣತೆ, ತೃಪ್ತಿ ತಂದುಕೊಂಡದ್ದಕ್ಕೆ ಕಾರಣಗಳು ಇವು:

'ಈ ರೀತಿಯ ಆಧುನಿಕ ಅಭಿವೃದ್ಧಿ ಮಾದರಿಗಳು ಜನರ ಮೇಲೆ, ಅವರ ಚಿಂತನೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತಿವೆ. ಇದು ಹೆಚ್ಚಾಗುತ್ತಿರುವುದಲ್ಲದೇ, ಅದನ್ನು ಬದಲಾಯಿಸಲೂ ಆಗದು. ಈಗ ವ್ಯವಸ್ಥೆ ತೀರಾ ಕಡಿಮೆ ಪ್ರತಿಭಟನೆ ವ್ಯಕ್ತವಾಗುವ ಕಡೆಗೆ ಚಲಿಸುತ್ತ ಇರುತ್ತದೆ. ಉದಾಹರಣೆಗೆ ಪಟ್ಟಣಗಳಿಗೆ ವಿದ್ಯುತ್ ಮತ್ತು ನೀರು ಕೊಡಲೇಬೇಕು. ಹೇಗಾದರೂ ಮಾಡಿ ಅದನ್ನು ಅವರಿಗೆ ಕೊಡಲೇಬೇಕು. ಜನರು ಈ ವ್ಯವಸ್ಥೆಯನ್ನು ಪ್ರತಿಭಟಿಸಿದರೆ ಆಗ ಅದು ಬೇರೆ ದಿಕ್ಕಿನಲ್ಲಿ ಚಲಿಸುವಂತಾಗುತ್ತದೆ. ಹೀಗಾಗಿ ಪರ್ಯಾಯಗಳನ್ನು ಹುಡುಕಲೇಬೇಕಾಗುತ್ತದೆ. ಆರಂಭವನ್ನಂತೂ ಮಾಡಲಾಗಿದೆ. ಅದು ಈಗ ಚಲನಶೀಲತೆಯನ್ನು, ವೇಗವನ್ನು ಸಹಾ ಪಡೆದುಕೊಳ್ಳುತ್ತಿದೆ'.

ಸಂಜಯ್ ಮತ್ತು ಶ್ರೀಪಾದ್‌ರಂತಹ ನೂರಾರು ಕಿರಿಯರನ್ನು ನರ್ಮದಾ ಕಣಿವೆಯ ಕಡೆಗೆ ಎಳೆದ ಚುಂಬಕ ಇತರರ ಮೇಲೂ ತನ್ನ ಶಕ್ತಿಯನ್ನು ಬೀರಿತು. ಆ ರೀತಿಯ ಎಲ್ಲರೂ ಭೌತಿಕವಾಗಿ ನರ್ಮದಾ ಕಣಿವೆಯ ಬಳಿ ಬರಲಿಲ್ಲ. ಬಹುತೇಕ ಮಂದಿ, ತಮ್ಮ ಅನ್ವೇಷಣೆಯನ್ನು ಬೇರೆಡೆ ಮುಂದುವರೆಸುವ ಮೂಲಕ ವಿಶಾಲವಾದ ಚಳುವಳಿಯ ಒಂದು ಭಾಗವಾಗಿ ಹೋದರು.

ಮೈಸೂರಿನಿಂದ ಟಿಂಬಕ್ಟುವರೆಗೆ

ಮುಂಬೈ–ಬೆಂಗಳೂರಿನ ಎರಡನೆಯ ದರ್ಜೆಯ ಕಾದಿರಿಸದೇ ಇರುವ, ಸೀಟಿಗಾಗಿ ಇರುವ ಜನದಟ್ಟಣೆಯಲ್ಲಿ ದಿನೇಶ್ ಕೂಡಾ ಒಬ್ಬನಾಗಿದ್ದ. ಆತನಿಗಿಂತ ಹೆಚ್ಚಾಗಿದ್ದ ಆತನ ಲಗೇಜ್ ಎಲ್ಲರ ಗಮನ ಸೆಳೆದಿತು. ೧೯೮೩ರಲ್ಲಿ ತರುಣನೊಬ್ಬ ದೊಡ್ಡ ಚರಖ ಹೊತ್ತು ಪ್ರಯಾಣ ಮಾಡುತ್ತಿರುವುದು ಯಾರಿಗೇ ಆದರೂ ವಿಚಿತ್ರ ಅನ್ನಿಸುತ್ತಿತ್ತು. ಅವರು ಸಮೀಪದಿಂದ ಗಮನಿಸಿದ್ದರೆ ಈ ಅಚ್ಚರಿಗೆ ಪರಿಹಾರ ದೊರೆಯುತ್ತಿತ್ತೇನೋ. ದಿನೇಶ್, ಎಂ.ಕೆ. ಗಾಂಧಿಯ ಆತ್ಮಚರಿತ್ರೆಯ ಕನ್ನಡ ಅನುವಾದವನ್ನು ಓದುವುದರಲ್ಲಿ ಮಗ್ನನಾಗಿದ್ದ.

ಧೋತರ ಕುರ್ತಾ ಧರಿಸಿದ ಯುವಕ ದಿನೇಶ್, ಮುಂಬೈ ಐಐಟಿ ಆಶ್ರಯದಲ್ಲಿ ನಡೆದ ಸಾಂಪ್ರದಾಯಿಕ ವಿಜ್ಞಾನ ಹಾಗೂ ತಂತ್ರಜ್ಞಾನಗಳ ಮೊದಲ ಸಮಾವೇಶ ಮುಗಿಸಿ, ಮನೆಗೆ ಮರಳುತ್ತಿದ್ದ. 'ಮನೆ'– ಎಂದರೆ ಅಂದಿನ ಕಾಲದಲ್ಲಿ ಟಿಂಬಕ್ಟು. ಅಲ್ಲಿ ಮಧ್ಯಾಹ್ನ ಯಾವಾಗಲೂ ಬಿಸಿಲು ಬೇಗೆಯಿಂದ ಉರಿಯುತ್ತಿತ್ತು. ಕೆಲವು ವೇಳೆ ರಾತ್ರಿಯಲ್ಲಿ ವಿಪರೀತ ಚಳಿ. ಬೆಳಿಗ್ಗೆ ಎಲೆ ಮತ್ತು ದಳಗಳ ಮೇಲೆ ಮುತ್ತಿನಂತಹ ಇಬ್ಬನಿ ಸಂಗ್ರಹವಾಗುತ್ತಿತ್ತು. ಟಿಂಬಕ್ಟು ಸಹಾರಾ ಮರಳುಗಾಡಿನಲ್ಲಿ ಒಂದು ಐತಿಹಾಸಿಕ ವ್ಯಾಪಾರಿ ಸ್ಥಳವಲ್ಲ. ಆಂಧ್ರಪ್ರದೇಶದ ರೇಷ್ಮೆಸೀರೆಗೆ ಪ್ರಸಿದ್ಧವಾದ ಧರ್ಮಾವರಂ ಸಮೀಪದ ಚೆನ್ನಕೋತಪಲ್ಲಿ ಗ್ರಾಮದ ೩೨ ಎಕರೆ ಪ್ರದೇಶವೇ ಟಿಂಬಕ್ಟು.

ಅನೇಕ ದಿವಸಗಳಲ್ಲಿ ದಿನೇಶ ಸೂರ್ಯೋದಯಕ್ಕೆ ಮುನ್ನವೇ ಎದ್ದು ಸಸಿಮಡಿಗಳಲ್ಲಿಯ ಪೈರುಗಳ ಯೋಗಕ್ಷೇಮ ಮತ್ತು ಇತರೇ ಗಿಡಗಳ ಆರೈಕೆ ಮಾಡುತ್ತಾ ಸುತ್ತೆಲ್ಲ ಅಲೆಯುತ್ತಿದ್ದ.

ಅತಿ ಸಹಜವೆನ್ನುವಂತೆ ಬಿಳಿ ಲುಂಗಿಯನ್ನು ಮಂಡಿಮಟ್ಟಕ್ಕೆ ಕಟ್ಟಿ, ಕಾಂಪೋಸ್ಟ್ ಗುಂಡಿಯ ಬಳಿ ಪರೀಕ್ಷಿಸುತ್ತಿರುವ ದಿನೇಶ, ಈಚೀನವರೆಗೂ ಜೀನ್ಸ್‌ಧಾರಿ. ಅವನನ್ನು 'ಎಂಜಿನಿಯರಿಂಗ್ ವಿದ್ಯಾರ್ಥಿ'ಯಾಗಿದ್ದ ಎಂದು ಯಾರೂ ಹೇಳುತ್ತಿರಲಿಲ್ಲ. ಆತ ಈ ಬದುಕನ್ನು ತನ್ನ ಹುಟ್ಟೂರಾದ ಮೈಸೂರಿನಲ್ಲಿಯೇ ಬಿಟ್ಟು ಬಂದಿದ್ದ. ತನ್ನ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್‌ನ ಡಿಗ್ರಿ ಸರ್ಟಿಫಿಕೇಟನ್ನು ಕೂಡಾ ಆತನ ತಂದೆಯ ಮನೆಯ ಯಾವುದೋ ಕಪಾಟಿನಲ್ಲಿ ಇಟ್ಟು ಬಂದಿದ್ದ. ತಾನು ಸಾಂಪ್ರದಾಯಿಕ ಕೆಲಸ ಹಿಡಿಯದ ಕಾರಣ ಆತನ ತಂದೆತಾಯಿಗಳಿಗೆ ಉಂಟಾದ ನಿರಾಶೆಯ ಜತೆ ಜತೆಗೆ ಬದುಕು ಸಾಗಿಸುವುದನ್ನು ಕಲಿತ. ದಿನೇಶ್‌ನಿಗೆ ಎಂ.ಎ.ಎನ್. ಬಗೆಗಿನ ಆಸಕ್ತಿ ಮುಖ್ಯ ಪ್ರವಾಹದಿಂದ ತೀರಾ ಇಲ್ಲಿಯವರೆಗೂ ಕರೆತರಬಹುದು ಎನಿಸಿರಲಿಲ್ಲ.

'ಮೈಸೂರು ಅಮೆಚ್ಯೂರ್ ನ್ಯಾಚುರಲಿಸ್ಟ್' ಅಥವಾ 'ಎಂಎಎನ್' ೧೯೮೫ರಲ್ಲಿ ಆರಂಭವಾಯಿತು. ಇದು ಕಿರಿಯ ನಿಸರ್ಗ ಪ್ರೇಮಿಗಳು, ಪಕ್ಷೀ ವೀಕ್ಷಕರ ಒಂದು ಸಂಘಟನೆಯಾಗಿತ್ತು. ಇವರು ಮೈಸೂರು ಸುತ್ತಮುತ್ತಲಿನ ಪಕ್ಷಿಗಳ ಮತ್ತು ಸಸ್ಯ ಸಂಪತ್ತುಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುತ್ತಿದ್ದರು. ಜೊತೆಗೆ ಮೈಸೂರಿನಲ್ಲಿ ಪರಿಸರದ ಬಗ್ಗೆ ಜಾಗೃತಿ ಮೂಡಿಸಲು ಪ್ರಯತ್ನಿಸುತ್ತಿದ್ದರು. ಅವರು ಮುಖ್ಯ ಪ್ರವಾಹದಲ್ಲಿ ತಮ್ಮ ತಮ್ಮ ಉದ್ಯೋಗ ಅರಸಿಕೊಳ್ಳುವ ಯತ್ನ ಮಾಡುತ್ತಿದ್ದರೂ ನಿಸರ್ಗದ ಲಯಕ್ಕೆ ಸ್ಪಂದಿಸುವ ತಮ್ಮ ವಿನಮ್ರ ತುಡಿತದ ಜೊತೆ ರಾಜಿಮಾಡಿಕೊಳ್ಳಲಾರರು ಎಂಬ ಬಗ್ಗೆ ಖಾತರಿ ಇತ್ತು.

ಈ ಸುಮಾರಿನಲ್ಲಿಯೇ ನರ್ಮದಾ ಬಚಾವೋ ಆಂದೋಲನ ದೂರ ದೂರದವರೆಗೂ ತನ್ನ ಅಲೆಗಳನ್ನು ಎಬ್ಬಿಸಿತ್ತು. ದಿನೇಶ್ ಈ ಹೋರಾಟದಲ್ಲಿ ಭಾಗಿಯಾಗುವುದನ್ನು ಗಂಭೀರವಾಗಿ ಪರಿಗಣಿಸಿದ. ಈಗ ಇದೇ ರೀತಿ ತೆಹರಿ ಅಣೆಕಟ್ಟಿನ ವಿರುದ್ಧ ನಡೆಯುತ್ತಿದ್ದ ಹೋರಾಟ, ಕೈಗಾ ಅಣುಸ್ಥಾವರದ ಬಗೆಗಿನ ಹೋರಾಟದ ಬಗ್ಗೆಯೂ ಆತನಿಗೆ ಒಲವಿತ್ತು. ಇದೇ ಹೊತ್ತಿನಲ್ಲಿ ರೈತನಾಗಿ ಬದಲಾದ ಜಪಾನಿನ ಸಸ್ಯ ವಿಜ್ಞಾನಿ ಮಸನೊಬ ಫುಕವೋಕಾನ 'ಒಂದು ಹುಲ್ಲಿನ ಕ್ರಾಂತಿ'(One Straw Revolution) ಕೃತಿಯೂ ಆತನನ್ನು ಆಳವಾಗಿ ಅಲ್ಲಾಡಿಸಿತು. ಈ ಎಲ್ಲ ಸೆಳೆತದಿಂದ ದಿನೇಶ್ ಮನಸ್ಸಿನ್ನು ಬಲವಾಗಿ ತಟ್ಟಿತು.

'ನರ್ಮದಾ, ತೆಹರಿ ಮತ್ತು ಕೈಗಾ ಚಳುವಳಿಗೆ ಹೋಗಬೇಕೆನಿಸುವಂತೆ ನನಗೆ ಜಪಾನಿಗೂ ಹೋಗಬೇಕೆನಿಸುತ್ತದೆ. 'ನಾನು' ಹೋಗಲು ಸಾಧ್ಯ. ನೀವು ಎಲ್ಲಿಯೇ ಇದ್ದರೂ ಸಮಸ್ಯೆಯ ಭಾಗವಾಗಿಯೇ ಇರುತ್ತೀರಿ...: ಪೆಟ್ರೋಲ್ ಮತ್ತು ವಿದ್ಯುತ್, ಆಧುನಿಕ ಬದುಕಿನ ಎರಡು ಪ್ರಮುಖ ತಡೆಗಳು...ಇವೆರಡೂ ಇಲ್ಲದಿದ್ದರೆ ಎಲ್ಲವೂ ಸ್ತಬ್ಧವಾಗುತ್ತದೆ. ೧೫ ದಿವಸದ ಮಟ್ಟಿಗೆ ಇದನ್ನು ತೆಗೆಯಿರಿ. ಇಡೀ ವ್ಯವಸ್ಥೆಯೇ ಕುಸಿಯುತ್ತದೆ. ಇದನ್ನು ಪ್ರಶ್ನಿಸಿದ ಎನ್.ಬಿ.ಎ.ನಂತಹ ಚಳುವಳಿ ಬಹಳ ಮಹತ್ವವಾದುದು ಮತ್ತು ಇದನ್ನು ಬೆಂಬಲಿಸಲೇಬೇಕು. ನಮಗೆ ಅಣೆಕಟ್ಟು ಬೇಕಾಗಿಲ್ಲ ಎಂದು ಪರಿಣಾಮಕಾರಿಯಾಗಿ ಹೇಳುವ ಸ್ಥಿತಿಯಲ್ಲಿ ಬಹುತೇಕ ಮಂದಿ ಇಲ್ಲ. ಜಾಗೃತಿ ಮೂಡಿಸುವ ಸಲುವಾಗಿ ನಾವು ಹೆಚ್ಚು ಬರೆಯುವ ಮತ್ತು ಹೆಚ್ಚು ಮುದ್ರಿಸುವ ಪ್ರಕ್ರಿಯೆಯಲ್ಲಿ ಹೆಚ್ಚು ನಾಶಗೊಳಿಸುತ್ತ ಇರುತ್ತೇವೆ. ಇದರ ಜತೆಗೆ ನಮ್ಮ ಬದುಕಿನ ಶೈಲಿಯ ಪ್ರಶ್ನೆಯೂ ಇದೆ.... ಆಗೊಮ್ಮೆ ಈಗೊಮ್ಮೆ ರೈಲಿನಲ್ಲಿ ಹೋಗಿಬರುವುದು

ಇತ್ಯಾದಿ ಸರಿ. ಆದರೆ ನಾವು ತುಂಬಾ ಪ್ರಯಾಣಿಸುತ್ತೇವೆ. ನೀವು ಒಂದು ಸ್ಥಳಕ್ಕೆ ಹೋಗಿ ಅಲ್ಲಿಯೇ ನೆಲೆಗೊಂಡು ಬೇರೆ ರೀತಿಯಲ್ಲಿ ಆ ಪ್ರದೇಶವನ್ನು ಸಾಧ್ಯವಿದ್ದಲ್ಲಿ ಇದೇ ತಿಳುವಳಿಕೆಯನ್ನು ಪಡೆಯಲು ಸಾಧ್ಯವಿದೆ'

ದಿನೇಶ್ ಭೌಗೋಳಿಕವಾಗಿಯಾಗಲೀ ಅಥವಾ ವಿಷಯಗಳ ದೃಷ್ಟಿಯಿಂದಾಗಲೀ ವಿಶಾಲವಾದ ಭೂಮಿಕೆಯಲ್ಲಿ ಕೆಲಸ ಮಾಡಲು ಆಸಕ್ತಿ ತೋರಲಿಲ್ಲ. ಈ ಸುಮಾರಿನಲ್ಲಿಯೇ ೧೯೯೨ರಲ್ಲಿ ಕೊಯಮತ್ತೂರಿನ ಸಮೀಪ ಉಡಮಲ ಪೇಟೆ ಎಂಬ ಸ್ಥಳದಲ್ಲಿ ರಾಮಣ್ಣ ಎಂಬ ಪ್ರಕೃತಿಪ್ರೇಮಿ ಮತ್ತು ಹಿರಿಯ ರೈತ ವ್ಯವಸ್ಥೆ ಮಾಡಿದ್ದ Better living retreat on alternative life styles ಎಂಬ ಕಾರ್ಯಾಗಾರದಲ್ಲಿ ಭಾಗಿಯಾದ್ದರು. ಅಲ್ಲಿ ದಿನೇಶ್ ಬಬ್ಲೂ ಎಂಬ ಉತ್ಸಾಹದಿಂದ ಪುಟಿಯುತ್ತಿದ್ದ ಕಿರಿಯ ರೈತರನ್ನು ಭೇಟಿ ಮಾಡಿದರು. ಆತ ದಿನೇಶನಿಗೆ 'ಟಿಂಬಕ್ಟೂ ಕಲೆಕ್ಟೀವ್' ಪ್ರಯತ್ನದ ಬಗ್ಗೆ ತಿಳಿಸಿದರು. ದಿನೇಶನಿಗೆ ಇದು ತಾನು ಕೆಲಸ ಮಾಡಲು ಸೂಕ್ತ ಸ್ಥಳ ಎನಿಸಿತು. ಆದುದರಿಂದ ಬಬ್ಲೂ ಜತೆ ಟಿಂಬಕ್ಟುವಿನತ್ತ ಹೊರಟ.

ಬಬ್ಲೂ ಗಂಗೂಲಿ ನಿರ್ಮಿಸಿದ ಮಂಚದಲ್ಲಿ ಕುಳಿತ. ಈ ಮನೆಯ ಇನ್ನಿತರ ಗೋಡೆಗಳಂತೆ ಸೂರ್ಯನ ಶಾಖದಿಂದಷ್ಟೇ ಬೇಯಿಸಿದ ಇಟ್ಟಿಗೆಗಳಿಂದ ಆ ಮಂಚವನ್ನು ನಿರ್ಮಿಸಲಾಗಿತ್ತು. ಮರದಕಂಬಗಳು ಗರಿಗಳನ್ನು ಹೆಣೆದು ಮಾಡಿದ ಮೇಲ್ಛಾವಣಿಯನ್ನು ಎತ್ತಿ ಹಿಡಿದಿದ್ದವು. ಅಲ್ಲಲ್ಲಿಯೇ ಇದ್ದ ಇಳಿಜಾರು ಮೇಜಿನ ಮೇಲೆ 'ಟಿಂಬಕ್ಟೂ ಕಲೆಕ್ಟೀವ್'ನ ಲೇಖನ ಸಾಮಗ್ರಿಗಳು ಇದ್ದವು. ಅದರ ಮೇಲೆ ಹೆಮ್ಮೆಯಿಂದ ಈ ಸಂಘಟನೆಯ ಘೋಷವಾಕ್ಯ ಬರೆಯಲಾಗಿತ್ತು. 'Life, we celebrate you'.

ಬಬ್ಲೂಗೆ ದಿನನಿತ್ಯದ ಬದುಕಿನಲ್ಲಿ ಇರುವ ಅಪರಿಮಿತ ಉತ್ಸಾಹವೇ ಎಲ್ಲವನ್ನೂ ಹೇಳುತ್ತಿತ್ತು. ಈ ಘೋಷವಾಕ್ಯ ಪುನರುಚ್ಚರಿಸಬೇಕಾದ ಅಗತ್ಯವೇ ಇರಲಿಲ್ಲ. ಅವನಿಗೆ ಈ ನಂಬಿಕೆಯೇ ಬದುಕೂ ಆಗಿತ್ತು. ಹೀಗಾಗಿ ಅವರಪ್ಪನ ರೀತಿಯಲ್ಲಿ ಇವನು ಕಾರ್ಪೊರೇಟ್ ವಲಯದ ಕೆಲಸಕ್ಕೆ ಸೇರಲಿಲ್ಲ. ಒಂದು ಕಂಪನಿಯನ್ನು ನಡೆಸಿಕೊಂಡು ಹೋಗುವುದಕ್ಕಿಂತ ಅಥವಾ ಬೆಂಗಳೂರು ಕ್ಲಬ್‌ಗೆ ಕುಡಿಯಲು ಸೇರುವುದಕ್ಕಿಂತ ಹೆಚ್ಚಿನದೇನೋ ಬದುಕಿನಲ್ಲಿದೆ ಎನಿಸಿತು. ಆ ಕಾರಣದಿಂದ ಆತ ಅನಂತಪುರ ಜಿಲ್ಲೆಯತ್ತ ಹೊರಟ. ಅಲ್ಲಿ ಒಂದು ಸರ್ಕಾರೇತರ ಸಂಘಟನೆ ಯಂಗ್ ಇಂಡಿಯಾ ಪ್ರಾಜೆಕ್ಟ್ ಮೂಲಕ ಭೂರಹಿತ ಕೃಷಿ ಕಾರ್ಮಿಕರನ್ನು ಸಂಘಟಿಸಲು ತೊಡಗಿದರು.

ಗ್ರಾಮೀಣ ಬಡವರನ್ನು ಸಂಘಟಿಸಿದರಷ್ಟೇ ಸಾಲದು ಎಂದು ಹಲವಾರು ವರ್ಷಗಳ ಅನುಭವದಿಂದ ಬಬ್ಲೂಗೆ ಅನಿಸಿತ್ತು. ಇಂದಿನ ಸಮಾಜದಲ್ಲಿ ವರ್ಗಾಧಾರಿತ ತಿಳುವಳಿಕೆಯ ಅರೆಕೊರೆಗಳ ಬಗ್ಗೆ ಈ ಸಂಘಟನೆಯ ಸಹೋದ್ಯೋಗಿ ಮೇರಿ ಮತ್ತು ಇತರ ಗೆಳೆಯರ ಜೊತೆ ಚರ್ಚಿಸಿದ್ದ. ಕೇವಲ ಸಂಪತ್ತಿನ ವಿತರಣೆ ಮಾತ್ರ ಅಲ್ಲ; ಆ ಸಂಪತ್ತು ಹೇಗೆ ಸೃಷ್ಟಿಯಾಗುತ್ತದೆ, ನಾವು ಅಭಿವೃದ್ಧಿ ಎಂಬುದನ್ನು ಹೇಗೆ ವ್ಯಾಖ್ಯಾನಿಸಿದ್ದೇವೆ ಎಂಬುದೂ ಮುಖ್ಯ. ಇದು ಇನ್ನಿತರ ಪ್ರಶ್ನೆಗಳಿಗೆ ಹಾದಿ ಮಾಡಿಕೊಟ್ಟಿತು.

ಸಾಮಾಜಿಕ ಬದಲಾವಣೆ ತರಲು ನಿಜವಾದ ಜನಾಂದೋಲನವನ್ನು ಹೇಗೆ ಕಟ್ಟುವುದು? ಕೈಗಾರಿಕಾ ಸಮಾಜ, ಈ ಭೂಮಿಯನ್ನು ವಿನಾಶದ ಪ್ರಪಾತಕ್ಕೆ ದೂಡಿದೆ ಎಂಬ ವಾಸ್ತವದ ಜತೆ ವ್ಯವಹರಿಸಬೇಕಾಗುತ್ತದೆ. ದುರಾಸೆಯಿಂದ ಪ್ರೇರಿತವಾದ ಜಾಗತಿಕ ಮಾರುಕಟ್ಟೆಯ ಪರಿಣಾಮವಾಗಿ ನಮ್ಮ ರುಚಿ, ಅಭಿರುಚಿ, ಅಭ್ಯಾಸ, ವಾಸ, ಆಚರಣೆಗಳು ಹೀಗೆ ಎಲ್ಲವೂ ನಿಯಂತ್ರಣಕ್ಕೆ ಒಳಪಟ್ಟಿವೆ. ೧೯೮೦ರ ವೇಳೆಗೆ ಇದು ಪಟ್ಟಣ ಪ್ರದೇಶಕ್ಕೆ ಸೀಮಿತವಾದ ಸಮಸ್ಯೆಯಾಗಿ ಉಳಿದಿರಲಿಲ್ಲ. ಹಲವಾರು ವರ್ಷಗಳಿಂದ ಬಬ್ಲೂ ಇದನ್ನು ಗಮನಿಸಿದ್ದ.

ತಮ್ಮ ಕೃಷಿಭೂಮಿ ನಶಿಸುತ್ತಿರುವುದನ್ನು ಗಮನಿಸಿಯೂ, ಆಕರ್ಷಕ ಬಿತ್ತನೆ ಬೀಜ, ಸಬ್ಸಿಡಿ, ರಾಸಾಯನಿಕಗಳಿಗೆ ಕ್ಯೂ ನಿಂತ ನಮ್ಮ ಮುಂದಿನ ಪೀಳಿಗೆಯಲ್ಲಿ ಸಾಲ ಪಡೆದು, ಸಾಲದೊಳಗೇ ಸಿಲುಕಿ ಬಿಡುವ ಸಣ್ಣ ರೈತರ ಗೋಳನ್ನು ಗಮನಿಸಿದ್ದ. ಜನರು ತಮ್ಮ ಸ್ವಂತ ತಿಳುವಳಿಕೆ, ಸಂಸ್ಕೃತಿಯ ಬಗ್ಗೆ ನಂಬುಗೆ ಕಳಕೊಂಡಿರುವುದನ್ನು ಕಂಡಿದ್ದ. ಈ ತಿಳುವಳಿಕೆ ಶತಶತಮಾನಗಳ ನಿಸರ್ಗದ ಜತೆಗಿನ ಮುಖಾಮುಖಿಯಿಂದ ಹಾದು ಬಂದಿತ್ತು. ಕೇವಲ ಕೆಲವೇ ವರ್ಷಗಳ ಪ್ರಯೋಗಗಳಿಂದ ಸಿದ್ಧವಾದ, ಆದರೆ ಅದರ ಪರಿಣಾಮಗಳೂ ಇನ್ನೂ ಗೊತ್ತಾಗಬೇಕಾದ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ದಾಳಿ ಈ ಗ್ರಾಮೀಣ ಜನರ ಕೌಶಲಗಳನ್ನು ಅಪಮೌಲ್ಯಗೊಳಿಸಿತ್ತು.

ಬಬ್ಲೂ ಮತ್ತು ಮೇರಿ ಇವರು ಮದುವೆಯಾಗಿ ಇನ್ನಿತರ ಗೆಳೆಯರೊಡನೆ ಟಿಂಬಕ್ಟೂ ಕಲೆಕ್ಟೀವನ್ನು ಬೆಳೆಸುವ ಕಲ್ಪನೆ ಹುಟ್ಟುಹಾಕಿದರು. ಇದು ಬದಲಾವಣೆಯ ಕೇಂದ್ರವಾಗುವುದಿದ್ದು, ಅದರಲ್ಲಿ ಅನೇಕ ಪರ್ಯಾಯಗಳನ್ನು ಪ್ರಯತ್ನಿಸಲಾಯಿತು. ಈ ಚಿಂತನೆಗಳನ್ನು ಸ್ಥಳೀಯ ಗ್ರಾಮಸಮುದಾಗಳ ಜೊತೆಗೂ ಹಂಚಿಕೊಳ್ಳಲಾಗುತ್ತದೆ. ಈ ಕಲೆಕ್ಟೀವ್‌ನ ಆಶಯ ಹೀಗಿದೆ:

ನಿಸರ್ಗವನ್ನು ಪೋಷಿಸುತ್ತಾ ತನ್ನ ಅಗತ್ಯಕ್ಕಾಗಿ ಅದನ್ನು ರಕ್ಷಿಸುತ್ತಿರುವ ಸಮುದಾಯ, ಪರ್ಯಾಯವಾದ, ಸುಸ್ಥಿರವಾದ, ವಿಕೇಂದ್ರಿಕೃತವಾದ, ಆತ್ಮಗೌರವವುಳ್ಳ, ಒಂದು ಬದುಕನ್ನು ಪ್ರತ್ಯಕ್ಷೀಕರಿಸಿಕೊಳ್ಳಬಲ್ಲದು.... ಭೂಮಿಯ ಸುಸ್ಥಿತಿಯ ಕುರಿತ ಕಾಳಜಿಯೊಂದಿಗೆ ಅದನ್ನು ಇನ್ನೂ ಉತ್ತಮ ಸ್ಥಿತಿಯಲ್ಲಿ ಮುಂದಿನ ಪೀಳಿಗೆಗೆ ನೀಡುವುದು ನಮ್ಮ ಕರ್ತವ್ಯ. ಈ ಕಾರಣ ಮತ್ತು ಉದ್ದೇಶಗಳಿಗೆ ಪರಿಸರ ನಾಶದಿಂದ ತತ್‌ಕ್ಷಣ ತೊಂದರೆಗೆ ಒಳಗಾಗುವ ಗ್ರಾಮೀಣ ಬಡವರನ್ನು ಸಂಘಟಿಸಬೇಕು. ಅವರು ನಮ್ಮ ನಾಜೂಕಾದ ಪರಿಸರವನ್ನು ರಕ್ಷಿಸುವಂತೆಯೂ, ಅದೇ ವೇಳೆಯಲ್ಲಿ ತಮಗಾಗಿ ಒಂದು ಸುಸ್ಥಿರ ವಿಕೇಂದ್ರಿಕೃತ ಜನಪರ, ಕೃಷಿ, ಆರೋಗ್ಯ, ಶಿಕ್ಷಣ, ವಸತಿ, ಆಹಾರ, ಆಚರಣೆಗಳ ಜೀವನ ಶೈಲಿಯನ್ನು ಕಟ್ಟಿಕೊಳ್ಳುವಂತೆಯೂ ಆಗಬೇಕು.'

ಈ ತುಡಿತವೇ ಆ ಗುಂಪನ್ನು 'ಶಾಶ್ವತ ಸಂಸ್ಕೃತಿ'ಯತ್ತ ಸೆಳೆಯಿತು. 'ನಿಸರ್ಗದ ಹಾಗೂ ಅದರ ನಿರಂತರ ಔದಾರ್ಯದ ಜತೆಗೆ ಒಂದಾಗಿ ಬದುಕುವ ತಾತ್ವಿಕತೆ' ಎಂಬುದು ಇದರ ಅರ್ಥ. ಇದನ್ನು ಅನುಷ್ಠಾನಕ್ಕೆ ತರುವಲ್ಲಿ ಈ ಬರಡು ನೆಲಕ್ಕಿಂತ ಉತ್ತಮವಾದ ಸ್ಥಳ ಬೇರೆ ಯಾವುದು ಇರಲು ಸಾಧ್ಯ? ಅವರು ಏಕಕಾಲದಲ್ಲಿ ಈ ಭೂಮಿಯನ್ನು ಹಾಗೂ ತಮ್ಮನ್ನು ಪುನಶ್ಚೇತನಗೊಳಿಸಿಕೊಳ್ಳುತ್ತಾರೆ.

ಈ 'ಟಿಂಬಕ್ಟು ಕಲೆಕ್ಟಿವ್' ಕೃಷಿ ಮತ್ತು ಅರಣ್ಯದ ನಡುವಿನ ಸಂಪರ್ಕವನ್ನು ಪುನಃ ಪ್ರತಿಷ್ಠಾಪಿಸುತ್ತದೆ. ಇದು ಪ್ರಕೃತಿಯ ಸ್ಥಿತಿ ಚೇತರಿಸಿಕೊಳ್ಳುವ ಗುಣವನ್ನು ಆಧಾರವಾಗಿ ಇಟ್ಟುಕೊಳ್ಳುತ್ತದೆ. ಇದು ನಡೆದದ್ದು ೧೯೯೦ರಲ್ಲಿ. ೧೯೯೨ರಲ್ಲಿ ದಿನೇಶ್ ಬಂದು ಈ ಸಮುದಾಯಕ್ಕೆ ಸೇರುವ ಹೊತ್ತಿಗಾಗಲೇ ಅದು ಗರಿ ಮೂಡಿಸಿಕೊಂಡಿತ್ತು. ಈ ಸಮುದಾಯ ಬರಡಾದ ಒಣ ಭೂಮಿಗೆ ಪುನಶ್ಚೇತನ ನೀಡಲು ಕೈಕೈ ಹಿಡಿದು ಸಾಗಿತ್ತು. ಅವರು ಎರಡು ಕೈ ಪಂಪುಗಳನ್ನು ಜೋಡಿಸಿಕೊಂಡಿದ್ದರು ಮತ್ತು ತೀರಾ ಸರಳವಾದ ಭೂಮಿ ಮತ್ತು ಜಲಸಂರಕ್ಷಣ ತಂತ್ರಗಳನ್ನು ಅಳವಡಿಸಿದ್ದರು.

ದನಕರುಗಳು ಮೇಯದಂತೆ ನೋಡಿಕೊಳ್ಳುವಿಕೆ, ಮಳೆಗಾಲದಲ್ಲಿ ಬೀಳುವ ನೀರು ಹರಿದು ಹೋಗದಂತೆ ಮತ್ತು ಭೂಮಿಯನ್ನು ಕೊಚ್ಚದಂತೆ, ಕಲ್ಲಿನ ತಡೆಯನ್ನು ಹಾಕುವಿಕೆ ಮತ್ತು ಭೂ ಸವಕಳಿ ತಡೆಯುವ ಕೆಲವು ವಿಶಿಷ್ಟ ಸಸ್ಯಗಳನ್ನು ಅಂಚುಗಳಲ್ಲಿ ಹಾಕುವ ಮೂಲಕ ಒಂದು ಸಹಕಾರಿ ವಾತಾವರಣ ನಿರ್ಮಿಸಿದ್ದರು. ಕೇವಲ ಸಾವಯವ ಗೊಬ್ಬರವನ್ನೇ ಬಳಸಲಾಗುತ್ತಿತ್ತು. ಪ್ರಕೃತಿ ತಾಯಿಯ ಚಿಕಿತ್ಸಾಶಕ್ತಿಯ ಬಗ್ಗೆ ಈ ಟಿಂಬಕ್ಟು ಸಮುದಾಯಕ್ಕೆ ಇದ್ದ ಶ್ರದ್ಧೆ ಮತ್ತು ವಿಶ್ವಾಸ ನಿಜಕ್ಕೂ ಪ್ರತಿಫಲ ನೀಡಿತು. ಬಹಳ ಕಡಿಮೆ ಅವಧಿಯಲ್ಲಿ ಅಂತರ್ಜಲದ ಮಟ್ಟ ಏರಿತು. ಪ್ರಾಣಿಪಕ್ಷಿಗಳ ಸಂಖ್ಯೆ ಹೆಚ್ಚಿತು. ಮೊಳಕೆಯೊಡೆಯುತ್ತಿರುವ ಹಸಿರನ್ನು ಕಂಡ ಹಳ್ಳಿಗರೂ ತಮ್ಮಲ್ಲಿಯ ಪೊದರುಗಳನ್ನು ರಕ್ಷಿಸತೊಡಗಿದರು. ಈ ವಿಧಾನಗಳಿಂದ ಗ್ರಾಮಸ್ಥರು ತಮ್ಮ ಮೇವು ಮತ್ತು ಉರುವಲಿನ ಸಮಸ್ಯೆಗಳನ್ನು ನೀಗಿಕೊಳ್ಳಬಹುದು ಎಂಬುದನ್ನು 'ಟಿಂಬಕ್ಟು' ಸಮುದಾಯ ಸಾಧಿಸಿ ತೋರಿಸಿತು.

ಹೊಸ ಆವಿಷ್ಕಾರದ ಪಯಣದಲ್ಲಿ ಒಲವು ಇರಿಸಿಕೊಂಡವರನ್ನು ಸ್ವಾಗತಿಸಲು ಒಂದು ದೊಡ್ಡ ಸ್ವಾಗತದ ಚಿಹ್ನೆಯನ್ನು ಹಾಕಲಾಗಿತ್ತು. ಪ್ರತಿ ವರುಷ ಬಿಡುವಿನ ಸಮಯ ಕಳೆಯಲು ಬರುವವರಿಗೆ, ಬೇರೆಡೆ ಇದೇ ರೀತಿಯ ಕೆಲಸ ಮಾಡುವವರಿಗೆ ಮತ್ತು ಟಿಂಬಕ್ಟು ಪರಿಸರದ ವಾತಾವರಣ ಸವಿಯಲು ಬರುವವರಿಗೆ ಅನುಕೂಲವಾಗಲಿ ಎಂದು ಈ ಬೋರ್ಡನ್ನು ಹಾಕಲಾಗಿತ್ತು. ಇಲ್ಲಿ ಜೀವಿಗಳಿಗೆ ಹಾನಿಮಾಡದೇ ಏನು ಬೇಕಾದರೂ ಮಾಡಬಹುದು ಎಂಬ ನಿಯಮ ಮಾತ್ರ ಇತ್ತು. ದಿನೇಶ್ ಇಲ್ಲಿಯೇ ನಿಲ್ಲಲು ಮನಸ್ಸು ಮಾಡಿದ್ದಕ್ಕೆ ಇದೂ ಒಂದು ಕಾರಣ.

ನಿಮ್ಮ ಅಗತ್ಯಗಳನ್ನು ಈಡೇರಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ನಿಮ್ಮ ಸುತ್ತಲಿನ ಪರಿಸರಕ್ಕೆ ದೊಡ್ಡ ಆಘಾತ ಮಾಡದೇ ಇರುವುದು ಅಥವಾ ಅಲ್ಲಿ ಗೊಂದಲ ಮಾಡದೇ ಇರುವುದು ಅಥವಾ ನಿಮ್ಮ ದೃಷ್ಟಿಯಾಚೆಗಿನ ಪರಿಸರದಲ್ಲಿಯೂ ಇದನ್ನು ಮಾಡದೇ ಇರುವುದು ಮೊದಲನೆಯ ಷರತ್ತಾಗಿತ್ತು. ಇದು ಇನ್ನಿತರ ಶರತ್ತುಗಳಿಗೆ ಹಾದಿ ಮಾಡಿಕೊಡುತ್ತದೆ. ಆಗ ನಿಮ್ಮ ಮೂಲಭೂತ ಅಗತ್ಯಗಳು ಏನು ಎಂಬುದರ ಬಗ್ಗೆ ಆಲೋಚಿಸಬೇಕಾಗುತ್ತದೆ. ಒಂದು ಕಾರು ನಡೆಸುವಾಗ ಇಲ್ಲವೇ ಮೋಟಾರ್ ಸೈಕಲ್ ನಡೆಸುವಾಗ ನನಗೆ ತೀರಾ ಮುಜುಗರವಾಗುತ್ತದೆ. ನಿಮಗೆ ನೀವೇ ಈ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾಗುತ್ತದೆ, ಆತ್ಮವಿಮರ್ಶೆ

ಮಾಡಿಕೊಳ್ಳಬೇಕಾಗುತ್ತದೆ.... ಆಗ ನೀವು ಸ್ವರಾಜ್ಯದ ಬಳಿ ಇರುತ್ತೀರಿ. ನೀವು ಬೌದ್ಧಿಕ ಅರ್ಥದಲ್ಲಿ ಅಲ್ಲದಿದ್ದರೂ, ಅಂತಿಮವಾಗಿ ನೀವು ಗಾಂಧಿಯೊಡನೆ ಸಮೀಕರಿಸಿಕೊಳ್ಳುತ್ತೀರಿ. ನೀವು ಇದನ್ನು ಗಾಂಧೀವಾದ ಎಂದೂ 'ಗಯಾ ಹೈಪಾತೀಸಿಸ್' ಎಂದೋ ಕರೆಯಬಹುದು. ವಾಸ್ತವವಾಗಿ ಇದರಲ್ಲಿ ಯಾವುದೇ 'ಇಸಂ'ಗಳೂ ಇಲ್ಲ.

ನಮ್ಮಲ್ಲಿ ಕೆಲವರು ಪ್ರವಾಹದ ವಿರುದ್ಧ ಈಜುವುದರಲ್ಲಿ ತರಬೇತಿ ಪಡೆದಿದ್ದೇವೆ. ಈ ಕೆಲಸದಲ್ಲಿ ಪಾಲುಗೊಳ್ಳುತ್ತಿರುವವರು, ಎಸ್.ಬಿ.ಎ.ಯಲ್ಲಿಯಾಗಲಿ, ತೆಹರಿ ಚಳುವಳಿಯಲ್ಲಿಯಾಗಲೀ ಇರಲೇಬೇಕಿಲ್ಲ. ಬೇರೆ ಬೇರೆ ಸ್ಥಳಗಳಲ್ಲಿ ಇರುತ್ತಾರೆ. ಇನ್ನು ಕೆಲವರು ಇದನ್ನು ಪ್ರಶ್ನಿಸುವವರೂ ಇದ್ದಾರೆ. ಈ ರೀತಿ ಪ್ರಶ್ನಿಸುವುದೂ ಕೂಡಾ ಬಹು ಮಹತ್ವದ ಬದಲಾವಣೆಯೇ.

ದಿನೇಶ್ ತನ್ನ ಕಾಲೇಜು ದಿವಸಗಳಿಂದಲೂ ಗಾಂಧಿಯನ್ನು ಓದಬಯಸಿದ್ದ. ಟಿಂಬಕ್ಟುನಲ್ಲಿ ನೆಲೆನಿಂತ ಮೇಲೆ ಗಾಂಧೀಜಿಯ ಬರವಣಿಗೆಯನ್ನು ಓದಿದ. ತನ್ನ ಚಿಂತನೆ ಗಾಂಧೀ ಚಿಂತನೆಯ ಜತೆ ಸಾಮ್ಯ ಇರುವುದನ್ನು ಕಂಡುಕೊಂಡ. ಈ ಎಲ್ಲದರಲ್ಲಿ ಚರಖಾ ಹೇಗೆ ಹೊಂದಿಕೊಳ್ಳುತ್ತದೆ? ನೀವೇ ಏಕೆ ನೂಲಬೇಕು? ಅದು ತೋರಿಸಿಕೊಡುವುದು ಏನನ್ನು? ದಿನೇಶ್ ಹೇಳುತ್ತಾನೆ:

'ಸಾಂಪ್ರದಾಯಿಕ ವಿಜ್ಞಾನ ಅಧಿವೇಶನದಲ್ಲಿ ನಮಗೆ ಅಗತ್ಯವಿರುವ ಹತ್ತಿಯ ತಳಿಗಳನ್ನು ಪ್ರೋತ್ಸಾಹಿಸುವ ಬಗ್ಗೆ, ಪುನರುಜ್ಜೀವನಗೊಳಿಸುವ ಬಗ್ಗೆ ಬಹಳ ಚರ್ಚೆಗಳು ನಡೆದವು. ನಾವೇ ನೂಲುವುದರಿಂದ ಹತ್ತಿಯ ಬೇರೆ ಬೇರೆ ತಳಿಗಳ ವ್ಯತ್ಯಾಸ ತಿಳಿಯುತ್ತದೆ. ಬೇರೆಯದಕ್ಕಿಂತ ಸುಲಭವೋ ಕಷ್ಟವೋ ಎಂಬುದೂ ತಿಳಿಯುತ್ತದೆ. ಇದರ ಜತೆ ಈ ನೂಲುವಿಕೆಗೆ ಒಂದು ಆಧ್ಯಾತ್ಮಿಕ ಆಯಾಮವೂ ಇರಬಹುದು..... ಗಾಂಧೀಜಿಯವರ ದೃಷ್ಟಿಯಲ್ಲಿ ನೂಲುವಿಕೆ ಎಂದರೆ ಏನು ಎಂಬುದು ನನಗೆ ಗೊತ್ತಿಲ್ಲ. ಅದನ್ನು ಅವರು ಏಕೆ ಮಾಡುತ್ತಿದ್ದರು ಎಂಬುದೂ ಗೊತ್ತಿಲ್ಲ. ಆಹಾರ ಮತ್ತು ಬಟ್ಟೆ ಮನುಷ್ಯನ ಎರಡು ಪ್ರಮುಖ ಮೂಲಭೂತ ಅಗತ್ಯಗಳು ಎಂಬುದು ನನಗೆ ಗೊತ್ತು. ಇವು ಆತನ ಜೀವನ ಶೈಲಿಯನ್ನು ಪ್ರತಿಬಿಂಬಿಸುತ್ತದೆ.

ಟಿಂಬಕ್ಟು ಸಮುದಾಯದಲ್ಲಿ ಕೇವಲ ಭೂಮಿ ಮತ್ತು ಸಸ್ಯವನ್ನು ಮಾತ್ರ ಪೋಷಿಸುತ್ತಿರಲಿಲ್ಲ. ಅನೇಕ ಅನ್ವೇಷಣಾ ಪಯಣಗಳಿಗೂ ಬೆಂಬಲ ಸಿಗುತ್ತಿತ್ತು. ಬಬ್ಲೂಗೆ ಈ ನೆಲದಲ್ಲಿ ಇದ್ದು, ಅದನ್ನು ಪೋಷಿಸುವ ಆಶೆ ಇದ್ದಂತೆಯೇ ತಾನು ಇದಕ್ಕಿಂತಲೂ ವಿಸ್ತಾರವಾದ ಚಳುವಳಿಯ ಭಾಗವಾಗಿದ್ದೇನೆ ಎಂಬ ಅಭಿಪ್ರಾಯ ಬಂದಿತ್ತು. ಈಗ ಬಳಕೆಯಲ್ಲಿರುವ ಅರ್ಥದಲ್ಲಿ ತಾನು ಚಳುವಳಿಗಾರ ಎಂಬುದನ್ನು ಅರಿಯತೊಡಗಿದ. ತಾನು ಒಬ್ಬ ಚಿಕಿತ್ಸಕ ಇರಬಹುದು ಎಂದೂ ಅನಿಸಿತು. ತನ್ನ ಮನಸ್ಸಿನ ಆಳದಲ್ಲಿ ನಡೆಯುತ್ತಿದ್ದ ಪ್ರಕ್ರಿಯೆಯ ಭಾಗವಾಗಿ ಈ ಅನಿಸಿಕೆ ಉಂಟಾಗಿತ್ತು.

'ಕೆಲವು ವರ್ಷಗಳ ಹಿಂದೆ ಕಟ್ಟಾ ಮಾರ್ಕ್ಸ್‌ವಾದಿ ಪ್ರೇಕ್ಷಕರೊಡನೆ ಮಾತನಾಡುತ್ತ, ಅಹಿಂಸೆಯನ್ನು ತಂತ್ರವನ್ನಾಗಿ ಬಳಸುವುದನ್ನು ನಿಲ್ಲಿಸಲು ಇದು ಸಕಾಲ ಎಂದು ಹೇಳಿದ್ದೆ.

ಇದು ಒಂದು ಜೀವನ ಶೈಲಿ. ನಾವು ಮೂಲತಃ ಅಹಿಂಸಾ ಪ್ರವೃತ್ತಿಯವರು. ಗಾಂಧಿ ಸತ್ತಿಲ್ಲ ಎಂಬುದನ್ನು ವಿಶಾಲವರ್ಗಕ್ಕೆ ತಿಳಿಸಿಕೊಡುವುದು ಬಹುಮುಖ್ಯವಾದ ಕೆಲಸ. ಈ ಗಾಂಧಿ ನಮ್ಮ ಅಂತರ್ಗತ ಭಾಗವೇ ಆಗಿದ್ದಾರೆ. ಬುದ್ಧ, ಮಹಾವೀರ, ವಿವೇಕಾನಂದರಿಂದ ಗಾಂಧಿಯವರೆಗೆ ಅವರು ಬಂದ ತೀರ್ಮಾನಗಳಿಗೆ ನಾವೂ ಬರಬೇಕಾಗುತ್ತದೆ. ನಾವು ಪಾಶ್ಚಾತ್ಯರಿಂದ ಕಡ ಪಡೆಯುವುದನ್ನು ನಿಲ್ಲಿಸಬೇಕಾಗಿದೆ'.

'ನಮ್ಮಂತಹ ಜನ ಗಾಂಧೀವಾದಿಗಳಲ್ಲ. ಮತಧರ್ಮ ಕುರಿತ ಗಾಂಧಿಯ ಅಭಿಪ್ರಾಯಗಳನ್ನು ನಾವು ಒಪ್ಪಿಕೊಳ್ಳುವುದಿಲ್ಲ. ಆದರೂ ನಮ್ಮಲ್ಲಿ ಅನೇಕ ಸಾಮ್ಯಗಳಿವೆ. ಸರ್ವೋದಯದಲ್ಲಿಯಾಗಲೀ ಗಾಂಧಿ ಕೆಲಸದಲ್ಲಿಯಾಗಲೀ ಭಾಗವಹಿಸದೇ ನಾವೇ ಇಲ್ಲಿಗೆ ಬಂದು ತಲುಪಿದ್ದೇವೆ. ನಮ್ಮ ಸ್ವಇಚ್ಛೆ ಮತ್ತು ಸಂಕಲ್ಪದಿಂದ ಬಂದಿದ್ದೇವೆ. ನಿಜವಾದ ಭಾರತೀಯನಾಗುವುದೇ ಗಾಂಧಿತತ್ವ ಎಂಬುದು ನನ್ನ ಅಭಿಪ್ರಾಯ. ಇದು ನಮ್ಮ ಶಕ್ತಿ ಕೂಡಾ'.

'ಬುದ್ಧ ಮತ್ತು ಮಹಾವೀರರೂ ಇದರಿಂದಲೇ ಚೈತನ್ಯ ಪಡೆದರು. ಇದು ಜನರನ್ನು ಸೆಳೆಯುತ್ತದೆ. ಇಂದು ಅದರತ್ತ ನಾವು ಒಲವು ತೋರಿಸುತ್ತಿದ್ದೇವೆ. ನಾವು ಪ್ರಯೋಗ ಮಾಡದೆಯೂ ಗಾಂಧಿ ಚಿಂತನೆಯ ಸಮೀಪ ಬಂದಿದ್ದೇವೆ'.

ಈ ರೀತಿಯ ಭಾವನೆ ವರುಷಗಳು ಕಳೆಯುತ್ತಿರುವಂತೆ ತೀವ್ರವಾಗುತ್ತ ಹೋಯಿತು. ಸ್ಥಳೀಯ ಅರ್ಥವ್ಯವಸ್ಥೆ ಹೆಚ್ಚು ಹೆಚ್ಚು ದೂರದ ಶಕ್ತಿಯ ಅಧೀನಕ್ಕೆ ಬರುತ್ತಿರುವಂತೆ ಶಾಶ್ವತ ಅರ್ಥವ್ಯವಸ್ಥೆಯ ಬಗ್ಗೆ ತುಡಿತ, ಹೆಚ್ಚಿನ ತುರ್ತಿನದಾಗುತ್ತ ಹೋಯಿತು. ತಮ್ಮ ಸುತ್ತಲಿನ ರೈತರು ನೆಲಗಡಲೆಯಲ್ಲಿ ಅತಿ ಹೆಚ್ಚಿನ ಇಳುವರಿ ತೆಗೆಯಲು ತಮ್ಮ ಭೂಮಿಗೆ ಕೃತಕ ರಾಸಾಯನಿಕಗಳನ್ನು ಲೇಪಿಸುತ್ತಿರುವುದನ್ನು ಈ ಗೆಳೆಯರು ಗಮನಿಸುತ್ತಿದ್ದರು. ಕಡಲೇಕಾಯಿ, ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿತ್ತು. ದೂರದ ಎಲ್ಲಿಯೋ ಬೃಹತ್ ಪ್ರಮಾಣದ ಎಣ್ಣೆಯ ಉತ್ಪಾದನೆ ಮತ್ತು ಇನ್ನಿತರ ಉತ್ಪನ್ನಗಳ ತಯಾರಿಕೆಗೆ ಈ ನೆಲಗಡಲೆ ಬಳಕೆಯಾಗುತ್ತಿತ್ತು. ಅಲ್ಪಾವಧಿಗೆ ರೈತರಿಗೆ ಹೆಚ್ಚಿನ ಹಣ ಸಿಕ್ಕುತ್ತಿತ್ತು. ದಿನಬಳಕೆಯ ವಸ್ತುಗಳ ಖರೀದಿಯೂ ಹೆಚ್ಚಿತು. ಆದರೆ ಆ ಕುಟುಂಬಗಳ ಪೌಷ್ಟಿಕ ಆಹಾರ ಮಟ್ಟ ಏರಲಿಲ್ಲ.

'ಈ ಪ್ರಕ್ರಿಯೆಯನ್ನು ನಿಲ್ಲಿಸಲು ನಾವು ಯಾವ ಕ್ರಮ ತೆಗೆದುಕೊಳ್ಳಬೇಕು?' ಈ ಪ್ರಶ್ನೆ ಬಬ್ಲೂನನ್ನು ಕಾಡಿತು. ಕುಮಾರಪ್ಪ, ಮಾತಾರ್ ತಾಲ್ಲೂಕಿನಲ್ಲಿ ನಡೆಸಿದ ಸರ್ವೆಯಂತೆ ಅನಂತಪುರದಲ್ಲಿಯೂ ನಡೆಸಲು ಒಬ್ಬ ಯುವಕನ ಅಗತ್ಯವಿದೆ ಎಂದು ಬಬ್ಲೂಗೆ ಅನಿಸಿತು. ಇಂತಹದೊಂದು ಸರ್ವೆ ಬದುಕಿನ ಗುಣಮಟ್ಟ ಮತ್ತು ಜನರ ಆರೋಗ್ಯವನ್ನು ಹೆಚ್ಚಿಸುವ ಉತ್ಪಾದನಾ ಕ್ರಮ ಮತ್ತು ಸಂಪನ್ಮೂಲಗಳಿಗೆ ಪ್ರಾಶಸ್ತ್ಯ ನೀಡುವ ಸ್ಥಳೀಯ ಕ್ರಮವನ್ನು ಪ್ರೋತ್ಸಾಹಿಸುವ ಆರಂಭದ ಹೆಜ್ಜೆಯಾಗಬಹುದು. ಈ ಟಿಂಬಕ್ಟು ಸಮುದಾಯ ತನ್ನ ಸುತ್ತಲಿನ ಗ್ರಾಮಗಳಲ್ಲಿ, ಸುಮಾರು ೪ ಸಾವಿರ ಎಕರೆ ಪ್ರದೇಶದಲ್ಲಿ ಅರಣ್ಯೀಕರಣ ಯೋಜನೆಯ ಪ್ರಕ್ರಿಯೆಯನ್ನು ಆರಂಭಿಸಿತು. ಇದರ ಜತೆಗೆ ೩೦ ವಿದ್ಯಾರ್ಥಿಗಳುಳ್ಳ ಒಂದು ಪರ್ಯಾಯ ಶಾಲೆಯನ್ನು ನಡೆಸುತ್ತಿತ್ತು.

'ಟಿಂಬಕ್ಟೂ' ಸರಕಾರಿ ಅನುದಾನ ಮತ್ತು ದಾನದ ಹಣದ ಮೇಲಿನ ಅವಲಂಬನೆಯಿಂದ ಮುಕ್ತವಾಗಬೇಕೆಂದು ಬಬ್ಲೂ ಬಯಸಿದ್ದ. ಇದು ಲಾಭವನ್ನು ಮಾಡಬೇಕು. ಲಾಭವೇ ನಮ್ಮ ಮೇಲೆ ಸವಾರಿ ಮಾಡುತ್ತಿರುವ ಈ ದಿವಸಗಳಲ್ಲಿ 'ಟಿಂಬಕ್ಟು' ಒಂದು ಸಶಕ್ತ ಮತ್ತು ಆಕರ್ಷಣೀಯ ಉದಾಹರಣೆಯಾಗುವುದರ ಅಗತ್ಯವಿತ್ತು.

ಹೀಗಾಗದೇ ಹೋದಲ್ಲಿ ಯಾರಿಗೂ ತೊಂದರೆ ಕೊಡದ ಆದರ್ಶವಾದಿಗಳು ಎಂದೋ, ಅಥವಾ ಅರೆಹುಚ್ಚರು ಎಂದೋ ಸುತ್ತಲಿನ ಜನ ತೀರ್ಮಾನಿಸಿ ಬಿಡುತ್ತಾರೆ. ಈ ನಡುವೆ, ಇದೇ ರೀತಿ ಕಾರ್ಯನಿರ್ವಹಿಸುತ್ತಿರುವ ಸಹಪ್ರಯಾಣಿಕರು ತಮ್ಮನ್ನು ತಾವು ಈ ಕುಟುಂಬದ ವಿಸ್ತರಣೆ ಎಂದೂ ಭಾವಿಸುತ್ತಾರೆ. ಚೆನ್ನಕೋತಪಲ್ಲಿಯ ಈ ಪ್ರಯತ್ನದಿಂದ ತಾವು ಅಸ್ತಿತ್ವವನ್ನು ಪಡೆದವರಲ್ಲಿ ಶಂಭುಪ್ರಸಾದ್ ಕೂಡಾ ಒಬ್ಬರು. ಇವರು ಎಂಜಿನಿಯರ್ ಆಗಿದ್ದವರು. ಆಂಧ್ರದ ಕುಶಲಕರ್ಮಿಗಳ ಸಂಗಡ ಕೆಲಸ ಮಾಡುವ ಕಾಯಕವನ್ನು ಆಯ್ಕೆ ಮಾಡಿಕೊಂಡರು. ಶಂಭು, ಟಿಂಬಕ್ಟೂ ಕಲೆಕ್ಟಿವ್‌ವನ್ನು ನೋಡುವುದು ಹೀಗೆ:

'..... ಅಹಮದಾಬಾದಿನಲ್ಲಿ ಗಾಂಧಿ ಕಂಡ ಆಶ್ರಮದಂತೆ ಇದೊಂದು ಆಧುನಿಕ ಆಶ್ರಮ. ಗಾಂಧೀಜಿಗೆ ಸತ್ಯಾಗ್ರಹ ಆಶ್ರಮ, ಪ್ರಾರ್ಥನೆ ಮತ್ತು ವೈಜ್ಞಾನಿಕ ಪ್ರಯೋಗಗಳಿಗೆ ತಾಣವಾಗಿತ್ತು. ಒಂದು ದೃಷ್ಟಿಯಿಂದ ಆಶ್ರಮಗಳೇ ಭಾರತದ ಸಮಾಜವನ್ನು ಪುನಃರೂಪಿಸಲು ಇರುವ ಕೇಂದ್ರಗಳು. ಅವರು ಹೇಗೆ ಧರ್ಮವನ್ನು ಶಾಸ್ತ್ರಗಳಿಂದ ಮುಕ್ತಗೊಳಿಸಿದರೋ ಅದೇ ರೀತಿ, ಸಾಂಪ್ರದಾಯಿಕ ಅಧಿಕಾರ ಕೇಂದ್ರಗಳಾಚೆ ಸಮುದಾಯ ಜೀವನವನ್ನು ಬೆಳೆಸಲು ಮತ್ತು ಅಲ್ಲಿ ಅವರ ಕನಸಿನ ಭಾರತಕ್ಕೆ ಆಕಾರ ಕೊಡುವ ಯತ್ನ ಮಾಡಿದರು. ಇವು ಸಮುದಾಯದ ಕೆಲಸ ಎಂದರೆ ಏನು ಎಂಬುದನ್ನು ವ್ಯಾಖ್ಯೆಗೆ ಒಳಪಡಿಸಿದ ಸ್ಥಳಗಳು. ಆಶ್ರಮವಿಲ್ಲದೇ ಸತ್ಯಾಗ್ರಹವನ್ನು, ಮಗನ್‌ಲಾಲ್ ಗಾಂಧಿಯುವರ ಪಾತ್ರವನ್ನು ಹೊರತುಪಡಿಸಿ ಖಾದಿ ಚಳುವಳಿಯನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಇಂದು ಕೂಡಾ ಸ್ವದೇಶಿ ಚಳುವಳಿಗೆ ಇಂತಹ ಆಶ್ರಮಗಳು ಮತ್ತು ಮಗನ್‌ಲಾಲ್‌ರಂತಹವರ ಅಗತ್ಯವಿದೆ.

ದಿನೇಶ್‌ರಂತಹವರಲ್ಲಿ ಮಗನ್‌ಲಾಲರನ್ನು ಕಾಣಬಹುದು. ಟಿಂಬಕ್ಟೂ ಬಗ್ಗೆ ಬಬ್ಲೂಗೆ ಒಂದು ಕಾಣ್ಕೆ ಅಥವಾ ದರ್ಶನ ಇದ್ದರೆ, ದಿನೇಶ್ ಅದರ ವಿವರಗಳನ್ನು ರೂಪಿಸುತ್ತಿದ್ದ. ಆಲ್ಬರ್ಟ್ ಹೋವಾರ್ಡ್ ಹೇಳಿದ ಮಾತನ್ನು ಅನುಸರಿಸುತ್ತಿದ್ದ. 'ಹೊಸ ಸಂಶೋಧಕ/ ವಿಜ್ಞಾನಿ ತನ್ನ ಸಂದೇಶವನ್ನು ಭೂಮಿಯಲ್ಲಿ ಬರೆಯುತ್ತಾನೆ' ಎಂದು ತಮ್ಮ ಕೃತಿ 'ಅಗ್ರಿಕಲ್ಚರಲ್ ಟೆಸ್ಟಾಮೆಂಟ್'ನಲ್ಲಿ ಹೇಳಿದ್ದರು. ದಿನೇಶ್, ವಿಶ್ರಾಂತಿ ಇಲ್ಲದೇ ಬಿತ್ತನೆ ಬೀಜ, ಕಳೆಗಿಡಗಳನ್ನು ಹತ್ತಿರದ ಹಳ್ಳಗಳಿಂದ ಸಂಗ್ರಹಿಸುತ್ತಿದ್ದುದನ್ನು ನಾನು ನೋಡಿದ್ದೇನೆ. ಆತ ಈ ಸಸ್ಯಗಳ ಸಸ್ಯಶಾಸ್ತ್ರೀಯ ಹೆಸರನ್ನು ಮತ್ತು ಜನಬಳಕೆಯ ಹೆಸರನ್ನು ಕಲಿಯುತ್ತಿದ್ದ. ಬೇರೆಯವರೂ ಇದನ್ನು ಮಾಡಲು ಪ್ರೋತ್ಸಾಹಿಸುತ್ತಿದ್ದ. ಇದರ ಜತೆಗೇ, ಎರೆಹುಳು ಗೊಬ್ಬರ ಮಾಡುವ ವಿಚಾರ, ಟ್ರೆಂಚ್‌ಗಳನ್ನು ನಿರ್ಮಿಸುವ ಬಗ್ಗೆ, ಸುಣ್ಣದ ಗಾರೆ ಮಾಡುವ ವಿವರಗಳನ್ನು ಪಟ್ಟಿ ಮಾಡುತ್ತಿದ್ದ. ಇಂದು ಸ್ವದೇಶಿ ಚಳುನಳಿಗೆ ದಿನೇಶರಂತಹವರು ಬೇಕಾಗಿದ್ದಾರೆ.

ಇಂದು ಸ್ವದೇಶಿ ಚಳುವಳಿ, ಸಮಾಜದ ಅಂಚಿನಲ್ಲಿರುವ ಶ್ರೀಸಾಮಾನ್ಯ ಮತ್ತು ಇನ್ನಿತರ ಶ್ರೀಸಾಮಾನ್ಯನ ಜತೆಗೆ ಸಂಪರ್ಕ ಕಲ್ಪಿಸುತ್ತಿದೆ. 'ಸ್ವದೇಶಿ' ಎಂದರೆ ಸಾರ್ವಜನಿಕ ವೇದಿಕೆ ನಿರ್ಮಿಸುವುದು. ಈ ಸಾರ್ವಜನಿಕ ವೇದಿಕೆಯಲ್ಲಿ ಸಾಮಾನ್ಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸಲಾಗುತ್ತದೆ. ಸಾಮುದಾಯಿಕ ಮೌಲ್ಯಗಳು ಸವೆಯುತ್ತಿರುವುದನ್ನು ತಡೆಯಲಾಗುತ್ತದೆ. ಜನರ ಸಂಶೋಧನಾತ್ಮಕ ಮತ್ತು ಕಾರ್ಯಕ್ಕೆ ತೊಡಗುವ ಶಕ್ತಿಗೆ ಪುನಶ್ಚೇತನ ಕೊಡಲಾಗುತ್ತದೆ. ಈ ರೀತಿ ಕನಸು ಕಾಣುವ ಸಾರ್ವಜನಿಕ ಸ್ಥಳಗಳಿಗೆ ಈ ಸ್ವದೇಶಿ ಚಳುವಳಿ ಅನುವು ಮಾಡಿಕೊಡುತ್ತದೆ. ಇಲ್ಲಿ ಬದಲಾವಣೆಯ ಸವಾಲುಗಳನ್ನು ಸ್ವೀಕರಿಸಲಾಗುತ್ತದೆ. ಏಕಸಂಸ್ಕೃತಿಯು ಕನಸು, ಬಯಕೆ, ಆಶೆಗಳಿಗೆ ಸವಾಲು ಒಡ್ಡುತ್ತಿದೆ. ಮುಖ್ಯವಾಹಿನಿಯ ಸಂಸ್ಕೃತಿಯಿಂದ ಆಚೆ ಆಶ್ರಯ ಪಡೆಯುವ ನಮ್ಮಂತಹವರು 'ಚಿಂತಿಸಲು, ವಿರಮಿಸಲು, ಪುನರವಲೋಕಿಸಲು, ಪುನಃಭೇಟಿ ನೀಡಲು' ಈ ಸ್ವದೇಶಿ ಚಳುವಳಿ ವೇದಿಕೆ ಒದಗಿಸುತ್ತದೆ.

ವೆಂಕಟರಾಮಾಪುರದಲ್ಲಿ ಸ್ವದೇಶಿ

ವೆಂಕಟರಾಮಾಪುರಂನಲ್ಲಿದ್ದ ಮಾವಿನ ತೋಪಿನಲ್ಲಿ 'ಸ್ವದೇಶಿ' ಕುರಿತ ಸಭೆ ನಡೆಯುತ್ತಿತ್ತು. ಬೇರೆ ಬೇರೆ ರೀತಿಯ ಜನರು ಎರಡು ಸಾಲುಗಳಲ್ಲಿ ವೃತ್ತಾಕಾರವಾಗಿ ಮಾವಿನ ಮರದ ನೆರಳಿನ ಔದಾರ್ಯದಲ್ಲಿ ಕುಳಿತಿದ್ದರು. ದೊಡ್ಡ ಪಟ್ಟಣಗಳಿಂದ ಬಂದ ಕೆಲವು ಯುವಕರೂ ಇದ್ದರು. ಅವರು ತಮ್ಮ ಬದುಕಿಗೆ ಉತ್ತಮತರವಾದ ಉದ್ದೇಶಗಳನ್ನು ಹುಡುಕುತ್ತಿದ್ದರು. ಅವರಲ್ಲಿ ದಲಿತ ಸಂಘಟನೆಗಳ ಕಾರ್ಯಕರ್ತರು ಹಾಗೂ ಬೇರೆ ಬೇರೆ ರೀತಿಯ ಅಭಿವೃದ್ಧಿ ಯೋಜನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರೇತರ ಸಂಘಟನೆಗಳ ಕಾರ್ಯಕರ್ತರು ಇದ್ದರು. ಅವರ ನಡುವೆ ಹೈದರಾಬಾದಿನಿಂದ ಕಾರಿನಲ್ಲಿ ಬಂದಿದ್ದ, ಈ ವಿಷಯದಲ್ಲಿ ಕಾಳಜಿ ಇದ್ದ ಇಬ್ಬರು ಅಧಿಕಾರಿಗಳೂ ಇದ್ದರು. ಈ ಅಪರೂಪದ ಸಭೆಯ ಸಂಘಟಕರೂ ಮತ್ತು ಈ ಮಾವಿನ ತೋಪಿನ ಭಾಗಶಃ ಒಡೆಯರೂ ಆಗಿದ್ದ ಉಮಾ ಮತ್ತು ನರೇಂದ್ರನಾಥರಂತೂ ಇದ್ದೇ ಇದ್ದರು.

ಜಿ. ನರೇಂದ್ರನಾಥರ ತಂದೆ, ವೆಂಕಟರಾಮಾನಾಯ್ಡು ಉದ್ಯಮಶೀಲ ವ್ಯಾಪಾರಿಯಾಗಿದ್ದರು. ಅವರು ಸ್ಥಳೀಯ ಮಾವಿನಹಣ್ಣುಗಳನ್ನು ಮುಂಬೈಗೆ ರಫ್ತು ಮಾಡುತ್ತಿದ್ದರು. ಕಾಲಾಂತರದಲ್ಲಿ ಬಹಳಷ್ಟು ಭತ್ತದ ಗದ್ದೆಗಳನ್ನು ಕೊಂಡರು. ಅದನ್ನು ಮಾವಿನ ತೋಪಾಗಿ ಪರಿವರ್ತಿಸಿದರು. ಈ ಹಳ್ಳಿಗೆ ಇಟ್ಟಿರುವುದು ಆತನ ಹೆಸರನ್ನೆ. ಇದು ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಪ್ರಖ್ಯಾತ ಯಾತ್ರಾಸ್ಥಳವಾದ ತಿರುಪತಿಗೆ ೭೦ ಕಿಲೋಮೀಟರ್‌ಗಳ ದೂರದಲ್ಲಿದೆ. ಅಲ್ಲಿಗೆ ತಲುಪಲು ನೀವು ದಮೇಲ್‌ಚೇರುವಿಗೆ ಹೋಗಬೇಕು. ಅದು ಹತ್ತಿರದ ದೊಡ್ಡಗ್ರಾಮ. ಅಲ್ಲಿಂದ ಮುಂದೆ ಕಿರಿದಾದ ಟಾರ್ ರಸ್ತೆಯಲ್ಲಿ, ಭತ್ತ ಮತ್ತು ಕಬ್ಬಿನ ಗದ್ದೆಗಳ ನಡುವೆ ಒಂದು ಕಿಲೋಮೀಟರ್ ನಡೆಯಬೇಕು. ಈ ಕಿರುದಾರಿಯ ನಂತರ ಹಿಪ್ಪುನೇರಳೆ, ನೆಲಗಡಲೆ, ಭತ್ತ, ತೆಂಗು ಮತ್ತು ಮಾವಿನ ತೋಟಗಳಿವೆ.

ನರೇಂದ್ರನಾಥರ ತಂದೆ ತನ್ನ ಚಿಕ್ಕವಯಸ್ಸಿನಲ್ಲಿ ಊರು ತೊರೆದು, ರಾಜ್ಯ ಸರ್ಕಾರದಲ್ಲಿ ಉದ್ಯೋಗ ಹಿಡಿದರು. ತಂದೆ ತಾಯಿ ಇಬ್ಬರೂ ರಾಮಕೃಷ್ಣ ಪರಮಹಂಸರ ತತ್ವಾದರ್ಶಗಳಿಂದ ಪ್ರಭಾವಿತರಾಗಿದ್ದು, ಸ್ವಾಮಿ ವಿವೇಕಾನಂದರನ್ನು ಹೊಗಳುತ್ತಿದ್ದ ಕಾರಣ, ತಮ್ಮ ನಡುವಿನ ಮಗನಿಗೆ ವಿವೇಕಾನಂದರ ಪೂರ್ವಾಶ್ರಮದ ಹೆಸರಾದ ನರೇಂದ್ರನಾಥ ಎಂದೇ ಹೆಸರಿಟ್ಟರು.

ನರೇಂದ್ರನಾಥ ಬೆಳೆದದ್ದು ದಿಲ್ಲಿಯಲ್ಲಿ. ದಿಲ್ಲಿ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಅವರು ಅಧ್ಯಯನ ಮಾಡಿದರು. ಸಾಂಪ್ರದಾಯಿಕ ತಮಿಳು ಬ್ರಾಹ್ಮಣ ಕುಟುಂಬದಿಂದ ಬಂದಿದ್ದ ಉಮಾಶಂಕರಿ ಈತನ ಸಹಪಾಠಿ. ಇವರಿಬ್ಬರ ಅಂತರ್ಜಾತಿ ವಿವಾಹಕ್ಕೆ ಕುಟುಂಬದ ಕಡೆಯಿಂದ ತೀವ್ರ ವಿರೋಧ ಇದ್ದರೂ, ೧೯೭೭ರಲ್ಲಿ ನರೇಂದ್ರನಾಥ ಮತ್ತು ಉಮಾಶಂಕರಿ ಮದುವೆಯಾದರು. ಆ ಸಮಯದಲ್ಲಿ ಅವರು ಸಾಂಪ್ರದಾಯಿಕವಾಗಿ ಕೆಲಸಕ್ಕೆ ಸೇರಿ ಅದರ ಜತೆ ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಯನ್ನು ನಡೆಸಬೇಕೆಂದಿದ್ದರು.

ನರೇಂದ್ರನಾಥ್, ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಅಧಿಕಾರಿಯಾದರು. ಉಮಾ, ಸಮಾಜಶಾಸ್ತ್ರದಲ್ಲಿ ಪಿಎಚ್.ಡಿ. ಮುಗಿಸಲು ಹೊರಟಳು. ಹೇಗೋ ಏನೋ ತಿಳಿಯದು. ಈ ಬದುಕು ನೀಡುವ ಭವಿಷ್ಯ ಇಬ್ಬರಿಗೂ ಅಷ್ಟಾಗಿ ಮನಸ್ಸಿಗೆ ಬರಲಿಲ್ಲ. ಅವರಿಗೆ 'ರಾಜಕೀಯ ಚಟುವಟಿಕೆ' ಎಂದರೆ, ಆಧುನಿಕ ಅಭಿವೃದ್ಧಿಯನ್ನು ಟೀಕಿಸುವ ಮಾತುಗಳೇ ಆಗಿದ್ದುವು. ಆದರೆ ನಂತರದಲ್ಲಿ ವಾಸ್ತವಾಗಿ ಈ ಪರ್ಯಾಯಗಳೊಡನೆ ಬದುಕಿನಲ್ಲಿ ಮಾತ್ರ ಅದಕ್ಕೊಂದು ಅರ್ಥಬರುತ್ತದೆ ಎನಿಸಿತು.

ಉಮಾರ ಬಲವಾದ ಅಭಿಪ್ರಾಯ ಇದಾಗಿತ್ತು:

'ನಾವು ಮತ್ತೊಂದು ಎನ್.ಜಿ.ಓನ ಪೂರ್ಣಾವಧಿ ಸಾಮಾಜಿಕ ಕಾರ್ಯಕರ್ತರು, ಅದಕ್ಕೊಂದು ಸಂಘಟನೆ, ಸಂಬಳದ ಸಿಬ್ಬಂದಿ, ಒಂದು ಜೀಪ್ ಮತ್ತು ಹೊರದೇಶದ ಹಣ ಇವಿಷ್ಟರೊಂದಿಗೆ ಬದುಕುವುದು ಬೇಕಿರಲಿಲ್ಲ. ಗೃಹಸ್ಥರಾಗಿದ್ದುಕೊಂಡೇ ದೈನಂದಿನ ಜೀವನದೊಂದಿಗೇ ಸಾಮಾಜಿಕ ಕೆಲಸವನ್ನು ಮಾಡುವುದನ್ನು ಜನ ಬಿಟ್ಟುಬಿಟ್ಟಿದ್ದಾರೆ. ಸಾರ್ವಜನಿಕ ಕೆಲಸವನ್ನು ಒಂದೋ ಸರ್ಕಾರ ಮಾಡಬೇಕು ಅಥವಾ ಸಂಬಳ ಪಡೆಯುವ ಸಾಮಾಜಿಕ ಕಾರ್ಯಕರ್ತರು ಮಾಡಬೇಕು ಎಂದು ಜನ ನಂಬಿದ್ದಾರೆ. ಹೊರದೇಶದ ಹಣ, ಅವರದೇ ಆದ ವಿಕೃತಿಯನ್ನು ತರುತ್ತದೆ. ಆದುದರಿಂದ ನಾವು ಪೂರ್ಣಾವಧಿ ಗೃಹಸ್ಥರಾಗಿದ್ದುಕೊಂಡು, ಪೂರ್ಣಪ್ರಮಾಣದ ಸಾಮಾಜಿಕ ಕೆಲಸ ಮಾಡಲು ನಿರ್ಧರಿಸಿದೆವು. ಖಂಡಿತವಾಗಿಯೂ ಇದು ತ್ರಾಸದಾಯಕ ಕೆಲಸವಷ್ಟೇ ಅಲ್ಲ; ಇದರಿಂದ ನಮ್ಮ ಕಿಸೆಗೂ ಹೊಡೆತ ಬೀಳುತ್ತಿತ್ತು. ಆದರೆ ಇದು ಪ್ರಜ್ಞಾಪೂರ್ವಕವಾಗಿ ತೆಗೆದುಕೊಂಡ ನಿರ್ಧಾರವಾಗಿತ್ತು'.

ಉಮಾ ಮತ್ತು ನರೇಂದ್ರನಾಥರು ತಮ್ಮ ಪಿತ್ರಾರ್ಜಿತ ಭೂಮಿಯಲ್ಲಿ ನೆಲೆನಿಂತು ರಾಜಕೀಯವಾಗಿ ಸಕ್ರಿಯವಾಗಲು ನಿರ್ಧರಿಸಿದರು. ಆ ಸ್ಥಳದಲ್ಲಿ ವಾಸ ಮಾಡಿಯೂ ಈ 'ಜಮೀನುದಾರೀ' ಸಂಸ್ಕೃತಿಯಿಂದ ತಪ್ಪಿಸಿಕೊಳ್ಳುವುದು ಹೇಗೆ? ಹಾಗಾಗಿ ಉಮಾ ಮತ್ತು

ನರೇಂದ್ರನಾಥ ಎಚ್ಚರಿಕೆ ಮತ್ತು ಉತ್ಸಾಹಗಳಿಂದ ತಮ್ಮ ಉದ್ದೇಶದ ಈಡೇರಿಕೆಗಾಗಿ ಮುಂದುವರೆದರು. ವೆಂಕಟರಾಮಾಪುರದಂತಹ ಸಾವಿರಾರು ಹಳ್ಳಿಗಳಲ್ಲಿ ಜೀವಂತವಿದ್ದ ಅಸ್ಪೃಶ್ಯತೆಯನ್ನು ಮೊದಲು ತೊಡೆಯಲು ನಿರ್ಧರಿಸಿದರು. ಹೊಲದ ಕೆಲಸಕ್ಕೆ ಬರುವ ಅಸ್ಪೃಶ್ಯರಿಗೆ ಮನೆಯ ಒಳಗಲ್ಲ, ಅಡುಗೆಯ ಕೋಣೆಯ ಒಳಗೂ ಪ್ರವೇಸಲು ಅವಕಾಶ ನೀಡಲಾಯಿತು. ನರೇಂದ್ರನಾಥರ ತಂದೆಗೆ ಇದು ಅತಿ ಎನಿಸಿತು.

ಈ ಆವಾರದಲ್ಲಿರುವ ಇತರೇ ಬಂಧುಗಳ ಭಾವನೆಗಳಿಗೂ ಗೌರವ ಕೊಡಬೇಕಾಗಿತ್ತು. ತನ್ನ ತಂದೆಯ ಕಾಳಜಿಗಳ ಸಂಗಡ ಆತನಿಗೆ ಒಲವಿತ್ತಾದರೂ, ತನಗೆ ಸರಿ ಎನಿಸಿದ್ದನ್ನು ಮಾಡಲೇಬೇಕಾಗಿತ್ತು. ಕೆಲ ವರುಷಗಳು ನರೇಂದ್ರನಾಥ ಮನೆಯ ಒಳಗೆ ಊಟದ ಕೋಣೆಯಲ್ಲಿ ಕುಟುಂಬದ ಇತರ ಸದಸ್ಯರೊಡನೆ ಊಟ ಮಾಡುವುದು ಬಿಟ್ಟು ಕೆಲಸಗಾರರ ಸಂಗಡ ಮನೆಯ ವರಾಂಡದಲ್ಲಿ ಊಟ ಮಾಡುತ್ತಿದ್ದರು.

ಇದರ ಜತೆಗೆ ಈತ ಆಂಧ್ರಪ್ರದೇಶದಲ್ಲಿ ನಾಗರಿಕ ಹಕ್ಕುಗಳ ರಕ್ಷಣೆಯ ಸಂಬಂಧ ಸಮಿತಿಯ ಸಕ್ರಿಯ ಕಾರ್ಯಕರ್ತರಾಗಿದ್ದರು. ಪೊಲೀಸ್ ಠಾಣೆಗಳಲ್ಲಿ ನಡೆದ ಹಲವಾರು ಮರಣಗಳ ಬಗ್ಗೆ ಇವರು ವಿಚಾರಣೆ ಕೈಗೊಂಡಿದ್ದರು ಮತ್ತು ಕೆಳಜಾತಿಯವರ ಮೇಲೆ ನಡೆದ ಆಕ್ರಮಣಗಳ ಬಗ್ಗೆಯೂ ವಿಚಾರಣೆ ನಡೆಸಿದ್ದರು. ಹೀಗಾಗಿ ಚಿತ್ತೂರು ಜಿಲ್ಲೆಯ ದಲಿತ ಸಂಘಟನೆಗಳಲ್ಲಿ ಹಲವರ ಗೆಳೆತನ ಗಳಿಸಿದರು. ೧೯೯೦ರಲ್ಲಿ ನಡೆದ ಬಿ.ಆರ್. ಅಂಬೇಡ್ಕರರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ನಡೆದ ಪಾದಯಾತ್ರೆಗಳಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಅಂಬೇಡ್ಕರ್ ಶತಮಾನೋತ್ಸವ ಆಚರಣಾ ಸಮಿತಿ ಒಂದು ಪ್ರಶ್ನಾವಳಿಯನ್ನು ತಯಾರಿಸಿತ್ತು. ಈ ಪಾದಯಾತ್ರೆ ಸಾಗುವ ಎಲ್ಲ ಹಳ್ಳಿಗಳಲ್ಲಿ ಅದನ್ನು ಕೊಟ್ಟು, ಮಾಹಿತಿಯನ್ನು ಸಂಗ್ರಹಿಸಲಾಗುತ್ತಿತ್ತು.

ಭೂ ಒಡೆತನಗಳಲ್ಲಿ, ಉದ್ಯೋಗ, ವಸತಿಯ ಗುಣಮಟ್ಟ ಹೇಗಿದೆ, ಪರಿಶಿಷ್ಟರನ್ನು ಹೇಗೆ ನೋಡಿಕೊಳ್ಳಲಾಗುತ್ತಿದೆ ಎಂಬುದರ ಸುತ್ತ ಈ ಪ್ರಶ್ನಾವಳಿ ಇತ್ತು. ೨೪೯ ಹಳ್ಳಿಗಳಲ್ಲಿ ಸಂಗ್ರಹಿಸಿದ ಮಾಹಿತಿ ಅಚ್ಚರಿ ಎನಿಸುವ ಫಲಿತಾಂಶ ನೀಡಿತು. ೧೨೨ ಚಹದಂಗಡಿಗಳಲ್ಲಿ ಪರಿಶಿಷ್ಟರಿಗೆ ಪ್ರತ್ಯೇಕವಾದ ಲೋಟಗಳಿದ್ದವು. ೮೦ ದೇವಾಲಯಗಳಲ್ಲಿ (೨೩ ರಾಮದೇವಾಲಯಗಳು) ಪರಿಶಿಷ್ಟರಿಗೆ ಪ್ರವೇಶವಿರಲಿಲ್ಲ. ೧೫ ಜನ ವಸತಿಗಳಲ್ಲಿ, ಮೇಲುಜಾತಿಯ ಬೀದಿಗಳಲ್ಲಿ ಈ ಹರಿಜನರು ಚಪ್ಪಲಿ ಧರಿಸಿ ನಡೆದಾಡುವಂತೆ ಇರಲಿಲ್ಲ. ಇನ್ನು ಕೆಲವು ಹಳ್ಳಿಗಳಲ್ಲಿ ಪರಿಶಿಷ್ಟ ಜಾತಿಯವರು ಮತ ಚಲಾಸುವ ಹಕ್ಕು ಇರಲಿಲ್ಲ.

ಕೆಲವು ಹರಿಜನ ಕುಟುಂಬಗಳು ಸರಕಾರದ ಉದ್ಯೋಗ ಭರವಸೆ ಯೋಜನೆಯಡಿ ಲಾಭ ಪಡೆದಿದ್ದವು. ಅವರ ಮಕ್ಕಳು ಶಾಲೆಗೆ ಕಲಿಯಲು ಹೋಗುತ್ತಿದ್ದರು.

ಅಂಬೇಡ್ಕರ್ ಶತಮಾನೋತ್ಸವದ ಕರಪತ್ರದಲ್ಲಿದ್ದ ಮನವಿ ಏನೆಂದರೆ 'ಎಲ್ಲರನ್ನು ಮನುಷ್ಯರಂತೆ ಕಾಣಿ' ಎಂಬುದು. ತಾವು ಇನ್ನು ಮುಂದೆ ಎಂದೂ ಅಸ್ಪೃಶ್ಯತೆ ಆಚರಿಸುವುದಿಲ್ಲ ಎಂದು ಪ್ರತಿಜ್ಞಾ ವಿಧಿ ಬರೆದು ಕೊಡಬೇಕಾಗಿತ್ತು. ಪಾದಯಾತ್ರೆಯ ಕೊನೆಯಲ್ಲಿ ಈ

ಮಾಹಿತಿಗಳನ್ನು ಜಿಲ್ಲಾ ಕಲೆಕ್ಟರಿಗೆ ನೀಡಲಾಯಿತು. ಈ ಪಾದಯಾತ್ರೆ ಸಾಗುವ ಪ್ರತಿ ಹಳ್ಳಿಯಲ್ಲಿ ಊಟದ ವ್ಯವಸ್ಥೆಯನ್ನಾದರೂ ಮೇಲುಜಾತಿಯವರು ಮಾಡುವಂತೆ ಮಾಡಲು ನರೇಂದ್ರನಾಥ ಹೆಣಗಿದರು. ಇಡೀ ಪಾದಯಾತ್ರೆಯಲ್ಲಿ ಅದನ್ನು ಸ್ವಾಗತಿಸಿ, ಭೋಜನ ನೀಡಿದ ಏಕಮೇವ ದಲಿತೇತರ ಮನೆ ಉಮಾ-ನರೇಂದ್ರನಾಥ್‌ರದಾಗಿತ್ತು.

ನರೇಂದ್ರನಾಥ್ ಇದರಿಂದ ಎದೆಗುಂದಲಿಲ್ಲ:

'ಈ ರೀತಿ ಏನಾದರೂ ನೀವು ಮಾಡಿದರೆ ಅದು ಚರ್ಚೆಯ ವಿಷಯವಾಗುತ್ತದೆ, ಜನರು ಆಲೋಚಿಸುವಂತೆ ಮಾಡುತ್ತದೆ. ಇದನ್ನು ನಾವು ಮಾಡುತ್ತಲೇ ಹೋದರೆ, ಬದಲಾವಣೆ ಸಂಭವಿಸುತ್ತದೆ. ಅಸ್ಪೃಶ್ಯತೆ ಇನ್ನೂ ಜೀವಂತವಿದೆ ಎಂಬುದನ್ನು ಜನರಿಗೆ ತಿಳಿಸಬೇಕು. ದೇಶ ಅಭಿವೃದ್ಧಿಯಾಗುತ್ತಿದ್ದಂತೆ ತಂತಾನೆ ಇದು ಮಾಯವಾಗುತ್ತದೆ ಎಂಬುದು ಬೌದ್ಧಿಕ ವಲಯದಲ್ಲಿನ ಒಂದು ವಾದವಾಗಿದೆ. ನಾನು ಯಾವಾಗಲೂ ಅಮೆರಿಕೆಯ ಉದಾಹರಣೆ ನೀಡುತ್ತೇನೆ. ಅಲ್ಲಿ ಇನ್ನೂ ವರ್ಣಭೇದ ಇದೆ. ಈ ಬದಲಾವಣೆಗಳನ್ನು ನಾವು ಪ್ರಯತ್ನಪೂರ್ವಕವಾಗಿ ತರಬೇಕು'.

ನರೇಂದ್ರನಾಥರ ದೃಷ್ಟಿಯಲ್ಲಿ ಗಾಂಧಿಯ ಪ್ರಸ್ತಾಪವಿಲ್ಲದೇ ಇದನ್ನು ಮಾಡಲಾಗುವುದಿಲ್ಲ. ಮಹಾತ್ಮನನ್ನು ಗೌರವಿಸುವವರೂ ಕೂಡಾ ಹರಿಜನರ ಬಗೆಗೆ ಆತ ತೆಗೆದುಕೊಂಡ ನಿಲುವುಗಳಿಗಾಗಿ ದೂಷಿಸುತ್ತಾರೆ ಎಂಬುದೂ ತಿಳಿದುಬಂದಿತು. ಪರಿಶಿಷ್ಟ ಜಾತಿಯ ಸಮುದಾಯಗಳಲ್ಲಿಯೂ ಕೂಡ ಅಂಬೇಡ್ಕರರನ್ನು ಪೂಜಿಸಲಾಗುತ್ತಿತ್ತು. ಅದೇ ವೇಳೆ ಗಾಂಧಿಯನ್ನು ದೂಷಿಸಲಾಗುತ್ತಿತ್ತು. 'ಪಾದಯಾತ್ರೆಯಲ್ಲಿ ತೊಡಗಿದವರೆಲ್ಲರೂ ತನ್ನನ್ನು ಹೊರತುಪಡಿಸಿ ಅಂಬೇಡ್ಕರ್‌ವಾದಿಗಳೇ. ನನ್ನ ಒಬ್ಬನನ್ನು ಮಾತ್ರ ಗಾಂಧಿವಾದಿ ಎಂದು ಗುರುತಿಸಲಾಗುತ್ತಿತ್ತು. ನಾನು ಅಹಿಂಸೆಗೆ ಒತ್ತುನೀಡುತ್ತಿದ್ದೆ ಮತ್ತು ಚಹಾ ಅಂಗಡಿ ಮಾಲೀಕರ ಮನವೊಲಿಸಲು ಒತ್ತುನೀಡುತ್ತಿದ್ದೆ'

ಗಾಂಧೀಜಿಯ ನಂಬಿಕೆಯಿಂದ ನರೆಂದ್ರನಾಥ ಸುಳಿವು ಪಡೆದಿದ್ದರು. ತಾವು ಕೆಳಜಾತಿಯವರನ್ನು ಕೆಟ್ಟದಾಗಿ ನಡೆಸಿಕೊಂಡ ಅಪರಾಧಕ್ಕಾಗಿ ಮೇಲುಜಾತಿ ಹಿಂದೂಗಳು ಪ್ರಾಯಶ್ಚಿತ್ತ ಮಾಡಿಕೊಳ್ಳಲು ಗಾಂಧಿ ಬಯಸುತ್ತಿದ್ದರು. ಕೆಳಜಾತಿಯವರು ಉತ್ತಮ ಶಿಕ್ಷಣ ಪಡೆದು ತಮಗೆ ತಾವೇ ಸಹಾಯ ಮಾಡಿಕೊಳ್ಳಲು, ತಮ್ಮ ಬಿಡುಗಡೆಗಾಗಿ ತಾವೇ ಸಂಘಟಿತರಾಗಿ ಹೋರಾಡಲು ಅಂಬೇಡ್ಕರ್ ಒತ್ತು ನೀಡಿದ್ದರು. ನರೇಂದ್ರನಾಥರಿಗೆ ಗಾಂಧಿ ಮತ್ತು ಅಂಬೇಡ್ಕರ್ ಚಿಂತನೆಗಳು ಪರಸ್ಪರ ಪೂರಕ ಎಂದೆನಿಸುತ್ತಿತ್ತು. ಆದರೆ ದಲಿತ ಕಾರ್ಯಕರ್ತರು, ಸವರ್ಣೀಯರ ನಡವಳಿಕೆ ಬಗ್ಗೆ ತೀವ್ರ ಗುಮಾನಿ ಹೊಂದಿದ್ದರು. ನರೇಂದ್ರನಾಥ ಒಬ್ಬರು ಮಾತ್ರ ಇದಕ್ಕೆ ಹೊರತಾಗಿದ್ದರು.

ಈ ವಿಷಯಗಳಿಂದ ನರೇಂದ್ರನಾಥ ಕೊರಗಲಿಲ್ಲ. ಬೇಸರಿಸಲಿಲ್ಲ. ಅವರ ಕೆಲವು ಗೆಳೆಯರು ಹೇಳುವಂತೆ 'ನರೇಂದ್ರನಾಥ್ ಬುದ್ಧನ ಪ್ರಶಾಂತ ಮುಖಮುದ್ರೆಯಿಂದ ಕೆಲಸ ಮಾಡುತ್ತಾರೆ'.

ನೀವು ಈ ಸಮಾಜವನ್ನು ಈಗಿರುವ ಸ್ಥಿತಿಗಿಂತ ಉತ್ತಮಸ್ಥಿತಿಗೆ ಒಯ್ಯಬೇಕಾದರೆ ಜನಗಳ ಬದುಕಿಗೆ ಹತ್ತಿರವಾಗಬೇಕು. ಈ ಸಮಾಜದಲ್ಲಿ ಗಂಭೀರವಾದ ದೋಷಗಳಿವೆ. ಆದರೆ ನೀವು ಇವುಗಳನ್ನು ಖಂಡಿಸಿದರೆ, ನೀವು ಅದರ ಪರಿಣಾಮಗಳ ಜವಾಬ್ದಾರಿಯನ್ನೂ ತೆಗೆದುಕೊಳ್ಳಬೇಕಾಗುತ್ತದೆ. ನಿದರ್ಶನಕ್ಕಾಗಿ, ನೀವು ಅಯೋಧ್ಯೆಯ ಪ್ರಕರಣವನ್ನು ಖಂಡಿಸಿದರೆ, ಅದಕ್ಕಿಂತಲೂ ಉತ್ತಮವಾದುದನ್ನು ಮಾಡಿ ತೋರಿಸಬೇಕಾಗುತ್ತದೆ. (ಪರ್ಯಾಯ ತೋರಿಸಬೇಕಾಗುತ್ತದೆ) ಪರ್ಯಾಯಗಳ ಬಗ್ಗೆ, ಹೊಸ ಸಮಾಜದ ಬಗ್ಗೆ ಮಾತನಾಡುತ್ತಿರುವ ಜನ ಪರಿಸ್ಥಿತಿಗೆ ಸಮನಾಗಿ ಹೊಂದಿಕೊಳ್ಳುತ್ತಿಲ್ಲ. ನಾವು ಚೈತನ್ಯವನ್ನಾಗಲೀ ಸಮಚಿತ್ತತೆಯನ್ನಾಗಲೀ ಬೆಳೆಸಿಕೊಳ್ಳುತ್ತಿಲ್ಲ. ಇದು ನನ್ನ ವಿಷಯದಲ್ಲಿಯೂ ನಿಜ. ಬದಲಾವಣೆ ಮೊದಲು ನನ್ನೊಳಗೆ ಆಗಬೇಕು. ಈ ಅರಿವು ಇತ್ತೀಚಿನ ಕೆಲವು ವರ್ಷಗಳಲ್ಲಿ ನನಗೆ ಬಂತು'.

ಈ ನಡುವೆ ಉಮಾ ಎಲ್ಲ ಪ್ರಯತ್ನಗಳಲ್ಲಿ ಭಾಗವಹಿಸುತ್ತಾ ಈ ಬರಪ್ರದೇಶದಲ್ಲಿ ಬೇರೆ ಬೇರೆ ರೀತಿಯ ಜಲಾನಯನ ಕ್ರಮಗಳ ಬಗ್ಗೆ ಗಮನ ಕೇಂದ್ರೀಕರಿಸಿದ್ದರು. ಕೆರೆಯ ಮೂಲಕ ನೀರಾವರಿ ಮಾಡಿಕೊಳ್ಳುವ ವಿಧಾನ ನಿಧಾನವಾಗಿ ಸಾಯುತ್ತಿರುವುದು ಅವರ ಅಧ್ಯಯನಗಳಿಂದ ತಿಳಿದುಬಂದಿತು. ಪಿಪಿಎಸ್‌ಟಿ ಗುಂಪು ಚೆನ್ನೈನಲ್ಲಿ ಸಾಂಪ್ರದಾಯಿಕ ವಿಜ್ಞಾನ ಮತ್ತು ತಂತ್ರಜ್ಞಾನ ಅಧಿವೇಶನವನ್ನು ವ್ಯವಸ್ಥೆಮಾಡಿದಾಗ, ನೀರಿನ ವಿಭಾಗದಲ್ಲಿ ಆಕೆ ತೀರಾ ಸಕ್ರಿಯವಾಗಿ ತೊಡಗಿಸಿಕೊಂಡರು. ಈ ಮೊದಲೆರಡು ಸಮಾವೇಶಗಳಲ್ಲಿ ಈ ವಿಭಾಗದಲ್ಲಿ ಸಂಯೋಜಕಿಯಾಗಿ ಕಾರ್ಯನಿರ್ವಹಿಸಿದ ಉಮಾ ಇದೇ ವಿಷಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೇರೆ ಬೇರೆ ವ್ಯಕ್ತಿಗಳು ಮತ್ತು ಸಂಘಟನೆಗಳ ಸಂಪರ್ಕ ಪಡೆದರು.

ಈ ಹಂತದಲ್ಲಿ ನರೇಂದ್ರನಾಥ ಸಾವಯುವ ಕೃಷಿಗೆ ಹೊರಳಿಕೊಳ್ಳುವ ಸಮಸ್ಯೆಯ ಜತೆಗೆ ಗುದ್ದಾಡುತ್ತಿದ್ದರು. ಸರಿತಪ್ಪುಗಳಿಂದ ಪಾಠ ಕಲಿತದರು. ಅವರಿಗೆ ಕೃಷಿಯ ಮೂಲಪಾಠ ಅರ್ಥವಾಗಲು ಐದು ವರ್ಷಗಳೇ ಬೇಕಾದವು. ಅದಾದ ನಂತರವಷ್ಟೇ ಸುದೀರ್ಘ ಮತ್ತು ಕಠಣವಾದ ಪ್ರಕ್ರಿಯೆ ಪ್ರಾರಂಭಿಸಲು ಸಾಧ್ಯವಾಗುವುದು. ಆ ವೇಳೆಗಾಗಲೇ, ಹಲವಾರು ದಶಕಗಳಿಂದ ರಾಸಾಯನಿಕ ಕೀಟನಾಶಕ ಮತ್ತು ಗೊಬ್ಬರಗಳನ್ನು ಬಳಸಲಾಗುತ್ತಿತ್ತು. ಈತ ಬೇರೆ ಬೇರೆ ಬೆಳೆಗಳಿಗೆ ರಾಸಾಯನಿಕಗಳನ್ನು ತೀರಾ ಕನಿಷ್ಠಗೊಳಿಸುವ ಅಥವಾ ಪೂರ್ತಾ ಕೈಬಿಡುವಲ್ಲಿಂದ ತಮ್ಮ ಕೃಷಿ ಆರಂಭಿಸಿದರು. ಭತ್ತ, ರಾಗಿ, ನೆಲಗಡಲೆ ಮತ್ತು ತರಕಾರಿಗೆ ಸಂಬಂಧಿಸಿದಂತೆ, ಬೇವು ಮತ್ತು Ipomoea Fistulosa ಕಷಾಯದಿಂದ (ವಾರ್ಧಾದಲ್ಲಿ ಅಭಿವೃದ್ಧಿಪಡಿಸಿದ್ದು) ಬಹುತೇಕ ಕೀಟಗಳನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾದರು.

ಉತ್ತಮಮಟ್ಟದ ಸಾವಯುವ ಗೊಬ್ಬರದ ಲಭ್ಯತೆಯೇ ದೊಡ್ಡ ಅಡ್ಡಿಯಾಯಿತು. ಈ ಸಾವಯುವ ಗೊಬ್ಬರ ತಯಾರಿಸಿಕೊಳ್ಳುವ ಪ್ರಕ್ರಿಯೆಗೆ ಹೆಚ್ಚುವರಿ ಮಾನವ ಶ್ರಮ ವ್ಯರ್ಥವಾಗುತ್ತಿತ್ತು. ಸಾವಯುವ ಗೊಬ್ಬರವನ್ನು ದೊಡ್ಡ ಪ್ರಮಾಣದಲ್ಲಿ ಮಾಡಿಕೊಳ್ಳಲು ಸಾಕಷ್ಟು ಮರಗಳು ಅಥವಾ ಸಾಕಷ್ಟು ದನಕರುಗಳು ಬೇಕಾಗಿದ್ದವು. ಆದುದರಿಂದ ಬಹುತೇಕ ರೈತರಿಗೆ ಟ್ರಾಕ್ಟರ್, ವಿದ್ಯುತ್ ಪಂಪ್‌ಸೆಟ್, ರಾಸಾಯನಿಕ ಗೊಬ್ಬರ, ಮತ್ತು ರಾಸಾಯನಿಕ ಕೀಟನಾಶಕಗಳ ಬಳಕೆ ಬಹಳ ಸುಲಭದ ದಾರಿಯಾಗಿತ್ತು.

ಈ ಕಾರಣದಿಂದ ನರೇಂದ್ರನಾಥ್ ಹೆಚ್ಚು ಹೆಚ್ಚು ಹಣ ತೊಡಗಿಸಿದರೂ ಲಾಭ ಬರುವಷ್ಟು ಹಣ ಹಿಂದಕ್ಕೆ ಬರುತ್ತಲೇ ಇರಲಿಲ್ಲ. ತಮಗೆ ತಾವೇ ವಿಧಿಸಿಕೊಂಡ ಅನೇಕ ಷರತ್ತುಗಳಿದ್ದವು. ಬೆಲ್ಲ ಹೆಚ್ಚು ಹಣ ತರುತ್ತದೆ ಎಂಬುದು ಅವರಿಗೆ ಗೊತ್ತು. ಆದರೆ ಈ ಬೆಲ್ಲವನ್ನು ಸಾರಾಯಿ ಮಾಡಲು ಬಳಸುತ್ತಾರೆ ಎಂದು ತಿಳಿದ ಅವರು ಇದರ ಉತ್ಪಾದನೆಯನ್ನು ಕಡಿಮೆಗೊಳಿಸಿದರು. ಸಾವಯವ ಪದ್ಧತಿಯಿಂದ ಬೆಳೆದ ಕಬ್ಬಿನಿಂದ ತಯಾರಿಸಿದ ಬೆಲ್ಲಕ್ಕೆ ಹೆಚ್ಚಿನ ಮಾರುಕಟ್ಟೆ ಇರಲಿಲ್ಲ. ಈ ಎಲ್ಲ ಅನುಭವಗಳಿಂದ ಪ್ರಾಯಶಃ ರೈತರು ಕೃಷಿಯಲ್ಲಿ ಯಶಸ್ಸುಗಳಿಸಬೇಕಾದರೆ, ಅದು ಹೈಟೆಕ್ ಕೃಷಿ ಮತ್ತು ತೋಟದ ಬೆಳೆಗಳಿಂದ ಎಂದು ಅವರಿಗೆ ಅನ್ನಿಸಿತು.

ಅಕ್ಕಪಕ್ಕದ ರೈತರು ಇದನ್ನು ಗಮನಿಸುತ್ತಿದ್ದರು. ಅವರೆಲ್ಲರೂ ಈ ವಿಷಯದಲ್ಲಿ ಅನುಮಾನ ಇಟ್ಟುಕೊಂಡವರೇ. ಎಲ್ಲರೂ ಸಾವಯವ ಕೃಷಿ ಪದ್ಧತಿಯನ್ನು ತಾತ್ವಿಕವಾಗಿ ತಕ್ಷಣವೇ ಒಪ್ಪಿಕೊಂಡುಬಿಡುವವರೇ. ಆದರೆ ಇದರ ಪ್ರಾಯೋಗಿಕತೆಯ ಬಗ್ಗೆ ಅವರಿಗೆ ನಂಬಿಕೆ ಇರಲಿಲ್ಲ. ಇದು ದೀರ್ಘಾವಧಿಯಲ್ಲಿ ಯಶಸ್ಸು ಕಾಣಬೇಕಾದರೆ ಏನು ಮಾಡಬೇಕೆಂದು ನರೇಂದ್ರನಾಥ ಹೀಗೆ ತಿಳಿಸುತ್ತಾರೆ:

'ನಾವು ಹಸಿರೆಲೆ ಗೊಬ್ಬರಕ್ಕೆ, ಹೆಚ್ಚು ಎಲೆ ನೀಡುವ ಮರ ಬೆಳೆಯಬೇಕು. ಸಾಕಷ್ಟು ದನಕರು ಇರಬೇಕು. ನಮ್ಮ ಬೆಳೆಗಳಿಗೆ ಸ್ಥಳೀಯ ಮಾರುಕಟ್ಟೆ ಇರಬೇಕು ಮತ್ತು ಎಲ್ಲವೂ ಆರ್ಥಿಕವಾಗಿ ಸುದೃಢವಾಗಿರಬೇಕು. ಪರಿಸರಪರ ಕೃಷಿಕರೆಲ್ಲರೂ ತ್ರಾಸದಾಯಕವಲ್ಲದ, ಆರ್ಥಿಕವಾಗಿ, ಮಾನವ ಸಂಪನ್ಮೂಲ ಮತ್ತು ಸಂಪನ್ಮೂಲಗಳಿಗೆ ಹೊರೆಯಾಗದ ಕೃಷಿ ಪದ್ಧತಿಗಳನ್ನು ಕಂಡುಹಿಡಿಯಬೇಕು'.

ಇಂದು ರೈತರು ಅನೇಕ ರೀತಿಗಳಿಂದ ಬಂಧಿಸಲ್ಪಟ್ಟಿದ್ದಾರೆ. ಅವರ ಅಗತ್ಯ ಅಥವಾ ಕೆಲವೊಮ್ಮೆ ಅವರ ದುರಾಶೆ ಅವರನ್ನು ಹೆಚ್ಚು ಇಳುವರಿ ನೀಡುತ್ತದೆನ್ನಲಾದ ಹೈಬ್ರಿಡ್ ಬೀಜ, ರಾಸಾಯನಿಕಗಳು, ಟ್ರ್ಯಾಕ್ಟರ್, ವಿದ್ಯುತ್ ಮೋಟಾರ್ ಪಂಪ್, ದೂರದ ಮಾರುಕಟ್ಟೆಗಳು ಮತ್ತು ತೋಟಗಾರಿಕೆಯತ್ತ ನುಗ್ಗುವಂತೆ ಮಾಡಿವೆ. ಇದು ಭಾರಿ ಪಣದ ಜೂಜು. ಒಂದು ವೇಳೆ ಸಾವಯವ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಮತ್ತು ಆಕರ್ಷಕ ಬೆಲೆ ಸಿಕ್ಕಿದ್ದೇ ಆದರೆ, ಬಹು ಬೇಗನೆ ಎಲ್ಲ ರೈತರೂ ಸಾವಯವ ಮತ್ತು ಪರಿಸರಪ್ರಿಯ ಕೃಷಿಯತ್ತ ನುಗ್ಗುತ್ತಾರೆ. ಪ್ರಸ್ತುತ ಪಟ್ಟಣ ಪ್ರದೇಶದಲ್ಲಿ ತೀರಾ ಪ್ರತಿಷ್ಠಿತ ವರ್ಗದಲ್ಲಿ ಮಾತ್ರ ಈ ಪದಾರ್ಥಗಳಿಗೆ ಮಾರುಕಟ್ಟೆ ಇದೆ.

ನಾವು ಚಿಂತನಾಕ್ರಮವನ್ನೇ ಬದಲಿಸುವ ಆಲೋಚನೆ ಮಾಡುತ್ತಿದ್ದರೆ ನಾವು ಪ್ರವಾಹದ ವಿರುದ್ಧ ಈಸುತ್ತಿರುತ್ತೇವೆ. ಹೆಚ್ಚು ಕಷ್ಟ ಪಡದೇ ಸ್ವಹಿತವನ್ನು ಮಾತ್ರ ಗಳಿಸುವ ಪ್ರವೃತ್ತಿ ನಮ್ಮಲ್ಲಿದೆ. ಹೀಗಾಗಿ ಸಾವಯವ ಕೃಷಿ ಒಂದು ಪ್ರಮುಖ ತಾತ್ವಿಕತೆಯಾಗಿ ಅಥವಾ ಆಲೋಚನಾಕ್ರಮವಾಗಿ ಮೂಡೀತೆಂದು ನನಗೆ ಅನ್ನಿಸುವುದಿಲ್ಲ.

ಮನುಷ್ಯನ ಅಗತ್ಯಗಳೇ ಸಂಶೋಧನೆಗಳಿಗೆ ನಾಂದಿ.... ಹೀಗಾಗಿ ಮುಂದೆ ಏನಾಗುವುದೋ ನೋಡೋಣ.

ಬದುಕು ಬಿಚ್ಚಿಕೊಳ್ಳುತ್ತಿರುವ, ನೇರವಾದ ಅನುಭವದ ಕಾರಣವಾಗಿಯೇ ಸ್ಥಳೀಯ ಸ್ವಯಂ ಸಂಪೂರ್ಣತೆಯ ಗೀಳುಹುಟ್ಟಿಕೊಂಡಿದ್ದು. ಸರಳವಾದ ಪದಾರ್ಥಗಳ ತಯಾರಿಕೆಯೂ ದೂರ ದೂರದ ಪ್ರದೇಶಗಳಿಗೆ ಹೋಗುತ್ತಿರುವುದರಿಂದ, ದೈನಂದಿನ ಮೂಲಭೂತ ಅಗತ್ಯಗಳ ಬಗ್ಗೆ ನಮ್ಮ ನಿಯಂತ್ರಣ ಕಡಿಮೆಯಾಗುತ್ತಿದೆ ಎಂದು ಟಿಂಬಕ್ಟು ಗೆಳೆಯರಂತೆ ನರೇಂದ್ರನಾಥರಿಗೂ ಅನ್ನಿಸಿತು. ಈ ಪ್ರಕ್ರಿಯೆಯಿಂದ ಸ್ಥಳೀಯ ವ್ಯಾಪಾರ ಮತ್ತು ಕಸುಬುಗಳು ಕಡಿಮೆಯಾಗುವ ಮೂಲಕ ಸ್ವಉದ್ಯೋಗ ಸೃಷ್ಟಿಸುವ ಸಾಧ್ಯತೆಯೂ ಕಡಿಮೆಯಾಗುತ್ತದೆ. ಆದರೆ ಟಿಂಬಕ್ಟು ಕಲೆಕ್ಟಿವ್‌ನ ದಿನೇಶ ಹೇಳಿದಂತೆ 'ಸ್ವದೇಶಿ ಚಳುವಳಿಯ ಅಂತರಾಳದಲ್ಲಿ ಒಂದು ತಾತ್ವಿಕ ಬದ್ಧತೆ ಇದೆ'. ಇದು ನಿಸರ್ಗಕ್ಕೆ ಮತ್ತು ಸಹಜೀವಿ ಮನುಷ್ಯನಿಗೂ ಅತಿ ಕಡಿಮೆ ಘಾಸಿ ಮಾಡುತ್ತದೆ.

ಇದು ಗಾಂಧೀಜಿಯವರ ಕಲ್ಪನೆಯ ಸ್ವದೇಶಿ ಚಳುವಳಿ. ನಮ್ಮ ಒಪ್ಪಿಗೆ ಮತ್ತು ತಿಳುವಳಿಕೆಯ ಮಿತಿಯಲ್ಲಿಯೇ ತಯಾರಾದ ಪದಾರ್ಥಗಳನ್ನು ಬಳಕೆ ಮಾಡಿದಾಗ ನಮ್ಮ ಪ್ರತಿಯೊಂದು ವ್ಯವಹಾರಗಳಿಂದ ಉಂಟಾಗುವ ಸಾಮಾಜಿಕ ಪರಿಣಾಮಗಳಿಗೆ ನಾವು ಪೂರ್ಣವಾಗಿ ಸ್ಪಂದಿಸಬಲ್ಲೆವು. ಅದು ವಿಶ್ವಶಾಂತಿಗೆ ಹಾದಿಮಾಡಿಕೊಡಬಲ್ಲದು. ಈ ಆಶಯದಿಂದ ನರೇಂದ್ರನಾಥ್ ತಮ್ಮ ಚಟುವಟಿಕೆಗಳಿಗೆ 'ಸ್ವದೇಶಿ ಟ್ರಸ್ಟ್' ಎಂದು ಹೆಸರಿಟ್ಟರು.

ಈಗ ಮಾವಿನ ತೋಪಿನಡಿಯಲ್ಲಿ ನಡೆಯುತ್ತಿರುವ ಸ್ವದೇಶಿ ಸಭೆಯತ್ತ ಹೊರಳೋಣ. ಕೇವಲ ಪ್ರೀತಿಯೇ ಕಾರಣವಾಗಿ ಈ ಸ್ಫೂರ್ತಿಗೊಂಡ ಮನಸ್ಸುಗಳು ಇಲ್ಲಿ ಸಮಾವೇಶಗೊಂಡಿದ್ದವು. ಉಮಾ ಹಾಗು ನರೇಂದ್ರನಾಥರ ಬದುಕು ಮತ್ತು ಕೆಲಸ ಸ್ನೇಹಿತರನ್ನು, ಸಹಪಯಣಿಗರನ್ನು ವೆಂಕಟರಾಮಾಪುರಮ್‌ನತ್ತ ಎಳೆಯುತ್ತದೆ. ಅವರ ಗೆಳೆಯರು, ಈ ಚರ್ಚೆಯ ಪ್ರಕ್ರಿಯೆಯಲ್ಲಿ ತಮ್ಮನ್ನೇ ಗುರುತಿಸಿಕೊಳ್ಳುತ್ತಾರೆ.

ಇಲ್ಲಿ ಭಾಗವಹಿಸುತ್ತಿರುವ ಎಲ್ಲರಿಗೂ ಸ್ವದೇಶಿ ಎಂಬುದು ಏನನ್ನೂ ಪ್ರಶ್ನಿಸದೇ ಒಪ್ಪಿಕೊಳ್ಳುವ ದೇವವಾಣಿಯೇನಲ್ಲ. ದಲಿತ ಕಾರ್ಯಕರ್ತರಿಗೆ 'ಸ್ವದೇಶಿ' ಪದದ ಬಳಕೆಯ ಬಗ್ಗೆಯೇ ಅಸಮ್ಮತಿ ಇತ್ತು. ಈ ಶಬ್ದ 'ರಾಷ್ಟ್ರೀಯ ಸ್ವಯಂಸೇವಕ ಸಂಘ'ದೊಡನೆ ತಳುಕು ಹಾಕಿಕೊಂಡಂತಿದೆ. ಅದರ ಜತೆಗೆ ಭೂಸುಧಾರಣೆ ಮತ್ತು ಶ್ರೇಣೀಕೃತ ಜಾತಿ ಪದ್ಧತಿಯ ಬಗ್ಗೆ ಒಂದು ದೃಢನಿಲುವು ತಳೆಯದೇ ಇದ್ದಲ್ಲಿ ಸ್ವದೇಶಿ ಪರಿಕಲ್ಪನೆ ಅರ್ಥವಿಲ್ಲದ್ದು' ಎನಿಸಿತು.

ಉಮಾ ಹಾಗು ನರೇಂದ್ರನಾಥರಂತಹವರ ಕೆಲಸ ಮತ್ತು ಆಶಯದಲ್ಲಿ ದಲಿತ ಕಾಳಜಿ, ಸ್ವದೇಶಿ ಪರಿಕಲ್ಪನೆಗಳು ಸೇರಿದ್ದರೆ ಸಾಲದು, ಅವರ ಅನುಮಾನಗಳಿಗೂ ಪರಿಹಾರ ದೊರಕಬೇಕು. ಸಮಾಜದ ಮಟ್ಟದಲ್ಲಿ ಇದು ಪರಿಹಾರವಾಗಬೇಕು. ಬಹುತೇಕ ದಲಿತ ಕಾರ್ಯಕರ್ತರು ಗಾಂಧಿ ಪ್ರಣೀತ ಗ್ರಾಮಾಧಾರಿತ ಅರ್ಥವ್ಯವಸ್ಥೆಯ ಬಗ್ಗೆ ಆ ಸಭೆಯಲ್ಲಿಯೇ ಅನುಮಾನಗಳನ್ನು ಎತ್ತಿದರು. ಇದು ಹಳೆಯ ಸಾಮಾಜಿಕ ಸಂಬಂಧಗಳನ್ನು ಪುನಃ

ಪ್ರತಿಷ್ಠಾಪಿಸುತ್ತದೆ; ಪಟ್ಟಣ ಪ್ರದೇಶಗಳು ಈ ಹಳೆಯ ಮಾದರಿಗಳನ್ನು ಒಡೆದು ಬರಲು ಅನುವಾಗುವಂತೆ ಅನಾಮಿಕತೆಯನ್ನು ಒದಗಿಸುತ್ತದೆ ಎಂಬುದು ಅವರ ವಾದ.

ಈ ಸಮಾವೇಶದಲ್ಲಿ ಭಾಗವಹಿಸುತ್ತಿರುವ ಇನ್ನಿತರರ ನಿಲುವಿಗೂ, ಈ ಎಲ್ಲ ವಿಷಯಗಳಲ್ಲಿ ದಲಿತರ ನಿಲುವಿಗೂ ನೇರವಾದ, ಅಪೂರ್ವ ಮುಖಾಮುಖಿಯಾಯಿತು. ಈ ಸಭೆಯಲ್ಲಿ ಭಾಗವಹಿಸಿದ ಶಂಭು ಪ್ರಸಾದ್ ಈ ಪ್ರಸಂಗ ಕುರಿತು ಹೀಗೆ ಬರೆಯುತ್ತಾರೆ: 'ಈಗಿನ ಆಶ್ರಮಗಳು ತಮ್ಮ ಸುತ್ತಲಿನ ಸಮುದಾಯ ಮತ್ತು ಬದುಕಿನ ಮುಖ್ಯ ಪ್ರವಾಹದಿಂದ ಹೇಗೆ ಬೇರೆಯಾಗಿದೆ ಎಂಬುದನ್ನು ತೋರುತ್ತದೆ....'

'....ಗಾಂಧೀಜಿ, ಸತ್ಯ ಮತ್ತು ಅಹಿಂಸೆಯನ್ನು ವೈಯುಕ್ತಿಕ ಅನುಷ್ಠಾನಕ್ಕಾಗಿ ಮಾತ್ರ ಬಳಸಲಿಲ್ಲ. ಆಲಿವುಗಳ ಅನುಷ್ಠಾನ–ಗುಂಪುಗಳು, ಸಮುದಾಯಗಳು ಮತ್ತು ರಾಷ್ಟ್ರಗಳ ಮಟ್ಟದಲ್ಲಿ ಆಗಬೇಕೆಂದು ಬಯಸಿದರು..... ಅದು ಎಲ್ಲ ವಿಭಾಗದಲ್ಲಿಯೂ ಬಳಸಲು ಬರದಿದ್ದರೆ ಅದಕ್ಕೆ ಏನೇನೂ ಬೆಲೆ ಇಲ್ಲ. ಸ್ವದೇಶಿ ಎಂಬುದು ಹೊಸತನವನ್ನು ಹೇಳುವಂತಿರಬೇಕು ಮತ್ತು ಎಲ್ಲವನ್ನೂ ಒಳಗೊಳ್ಳುವಂತೆ ಇರಬೇಕು'. ವೆಂಕಟರಾಮಾಪುರಂನಲ್ಲಿ ನಡೆದ 'ಸ್ವದೇಶಿ ಟ್ರಸ್ಟ್' ಸಭೆಯಲ್ಲಿ ಇದು ನಿಚ್ಚಳವಾತು.

ನರೇಂದ್ರನಾಥ 'ನಮ್ಮ ಸ್ವದೇಶಿ ಆಂದೋಲನ, ದಲಿತ ಪರ ಆಶಯ, ಕಾಳಜಿಗಳನ್ನು ಒಳಗೊಂಡಿರಬೇಕು' ಎಂದು ಪ್ರತಿಪಾದಿಸಿದರು. 'ನೋಡಿ, ಈಗ ಸ್ವದೇಶಿ ಎಂಬುದು ಹೇಗೆ ದಲಿತರಿಗೆ ಪರಕೀಯವಾಗಿದೆ. ಈ ಸಭೆಯಲ್ಲಿ ಭಾಗವಹಿಸಿದ ದಲಿತ ಸಂಘಟನೆಗಳ ಪ್ರತಿನಿಧಿಗಳ ದೃಷ್ಟಿಯಲ್ಲಿ ಸ್ವದೇಶಿ ಮತ್ತು ಸ್ವಸಂಪೂರ್ಣ ಸಮುದಾಯ ಎಂದರೆ ಯಥಾಸ್ಥಿತಿಯ ಮುಂದುವರಿಕೆ ಹಾಗೂ ಸಾಂಪ್ರದಾಯಿಕ ಅಧಿಕಾರ ಕೇಂದ್ರಗಳ ಮುಂದುವರಿಕೆ. ಪ್ರತಿ ಗ್ರಾಮೀಣ ಚಿಂತನೆ, ಖಾದಿ ಚಳುವಳಿಯೂ ಹರಿಜನರ ಸಮಸ್ಯೆಗಳಿಗೆ ಪರಿಹಾರ ಸೂಚಿಸೀತೆಂದು ನಂಬಲಾಗಿತ್ತು. ಇಂದೂ ಕೂಡಾ ಈ ಸಂಪರ್ಕಗಳನ್ನು ದೃಢಪಡಿಸಬೇಕಾಗಿದೆ. ಈ ಸಂದರ್ಭವನ್ನು ಗಾಂಧಿಯ ಬೀಜರೂಪದಲ್ಲಿ ಗ್ರಹಿಸಿರಬಹುದು. ಗಾಂಧೀಜಿಯ ಕಾಲದಲ್ಲಿ ಕೃಷಿ ಮತ್ತು ಅರಣ್ಯಕ್ಕೆ ಇಂದು ಬಂದಿರುವ ಸ್ಥಿತಿ ಬಂದಿರಲಿಲ್ಲ. ಆಗ ಖಾದಿ, ಸಾರ್ವತ್ರಿಕೀಕರಣಗೊಳಿಸುವ ಸಂಕೇತವಾಗಿದ್ದರೆ, ಇಂದು ಸ್ವದೇಶಿ ಜೀವನ ವೈವಿಧ್ಯತೆಗೆ ಮಹತ್ವ ನೀಡುತ್ತದೆ. ಇದೇ ರೀತಿ ಕೈಗಾರಿಕೆಯಲ್ಲಿ ಕುಶಲಕರ್ಮಿಗೆ ಮಹತ್ವದ ಸ್ಥಾನ ದೊರೆಯುತ್ತದೆ'.

ಸ್ವದೇಶಿ ಪರಿಕಲ್ಪನೆಯ ವಿಸ್ತೃತ ಅನ್ವೇಷಣೆ ಅವರ ಶಕ್ತಿಗೆ ಮೀರಿದ್ದು. ತಮ್ಮದೇ ಬದುಕು ಮತ್ತು ಕೆಲಸ ನೋಡಿ ಉಮಾ ಹೇಳುತ್ತಾರೆ: 'ಇದು ಕೇವಲ ಪುಸ್ತಕದ ವಿಷಯವಲ್ಲ. ನಾವು ಸಾಮಾನ್ಯ ಜನ. ನಾವು ಎಲ್ಲರಂತೆ, ತೀರಾ ಸಾಮಾನ್ಯರಂತೆ ನಮ್ಮ ಗೃಹಸ್ಥ ಜೀವನ ನಡೆಸುತ್ತಿರುವವರು. ನಮ್ಮ ಸುತ್ತಲಿನ ಭ್ರಷ್ಟತೆ ಮತ್ತು ಕೊಳಕು ನಮ್ಮನ್ನು ಅಸಾಮಾನ್ಯರನ್ನಾಗಿ ಮಾಡಿದೆ. ಆದರೆ ನಾವು ಮಾತ್ರ ಸಾಮಾನ್ಯ ಜನ.'

ಆದುದರಿಂದ ಅವರು ಅವರ ದೈನಂದಿನ ಬದುಕಿನಲ್ಲಿ ಆದರ್ಶಗಳನ್ನು ಪರಿಪಾಲಿಸುತ್ತಾರೆ. ನಮ್ಮ ಸುತ್ತಲೂ ಗೆಳೆಯರು ಮತ್ತು ಸಹಪಯಣಿಗರಲ್ಲಿ ಬೇರೆ ಬೇರೆ ವಿಷಯ ಕುರಿತಂತೆ ಚರ್ಚೆಯನ್ನು ಜೀವಂತವಿಡಲು ಪ್ರಯತ್ನಿಸುತ್ತಾರೆ. ಸ್ವದೇಶಿ ಕ್ಷೇತ್ರದಲ್ಲಿ ಟೂತ್‌ಪೇಸ್ಟ್‌ಗೆ ಬದಲಾಗಿ ಮನೆಯಲ್ಲಿಯೇ ತಯಾರಿಸಿದ ಹಲ್ಲು ಪುಡಿ ಅಥವಾ ಬೇವಿನ ಕಡ್ಡಿ ಬಳಸುತ್ತಾರೆ. ಇದೇ ರೀತಿ ಅವರ ಬಚ್ಚಲ ಮನೆಯಲ್ಲಿ ಈಗ ಹಳ್ಳಿಗರ ಮನೆಯಲ್ಲಿ ದೊರೆಯುವ ಪ್ರತಿಷ್ಠಿತ ಬ್ರಾಂಡಿನ ಸಾಬೂನು ಇತ್ಯಾದಿ ಕಾಣಸಿಗುವುದಿಲ್ಲ. ಸ್ಥಳೀಯವಾಗಿ ತಯಾರಿಸಿದ ಸ್ನಾನದ ಪುಡಿ, ಸಾಬೂನು ಕಂಡುಬರುತ್ತದೆ. ಖಾದಿ ಅಥವಾ ಕೈಮಗ್ಗದ ಬಟ್ಟೆಗಳನ್ನೇ ಧರಿಸುತ್ತಾರೆ. ಎಂದೂ ಕೃತಕ ನಾರಿನಿಂದ ತಯಾರಿಸಿದ ಬಟ್ಟೆ ತೊಡುವುದಿಲ್ಲ.

ತಾನು ನೂಲಲು ಕಲಿಯಲು ಸಮಯ ದೊರೆಯುತ್ತಿಲ್ಲ, ದೊರೆಯಲಿಲ್ಲ ಎಂಬುದು ನರೇಂದ್ರನಾಥರ ಬಹುದೊಡ್ಡ ಕೊರಗಾಗಿದೆ. ಆದರೆ ಹತ್ತಿಯ ನಾಟಿ ತಳಿಗಳನ್ನು ಪುನರುಜ್ಜೀವನಗೊಳಿಸುವ ಕೆಲಸದಲ್ಲಿ ಅವರು ತೊಡಗಿಕೊಂಡಿದ್ದಾರೆ. ಈ ರೀತಿಯ ಕೆಲವು ಮಾದರಿಯ ಬೀಜಗಳನ್ನು ತಮ್ಮ ಜಮೀನಿನಲ್ಲಿ ಬಿತ್ತಿದ್ದಾರೆ. ಹಾಗೆ ಬೆಳೆದ ಹತ್ತಿಯಿಂದ ತಾವೇ ನೂಲು ತೆಗೆದು, ಅದನ್ನು ಸ್ಥಳೀಯವಾಗಿ ಬಟ್ಟೆ ಮಾಡಿ ಹಾಕಿಕೊಳ್ಳುವ ಕನಸು ಇನ್ನೂ ಸತ್ತಿಲ್ಲ.

ಇದೇ ರೀತಿ ಕೃಷಿ ವಲಯದಲ್ಲಿ ಸ್ವದೇಶಿಯ ಯಶಸ್ಸು ಮಿಶ್ರ ರೀತಿಯದು. 'ಸೆಂಟರ್ ಆಫ್ ಸೈನ್ಸ್ ಫಾರ್ ವಿಲೇಜಸ್' ಸಂಸ್ಥೆ ರೂಪಿಸಿದ ಹನಿ ನೀರಾವರಿ ಪದ್ಧತಿ ಮತ್ತು ಸಾವಯವ ಗೊಬ್ಬರಗಳು ವೆಂಕಟರಾಮಾಪುರಂನಲ್ಲಿಯ ಪ್ರಯತ್ನಗಳನ್ನು ತೀವ್ರಗೊಳಿಸಿದೆ. ಆದರೆ ಕಡಿಮೆ ಗೊಬ್ಬರದಿಂದ ಹೆಚ್ಚು ಕಾಂಪೋಸ್ಟ್ ಮಾಡುವ ಅವರ ಹೋರಾಟ ಮುಂದುವರೆದಿದೆ. ತನ್ನ ಭತ್ತ ಮತ್ತು ತರಕಾರಿ ಗದ್ದೆಗಳಿಂದ ರಾಸಾಯನಿಕ ಗೊಬ್ಬರಗಳನ್ನು ಹೊರದೂಡಿದ್ದಾರೆ. ಆದರೆ ಈ ಜಮೀನಿನಲ್ಲಿ ಕೆಲಸ ಮಾಡುತ್ತಿರುವ ಗುತ್ತಿಗೆ ಕೃಷಿಕರು ಮತ್ತು ಬೆಳೆಯನ್ನು ಹಂಚಿಕೊಳ್ಳುವ ರೈತರು ಇದನ್ನು ಅನುಸರಿಸುವಂತೆ ಮಾಡಲಾಗಿಲ್ಲ. ಇದೇ ರೀತಿ ವೆಂಕಟರಾಮಪುರಂನ ನೆರೆಯ ರೈತರು ಇದನ್ನು ನೋಡಬಲ್ಲ ಪ್ರೇಕ್ಷಕರಾಗಿದ್ದಾರೆಯೇ ಹೊರತು ಈ ಹಳ್ಳಿಯ ಈ ವಿಶಿಷ್ಟ ಕುಟುಂಬದ ಸಾಹಸಗಳಲ್ಲಿ ಭಾಗವಹಿಸುವವರಾಗಿಲ್ಲ.

ಈ ಪ್ರಯತ್ನಗಳಿಂದ ದೂರವೇ ಉಳಿದುಬಿಟ್ಟಿರುವ ಬಗ್ಗೆ ಉಮಾ ಮತ್ತು ನರೇಂದ್ರನಾಥರಿಗೆ ಜಗಳವಿಲ್ಲ. ಇನ್ನೊಬ್ಬರ ಮೇಲೆ ತೀರ್ಪು ಕೊಡುವ ಅಪಾಯಕ್ಕೆ ಹೋಗದೆ ತಮ್ಮದೇ ಕೆಲಸದಲ್ಲಿ ಇಬ್ಬರೂ ಮಗ್ನರಾಗಿದ್ದಾರೆ.

'ಸತ್ಯ' ಎನ್ನುವುದು ಎಲ್ಲರೂ ಅನ್ವೇಷಿಸಬೇಕಾದಂತಹುದು. ಕೆಲವರಿಗೆ ಸಾಧ್ಯವಾಗದೇ ಇರಬಹುದು. ಆದರೆ ಎಲ್ಲರೂ ಪ್ರಯೋಗಶೀಲರಾಗಿದ್ದಾರೆ. ಪ್ರತಿಯೊಂದು ಹಂತದಲ್ಲಿಯೂ ನೀವು ಕೆಲಸ ಮಾಡಬೇಕು ಮತ್ತು ಸತ್ಯವನ್ನು ರೂಪಿಸಿಕೊಳ್ಳಬೇಕು. ಆಗ ಸತ್ಯಕ್ಕೆ ನೀವು ಬದ್ಧರಾಗುತ್ತೀರಿ. ನಿಮ್ಮ ಕ್ರಿಯೆಗಳು ಇದನ್ನು ಆಧರಿಸಿರುತ್ತವೆ. ಆದುದರಿಂದ ನಮಗಿಂತ ಭಿನ್ನವಾಗಿ ಯೋಚಿಸುವವರನ್ನು ಕುರಿತು ತಿರಸ್ಕಾರ ಕೂಡದು.

ಆದರೆ ಇದು ಇಷ್ಟು ಸುಲಭವಲ್ಲ. ನರೇಂದ್ರನಾಥ ಅರ್ಥಮಾಡಿಕೊಂಡಂತೆ:

'ಒಂದು ಹಂತದಲ್ಲಿ ಇದು ತಪ್ಪು ಎಂದು ವಿಮರ್ಶಿಸಿದ ಕ್ಷಣದಿಂದ, ಅದರೊಡನೆ ಇರುವವರನ್ನು ನಾವು ದ್ವೇಷಿಸತೊಡಗುತ್ತೇವೆ ಎಂಬುದೇ ಇಲ್ಲಿಯ ಸಮಸ್ಯೆ. ಅನಂತರ 'ಅಹಂ' ಪ್ರವೇಶಿಸುತ್ತದೆ. ಇದು ಅರಿವು ಪಡೆಯಲು ನಿರಂತರ ಅಡಚಣೆ. 'ಸ್ವ' ಮತ್ತು 'ಅಹಂ'ನ್ನು ರಮಣಮಹರ್ಷಿ 'ಪರಮಾತ್ಮ' ಮತ್ತು 'ಆತ್ಮ' ಎಂದು ಕರೆಯುತ್ತಾರೆ. ಇದು ಒಂದರದ್ದೇ ಎರಡು ಅವಿರ್ಭಾವಗಳು. ಆತ್ಮ ಮತ್ತು ಪರಮಾತ್ಮ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಈ 'ನಾನುತನ'ದಿಂದ ಆಚೆ ಹೋಗಲು ನಾವು ಪ್ರಯತ್ನಿಸಬೇಕು. ನಮ್ಮ ಅಹಂ ಸಹಾನುಭೂತಿ ಮತ್ತು ಕರುಣೆಯಲ್ಲಿ ಕರಗಬೇಕು. ಆಗ ನಾವು ಎಲ್ಲರಲ್ಲಿ ಎಲ್ಲದರಲ್ಲಿ ನಮ್ಮನ್ನು ಕಾಣಬಹುದು.

ಆಗ ನಾವು ಸ್ಪಷ್ಟವಾಗಿ ಎಲ್ಲವನ್ನೂ ಕಾಣಬಹುದು ಮತ್ತು ಸೂಕ್ತಕ್ರಮ ತೆಗೆದುಕೊಳ್ಳಬಹುದು. ನಿರ್ದಿಷ್ಟ ಕ್ರಿಯೆ ಅಥವಾ ಸಾಮುದಾಯಿಕ ಸಾಮಾಜಿಕ ಕೆಲಸ ಈ' ನಿಲುವನ್ನು ಆಧರಿಸಿದೆ.

ಇದು ಕಲಾತೀತ ಅನ್ವೇಷಣೆಗಳ ವೈವಿಧ್ಯಮಯ ಆಕಾರದ ಪ್ರತಿಮೆಗಳ ಒಂದು ವಿಹಂಗಮ ನೋಟ ಅಥವಾ ಅದರ ಭಾಗವಾಗಿದ್ದರೂ ಇರಬಹುದು. ಇದು ಕುಮಾರಪ್ಪನವರು ಹೇಳಿದಂತೆ ದುರ್ಬಲರಿಗೂ ನ್ಯಾಯೋಚಿತ ಪಾಲು, ಸಾಮಾನ್ಯ ಮನುಷ್ಯನಿಗೂ ಅವನಿಗೆ ಸಲ್ಲಬೇಕಾದ ನ್ಯಾಯ ದೊರೆಯುವ ಸಮಾಜ ನಿರ್ಮಾಣದೆಡೆಗಿನ ತುಡಿತ, ಶಕ್ತಿಕೇಂದ್ರದ ಹಿಡಿತದಲ್ಲಿರುವುದೇ ನಿಜವಲ್ಲ. ವಂಚನೆ ಮತ್ತು ಶೋಷಣೆಗೆ ಮನ್ನಣೆ ಇಲ್ಲದ ಒಂದು ಸಮಾಜದ ಚಿತ್ರವಿದು. ಇದು ಆದರ್ಶದ ಕನಸೇ ಆಗಿಬಿಡಬೇಕೆ? ಜೆ.ಸಿ. ಕುಮಾರಪ್ಪ ಐವತ್ತು ವರ್ಷಗಳ ಕೆಳಗೆ ಇದನ್ನು ಬರೆದಾಗ ಬಹಳ ಮಂದಿ ಇದೇ ರೀತಿ ಭಾವಿಸಿದ್ದರು. ಇಂದು ಇದೇ ತೀರ್ಪನ್ನು ಮೇಧಾಪಾಟ್ಕರ್, ದಿನೇಶ್ ಅಥವಾ ನರೇಂದ್ರನಾಥರಿಗೂ ನೀಡಲಾಗುತ್ತಿದೆ.

ಇವರೆಲ್ಲರ ಶಕ್ತಿ, ಯಾವುದೋ ಗುರುವಿನ ಬರಹದಲ್ಲಿಳಿಸಿದ ಶಬ್ದದ ಮೇಲೆ ಅವಲಂಬಿತವಾಗಿಲ್ಲ. ಕುಮಾರಪ್ಪ ಅವರ 'ಶಾಶ್ವತ ಅರ್ಥಶಾಸ್ತ್ರ' ಬಹುತೇಕ ಜನರಿಗೆ ಒಂದು ಸ್ಫೂರ್ತಿ. ಆದರೆ ಅದೇ ದೇವವಾಣಿಯಲ್ಲ. ಈ ಹಾದಿಯ ಬಹುತೇಕ ಸಾಹಸಗಳು, ಪ್ರಯತ್ನಗಳು ಜೀವಂತವಾಗಿದ್ದು, ಆ ಕೃತಿಗಳನ್ನು ಮೀರಿ ಸಾಗುತ್ತಿವೆ. ಉತ್ತಮ ಜಗತ್ತಿನ ನಿರ್ಮಾಣಕ್ಕಾಗಿ ತಾನು ಸೂಚಿಸಿದ ಮಾರ್ಗಗಳು ಗಮನಾರ್ಹ ಮಟ್ಟದಲ್ಲಿ ಶಿಸ್ತನ್ನು ಮತ್ತು ಆತ್ಮಸಂಯಮವನ್ನು ಬೇಡುತ್ತವೆ ಎಂದು ಕುಮಾರಪ್ಪ ತಮ್ಮ ಕೃತಿಯನ್ನು ಸಮಾಪ್ತಿಗೊಳಿಸುತ್ತಾರೆ. ಈ ಎರಡೂ– ಶಿಸ್ತು ಮತ್ತು ಆತ್ಮಸಂಯಮ–ನಿರೀಕ್ಷಿತ ಮಟ್ಟದಲ್ಲಿ ಬಂದಾಗ, ಅದು ಶಾಶ್ವತ ಅರ್ಥಶಾಸ್ತ್ರದ ಉದಯಕ್ಕೆ ಕಾರಣವಾಗುತ್ತದೆ ಎಂದು ಅವರು ಭರವಸೆ ನೀಡುತ್ತಾರೆ.

ಕೇವಲ ಈ ಭರವಸೆ ಸಾಕಾಗುವುದಿಲ್ಲ ಎಂದು ಅರ್ಧಶತಮಾನದ ಈಚೆಗೆ ಸಾಗಿಬಂದ ನಮಗೆ ತಿಳಿದಿದೆ. ಈ ತುಡಿತ ತನ್ನ ಕ್ರಿಯಾತ್ಮಕ ರಾಜಕಾರಣವನ್ನು ಹುಡುಕಿಕೊಳ್ಳಲೇಬೇಕು. ಸಮಾಜದಲ್ಲಿರುವ ಅಧಿಕಾರ ಸಂರಚನೆಗಳನ್ನು ಪುನಃ ರೂಪಿಸಬೇಕು.

'ನಾವು ಸಂದೇಹವೊಂದನ್ನು ಬಿಟ್ಟು ಎಲ್ಲವನ್ನೂ ಅನುಮಾನಿಸುವ ಕಾಲಮಾನದಲ್ಲಿ ಇದ್ದೇವೆ' ಎಂದು ಶೂಮೇಕರ್ ಹೇಳಿದ್ದರು. ಕ್ರಿಯಾತ್ಮಕ ರಾಜಕಾರಣಕ್ಕಾಗಿ ನಡೆಯುವ ಹೋರಾಟ ಈ ಸಿನಿಕತನಕ್ಕೆ ಸವಾಲೊಡ್ಡಬೇಕು. ಮಾನವ ಕುಲದ ಸಾಮರ್ಥ್ಯದ ಕುರಿತು ಅಚಲ ಶ್ರದ್ಧೆ ಇಡಬೇಕು. ಈ ಬಯಕೆ ಅಥವಾ ಆಶಯವೇ ಬಾಪು ಕುಟೀರದಲ್ಲಿ ಎಲ್ಲರನ್ನೂ ಸೇರಿಸಿದೆ.

ಬಾಪು ಕುಟಿಯಲ್ಲಿನ ಸಭೆಗಳು....

'ಕತ್ತಲು ಎಂದೂ ಬೆಳಕನ್ನು ನುಂಗಲಾರದು. ಎಷ್ಟೇ ಕಿರುದೀಪವಾದರೂ ಸರಿ ಕತ್ತಲೆಯಲ್ಲಿ ಬೆಳಕು ಮೂಡಿಸುತ್ತದೆ'.

–ಸುಂದರ್‌ಲಾಲ್ ಬಹುಗುಣ

'ನಾವು ತಳ್ಳುವುದರಿಂದ ಗೂಡ್ಸ್ ರೈಲು ಚಲಿಸಲಾರದು. ನಮ್ಮಂತೆಯೇ ಇನ್ನೂ ಹತ್ತು ಜನ ಒಟ್ಟಾಗಿ ತಳ್ಳಿದರೂ ಇದು ಕದಲುವುದಿಲ್ಲ. ಆದರೆ ನಮ್ಮ ಈ ಕ್ರಿಯೆ, ಒಂದು ಎಂಜಿನ್ ತರುವಂತೆ ಯಾರಾದರೂ ಒಬ್ಬರಿಗೆ ಸ್ಫೂರ್ತಿ ನೀಡಬಲ್ಲುದು'.

–ವಿನೂ ಕಾಳೆ

'ಸಾಮಾಜಿಕ ಕಾರ್ಯಕರ್ತರು ಅಪಾರ ಶಕ್ತಿ ಮತ್ತು ವೇಗ ಇರುವ ವಿನಾಶಕಾರಿ ಶಕ್ತಿಯೊಡನೆ ಸಮರ ನಿರತರಾಗಿದ್ದಾರೆ. ಈ ಸಾಮಾಜಿಕ ಕಾರ್ಯಕರ್ತರು ಇದೇ ವೇಗ ಮತ್ತು ಶಕ್ತಿ ಪಡೆಯದೇ ಹೋದರೆ ಜಯ ಮರೀಚಿಕೆಯಾದೀತು. ಗಂಟೆಗೆ ಸಾವಿರ ಕಿಲೋಮೀಟರ್ ವೇಗದಲ್ಲಿ ಹಾರುತ್ತಿರುವ ವಿಮಾನವನ್ನು ಗಂಟೆಗೆ ೭೫೦ ಕಿ.ಮೀ ವೇಗದಲ್ಲಿ ಹಾರಿ ಹಿಡಿಯಲು ಸಾಧ್ಯವಿಲ್ಲ'.

–ಟಿ. ಕರುಣಾಕರನ್

ಹತ್ತೊಂಬತ್ತನೆಯ ಶತಮಾನದ ಮುಂಬೆಳಗಿನಲ್ಲಿ ಐರೋಪ್ಯ ದೇಶಗಳು ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಗುಲಾಮರ ವ್ಯಾಪಾರ ನಡೆಯುತ್ತಿತ್ತು. ಈ ಗುಲಾಮಗಿರಿಯನ್ನು ನಿಷೇಧಿಸತಕ್ಕದ್ದು ಎನ್ನುವ ಮಾತು ಸಾಮಾಜಿಕವಾಗಿ ಅಸಾಧ್ಯವಾಗಿತ್ತು; ಆರ್ಥಿಕವಾಗಿ ಅಸಂಗತವಾಗಿತ್ತು. ಇಷ್ಟಾದರೂ ೧೮೪೦ರ ಸುಮಾರಿಗೆ ಬ್ರಿಟನ್ ಗುಲಾಮಗಿರಿಯನ್ನು ನಿಷೇಧಿಸಿತ್ತು. ಅಮೆರಿಕೆಯೂ ಈ ದಿಕ್ಕಿನಲ್ಲಿ ಹೆಜ್ಜೆ ಹಾಕುತ್ತಿತ್ತು.

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ 'ಐರೋಪ್ಯ ಒಕ್ಕೂಟ' ಎಂಬುದು ದೊಡ್ಡ ಭ್ರಮೆ ಎನಿಸಿತ್ತು. ನೂರು ವರ್ಷಗಳ ಬಳಿಕ ಎರಡು ವಿಶ್ವ ಸಮರಗಳು ಮತ್ತು ಒಂದು ಶೀತಲ ಯುದ್ಧ ನಡೆದವು. ಇದು ವಾಸ್ತವ.

೧೯೧೧ರಲ್ಲಿ ಮುಂಬೈ ಗೇಟ್‌ವೇ ಬಳಿ ಬ್ರಿಟನ್‌ನ ಚಕ್ರಾಧಿಪತಿ ಬಂದಿಳಿದಾಗ ಭಾರತ ತೀವ್ರವಾದ ಮತ್ತು ಬಹುಮುಖಿಯಾದ ಸ್ವಾತಂತ್ರ್ಯದ ಹೋರಾಟ ಹಮ್ಮಿಕೊಳ್ಳುತ್ತದೆ ಎಂದು ಯಾರೂ ಭಾವಿಸಿರಲಿಲ್ಲ. ಅದರಲ್ಲಿಯೂ ಶಾಂತಿಯುತ ಅಸಹಕಾರ ಚಳುವಳಿ ಹಾಗೂ ಉಪ್ಪಿನ ಸತ್ಯಾಗ್ರಹದಿಂದ ಬ್ರಿಟಿಷ್ ಚಕ್ರಾಧಿಪತ್ಯ ನಡುಗೀತು ಎಂದು ಯಾರೂ ಆಲೋಚನೆಯನ್ನೂ ಮಾಡಿರಲಿಲ್ಲ.

೨೧ನೆಯ ಶತಮಾನದ ಹೊಸ್ತಿಲಲ್ಲಿ ವಾಲ್‌ಸ್ಟ್ರೀಟ್ ಪರಿಕಲ್ಪನೆಯ 'ಮಾರುಕಟ್ಟೆ'ಗೆ ಸವಾಲೆಸೆಯುವುದೂ, 'ಪ್ರಗತಿ'ಗೆ ಮರು ವ್ಯಾಖ್ಯಾನ ನೀಡುವುದು ಅತ್ಯಂತ ತಮಾಷೆಯ ಮಹತ್ವಾಕಾಂಕ್ಷೆ ಎನಿಸಿಕೊಳ್ಳುತ್ತದೆ. ಸ್ಥಳೀಯ ಸ್ವಾವಲಂಬನೆಗೆ ಹೆಚ್ಚಿನ ಮಹತ್ವ ಕೊಡುವ ಅಂತರರಾಷ್ಟ್ರೀಯ ಸಹಕಾರದ ಪ್ರಕ್ರಿಯೆ ಮೂಡಿಸುವ ವಿಭಿನ್ನ ರೀತಿಯು 'ಜಾಗತೀಕರಣ'ದ ಪರಿಕಲ್ಪನೆ 'ಒಂದು ಭ್ರಮೆ' ಎನಿಸುತ್ತದೆ.

ಆದರೆ ಬಾಪು ಕುಟಿಯ ಸುತ್ತ ಸೇರಿರುವ ಕಾರ್ಯಕರ್ತರಲ್ಲಿ ಈ ರೀತಿಯ ಅಭೀಪ್ಸೆ ಇದೆ. ಇದು ಬಹಳ ಶಕ್ತಿಶಾಲಿಯಾದ ಮಾದರಿಗಳ ಎದುರಿಗೆ ಅಸಹಾಯಕ ಪ್ರತಿರೋಧವೋ ಅಥವಾ ಇತಿಹಾಸವಾಗುವ ಮತ್ತೊಂದು ಅಸಾಧ್ಯತೆಯೋ ಎಂಬುದನ್ನು ಇಪ್ಪತ್ತೊಂದನೆಯ ಶತಮಾನ ಮಾತ್ರ ಹೇಳಬಲ್ಲುದು.

ಇಲ್ಲಿ ಸಂಗ್ರಹವಾಗಿರುವ ಕೆಲವು ಕತೆಗಳಂತೆ, ಪ್ರಪಂಚದ ಎಲ್ಲೆಡೆ ಚದುರಿಹೋಗಿರುವ ಜನರ ಅಭೀಪ್ಸೆಗಳು ಬಾಪು ಕುಟಿಯ ಸಭೆಗಳಲ್ಲಿ ಸಂಗ್ರಹವಾದಂತೆ ಭಾಸವಾಗುತ್ತದೆ. ಹರಿ (hurry) ಮತ್ತು ವರಿ (worry) ಮಾದರಿಯ ಮುಖ್ಯವಾಹಿನಿಗಿಂತ ಪೂರ್ಣವಾಗಿ ಭಿನ್ನವಾದ ಜೀವನಶೈಲಿ ರೂಪಿಸಿಕೊಳ್ಳುವವರೂ ಇದ್ದಾರೆ. 'ಅಭಿವೃದ್ಧಿ' ಹೆಸರಲ್ಲಿ ಸಾವಿರಾರು ಜನರನ್ನು ಗುಳೆ ಎಬ್ಬಿಸುವ ಯೋಜನೆಗಳ ವಿರುದ್ಧ ಪ್ರತಿಭಟಿಸುವವರಿದ್ದಾರೆ. ಇನ್ನು ಕೆಲವರು, ಈ ಸಮಸ್ಯೆಗಳ ಪರಿಹಾರಕ್ಕೆ 'ವೃತ್ತಿಕೌಶಲ' ಬಳಸುತ್ತಿದ್ದಾರೆ ಮತ್ತು ಆಡಳಿತದ ಚುಕ್ಕಾಣಿ ಹಿಡಿದಿರುವವರ ಜೊತೆ ಸೇರಿ ವಕಾಲತ್ತು, ಚೌಕಾಸಿ ಮಾಡುತ್ತಿದ್ದಾರೆ.

ಕೆಲವೇ ಕೆಲವರು ಮಧ್ಯಭಾರತದ ಈ ಕುಟಿಯತ್ತ ಬರುತ್ತಾರೆ. ಇವಾನ್ ಇಲಿಚ್ ತರಹದ ತತ್ವಶಾಸ್ತ್ರಜ್ಞರು ಮತ್ತು ಗಾಂಧಿಪಥದ ಸಹಪಯಣಿಗರಂತಹವರು ಈ ಪರ್ಣಕುಟಿಯ ಮಣ್ಣುನೆಲದ ಮೇಲೆ ಮೌನವಾಗಿಯೇ ಗಂಟೆಗಟ್ಟಲೆ ಕೂರುತ್ತಾರೆ. ಇಲಿಚ್ ಪ್ರಕಾರ ಈ ಕುಟಿ ಸಾಮಾನ್ಯ ಮನುಷ್ಯನ ಘನತೆಯನ್ನು ಹೇಗೆ ಮೇಲೆತ್ತಬಹುದು ಎಂಬುದನ್ನು ತೋರಿಸಿ ಕೊಡುತ್ತದೆ. ಸರಳತೆ, ಸೇವೆ ಮತ್ತು ಸತ್ಯಮಾರ್ಗದಿಂದ ದೊರೆಯುವ ಸಂತೋಷಕ್ಕೆ ಈ ಕುಟಿ ಸಂಕೇತವಾಗಿದೆ.

ಈ ರೀತಿಯ ಸಂತೋಷದ ಹುಡುಕಾಟ ತೀರ ಭಿನ್ನ ಭಿನ್ನವಾದ ಚಟುವಟಿಕೆಯಲ್ಲಿ ತೊಡಗಿರುವ, ವಿಭಿನ್ನ ಬಗೆಯ ಜನರನ್ನು ಕಂಡೂ ಕಾಣದಂತೆ ಒಂದೆಡೆ ಬೆಸೆಯುತ್ತದೆ. ಈ ಅನ್ವೇಷಣೆಗೆ ಗಮ್ಯ ಎಂಬುದು ಇಲ್ಲ. ಪ್ರತಿಯೊಂದೂ ತನಗೆ ವಿಶಿಷ್ಟವಾದ ರೀತಿಯಲ್ಲಿ

ವ್ಯಾಖ್ಯಾನಿಸುವ ಅನಂತ ಪ್ರಕ್ರಿಯೆ. ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸತ್ಯಾನ್ವೇಷಣೆ ನಡೆಸಿದ್ದಾರೆ. ಈ ಮೌಲ್ಯಗಳ ತಳಹದಿಯಲ್ಲಿ ಒಂದು ಸಮಾಜವನ್ನು ನಿರ್ಮಿಸುವ ಸಾಮೂಹಿಕ ಕನಸು ಇಲ್ಲಿದೆ.

ಒಂದೇ ಒಂದು ದೀಪ ಕತ್ತಲನ್ನು ಕರಗಿಸಬಹುದೆಂಬ ಅದಮ್ಯ ವಿಶ್ವಾಸ ಈ ಪ್ರಯಾಣಕ್ಕೆ ಅಗತ್ಯವಾಗಿದೆ. ನಮ್ಮ ಪ್ರತಿಯೊಂದು ಪ್ರಯತ್ನವೂ ಚುಂಬಕದಂತೆ ದೊಡ್ಡ ಶಕ್ತಿಯನ್ನು ಸೆಳೆಯಬಲ್ಲುದು ಎಂಬ ಬಗ್ಗೆ ನಮ್ಮಲ್ಲಿ ವಿಶ್ವಾಸವಿರಬೇಕಾಗುತ್ತದೆ. ಇದರ ಜೊತೆಗೆ ಸ್ವಲ್ಪ ಪ್ರಬುದ್ಧತೆ ಹಾಗೂ ನೇತ್ಯಾತ್ಮಕತೆಯನ್ನು ಹಿಮ್ಮೆಟ್ಟಿಸುವ ಇತ್ಯಾತ್ಮಕ ಶಕ್ತಿಗಳಿಗೆ ಇಂಬುಗೊಡುವ ಯೋಜನೆ ಬೇಕಾಗುತ್ತದೆ. ಇವೆಲ್ಲವುಗಳಿಗಿಂತ ಮುಖ್ಯವಾಗಿ 'ಇತರರು' ತನಗಿಂತ 'ಬೇರೆಯವರಲ್ಲ' ಎಂಬ ನಿರಂತರ ಅರಿವಿನ ಅಗತ್ಯವಿದೆ.

ಕಣ್ಣಿಗೆ ಗೋಚರಿಸುವ ಯಶಸ್ಸಿನ ಬಗೆಗೆ ತವಕ, ತಲ್ಲಣಗಳು ಕೆಲವು ಸಂದರ್ಭಗಳಲ್ಲಿ ನಮ್ಮ ಆತ್ಮವಿಶ್ವಾಸವನ್ನು ಅಲ್ಲಾಡಿಸಿಬಿಡುತ್ತವೆ. ಆ ಕಾರಣದಿಂದ ಕಾರ್ಯಕರ್ತರು ತಮ್ಮೆಲ್ಲ ಪ್ರಯತ್ನಗಳೂ 'ಉತ್ತಮ ವ್ಯವಸ್ಥೆಗೆ' ದಾರಿ ಮಾಡಿಕೊಡುವುದೊ ಅಥವಾ ನಿರ್ದಯವಾಗಿ ಹರಿಯುವ ಕಾಲ ಪ್ರವಾಹದಲ್ಲಿ ಅಳಿದುಬಿಡುವುದೋ ಎಂಬ ಪ್ರಶ್ನೆ ಕೇಳಿಕೊಳ್ಳುತ್ತಾರೆ.

ದಾಂಗುಡಿಯಿಡುತ್ತಿರುವ ಜಗತ್ತಿಗೆ ಮುಖಾಮುಖಿಯಾಗಿ ಸೋಲುವ ಯುದ್ಧ ಹೂಡಿದ್ದೇವೇನೋ ಎನ್ನಿಸುವ ಜನರನ್ನು ಈ ಪ್ರಶ್ನೆ ಮತ್ತೆ ಮತ್ತೆ ಭಯಭೀತರನ್ನಾಗಿಸುತ್ತದೆ. ನಿಜಕ್ಕೂ ಇದು ಹೌದು ಎನ್ನಿಸುವುದಾದರೆ ಪ್ರಪಂಚದಲ್ಲಿ ಒಂದು ವರ್ಗ ಸುಖ-ಸಮೃದ್ಧಿಯೊಳಗೆ ತೇಲಾಡುತ್ತಲೇ ಇರುತ್ತದೆ; ಆದರೆ ಬಹುಜನರು ಪಾರಿಸರಿಕ ಮತ್ತು ಆರ್ಥಿಕ ಬಂಜರು ಭೂಮಿಗಳಲ್ಲಿ ಪ್ರಾಣಿಗಿಂತಲೂ ಕಡೆಯಾಗಿ ಬದುಕುತ್ತಾರೆ. ಈ ದೃಶ್ಯಾವಳಿ ಈಗಾಗಲೇ ಮಿಲಿಯಗಟ್ಟಲೆ ಜನರಿಗೆ ಕಟುವಾಸ್ತವ. ಅದು ದೆಹಲಿಯಂತಹ ಮಹಾ ನಗರವಾಗಿರಬಹುದು ಅಥವಾ ಸಂಪನ್ಮೂಲಗಳ ಅಭಾವ ಎದುರಿಸುತ್ತಿರುವ ಗ್ರಾಮ ಆಗಿರಬಹುದು.

ಮನುಕುಲದ ನಾಗರಿಕತೆ ಸಂಕ್ರಮಣ ಕಾಲದಲ್ಲಿ ಬಹುಶಃ ಅನಿವಾರ್ಯವಾದ ತಿರುವಿನಲ್ಲಿದೆ ಎಂದು ಅನೇಕರು ಭಾವಿಸುತ್ತಾರೆ. ಎರಡು ಶತಮಾನಗಳ ಕೈಗಾರಿಕಾ 'ಅಭಿವೃದ್ಧಿ' ಇಪ್ಪತ್ತೊಂದನೆ ಶತಮಾನವನ್ನು ರೂಪಿಸುವಲ್ಲಿ ಒತ್ತಡ ಹಾಗೂ ನೈತಿಕ ಸಂಘರ್ಷಗಳನ್ನು ತಂದಿದೆ ಎಂದು ಅವರು ಭಾವಿಸುತ್ತಾರೆ. ಒಂದು ಹೊಸ ತತ್ವಪ್ರಣಾಳಿಕೆ ರೂಪಿಸುವುದಕ್ಕೆ ಕಾಲ ಸನ್ನಿಹಿತವಾಗಿದೆ ಎಂಬುದು ಅವರ ಬಲವಾದ ನಂಬಿಕೆ.

ಇಂದು ಪ್ರಪಂಚದಾದ್ಯಂತ ಬೇರೆ ಬೇರೆ ಬಗೆಯ ಜನರು ಗಾಂಧಿಯನ್ನು '೨೦ನೆಯ ಶತಮಾನದ ವ್ಯಕ್ತಿ' ಎಂದು ಗೌರವಿಸುತ್ತಾರೆ. ಪ್ರಪಂಚ 'ತಿರುವಿ'ನಲ್ಲಿದೆ ಎಂಬ ನಂಬಿಕೆಯಿಂದ ಕೆಲಸ ಮಾಡುವ ಜನ ಬಹುಶಃ ಮುಂದಿನ ನೂರು ವರ್ಷ 'ಗಾಂಧಿಯ ಶತಮಾನ' ಆಗಬಹುದೇನೋ ಎಂದೂ ನಂಬುತ್ತಾರೆ.

ಇವೆಲ್ಲವೂ ಉನ್ನತಿಯೊಂದಿಗೆ ಸಾಗುತ್ತವೆಯೇ ಎಂಬ ಪ್ರಶ್ನೆಗೆ ಮೇರೆಯೇ ಇಲ್ಲ. ಈ ತತ್ವಪ್ರಣಾಳಿಕೆಯಲ್ಲಿ ನಂಬಿಕೆ ಇಡುವ ಒಂದೇ ಪ್ರಶ್ನೆ 'ಇಲ್ಲಿಂದ ಮುಂದಕ್ಕೆಲ್ಲಿಗೆ?'. ಸೇವಾಗ್ರಾಮ ಆಶ್ರಮ ಕಳೆದ ಹತ್ತು ವರ್ಷದಲ್ಲಿ ಹಲವಾರು ವೇದಿಕೆ, ಸಭೆಗಳಲ್ಲಿ ಈ ಪ್ರಶ್ನೆಗೆ ಎಡೆ ಮಾಡಿಕೊಟ್ಟಿದೆ.

ಬಹುರಾಷ್ಟ್ರೀಯ ಕಂಪನಿಗಳ ಆಕ್ರಮಣ ಎದುರಿಸಲು ಆಜಾದಿ ಬಚಾವೋ ಆಂದೋಲನ, ಪರ್ಯಾಯ ಅಭಿವೃದ್ಧಿ ಮಾದರಿಗಳಿಗಾಗಿ ತೊಡಗಿರುವ ಕಾರ್ಯಕರ್ತರಿಗಾಗಿ 'ಜನವಿಕಾಸ್ ಆಂದೋಲನ', ಸ್ಥಳೀಯ(ನಾಟಿ)ಬಿತ್ತನೆ ಬೀಜಗಳ ರಕ್ಷಣೆಗೆ ಕಟಿಬದ್ಧವಾಗಿರುವ 'ಸಂವರ್ಧನ್'ಎಂಬ ಸಾವಯುವ ಕೃಷಿಕರ ತಂಡ –ಕೆಲವು ಈ ರೀತಿಯ ಸಂಘಟನೆಗಳು.

ಸಮತೆ, ಸರಳತೆ ಮತ್ತು ಸ್ವಾವಲಂಬನೆ ಆಧಾರಿತ ರಾಜಕೀಯ ನಿರ್ಮಾಣಕ್ಕಾಗಿ ಜನಾಂದೋಲನದ ರಾಷ್ಟ್ರೀಯ ಒಕ್ಕೂಟ (National Alliance of People's Movements NAPM) ೧೯೯೯ರ ಮಾರ್ಚ್‌ನಲ್ಲಿ ಇದೇ ಸೇವಾಗ್ರಾಮದಲ್ಲಿಯೇ ಸ್ಪಷ್ಟವಾದ ಹೇಳಿಕೆ ನೀಡಿತು. ಇದು 'ಪರ್ಯಾಯ ಅಭಿವೃದ್ಧಿ' ಪರಿಕಲ್ಪನೆಗಳಿಗಾಗಿ ದುಡಿಯುವ ಗುಂಪುಗಳಿಗೆ ಪರಿಣಾಮಕಾರಿ ರಾಜಕೀಯ ವೇದಿಕೆಯಾಯಿತು.

ಬಾಪು ಕುಟಿಯಲ್ಲಿ ನಡೆಯುವ ಸಮಾವೇಶ, ಸಭೆಗಳಲ್ಲಿ ಎಂದೂ ಗಾಂಧಿ ಥಾಳಾಗಿ ಕಾಣಿಸಿಕೊಳ್ಳುವುದಿಲ್ಲ. ಆದರೂ 'ಹಿಂದ್ ಸ್ವರಾಜ್'ದ ಪ್ರತಿಧ್ವನಿಗಳು ದೊಡ್ಡದಾಗಿ ಮತ್ತು ಸ್ಪಷ್ಟವಾಗಿ ಕೇಳುತ್ತಲೇ ಇರುತ್ತವೆ. ಪ್ರಸ್ತುತ 'ಜಾಗತೀಕರಣ' ಪ್ರಕ್ರಿಯೆ ಕೃತಕವಾದುದೂ, ಅಸ್ಥಿರವಾದುದೂ ಎಂಬ ಕಾರಣಕ್ಕೆ ತೀವ್ರ ಖಂಡನೆಗೆ ಒಳಗಾಗುತ್ತಿದೆ. ಇದಕ್ಕೆ ಗ್ರಾಮರಾಜ್ಯದ ಪರಿಕಲ್ಪನೆಯ ಮೂಲಕ, ಸ್ಥಳೀಯ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಬಲಪಡಿಸುವ ಮೂಲಕ ಹಾಗೂ ಜನರೇ ನೈಸರ್ಗಿಕ ಸಂಪನ್ಮೂಲಗಳನ್ನು ನಿಯಂತ್ರಿಸುವ ಮೂಲಕ ಪರ್ಯಾಯ ಹುಟ್ಟುಹಾಕಬೇಕಾಗಿದೆ.

ಲಾಭದಿಂದ ನಿಯಂತ್ರಿಸಲ್ಪಡುವ ಖಾಸಗೀಕರಣ, ಉದಾರೀಕರಣವನ್ನು ವಿರೋಧಿಸುವ ಈ ವೇದಿಕೆಗಳು ಭಾರತ ವಿಶ್ವವಾಣಿಜ್ಯ ಸಂಸ್ಥೆ ಮತ್ತು ಇತರ ಒಪ್ಪಂದಗಳಿಂದ ಹೊರ ಬರಬೇಕು ಹಾಗೂ ವಿಶ್ವವ್ಯಾಪಾರಕ್ಕೆ ಪರ್ಯಾಯವಾಗಿ ಜನಪರ, ಪರಿಸರಸ್ನೇಹಿ ಮತ್ತು ಸುಸ್ಥಿರವಾದ ವ್ಯವಸ್ಥೆಯನ್ನು ಸ್ಥಾಪಿಸಬೇಕಾಗಿದೆ ಎಂದು ಅಭಿಪ್ರಾಯಪಡುತ್ತವೆ. ಸಹಜವಾಗಿಯೇ ಈ ರೀತಿಯ ಚಿಂತನೆಗಳು ನೆರೆಯ ರಾಷ್ಟ್ರಗಳೊಂದಿಗೆ, ಸಹೋದರ ಸಂಬಂಧವನ್ನು ಸ್ಥಾಪಿಸಿಕೊಳ್ಳಲು ಹಾಗೂ ಆ ರಾಷ್ಟ್ರಗಳೊಂದಿಗೆ ಇರುವ ಸಮಸ್ಯೆಗಳನ್ನು ಶಾಂತ ರೀತಿಯಿಂದ ಪರಿಹರಿಸಿಕೊಳ್ಳಲು ನೆರವಾಗುತ್ತವೆ.

ಈ ರೀತಿಯ ಮೌಲ್ಯಗಳಲ್ಲಿ ನಂಬಿಕೆ ಇಡುವ ಮಂದಿ, ಪ್ರಸ್ತುತ ಬಂಡವಾಳ ವ್ಯವಸ್ಥೆ ಹಾಗೂ ಕಮ್ಯುನಿಸಂ ಎರಡೂ ಸಮಾನವಾಗಿಯೇ ಸೋತಿವೆ ಎಂದು ಅಭಿಪ್ರಾಯಪಡುತ್ತಾರೆ. ಕಮ್ಯುನಿಸಂನ ಮಾದರಿ ಈಗ ಇತಿಹಾಸ ಸೇರಿದೆ. ಆದರೆ ಮಾರುಕಟ್ಟೆಯ ಬಂಡವಾಳಶಾಹಿಯನ್ನು

ಪರಿಣಾಮಕಾರಿಯಾಗಿ ಎದುರಿಸಬೇಕಾಗಿದೆ. ಪ್ರಪಂಚದಾದ್ಯಂತ ಮಾರುಕಟ್ಟೆ ಆಗಾಗ್ಗೆ ಸಂಕಟಾವಸ್ಥೆಗೆ ಬರುತ್ತಿರುವ ಕಾರಣ ಸದ್ಯದ ಆರ್ಥಿಕ ವ್ಯವಸ್ಥೆಯನ್ನು ಪ್ರಶ್ನಿಸುವ, ನ್ಯಾಯ ಪರವಾದ ಮಾನವೀಯತೆಯುಳ್ಳ ಹಾಗೂ ಸುಸ್ಥಿರವಾದ ಸಾಮಾಜಿಕ, ಆರ್ಥಿಕ ಪರ್ಯಾಯ ವ್ಯವಸ್ಥೆಯನ್ನು ಹುಡುಕುವವರ ಸಂಖ್ಯೆ ಹೆಚ್ಚಾಗುತ್ತಿದೆ.

ಸ್ಥಳೀಯ ತಯಾರಕರ ಮತ್ತು ತಳಮಟ್ಟದ ಮನುಷ್ಯನ ಔದ್ಯಮಿಕ ಶಕ್ತಿಯನ್ನು ಹೆಚ್ಚಿಸುವ ಕರೆ ಈ ಹುಡುಕಾಟದ ಕೇವಲ ಒಂದು ಆಯಾಮ ಮಾತ್ರ. ಈ ಎಲ್ಲ ಪ್ರಶ್ನೆಗಳನ್ನು ಬೇರೆ ಬೇರೆ ಮಾರ್ಗಗಳಿಂದ ಪರಿಪರಿಸಲು ವೈವಿಧ್ಯಮಯವಾದ ಪ್ರಯತ್ನಗಳು ನಡೆಯುತ್ತವೆ. ಪಿ.ಪಿ.ಎಸ್.ಟಿ, ಭಾರತ ಪೆಟ್ರೋ-ಕೆಮಿಕಲ್ಸ್ ಮೇಲಿನ ಅವಲಂಬನೆಯನ್ನು ಪರ್ಯಾಯವಾದ ಪಾರಂಪರಿಕ ತಾಂತ್ರಿಕತೆಯ ಮೂಲಕ ಕಡಿಮೆ ಮಾಡಬಹುದು ಎಂದು ತೋರಿಸಿರುವುದು ಈ ಬಗೆಯ ಪ್ರಯತ್ನಕ್ಕೆ ಒಂದು ನಿದರ್ಶನ ಮಾತ್ರ. ಕೇವಲ ಮಾನವೀಯ ಕಾಳಜಿಗಳು ಮಾತ್ರ ಪಾರಂಪರಿಕ ತಯಾರಕರಿಗೆ ಶಕ್ತಿಯನ್ನು ತುಂಬಲು ಸಾಧ್ಯವಿಲ್ಲ. ಇದರ ಬೆನ್ನಿಗೆ ಪರಿಣಾಮಕಾರಿಯಾದ ಆರ್ಥಿಕ ತಾರ್ಕಿಕತೆ ಇರಬೇಕಾಗುತ್ತದೆ ಎಂದು ಈ ರೀತಿಯ ಪ್ರಯತ್ನದಲ್ಲಿ ನಿರತರಾಗಿರುವವರು ನಂಬುತ್ತಾರೆ.

ಸರಳತೆ, ಸ್ವಾವಲಂಬನೆ ಮತ್ತು ಸಮಾನತೆ-ಇವುಗಳು ಸನ್ಯಾಸತ್ವ ಅಲ್ಲ ಎಂದೂ ತೋರಿಸಬೇಕಾಗಿದೆ. ಈ 'ವಿನಾಶಕಾರಿ ಅಭಿವೃದ್ಧಿ'ಯ ಬಲಿಪಶುಗಳಿಗೆ ಹೆಚ್ಚಿನ ಅನುಕೂಲ ಮಾಡಿಕೊಡುವುದಲ್ಲ; ಬದಲಿಗೆ ಇದಕ್ಕೆ ಸೃಜನಶೀಲ ಮತ್ತು ತೃಪ್ತಿಕರ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಬೇಕು.

ಕಳೆದ ಎರಡು ದಶಕಗಳಲ್ಲಿ ದೇಶಾದ್ಯಂತ ಈ ರೀತಿಯ 'ಅಭಿವೃದ್ಧಿ' ಯೋಜನೆಗಳ ವಿರುದ್ಧ ದೊಡ್ಡ ದೊಡ್ಡ ಪ್ರತಿಭಟನೆಗಳೇ ನಡೆದಿವೆ. ಇದರ ಜತೆ ಜತೆಗೆ ಎಂಜಿನಿಯರುಗಳು ಮತ್ತು ವಿಜ್ಞಾನಿಗಳು ಕಾರ್ಯಸಾಧುವಾದ ಪರ್ಯಾಯಗಳ ಬಗ್ಗೆ ತಾಂತ್ರಿಕ ಕೆಲಸ ಮಾಡಿದ್ದಾರೆ. ಇಷ್ಟೆಲ್ಲ ಇದ್ದರೂ 'ಪರ್ಯಾಯ ಮಾದರಿ' ಇರಲಿ, ಪರ್ಯಾಯ ನೀತಿಗಾಗಿ ಬೇಡಿಕೆ ಇನ್ನೂ ಮುಖ್ಯವಾಹಿನಿಯ ಅಂಚಿನಲ್ಲಿಯೇ ಇದೆ. ಈ ದನಿಗಳು ಶಕ್ತರಾಜಕಾರಣದ ರಂಗಸ್ಥಳದ ಕೇಂದ್ರಕ್ಕಿಂತ ಸಾಕಷ್ಟು ದೂರದಲ್ಲಿವೆ.

ಈ ರೀತಿಯ ಪ್ರಯತ್ನಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವವರು ಶಕ್ತ ರಾಜಕಾರಣದಿಂದ ಆಚೆ ಉಳಿದಿದ್ದಾರೆ ಎಂಬುದು ಭಾಗಶಃ ಕಾರಣವಾಗಿದೆ. ಹಿಂದೆ ಈ ರೀತಿ ಮಾಡಿಕೊಂಡಿದ್ದ ಸಜ್ಜನರೂ ಅಧಿಕಾರದಿಂದ ಭ್ರಷ್ಟಗೊಂಡಿದ್ದನ್ನು ಅವರು ನೋಡಿದ್ದಾರೆ.

ಬಾಪು ಕುಟಿಯಲ್ಲಿನ ಅನೇಕ ಸಭೆಗಳಲ್ಲಿ ಶಕ್ತರಾಜಕಾರಣದ ಅಪಾಯ ಹಾಗೂ ಅದರ ಜವಾಬ್ದಾರಿಯಿಂದ ನುಣುಚಿಕೊಳ್ಳುವುದರಿಂದ ಆಗುವ ನಷ್ಟದ ಬಗ್ಗೆ ಆತ್ಮಶೋಧನೆ ನಡೆದಿದೆ. ನೆಲ್ಸನ್ ಮಂಡೇಲಾರಂತಹ ಹೀರೋಗಳ ವಿಜಯ ಬಹಳಷ್ಟು ಜನರಿಗೆ ಸ್ಫೂರ್ತಿ ನೀಡಿರುವುದು ನಿಜವಾದರೂ, ಅದು ಅವರ ದೈನಂದಿನ ಸಮಸ್ಯೆಗಳಿಗೆ ಪರಿಹಾರವಾಗಲಾರದು.

ಈ ರೀತಿ ಪರ್ಯಾಯ ಸಿದ್ಧಾಂತದಲ್ಲಿ ನಂಬಿಕೆ ಇರುವವರಿಗೆ ಸಣ್ಣ ಪ್ರಯತ್ನಗಳು ಸಮುದಾಯದ ಉದ್ದ, ಅಗಲ, ಆಳಕ್ಕೆ ತಲುಪಬಲ್ಲವೇ ಎಂಬುದು ಅಂತಿಮ ಪರೀಕ್ಷೆಯಾಗಿದೆ. ಇದರ ಗುರಿ ಕೇವಲ ಹೆಚ್ಚು ಮಂದಿಯನ್ನು ತಲುಪುವುದಿಲ್ಲ. ಸಂಪನ್ಮೂಲಗಳ ಹಿಡಿತ ಹೊಂದಲು ಅತಿ ಪ್ರತಿಷ್ಠಿತರನ್ನೂ ಒಳಗೊಳ್ಳುವುದು ಹಾಗೂ ಪ್ರಸ್ತುತ ಸಾಮಾಜಿಕ ಮತ್ತು ಆರ್ಥಿಕ ಸಿದ್ಧಾಂತಗಳಿಂದ ತೊಂದರೆಗೊಳಗಾಗಿರುವ ಲಕ್ಷೋಪಲಕ್ಷ ಅತಿ ಸಾಮಾನ್ಯ ಗೃಹಸ್ಥರ ಸೃಜನಶೀಲ ಚೈತನ್ಯ ಹೊರಹೊಮ್ಮಿಸಲು ಮತ್ತು ಭವಿತವ್ಯವನ್ನು ರೂಪಿಸುವಂತೆ ಮಾಡುವ ಹಾದಿ ಹುಡುಕುವುದು ಆಗತ್ಯ. 'ತೊಂದರೆಗೊಳಗಾದವರು' ಮತ್ತು 'ಫಲಾನುಭವಿಗಳು' ಎಂಬ ವಿಭಜನೆಯನ್ನೇ ಇಲ್ಲವಾಗಿಸಬೇಕು. ಪ್ರಸ್ತುತ ಜೀವನಪದ್ಧತಿ ಮತ್ತು ತಯಾರಿಕಾ ವಿಧಾನ ಎಲ್ಲರಿಗೂ ಅಪಾಯಕಾರಿಯಾದುದು ಎಂಬ ತಿಳವಳಿಕೆ ಮೂಡಿಸುವುದು ಮುಖ್ಯವಾದುದು.

ಇದು ಸಿದ್ಧಾಂತ. ಈ ಸಿದ್ಧಾಂತಕ್ಕೆ ಈಗ ಕಾಲ ಪಕ್ವವಾಗಿದೆ ಎಂದು ಬಾಬಾ ಆಮ್ಟೆ ಹೇಳುತ್ತಾರೆ. ಹೊಂದಾಣಿಕೆ, ಸಂಘರ್ಷ ಭಾವನಾತ್ಮಕ ಅಥವಾ ಭೌತಿಕ ಹಿಂಸೆಯನ್ನು ತರುತ್ತದೆ. ಆದರ್ಶದಲ್ಲಿ ಬದುಕುವುದು ಹಾಗೂ ಮನ ಒಲಿಸುವಿಕೆಯನ್ನು ಇದು ಬೇಡುತ್ತದೆ.

ಹೀಗಾಗಿ, ನಮ್ಮ ಕಣ್ಣೆದುರಿಗೇ ಆಗಿಹೋದ ಗಾಂಧೀಜಿಯ ಬದುಕು ನಮ್ಮನ್ನು ಆಕರ್ಷಿಸುತ್ತದೆ. ಈತ ನಮ್ಮಂತೆ ಅತ್ಯಂತ ಸಾಧಾರಣ ಮನುಷ್ಯ. ಪ್ರಾಮಾಣಿಕತೆ ಹಾಗೂ ನಿಷ್ಠುರತೆಯಿಂದ ಬೆಳೆದು ಎತ್ತರಕ್ಕೇರಿದವ. ಈ ಪ್ರಕ್ರಿಯೆಯಲ್ಲಿ ಸಾವಿರಾರು ಮಂದಿಯನ್ನು ಅದೇ ಮಟ್ಟಕ್ಕೆ ಏರುವಂತೆ ಮಾಡಿದವ. 'ಸಾಮಾನ್ಯ ಜೇಡಿಮಣ್ಣಿನೊಡನೆ ಕೆಲಸ ಮಾಡುತ್ತ ಅದಕ್ಕೆ ಚೈತನ್ಯದ ಕಿಡಿ ತುಂಬಿದ್ದು ಗಾಂಧಿಯವರ ವಿಶಿಷ್ಟತೆ' ಎಂದು ಲೂಯಿ ಫಿಶರ್ ಬರೆಯುತ್ತಾರೆ.

ಅಂತ್ಯವಾಗುತ್ತಿರುವ ಸಹಸ್ರಮಾನದ ಈ ಸಂದರ್ಭದಲ್ಲಿ ಗಾಂಧಿ ಹೊಸಹಾದಿಯ ಕೈಮರದಂತೆ ತೋರುತ್ತಾರೆ. ಗಾಂಧೀಜಿಯ ಚೈತನ್ಯ, ಜೇಡಿಮಣ್ಣಿನಂತಿರುವ ಮನುಷ್ಯರಲ್ಲಿ ಚೈತನ್ಯದ ಕಿಡಿಯನ್ನು ತನ್ನೊಳಗೇ ಹುಡುಕಿಕೊಳ್ಳುವ ಶಕ್ತಿ ತುಂಬುತ್ತದೆ.

ಈ ಕಾಲ್ಪನಿಕ ಪರಿಭ್ರಮಣದ ಬಾಗಿಲುಗಳಲ್ಲಿ ಹಾದುಹೋಗುತ್ತಾ ಕಡೆಯ ಬಾರಿ ಎಂಬಂತೆ ಬಾಪು ಕುಟಿಯ ಪಕ್ಕದ ಪ್ರಾರ್ಥನಾ ಮಂಟಪದಲ್ಲಿ ಸೇರೋಣ. ೧೯೯೮ರ ಮೇ ೧೧ರ ಮುಂಜಾವಿಗೆ ಕೆಲವೇ ಗಂಟೆಗಳ ಮುಂಚೆ ಉತ್ತರದ ಸಾವಿರಾರು ಮೈಲುಗಳ ಆಚೆ, ಭೂಗರ್ಭದಲ್ಲಿ ಭಾರತ ಸರ್ಕಾರ ಮೂರು ಅಣ್ವಸ್ತ್ರಗಳನ್ನು ಪರೀಕ್ಷೆ ಮಾಡಿತು. ಸೇವಾಗ್ರಾಮದ ಆಶ್ರಮದಲ್ಲಿ ಹಕ್ಕಿಗಳು ಎಂದಿನ ಕಲರವದೊಂದಿಗೆ ಗೂಡು ಸೇರಿದವು.

ಸೂರ್ಯ ಪಶ್ಚಿಮದಲ್ಲಿ ಮುಳುಗಿದಾಗ ಬಾಪು ಕುಟಿಯ ಬಾಗಿಲು ಮುಚ್ಚಿತು. ಆಶ್ರಮದ ಸದಸ್ಯರು ಮಣ್ಣು ನೆಲದ ಪ್ರಾರ್ಥನಾ ಮಂದಿರದಲ್ಲಿ ಕುಳಿತಿದ್ದಾರೆ. ಜಾಗಟೆಯ ಶಬ್ದ

ಆರಂಭಿಸಲು ಸೂಚನೆ. ವೇದ ಮಂತ್ರಗಳ ಧ್ವನಿಯ ಜತೆಯಲ್ಲಿಯೇ ಬೌದ್ಧ, ಕ್ರೈಸ್ತ, ಸಿಖ್ ಹಾಗೂ ಇಸ್ಲಾಂ ಧರ್ಮದ ಪ್ರಾರ್ಥನೆಗಳೂ ಕೇಳಿಬರುತ್ತವೆ. ಹೆಚ್ಚು ಕಡಿಮೆ ಕಳೆದ ೬೦ ವರ್ಷಗಳಿಂದ ಈ ದೈನಂದಿನ ಕ್ರಿಯೆಯನ್ನು ಪ್ರಾಮಾಣಿಕವಾಗಿ ಅನುಸರಿಸಲಾಗುತ್ತಿದೆ.

ಪ್ರಾಯಶಃ ಸಂಜೆಯ ಪ್ರಾರ್ಥನೆಯಲ್ಲಿ ವಿಷಾದ ಮಡುಗಟ್ಟಿತ್ತು. ಅಣ್ವಸ್ತ್ರ ಪರೀಕ್ಷೆ ಬಾಪು ಕುಟಿಯಲ್ಲಿ ಶೂನ್ಯ ಸೃಷ್ಟಿಸಿದಂತಿತ್ತು. ಆದರೆ ಇದು ನಿಜವಾಗಿಯೂ ಒಂದು ನಿರ್ಣಾಯಕ ಸೋಲೇ? ಬಾಪು ಕುಟಿಯ ಚೈತನ್ಯದಿಂದ ಸ್ಫೂರ್ತಿಗೊಂಡವರೂ ಸೇರಿದಂತೆ ಪ್ರತಿಯೊಬ್ಬರೂ ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕಾಗಿದೆ.

ಅಭಿನವ

ಮನೆ/ಕಛೇರಿ : 23505825
ಸಂಚಾರಿ: 9448804905

17/18-2, ಮೊದಲನೆಯ ಮುಖ್ಯರಸ್ತೆ , (ಮುನೇಶ್ವರ ದೇವಸ್ಥಾನದ ಹತ್ತಿರ) ಮಾರೇನಹಳ್ಳಿ, ವಿಜಯನಗರ, ಬೆಂಗಳೂರು - 560 040. E-mail: abhinavaravi@gmail.com

ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲವಾಗಿರುವ ಅಭಿನವಕ್ಕೆ ಈಗ ಹದಿಮೂರು ವರ್ಷ. ವಿಚಾರ ಸಂಕಿರಣ, ಕಾರ್ಯಶಿಬಿರ, ಉಪನ್ಯಾಸ, ಚಾತುರ್ಮಾಸಿಕ ಪತ್ರಿಕೆ, ಪುಸ್ತಕ ಪ್ರಕಟಣೆ, ಪುಸ್ತಕೋತ್ಸವ -- ಆಸಕ್ತಿಯ ಭೂಮಿಕೆಗಳು.

ಅಭಿನವ ಚಾತುರ್ಮಾಸಿಕ: ಕನ್ನಡದಲ್ಲಿ ಭಿನ್ನ ಆಶಯ ಮತ್ತು ವಿಭಿನ್ನ ಸ್ವರೂಪದ ಪತ್ರಿಕೆ. ಪ್ರತಿ ಸಂಚಿಕೆ: ಯಾರಾದರೊಬ್ಬ ಸಾಹಿತಿ/ಚಿಂತಕ/ಕಲಾವಿದನ ಒಟ್ಟು ಕೆಲಸ ಅಥವಾ ಯಾವುದಾದರೊಂದು ಸಮಸ್ಯೆ/ಕಲಾಪ್ರಕಾರ/ಮಾಧ್ಯಮವನ್ನು ಕೇಂದ್ರವಾಗಿರಿಸಿ ಕೊಂಡಿರುತ್ತದೆ. ಈಗಾಗಲೇ ಪರ್ಯಾಯ ಚಿಂತನೆ, ಸಿನಿಮಾ, ಪರಿಸರ, ದೇವನೂರ ಮಹಾದೇವ, ಪು.ತಿ.ನ, ಷೋಯಿಂಕಾ, ಸಂಗೀತ, ದೇಶೀದರ್ಶನಗಳು, ಹಿಂಸೆ, ನೋಮ್‌ಚಾಮ್‌ಸ್ಕಿ, ಪಾರ್ಟಿಷನ್, ಕೆ.ಟಿ. ಶಿವಪ್ರಸಾದ್, ಮಲೆಯಾಳಂ ಕವಿತೆ, ಮಿರ್ಜಾ ಗಾಲಿಬ್, ಬೆಳಗೆರೆ ಕೃಷ್ಣಶಾಸ್ತ್ರೀ ಮೈಸೂರು ಮಹಾರಾಜ ಕಾಲೇಜು ಮುಂತಾದ ಸಂಚಿಕೆಗಳು ಹೊರಬಂದಿವೆ. (ವಾರ್ಷಿಕ ಚಂದಾ ರೂ. 200/-)

ಪುಸ್ತಕ ಪ್ರಕಟಣೆ: ಭಾಷಾಶಾಸ್ತ್ರ, ಪ್ರಸಕ್ತ ವಿದ್ಯಮಾನ, ತತ್ವಶಾಸ್ತ್ರ, ಪರಿಸರ, ಮಾನವ ಶಾಸ್ತ್ರ, ಚರಿತ್ರೆ ಮುಂತಾದ ವಿಷಯಗಳಲ್ಲಿ ತಲಸ್ಪರ್ಶಿ ಶೀರ್ಷಿಕೆಗಳು, ಸತ್ವಪೂರ್ಣ ಕೃತಿಗಳ ಅನುವಾದಗಳು, ಶ್ರೀಯುತರಾದ ಯು.ಆರ್.ಅನಂತಮೂರ್ತಿ, ಕೆ.ವಿ. ಸುಬ್ಬಣ್ಣ, ಶಿವಪ್ರಕಾಶ್, ಪ್ರಭುಶಂಕರ, ರವಿಬೆಳಗೆರೆ, ಲಕ್ಷ್ಮೀಪತಿ ಕೋಲಾರ, ಎಚ್. ವೈ. ಶಾರದಾಪ್ರಸಾದ್ ಮುಂತಾದವರ ಕೃತಿಗಳು ಪ್ರಕಟಗೊಂಡಿವೆ.

ನಮ್ಮ ಪ್ರಕಟಣೆಗಳು

ಬಾಪು ಕುಟೀ(ಗಾಂಧಿ ನಂತರದ ಗಾಂಧೀ ಚಿಂತನೆಗಳು)ರಜನಿಭಕ್ಷೀ ಅನು: ವೆಂಕಟರಾಜು 150/-
ಕನ್ನಡದಮರ ಚೇತನ(ಮಾಸ್ತಿವೆಂಕಟೇಶಅಯ್ಯಂಗಾರ್‌ಸಾಹಿತ್ಯಸಮೀಕ್ಷೆ)ಸಂ.ಆಹಿತಾನಲ-175/-
ವಾಲ್ಮೀಕಿಯ ನೆವದಲ್ಲಿ- ಯು. ಆರ್. ಅನಂತಮೂರ್ತಿ 160/-
ಕತ್ತಿಯಂಚಿನದಾರಿ(ಸಾಹಿತ್ಯ-ಸಂಸ್ಕೃತಿ ಚಿಂತನೆ)ರಹಮತ್ ತರೀಕೆರೆ 150/-
ನಾಗಾರ್ಜುನನ ಮೂಲಮಾಧ್ಯಮಕಕಾರಿಕಾ-ಅನು:ನಟರಾಜ ಬೂದಾಳು 150/-
ಆರದ ದೀಪ(ಜಿ.ಪಿ. ರಾಜರತ್ನಂ ಜೀವನ ಚಿತ್ರ)ನೀಲತ್ತಹಳ್ಳಿ ಕಸ್ತೂರಿ 60/-
ಕಸೂತಿ(ಕಾದಂಬರಿ)ಸ. ಉಷಾ 100/-
ಅಂಗದಧರೆ(ಕಾದಂಬರಿ)ಕೇಶವ ಮಳಗಿ 50/-
ಚಾರುಚರಿತ(ಕಾದಂಬರಿ)ಕೇಶವಶರ್ಮ.ಕೆ 150/-
ಚೂರುಪಾರುರೇಷಿಮೆ(ಕವನ)ಕಮಲಾಕರ ಕಡವೆ 75/-
ನಿಲ್ಲಿಸಬೇಡ ಕಾಯುವುದನ್ನು(ಕವನ)ಭಾರತೀದೇವಿ 40/-
ಕನಸು ಕನ್ನಡಿ(ಕವನ)ಸರಸ್ವತಿ ಗಂಗೊಳ್ಳಿ 40/-
ಇದರ ಹೆಸರು(ಕವನ)ಅಂಕುರ್ ಬೆಟಗೇರಿ 75/-

ಗುಬ್ಬಿಯ ಸ್ವರ್ಗ(ಮಕ್ಕಳ ಪದ್ಯಗಳು) ಭಾಗೀರಥಿ ಹೆಗಡೆ		25/-
ಹೂ ಅಂದ್ರ ಹೂ(ಪುಟಾಣಿಗಳಿಗಾಗಿ ಪುಟಾಣಿ ಪದ್ಯಗಳು)ಆನಂದ ಪಾಟೀಲ		40/-
ಕನ್ನಡ-ಇಂಗ್ಲಿಷ್ ನಿಘಂಟು – ಪ್ರಭುಶಂಕರ ಮತ್ತು ಬಾ.ವೇ. ಶ್ರೀಧರ		250/-
ದೇಸಿ ನಗು(ಲೇಖನಗಳು)ಎಂ.ಎಸ್. ಮೂರ್ತಿ		60/-
ಜೀವಜಾಲ(ಪರಿಸರ ವಿಜ್ಞಾನ)ಕೆ. ಪುಟ್ಟಸ್ವಾಮಿ, ಕೃಪಾಕರ–ಸೇನಾನಿ		100/-
ನಮಸ್ಕಾರ(ಸಾಹಿತ್ಯ ವಿಮರ್ಶೆ) ಎಚ್.ಎಸ್. ರಾಘವೇಂದ್ರರಾವ್		150/-
ಎಲ್ಲಬಲ್ಲವರಿಲ್ಲ(ಆಯ್ದ ಲೇಖನಗಳು) ಎಚ್.ವೈ. ಶಾರದಾಪ್ರಸಾದ್		75/-
ಆಕಾಶದಗಲ ನಗುವಿನ ಅವಧೂತ(ಬೆಳಗೆರೆ ಕೃಷ್ಣಶಾಸ್ತ್ರೀ ಅವರನ್ನು ಕುರಿತು)		50/-
ನನಗೆ ದೇವರ ಗೊಡವೆ ಕೂಡ ಬೇಡ(ಮಿರ್ಜಾ ಗಾಲಿಬ್ ಜೀವನ– ಕೃತಿಗಳು)		60/-
ನೆಲಕ್ಕೆ ಬಿದ್ದ ನಕ್ಷತ್ರಗಳು (ಹೂ ಕುರಿತು)	ಸಂ. ರವಿಕುಮಾರ	75/-
ಟಿಬೆಟ್ (ಜಗತ್ತು ಕೇಳಿಸಿಕೊಳ್ಳಬೇಕಾದ ಆರ್ತಮೊರೆ) ಮಂಗ್ಳೂರ ವಿಜಯ		375/-
ಢಂಢಂ ಊರಿಗೆ ಡಿಂಡಿಂ ಗಾಡಿ (ಮಕ್ಕಳಿಗಾಗಿ) ಆನಂದ ಪಾಟೀಲ		20/-
ವೈದ್ಯರ ಶಿಕಾರಿ(ಶಿಕಾರಿಯಲ್ಲದ ಶಿಕಾರಿಅನುಭವಗಳು) ಟಿ.ಎಸ್.ರಮಾನಂದ್)		70/-
ಈ ತನಕದ ಕಥೆಗಳು	ಅಬ್ದುಲ್ ರಷೀದ್	150/-
ನಮ್ಮ ಕನ್ನಡ(ಕನ್ನಡ ಚಿಂತನೆ)	ಕೆ.ವಿ.ತಿರುಮಲೇಶ್	60/-
ಆಚೀಚೆಯ ಕಥೆಗಳು (ಕಡಲಾಚೆಯ ಕನ್ನಡ ಕಥಾ ಸಂಕಲನ)	ಸಂ.ಗುರುಪ್ರಸಾದ್ ಕಾಗಿನೆಲೆ	150/-
ನೀರತೇರು(ಕವನ) ಕವಿತಾ ರೈ		60/-
ಅಬ್ದುಲ್ಲನ ಕೈಲಾಸ(ಕವಿತೆ)ಸುದೇಶ್ ಮಹಾನ್		50/-
ನಿಮ್ಮ ಸಿಮ್ಮ (ಅಂಕಣ ಬರಹ)	ಸಿ.ಆರ್.ಸಿಂಹ	125/-
ನಿನ್ನ ನೆನಪಿಗೊಂದು ನವಿಲುಗರಿ(ಕವನ ಸಂಕಲನ)ಆನಂದ ಋಗ್ವೇದಿ		50/-
ಪಂಜರಿಯರವ (ಜಾನಪದ ಅಧ್ಯಯನ) ಎನ್.ಪಿ. ಶಂಕರ ನಾರಾಯಣರಾವ್		150/-
ಹವಳ ಹಾರಿದ ಹೊತ್ತು (ಕವನ ಸಂಕಲನ)	ಸ.ಉಷಾ	50/-
ಪುಗಳೇಂದಿ ಪ್ರಹಸನ (ನಾಟಕ)	ರಾಮನಾಥ	60/-
ಬೆಂಕಿಯ ನೆನಪು(ಪರ್ಯಾಯಚರಿತ್ರೆ)ಎಡುವರ್ಡೊ ಗೆಲಿಯಾನೊ/ಕೆ.ಪಿ. ಸುರೇಶ		75/-
ಹಿಡಿದ ಉಸಿರು (ಕವನ ಸಂಕಲನ)	ಅಂಕುರ್ ಬೆಟಗೇರಿ	40/-
ಯದುಗಿರಿಯ ಬೆಳಕು (ಪು.ತಿ.ನ ಸಾಹಿತ್ಯ ಕುರಿತು)ಸಂ. ಆಹಿತಾನಲ		150/-
ಮರೆಯಲಾದೀತೆ? (ನೆನಪುಗಳು)	ಬೆಳಗೆರೆ ಕೃಷ್ಣಶಾಸ್ತ್ರೀ	250/-
ಎಲೆಮರೆಯ ಅಲರು(ಉಳಿದ ನೆನಪುಗಳು)ಬೆಳಗೆರೆ ಕೃಷ್ಣಶಾಸ್ತ್ರೀ		45/-
ಹೇ ರಾಮ್ (ಭಾರತದ ಆತ್ಮಚ್ಛೇದ ಕಥನ)	ಸಂ. ನ. ರವಿಕುಮಾರ	275/-
ಭಾರತೀಯತತ್ವಶಾಸ್ತ್ರದ ರೂಪುರೇಖೆಗಳು ಮೂಲ:ಎಂ.ಹಿರಿಯಣ್ಣ/ಪ್ರಭುಶಂಕರ		275/-
ಅಮೆರಿಕಾಯಣ	ವೈ.ಆರ್. ಮೋಹನ್	650/-
ಅಮೂರ್ತತೆ ಮತ್ತು ಪರಿಸರ (ವಿಮರ್ಶೆ)	ರಾಜೇಂದ್ರ ಚೆನ್ನಿ	180/-
ಫಾದರ್ 55 (ಕವನ ಸಂಕಲನ)	ವಿ.ಎಂ.ಮಂಜುನಾಥ್	50/-
ಮಂದಹಾಸ ಮೀಮಾಂಸೆ(ಸಮಗ್ರ ಲಲಿತ ಪ್ರಬಂಧ)ಪ್ರಭುಶಂಕರ		150/-

ಖಲೀಲ್ ಗಿಬ್ರಾನ್ (ಜೀವನ ದರ್ಶನ)	ಪ್ರಭುಶಂಕರ	60/-
ಆಂಟೋನಿಯೊ ಗ್ರಾಮ್ಷಿ (ಶತಮಾನ ಚಿಂತನೆ)	ಕೆ. ಫಣಿರಾಜ್	50/-
ಹಳೆಯಕಾಲ್ಪದ ಹೊಸಕತೆ(ಕಥಾ ಸಂಕಲನ)	ಕೆ.ಸತ್ಯನಾರಾಯಣ	125/-
ಮನುಕುಲದ ಮಾತುಗಾರ (ಚಾಮ್‌ಸ್ಕಿ ಚಿಂತನೆ/ದರ್ಶನ)	ವಿವಿಧ ಲೇಖಕರು	150/-
ಮಾಯಾಪಾತಾಳ (ಕವಿತೆ)	ರಾಮಲಿಂಗಪ್ಪ ಟಿ.ಬೇಗೂರು	50/-
ಯುಗಪಲ್ಲಟ (ಸಂಸ್ಕೃತಿ ಚಿಂತನೆ)	ಯು.ಆರ್.ಅನಂತಮೂರ್ತಿ	80/-
ಹಕ್ಕಿ ಪುಟಾಣಿ (ಮಕ್ಕಳ ಕವಿತೆ)	ಆನಂದ ವಿ. ಪಾಟೀಲ	50/-
ಅರಹಂತ (ನಾಟಕ)	ರಾಮನಾಥ	75/-
ಪ್ರೀತಿಸುವುದೆಂದರೆ (ಆರ್ಟ್ ಆಫ್ ಲವಿಂಗ್)	ಮೂಲ : ಎರಿಕ್ ಫ್ರಾಂ ಅನು : ಕೆ.ವಿ.ನಾರಾಯಣ, ಎಚ್.ಎಸ್. ರಾಘವೇಂದ್ರರಾವ್	75/-
ಯೇಗ್ದಾಗೆಲ್ಲಾ ಐತೆ	ಬೆಳಗೆರೆ ಕೃಷ್ಣಶಾಸ್ತ್ರಿ	50/-
ಗೊಂದಲಪುರ (ಹಿಂಸೆ ಕುರಿತು*)	ಸಂ.ನ.ರವಿಕುಮಾರ, ಡಿ.ಆರ್.ಚಂದ್ರಮಾಗಡಿ	175/-
ಕರುಳಬಳ್ಳಿಯ ಸೊಲ್ಲು(ಬೇಂದ್ರೆ ಕಾವ್ಯ ವಿಮರ್ಶೆ*)	ರಾಜೇಂದ್ರ ಚೆನ್ನಿ	40/-
ಫಾದರ್(ಸ್ಟ್ರಿಂಡ್‌ಬರ್ಗ್ ನಾಟಕ)	ಅನು : ಸಿ. ನಾಗಣ್ಣ	40/-
ಬೆಳದಿಂಗಳು(ಮಕ್ಕಳ ಕಾದಂಬರಿ*)	ಆನಂದ ವಿ. ಪಾಟೀಲ	15/-
ರಚನೆ-ನಿರಚನೆ(ವಿಮರ್ಶೆ*)	ಕೇಶವಶರ್ಮ. ಕೆ	80/-
ಯಾರ ಜಪ್ತಿಗೂ ಸಿಗದ ನವಿಲುಗಳು (ದೇವನೂರ ಮಹಾದೇವ ಸಾಹಿತ್ಯ ಕುರಿತು)	ಸಂ. ಪಿ. ಚಂದ್ರಿಕಾ	120/-
ನೀಲಿತತ್ತಿ(ಕವನ ಸಂಕಲನ*)	ಲಕ್ಷ್ಮೀಪತಿ ಕೋಲಾರ	50/-
ಜನ್ನ ಮತ್ತು ಅನೂಹ್ಯ ಸಾಧ್ಯತೆ(ಕಥಾ ಸಂಕಲನ*)	ಆನಂದ ಋಗ್ವೇದಿ	50/-
ವಿರೋಧ ವಿಲಾಸ(ವಕ್ರೋಕ್ತಿ ವರಸೆಗಳು)	ಎಮ್.ಎಸ್.ಕೆ. ಪ್ರಭು	30/-
ದೇಶೀ ದರ್ಶನಗಳು*	ವಿವಿಧ ಲೇಖಕರು	60/-
ನಮ್ಮ ತವಕ ತಲ್ಲಣಗಳು(ಲೇಖನಗಳು*)	ಕೆ.ವಿ. ಸುಬ್ಬಣ್ಣ	60/-
ಮಾಗಿ ಮೂವ್ವತ್ತೈದು(ಕಥೆಗಳು)	ಕೇಶವ ಮಳಗಿ	65/-
ಪಾತಿದೋಣಿ (ಕಥೆಗಳು*)	ಉಮಾ ಹೆಗಡೆ	45/-
ಶಬ್ದರೇಖೆ*-(ವಿಮರ್ಶೆ)	ಕೇಶವಶರ್ಮ ಕೆ.	50/-
ಅನಾಹತನಾದ (ಸಂಗೀತ ಕುರಿತು*)	ವಿವಿಧ ಲೇಖಕರು	35/-
ಕದಳೀವನ ಕರ್ಪೂರ(ಪರಿಸರ ಚಿಂತನೆ*)	ವಿವಿಧ ಲೇಖಕರು	50/-
ಯದುಗಿರಿಯ ಅಂಗಳದಿಂದ (ಪು.ತಿ.ನ. ಸಾಹಿತ್ಯ ಕುರಿತು*)	ವಿವಿಧ ಲೇಖಕರು	45/-
ಕ್ಯಾಪ್ಸೂಲಗಿತ್ತಿ(ಅಂಕಣ ಬರಹ)	ನಾಗೇಶ ಹೆಗಡೆ	30/-
ಚಲ್ ಮೇರಿ ಲೂನಾ (ಪ್ರಬಂಧಗಳು*)	ಆರ್. ನಿರ್ಮಲಾ	50/-
ಪಾ.ವೆಂ. ಹೇಳಿದ ಕಥೆ(ಕಥೆಗಳು)	ರವಿ ಬೆಳಗೆರೆ	100/-
ದಾಂಪತ್ಯಕ್ಕೊಂದು ಶೀಲ(ಪ್ರಬಂಧಗಳು)	ಕೆ. ಸತ್ಯ ನಾರಾಯಣ	30/-
ಒಂದು ಅನುರಾಗಕ್ಕಾಗಿ ಎಷ್ಟೆಲ್ಲಾ(ಕವನ*)	ಕೆ.ಪಿ. ಮೃತ್ಯುಂಜಯ	20/-
ಆಶಯ ಆಕೃತಿ (ವಿಮರ್ಶೆ*)	ಸಿ. ಎನ್. ರಾಮಚಂದ್ರನ್	120/-

ಖಾಸ್‌ಬಾತ್ 97(ಅಂಕಣ ಬರಹ*)	ರವಿ ಬೆಳಗೆರೆ	100/-
ಕಂಪ್ಯೂಟರ್‌ಗೊಂದು ಕನ್ನಡಿ*	ಸಿ.ಪಿ.ರವಿಕುಮಾರ್	27/-
ನೋಟಪಲ್ಲಟ(ದೃಶ್ಯ ಸಂಸ್ಕೃತಿ ಕುರಿತು)	ಎಚ್.ಎ. ಅನಿಲ್‌ಕುಮಾರ್	35/-
ಇಚ್ಛಾಶಕ್ತಿಯ ನಿರೂಪ(ವೋಲೆ ಷೋಯಿಂಕಾ ಸಾಹಿತ್ಯ ಕುರಿತು*)	ವಿವಿಧ ಲೇ	35/-
ಅಂಧಮಕ್ಕಳ ಅರಿವಿನಂಗಣ (ಮಹಾ ಪ್ರಬಂಧ)	ಎಮ್.ಆರ್. ಮಂದಾರವಲ್ಲಿ	25/-
ಮೊದಲ ಕಟ್ಟಿನ ಗದ್ಯ(ಲೇಖನಗಳು)	ಎಚ್.ಎಸ್. ಶಿವಪ್ರಕಾಶ್	70/-
ಗೌರವ (ಜಿ.ಎಸ್.ಎಸ್. 75)	ಸಂ.ಚಿ. ಶ್ರೀನಿವಾಸರಾಜು	250/-
ಆಟ-ಮಾಟ(ಸೃಜನಶೀಲತೆ ಕುರಿತು)	ಕೆ.ಜಿ.ಸುಬ್ರಹ್ಮಣ್ಯನ್/ಶ್ರೀನಿವಾಸಮೂರ್ತಿ	100/-
ನಮನ(ಅನುಭಾವಿ ಕಥನ)	ಆನಂದ ಪಾಟೀಲ	50/-
ಕಲ್ಲರಳಿ ಹೂವ್ವಂತೆ (ಕೆ.ಟಿ.ಶಿವಪ್ರಸಾದ್ ಕುರಿತು)	ಸಂ.ಕೆ. ಪುಟ್ಟಸ್ವಾಮಿ	150/-
ಮಕ್ಕಳಸಾಹಿತ್ಯಶತಮಾನ(ಮಕ್ಕಳಸಾಹಿತ್ಯಸಮೀಕ್ಷೆ)	ಸಂ:ಆನಂದಪಾಟೀಲ/ನ. ರವಿಕುಮಾರ	75/-

* ಪ್ರತಿಗಳು ಮುಗಿದಿವೆ

ಗಾಂಧೀಜಿ, ತಮ್ಮ ಹುಟ್ಟಿನಿಂದ ದೇಹಾಂತ್ಯದವರೆಗೆ ಹಲವು ಮನೆಗಳಲ್ಲಿ ಸೆರೆಮನೆಗಳಲ್ಲಿ ಕೂಡ–ವಾಸಿಸಿದ್ದರು. ವಾರ್ಧಾದ ಸೇವಾಗ್ರಾಮದ ಆಶ್ರಮದಲ್ಲಿರುವ ಸರಳವಾದ ಮಣ್ಣಿನ ಕಟ್ಟಡ 'ಬಾಪು ಕುಟಿ' ಅವರು ತಮ್ಮ ಕೊನೆಯ ದಿನಗಳಲ್ಲಿ ನೆಲೆಸಿದ್ದ ಮನೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಗಾಂಧಿ ತತ್ವಗಳನ್ನು ಅನುಷ್ಠಾನಕ್ಕೆ ತರಲು ತಮ್ಮ ಬದುಕನ್ನು ಮುಡಿಪಾಗಿಟ್ಟ ೧೨ ಮಹನೀಯರ ಸಾಧನೆಗಳ ವೃತ್ತಾಂತವಿರುವ ಈ ಪುಸ್ತಕದ ಶೀರ್ಷಿಕೆಯೂ 'ಬಾಪು ಕುಟಿ'

'ಬಾಪು ಕುಟಿ'ಯ ಪ್ರಬಂಧಗಳ ಕೇಂದ್ರ ವ್ಯಕ್ತಿಗಳಲ್ಲಿ ಪ್ರತಿಯೊಬ್ಬರೂ, ಹಾಗೆ ಬಯಸಿದ್ದರೆ, ದೊಡ್ಡ ದೊಡ್ಡ ಹುದ್ದೆ ಹಿಡಿದು ಹೇರಳ ಹಣಗಳಿಸಬಹುದಾದಷ್ಟು ವಿದ್ಯಾಸಂಪನ್ನರು. ಆದರೆ ಅವರ ಯಶಸ್ಸಿನ ಮಾನದಂಡಗಳು ಬೇರೆ. ತಮ್ಮ ಸ್ವಂತದ ಸುಖ, ಸಮಷ್ಟಿ ಬದುಕಿನ ಪಾಡಿನ ಜೊತೆ ಅವಿನಾಭಾವ ಸಂಬಂಧ ಹೊಂದಿದೆ ಎಂದು ಅವರೆಲ್ಲರೂ ಭಾವಿಸಿದರು. ಬಹುಜನರ ಬಡತನದ ಮಧ್ಯೆ ವ್ಯಕ್ತಿಗತ ಆಶೆ ಆಕಾಂಕ್ಷೆಗಳು ಅರ್ಥಹೀನವೆಂದು ಅವರಿಗೆ ಕಂಡಿತ್ತು.

ರಾಜಾಸ್ಥಾನದಲ್ಲಿ ಮಾಹಿತಿ ಹಕ್ಕು ಮತ್ತು ಕನಿಷ್ಠ ಕೂಲಿಗಾಗಿ ಹೋರಾಟ ಸಂಘಟಿಸಿದ ದಿಟ್ಟ ಮಹಿಳೆ ಅರುಣಾ ರಾಯ್, ಗ್ರಾಮೀಣ ಉದ್ಯಮದ ಬಗ್ಗೆ ಸಂಶೋಧನೆ ನಡೆಸಿದ ಕರುಣಾಕರನ್, ಪರಂಪರಾಗತ ಕಲೆಗಳ ಪುನರುಜ್ಜೀವನಕ್ಕಾಗಿ ದುಡಿದ ರವೀಂದ್ರ ಶರ್ಮ, ಪರ್ಯಾಯ ಶಕ್ತಿಮೂಲ ಮತ್ತು ಉತ್ಪಾದನಾ ಕ್ರಮಗಳ ಹುಡುಕಾಟ ನಡೆಸಿದ ವಿಜ್ಞಾನಿ ಸಿ.ವಿ. ಶೇಷಾದ್ರಿ, ಕುಷ್ಠ ರೋಗಿಗಳ ಶುಶ್ರೂಷೆಯಲ್ಲಿ ತನ್ನನ್ನು ತೊಡಗಿಸಿಕೊಂಡ ಬಾಬಾ ಆಮ್ಟೆ, ಗಾಂಧಿವಾದಿ ಅರ್ಥಶಾಸ್ತ್ರಜ್ಞ ಜೆ.ಸಿ. ಕುಮಾರಪ್ಪ, ಗಂಗಾನದಿಯನ್ನು ಸ್ವಚ್ಛಗೊಳಿಸುವ ಕಾಯಕ ಕೈಗೊಂಡ ಕಾಹಲ್‌ಗಾಂನ ಗ್ರಾಮಸ್ಥರು, ಆಂಧ್ರದ ನೆಯ್ಗೆಯ ವೃತ್ತಿಗೆ ಮರುಹುಟ್ಟುಕೊಟ್ಟ ದಸ್ತಕಾರ್ ಚಳುವಳಿಯಲ್ಲಿ ಪಾಲುಗೊಂಡವರು– ಈ ಪುಸ್ತಕದಲ್ಲಿ ನಮಗೆ ಎದುರಾಗುವವರೆಲ್ಲ ಲೋಕಹಿತಕ್ಕೆ ತಮ್ಮ ವ್ಯಕ್ತಿವಿಶಿಷ್ಟ ಪ್ರತಿಭೆಯನ್ನು ಸಮರ್ಪಿಸಿದವರು.

ಹೊಸ ಆರ್ಥಿಕತೆಯ ಲಾಭಬಡುಕತನ ಮತ್ತು ಅಸಮಾನತೆಗಳು ಸಮುದಾಯವನ್ನು ಛಿದ್ರ ಛಿದ್ರಗೊಳಿಸುತ್ತಿರುವ ಸದ್ಯದ ಸನ್ನಿವೇಷದಲ್ಲಿ ಬಾಪು ಕುಟಿಯ ಈ 'ಹೀರೋ'ಗಳು ಸಮುದಾಯವನ್ನು ಗಾಂಧಿ ಮಾದರಿಯಲ್ಲಿ ಮತ್ತೆ ಒಂದಾಗಿ ಕಟ್ಟುವ ಯತ್ನ ನಡೆಸಿದ್ದಾರೆ. ಪ್ರಭುತ್ವದ ಪ್ರಲೋಭನೆ ಮತ್ತು ದಂಡದ ಭಯಗಳ ಚೌಕಟ್ಟಿನ ಹೊರಗೆ ಇದು ನಡೆಯುತ್ತದೆ ಎನ್ನುವುದೇ ಅದರಷ್ಟಕ್ಕೆ ಅದು ಒಂದು ದೊಡ್ಡ ಸಾಧನೆ.

–ಜಿ. ರಾಜಶೇಖರ

ಅಭಿನವ